೧೨ ಸಮಗ್ರ ವಚನ ಸಂಪುಟ

ಜನಪ್ರಿಯ ಆವೃತ್ತಿ

# ಸಂಕೀರ್ಣ ವಚನಸಂಪುಟ
# ೨

ಸಂಪಾದಕ
ಡಾ. ವೀರಣ್ಣ ರಾಜೂರ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಸಂಕೀರ್ಣ ವಚನಸಂಪುಟ : ಏಳು

(ಬಸವೋತ್ತರ ಯುಗ)

೧. ಬಸವಣ್ಣನವರ ವಚನಸಂಪುಟ - ಸಂ : ಡಾ. ಎಂ. ಎಂ. ಕಲಬುರ್ಗಿ
೨. ಅಲ್ಲಮಪ್ರಭುದೇವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ
೩. ಚೆನ್ನಬಸವಣ್ಣನವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ
೪. ಸಿದ್ಧರಾಮೇಶ್ವರ ವಚನಸಂಪುಟ - ಸಂ : ಡಾ. ಎಸ್. ವಿದ್ಯಾಶಂಕರ
೫. ಶಿವಶರಣೆಯರ ವಚನಸಂಪುಟ - ಸಂ : ಡಾ. ವೀರಣ್ಣ ರಾಜೂರ
೬. ಸಂಕೀರ್ಣ ವಚನಸಂಪುಟ : ಒಂದು - ಸಂ : ಡಾ. ಎಂ. ಎಂ. ಕಲಬುರ್ಗಿ
೭. ಸಂಕೀರ್ಣ ವಚನಸಂಪುಟ : ಎರಡು - ಸಂ : ಡಾ. ಎಸ್. ವಿದ್ಯಾಶಂಕರ
೮. ಸಂಕೀರ್ಣ ವಚನಸಂಪುಟ : ಮೂರು - ಸಂ : ಡಾ. ಬಿ. ಆರ್. ಹಿರೇಮಠ
೯. ಸಂಕೀರ್ಣ ವಚನಸಂಪುಟ : ನಾಲ್ಕು - ಸಂ : ಡಾ. ಬಿ. ಆರ್. ಹಿರೇಮಠ
೧೦. ಸಂಕೀರ್ಣ ವಚನಸಂಪುಟ : ಐದು - ಸಂ : ಡಾ. ವೀರಣ್ಣ ರಾಜೂರ
೧೧. ಸಂಕೀರ್ಣ ವಚನಸಂಪುಟ : ಆರು - ಸಂ . ಎಸ್. ಶಿವಣ್ಣ
೧೨. ಸಂಕೀರ್ಣ ವಚನಸಂಪುಟ : ಏಳು - ಸಂ : ಡಾ. ವೀರಣ್ಣ ರಾಜೂರ
೧೩. ಸಂಕೀರ್ಣ ವಚನಸಂಪುಟ : ಎಂಟು - ಸಂ : ಡಾ. ವೀರಣ್ಣ ರಾಜೂರ
೧೪. ಸಂಕೀರ್ಣ ವಚನಸಂಪುಟ : ಒಂಬತ್ತು - ಸಂ : ಡಾ. ವೀರಣ್ಣ ರಾಜೂರ
೧೫. ವಚನ ಪರಿಭಾಷಾಕೋಶ - ಸಂ : ಡಾ. ಎಸ್. ಷ. ಮಹಾದೇವಪ್ಪ

# ಸಂಕೀರ್ಣ ವಚನಸಂಪುಟ : ಏಳು

(ಬಸವೋತ್ತರ ಯುಗ)

ಸಂಪಾದಕ

**ಡಾ. ವೀರಣ್ಣ ರಾಜೂರ**

ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು

❊

# ಮುನ್ನುಡಿ

**ಎಸ್. ಎಂ. ಕೃಷ್ಣ**
ಮುಖ್ಯಮಂತ್ರಿಗಳು

ಕನ್ನಡನಾಡಿನ ಪ್ರಥಮ ಪ್ರಜಾಸಾಹಿತ್ಯವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸಾಂಸ್ಕೃತಿಕ ಆಸ್ತಿಯೆನಿಸಿದೆ. ಅನೇಕ ಜನ ವಿದ್ವಾಂಸರು, ಅನೇಕ ಸಂಸ್ಥೆಗಳು ಈ ಸಾಹಿತ್ಯವನ್ನು ಬೆಳಕಿಗೆ ತರಲು ಕಳೆದ ನೂರು ವರ್ಷಗಳಿಂದ ದುಡಿಯುತ್ತ ಬಂದುದು, ಇದರ ವ್ಯಾಪಕತೆಯ ದ್ಯೋತಕವಾಗಿದೆ. ಹೀಗೆ ಪ್ರಕಟವಾಗಿದ್ದ ಮತ್ತು ಅಪ್ರಕಟಿತ ಸ್ಥಿತಿಯಲ್ಲಿದ್ದ ಈ ಸಾಹಿತ್ಯದ ದ್ವಿತೀಯ ಆವೃತ್ತಿಯನ್ನು ವಚನ ಪರಿಭಾಷಾಕೋಶವೂ ಒಳಗೊಂಡಂತೆ ೧೫ ಸಂಪುಟಗಳ ಮೂಲಕ ಕರ್ನಾಟಕ ಸರ್ಕಾರ ಹೊರತರುತ್ತಿರುವುದು, ನಮ್ಮ ಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿ ಒಂದು ಗಣ್ಯ ಸಾಧನೆಯೆಂದೇ ಹೇಳಬೇಕು. ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ತನ್ನ ಕರ್ತವ್ಯವೆಂದು ಭಾವಿಸಿ, ಕರ್ನಾಟಕದ ಪ್ರಜಾಸರ್ಕಾರ ಈ ಕೆಲಸವನ್ನು ಪೂರೈಸಿದೆ.

ವಚನಸಾಹಿತ್ಯಕ್ಕೆ ನಮ್ಮ ನಾಡಿನಲ್ಲಿ ಸುಮಾರು ೮೦೦ ವರ್ಷಗಳ ಇತಿಹಾಸವಿದೆ. ಈವರೆಗೆ ಬಸವಯುಗದ ಬರವಣಿಗೆಯನ್ನು ಹೊರತರಲು ವಿದ್ವಾಂಸರು ಹೆಚ್ಚು ಗಮನ ಕೊಟ್ಟಿದ್ದರು. ಈ ಯೋಜನೆ ಅದನ್ನೂ ಒಳಗೊಂಡು, ಬಸವೋತ್ತರ ಯುಗದ ಮೇಲೆಯೂ ಒತ್ತುಕೊಟ್ಟುದು ವಿಶೇಷವೆನಿಸಿದೆ. ಇದರಿಂದಾಗಿ ಈ ಯೋಜನೆಗೆ "ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆ" ಎಂಬ ಕೀರ್ತಿ ಸಲ್ಲುತ್ತದೆ.

ವಚನವೆಂಬುದು ಚಳುವಳಿ ಸಾಹಿತ್ಯಪ್ರಕಾರವಾಗಿದೆ. ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣವನ್ನೂ ಕಾರ್ಯಗತಗೊಳಿಸಲು ಹೋರಾಡಿ ಮಡಿದ ಹುತಾತ್ಮರ ಸಾಹಿತ್ಯವಿದು. ರಾಜಸತ್ತೆ, ಪುರೋಹಿತಸತ್ತೆ, ಪುರುಷಸತ್ತೆಗಳೆಂಬ ಪ್ರತಿಗಾಮಿ ಸತ್ತೆಗಳ ವಿರುದ್ಧ, ಕರ್ನಾಟಕದ ಎಲ್ಲ ಸಮಾಜದ ಜನರು ನಡೆಸಿದ ಹೋರಾಟದ ಉಪನಿಷ್ಪತ್ತಿಯಾದ ಈ ಸಾಹಿತ್ಯದಲ್ಲಿ ಜೀವಪರಧ್ವನಿಗಳು ದಟ್ಟವಾಗಿ ಕೇಳಿಸುತ್ತವೆ. ಪ್ರಾಚೀನ ಕರ್ನಾಟಕದ ಬೌದ್ಧಿಕ ಶ್ರಮದ ವಿದ್ವತ್ ಜನತಾಸಾಹಿತ್ಯಕ್ಕಿಂತ ದೈಹಿಕ ಶ್ರಮದ ಜನತಾಸಾಹಿತ್ಯ ಹೇಗೆ ಭಿನ್ನವಾಗಿದೆಯೆಂಬುದನ್ನು ಕಾಣಬೇಕಾದರೆ ನಾವು ಈ ಸಾಹಿತ್ಯಕ್ಕೇ ಮೊರೆಹೊಗಬೇಕು.

"ವಿಪ್ರ ಮೊದಲು ಅಂತ್ಯಜ ಕಡೆಯಾಗಿ" ಸಮಾಜದ ಎಲ್ಲ ವರ್ಗದ ಸ್ತ್ರೀ-ಪುರುಷರ ಸಂಕೀರ್ಣ ಧ್ವನಿಗಳು ಇವರಲ್ಲಿ ತುಂಬ ಕಲಾತ್ಮಕವಾಗಿ

ಎರಕಗೊಂಡಿವೆ. ಹೀಗಾಗಿ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಧ್ವನಿಯೆನಿಸಿದ ಈ ಸಾಹಿತ್ಯದ ಪ್ರಕಟನೆಯು ತನ್ನ ಕರ್ತವ್ಯದ ಭಾಗವೆಂದು ಭಾವಿಸಿರುವ ಕರ್ನಾಟಕ ಸರ್ಕಾರ, ಅದನ್ನು ಸುಲಭ ಬೆಲೆಯಲ್ಲಿ ಜನತೆಗೆ ನೀಡುತ್ತಿದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಡಾ. ಎಂ. ಎಂ. ಕಲಬುರ್ಗಿ ಅವರ ಶ್ರದ್ಧೆಯನ್ನು, ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ಸಂಪಾದಕರ ಶ್ರಮವನ್ನು ಸ್ಮರಿಸುತ್ತ, ಈ ಐತಿಹಾಸಿಕ ಪ್ರಕಟನೆಯ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

❊

# ಬಿನ್ನಹ

**ರಾಣಿ ಸತೀಶ್**
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಸಾಹಿತ್ಯಕ್ಕೆ ಸಾಹಿತ್ಯ, ಶಾಸ್ತ್ರಕ್ಕೆ ಶಾಸ್ತ್ರವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸೃಷ್ಟಿಯಾಗಿದೆ; ಅತ್ಯಪೂರ್ವ ಆಸ್ತಿಯೆನಿಸಿದೆ. ಪಂಡಿತರ ಮಾರ್ಗಸಾಹಿತ್ಯಕ್ಕೆ ಪ್ರತಿಯಾಗಿ ಸಾಮಾನ್ಯರ ಈ ದೇಶೀಸಾಹಿತ್ಯ ಹೊರಹೊಮ್ಮಿದ್ದು ೧೨ನೆಯ ಶತಮಾನದಲ್ಲಿ; ಕಲಚುರಿಗಳ ರಾಜಧಾನಿಯಾಗಿದ್ದ ಕಲ್ಯಾಣದಲ್ಲಿ; ಬಸವಾದಿ ಶರಣರ ಚಳುವಳಿಯಲ್ಲಿ.

ಮೂಲತಃ ಭಾರತೀಯರದು ಆತ್ಮ ಪರಮಾತ್ಮನಾಗಬೇಕೆಂಬ ವ್ಯಕ್ತಿಕೇಂದ್ರಿತ ಸಿದ್ಧಾಂತ. ಶರಣರು ಇದನ್ನು ಸಮಾಜಕೇಂದ್ರಿತ ಸಿದ್ಧಾಂತಕ್ಕೆ ವಿಸ್ತರಿಸಿದರು. ಹೀಗಾಗಿ ವ್ಯಕ್ತಿ ಕಲ್ಯಾಣದ ಜೊತೆ ಸಮಾಜಕಲ್ಯಾಣವೂ ಈ ಚಳುವಳಿಯ ಮುಖ್ಯ ಲಕ್ಷಣವೆನಿಸಿತು. ಸಾಹಿತ್ಯ ಸಾಹಿತ್ಯಕ್ಕಾಗಿ ಅಲ್ಲ, ವ್ಯಕ್ತಿ ಪರಿವರ್ತನೆಗಾಗಿ, ಸಮಾಜ ಪರಿವರ್ತನೆಗಾಗಿಯೆಂಬ ಸಿದ್ಧಾಂತ ಇಲ್ಲಿ ಅರ್ಥ ಪಡೆಯಿತು.

೧೨ನೆಯ ಶತಮಾನದ ಹೊತ್ತಿಗೆ, ಶೂದ್ರಜೀವ ದೇವನಾಗಲಾರನೆಂಬ ಸಿದ್ಧಾಂತ ಸ್ಥಾಪಿತವಾಗಿದ್ದಿತು. ಸಮಾಜದಲ್ಲಿ ಪುರುಷ-ಸ್ತ್ರೀ, ಪ್ರಭು-ಪ್ರಜೆ, ಬ್ರಾಹ್ಮಣ-ಶೂದ್ರರಲ್ಲಿ ಸಮಾನತೆ ಸಾಧ್ಯವಿಲ್ಲವೆಂಬ ಭೇದಸಂಸ್ಕೃತಿಯೂ ನಿರ್ಮಾಣವಾಗಿದ್ದಿತು. ಈಗ, ಶೂದ್ರನಿಗೂ ದೇವರಾಗುವ ಅರ್ಹತೆಯಿದೆ; ಸ್ತ್ರೀಗೆ ಪುರುಷನಷ್ಟು - ಪ್ರಜೆಗೆ ಪ್ರಭುವಿನಷ್ಟು - ಶೂದ್ರನಿಗೆ ಬ್ರಾಹ್ಮಣನಷ್ಟು ಅಧಿಕಾರವಿದೆಯೆಂದು ಶರಣರು ವಾದಿಸಿದರು. ಇದರ ಫಲವಾಗಿ, ಹೊಸ ಸಮಾಜವೊಂದು ಸೃಷ್ಟಿಯಾಯಿತು. ಇದರಿಂದಾಗಿ ಎಲ್ಲರೂ ಸ್ವತಂತ್ರರು, ಎಲ್ಲರೂ ಸಮಾನರು, ಎಲ್ಲರೂ ಸಹೋದರರೆಂಬ ತತ್ವ ಅನುಷ್ಠಾನಕ್ಕೆ ಬಂದಿತು. ಇದರ ಮುಂದುವರಿಕೆಯೆಂಬಂತೆ ಎಲ್ಲರೂ ದುಡಿಯಬೇಕು ಎಂಬ ಕಾಯಕತತ್ವ, ಎಲ್ಲರೂ ಹಂಚಿಕೊಂಡು ಉಣ್ಣಬೇಕು ಎಂಬ ದಾಸೋಹತತ್ವಗಳು ಆಕಾರ ಪಡೆದವು.

ಹೊಸ ಸಮಾಜದ ಈ ಎಲ್ಲ ನೆಲೆಗಳನ್ನು ಗುರಿಯಿಟ್ಟು ಆಡಿದ ಶರಣರ ಮಾತು ವಚನವೆಂಬ ಸಾಹಿತ್ಯಪ್ರಕಾರವಾಗಿ ಮೂಡಿತು. ವರ್ಗಭೇದ, ವರ್ಣಭೇದ, ಲಿಂಗಭೇದವೆನ್ನದೆ ಎಲ್ಲ ಜನವರ್ಗದವರ ಸಾವಿರ ಸಾವಿರ ವಚನಗಳು ಈ ಕಾಲದಲ್ಲಿ ಸೃಷ್ಟಿಯಾದವು. ಆದರೆ ಒಮ್ಮೆಲೇ ತಲೆದೋರಿದ ಕಲ್ಯಾಣ ಕ್ರಾಂತಿಯಿಂದಾಗಿ ಈ ಸಾಹಿತ್ಯ ನಾಡಿನ ತುಂಬ ಹರಿದು ಹಂಚಿಹೋಯಿತು.

ಹೀಗೆ ಹಂಚಿಹೋಗಿದ್ದ ಈ ಸಾಹಿತ್ಯವನ್ನು ೧೫-೧೬ನೆಯ ಶತಮಾನಗಳಲ್ಲಿ

ಶೋಧಿಸುವ, ಸಂಪಾದಿಸುವ ಪ್ರಯತ್ನ ನಡೆದು, ನೂರಾರು ಸಂಪಾದನ ಕೃತಿಗಳು ಹುಟ್ಟಿ ಬಂದು, ವಚನಸಾಹಿತ್ಯ ವೀರಶೈವ ಮಠಗಳಲ್ಲಿ ತಕ್ಕ ಮಟ್ಟಿಗೆ ರಕ್ಷಿಸಲ್ಪಟ್ಟಿತು. ದುರ್ದೈವದ ಸಂಗತಿಯೆಂದರೆ ಮಠಗಳಲ್ಲಿ ಪ್ರವೇಶ ಪಡೆದ ಸಂಸ್ಕೃತ ಭಾಷೆಯಿಂದಾಗಿ ಕನ್ನಡ ಭಾಷೆಯ ಈ ವಚನಗಳು ಅಲ್ಲಿ ಮೂಲೆ ಸೇರಿದವು.

ಹೀಗೆ ಮೂಲೆಗುಂಪಾಗಿದ್ದ ವಚನಸಾಹಿತ್ಯವು ೨೦ನೆಯ ಶತಮಾನದಲ್ಲಿ ಅನೇಕ ಜನ ವಿದ್ವಾಂಸರ, ಹತ್ತಾರು ಸಂಸ್ಥೆಗಳ ಪ್ರಯತ್ನದ ಫಲವಾಗಿ ಪ್ರಕಟಣೆಗೊಳ್ಳುತ್ತ ಬಂದಿತು. ಈಗ ೧೨ನೆಯ ಶತಮಾನದ ಶರಣಸಾಹಿತ್ಯ ಪ್ರಕಟನೆಗೆ ಒತ್ತುಬಿದ್ದರೂ ಅದು ಬಿಡಿಬಿಡಿಯಾಗಿ ಪ್ರಕಟಣೆಗೊಂಡಿತು. ಆ ತರುವಾಯದ ಶರಣ ಸಾಹಿತ್ಯವಂತೂ ಉಪೇಕ್ಷೆಗೆ ಗುರಿಯಾಯಿತು. ಈ ಎರಡೂ ಕೊರತೆಗಳನ್ನು ನೀಗಿಸುವ ಉದ್ದೇಶದಿಂದ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಪುಟ ಶ್ರೇಣಿಯಲ್ಲಿ ಪ್ರಕಟಿಸಲು ಕರ್ನಾಟಕ ಸರಕಾರ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಂಡಿತು.

ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ವ್ಯಾಪಕ ಕಾರ್ಯ ನಡೆದು, ೨೦ ಸಾವಿರ ವಚನ, ೧೦ ಸಾವಿರ ಪುಟಗಳನ್ನೊಳಗೊಂಡ ೧೫ ಸಂಪುಟಗಳು ೧೯೯೩ರಲ್ಲಿ ಬೆಳಕು ಕಂಡವು. ಆಶ್ಚರ್ಯದ ಸಂಗತಿಯೆಂದರೆ ಇದರ ೫ ಸಾವಿರ ಪ್ರತಿಗಳು ಒಂದೇ ವರ್ಷದಲ್ಲಿ ಮಾರಾಟವಾಗಿ, ಜನರಿಂದ ಬೇಡಿಕೆ ಹೆಚ್ಚುತ್ತ ನಡೆಯಿತು. ಇದನ್ನು ಪೂರೈಸುವ ದಿಕ್ಕಿನಲ್ಲಿ ಪರಿಷ್ಕೃತ ದ್ವಿತೀಯ ಆವೃತ್ತಿ ಈಗ ಹೊರಬರುತ್ತಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾಗಿ ಕನ್ನಡದ ಈ ಅಪೂರ್ವ ಆಸ್ತಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

※

# ನಿರ್ದೇಶಕರ ಮಾತು

**ಕೆ. ಸಿ. ರಾಮಮೂರ್ತಿ**
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ವಚನಸಾಹಿತ್ಯ, ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. ಪ್ರಾಚೀನ ಕರ್ನಾಟಕದ ಜನಸಾಮಾನ್ಯರ ಧ್ವನಿಯಾಗಿರುವ ಇದನ್ನು ಪ್ರಕಟಿಸುವುದು, ಪ್ರಸಾರ ಮಾಡುವುದು ಜನತಂತ್ರ ಸರಕಾರದ ಮುಖ್ಯ ಕರ್ತವ್ಯವಾಗಿದೆ.

ಭಾರತದಲ್ಲಿ ಆತ್ಮೋದ್ಧಾರದ ಬಗ್ಗೆ ಉದಾತ್ತ ತತ್ವಗಳನ್ನು ಪ್ರತಿಪಾದಿಸುತ್ತ ಬಂದಿದ್ದರೂ ಸಮಾಜೋದ್ಧಾರದ ಬಗ್ಗೆ ಉಪೇಕ್ಷೆ ಬೆಳೆದು, ಅಲ್ಲಿ ಶೋಷಣೆ ವರ್ಧಿಸುತ್ತ ಬಂದುದು ನಮ್ಮ ಇತಿಹಾಸದ ಒಂದು ವಿಪರ್ಯಾಸವೇ ಸರಿ. ೧೨ನೆಯ ಶತಮಾನದಲ್ಲಿ ಉಲ್ಬಣಗೊಂಡಿದ್ದ ಈ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ, ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೋರಾಡಿದವರು, ಕಲ್ಯಾಣದ ಶರಣರು. ಈ ಕಾರ್ಯಕ್ಕಾಗಿ ಅವರು ಕೈಕೊಂಡ ಜನಪರ ಆಂದೋಲನ ನಮ್ಮ ದೇಶದ ಇತಿಹಾಸದಲ್ಲಿಯೇ ಒಂದು ವಿಶಿಷ್ಟ ಘಟನೆಯಾಗಿದೆ.

ಭಾರತದಲ್ಲಿ ರಾಜಸತ್ತೆಯ ಸ್ಥಾಪನೆಗಾಗಿ ರಾಜರು, ಮತಸತ್ತೆಯ ಸ್ಥಾಪನೆಗಾಗಿ ಧರ್ಮಗಳು ಪರಸ್ಪರ ಸಂಘರ್ಷಕ್ಕಿಳಿದುದು ಸರ್ವಶ್ರುತ. ಆದರೆ ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಈ ರಾಜಸತ್ತೆ, ಮತಸತ್ತೆಗಳ ವಿರುದ್ಧ ಸಮಾಜದ ವಿವಿಧ ಸ್ತರಗಳ ಜನತೆ, ಅದರಲ್ಲಿಯೂ ದೀನರು-ದಲಿತರು-ಮಹಿಳೆಯರು ಬೀದಿಗಿಳಿದು ನಡೆಸಿದ ಈ ಆಂದೋಲನ, ಇಪ್ಪತ್ತನೆಯ ಶತಮಾನವೂ ಆಶ್ಚರ್ಯಪಡುವ ಸಂಗತಿಯಾಗಿದೆ.

ಅಂದಿನ ಸನ್ನಿವೇಶಕ್ಕೆ ಅನುಗುಣವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಅಂಕುರಿಸಿದ ಈ ಆಂದೋಲನ, ಸಾಮಾಜಿಕ ಕ್ಷೇತ್ರವನ್ನೂ ಆವರಿಸಿದ ಕಾರಣ, ಇದನ್ನು 'ಸಮಾಜೋ ಧಾರ್ಮಿಕ' ಆಂದೋಲನವೆಂದು ಗುರುತಿಸಲಾಗುತ್ತದೆ. ಸಮಾಜವೆನ್ನುವುದು ಸಂಕೀರ್ಣ ವ್ಯವಸ್ಥೆ. ಅದರ ಎಲ್ಲ ಸ್ತರಗಳನ್ನೂ ಎಲ್ಲ ಮಗ್ಗಲುಗಳನ್ನೂ ಬದಲಿಸಲು ಮಾಡಿದ ಪ್ರಯತ್ನವಾಗಿರುವುದರಿಂದ ಇದು ಒಂದು "ಸಮಗ್ರ ಆಂದೋಲನ"ವಾಗಿದೆ. ಈ ಆಂದೋಲನದ ನೇರ ಧ್ವನಿ, ವಚನಸಾಹಿತ್ಯ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನಿಂದಾಗಿ ವ್ಯಕ್ತಿ ಸ್ವಾತಂತ್ರ್ಯ ಪಡೆದ ಜನವರ್ಗವು ವ್ಯಕ್ತಪಡಿಸಿದ ಅಭಿಪ್ರಾಯ ಸ್ವಾತಂತ್ರ್ಯದ ಫಲ, ಈ ಸಾಹಿತ್ಯ. ಹೀಗಾಗಿ ಇಲ್ಲಿ ಆತ್ಮವಿಮರ್ಶೆಯಷ್ಟೇ ವಿಪುಲವಾಗಿ ಸಮಾಜವಿಮರ್ಶೆಯನ್ನೂ ಕಾಣಬಹುದಾಗಿದೆ. ಅದರಲ್ಲಿಯೂ ವರ್ಣಭೇದ ನಿರಾಕರಣೆ, ವರ್ಗಭೇದ

ನಿರಾಕರಣೆ, ಲಿಂಗಭೇದ ನಿರಾಕರಣೆಗಳಂಥ ವಿಚಾರಗಳು ಸ್ಫೋಟಗೊಂಡುದು ಲಕ್ಷಿಸತಕ್ಕ ಸಂಗತಿಯಾಗಿದೆ. ಇಲ್ಲಿ ಪುರುಷರಷ್ಟೇ ಪ್ರಧಾನವಾಗಿ ಮಹಿಳೆಯರೂ, ಕುಲಜರಷ್ಟೇ ಪ್ರಧಾನವಾಗಿ ಅಂತ್ಯಜರೂ, ಪ್ರಭುಗಳಷ್ಟೇ ಪ್ರಧಾನವಾಗಿ ಪ್ರಜೆಗಳೂ ಬಾಳಿದುದು, ಬರೆದುದು ಬಹುಶಃ ಜಗತ್ತಿನ ಇತಿಹಾಸದಲ್ಲಿಯೇ ಏಕೈಕ ಉದಾಹರಣೆಯಾಗಿದೆ. ಇಂಥ ವಿಚಾರಶೀಲರ ಅಂದರೆ ಇವರ ತತ್ವ-ಸಾಹಿತ್ಯಗಳ ಉತ್ತರಾಧಿಕಾರಿಗಳಾದುದು ನಮ್ಮ ಭಾಗ್ಯ; ಇವರ ಸಾಹಿತ್ಯಸಂಪತ್ತನ್ನು ರಕ್ಷಿಸುವುದು, ಪ್ರಸಾರಮಾಡುವುದು ನಮ್ಮ ಕರ್ತವ್ಯ. ಈ ಕರ್ತವ್ಯದ ಭಾಗವಾಗಿ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕರ್ನಾಟಕ ಸರಕಾರ ಕೈಗೆತ್ತಿಕೊಂಡಿತು.

ಈವರೆಗೆ ವಚನಸಾಹಿತ್ಯ ಬಿಡಿಬಿಡಿಯಾಗಿ ಭಾಗಶಃ ಪ್ರಕಟವಾಗಿದ್ದಿತು, ಕೆಲವು ಭಾಗ ಅಪ್ರಕಟಿತ ಸ್ಥಿತಿಯಲ್ಲಿ ಉಳಿದಿದ್ದಿತು. ಇದೆಲ್ಲವನ್ನು ಕ್ರೋಢೀಕರಿಸಿ, ಪರಿಷ್ಕರಿಸಿ ಪ್ರಕಟಿಸುವುದು ಶ್ರಮದ ಕೆಲಸ. ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ, ಅನೇಕ ಜನ ವಿದ್ವಾಂಸರ ಮತ್ತು ಸಂಪಾದಕ ಮಂಡಳಿ ಸದಸ್ಯರ ಸಂಯುಕ್ತ ಪರಿಶ್ರಮದಿಂದ ಈ ಬೃಹತ್ ಯೋಜನೆ ಪೂರ್ತಿಗೊಂಡುದು ಸಂತೋಷದ ಸಂಗತಿ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದು, ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಂಡ ಈ ಐತಿಹಾಸಿಕ ಯೋಜನೆಗಾಗಿ ಸಂಬಂಧಪಟ್ಟ ಎಲ್ಲ ವಿದ್ವಾಂಸರನ್ನು ಅಭಿನಂದಿಸುತ್ತೇನೆ. ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟವಾಗುತ್ತಲಿರುವ ಈ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

✲

# ಪ್ರಕಾಶಕರ ಮಾತು

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ಸಮಗ್ರ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಪ್ರಕಟಣೆ ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ನಡೆದಿರುವ ಒಂದು ದಿವ್ಯಘಟನೆ. ವಚನಸಾಹಿತ್ಯದ ಪ್ರಕಟಣೆಗೆ ಸುಮಾರು ಎಂಬತ್ತು ವರ್ಷಗಳ ಇತಿಹಾಸವಿದೆ. ವಚನಪಿತಾಮಹ ಶ್ರೀ ಫ. ಗು. ಹಳಕಟ್ಟಿ ಅವರಿಂದ ಪ್ರಕಟಣೆಯ ದಿವ್ಯಘಟನೆ ಆರಂಭಗೊಂಡಿತು. ಇದೀಗ ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದ ಮೂಲಕ ಸಹಸ್ರಮಾನದ ಸೂರ್ಯೋದಯದ ವೇಳೆಗೆ ಇದು ಒಂದು ಪೂರ್ಣ ಘಟ್ಟಕ್ಕೆ ಬಂದಿದೆ. ಶರಣ ಸಾಹಿತ್ಯದ ಪ್ರಕಟಣೆಯ ಇತಿಹಾಸದಲ್ಲಿ ಇದು ಚಾರಿತ್ರಿಕ ಘಟನೆಯೇ ಸರಿ. ಈ ನಡುವೆ ವಚನಸಾಹಿತ್ಯದ ಸಹಸ್ರಾರು ಬಿಡಿ ಪ್ರಕಟಣೆಗಳು ಹೊರಬಂದಿವೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಮಠಗಳು, ಶಿಕ್ಷಣ ಕೇಂದ್ರಗಳು, ಖಾಸಗಿ ಪ್ರಕಾಶಕರು, ಆಸಕ್ತ ಲೇಖಕರು ಬಿಡಿಬಿಡಿಯಾಗಿ ವಚನಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ನಾವು ಪ್ರೀತಿಯಿಂದ ಇವರನ್ನೆಲ್ಲ ಈ ಹೊತ್ತಿನಲ್ಲಿ ನೆನೆಯುವುದು, ಆ ಪಾತ್ರಃಸ್ಮರಣೀಯರ ಹಾದಿಯಲ್ಲಿ ಮುನ್ನಡೆಯುವುದು ನಮ್ಮ ಸಾಂಸ್ಕೃತಿಕ ಕರ್ತವ್ಯ.

ಸಮಗ್ರ ವಚನ ಸಂಪುಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ೧೯೯೩ರಲ್ಲಿ ಪ್ರಕಟಗೊಂಡಿದ್ದವು. ಆ ಸಂಪುಟಗಳು ಪ್ರಕಟವಾದ ವರ್ಷವೇ ಕನ್ನಡಿಗರ ಮನೆಯನ್ನು ಸೇರಿಕೊಂಡವು. ಆದರೆ, ಸಂಪುಟಗಳ ಬೇಡಿಕೆ ಮಹಾಜನರಿಂದ ಇದ್ದೇ ಇತ್ತು. ಅನಂತರ ಕರ್ನಾಟಕ ಸರ್ಕಾರ ಪರಿಷ್ಕೃತ ಆವೃತ್ತಿಗೆ ತಾತ್ವಿಕ ಒಪ್ಪಿಗೆ ನೀಡಿತು. ಹೀಗೆ ಒಪ್ಪಿಗೆ ನೀಡಿದ ಸಂಸ್ಕೃತಿ ಸಂಪನ್ನರೂ ಮುಖ್ಯಮಂತ್ರಿಗಳೂ ಆದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರನ್ನು ತುಂಬು ಹೃದಯದಿಂದ ಈ ಪ್ರಕಟಣೆಯ ದಿವ್ಯಘಟನೆಯ ಹೊತ್ತಿನಲ್ಲಿ ಸ್ಮರಿಸಿಕೊಳ್ಳುತ್ತೇನೆ. ಅನಂತರ ನಾಡಿನ ಶ್ರೇಷ್ಠ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಸಿದ್ಧಗೊಂಡವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಪ್ರಕಟಿಸಬೇಕಿತ್ತು. ಆದರೆ, ಆ ಕಾರ್ಯವನ್ನು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಒಪ್ಪಿಸಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಔದಾರ್ಯ; ಅದನ್ನು ಪಡೆದು ಪ್ರಕಟಿಸುತ್ತಿರುವುದು ಪುಸ್ತಕ ಪ್ರಾಧಿಕಾರದ ಭಾಗ್ಯ. ಈ ಭಾಗ್ಯಕ್ಕೆ ಕಾರಣರಾದವರು ಕನ್ನಡ ಮತ್ತು ಸಂಸ್ಕೃತಿ

ಇಲಾಖೆಯ ಸಚಿವೆಯರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ. ಇವರಿಬ್ಬರ ಆಸಕ್ತಿಯ ಫಲ ಈ ಕಾರ್ಯವನ್ನು ಆಗುಗೊಳಿಸಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯರ ಆಪ್ತ ಕಾರ್ಯದರ್ಶಿ ಡಾ. ಎ. ಆರ್. ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ಸಿ. ಎಸ್. ಕೇದಾರ್, ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶ್ರೀ ಕಾ. ತ. ಚಿಕ್ಕಣ್ಣ ಪ್ರಕಟಣೆಯ ವಿವಿಧ ಹಂತಗಳಲ್ಲಿ ನನಗೆ ನೆರವಾಗಿದ್ದಾರೆ. ಈ ಮೇಲಿನ ಎಲ್ಲ ಮಹನೀಯರಿಗೂ ಕನ್ನಡ ಪುಸ್ತಕ ಪ್ರಾಧಿಕಾರವು ಅನನ್ಯವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸಮಗ್ರವಚನ ಸಂಪುಟಗಳ ಪರಿಷ್ಕೃತ ಆವೃತ್ತಿಯ ಸಂಪಾದಕ ಮಂಡಳಿಯ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ್, ಡಾ. ಎಸ್. ವಿದ್ಯಾಶಂಕರ್, ಎಸ್. ಶಿವಣ್ಣ ಇವರನ್ನು, ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಹೊರತರಲು ಒಪ್ಪಿಗೆ ನೀಡಿದ ಪುಸ್ತಕ ಪ್ರಾಧಿಕಾರದ ಸ್ಥಾಯಿಸಮಿತಿ ಸದಸ್ಯರಾದ ಪ್ರೊ. ರಾಮೇಗೌಡ, ಶ್ರೀ ಆರ್. ಜಿ. ಹಳ್ಳಿ ನಾಗರಾಜ್, ಪ್ರೊ. ಸಿದ್ಧಪ್ಪ ಉತ್ನಾಳ್, ಶ್ರೀ ಛಾಯಾಪತಿ ಮತ್ತು ಶ್ರೀಮತಿ ಇಂದಿರಾ ಶಿವಣ್ಣ ಇವರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಹದಿನೈದು ಸಂಪುಟಗಳ ಅಕ್ಷರ ಜೋಡಣೆ ಮಾಡಿಕೊಟ್ಟವರನ್ನು, ಬಹು ಅಂದವಾಗಿ ಮುದ್ರಿಸಿದವರನ್ನು, ಸುಂದರವಾಗಿ ಮತ್ತು ಆಕರ್ಷಕವಾಗಿ ಸಂಪುಟಗಳನ್ನು ಬೈಂಡ್ ಮಾಡಿಕೊಟ್ಟವರನ್ನು, ಮುಖಪುಟ ವಿನ್ಯಾಸ ಮಾಡಿಕೊಟ್ಟವರನ್ನು, ತುಂಬು ಪ್ರೀತಿಯಿಂದ ನೆನೆಯುವುದು ನನ್ನ ಕರ್ತವ್ಯ. ಇವರ ಮುದ್ರಣ ಪರಿಣತಿಯ ಫಲ ಈ ಸಂಪುಟಗಳಿಗೆ ದೊರಕಿ ಅಂದವಾಗಲು ಕಾರಣವಾಗಿದೆ. ಪುಸ್ತಕ ಪ್ರಾಧಿಕಾರದ ಆಡಳಿತಗಾರರಾದ ಶ್ರೀ ಬಲವಂತರಾವ್ ಪಾಟೀಲ ನನ್ನೊಡನೆ ಉದ್ದಕ್ಕೂ ಸಹಕರಿಸಿದ್ದಾರೆ. ಈ ಮೇಲೆ ಹೆಸರಿಸಿದ ಎಲ್ಲ ಮಹನೀಯರನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿರುವ ಸಮಗ್ರ ವಚನ ಸಂಪುಟಗಳನ್ನು ಕನ್ನಡದ ಮಹಾಜನತೆ ಪ್ರೀತಿಯಿಂದ ಸ್ವೀಕರಿಸಬೇಕೆಂದು ಬೇಡುತ್ತೇನೆ.

■■

※

# ಸಂಪಾದಕೀಯ

## ಡಾ. ಎಂ. ಎಂ. ಕಲಬುರ್ಗಿ

ಪ್ರಧಾನ ಸಂಪಾದಕರು

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ, ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ. ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಕೊಂಡಿದ್ದ ವ್ಯಕ್ತಿಕಲ್ಯಾಣ ಮತ್ತು ಸಮಾಜಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

'ವಚನ' ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ.

ಮೂಲತಃ ವಚನನಿಧಿ ಜನರಿಂದ, ಜನರಿಗಾಗಿ ಹುಟ್ಟಿ, ಜನರ ಮಧ್ಯದಲ್ಲಿ ಬಾಳಿದ ಸಾಹಿತ್ಯವಾಗಿದೆ. ಹೀಗಾಗಿ ಹನ್ನೆರಡರಿಂದ ಹದಿನೈದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಅದಕ್ಕೆ ವಿಪುಲ ಭಿನ್ನಪಾಠಗಳು ಹುಟ್ಟಿಕೊಂಡವು. ಆಮೇಲೆ ಸಂಕಲನ-ಸಂಪಾದನ ಕಾರ್ಯದಿಂದಾಗಿ ಕೆಲವೊಮ್ಮೆ ಪ್ರಕ್ಷಿಪ್ತ ವಚನಗಳೂ ತಲೆಯೆತ್ತಿದವು. ಈ ಗೊಂದಲ ಕಾರಣವಾಗಿ ಕವಿಸಾಹಿತ್ಯಕ್ಕಿಂತ ವಚನಸಾಹಿತ್ಯದ ಸಂಪಾದನಕಾರ್ಯ ತುಂಬ ಜಟಿಲಸ್ವರೂಪದ್ದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟನಕಾರ್ಯವನ್ನು ಮೊದಲು ಕೈಗೆತ್ತಿಕೊಂಡವರು, ಕ್ರೈಸ್ತ ಪಾದ್ರಿಗಳು. ಜೈನ ಪುರಾಣ-ಕಾವ್ಯಗಳನ್ನು, ವೈದಿಕ ಪುರಾಣ-ಕೀರ್ತನೆಗಳನ್ನು, ವೀರಶೈವ ಶಾಸ್ತ್ರ-ಪುರಾಣಗಳನ್ನು ಪ್ರಕಟಿಸಿದ ಇವರು, ವಚನಸಾಹಿತ್ಯವನ್ನು ಮಾತ್ರ ತಪ್ಪಿಯೂ ಪ್ರಕಟಿಸಲಿಲ್ಲ. ದೇಶೀ ವಿದ್ವಾಂಸರೇ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಯಿತು. ಈ

ದಿಸೆಯಲ್ಲಿ ಮೊದಲು ಪ್ರಕಟವಾದ ವಚನಕೃತಿ (೧೮೮೩) 'ಅಪ್ರಮಾಣ ಕೂಡಲ ಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ "ಶಿಖಾರತ್ನಪ್ರಕಾಶ"[1]. ಆಮೇಲೆ ಒಂದು ಮೈಲಿಗಲ್ಲಿನಂತೆ ಪ್ರಕಟವಾದ ವಚನಕೃತಿ, ಬಸವಣ್ಣನವರ ಷಟ್‌ಸ್ಥಲವಚನ ಸಂಪುಟ. ಅದು ಮೊದಲು ಬೆಳಕು ಕಂಡುದು ೧೮೮೯ರಲ್ಲಿ[2]. ಅಲ್ಲಿಂದ ಸರಿಯಾಗಿ ಒಂದು ಶತಮಾನ ಕಳೆಯುವಷ್ಟರಲ್ಲಿ ಅಂದರೆ ೧೯೮೮ರಲ್ಲಿ ಈ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ' ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗವಾಗಿದೆ; ವಚನಸಾಹಿತ್ಯದ ಪ್ರಕಟನಚರಿತ್ರೆಯ ಶತಮಾನಸ್ಮರಣೆಯಾಗಿದೆ.

ಈ ನೂರು ವರ್ಷಗಳ ಕಾಲವ್ಯಾಪ್ತಿಯಲ್ಲಿ ವಚನಸಾಹಿತ್ಯ ಪ್ರಕಟಣೆಗಾಗಿ ಅನೇಕರು ದುಡಿದಿರುವರಾದರೂ ಯೋಜನಾಬದ್ಧ ವ್ಯಾಪಕ ಪ್ರಯತ್ನಗಳು, ವಿಜಾಪುರ, ಧಾರವಾಡ, ಗದಗಗಳಲ್ಲಿ ಹೀಗೆ ಜರುಗಿವೆ :

೧. ಶಿವಾನುಭವ ಗ್ರಂಥಮಾಲೆ, ವಿಜಾಪುರ - ಡಾ. ಫ. ಗು. ಹಳಕಟ್ಟಿ

೨. ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ - ಡಾ. ಆರ್. ಸಿ. ಹಿರೇಮಠ

೩. ತೋಂಟದಾರ್ಯಮಠ, ಗದಗ - ಡಾ. ಎಂ. ಎಂ. ಕಲಬುರ್ಗಿ

ವಚನಸಾಹಿತ್ಯದ ಪ್ರಕಟನ ಕಾರ್ಯ ಹೀಗೆ ವಿಜಾಪುರದಲ್ಲಿ ಪ್ರಾರಂಭವಾಗಿ, ಧಾರವಾಡದಲ್ಲಿ ಬೆಳೆದು, ಗದುಗಿನಲ್ಲಿ ಒಂದು ನಿಲುಗಡೆಗೆ ಬರುತ್ತಿದ್ದಂತೆಯೇ, ಈಗ ನಾಲ್ಕನೆಯ ಘಟ್ಟದಲ್ಲಿ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಂಗವಾಗಿ, ೧೫ ಸಂಪುಟಗಳು ಕರ್ನಾಟಕ ಸರಕಾರದ ಮೂಲಕ ಪ್ರಕಟವಾಗುತ್ತಲಿವೆ. ಸುಮಾರು ೧೧೦ ಜನ ಪ್ರಕ್ಷಿಪ್ತ ವಚನಕಾರರನ್ನೂ ಪ್ರಕ್ಷಿಪ್ತವಾಗಿರಬಹುದಾದ ಅನೇಕ ವಚನಗಳನ್ನೂ ಕೈಬಿಟ್ಟು ಸಂಯೋಜಿಸಲಾದ ಈ ಹದಿನೈದು ಸಂಪುಟಗಳ ಒಟ್ಟು ಪುಟ ಸುಮಾರು ಹತ್ತು ಸಾವಿರ; ಒಟ್ಟು ವಚನ ಸಂಖ್ಯೆ ಸುಮಾರು ಇಪ್ಪತ್ತು ಸಾವಿರ. ವಚನಸಾಹಿತ್ಯವನ್ನು ಒಮ್ಮೆ ಸಮಗ್ರವಾಗಿ ಹೊರತಂದ ಪ್ರಥಮ ಮಹತ್ವಾಕಾಂಕ್ಷೆಯ ಯೋಜನೆಯಿದು. ಈ ಸಾಹಿತ್ಯದ ಗಡಿಗೆರೆಗಳನ್ನು, ಸಂಖ್ಯಾಬಾಹುಳ್ಯವನ್ನು ವ್ಯವಸ್ಥೆಗೊಳಿಸಿ ಕೊಟ್ಟು, ವಿದ್ವಾಂಸರ ಅಧ್ಯಯನದ ಮುಂದುವರಿಕೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿದ ಹಿರಿಮೆ ಈ ಯೋಜನೆಗೆ ಸಲ್ಲುತ್ತದೆ.

ಈ ಯೋಜನೆಯ ಅಂಗವಾಗಿ ಬಸವಣ್ಣನವರ ವಚನ, ಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ - ಹೀಗೆ ಐದು ಸಂಪುಟಗಳು, ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ನಾಲ್ಕು ಸಂಪುಟಗಳು,

---

೧. ಮೊದಲು ಪ್ರಕಟವಾದ ವಚನಕೃತಿ ಅಖಂಡೇಶ್ವರ ವಚನ (೧೮೮೨)ವೆಂದು ಡಾ. ಬಿ. ನಂಜುಂಡ ಸ್ವಾಮಿ ಅವರ ಅಭಿಪ್ರಾಯ. (ಬಸವಪಥ ೧೬.೬)

೨. ಬಸವಣ್ಣನವರ ಷಟ್ಸ್ಥಲದ ವಚನಗಳು ಪ್ರಥಮ ಸಲ ಬೆಳಕುಕಂಡುದು ೧೮೮೬ರಲ್ಲಿಯೆಂದು ಡಾ. ಬಿ. ನಂಜುಂಡಸ್ವಾಮಿ ಹೇಳುತ್ತಾರೆ. (ಬಸವಪಥ ೧೫-೫ ಪು. ೪೫)

ಬಸವೋತ್ತರ ಕಾಲೀನ ಶರಣರ ವನಚಗಳ ಐದು ಸಂಪುಟಗಳು ಮತ್ತು ಒಂದು ವಚನ ಪರಿಭಾಷಾಕೋಶ - ಹೀಗೆ ಹದಿನೈದು ಸಂಪುಟಗಳು ಬೆಳಕುಕಾಣುತ್ತಲಿವೆ. ಇವುಗಳಲ್ಲಿ ಮೊದಲಿನ ಐದು ಸಂಪುಟಗಳು (ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಶಿವಶರಣೆಯರು) ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿದ್ದವು. ಆ ಬಳಿಕ ಲಭ್ಯವಾದ ನೂರಾರು ಹೊಸ ವಚನಗಳನ್ನು ಸೇರಿಸಿ, ಈ ಐದೂ ಸಂಪುಟಗಳಿಗೆ ಸಮಗ್ರರೂಪ ಕೊಟ್ಟಿದ್ದೇವೆ ಮತ್ತು ಪರಿಷ್ಕರಿಸಿದ್ದೇವೆ.

ಬಸವ ಸಮಕಾಲೀನ ಮಿಕ್ಕ ಶರಣರ ನಾಲ್ಕು ಸಂಪುಟಗಳ ಕೆಲಸ ಈವರೆಗೆ ಸಮರ್ಪಕವಾಗಿ ನಡೆದಿರಲಿಲ್ಲ. ಈ ಶರಣರ ಸಂಖ್ಯೆ, ಇವರ ವಚನಸಂಖ್ಯೆ ಅಸ್ಪಷ್ಟವಾಗಿಯೇ ಉಳಿದಿದ್ದಿತು. ವಚನಗಳೂ ಅಲ್ಲಿಷ್ಟು, ಇಲ್ಲಿಷ್ಟು ಪ್ರಕಟವಾಗಿದ್ದವು. ಒಂದಿಷ್ಟು ಅಪ್ರಕಟಿತ ಸ್ಥಿತಿಯಲ್ಲಿಯೇ ಉಳಿದುಬಿಟ್ಟಿದ್ದವು. ಇವೆಲ್ಲವುಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಈ ನಾಲ್ಕೂ ಸಂಪುಟಗಳಿಗೆ ಸಮಗ್ರ ರೂಪ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಬಸವಯುಗದ ಈ ಎಲ್ಲ ಒಂಬತ್ತು ಸಂಪುಟಗಳಿಗೆ ಸುಮಾರು ಸಾವಿರದಷ್ಟು ಹೊಸ ವಚನಗಳನ್ನು ಸೇರಿಸಿದ್ದೇವೆ.

ಬಸವೋತ್ತರ ಕಾಲೀನ ಶರಣರ ಸಂಪುಟಗಳ ಕೆಲಸ ಇನ್ನೂ ಅಲಕ್ಷಿತವಾಗಿದ್ದಿತು. ಈವರೆಗೆ ತಿಳಿದುಬಂದಿದ್ದ ವಚನಕಾರರ ಹೊಸ ವಚನಗಳನ್ನು ಶೋಧಿಸುವುದರೊಂದಿಗೆ, ಅನೇಕ ಹೊಸ ವಚನಕಾರರನ್ನೂ ಬೆಳಕಿಗೆ ತಂದಿದ್ದೇವೆ. ಇದರಿಂದಾಗಿ ಬಸವೋತ್ತರಯುಗದ ಶರಣರನ್ನೂ ಅವರ ವಚನಗಳ ವ್ಯಾಪ್ತಿಯನ್ನೂ ಜನತೆಯ ಮುಂದಿಟ್ಟ ಪ್ರಥಮ ಕೀರ್ತಿ ಈ ಐದು ಸಂಪುಟಗಳಿಗೆ ಸಲ್ಲುತ್ತದೆ. ಹೀಗೆ ಬಸವಯುಗ, ಬಸವೋತ್ತರಯುಗಗಳ ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲ ಕೊರತೆಗಳನ್ನು ತುಂಬಿಕೊಡುವ ಒಂದು ಪರಿಪೂರ್ಣ ಯೋಜನೆ ಇದಾಗಿದೆ. ಮೊದಲ ಬಾರಿಗೆ ೧೯ನೆಯ ಶತಮಾನದವರೆಗಿನ ಎಲ್ಲ ಶರಣರ ಎಲ್ಲ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಒಂದು ಕ್ರಮಕ್ಕೆ ಅಳವಡಿಸಿ, ಸಂಪುಟ ಶ್ರೇಣಿಯಲ್ಲಿ ಹೊರತಂದ ದೊಡ್ಡಪ್ರಯತ್ನ ಇಲ್ಲಿದೆ.

ವಚನಸಾಹಿತ್ಯದ ಪರಿಷ್ಕರಣಕಾರ್ಯ ತುಂಬ ಜಟಿಲವಾದುದು. ೧. ಎಲ್ಲ ಶರಣರ ಎಲ್ಲ ವಚನಗಳನ್ನು ಎಲ್ಲ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ೨. ಪ್ರಕ್ಷಿಪ್ತವಾಗಿರ ಬಹುದಾದ ವಚನಕಾರರನ್ನು, ವಚನಗಳನ್ನು ಕೈಬಿಡುವುದು, ೩. ನಿಜವಚನಗಳ ಪಾಠವನ್ನು ಪರಿಷ್ಕರಿಸುವುದು - ಇದು ಈ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ಸುಮಾರು ೧೦೮ ಆಕರಗಳಿಂದ ಎಲ್ಲ ವಚನಗಳನ್ನು ಸಂಗ್ರಹಿಸಿ, ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ 'ವಚನ ಬ್ಯಾಂಕ'ನ್ನು ಅಸ್ತಿತ್ವಕ್ಕೆ ತರಲಾಯಿತು. ಒಂದು ವಚನಕ್ಕೆ ಇರುವ ವಿವಿಧ ಪಾಠಾಂತರ, ರೂಪಾಂತರಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು, ಮುದ್ರಿಕೆಯ ವ್ಯತ್ಯಾಸವನ್ನು ಗಮನಿಸಲು, ಒಬ್ಬ ವಚನಕಾರನ ಒಟ್ಟು ವಚನಗಳ ಸಂಖ್ಯೆಯನ್ನು ನಿರ್ಧರಿಸಲು, ಕೊನೆಯದಾಗಿ ವಚನದ ನಿಜಪಾಠವನ್ನು ನಿರ್ಣಯಿಸಲು ಈ ಬ್ಯಾಂಕ್ ತುಂಬ ನೆರವಾಯಿತು.

ಇವು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿ, ಅನ್ಯಪಾಠಗಳನ್ನು ಅಡಿಯಲ್ಲಿ ನಮೂದಿಸದೆ ಕೈಬಿಟ್ಟಿದ್ದೇವೆ. ಜನಸಾಮಾನ್ಯರ ಅನುಕೂಲತೆಗಾಗಿ ಶಕಟರೇಫೆಗೆ ಬದಲು ರೇಫೆ ಇಟ್ಟುಕೊಂಡಿದ್ದೇವೆ. ಅಭ್ಯಾಸಿಗಳ ಉಪಯೋಗ ದೃಷ್ಟಿಯಿಂದ ಕಠಿಣ ಪದಕೋಶ, ಅಕಾರಾದಿ, ಆಕರಸೂಚಿಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ. ಹೆಚ್ಚಿನದಾಗಿ ಪಾರಿಭಾಷಿಕ ಪದಗಳ ಒಂದು ಸ್ವತಂತ್ರ ಕೋಶವನ್ನೇ ಪ್ರಕಟಿಸಿದ್ದೇವೆ. ಒಟ್ಟಿನಲ್ಲಿ, ಇವು ಜನಪ್ರಿಯ ಆವೃತ್ತಿಗಳಾದರೂ ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ಆದರ್ಶದಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

## ಕೃತಜ್ಞತೆ

ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ವೀರಶೈವ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ. ಗು. ಹಳಕಟ್ಟಿಯವರಂಥ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರೂ ವಚನಸಾಹಿತ್ಯ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಲು ಒಂದುನೂರು ವರ್ಷ ಹಿಡಿದುದು ಅದರ ಗಾತ್ರಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ನೂರುವರ್ಷ ದುಡಿದು, ಸಾಮಗ್ರಿಯನ್ನು ಪ್ರಕಟಿಸಿದ ಈ ಎಲ್ಲ ವ್ಯಕ್ತಿ-ಸಂಸ್ಥೆಗಳಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆಯ ಕಾರ್ಯಾಲಯ ಅಸ್ತಿತ್ವಕ್ಕೆ ಬಂದು ಕೆಲಸ ಪ್ರಾರಂಭವಾದದ್ದು ಅಕ್ಟೋಬರ್ ೧೫, ೧೯೮೮ರಂದು. ಹಸ್ತಪ್ರತಿಗಳು ಅಚ್ಚಿಗೆ ಹೋದದ್ದು ೧೬ ಮಾರ್ಚ್ ೧೯೯೦ರಂದು. ಹೀಗೆ ಮೊದಲೇ ಯೋಜಿಸಿದಂತೆ ಎರಡು ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿದ್ದೇವೆ. ಪ್ರತಿಯೊಂದು ಹಂತದಲ್ಲಿಯೂ ಈ ಯೋಜನೆ ಸಕ್ರಮವಾಗಿ ಮುನ್ನಡೆಯುವುದಕ್ಕಾಗಿ 'ಸಂಪಾದಕ ಮಂಡಳಿ'ಯ ಸದಸ್ಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ, ಶ್ರೀ ಎಸ್. ಶಿವಣ್ಣ ಅವರು ಉದ್ದಕ್ಕೂ ಬೆಲೆಯುಳ್ಳ ಸಲಹೆ-ಮಾರ್ಗದರ್ಶನ ನೀಡಿದ್ದಾರೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಆರಂಭದ ಕೆಲವು ತಿಂಗಳು ಸಂಪಾದಕ ಮಂಡಳಿಯ ಸದಸ್ಯರಾಗಿ, ವಿಶ್ವಾಸದಿಂದ ನೆರವಾಗಿದ್ದಾರೆ. ಸಂಪಾದಕ ಮಿತ್ರರಾದ ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಎಸ್. ವಿದ್ಯಾಶಂಕರ, ಡಾ. ವ್ಹಿ. ಬಿ. ರಾಜೂರ, ಡಾ. ಬಿ. ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ ತುಂಬ ಶ್ರಮ-ಶ್ರದ್ಧೆಗಳಿಂದ ಸಂಪಾದನ ಕೆಲಸ ಪೂರೈಸಿದ್ದಾರೆ. ಸಹಾಯಕ ಸಂಶೋಧಕರಾದ ಶ್ರೀಮತಿ ವಿಜಯಶ್ರೀ ಹಿರೇಮಠ, ಶ್ರೀ ವಾಯ್. ಎಂ. ಯಾಕೊಳ್ಳಿ, ಶ್ರೀ ಬಿ. ವ್ಹಿ. ಕೋರಿ ಅವರು ದಣಿವನ್ನು ಲೆಕ್ಕಿಸದೆ ದುಡಿದಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಈ ಯೋಜನೆಯನ್ನು ಅನುದಾನ ಮಾಡಿದ ಕರ್ನಾಟಕ ಸರಕಾರದ ಔದಾರ್ಯಕ್ಕೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ವೀರೇಂದ್ರ ಪಾಟೀಲ, ಶ್ರೀ ಎಸ್. ಬಂಗಾರಪ್ಪ ಅವರಿಗೂ, ಸಾಹಿತಿಗಳೂ ಸಾಹಿತ್ಯ-ಸಂಸ್ಕೃತಿಗಳ ಗಾಢ ಆಸಕ್ತರೂ

ಆಗಿರುವ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರಿಗೂ ಋಣಿಯಾಗಿದ್ದೇವೆ.

ಈ ಯೋಜನೆ ಅಸ್ತಿತ್ವಕ್ಕೆ ಬರುವಲ್ಲಿ ವಿಶೇಷ ಆಸಕ್ತಿ ವಹಿಸಿದವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂದಿನ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶ ಅವರು. ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅನನ್ಯ ಪ್ರೀತಿ-ಗೌರವ ಬೆಳೆಸಿಕೊಂಡಿರುವ ಶ್ರೀಯುತರಿಗೆ ನಾವು ಕೃತಜ್ಞರಾಗಿದ್ದೇವೆ. ಆಮೇಲೆ ಈ ಇಲಾಖೆಗೆ ಸಚಿವರಾಗಿ ಬಂದ ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಕೆ. ಎಚ್. ರಂಗನಾಥ, ಶ್ರೀ ಎಸ್. ರಮೇಶ್, ಇಂದಿನ ಸಚಿವರಾದ ಮಾನ್ಯ ಶ್ರೀ ಎಚ್. ವಿಶ್ವನಾಥ್ ಅವರಿಗೆ ನಮ್ಮ ಗೌರವಗಳು ಸಲ್ಲುತ್ತವೆ.

ಈ ಪ್ರಸಂಗದಲ್ಲಿ ಆತ್ಮೀಯ ಆಡಳಿತ ನಿರ್ದೇಶನ ಮಾಡಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಶ್ರೀ ಬಿ. ಪಾರ್ಥಸಾರಥಿ, ಕಮಿಷನರ್ ಡಾ. ಪಿ. ಎಸ್. ರಾಮಾನುಜಂ, ಇಂದಿನ ಕಮಿಷನರ್‌ರಾದ ಶ್ರೀ ಪಿ. ಎಸ್. ವಿ. ರಾವ್ ಅವರನ್ನೂ ಅಧಿಕ ನಿರ್ದೇಶಕರಾದ ಶ್ರೀ ಕೆ. ದೇವರಸಯ್ಯ, ಉಪನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರನ್ನೂ ನೆನೆಯುವುದು ಪ್ರೀತಿಯ ವಿಷಯವಾಗಿದೆ.

ಇಂಥ ಒಂದು ಬೃಹತ್ ಯೋಜನೆಗೆ ಕಾರ್ಯಾಲಯವೊಂದು ಅತ್ಯವಶ್ಯ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ. ಜಿ. ಕೆ. ನಾರಾಯಣರೆಡ್ಡಿ, ಇಂದಿನ ಕುಲಪತಿ ಡಾ. ಎಸ್. ರಾಮೇಗೌಡ ಅವರ ಔದಾರ್ಯವನ್ನು, ಪೀಠದ ಮುಖ್ಯಸ್ಥರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳೂ ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ದಾಳಿಗೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಮುದ್ರಿಕೆ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ವಚನಗಳನ್ನು ಶುದ್ಧೀಕರಿಸುವುದು - ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ವಚನಸಾಹಿತ್ಯದ ಮೇಲಿನ ಗೌರವ, ಕೆಲಸದ ಮೇಲಿನ ಪ್ರೀತಿಗಳು ನಮ್ಮಿಂದ ಈ ಕಾರ್ಯ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತ, ಎರಡು ವರ್ಷ ರಾತ್ರಿಯನ್ನೂ ಹಗಲುಮಾಡಿ ದುಡಿದು ರೂಪಿಸಿದ ಈ ಹದಿನೈದು ಸಂಪುಟಗಳನ್ನು ಸಹೃದಯಲೋಕಕ್ಕೆ ಅರ್ಪಿಸುತ್ತೇವೆ. 'ಶಿವಶರಣರ ಸಮಗ್ರ ವಚನಸಾಹಿತ್ಯ' ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳನ್ನು ಬೆಳಗಲೆಂದು ಹಾರೈಸುತ್ತೇವೆ.

# ದ್ವಿತೀಯ ಆವೃತ್ತಿ

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಸಂಪುಟಗಳು ೧೯೯೩ರಲ್ಲಿ ಪ್ರಕಟವಾಗಿ, ಒಂದು ವರ್ಷ ಕಳೆಯುವಷ್ಟರಲ್ಲಿ ಮಾರಾಟವಾದವು. ಕರ್ನಾಟಕ ಸರಕಾರದ ಗ್ರಂಥಪ್ರಕಟನೆಯ ಇತಿಹಾಸದಲ್ಲಿಯೇ ಈ ಬಗೆಯ ಮಾರಾಟ ಒಂದು ದಾಖಲೆ. ಜನತೆಯ ಅಪಾರ ಬೇಡಿಕೆಯನ್ನು ಗಮನಿಸಿ, ಈಗ ಪರಿಷ್ಕೃತ ದ್ವಿತೀಯ ಆವೃತ್ತಿಯನ್ನು ಪ್ರಕಟಿಸುತ್ತಿದ್ದೇವೆ. ಇತ್ತೀಚೆಗೆ ಲಭ್ಯವಾದ ಸುಮಾರು ಒಂದು ಸಾವಿರ ಹೊಸವಚನಗಳನ್ನು ಸೇರಿಸುವ, ಮೊದಲ ಆವೃತ್ತಿಯ ವಚನಪಾಠವನ್ನು ಮತ್ತೆ ಪರಿಷ್ಕರಿಸುವ ಮೂಲಕ ಮೊದಲಿನ ೧೪ ಸಂಪುಟಗಳನ್ನು ಸಮಗ್ರವಾಗಿ ಮತ್ತೆ ರೂಪಿಸಿದ್ದೇವೆ. ೧೫ನೆಯ ಸಂಪುಟ (ಪರಿಭಾಷಾಕೋಶ) ವನ್ನು ಹೊಸದಾಗಿ ಸಿದ್ಧಪಡಿಸಿದ್ದೇವೆ. ಹೊಸ ವಿಚಾರ, ಶೋಧಗಳ ಬೆಳಕಿನಲ್ಲಿ ಸಂಪಾದಕೀಯ, ಪ್ರಸ್ತಾಪವನೆಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಿಸಿದ್ದೇವೆ.

ಈ ಆವೃತ್ತಿ ಬೆಳಕು ಕಾಣಲು ವಿಶೇಷ ಆಸಕ್ತಿ ವಹಿಸಿದ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಅವರಿಗೂ ನಾವು ಋಣಿಯಾಗಿದ್ದೇವೆ. ಈ ಕೆಲಸ ನಿರ್ದಿಷ್ಟ ಕಾಲಾವಧಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಂಡ ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ ಅವರಿಗೂ ಅವರ ಸಿಬ್ಬಂದಿ ವರ್ಗಕ್ಕೂ, ಮಾರ್ಗದರ್ಶನ ಮಾಡಿ ಸಂಪುಟಗಳ ಉತ್ತಮಿಕೆ ಕಾರಣರಾದ ಸಂಪಾದಕ ಮಂಡಲದ ಸದಸ್ಯರಿಗೂ, ಸಂಸ್ಕೃತ ಶ್ಲೋಕಗಳನ್ನು ಪರಿಷ್ಕರಿಸಿಕೊಟ್ಟ ಮೈಸೂರಿನ ಪೂಜ್ಯ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ಕುಂದೂರುಮಠ ಅವರಿಗೂ, ೧೫ನೆಯ ಪರಿಭಾಷಾ ಸಂಪುಟವನ್ನು ಹೊಸದಾಗಿ ರೂಪಿಸಿಕೊಟ್ಟ ಡಾ. ಎಸ್. ಜಿ. ಮಹಾದೇವಪ್ಪ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಹತ್ತು ಸಾವಿರ ಪುಟಗಳ, ಹದಿನೈದು ಸಂಪುಟಗಳ ಪ್ರಕಟನೆ ಸುಲಭದ ಕೆಲಸವೇನಲ್ಲ. ಸಾಹಿತ್ಯದ ಮೇಲಿನ, ಅದರಲ್ಲಿಯೂ ವಚನಸಾಹಿತ್ಯದ ಮೇಲಿನ ಪ್ರೀತಿ ಕಾರಣವಾಗಿ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಿದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ನಾವು ಋಣಿಯಾಗಿದ್ದೇವೆ.

ಮೊದಲ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ಕೊರತೆ, ದೋಷಗಳನ್ನು ಕಷ್ಟಪಟ್ಟು ಹುಡುಕಿ, ನಮಗೆ ಪೂರೈಸಿದ ತುಮಕೂರಿನ ಶ್ರೀ ಎಂ. ಚಂದ್ರಪ್ಪ ಅವರಿಗೂ, ಬೆಂಗಳೂರಿನ ಶ್ರೀ ಎಸ್. ಶಿವಣ್ಣ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

*

# ಪ್ರಸ್ತಾವನೆ

‘‘ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ’’ಯ ಅಡಿಯಲ್ಲಿ ಸಿದ್ಧಪಡಿಸಿದ ಏಳನೆಯ ‘ಸಂಕೀರ್ಣ ವಚನ ಸಂಪುಟ’ವಿದು. ಇದರಲ್ಲಿ ಬಸವೋತ್ತರ ಯುಗದ ನಾಲ್ಕು ಜನ ವಚನಕಾರರ ೧೩೦೫ ವಚನಗಳನ್ನು ಸಂಗ್ರಹಿಸಲಾಗಿದೆ.

| | | |
|---|---|---|
| ೧. | ದೇಶಿಕೇಂದ್ರ ಸಂಗನಬಸವಯ್ಯ | ೧೨೪೨ |
| ೨. | ನಿರಾಲಂಬ ಪ್ರಭುದೇವ | ೧೪ |
| ೩. | ಪರಂಜ್ಯೋತಿಯರು | ೧೩ |
| ೪. | ಬಸವಲಿಂಗದೇವ | ೩೬ |

ಈ ನಾಲ್ಕೂ ಜನ, ಕವಿಚರಿತೆಕಾರರ ಗಮನಕ್ಕೆ ಬಾರದೆ ಇದುವರೆಗೆ ಅಜ್ಞಾತರಾಗಿದ್ದ ವಚನಕಾರರು. ನಿರಾಲಂಬ ಪ್ರಭುದೇವರ ಅಂಕಿತವನ್ನು ಮಾತ್ರ ಡಾ. ಫ. ಗು. ಹಳಕಟ್ಟಿ ಅವರು ವಚನಶಾಸ್ತ್ರಸಾರ ಮೊದಲನೆಯ ಸಂಪುಟದಲ್ಲಿ ಕೊಟ್ಟು, ಕರ್ತೃವಿನ ಹೆಸರನ್ನು ಸೂಚಿಸದೆ ಬಿಟ್ಟಿದ್ದರು. ಪರಂಜ್ಯೋತಿಯರು ‘‘ವಚನ ಸಂಕಲನ ಸಂಪುಟ: ಒಂದು ’’ ಕೃತಿಯ ಮೂಲಕ, ಬಸವಲಿಂಗದೇವರು ‘‘ಚಿದೈಶ್ವರ್ಯ ಚಿದಾಭರಣ’’ದ ಮೂಲಕ ಹೊರಬಂದರೂ ಅಷ್ಟಾಗಿ ಪ್ರಚಾರಪಡೆಯದೇ ಉಳಿದವರು. ದೇಶಿಕೇಂದ್ರ ಸಂಗನ ಬಸವಯ್ಯನ ೬೦ ವಚನಗಳು ‘ಬಸವಪಥ’ದ ಮೂಲಕ ಪ್ರಕಟವಾಗಿದ್ದರೂ ಅವನೊಬ್ಬ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಉತ್ತಮ ವಚನಗಳನ್ನು ರಚಿಸಿದ ಮಹತ್ವದ ವಚನಕಾರನೆಂಬ ಸಂಗತಿ ಬೆಳಕಿಗೆ ಬಂದಿರಲಿಲ್ಲ. ನಾಲ್ಕೂ ಜನರ ಜೀವಿತಕಾಲ, ಜೀವನಚರಿತ್ರೆಗೆ ಸಂಬಂಧಿಸಿದ ಹಾಗೂ ವಚನಗಳ ವಸ್ತು–ವೈಶಿಷ್ಟ್ಯ ಕುರಿತ ಯಾವುದೇ ವಿಷಯ ಹೊರಬಂದಿರಲಿಲ್ಲ. ಈಗ ಅದು ಈ ಸಂಪುಟದ ಮೂಲಕ ತಕ್ಕಮಟ್ಟಿಗೆ ಪ್ರಕಟಗೊಳ್ಳುತ್ತಲಿದೆ.

**ದೇಶಿಕೇಂದ್ರ ಸಂಗನಬಸವಯ್ಯ:**

ಈತನ ಇತಿವೃತ್ತವೇನೂ ಈಗ ದೊರಕುವುದಿಲ್ಲ. ಚಿದೈಶ್ವರ್ಯ ಚಿದಾಭರಣದಲ್ಲಿ ಒಬ್ಬ ಸಂಗನಬಸವೇಶ್ವರನ ಉಲ್ಲೇಖ ಬರುತ್ತದೆ. ಅಲ್ಲಿ ಆತನ ಒಂದು ವಚನ ಸೇರಿದ್ದು, ‘ಬಸವಲಿಂಗ’ ಎಂಬ ಅಂಕಿತವನ್ನು ಹೊಂದಿದೆ. ಪ್ರಸ್ತುತ ದೇಶಿಕೇಂದ್ರ ಸಂಗನ ಬಸವಯ್ಯನ ಅಂಕಿತ ‘ಗುರುನಿರಂಜನ ಚನ್ನಬಸವಲಿಂಗ’ ಎಂದಿರುವುದರಿಂದ ಇಬ್ಬರೂ ಭಿನ್ನ ಎಂಬುದು ಸ್ಪಷ್ಟ. ವಿರಕ್ತಪರಂಪರೆಯ ಮುರಿಗಾಸಮಯದಲ್ಲಿ ‘ಹುಬ್ಬಳ್ಳಿ ಸಂಗನಬಸವದೇಶಿಕ’ ಎಂಬವನ ಹೆಸರು ಬರುತ್ತದೆ. ಈತನಿಗೂ ಆತನಿಗೂ ಏನಾದರೂ ಸಂಬಂಧವಿದೆಯೊ ಹೇಗೋ ತಿಳಿಯದು.

ಸಂಗಬಸವಯ್ಯನ ಹೆಸರಿನ ಹಿಂದೆ ಸೇರಿದ್ದ 'ದೇಶಿಕೇಂದ್ರ' ಎಂಬುದು ದೇಶ ಸಂಚಾರ ಮಾಡುವ ಚರಜಂಗಮಸೂಚಿಯಾಗಿದೆ. ಇದು ತೋಂಟದ ಸಿದ್ಧಲಿಂಗರ ನಂತರ ಹೆಚ್ಚು ಪ್ರಚಾರಕ್ಕೆ ಬಂದ ಪದವಾಗಿದೆ. ಅವರ ಪರಂಪರೆಯಲ್ಲಿ, ಅದೂ ಮುರಿಗಾಸಮಯ ಮತ್ತು ಕುಮಾರಸಮಯಗಳಲ್ಲಿ ಈ ವಿಶೇಷಣ ಹಚ್ಚಿಕೊಂಡ ಹೆಸರುಗಳೇ ಹೆಚ್ಚು (ಕುಮಾರದೇಶಿಕೇಂದ್ರ, ಶಾಂತವೀರದೇಶಿಕ, ಬಸವಲಿಂಗದೇಶಿಕ, ಇಮ್ಮಡಿ ಬಸವಲಿಂಗದೇಶಿಕ, ಸಿದ್ಧಬಸವಲಿಂಗದೇಶಿಕ ಇತ್ಯಾದಿ). ಹಾಗೆಯೇ ಈತನ ಅಂಕಿತದಲ್ಲಿ ಸೇರಿದ 'ನಿರಂಜನ' ಎಂಬ ಪದವೂ ತೋಂಟದ ಸಿದ್ಧಲಿಂಗರ ನಂತರವೇ ಹೆಚ್ಚು ಪ್ರಚಾರಕ್ಕೆ ಬಂದುದಾಗಿದೆ. ಹೀಗಾಗಿ ದೇಶಿಕೇಂದ್ರ ಸಂಗನಬಸವಯ್ಯ ತೋಂಟದಸಿದ್ಧಲಿಂಗರ ತರುವಾಯ ಬಂದವನಾಗಿರಬೇಕು. ಅಲ್ಲದೆ ಅವರ ಶಿಷ್ಯ ಪರಂಪರೆಗೆ ಸೇರಿದವನೂ ಆಗಿರಬೇಕು. ಬಾಜಾರ, ಹಪ್ತೆ ಮೊದಲಾದ ಪದಗಳು ಈತನ ವಚನಗಳಲ್ಲಿ ಬಳಕೆಯಾಗಿರುವುದರಿಂದ ಸುಮಾರು ೧೭ನೆಯ ಶತಮಾನದಲ್ಲಿ ಇದ್ದವನಾಗಿರಬೇಕು.

'ದೇಶಿಕೇಂದ್ರ' ಎಂದು ಈತ ತನ್ನನ್ನು ಕರೆದುಕೊಂಡಿರುವುದರಿಂದ ವಿರಕ್ತ ಪರಂಪರೆಗೆ ಸೇರಿದ ಚರಜಂಗಮನಾಗಿ ದೇಶಸಂಚಾರ ಕೈಕೊಂಡು, ಕೊನೆಯಲ್ಲಿ ಒಂದು ವಿರಕ್ತಮಠದ ಸ್ವಾಮಿಯಾಗಿ ನೆಲೆನಿಂತಿರಬೇಕು. ಆದರೆ ಎಲ್ಲಿ ಎಂಬುದು ತಿಳಿದಿಲ್ಲ. ಈತನ ವಚನಗಳ ಹಸ್ತಪ್ರತಿ ಸೊಲ್ಲಾಪೂರ ತಾಲೂಕಿನ ಕರಜಗಿ (ಇದು ಗಜೇಶ ಮಸಣಯ್ಯನೆಂಬ ವಚನಕಾರನ ಸ್ಥಳ)ಯ ಒಂದು ವಿರಕ್ತಮಠದಲ್ಲಿ ದೊರೆತಿದ್ದು, ಈತ ಆ ಮಠದ ಸ್ವಾಮಿಯೇನಾದರೂ ಆಗಿದ್ದನೋ ಹೇಗೋ ತಿಳಿಯದು.

ಹೀಗೆ ಸಂಗನಬಸವಯ್ಯನ ಜೀವನಕ್ಕೆ ಸಂಬಂಧಿಸಿದ ವಿವರಗಳೇನೂ ದೊರಕದಿದ್ದರೂ ಈತನ ಬಹುಸಂಖ್ಯೆಯ ಅಮೂಲ್ಯವಾದ ವಚನಗಳು ದೊರೆತುದು ಒಂದು ವಿಶೇಷ. ಈತನ ಕೃತಿಯ ಹೆಸರು 'ಷಟ್‌ಸ್ಥಲ ವಚನಗಳು'. ಕರ್ತೃವೇ ಇದನ್ನು ಸ್ಥಲಾನುಗುಣವಾಗಿ ಸಂಯೋಜಿಸಿದ್ದಾನೆ. ಷಟ್‌ಸ್ಥಲಗಳ ಒಂದೊಂದು ಸ್ಥಲದಲ್ಲಿ ಮತ್ತೆ ಆರಾರು ಅವಾಂತರ ಸ್ಥಲಗಳನ್ನು ಕಲ್ಪಿಸಿರುವುದರಿಂದ ಇದು 'ಮಿಶ್ರ ಷಟ್‌ಸ್ಥಲ' ಕೃತಿ ಎನಿಸಿದೆ. ಇದರಲ್ಲಿರುವ ಒಟ್ಟು ಸ್ಥಲಗಳು ೫೩, ವಚನಗಳು ೧೨೪೨. ಇಲ್ಲಿನ ಸ್ಥಲಯೋಜನೆ ಹೀಗಿದೆ:

೧. ಪಿಂಡಸ್ಥಲ ೨. ಪಿಂಡಜ್ಞಾನಸ್ಥಲ ೩. ಸಂಸಾರ ಹೇಯಸ್ಥಲ ೪. .ಗುರು ಕಾರುಣ್ಯಸ್ಥಲ ೫. ಲಿಂಗಧಾರಣಸ್ಥಲ ೬.. ವಿಭೂತಿಸ್ಥಲ ೭. ರುದ್ರಾಕ್ಷಿಸ್ಥಲ ೮. ಪಂಚಾಕ್ಷರಿಸ್ಥಲ. ೯. ಭಕ್ತಸ್ಥಲ ೧೦. ಭಕ್ತನ ಮಾಹೇಶ್ವರಸ್ಥಲ ೧೧. ಭಕ್ತನ ಪ್ರಸಾದಿಸ್ಥಲ ೧೨. ಭಕ್ತನ ಪ್ರಾಣಲಿಂಗಿಸ್ಥಲ ೧೩. ಭಕ್ತನ ಶರಣಸ್ಥಲ ೧೪. ಭಕ್ತನ ಐಕ್ಯಸ್ಥಲ. ೧೫. ಮಾಹೇಶ್ವರಸ್ಥಲ ೧೬. ಮಾಹೇಶ್ವರನ ಭಕ್ತಸ್ಥಲ ೧೭. ಮಾಹೇಶ್ವರನ ಪ್ರಸಾದಿಸ್ಥಲ ೧೮. ಮಾಹೇಶ್ವರನ ಪ್ರಾಣಲಿಂಗಿಸ್ಥಲ ೧೯. ಮಾಹೇಶ್ವನ ಶರಣಸ್ಥಲ ೨೦. ಮಾಹೇಶ್ವರಣನ ಐಕ್ಯಸ್ಥಲ. ೨೧. ಪ್ರಸಾದಿಸ್ಥಲ ೨೨. ಪ್ರಸಾದಿಯ ಭಕ್ತಸ್ಥಲ ೨೩. ಪ್ರಸಾದಿಯ ಮಾಹೇಶ್ವರಸ್ಥಲ ೨೪. ಪ್ರಸಾದಿಯ ಪ್ರಾಣಲಿಂಗಿಸ್ಥಲ

೨೫. ಪ್ರಸಾದಿಯ ಶರಣಸ್ಥಲ ೨೬. ಪ್ರಸಾದಿಯ ಐಕ್ಯಸ್ಥಲ. ೨೭. ಪ್ರಾಣಲಿಂಗಸ್ಥಲ ೨೮. ಪ್ರಾಣಲಿಂಗಿಯ ಭಕ್ತಸ್ಥಲ ೨೯. ಪ್ರಾಣಲಿಂಗಿಯ ಮಾಹೇಶ್ವರಸ್ಥಲ ೩೦. ಪ್ರಾಣಲಿಂಗಿಯ ಪ್ರಸಾದಿಸ್ಥಲ ೩೧. ಪ್ರಾಣಲಿಂಗಿಯ ಶರಣಸ್ಥಲ ೩೨. ಪ್ರಾಣಲಿಂಗಿಯ ಐಕ್ಯಸ್ಥಲ. ೩೩. ಶರಣಸ್ಥಲ ೩೪. ಶರಣನ ಭಕ್ತಸ್ಥಲ ೩೫. ಶರಣನ ಮಾಹೇಶ್ವರಸ್ಥಲ ೩೬. ಶರಣನ ಪ್ರಸಾದಿಸ್ಥಲ ೩೭. ಶರಣನ ಪ್ರಾಣಲಿಂಗಿಸ್ಥಲ ೩೮. ಶರಣನ ಐಕ್ಯಸ್ಥಲ. ೩೯. ಐಕ್ಯಸ್ಥಲ ೪೦. ಐಕ್ಯನ ಭಕ್ತಸ್ಥಲ ೪೧. ಐಕ್ಯನ ಮಾಹೇಶ್ವರಸ್ಥಲ ೪೨. ಐಕ್ಯನ ಪ್ರಸಾದಿಸ್ಥಲ ೪೩. ಐಕ್ಯನ ಪ್ರಾಣಲಿಂಗಿಸ್ಥಲ ೪೪. ಐಕ್ಯನ ಶರಣಸ್ಥಲ. ೪೫. ನಿರವಯಸ್ಥಲ ೪೬. ಗುರುಭಕ್ತಿಸಂಸಾರಿ ೪೭. ಲಿಂಗಾಂಗಲೀಲಾ ಷಟ್‌ಸ್ಥಲ ೪೮. ಆಚಾರಾಂಗಸ್ಥಲ ೪೯. ಗೌರವಾಂಗಸ್ಥಲ ೫೦. ಶಿವಾಂಗಸ್ಥಲ ೫೧. ಚರಾಂಗಸ್ಥಲ ೫೨. ಶೇಷಾಂಗಸ್ಥಲ ೫೩. ಮಹದಂಗಸ್ಥಲ.

ಇಲ್ಲಿನ ಕೊನೆಯ ಎಂಟು ಸ್ಥಲಗಳು ಈವರೆಗಿನ ಯಾವುದೇ ಸ್ಥಲಕಟ್ಟಿನ ಕೃತಿಗಳಲ್ಲಿ ಕಾಣದ ನೂತನ ಸ್ಥಲಗಳಾಗಿವೆ. ಇವುಗಳಲ್ಲಿ ಕೊನೆಯ ಆರು ಸ್ಥಲಗಳ ಹೆಸರುಗಳು ಮಾತ್ರ ಮೂರುಸಾವಿರ ಮುಕ್ತಿಮುನಿಯ 'ಸರ್ವಾಚಾರ ಸಾರಾಮೃತಸುಧೆ'ಯ ಕೊನೆಯ ವಚನದಲ್ಲಿ ಬರುತ್ತದೆ. ಆದರೆ ಇಲ್ಲಿ ಒಂದೊಂದು ಸ್ಥಲದ ಅಡಿಯಲ್ಲಿ ಅವುಗಳಿಗೆ ಸಂಬಂಧಿಸಿದ ವಚನಗಳೂ ಸಂಗ್ರಹಗೊಂಡಿವೆ. ಈ ಸ್ಥಲನಾಮಗಳನ್ನು ಇವರಿಬ್ಬರಲ್ಲಿ ಯಾರಿಂದ ಯಾರು ತೆಗೆದುಕೊಂಡರೆಂಬುದು ತಿಳಿಯದು. ಮುಕ್ತಿಮುನಿಯ ಕಾಲ ೧೮ನೆಯ ಶತಮಾನವೆಂದು ನಿರ್ಧರಿಸುವುದಾದರೆ, ೧೭ನೆಯ ಶತಮಾನದಲ್ಲಿ ಇದ್ದಿರಬಹುದಾದ ದೇಶಿಕೇಂದ್ರ ಸಂಗನಬಸವಯ್ಯನಿಂದಲೇ ಮುಕ್ತಿಮುನಿ ತೆಗೆದು ಕೊಂಡಿರಬೇಕೆಂದು ಹೇಳಬೇಕಾಗುತ್ತದೆ.

ಷಟ್‌ಸ್ಥಲತತ್ವನಿರೂಪಣೆ ಈ ಕೃತಿಯ ಪರಮ ಉದ್ದೇಶ. ಅದನ್ನು ಹೆಚ್ಚು ಶಾಸ್ತ್ರಜಡಗೊಳಿಸದೆ ನೇರ ಹಾಗೂ ಸರಳವಾಗಿ ಸೂತ್ರಬದ್ಧವಾದ ಸಂಕ್ಷಿಪ್ತ ವಚನಗಳ ಮೂಲಕ ವಿವರಿಸಲಾಗಿದೆ. ನಿರೂಪಣೆಯೆಲ್ಲ ಬಸವಾದಿ ಶರಣರ ದಟ್ಟವಾದ ಪ್ರಭಾವಲಯದಲ್ಲಿಯೇ ಸಾಗುತ್ತದೆ. ಹೀಗಿದ್ದೂ ಈ ವಚನಕಾರ ಇತರರಿಂದ ಭಿನ್ನವಾದ ಕೆಲವು ವೈಶಿಷ್ಟ್ಯಗಳನ್ನು ತೋರುತ್ತಾನೆ. ತಾವು ಹೇಳುವ ವಿಚಾರಗಳಿಗೆ ವೇದ–ಆಗಮ–ಉಪನಿಷತ್ತು–ಪುರಾಣ–ಶಾಸ್ತ್ರ ಗ್ರಂಥಗಳಿಂದ ಸಂಸ್ಕೃತ ಪ್ರಮಾಣಗಳನ್ನು ಎತ್ತಿ ಕೊಡುವುದೊಂದು ಪರಂಪರೆಯಾಗಿಯೇ ವಚನಸಾಹಿತ್ಯದಲ್ಲಿ ನಡೆದುಬಂದಿದೆ. ಇದು ಬಸವೋತ್ತರಯುಗದ ವಚನಕಾರರಲ್ಲಿ ಹೆಚ್ಚು. ಇದನ್ನು ಪ್ರಥಮವಾಗಿ ಟೀಕಿಸಿ, ಪುರಾತನ ಶರಣರ ವಚನಗಳಿಗಿಂತ ಮಿಗಿಲಾದ ಸಾಕ್ಷಿ ಮತ್ತೊಂದಿಲ್ಲವೆಂದು ಘೋಷಿಸಿ, ತಾನು ಒಂದೂ ಸಂಸ್ಕೃತ ಉದ್ಧರಣೆಗಳನ್ನು ಬಳಸದೆ ಅಚ್ಚಗನ್ನಡದಲ್ಲಿ ವಚನಗಳನ್ನು ರಚಿಸಿ, ಅಪೂರ್ವತೆಯನ್ನು ಮೆರೆದುದು ಈತನ ಮೊದಲ ವೈಶಿಷ್ಟ್ಯ.

ಈತ ತನ್ನ ವಚನ ರಚನೆಯ ಧೋರಣೆಯನ್ನು ಹೀಗೆ ಹೇಳಿಕೊಂಡಿದ್ದಾನೆ :

''ಅಯ್ಯಾ, ನಿಮ್ಮ ಶರಣರನುಭಾವಕ್ಕೆ ಪ್ರತಿಸಾಕ್ಷಿಯೆಂದು<br>
ಬೆರಸಿ ಹೇಳುವರು ಹಾದಿ ಹತ್ತಿಕೆಯ ನುಡಿಗಳ.

ಅದು ಎನಗೆಂದೂ ಸೊಗಸದು ಕಾಣಾ.
ಎನ್ನ ನಿಜರತ್ನಪ್ರಕಾಶ ನಿಮ್ಮ ಶರಣರ ವಚನ.
ಇದಕ್ಕೆ ಸಾಕ್ಷಿ ತಂದು ಹೇಳುವ ಭಾವವ ದಹಿಸಿ,
ಭಸ್ಮವ ಮಾಡಿ ಧರಿಸಿರ್ದೆನಾಗಿ ಕಾಣೆಸದು.
ಶರಧಿಗೆ ತೊರೆಗಾವಲಿ, ಮೇರುವಿಗೆ ಮೊರಡಿ,
ಗಗನಕ್ಕೆ ಕೊಪ್ಪರಿಗೆ ತೋರಿಸಿದರೆ ಸರಿಯಪ್ಪುದೆ?
ಆ ಕುರಿಗಳ ನುಡಿ ಅತ್ತಿರಲಿ, ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣರ ನುಡಿಬೆಳಗನಗಲದಿರ್ದೆನು ನಿಮ್ಮೊಳಗೆ''. ೭೬೦

''ವೇದಾಗಮ ಸಾಕ್ಷಿಯ ಘನವೆಂದು ನುಡಿವರು,
ನುಡಿದ ನುಡಿಯೇನೆಂದರಿಯರು; ಇದು ಏನು ಹೇಳಾ ಪಸುಭಾವ?
ಐವತ್ತೆರಡಕ್ಷರವನುದಯಿಸುವುದೇ ವೇದ ? ನುಡಿಯುವುದೇ ಆಗಮ ?
ಬೇರರಸಲೇನು ಕಸಮನುಜರಿರಾ,
ನಿಮ್ಮ ಕುರುಹು ಕುರುಹನರಿಯದೆ ಕುರಿಗಳಾದವು.
ಕಳೆದುಳಿದು ಬನ್ನಿರಿ, ಗುರುನಿರಂಜನ ಚನ್ನಬಸವಲಿಂಗವಾಗಬೇಕಾದಡೆ
ಕಳೆ–ನಾದ–ಬಿಂದುವನರಿಯಿರಿ.'' ೭೫೯

''ಶ್ರುತಿಯ ನೋಡುವ ಮತಿಕುಶಲದನುವಿಂಗೆ ನೆಗೆದು
ನೋಡಲೊಲ್ಲದೆನ್ನ ಭಾವ.
ಆಗಮವ ನೋಡುವ ಮತಿಕುಶಲದನುವಿಂಗೆ ವಿಕಸನವಾಗಲೊಲ್ಲದೆನ್ನ ಮನ.
ಅಭ್ಯಾಸಿಗಳರಿವ ಮತಿಕುಶಲದನುವಿಂಗೆ ಸೊಗಸನೆತ್ತಲೊಲ್ಲದೆನ್ನ ತನು.
ಅದೇನು ಕಾರಣವೆಂದೊಡೆ, ಬಸವ ಚೆನ್ನಬಸವ ಪ್ರಭುಗಳ
ವಚನಾನುಭಾವದ ಪರಮಪ್ರಕಾಶ ಎನ್ನೊಳ ಹೊರಗೆ
ಪರಿಪೂರ್ಣಾನಂದ ತಾನೆಯಾಗಿಪ್ಪುದಾಗಿ....'' ೭೫೮

ಹಾಗೆಯೇ 'ಆದ್ಯರ–ವೇದ್ಯರ–ಸಾಧ್ಯರ ಸತ್–ಚಿತ್–ಆನಂದ ಪ್ರಕಾಶ, ಸಕಲ ಪುರಾತನರ ಅನುಭಾವಪ್ರಕಾಶದೊಳು ಮುಳುಗಿ ಘನಪರವಶದಿಂದೋಲಾಡಿ, ಈ ಮಹಿಮರ ಅನುಭಾವಕ್ಕೆ ತನ್ನನೊತ್ತೆಯನಿತ್ತು'–

''ಆದ್ಯರನುಭಾವ ಲಕ್ಷ್ಯಬಂದಲ್ಲಿ ದಾಸೋಹಿಯಾಗಿರ್ದೆನು.
ವೇದ್ಯರನುಭಾವ ಲಕ್ಷ್ಯಬಂದಲ್ಲಿ ಪೂಜಿತನಾಗಿರ್ದೆನು.
ಸಾಧ್ಯರನುಭಾವ ಲಕ್ಷ್ಯಬಂದಲ್ಲಿ ಸೇವಕನಾಗಿರ್ದೆನು.
ನೂತನಪುರಾತನರನುಭಾವ ಲಕ್ಷ್ಯಬಂದಲ್ಲಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಸರ್ವಾಚಾರ ಸಂಪತ್ತಿನೊಳಿರ್ದೆನು''. ೨೯೨

ಎಂದು ಶರಣರ ಅನುಭಾವದ ಬೆಳಕಿನಲ್ಲಿ ಮುನ್ನಡೆಯುವ ತನ್ನ ಸತ್ಯಸಂಕಲ್ಪವನ್ನು ಸ್ಪಷ್ಟಪಡಿಸುತ್ತಾನೆ. ಬಸವ, ಚೆನ್ನಬಸವ, ಪ್ರಭು, ಅಜಗಣ್ಣ, ಸಿದ್ದರಾಮ, ಘಟ್ಟಿವಾಳಯ್ಯ,

ಉರಿಲಿಂಗಪೆದ್ದಿ, ಮಡಿವಾಳ ಮಾಚಿದೇವ, ಮರುಳಶಂಕರದೇವ, ನೀಲಲೋಚನೆ, ನಾಗಲಾಂಬಿಕೆ, ಅಕ್ಕಮಹಾದೇವಿ, ಮುಕ್ತಾಯಕ್ಕ,ಚಂಗಳೆ, ನಂಬಿಯಕ್ಕ, ಚೋಳಿಯಕ್ಕ, ಅಮ್ಮವ್ವೆ ಮೊದಲಾದ ಶರಣ– ಶರಣೆಯರನ್ನು ಕೊಂಡಾಡಿ ತನ್ನ ಭಕ್ತಿಗೌರವಗಳನ್ನು ಸಲ್ಲಿಸುತ್ತಾನೆ.

ಪರಂಪರೆಯಂತೆ ಪಿಂಡ – ಪಿಂಡಜ್ಞಾನ – ಸಂಸಾರಹೇಯ – ಗುರುಕಾರುಣ್ಯ ಮುಂತಾಗಿ ತತ್ತ್ವವಿವೇಚನೆ ಸಾಗಿ ನಡೆಯುತ್ತದೆ. ಮನದ ಚಂಚಲತೆಯನ್ನು–

''ಹೊನ್ನಿರ್ದು ಪರಧನಕಿಚ್ಛೆಯ ಮಾಡಿಸುವುದು.
ಹೆಣ್ಣಿರ್ದು ಪರಸ್ತ್ರೀಯರ ಇಚ್ಛೆಯ ಮಾಡಿಸುವುದು.
ಮಣ್ಣಿರ್ದು ಪರಭೂಮಿಗೆ ಇಚ್ಛೆಯ ಮಾಡಿಸುವುದು.
ಸುರನರಾದಿ ಸಕಲರಲಿ ಇವುಗಳಿಚ್ಛೆಯ ಕಳೆವ ಧೀರರನಾರನು ಕಾಣೆನಯ್ಯ.'' ೧೭

ಎಂದು ತಿಳಿಸುತ್ತಾನೆ. ಈ ಮನವೇ ಸಂಸಾರ. ಇದನ್ನು ಬಿಟ್ಟು ಬೇರೆ ಸಂಸಾರವೆಂಬುದಿಲ್ಲ ಎಂದು ಹೇಳುತ್ತಾನೆ.

''ಹೊನ್ನು ಸಂಸಾರವಲ್ಲ, ಹೆಣ್ಣು ಸಂಸಾರವಲ್ಲ, ಮಣ್ಣು ಸಂಸಾರವಲ್ಲ.
ಈ ಮೂರರ ಮೇಲಣ ಮೋಹವೆರಸಿದ ಮನವು ಸಂಸಾರ ನೋಡಾ.
ಆ ಮನವನು ಸಂಸಾರಮೋಹವನು ಬೇರ್ಪಡಿಸಿ,
ತನ್ನ ಕೂಡಿ ನಡೆವ ಗತಿಮತಿಗಳನಾರನು ಕಾಣೆನಯ್ಯ
ಗುರುನಿರಂಜನ ಚನ್ನಬಸವಲಿಂಗ.'' ೧೬

ಇದು ಪ್ರಭುದೇವರ 'ಹೊನ್ನು ಮಾಯೆಂಬರು ಹೊನ್ನು ಮಾಯೆಯಲ್ಲ' ಎಂಬ ವಚನದ ಅನುಕರಣೆಯಿಂದ ಕೂಡಿದೆ.

ಭಕ್ತಿಯನ್ನು ಪ್ರಕಟಿಸುವ ಕೆಲವು ವಚನಗಳೂ ಇಲ್ಲಿವೆ. ಆದರೆ ಅವುಗಳಲ್ಲಿ ಭಾವತೀವ್ರತೆ ಅಷ್ಟಾಗಿ ಕಂಡುಬರುವುದಿಲ್ಲ. ಬಸವಣ್ಣನವರ 'ಅಡಿ ಕಾಲುದಣಿಯವು' ಎಂಬ ವಚನದ ಅನುಕರಣೆಯ ಒಂದು ರೂಪ ಹೀಗಿದೆ :

''ಕಾಯ ದಣಿವರಿಯದು ; ಮಾಡಿ ಮಾಡಿ ಮುಂದೆ ಉಲಿವುದು,
ಮನ ದಣಿವರಿಯದು ; ಮಾಡಿ ಮಾಡಿ ಮುಂದೆ ಉಲಿವುದು.
ಭಾವ ದಣಿವರಿಯದು ; ಮಾಡಿ ಮಾಡಿ ಮುಂದೆ ಉಲಿವುದು.
ಸರ್ವಾಂಗ ದಣಿವರಿಯದು; ಮಾಡಿ ಮಾಡಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ ತಾನೆಯಾಗಿ''. ೧೧೭

ಈತ ಸತಿಪತಿಭಾವದ ಅನೇಕ ವಚನಗಳನ್ನೂ ರಚಿಸಿದ್ದಾನೆ. ಹೆಚ್ಚಿನವು ಬಸವಣ್ಣ, ಅಕ್ಕಮಹಾದೇವಿ, ಉರಿಲಿಂಗದೇವ, ಗಜೇಶ ಮಸಣಯ್ಯರ ಪಡಿಯಚ್ಚಾಗಿದ್ದರೆ, ಕೆಲವು ಹೊಸ ಕಲ್ಪನೆಯಿಂದ ಕೂಡಿವೆ.

''ಎನ್ನ ಮನೆಯ ರಮಣನ ಮಾಧುರ್ಯವನೇನೆಂದು ಹೇಳಲಮ್ಮ.
ನೆಲಮನೆಯಲ್ಲಿ ನೆರೆವ ಸುಖವ ಕಂಡವರರಿಯರು.

ಮನಮಂದಿರದಲ್ಲಿ ಕೂಡುವ ಸುಖವ ವಾಗದ್ವೈತರೇನು ಬಲ್ಲರು ?
ಶಿಖಿಮಂಟಪದಲ್ಲಿ ಸುರತದ ಸುಖವ ಕಣ್ಣುಗೆಟ್ಟನಾರಿಯರೇನು ಬಲ್ಲರು ?
ಪವನಗೃಹದಲ್ಲಿ ನೆರೆವ ಸೌಖ್ಯವ ಅವರಿವರರಿಯರು.
ಗಗನಮಂಟಪದಲ್ಲಿ ಲೋಲಸಂಯೋಗವ ಕಾಲಕೆಳಗಲವರರಿಯರು.
ಗುರುನಿರಂಜನ ಚನ್ನಬಸವಲಿಂಗದ ನಿಜಾಂಗನೆಯಾನಲ್ಲದೆ
ಹೋಗಿ ಬರುವ ಸೋಗಿನ ನಾರಿಯರೆತ್ತ ಬಲ್ಲರು ಹೇಳಾಯಮ್ಮ'' ೬೭೮

''ಮೊದಲೆನ್ನ ಕೈವಶವಾಗಿರ್ದ ಪುರುಷನ
ಕಣ್ಣಸನ್ನೆಯಲ್ಲಿರಿಸಿಕೊಂಡಳೆಮ್ಮಕ್ಕ ; ಇದು ನೀತಿಯೇ ?
ಕಾಯಿಸಿ ಕಲ್ಪಿಸಿಕೊಂಡವಳಕ್ಕ ; ಇದು ನೀತಿಯೆ ?
ಒಳಗೊಳಗೆ ಮಾತನಾಡಿ ಮೋಹಿಸಿಕೊಂಡವಳಕ್ಕ ; ಇದು ನೀತಿಯೆ ?
ಇದನರಿದು ಮುನಿಸನುಳಿಸಿ ಹಿರಿಯಕ್ಕನೊಲುಮೆಯೊಳು ಪರಸ್ತ್ರೀಯಾಗಿ
ಪರಿಪರಿಯಿಂದೆ ಅವರ ಮೇಲೆ ನೆರೆದರೆ ಮರುಳುಗೊಂಡೆನ್ನೊಳಗಾದರು.
ಗುರುನಿರಂಜನ ಚನ್ನಬಸವಲಿಂಗಕ್ಕೆ ಪರಿಣಾಮವಾಯಿತ್ತು''. ೬೮೧

ಈತನ ಕೆಲವು ಬೆಡಗಿನ ವಚನಗಳು ನೂತನ ಸಂಕೇತಗಳಿಂದ ಕೂಡಿ ಆಕರ್ಷಕವೆನಿಸಿವೆ :

''ಭೂಪಾಲನ ಹೆಂಡತಿಯ ಭುಜದ ಮೇಲಿರ್ದ ಕೋಡಗ
ಗಾಲುಮೇಲಾದ ಶಾಖೆಗಳಿಗೆ ಲಂಘಿಸುವದು ನೋಡಾ.
ಕೋಡಗನ ನಾಭಿಯಲ್ಲಿ ಚಿಕ್ಕೆ ಮೂಡಿ ಚಂದ್ರನ ಕೂಡಲು
ದೇವಗನ್ನೆಯರು ಆರತಿಯ ಬೆಳಗುತಿರ್ದರು ನೋಡಾ.
ಆ ಬೆಳಗಿನೊಳಗೆ ಗುರು ನಿರಂಜನ ಚನ್ನಬಸವಲಿಂಗವನಿದಿರುಗೊಳ್ಳಬಲ್ಲರೆ
ಪ್ರಾಣಲಿಂಗಿಯೆಂಬೆ ಕಾಣಾ''. ೫೦೪

ಸಮಾಜವಿಮರ್ಶೆ ಈತನ ವಚನಗಳಲ್ಲಿ ಕಂಡುಬರುವ ಇನ್ನೊಂದು ವೈಶಿಷ್ಟ್ಯ. ತನ್ನ ಕಾಲದ ಸಮಾಜದಲ್ಲಿ ತೋರಿದ ಮೂಢನಂಬಿಕೆ, ಮೋಸ, ವಂಚನೆಗಳನ್ನು ಪ್ರತ್ಯಕ್ಷ ಕಂಡು ಹೀಗೆ ಕಟುವಾಗಿ ಟೀಕಿಸಿದ್ದಾನೆ :

''ಮಠಮಾನ್ಯದೈತನದ ಹಿರಿಯರೆನಿಸುವ ಅಟಮಟದಯ್ಯಗಳ
ಹಟದ ಕುಟಿಲಗಳ ಪರಿಯ ನೋಡಾ !
ತಾವು ದೇವರೆಂದು ಸಕಲಭಕ್ತಜನರಿಂದೆ ಪೂಜೆಯ ಕೈಕೊಂಡು
ಮೆರೆಯುತಲಿರ್ದು ತಮಗೊಂದು ದೇವರುಂಟೆಂದು,
ಈರಣ್ಣ ಬಸವಣ್ಣ ಕಲ್ಲಣ್ಣ ಮಲ್ಲೇಶ ಜಗುಲಿಯ ಮೇಲೆ ಭುಗಿಭುಗಿಲೆನಿಸುತ್ತ
ಅಪ್ಪ ಅಜ್ಜ ಮುತ್ತಯ್ಯನ ಮುಚ್ಚಿದ ಗರ್ದುಗೆಯೆಂದು,
ಹಾವುಗೆ ಬೆತ್ತ ಪುರಾಣ ಥೂಳತಾದಿಗಳಿಂಗೆ ನೇಮಿಸಿದ ವಾರ ತಿಥಿವಿಡಿದರ್ಚಿಸಿ,
ಕಾಯಿ ಫಲ ಕೂಳ ತೋರಿ ತೋರಿ ತಿಂಬುವ
ನಾಯಿಭಟಿಗಳನೆಂತು ದೇವರೆಂದು ಪೂಜಿಸಬಹುದು !
ಕಾಲತೊಳೆದ ನೀರು, ತಿಂದ ಕೂಳು ಇವನೆಂತು ಘನವೆನ್ನಬಹುದು ?

ಮತ್ತೆ ಮನೆಯೊಳಗೆ ಸತ್ತವರಿಗೆಂದು ಹಚ್ಚಡ ಸೀರೆ ಕುಪ್ಪಸಾದಿಗಳ ತಂದು
ಹುಣ್ಣಿವೆ ಅಮವಾಸ್ಯೆಗೆ ವಸ್ತ್ರವವಿಡಿದು ಮಾಡಿ, ಕರ್ಮಕಾಟವ ಕಳೆದು
ಗೆದ್ದವೆಂಬ ಮೂಳಹೊಲೆಯರು ತಾವು ದೇವರೆನ್ನಬಹುದೆ ?
ಇಂಥ ಕಾಳಮೂಳರಿಗೆ ಮಾಡಿದ ದುರ್ಗತಿ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ.'' ೨೨೫

ಹೀಗೆಯೇ 'ಬಂದ ಜಂಗಮಕ್ಕೊಂದು ಕಾಸನೀಯದೆ ಬೆಂದವೊಡಲಿಗೆ ಸಂದಿಸದೆ ಹಂದಿನಾಯಿಯಂತೆ ಸಾವ ಹೆಂದ ಮೂಢ' ಮಾಹೇಶ್ವರರನ್ನು (೨೧೮), ಆಶೆಗೆ ಹುಟ್ಟಿದ ಭಾಷೆಹೀನ ವೇಷಧಾರಿಗಳನ್ನು (೨೨೦), ದಾಸೋಹಿಗಳೆಂದು ದೇಶವ ತಿರುಗುವ ಡಂಭಕರನ್ನು (೩೬೫), ಜಡಶೀಲಗಳ ಹೊತ್ತು ಕೆಡುವೊಡಲ ಹೊರೆವ ತುಡುಗುಣಿಗಳನ್ನು (೨೩೪), ರಾಜಯೋಗಿ ಶಿವಯೋಗಿಯೆಂದು ಹೆಸರಿಟ್ಟುಕೊಂಡು ತಿರುಗುವ ಕಪಟ ಜಂಗಮರನ್ನು (೧೧೧೬, ೧೧೧೭), ಅನಾಚಾರಿ ಗುರುಶಿಷ್ಯರನ್ನು (೨೨೧), ವಾರ, ತಿಥಿ, ಅಮವಾಸ್ಯೆಗಳನ್ನು ಆಚರಿಸುವ ಮೂಢ ಜನರನ್ನು (೩೮೫), 'ಆದ್ಯರೊಚನ ಸಾಧ್ಯವಾಯಿತ್ತೆಂದು' ತಿರುಗುವ ಮಾತಿನ ಮಲ್ಲರನ್ನು (೫೩೦) ಟೀಕಿಸಿದ್ದಾನೆ. ಇಲ್ಲಿ ತೋರುವ ಸಾತ್ವಿಕರೋಷ ಈತನ ಸಾಮಾಜಿಕ ಕಾಳಜಿಗೆ ಹಿಡಿದ ಕನ್ನಡಿಯಾಗಿದೆ.

ಸಂಕ್ಷಿಪ್ತತೆ, ಲಯ, ಪ್ರಾಸ, ಸರಳತೆಗಳನ್ನು ಅಳವಡಿಸಿಕೊಂಡು, ಸಾಹಿತ್ಯ ಲಕ್ಷಣವನ್ನು ತೋರುವುದು ಈ ವಚನಗಳ ಮತ್ತೊಂದು ವೈಶಿಷ್ಟ್ಯ. ಬಹುಸಂಖ್ಯೆಯ ವಚನಗಳು ಮುಕ್ತಕ ರೂಪದಲ್ಲಿವೆ. ತತ್ವನಿರೂಪಣೆಯನ್ನೊಳಗೊಂಡ ವಚನಗಳು ಸ್ವಲ್ಪ ದೀರ್ಘವೆನಿಸಿದರೂ ಗದ್ಯದ ವಾಚ್ಯತೆಯನ್ನು ಪಡೆದುಕೊಂಡಿಲ್ಲ. ಭಾಷೆ ಸಮಕಾಲೀನ ಪ್ರಾದೇಶಿಕ ಪದ, ನುಡಿಗಟ್ಟುಗಳನ್ನು ಬಳಸಿಕೊಂಡೂ ಶಿಷ್ಟವೆನಿಸಿದೆ. ವಚನಬಂಧ ಶಿಥಿಲವೆನಿಸಿಲ್ಲ. ರಚನೆಯಲ್ಲಿ ಪ್ರಯತ್ನಶೀಲತೆ, ಅಚ್ಚುಕಟ್ಟುತನ ಒಡೆದು ಕಾಣುತ್ತದೆ. ಇಲ್ಲಿ ಬಳಕೆಯಾದ ಅನೇಕ ವಾಕ್ಯಗಳು ಅನುಭವೋಕ್ತಿಗಳೆನಿಸಿವೆ. 'ಸಿಂಹನ ಹಾಲ ಆನೆಯ ಮರಿ ಉಣಬಲ್ಲುದೆ ?' ಹುಲಿಯ ಹಾಲ ಹುಲ್ಲೆಯ ಮರಿ ಉಣಬಲ್ಲುದೆ ? ಗರುಡನಿಂದ ಗುಟುಕ ಹಂದಿಯ ಮರಿ ಕೊಳಬಲ್ಲುದೆ ?' 'ವೇಷಕ್ಕೆ ತಕ್ಕ ಭಾಷೆಯುಳ್ಳರೆ ಹಿರಿಯರು ಮೆಚ್ಚುವರು' 'ಆಸೆಗೆ ಹುಟ್ಟಿದ ಭಾಷೆಹೀನ ವೇಷಧಾರಿಗಳು ಸಹಜವನೆತ್ತ ಬಲ್ಲರಯ್ಯ ?' 'ನೀತಿಯನರಿಯದ ಸೂತಕಪ್ರಾಣಿಗಳಿಗೆ ಅಜಾತಗುರೂಪದೇಶ ಅಳವಡುವುದೆ ?' 'ಸಿಂಹದ ಹಾಲ ತಂದು ಶುನಕಂಗಿತ್ತು ಸಲಹಿದರೆ ನಡೆನುಡಿಯಲ್ಲಿ ಶುನಕನಲ್ಲದೆ ಸಿಂಹನಾಗಿತ್ತೆ ?' 'ಹಂಗಿಲ್ಲದ ಉದ್ಯೋಗ ಭಂಗವಿಲ್ಲ ಕಾಣಾ' 'ಕಾಲೊಳಗಿನ ಮುಳ್ಳ ಕಣ್ಣಿನಿಂದ ತೆಗೆಯಬಹುದು, ಕಣ್ಣೊಳಗಿನ ಮುಳ್ಳ ಕಾಲಲ್ಲಿ ತೆಗೆವ ಜಾಣರನಾರನೂ ಕಾಣೆ' 'ಕೆಂಡಕ್ಕೆ ಬಂದೊರಲೆ ನಿಂದಿರಲೆಡೆಯಿಲ್ಲ' 'ಪಂಚಾಕ್ಷರ ಸಂಬಂಧವಾದ ನಿಜಾನಂದಶರಣ ಗಜಬಜೆಯ ಗೋಷ್ಠಿಗಳನೊಮ್ಮೆ ತೋರ' 'ಪತಿವೋಪಪೂರ್ಣೆ ಅತಿ ಉನ್ನತೆಯೆನಿಸುವಳು ಒಳಗ್ರೊಧರಗೆ' 'ಕಸಗೂಡಿದ ಭೂಮಿಯಲ್ಲಿ ಸಸಿ ಪಲ್ಲೈಸುವುದೆ ?' 'ಐವತ್ತಾರು ದೇಶದೊಳಗುಳ್ಳ ಸ್ಥಾವರಂಗಳ

ತನ್ನೊಳಗುಳ್ಳ ಭಕ್ತಿಯಲ್ಲರಿದರ್ಚಿಸಬಲ್ಲರೆ ಶರಣ'– ಇಂಥ ಮಾತುಗಳಲ್ಲಿ ವಚನಕಾರನ ಲೋಕಾನುಭವ ಎದ್ದುಕಾಣುತ್ತದೆ.

ಈತನ ಶಬ್ದಸಂಪತ್ತು ಸಮೃದ್ಧವಾಗಿದೆ. ಪಾರಂಪರಿಕ ವಚನಭಾಷೆಯನ್ನು ಸಂಪೂರ್ಣ ಕರಗತಮಾಡಿಕೊಂಡುದಲ್ಲದೆ, ಅನೇಕ ದೇಶೀ ಪದಗಳನ್ನು, ನುಡಿಗಟ್ಟು ಗಳನ್ನು ಉಚಿತವಾಗಿ ಬಳಸಿ, ತನ್ನ ವಚನಗಳಿಗೆ ಶಕ್ತಿಯನ್ನು ತುಂಬಿದ್ದಾನೆ. ಇಂಬು, ಅಗಿನ, ಉಚ್ಚಹ, ಉಡುಗು, ಉಲುಚು, ಬೊಂಪಾಸ, ಉಳುಮೆ, ಎಡ್ಡೆಡ್ಡು, ಎರೆಯ, ಒಬ್ಬುಳಿ, ಬಣತೆ, ಗೊಂದಣ, ಕರಡವಿ, ನಿಗುರು, ಕಾವಳಿ, ಕೌಲು, ಗುಂಜು, ಗಂಪ, ಗಬ್ಬು, ತೊಂಡಲ, ದಿಂಡಿ, ತಿಗಳ, ಹಣ್ಣೆ, ಹದುರು ಮೊದಲಾದ ದೇಶೀ ಪದಗಳು, ಗಾಲಮೇಲು, ಹುಲ್ಲುಹೊಟ್ಟುಮಾಡು, ತುಳಿದುತೂರು, ಕಾಸುಕಪ್ಪಟ, ಬರುಕಾಯ ನಾಗು, ಪಟ್ಟುಗುಡು, ಕಚ್ಚಕಳೆದಕ್ಕಿ, ಕಣ್ದೆರಪಮಾಡು, ಕೆಡಬಡೆ, ಕೂಕ ಕುಟಿಲ, ಗಜಬಜೆ, ಗುಂಭಭ್ರಾಂತ, ತರಳನುಡಿ, ಪೋರಜಂಗುಳಿ, ಬಯಲಭ್ರಾಂತಿ, ಬಟ್ಟೆಗೆಡು, ಬಟ್ಟೆಹರುಕರು– ಎಂಬಂಥ ನುಡಿಗಟ್ಟು, ಜೋಡುನುಡಿಗಳು ಇದಕ್ಕೆ ಉದಾಹರಣೆ.

ಈ ವಚನಕಾರನ ಅಂಕಿತದಲ್ಲಿ ವೈವಿಧ್ಯ ಕಂಡುಬರುತ್ತದೆ. 'ಗುರುನಿರಂಜನ ಚನ್ನ ಬಸವಲಿಂಗ' ಎಂಬುದು ಬಹುಸಂಖ್ಯೆಯ ವಚನಗಳಲ್ಲಿ ಕಂಡುಬರುವ ಅಂಕಿತವಾದರೆ, ಆಚಾರಾಂಗಸ್ಥಲದಿಂದ ಮಹದಂಗಸ್ಥಲದವರೆಗಿನ ಕೊನೆಯ ಆರು ಸ್ಥಲಗಳಲ್ಲಿನ ವಚನಗಳಲ್ಲಿ ಈ ಕೆಳಗಿನ ಅಂಕಿತಗಳಿವೆ : ಸದ್ಗುರು ಚೆನ್ನವೃಷಭೇಂದ್ರಲಿಂಗ, ಚೆನ್ನ ಶುದ್ಧಸಿದ್ಧಪ್ರಸಿದ್ಧ ಪ್ರದಾಯಕಲಿಂಗ, ಪರಮಾಚಾರಪ್ರಿಯ ಚೆನ್ನಬಸವಲಿಂಗ, ಚೆನ್ನಕಾಯಮನಭಾವಪ್ರಿಯ ಮಹಾಲಿಂಗ, ಕ್ರಿಯಾಜ್ಞಾನ ಭಾವಮೋಹಿ ನಿಜಲಿಂಗ, ಚೆನ್ನಭಕ್ತಿಜ್ಞಾನ ವೈರಾಗ್ಯಮೂರ್ತಿಲಿಂಗ (ಆಚಾರಾಂಗಸ್ಥಲ); ಚನ್ನ ತನುಮನಭಾವ ಪ್ರಸನ್ನಲಿಂಗ, ಚೆಲುವಾಂಗ ಪ್ರಾಣಾತ್ಮಪ್ರಿಯ ಸಿದ್ಧಲಿಂಗ, ಕರ್ತು ಚೆನ್ನವೃಷಭೇಂದ್ರ ಲಿಂಗ, ನಿಜಭಕ್ತಿಜ್ಞಾನ ವೈರಾಗ್ಯಮೋಹಿ ಘನಲಿಂಗ, ಶುದ್ಧಸಿದ್ಧಪ್ರಸಿದ್ಧ ಪ್ರಭುಲಿಂಗ (ಗೌರವಾಂಗಸ್ಥಲ) ; ಶುದ್ಧಸಿದ್ಧಪ್ರಸಿದ್ಧ ಪ್ರಭುಲಿಂಗ, ಷಡ್ಬ್ರಹ್ಮರೂಪ ಚನ್ನಬಸವ ಲಿಂಗ, ಚೆನ್ನಗುರುಲಿಂಗ ಜಂಗಮಪ್ರಭುವೆ (ಶಿವಾಂಗಸ್ಥಲ) ; ಚನ್ನಬಿಂದುನಾದಕಳೆ ಪ್ರಸನ್ನಮೂರ್ತಿಲಿಂಗ (ಚರಾಂಗಸ್ಥಲ) ; ಸದ್ಭಕ್ತಿಪ್ರಿಯ ಪಂಚಾಕ್ಷರಮೂರ್ತಿಲಿಂಗ, ಪಂಚಾಕ್ಷರಮೂರ್ತಿಲಿಂಗ, ಶಾಂತ ಐದುವರ್ಣಸಂಜ್ಞೆದೇವರು, ಸತ್ತುಚಿತ್ತು ಆನಂದ ನಿತ್ಯಪರಿಪೂರ್ಣಲಿಂಗ(ಶೇಷಾಂಗಸ್ಥಲ); ಮಹಾಘನ ಚನ್ನವೃಷಭೇಂದ್ರಲಿಂಗ, ಐವರ್ಣ ಸಂಜ್ಞೆದೇವ, ಚನ್ನ ತ್ರಿವರ್ಣಲಿಂಗ, ನಿಜಾಂತಃಪ್ರಿಯ ಚನ್ನಬಸವಲಿಂಗ, ಶಾಂತ ಚನ್ನವೃಷಭೇಂದ್ರಲಿಂಗ, ಮಹಾದಾನಿಚನ್ನವೃಷಭೇಂದ್ರಲಿಂಗ (ಮಹದಂಗಸ್ಥಲ).

## ನಿರಾಲಂಬ ಪ್ರಭುದೇವ :

'ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ' ಎಂಬ ಅಂಕಿತದಲ್ಲಿ ವಚನಗಳನ್ನು ಬರೆದ ಈತನ ಬಗೆಗೆ ಯಾವ ವಿಷಯವೂ ಸಿಕ್ಕುವುದಿಲ್ಲ. ಈಗ ಈತನ ೧೪ ವಚನಗಳು ದೊರೆತಿದ್ದು, ಅವುಗಳಿಗೆ 'ಶಿವಭಕ್ತಿಪಂಚಾಂಗದ ವಚನ' ಎಂದು ಕರೆಯಲಾಗಿದೆ. ಶಿವಾಚಾರಪಥವನರಿಯದೆ ಪಂಚಾಂಗ ಕೇಳುವವರನ್ನು ಕಟುವಾಗಿ ಟೀಕಿಸುವುದೇ

ಇವುಗಳ ಮುಖ್ಯ ಉದ್ದೇಶ. ವಿಪ್ರರು ಹೇಳುವ ಪಂಚಾಂಗವನ್ನು ತಿರಸ್ಕರಿಸಿದ ಈತ ನಿಜವಾದ ಪಂಚಾಂಗ ಯಾವುದು ಎಂಬುದನ್ನು ತಿಳಿಸುತ್ತಾನೆ. ಈತನ ದೃಷ್ಟಿಯಲ್ಲಿ ಅದರ ಅರ್ಥ ವಿವರಣೆ ಹೀಗಿದೆ :

''.......ಪಂಚ ಅಂದರೆ ಐದು, ಅಂಗವೆಂದರೆ ದೇಹ
ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಈ ಐದು ಕೂಡಿ ದೇಹವಾಯಿತ್ತು.
ಆ ದೇಹದೊಳಗೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರದಚ್ಚು
ಮುರಿಯುವುದೆ ಪಂಚಾಂಗ.
ಸತ್ವ ರಜ ತಮವೆಂಬ ಅಹಂಕಾರವ ತುಳಿವುದೇ ಪಂಚಾಂಗ.
ಆಣವಮಲ ಮಾಯಾಮಲ ಕಾರ್ಮಿಕಮಲವ ಮುಟ್ಟದಿರುವುದೇ ಪಂಚಾಂಗ.
ತನ್ನ ಸತಿಯ ಸಂಗವಲ್ಲದೆ ಪರಸತಿಯರ ಮುಟ್ಟದಿರುವುದೇ ಪಂಚಾಂಗ.
ತನ್ನ ಇಷ್ಟಲಿಂಗವಲ್ಲದೆ ಭೂಮಿಯ ಮೇಲೆ ಇಟ್ಟು ಪೂಜೆಯ ಮಾಡುವ ದೇವರಿಗೆ
ಕೈಮುಗಿಯದಿರುವುದೇ ಪಂಚಾಂಗ.
ಜಾತಿಸೂತಕ ಜನನಸೂತಕ ಉಚ್ಛಿಷ್ಟಸೂತಕ ಮೃತ್ಯುಸೂತಕ ರಜಸ್ಸೂತಕ
ಈ ಪಂಚಸೂತಕವ ಶರಣರು ಕಳೆವರಾಗಿ
ನಮ್ಮ ಶಿವಭಕ್ತರಿಗೆ ಸಲ್ಲದೆಂಬುದೇ ಪಂಚಾಂಗ.
ಸೂತಕ ನಾಸ್ತಿಯಾದುದೇ ಪಂಚಾಂಗ.
ಗುರು ಲಿಂಗ ಜಂಗಮ ಪಾದೋದಕ ಪ್ರಸಾದವೆ ಪಂಚಾಂಗ.
ಲಿಂಗಾಚಾರ, ಸದಾಚಾರ, ಭೃತ್ಯಾಚಾರ, ಶಿವಾಚಾರ, ಗಣಾಚಾರವೆ ಪಂಚಾಂಗ.
ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ, ಗಣಪ್ರಸಾದ
ಮಹಾಪ್ರಸಾದವ ಕೊಂಬುವುದೇ ಪಂಚಾಂಗ.
ಇಂತೀ ಪಂಚಾಂಗದ ನಿಲವನರಿಯದೆ
ಪಂಚಸೂತಕದೊಳಗೆ ಹೊಡೆದಾಡುವ ಪಂಚಮಹಾಪಾತಕರ
ಎನಗೊಮ್ಮೆ ತೋರದಿರಯ್ಯ ನಿಸ್ಸಂಗನಿರಾಳ ನಿಜಲಿಂಗಪ್ರಭುವೆ''. ೧೨೪೪

ಮುಂದುವರಿದು 'ಇಚ್ಛೆಯೊಳಗಿರುವುದೇ ಪಂಚಾಂಗ' 'ಸಜ್ಜನಶುದ್ಧ ಶಿವಾಚಾರದಲ್ಲಿ ಆಚರಿಸುವುದೇ ಪಂಚಾಂಗ' 'ಪಂಚಾಂಗದ ಭೂತವಳಿದು, ಪಂಚಭೂತಗಳ ನಿವೃತ್ತಿಯ ಮಾಡಬಲ್ಲರೆ ಪಂಚಾಂಗ' 'ಪಂಚಾಚಾರದಲ್ಲಿ ಇರಬಲ್ಲಡೆ ಪಂಚಾಂಗ' 'ಅಷ್ಟಾವರಣವೆ ಅಂಗವೆಂದು ನಂಬುವುದೇ ಪಂಚಾಂಗ' ಎಂದು ಹೇಳುತ್ತ, 'ಪಂಚಾಕ್ಷರದೊಳಗೆ ಪಂಚಾಂಗವಡಗಿತ್ತಾಗಿ, ಪಂಚಾಕ್ಷರವ ತಿಳಿದೆನಾಗಿ, ಎನಗೆ ಪಂಚಾಂಗ ನಾಸ್ತಿ' ಎನ್ನುತ್ತಾನೆ. ಇದನರಿಯದೆ 'ಹಗಲಿರುಳು ಅನಂತ ಸೂತಕ ಪಾತಕಂಗಳಲ್ಲಿ ಮುಳುಗಿ ಮತಿಗೆಟ್ಟು ಪಂಚಾಂಗ ಬೊಗಳುವವರು ಭ್ರಷ್ಟಮತಿಗಳು' 'ಶುಭದಿನ, ಶುಭಲಗ್ನ, ಶುಭವೇಳೆ, ಶುಭ ಮೂಹೂರ್ತ ವ್ಯತಿಪಾತ ದಗ್ಧವಾರ ಎಂದು ಬೊಗಳುವರ ಮಾತ ಕೇಳಲಾಗದು' ಎಂದು ತಿಳಿಸುತ್ತಾನೆ. ಹಾಗೆಯೇ ಪ್ರಸಾದ ಚೆಲ್ಲುವವರನ್ನು, ಭೂಪ್ರತಿಷ್ಠೆಗೆ ಎರಗುವವರನ್ನು, ಇಷ್ಟಲಿಂಗ ಬಿಟ್ಟು ಭ್ರಷ್ಟದೇವರ ಪೂಜಿಸುವವರನ್ನು ನಿಂದಿಸುತ್ತಾನೆ. ನಿಜವಾದ ಪಂಚಾಂಗ ಶಿವಭಕ್ತಿ ಪಂಚಾಂಗ ; ಅದನ್ನು ನಂಬಿನಡೆದರೆ ಎಲ್ಲವೂ ಶುಭ

ಎಂದು ಸಾರುತ್ತಾನೆ. ಪ್ರಸಾದ, ಇಷ್ಟಲಿಂಗ, ಪಂಚಾಕ್ಷರಿಮಂತ್ರ, ಪಂಚಾಚಾರ, ಅಷ್ಟಾವರಣಗಳಲ್ಲಿ ನಿಷ್ಠೆಯಿಟ್ಟವರಿಗೆ ಸೂತಕಪಾತಕವಿಲ್ಲ, ಅವರು ಸದ್ಯೋನ್ಮುಕ್ತರು ಎಂದು ನುಡಿಯುತ್ತಾನೆ. ಹೇಳುವ ರೀತಿ ಕರ್ತಬದ್ಧವಾಗಿದೆ. ಹೀಗಾಗಿ ವಚನಗಳು ತಾತ್ವಿಕವಾಗಿದ್ದರೂ ಗಮನಸೆಳೆಯುತ್ತವೆ. ತನ್ನ ಕಾಲದ ಸಾಮಾಜಿಕರಲ್ಲಿನ ಮೂಢನಂಬಿಕೆಗಳನ್ನು ತೆರೆದ ಕಣ್ಣಿನಿಂದ ನೋಡಿದ ಈತ, ಅವುಗಳನ್ನು ಕಠೋರವಾದ ಟೀಕೆಯ ಮೂಲಕ ದೂರಮಾಡಲು ಪ್ರಯತ್ನಿಸಿದ್ದಾನೆ.

**ಪರಂಜ್ಯೋತಿಯರು :**

'ಪರಂಜ್ಯೋತಿಯರ ವಚನಗಳು' ಎಂಬ ತಲೆಬರಹದಡಿಯಲ್ಲಿ ಸಿಗುವ ೧೩ ವಚನಗಳನ್ನು ಬಿಟ್ಟರೆ, ಈತನ ಬಗೆಗೂ ಏನೂ ದೊರೆಯುವುದಿಲ್ಲ. ಪ್ರೌಢ ದೇವರಾಯನ ಕಾಲದಲ್ಲಿ (೧೪೨೪–೪೬) ಪರಂಜ್ಯೋತಿಯತಿ ಎಂಬ ಒಬ್ಬ ಕವಿ ಇದ್ದನೆಂಬ ವಿಷಯ ತಿಳಿಯುತ್ತದೆ. ಆದರೆ ಆತ ಬ್ರಾಹ್ಮಣ. ಹೀಗಾಗಿ ಇವರಿಬ್ಬರಿಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಬೇಕಾಗುತ್ತದೆ. 'ವರನಾಗನ ಗುರುವೀರನೆ ಪರಂಜ್ಯೋತಿ ಮಹಾವಿರಕ್ತ' ಎಂಬುದು ಈತನ ವಚನಾಂಕಿತ. ತನ್ನ ತಾನರಿಯದೆ, ತಾನ್ಯಾರೆಂದು ತಿಳಿಯದೆ, ತನ್ನೊಳಗಿನ ಪರಮಾತ್ಮನ ಸ್ವರೂಪವನ್ನು ಗುರುತಿಸದೆ ಅಜ್ಞಾನದಲ್ಲಿ ಮುಳುಗಿದ ಮಾನವರನ್ನು ಈ ವಚನಗಳಲ್ಲಿ ವಿಡಂಬಿಸಲಾಗಿದೆ.

ಯೋಗಮಾರ್ಗದಿಂದ ಕಾಣಬಹುದೆಂಬ ಭ್ರಾಂತಯೋಗಿಗಳಿಗೆ ಸ್ವಯಂಭು ಕಾಣಲಾರ. ಆತ 'ದೇಹವಿಡಿದು ವಿದೇಹಿಯಾದ ಮಹಾತ್ಮ' 'ಆತನಿಗೆ ದೇಹವಿಲ್ಲ, ಮಾಯೆಯಿಲ್ಲ, ಮರಣವಿಲ್ಲ ಜನನವಿಲ್ಲ' 'ಆತನ ಮಾಯದಿಂದರಿವುದಲ್ಲ, ಕಾಯದಿಂದರಿವುದಲ್ಲ' 'ಬರೆಯದ ಪುರುಷಂಗೆ ಮರವಿಲ್ಲ, ಅರುವಿಲ್ಲ' 'ಸೀಮೆಯ ಬಿಟ್ಟು ನಿಸ್ಸೀಮನಾದ ದೈವಕ್ಕೆ ಸರಿಯಿಲ್ಲ, ಮಿಗಿಲಿಲ್ಲ' 'ಚಿತ್ತೇ ತಾನಾದ ಮಹಾತ್ಮಂಗೆ ಲಯವಿಲ್ಲ, ಭಯವಿಲ್ಲ' ಎಂದು ಪರಮಾತ್ಮನ ಇರವನ್ನು ತಿಳಿಸಿದ ವಚನಕಾರ 'ಈಶನೆಂಬುದನು ತಾನರಿದು, ಮಾನೀಶನೆಂಬುದನು ತಾನರಿದು, ತಾನೆ ತಾನಾಗುವ ಸಕೀಲನರಿಯದೆ ಯೋಗಧ್ಯಾನದಿಂದ ಅರಿಯಬಹುದೆ ಸ್ವಯಂಭುವ ?' ಎಂದು ಪ್ರಶ್ನಿಸುತ್ತಾನೆ. ಕೊನೆಗೆ ಅರಿವಿನಿಂದಲೇ ಅವನನ್ನು ಅರಿಯಲು ಸಾಧ್ಯ ಎಂಬ ತನ್ನ ನಿಲವನ್ನು ತಿಳಿಸುತ್ತಾನೆ.

ಈತನ ಕೆಲವು ಹೇಳಿಕೆಗಳು ಸೂತ್ರಬದ್ಧವಾದ ಅನುಭವೋಕ್ತಿಗಳೆನಿಸಿವೆ. 'ತಾನಳಿದ ಮೇಲೆ ಮುಕ್ತಿ ಯಾರಿಗೆ ಹೇಳಾ' 'ಲಿಂಗಕ್ಕೆ ಅಳಿವು ಬೆಳವುಂಟೆ ಹೇಳಾ ?' 'ಅಮೃತ ಉಂಡ ಬಳಿಕ ಹಸಿವುಂಟೆ ಹೇಳಾ ?' ಕಾಯವಿಡದು ಮಾಯಬಿಡಬೇಕೆಂಬ ಹೆಡ್ಡರಿಗೆ ಮಾಯ ಬಿಡುವುದು ಹೇಂಗಯ್ಯ ?' 'ಮುಳುಗಿದವರು ಮುಳುಗಿಸುವರ, ಎಬ್ಬಿಸುವರ ಏನು ಬಲ್ಲರು ಹೇಳಾ ?' 'ಅನ್ಯಭಾವದಿ ಬಳಸುವ ಅನಾಚಾರಿಗೆ ತನ್ನ ಭಾವ ದೊರಕುವುದೆ ?' 'ನದಿಯ ಸುಳಿಯಲ್ಲಿ ಬಿದ್ದ ಹುಳದಂತೆ' ಇಂಥ ಮಾತುಗಳಲ್ಲಿ ವಚನಕಾರನ ಪ್ರತಿಭೆ ಕೊಂಚಮಟ್ಟಿಗೆ ಮಿಂಚಿದೆ.

ಬಸವಲಿಂಗದೇವ :

ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದ ಗುರುಸಿದ್ಧದೇವರ ಶಿಷ್ಯನೀತ. ಚಿದೈಶ್ವರ್ಯ ಚಿದಾಭರಣದ ೫೩೩ನೆಯ ವಚನದಿಂದ ಈತನನ್ನು ಕುರಿತು ಇಷ್ಟು ವಿಷಯ ತಿಳಿಯುತ್ತದೆ :

ಬಸವಲಿಂಗದೇವ ಹರದನಹಳ್ಳಿಯ ಸ್ಥಾಪನಾಚಾರ್ಯನಾಗಿ ಶಿವಲಿಂಗಶಕ್ತಿಗೆ ವಲ್ಲಭನಾಗಿದ್ದ. ಒಮ್ಮೆ ಗುರುಪುರದ ಮೇಲುಮಠದ ಮೂಲಮೂರ್ತಿ ಮರಿ ಮಹಾಂತೇಶ್ವರಸ್ವಾಮಿಗಳ ಕರಕಮಲೋದ್ಭವನಾದ ಶಿವಪುರದ ಬಸವಪ್ರಭು ಶೆಟ್ಟಿ ವಿರಕ್ತಿ ತಾಳಿ, ಸಂಗನಬಸವೇಶ್ವರ ಎಂಬ ಹೆಸರನ್ನು ಧರಿಸಿಕೊಂಡು ಗುರುಕರುಣೆಗಾಗಿ ಕಾಯ್ದು ಕುಳಿತಿರುತ್ತಾನೆ. ಆಗ ಬಸವಲಿಂಗ ದೇಶಿಕೋತ್ತಮರು ಅಲ್ಲಿಗೆ ಹೋಗಿ, ಆತನನ್ನು ಕರೆದುಕೊಂಡು ಶ್ರೀಶೈಲ ಪರ್ವತಕ್ಕೆ ನೈರುತ್ಯ ಭಾಗದಲ್ಲಿರುವ ಕುಮಾರಪರ್ವತದ ಉತ್ತರ ದಿಕ್ಕಿನಲ್ಲಿ ಒಪ್ಪುವ ನಾಗರಗವಿಸಿಂಹಾಸನಾಧೀಶ್ವರರಾದ ಗುರುಸಿದ್ಧದೇವರ ಬಳಿಗೆ ಬರುತ್ತಾನೆ. ಅಲ್ಲಿ ಸಂಗನಬಸವೇಶ್ವರರಿಗೆ ಅನುಗ್ರಹಿಸಬೇಕೆಂದು ಕೇಳಿಕೊಳ್ಳುತ್ತಾರೆ. ಗುರುಸಿದ್ಧದೇವರು ಅಂತಃಕರಣದಿಂದ ಆಗಮೋಪದೇಶ ಮಾಡುತ್ತಾರೆ. ಬಸವಲಿಂಗೇಶ್ವರರು ಅದನ್ನು ಬರೆದುಕೊಳ್ಳುತ್ತಾರೆ. ಆ ಗ್ರಂಥವನ್ನು ಗುರುಸಿದ್ಧದೇವರು ಒಯ್ದು ತಮ್ಮ ಗುರುಗಳಾದ ಶಾಂತಮಲ್ಲಸ್ವಾಮಿಗಳ ಮುಂದಿಡುತ್ತಾರೆ. ಅವರು ನೋಡಿ ಅನುಭಾವಮಾಡಿ, ಅದಕ್ಕೆ ''ಅನಾದಿ ಷಟ್‌ಸ್ಥಲ ನಿರಾಭಾರಿ ವೀರಶೈವ ಶರಣನ ನಿಜಾಚರಣೆಸಂಬಂಧಬೋಧಾಮೃತ ನಿಲುಕಡೆ ಚಿದೈಶ್ವರ್ಯ ಚಿದಾಭರಣ'' ಎಂದು ನಾಮಕರಣ ಮಾಡಿ ಸಂಗನಬಸವೇಶ್ವರರ ಕೈಯಲ್ಲಿ ಕೊಡುತ್ತಾರೆ. ಅವರು ಆ ಕೃತಿಯ ಹೆಸರಿಗೆ ವಿವರಣೆಯನ್ನು ನೀಡುತ್ತಾರೆ.

ಇದರಿಂದ ಬಸವಲಿಂಗದೇವನ ಊರು ಹರದನಹಳ್ಳಿ, ಅಲ್ಲಿ ಈತ ಶಿವಲಿಂಗಾರಾಧಕನಾಗಿ ಇದ್ದ, ಸಂಗನಬಸವೇಶ್ವರನಿಗೆ ಗುರುಕರುಣೆ ಒದಗಿಸುವ ನಿಮಿತ್ತ ಗುರುಸಿದ್ಧದೇವರಲ್ಲಿಗೆ ಹೋದ. ಅವರು ಬೋಧಿಸಿದ ಚಿದೈಶ್ವರ್ಯ ಚಿದಾಭರಣವನ್ನು ಬರೆದುಕೊಂಡ ಎಂಬ ಸಂಗತಿಗಳು ತಿಳಿದುಬರುತ್ತವೆ. ಗುರುಸಿದ್ಧದೇವರು ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದವರಾಗಿ ೧೭ನೆಯ ಶತಮಾನದಲ್ಲಿ ಜೀವಿಸಿದ್ದರೆಂದು ತಿಳಿದುಬರುವುದರಿಂದ ಬಸವಲಿಂಗದೇವನೂ ಅದೇ ಕಾಲದಲ್ಲಿ ಇದ್ದವನೆನಿಸುತ್ತಾನೆ.

ಈಗ ಈತನ ೩೬ ವಚನಗಳು ದೊರೆತಿವೆ. ಇವು ಗುರುಸಿದ್ಧದೇವನ ಚಿದೈಶ್ವರ್ಯ ಚಿದಾಭರಣ ಕೃತಿಯ 'ಮಹಾಜ್ಞಾನಿಯ ಸರ್ವಸಂಗಪರಿತ್ಯಾಗಸ್ಥಲ'ದಲ್ಲಿ ಸಂಗ್ರಹವಾಗಿವೆ. ಇಡೀ ಸ್ಥಲ ಈತನ ವಚನಗಳಿಂದಲೇ ಕೂಡಿದುದು ಒಂದು ವಿಶೇಷ. ಇವುಗಳ ಅಂಕಿತ 'ಮತ್ಪ್ರಾಣನಾಥ ಮಹಾ ಶ್ರೀಗುರು ಸಿದ್ಧಲಿಂಗೇಶ್ವರ'. ಎಲ್ಲ ವಚನಗಳೂ ಬಿನ್ನಹ ರೂಪದಲ್ಲಿವೆ. ಬಹಿರಂಗದ ಪಂಚೇಂದ್ರಿಯಗಳು, ಅಂತರಂಗದ ಕರಣಚತುಷ್ಟಯಗಳ ಬಲೆಯಲ್ಲಿ ಸಿಲುಕಿ, ಬಾರದ ಭವಂಗಳಲ್ಲಿ ಬಂದು, ಹುಟ್ಟಬಾರದ ಯೋನಿಯಲ್ಲಿ ಹುಟ್ಟಿ, ಉಣ್ಣಬಾರದ ಊಟವನುಂಡು ಕಷ್ಟಕೋಟಲೆಯಲ್ಲಿ ಸಿಲುಕಿ ಬೆಂದು ಬೆಂಡಾದ

ಹಾನಿ, ಅವುಗಳಿಂದ ಬಿಡುಗಡೆ ಮಾಡಿ ರಕ್ಷಿಸಬೇಕೆಂದು ಸರ್ವಲೋಕ ಸೃಷ್ಟಿಕರ್ತನಾದ ಪರಮಾತ್ಮನಲ್ಲಿ ಮೊರೆಯಿಡುತ್ತಾನೆ. ಈ ವಚನಗಳಲ್ಲಿ ತೋರುವ ಭಕ್ತನ ಆರ್ತಭಾವ ಬಸವಣ್ಣನವರ ಸಂಸಾರ ಹೇಯಸ್ಥಲದ ವಚನಗಳನ್ನು, ಹರಿಹರನ ರಕ್ಷಾಶತಕವನ್ನು ನೆನಪಿಗೆ ತರುತ್ತದೆ. ಆದರೆ ಅಲ್ಲಿರುವ ತೀವ್ರಸಂವೇದನೆ, ಅಭಿವ್ಯಕ್ತಿ ಅನನ್ಯತೆ ಇಲ್ಲಿಲ್ಲ.

ಪರಿಷ್ಕರಣ :

ಈ ಸಂಪುಟದಲ್ಲಿ ಸೇರಿದ ನಾಲ್ಕು ಜನ ವಚನಕಾರರ ವಚನಗಳಲ್ಲಿ ದೇಶಿಕೇಂದ್ರ ಸಂಗನಬಸವಯ್ಯನ ಸಮಗ್ರ ವಚನಗಳು ಪ್ರಥಮಬಾರಿಗೆ ಬೆಳಕು ಕಾಣುತ್ತಲಿವೆ. ಅವನ್ನು ಸೊಲ್ಲಾಪೂರ ತಾಲೂಕ ಕರಜಗಿ ಗ್ರಾಮದಲ್ಲಿ ದೊರೆತ ಏಕೈಕ ಕಾಗದ ಪ್ರತಿಯಿಂದ ಪರಿಷ್ಕರಿಸಲಾಗಿದೆ. ಹಸ್ತಪ್ರತಿ ಹೆಚ್ಚು ಶುದ್ಧವಾಗಿರುವುದರಿಂದ ವಚನಗಳನ್ನು ಶುದ್ಧ ರೂಪದಲ್ಲಿ ಕೊಡಲು ಸಾಧ್ಯವಾಗಿದೆ. ಪಿಂಡಸ್ಥಲದಿಂದ ಆರಂಭವಾದ ಕೃತಿ ನಿರವಯ ಸ್ಥಲಕ್ಕೆ ಮುಕ್ತಾಯವಾಗುತ್ತದೆ. ಅಲ್ಲಿಗೆ ೯೫೦ ವಚನಗಳಾಗುತ್ತವೆ. ಆಮೇಲೆ ಮತ್ತೆ 'ಭಕ್ತಸ್ಥಲದ ಉಳಿದ ವಚನಗಳು', 'ಭಕ್ತಿತಾಮಸನಿರಸನಸ್ಥಲದ ಉಳಿದ ವಚನಗಳು', 'ಮಾಹೇಶ್ವರಸ್ಥಲದ ಉಳಿದ ವಚನಗಳು', 'ಶರಣಸ್ಥಲದ ಉಳಿದ ವಚನಗಳು', 'ಐಕ್ಯಸ್ಥಲದ ಉಳಿದ ವಚನಗಳು' ಎಂದು ೨೧೩ ವಚನಗಳು, ತರುವಾಯ ಗುರುಭಕ್ತಿ ಸಂಸಾರಿ ಎಂಬ ಸ್ಥಲದಿಂದ ಮಹದಂಗಸ್ಥಲದವರೆಗಿನ ಎಂಟು ಸ್ಥಲಗಳ ೧೧೯ ವಚನಗಳು ಬರೆಯಲ್ಪಟ್ಟಿವೆ. ಮೂಲ ಷಟ್‌ಸ್ಥಲ ಕಟ್ಟು ಒಂದು ವ್ಯವಸ್ಥೆಗೆ ಒಳಪಟ್ಟಿರುವುದರಿಂದ ಅದನ್ನು ಹಾಗೆಯೇ ಇಟ್ಟುಕೊಂಡು, ಉಳಿದ ಹೆಚ್ಚಿನ ವಚನಗಳನ್ನು ಹಸ್ತಪ್ರತಿಯಲ್ಲಿರುವ ಕ್ರಮದಲ್ಲಿಯೇ ಆಯಾ ಸ್ಥಲ ಶೀರ್ಷಿಕೆಯಡಿಯಲ್ಲಿಯೇ ಪರಿಶಿಷ್ಟದಲ್ಲಿ ಕೊಡಲಾಗಿದೆ. ನಿರಾಲಂಬ ಪ್ರಭುದೇವರ ವಚನ, ಪರಂಜ್ಯೋತಿಯರ ವಚನ, ಬಸವಲಿಂಗದೇವರ ವಚನಗಳು ಈಗಾಗಲೇ ಪ್ರಕಟವಾಗಿರುವುದರಿಂದ ಅವುಗಳನ್ನು ಆಯಾ ಕೃತಿಗಳಿಂದಲೇ ಎತ್ತಿಕೊಂಡು, ಉಳಿದಿರಬಹುದಾದ ಲೋಪ ದೋಷಗಳನ್ನು ಹಸ್ತಪ್ರತಿಗಳ ಸಹಾಯದಿಂದ ಸರಿಪಡಿಸಿಕೊಳ್ಳಲಾಗಿದೆ. ಭಾಷೆಯ ದೃಷ್ಟಿಯಿಂದ ಪ್ರತಿಯೊಬ್ಬ ವಚನಕಾರನೂ ತನ್ನ ಪ್ರಾದೇಶಿಕ ವೈಶಿಷ್ಟ್ಯವನ್ನು ತೋರಿದ್ದಾನೆ. ಅದನ್ನು ತಿದ್ದಿ ಶಿಷ್ಟಗೊಳಿಸದೆ ಇದ್ದರೂಪದಲ್ಲಿಯೇ ಉಳಿಸಿಕೊಳ್ಳಲಾಗಿದೆ.

ಕೃತಜ್ಞತೆಗಳು :

'ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯನ್ನು ಅಂಗೀಕರಿಸಿ ಧನಸಹಾಯ ನೀಡಿದ ಕರ್ನಾಟಕ ಸರಕಾರಕ್ಕೆ, ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಿಗೆ, ಈ ಸಂಪುಟ ಸಿದ್ಧಪಡಿಸುವ ಹೊಣೆಯನ್ನು ನನಗೆ ವಹಿಸಿಕೊಟ್ಟ ಸಲಹಾ ಸಮಿತಿಯ ಎಲ್ಲ ಸದಸ್ಯರಿಗೆ, ಈ ಸಂಪುಟಗಳ ಪ್ರಧಾನ ಸಂಪಾದಕರಾಗಿ ಪ್ರತಿ ಹೆಜ್ಜೆಯಲ್ಲಿಯೂ ಕೈಹಿಡಿದು ನಡೆಸಿದ ಸಮಯ ಪ್ರಜ್ಞೆ ಮತ್ತು ಶೈಕ್ಷಣಿಕ ಶಿಸ್ತುಗಳ ಸಾಕಾರವೆನಿಸಿದ ಗುರುಗಳಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಅನಂತ ನಮಸ್ಕಾರಗಳು.

ಈ ಸಂಪುಟ ಸಿದ್ಧಪಡಿಸುವಲ್ಲಿ ಹಲವು ಹಸ್ತಗಳ ಸಹಾಯ ಪಡೆದಿದ್ದೇನೆ. ಬಸವ ಪಥದ ಕೆಲವು ಸಂಚಿಕೆಗಳಲ್ಲಿ ಅರವತ್ತು ವಚನ ಮಾತ್ರ ಪ್ರಕಟಿಸಿ ಅರ್ಧಕ್ಕೆ ನಿಲ್ಲಿಸಿದ್ದ ದೇಶಿಕೇಂದ್ರ ಸಂಗನಬಸವಯ್ಯನ ವಚನಗಳ ಹಸ್ತಪ್ರತಿಯನ್ನು ಒದಗಿಸಬೇಕೆಂದು ಪತ್ರ ಬರೆದಾಗ, ಪೂರ್ವಪರಿಚಯವಿಲ್ಲದಿದ್ದರೂ, ಅವರ ಗ್ರಾಮದ ಶರಣ ಗಜೇಶ ಮಸಣಯ್ಯನ ವಚನಗಳನ್ನು ನಾನು ಸಂಪಾದಿಸಿದುದನ್ನು ಗಮನಿಸಿ ಮೆಚ್ಚಿಕೊಂಡು, ಆ ಒಂದು ಕಾರಣದಿಂದಲೇ ನನ್ನಲ್ಲಿ ವಿಶ್ವಾಸವಿಟ್ಟು– ಸ್ವತಃ ತಾವೇ ಕೈಯಿಂದ ಖರ್ಚು ಮಾಡಿಕೊಂಡು ಮೂಲ ಹಸ್ತಪ್ರತಿಯನ್ನು, ಜೊತೆಗೆ ತಾವು ಪ್ರತಿಮಾಡಿಸಿಟ್ಟ ಕೈಬರಹದ ಪ್ರತಿಯನ್ನು ಸಂತೋಷದಿಂದ ತಂದುಕೊಟ್ಟು, ೧೨೪೨ ವಚನಗಳು ಪ್ರಥಮಬಾರಿಗೆ ಪ್ರಕಟವಾಗಲು ಕಾರಣರಾದ ಸೊಲ್ಲಾಪೂರ ತಾಲೂಕ ಕರಜಗಿ ಗ್ರಾಮದ ಶ್ರೀ ಚೆನ್ನವೀರ ಗಂಗದೆ ಅವರ ವಚನಸಾಹಿತ್ಯದ ಮೇಲಿನ ಅಭಿಮಾನ ಹಾಗೂ ನನ್ನ ಮೇಲಿನ ಪ್ರೀತಿ ವಿಶ್ವಾಸಗಳಿಗೆ ತುಂಬು ಹೃದಯದ ಕೃತಜ್ಞತೆಗಳು. ವಚನ ಸಂಗ್ರಹಿಸುವುದರಿಂದ ಹಿಡಿದು ಪ್ರಕಟನೆಯ ವರೆಗಿನ ಪ್ರತಿಹಂತದಲ್ಲಿ ನೆರವಾದ ಸ್ನೇಹಿತರಾದ ಬಸವರಾಜ ಹೂಗಾರ, ಬಿ. ಬಿ. ಬಿರಾದಾರ, ಸಂಶೋಧನ ವಿದ್ಯಾರ್ಥಿಮಿತ್ರ ಎಫ್. ಟಿ. ಹಳ್ಳಿಕೇರಿ, ಈ ಯೋಜನೆಯ ಸಹಾಯಕ ಸಂಶೋಧಕರಾದ ಕುಮಾರಿ ವಿಜಯಶ್ರೀ ಹಿರೇಮಠ, ಯಾಕೊಳ್ಳಿ, ಕೋರಿ ಮತ್ತು ನನ್ನ ಶ್ರೀಮತಿ ಮಂಗಳಾ–ಇವರಿಗೆಲ್ಲ ನಾನು ಉಪಕೃತನಾಗಿದ್ದೇನೆ. ನಾವು ಕೊಟ್ಟ ತೊಂದರೆಗಳನ್ನೆಲ್ಲ ತಾಳ್ಮೆಯಿಂದ ಸಹಿಸಿಕೊಂಡು, ಅಚ್ಚುಕಟ್ಟಾಗಿ ಮಾದರಿಪ್ರತಿ ಮುದ್ರಿಸಿಕೊಟ್ಟ ಶ್ರೀ ಫ. ಶಿ. ಭಾಂಡಗೆ ಅವರಿಗೆ ಮತ್ತು ಅವರ ನಿಷ್ಠಾವಂತ ಕೆಲಸಗಾರರಿಗೆ ಆತ್ಮೀಯ ಅಭಿನಂದನೆಗಳು.

**ಮರುಪರಿಷ್ಕರಣ :**

ಈ ದ್ವಿತೀಯ ಆವೃತ್ತಿಯನ್ನು ಹೊಸದಾಗಿ ದೊರೆತ ಹೆಚ್ಚಿನ ಆಕರಗಳು ಮತ್ತು ವಿದ್ವಾಂಸರು ಸೂಚಿಸಿದ ತಿದ್ದುಪಡಿಗಳ ಹಿನ್ನೆಲೆಯಲ್ಲಿ ಮರುಪರಿಷ್ಕರಣ ಮಾಡಲಾಗಿದೆ.

ಈ ಸಂಪುಟದಲ್ಲಿ ಹೆಚ್ಚಿಗೆ ಮತ್ತಾವ ವಚನವೂ ಸೇರ್ಪಡೆಯಾಗಿಲ್ಲ. ಮೊದಲ ಮುದ್ರಣದಲ್ಲಿ ಉಳಿದಿದ್ದ ಪಾಠದೋಷ, ಮುದ್ರಣ ದೋಷಗಳನ್ನು ಸರಿಪಡಿಸಿಕೊಳ್ಳಲಾಗಿದೆ. ತುಮಕೂರಿನ ಶ್ರೀ ಎಂ. ಚಂದ್ರಪ್ಪನವರು ಸೂಚಿಸಿದ ತಿದ್ದುಪಡಿಗಳನ್ನು ಪರಿಶೀಲಿಸಲಾಗಿದೆ. ಪುನರುಕ್ತಿಗಳು ಒಂದೂ ಕಂಡುಬಂದಿಲ್ಲ. ಭಾವಸಾಮ್ಯ ಇರುವ ವಚನಗಳನ್ನು–ಒಂದೇ ಭಾವ ಅನೇಕ ಜನ ವಚನಕಾರರಲ್ಲಿ ಬೇರೆ ಬೇರೆ ರೀತಿಯಲ್ಲಿ ಬರುವುದು ಸಹಜವಾಗಿರುವುದನ್ನು ಗಮನಿಸಿ ಹಾಗೇ ಉಳಿಸಿಕೊಳ್ಳಲಾಗಿದೆ. ಹೀಗಾಗಿ ಮೊದಲಮುದ್ರಣ ಹಾಗೂ ಎರಡನೆಯ ಮುದ್ರಣದ ವಚನಸಂಖ್ಯೆಯಲ್ಲಿ ಯಾವುದೇ ಏರುಪೇರು ಆಗಿಲ್ಲ. ಪ್ರಸ್ತಾವನೆಯನ್ನು ಯಥಾಸ್ಥಿತಿ ಉಳಿಸಿಕೊಳ್ಳಲಾಗಿದೆ. ಮುದ್ರಣ ದೋಷ ಸರಿಪಡಿಸಿಕೊಂಡಿರುವುದರಿಂದ ಒಪ್ಪೋಲೆಯನ್ನು ಕೈಬಿಟ್ಟು ಉಳಿದ ಅನುಬಂಧಗಳನ್ನೆಲ್ಲ ಹಾಗೇ ಇಟ್ಟುಕೊಳ್ಳಲಾಗಿದೆ.

ಈ ಸಂಪುಟ ಸಿದ್ಧಪಡಿಸುವಲ್ಲಿ ಅಮೂಲ್ಯ ಸಲಹೆ ಸೂಚನೆಗಳನ್ನಿತ್ತ ಈ ಯೋಜನೆಯ ಪ್ರಧಾನ ಸಂಪಾದಕರಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ, ತಿದ್ದುಪಡಿಗಳನ್ನು ಸೂಚಿಸಿದ ಶ್ರೀ ಎಂ. ಚಂದ್ರಪ್ಪ ಅವರಿಗೆ, ಕರಡುಪ್ರತಿ ತಿದ್ದುವಲ್ಲಿ ನೆರವಾದ ನನ್ನ ಶ್ರೀಮತಿ ಮಂಗಳಾ ಅವರಿಗೆ ಕೃತಜ್ಞತೆಗಳು.

-ವೀರಣ್ಣ ರಾಜೂರ

*

# ಪರಿವಿಡಿ


ಮುನ್ನುಡಿ

ಬಿನ್ನಹ

ನಿರ್ದೇಶಕರ ಮಾತು

ಪ್ರಕಾಶಕರ ಮಾತು

ಸಂಪಾದಕೀಯ

ಪ್ರಸ್ತಾವನೆ

೧. ದೇಶಿಕೇಂದ್ರ ಸಂಗನಬಸವಯ್ಯನ ಷಟ್‌ಸ್ಥಲ ವಚನ ೧–೩೬೧

೨. ನಿರಾಲಂಬ ಪ್ರಭುದೇವರ ಶಿವಭಕ್ತಿಪಂಚಾಂಗದ ವಚನ ೩೬೨–೩೭೦

೩. ಪರಂಜ್ಯೋತಿಯರ ವಚನ ೩೭೧–೩೭೯

೪. ಬಸವಲಿಂಗದೇವರ ವಚನ ೩೮೦–೩೯೮

ಅನುಬಂಧ

ವಚನಗಳ ಅಕಾರಾದಿ ೪೦೧–೪೨೨

ಕಠಿಣಪದಕೋಶ ೪೨೩–೪೩೨

ಆಕರ ಗ್ರಂಥಗಳು ೪೩೩

# ದೇಶಿಕೇಂದ್ರ ಸಂಗನಬಸವಯ್ಯನ ಷಟ್‌ಸ್ಥಲ ವಚನ

## ಪಿಂಡಸ್ಥಲ

೧

ಹಾಲಿನೊಳಗಿರ್ದ ತುಪ್ಪದಂತೆ
ಎಳೆತರುವಿನೊಳಗಿರ್ದ ಫಲದಂತೆ
ಮದುವಣಿಗರೊಳಗಿರ್ದ ಮಗನಂತೆ
ತೋರದಿರ್ದನು ನಿರಂಜನ ಚನ್ನಬಸವಲಿಂಗ. ॥ ೧ ॥

೨

ಆದಿ ಅನಾದಿಯಿಲ್ಲದಿಂದಲತ್ತ,
ಮೂದೇವರುದಯವಾಗದಿಂದಲತ್ತ,
ಸಚರಾಚರವೇನೂ ಇಲ್ಲದಿಂದಲತ್ತ,
ಲೋಕ ಲೌಕಿಕ ಸುಳುಹಿಲ್ಲದಿಂದಲತ್ತ,
ತತ್ವಮೊತ್ತಗಳಿಲ್ಲದಿಂದಲತ್ತ,
ಏನು ಏನೂ ಇಲ್ಲದಿಂದಲತ್ತ,
ನಿರ್ವಯಲ ನಿಜಾನಂದ ನಿರಂಜನ
ಚನ್ನಬಸವಲಿಂಗನೇ ತಾನಾಗಿರ್ದನು. ॥ ೨ ॥

೩

ಗುರು-ಶಿಷ್ಯರಿಲ್ಲದಿಂದಲತ್ತ, ಲಿಂಗ-ಭಕ್ತರಿಲ್ಲದಿಂದಲತ್ತ,
ಜಂಗಮ-ಶರಣರಿಲ್ಲದಿಂದಲತ್ತ,
ಜಲದೊಳಿರ್ದ ಮುತ್ತಿನಂತಿರ್ದನು ನಿರಂಜನ ಚನ್ನಬಸವಲಿಂಗ. ॥ ೩ ॥

## ಪಿಂಡಜ್ಞಾನಸ್ಥಲ

ಸೂತ್ರ : ಇಂತು ಪಿಂಡಸ್ಥವಾಗಿರ್ದ ಪರಬ್ರಹ್ಮವು ಶಿವಾಂಶಿಕನಾದಾತ್ಮನ ಹೃತ್ಕಮಲ ವಿಕಸನದಿಂದುದಯಿಸಿ ಪ್ರಕಾಶವಾದಲ್ಲಿ ಪಿಂಡಜ್ಞಾನಸ್ಥಲವೆಂದು ಹೇಳಲಾಯಿತು.

೪

ಭೂಮಿಯೊಳಗಿಂದಲುದಯಿಸಿ ರವಿ ಮೂಡಿಬರಲು
ನೆಲ-ಜಲಾಗ್ನಿ ಮರುತಾಕಾಶಕ್ಕಾವರಿಸಿದ ಕತ್ತಲೆ
ಹರಿದು ಹೋಯಿತ್ತು ನೋಡಾ !
ಸಕಲ ಜನರೆಲ್ಲ ಎಚ್ಚತ್ತು ಯುಕುತಿ ವ್ಯಾಪಾರ ಲೆಕ್ಕವನು ಗೈಯಲು
ಲೋಕನಾಥನ ರಾಣಿವಾಸ ಮಡಿಯಿತ್ತು.
ಚಿತ್ರಾಣಿ ಲೋಕನಾಥನ ಸೋಂಕಲು
ದೇವಲೋಕನಾಥನಾದುದನೇನೆಂಬೆ ನಿರಂಜನ ಚನ್ನಬಸವಲಿಂಗಾ ! ॥ ೪ ॥

೫

ಕತ್ತಲೆಯ ಕಾಳದೊಳು ಸುಳಿದಾಡುವಾ ಹಕ್ಕಿ
ಪಕ್ಷಿ ಭಾವವಿಲ್ಲದೆ ಇಲ್ಲದ ವ್ಯವಹಾರಗೊಂಡಿತ್ತು.
ಸುಳಿಗಾಳಿ ಬೀಸಿ ಸೂರ್ಯನುದಯಿಸಲು, ಕತ್ತಲೆಯ ಕಾಳಕ್ಕೆ ಬಿಸಿಲು ನೆರೆಯಲು,
ನಟ್ಟನಡುಮಧ್ಯ ಸುತ್ತಲಿಕ್ಕುವ ಮಾರಿ ದೇವಿಯಾದಳು
ನಿರಂಜನ ಚನ್ನಬಸವಲಿಂಗವನರಿವುದಕ್ಕೆ. ॥ ೫ ॥

೬

ಕಟ್ಟಕಡೆಯಲಿಂದ ನಟ್ಟನಡುಮಧ್ಯಕ್ಕೆ ಬರಲು,
ನಟ್ಟನಿರಾತ್ರಿ ಕವಿಯಿತ್ತು ನೋಡಾ !
ಹುಸಿಗಳ್ಳರೊತ್ತಿಬಂದಲ್ಲಿ ಹೆಸರು ಅಡಗಿ ಹೋಯಿತ್ತು.
ಮತ್ತೆ ನೋಡ ಕಂಡ, ಮಿಥ್ಯದೃಷ್ಟರೊಡ ಕಂಡ,
ನಿರಂಜನ ಚನ್ನಬಸವಲಿಂಗದ ನೋಡ ಕಂಡ. ॥ ೬ ॥

೭

ತನ್ನಿಂದ ತಾನೆ ಮುಂದು ನೋಡಿ ಬಂದರೆ
ಹಿಂದು ಮುಂದಿನ ಭೀತಿ, ಕರಣ ಕಲೆಗಳ ನೀತಿ,
ಸಂದು ಸಂಶಯ ಜಾತಿ, ಸೋತು ಸರಿದವು ಜ್ಯೋತಿ,
ಮಾತ ಮಥನಿಸಿ ನಿಂದ ನಿರಂಜನ ಚನ್ನಬಸವಲಿಂಗವ ನೋಡ. ॥ ೭ ॥

೮

ಬಂದು ನಿಂದಲ್ಲಿ ಕಾರಿರುಳು ಕವಿದು ನಿದ್ರೆಗೈವ ಕಾಲದೊಳು
ಚರಣಾಯುಧ ಕೂಗಲು ನಿದ್ರೆಗಳೆಯಲು
ರವಿಯ ಮಧ್ಯೆ ಕತ್ತಲೆಗೆಡೆಯಿಲ್ಲ ನೋಡ.
ಕೆಂಡಕ್ಕೆ ಬಂದೊರಲೆ ನಿಂದಿರಲೆಡೆಯಿಲ್ಲ !
ಜ್ಞಾನೋದಯವಾದ ಶರಣನ ಮುಂದೆ
ತಮ್ಮ ಶರಣವೃಂದ ಗಾಲುಮೇಲುಗಳ ನಾಶ
ನಿರಂಜನ ಚನ್ನಬಸವಲಿಂಗಾ. ॥ ೮ ॥

೯

ಕತ್ತಲಾಗಿ ಹೋಯಿತ್ತು ನಿತ್ಯ ಸೂರ್ಯನಿಂದೆ.
ಸತ್ಯವೆಂದಲ್ಲಿ ಮಿಥ್ಯ ಸಾಕಾರ ಸಂದಳಿಸಿ ಬೆಂದು ನಿಂದವು.
ತಾಯಿ ತಂದೆಯಾಗಿ ನಿಂದ ನಿಲವ,
ನಾನೆಂದು ಕಂಡು ಬದುಕುವೆನಯ್ಯಾ ನಿರಂಜನ ಚನ್ನಬಸವಲಿಂಗಾ ? ॥ ೯ ॥

೧೦

ಅಯ್ಯಾ, ನಿನ್ನ ಬೆಳಗುಯಿದ್ದು ನಿಂದಲ್ಲಿ
ಎನ್ನ ಸಂದುಸಂದಿನ ಬಂಧುಗಳೆಲ್ಲ ಬೆಂದುನಿಂದರು.
ಚಲುವಾಯಿತ್ತೆ ನಿನಗೆ, ಗೆಲುವಾಯಿತ್ತೆ ಎನಗೆ, ಬಲುವಾಯಿತ್ತೆ ಮುಂದೆ ಘನತೆ?
ಅರಿದು ಬಂದಾವರಿಸು ನಿರಂಜನ ಚನ್ನಬಸವಲಿಂಗಾ. ॥ ೧೦ ॥

೧೧

ಅಯ್ಯಾ, ನಿನ್ನ ಬೆಳಗು ಅನಂತಕೋಟಿ
ಸೋಮ-ಸೂರ್ಯಾಗ್ನಿ ಬೆಳಗಿಂಗೆ ಮೀರಿಪ್ಪುದು.
ನಾ ನೋಡಲಾರೆ ಅಪ್ಪಬಂದು ಕೂಡಿಕೊ
ಅಪ್ರತಿಮ ನಿರಂಜನ ಚನ್ನಬಸವಲಿಂಗಾ. ॥ ೧೧ ॥

೧೨

ನೋಡಬಾರದ ಬೆಳಗು ಮೂಡಿಬಂದಲ್ಲಿ ಕೂಡಿದ ಕುಲವಳಿದು ನೋಡ ನಿಂದೆ.
ಪಂಶಿಂದೆ ನಾನೇತಕ್ಕೆ ಬಂದೆ, ಈ ಸಂದು ಸವರಿ,
ಹಿಂದಿನ ಹಿಂದು ಮುಂದೆ ಬಂದವರೆಂದು ಕಾಂಬೆ
ನಾನಹುದು ನಿರಂಜನ ಚನ್ನಬಸವಲಿಂಗಾ. ॥ ೧೨ ॥

## ಸಂಸಾರಹೇಯಸ್ಥಲ

ಸೂತ್ರ : ಇಂತು ಜ್ಞಾನೋದಯವಾದ ಶರಣನು ತನ್ನಾದಿ ಮಧ್ಯ ಅವಸಾನವರಿದು ಮಧ್ಯಸೋಂಕಿನ ಅವಿದ್ಯೆ ಮಾಯಾ ಕಾಳಿಕೆಯ ನೋಡಿ ವಿಡಂಬಿಸುತಿರ್ದ ಕಾರಣ ಸಂಸಾರಹೇಯಸ್ಥಲವೆಂದು ಹೇಳಲಾಯಿತು.

೧೩

ಸಂಕಲ್ಪದಿಂದಾದ ಸಂಭ್ರಮಸಾರದೊಳು ಮೋಹಿಸಿ
ಬಿದ್ದ ಪ್ರಾಣಿಗಳು, ಕಾಲ ಕರ್ಮದ ಹೊದ್ದು ಕಡೆ ಮೊದಲ ಕಾಣರು.
ಉಟ್ಟ ಕೋಟಲೆ ಉಡುಗಲುಂಟೆ ನಿರಂಜನ ಚನ್ನಬಸವಲಿಂಗಾ ! ॥ ೧೩ ॥

೧೪

ಆಗಬಾರದಾಗಿಂಗೆ ನಿಲ್ಲಬಾರದ ನಿಲುವು, ಮಾಡಬಾರದ ಮಾಟ,
ಬರಬಾರದ ಬರವಿಂಗೆ ಬಂದ ಪರಿಯ ನೋಡಾ !
ಈ ಬಂದ ಬಂಧನದಲ್ಲಿ ನೊಂದು ಬೆಂದರು ಹರಿವಿರಂಚಿ ಸುರಪಾದಿ ಸಕಲರೆಲ್ಲ.
ಇದನರಿದು ಹಿಂದುಮುಂದಾದೆನು ಕಾಣಾ ನಿರಂಜನ ಚನ್ನಬಸವಲಿಂಗಾ. ॥೧೪॥

೧೫

ಈ ಸಂಸಾರಸುಖವ ಮೆಚ್ಚಿ ಮುಂದೇನರಿಯದೆ ಬಂದುಂಡು
ತೊಳಲಿ ಹೋಗುವರು : ಇನ್ನೊಂದು ಕಳೆದು ಕಾಂಬುವರಯ್ಯಾ ?
ಪರಿಪರಿಯ ಮಿಥ್ಯ ಕುರುಹಿಂಗೆ ಹರಿಹರಿದು ನೆರೆದು,
ಕಿಚ್ಚಿನೊಳು ಅಚ್ಚುತಗೊಂಡು
ಅರಿಯದಾದವರು ನಿರಂಜನ ಚನ್ನಬಸವಲಿಂಗಾ. ॥ ೧೫ ॥

೧೬

ಹೊನ್ನು ಸಂಸಾರವಲ್ಲ, ಹೆಣ್ಣು ಸಂಸಾರವಲ್ಲ, ಮಣ್ಣು ಸಂಸಾರವಲ್ಲ,
ಈ ಮೂರರ ಮೇಲಣ ಮೋಹವೆರಸಿದ ಮನವು ಸಂಸಾರ ನೋಡಾ !

ಆ ಮನವನು ಸಂಸಾರ ಮೋಹವನು ಬೇರ್ಪಡಿಸಿ,
ತನ್ನ ಕೂಡಿ ನಡೆವ ಗತಿಮತಿಗಳನಾರನು ಕಾಣೆನಯ್ಯಾ
ನಿರಂಜನ ಚನ್ನಬಸವಲಿಂಗಾ. || ೧೬ ||

೧೭

ಹೊನ್ನಿರ್ದು ಪರಧನಕಿಚ್ಛೆಯ ಮಾಡಿಸುವುದು.
ಹೆಣ್ಣಿರ್ದು ಪರಸ್ತ್ರೀಯರ ಇಚ್ಛೆಯ ಮಾಡಿಸುವುದು.
ಮಣ್ಣಿರ್ದು ಪರಭೂಮಿಗೆ ಇಚ್ಛೆಯ ಮಾಡಿಸುವುದು.
ಸುರನರಾದಿ ಸಕಲರಲಿ ಇವುಗಳಿಚ್ಛೆಯ ಕಳೆವ
ಧೀರರನಾರನು ಕಾಣೆನಯ್ಯಾ ನಿರಂಜನ ಚನ್ನಬಸವಲಿಂಗಾ. || ೧೭ ||

೧೮

ಕರಿಕಾಳಿ ಕಂಠದಲಿ ಲಕ್ಷ ಲಕ್ಷ ರುಂಡಮಾಲೆಯ ಸರವ ನೋಡಾ !
ಮುಂಡಗಳು ಪೊಲೆಯನುಂಡರೆ ಮೂರು ಕೊತ್ತಲ ಕಿಚ್ಚೆದ್ದು ಹೊಯ್ಯಲು
ಮೂರು ಲೋಕದವರೆಲ್ಲ ತಳವೆಳಗಾಗಿ ಹೋದರು
ನಿರಂಜನ ಚನ್ನಬಸವಲಿಂಗವನರಿಯದೆ. || ೧೮ ||

೧೯

ಅಂತಾಲಯದೊಳೊಂದಿ ಚರಿಸುವ
ಭ್ರಾಂತಿಮಾಯೆಯ ನಿಂತು ನೋಡುವರನಾರನು ಕಾಣೆನು,
ನೋಡುವ ನೋಟಕರ ನುಂಗುತ್ತ ಉಗುಳುತ್ತ
ಉಚ್ಛಿಷ್ಟ ರೂಪನೆ ಮಾಡಿ ಕಾಡಿತ್ತು
ಷಡುದರ್ಶನಾದಿ ಸಕಲರನು ; ಇನ್ನುಂಟೆ ನಿನಗಿದಿರು
ನಿರಂಜನ ಚನ್ನಬಸವಲಿಂಗ ಶರಣರಲ್ಲದೆ ? || ೧೯ ||

೨೦

ಮೂರುತಾವಿನ ಬೆಂಕಿ ಮುಂದುವರಿದುರಿವ ಅರಣ್ಯದೊಳಗೊಬ್ಬ ಸೂಳೆ
ಆರಾರ ಉಳ್ಳವರನೊತ್ತೆಯ ಕೊಳ್ಳುತ್ತ ತನ್ನ ಸುಖವ ತೋರುತ್ತ
ನಗಿಸುತ್ತ, ದುಃಖವನುಣಿಸುತ್ತಲಳಿಸುತ್ತ
ಬಗೆ ಬಗೆ ಬಣ್ಣಿತೆಯ ತೊಡಿಸಿ,
ಕುಣಿಸುವ ಕುವರಿಯ ಕಾಲದೊಡರಿನೊಳಿರ್ದು
ಹಿರಿಯರೆನಿಸಿಕೊಂಬ ಕುರಿಮಾನವರ ನೋಡಿ
ಮರುಗುತಿರ್ದೆನು ಕಾಣಾ ನಿರಂಜನ ಚನ್ನಬಸಲಿಂಗಾ. || ೨೦ ||

೨೧

ತುಂಬಿದ ಪುರದೊಳಗೆ ಸಂಭ್ರಮಸುಖಿ ನಾನಿರಲು
ಸುಳಿದಾಡಬಂದವನಾರೊ ?
ಶಂಭುವಿನವರಿಗಿಂಬುಗೊಡೆ.
ಮುಂಬರಿವ ಕರಣಪತಿಯೆನ್ನ ಮಂತ್ರಿ.
ಕರಿಯನೇರಿದ ಭೂಪತಿಯೆನ್ನ ಸುತನು.
ತಲೆಕೆಳಗೆ ಮಾಡಿ ನಡೆವ ಸೊಸೆಯುಂದಿರ್ಕೈವರ ಬಲವೆನಗುಂಟು.
ಇನ್ನೆನಗೆಣೆಯುಂಟೆ ಮೂರುಲೋಕದೊಳಗೆ ?
ನಿರಂಜನ ಚನ್ನಬಸವಲಿಂಗ ಶರಣರಲ್ಲದವರ
ಹುಲ್ಲು ಹೊಟ್ಟುಗಳ ಮಾಡಿ ತುಳಿದು ತೂರುವೆ. ‖ ೨೧ ‖

೨೨

ಹರನೆಂಟಂಗದ ಹರಿಯಲ್ಲಿ ತಿರುಗುವ
ನರಪತಿಯನೊತ್ತಿಕೊಂಡ ಕರಿಗಮನೆ ನಾನು.
ಇರವರಿಯದವರ ನೋಡುವೆ,
ಎನಗೊಲಿದವರ ಕಾಡುವೆ, ಎನ್ನ ಸೋಂಕಿದವರಿಗೆ ಹಾಕುವೆ,
ಎನ್ನ ನೆನೆದವರ ಅನುಗೆಡಿಸುವೆ,
ನೋಡುವವರ ಕಣ್ಣ ತಿರುಹುವೆ,
ನಾಡ ಹಿಡಿದು ನಡೆವವರ ಹಂತಿಯ ಕಟ್ಟಿ, ತುಳಿಸಿಹಾಕುವೆ.
ನಾನಂಜಿ ಓಡುವೆ ನಿರಂಜನ ಚನ್ನಬಸವಲಿಂಗ ಶರಣರ ಸುಳುಹು ಕಂಡರೆ. ‖೨೨‖

೨೩

ಮನವ ನಿಲ್ಲಿಸಿಹೆನೆಂಬ ಮಾತು
ಮತ್ತತನದ ಹಿರಿಯರನು ಧಾತುಗೆಡಿಸಿ ಕೆಡಹಿ ನಿಂದಿತ್ತು.
ಹೊನ್ನ ಹಿಡಿಯನೆಂಬವರ ಕಚ್ಚುಟಕಾಂಕ್ಷೆ
ಕಳವಳಕ್ಕೆ ಕೆಡಹಿ ನಿಂದಿತ್ತು.
ಹೆಣ್ಣು ಮುಟ್ಟೆನೆಂಬವರ ನೆನಪಿನಾಶ್ರಯದಲ್ಲಿ
ಯೋನಿಚಕ್ರದೊಳಗೆ ಮುಳುಮುಳುಗಿಸಿ ನೂಂಕಿ ಕೆಡಹಿ ನಿಂದಿತ್ತು.
ಮಣ್ಣು ಹಿಡಿಯೆನೆಂಬವರ ನಿರಾಶ್ರಯ ನಿವಾಸಕ್ಕೆ
ಭೀತಿಗೊಳಿಸಿ ಕೆಡಹಿತ್ತು.
ಮಾಡೆನೆಂಬವರ ಮಾಡಿಸಿತ್ತು.
ನೋಡೆನೆಂಬವರ ನೋಡಿಸಿತ್ತು.

ಕೂಡೆನೆಂಬವರ ಕೂಡಿಸಿತ್ತು.
ಈ ಮನವ ನಿಲ್ಲಿಸಬಲ್ಲವರನಾರನು ಕಾಣೆ.
ಭೂ ಗಗನವುಳ್ಳನ್ನಕ್ಕರ
ನಿರಂಜನ ಚನ್ನಬಸವಲಿಂಗದಂಗವಾಗದವರ
ಭಂಗಬಡಿಸಿತ್ತು ಮೂರು ಲೋಕದೊಳಗೆ. || ೨೩ ||

೨೪

ಏನೆಂಜೆನೆಂತೆಂಜೆನೆನ್ನ ಮನಕ್ಕೆ ನಾಚಿಕೆ ಬಾರದೇಕೆ ?
ಆಗಮನುಡಿಯ ಕೇಳುವುದು,
ಇತರ ಸಾಗಿಸಿ ಹೇಳುವುದು, ಶಿವಾನುಭಾವವ ಕೇಳುವುದು,
ಅದರಂತೆ ಬೋಧೆಯ ಹೇಳುವುದು.
ನಿತ್ಯಾನಿತ್ಯವನರಿದಿರಿಟ್ಟು,
ಸತ್ಯವೇ ಮೋಕ್ಷ, ಅಸತ್ಯವೇ ನರಕವೆಂಬುದು.
ಶ್ರುತಿಗುರುಸ್ವಾನುಭಾವವನುಳಿದು, ಗಳಿಪಶುಭಾವ ಬರಲುಂಟೆ ?
ನಾಚಿಕೆ ತಾನೇಕೆ ಬಾರದು ?
ಇಂತಹ ಮನವ ಸಂತೈಸುವರನಾರನು ಕಾಣೆ ಶರಣರಲ್ಲದೆ
ನಿರಂಜನ ಚನ್ನಬಸವಲಿಂಗ. || ೨೪ ||

೨೫

ಮನವೆಂಬ ಮಾಯೋಚ್ಛಿಷ್ಟವದು ಸಂಸಾರ ಕುಳಿಯೊಳು ಬಿದ್ದು
ಹೊರಳುವ ಇರುಳುಗಳ್ಳ ಮರುಳಮಾನವರಿಗೆತ್ತಣ ಮಾತಯ್ಯಾ.
ನಿಮ್ಮ ಮಹಾನುಭಾವರ ಸುಜ್ಞಾನಕ್ರಿಯೆಯೆತ್ತ, ಭವದ ಬೆಳೆಯೆತ್ತ ?
ನಿರಂಜನ ಚನ್ನಬಸವಲಿಂಗಾ,
ನಿಮ್ಮ ನಿರವಯ ನಿಜಸಮಾಧಿಯೆತ್ತ, ವೈತರಣಿ ದುರ್ಗತಿಗಳೆತ್ತ ? || ೨೫ ||

೨೬

ಮನದಾಸೆಯೆಂಬ ಮಾಯೆ ಲೋಕರ ಮೀಸೆಯ ಹಿಡಿದು ನುಂಗಲು
ಭಾಷೆ ಸತ್ತು ಕಾಸುಕಪ್ಪಟದಿ ಪರದ್ರವ್ಯಕ್ಕೆ ಜಿನುಜಿನುಗಿ
ಮೋಸವಾಗಿ ಹೋದವರನೇಕ ಜನ.
ಕುಚ ನಯನ ಸಂಪುಳ್ಳ ಬಾಲೆಯರ ಕಾಲಸಂದಿಗೆ ಮೋಹಿಸಿ
ಬಚ್ಚಲದೊಳಗೆ ಬಿದ್ದು ಎಚ್ಚರದಪ್ಪಿ ಹೋದವರನೇಕ.
ಗೃಹ, ಕ್ಷೇತ್ರ, ಸೀಮೆಗಿಚ್ಛೈಸಿ ಹೊಡೆದಾಡಿ ಹೊಲಬುಗಾಣದೆ
ಬಲೆಯೊಳು ಬಿದ್ದು ಹೋದವರನೇಕ.

ಇಂತು ಆಶೆ, ಆಮಿಷ, ಬಯಲಭ್ರಾಂತದೊಳಗಿಪ್ಪ ಮಾಯಾಧೀನ ಮನುಜರು
ನಿಮ್ಮ ನಿಜಭಕ್ತರ ಸುಜ್ಞಾನ ಪರಮವೈರಾಗ್ಯವೆಂಬ
ಸುಖದಾಸೆ ಆಮಿಷವನವರೆತ್ತ ಬಲ್ಲರಯ್ಯಾ
ನಿರಂಜನ ಚನ್ನಬಸವಲಿಂಗಾ ! || ೨೬ ||

೨೭

ಹುಸಿಯ ಆಶೆಯ ಹಿಡಿದು ನಡೆವ ಕಸಮಾನವರ
ದೆಸೆದೆಸೆಗೆಳಸಿ ಕುಸಿಕುಸಿದು ಕೆಡಹುತ್ತಿಹುದು ನಿನ್ನ ಮಾಯೆ.
ವಶಗತವನರಿದು ಹರಿದು ವಶಗತವಾಗುವರೆ
ಆರಳವಲ್ಲ ನಿಮ್ಮಿಂದಲ್ಲದೆ ನಿರಂಜನ ಚನ್ನಬಸವಲಿಂಗಾ. || ೨೭ ||

೨೮

ಹಸಿಯ ಜವ್ವನೆಯರ ರಸನೆಯ
ನವೀನ ಚಾತುರ್ಯಕ್ಕಂಗ ಮನ ಭಾವವಿತ್ತು,
ಆದಿ ಮಧ್ಯ ಅವಸಾನವ ಮರೆದು ಅತ್ತಿತ್ತ ಬಿದ್ದು ಬಳಲುವ
ಕತ್ತೆ ನಾಯಿಯ ಕರ್ಮ ಭವಿಗಳಿಗಿನ್ನೆತ್ತಣ ಜ್ಞಾನವಯ್ಯಾ
ನಿರಂಜನ ಚನ್ನಬಸವಲಿಂಗಾ ? || ೨೮ ||

೨೯

ನಿಮ್ಮಿಂದೆ ನೀವಿಟ್ಟ ಮಾಯೆ ನಿಮ್ಮಿಂದ ಬಂದು ಆವರಿಸಿ ನುಂಗುತಿರಲು
ಇನ್ನಾರು ಬಿಡಿಸುವರಯ್ಯಾ ?
ಕಡಲುಕ್ಕಿ ಪ್ರಳಯವಾದರೆ, ಅಂಬರ ಕಳಚಿ ಧರೆಗೆ ಬಿದ್ದರೆ,
ಭೂಜಲವೈದಿದರೆ ಇನ್ನಾರು ಹೇಳಿಕೇಳುವರಯ್ಯಾ ?
ನಿರಂಜನ ಚನ್ನಬಸವಲಿಂಗಾ ನಿಮ್ಮ ಧರ್ಮ ನಿಮ್ಮ ಧರ್ಮ. || ೨೯ ||

೩೦

ಎಲೆ ಶಿವನೆ ನಿಮ್ಮನೊಲಿಸಿ ಕೂಡಬೇಕೆಂಬ
ಖಂಡಿತ ಜ್ಞಾನದ ಕರ್ಮಕಾಂಡಿಗಳನು
ಎಳತಟಗೊಳಿಸಿತ್ತು ಇದೇನು ನೋಡಾ !
ವ್ರತಿಗಳೆಂದು ಹೇಳಿಸಿಕೊಂಬ ಹಿರಿಯರ
ಬಲೆಯೊಳೊಂದಿಸಿ ಕಡೆಗೆ ಮಾಡಿಸಿಕೊಂಡಿತ್ತು.
ನಿಯಮಸ್ಥರೆನಿಸಿಕೊಂಬ ಹಿರಿಯರ
ಸೀಮಿಯ ಸಂಸಾರದೊಳಿಟ್ಟು ಬೇರೆ ಮಾಡಿಸಿಕೊಂಡಿತ್ತು.

ಶೀಲವಂತರೆನಿಸಿಕೊಂಬ ಹಿರಿಯರ ದುಶ್ಶೀಲದೊಳೊಂದಿಸಿ ಬಿಡಿಸಿಕೊಂಡಿತ್ತು.
ಯತಿಗಳೆನಿಸಿಕೊಂಬ ಹಿರಿಯರ
ಸತಿಯರ ರತಿಸಂಸಾರದೊರಿ ಬಿಡಿಸಿಕೊಂಡಿತ್ತು.
ಗತಿಮತಿಗಳೆಂಬ ಹಿರಿಯರ
ಭಿನ್ನ ಭಿನ್ನ ಸಂಸಾರವೆರಸಿ ಕಾಡಿಕೊಂಡಿತ್ತು ನಿಮ್ಮ ಮಾಯೆ
ನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣರನುಳಿದು. ॥ ೩೦ ॥

೩೧

ಜಾಗ್ರದಲ್ಲಿ ಉದರಾವಸರಕ್ಕೆ ಕುದಿಕುದಿದು ಕೆಡಹುತ್ತಿಹುದು.
ಸ್ವಪ್ನದಲ್ಲಿ ಮಲತ್ರಯರತಿವೊಂದಿ ಭುಂಜಿಸಿ ಮುಳುಗಿಸುತ್ತಿಹುದು.
ಸುಷುಪ್ತಿಯಲ್ಲಿ ದುರ್ಗಾಡಾಂಧಕಾರ ಕವಿದು ಪರವಶವನೆಯ್ದಿಸುತ್ತಿಹುದು.
ಇಂತಿಹ ಅವಿದ್ಯಾಂಗನೆಯ ಕಳೆದುಳಿವ ಕಣ್ಣುಳ್ಳ
ಹಿರಿಯರ ನಾನಾರನು ಕಾಣೆನಯ್ಯಾ,
ನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣನಲ್ಲದೆ. ॥ ೩೧ ॥

೩೨

ನಿನ್ನಾಣತಿಗೆ ಇಂಬುಗೊಂಡು ನಿನ್ನಿಂದಾದ ಸುಖವ,
ನಿನ್ನಿಂದ ನಿನಗೀಯಬೇಕೆಂದು ಬಂದ ನಿಜಾತ್ಮನಿಗೆ,
ನೀನಿಟ್ಟ ತೊಡರು ಬಂಧಿಸಲೇನು ಕಾರಣವಯ್ಯಾ ?
ನಿನ್ನ ಧರ್ಮದ ಗತಿಯ ನೀನಿಟ್ಟ ಮಾಯೆಯ ಕುಟಿಲವೋ ?
ನೀನೇ ಬಲ್ಲೆ ನಾನೆತ್ತ ಬಲ್ಲೆನಯ್ಯಾ !
ನಿನ್ನೊಡಲ ಮೊರೆಗೊಂಡ ಮರುಳ ನಾನು ನಿರಂಜನ ಚನ್ನಬಸವಲಿಂಗಾ. ॥ ೩೨ ॥

೩೩

ಹಡೆದ ಮಕ್ಕಳಕೂಡಿ ಹಾದರನಾಡುವ ಹಾವಾಡಗಿತ್ತಿ ಹಾವನಾಡಿಸುವಲ್ಲಿ,
ನೋಡಬಂದ ನಾಡಜಾಣರ ನುಂಗಿ ಉಗುಳುತ್ತಿರ್ದಳು ನೋಡಾ !
ಆ ಉಚ್ಛಿಷ್ಟದ ವಾಸನೆ ಮೂರು ಬಣ್ಣದೊಡೆಯರ ಸೋಂಕಿ
ನಾನು ನೀನೆಂಬ ನಡೆ ನುಡಿಯವರ ಕೆಡಬಡಿದು
ಎದೆಯನೊದೆಯುತ್ತಿದೆ ನೋಡಾ.
ಆದಿಯ ನಾರಿಯ ಭಾವದಿಂದಲ್ಲದೆ ಸಾಧಿಸುವರ ಕಂಡು
ಮರುಗುತಿರ್ದೆನು ಕಾಣಾ ನಿರಂಜನ ಚನ್ನಬಸವಲಿಂಗಾ. ॥ ೩೩ ॥

೩೪

ಪೃಥ್ವಿಯಲ್ಲಿ ಮಾಯೆ ನೋಡಿರೆ ಶಿವನ,
ಅಪ್ಪುವಿನಲ್ಲಿ ಮಾಯೆ ನೋಡಿರೆ ಶಿವನ,
ಅಗ್ನಿಯಲ್ಲಿ ಮಾಯೆ ನೋಡಿರೆ ಶಿವನ,
ವಾಯುವಿನಲ್ಲಿ ಮಾಯೆ ನೋಡಿರೆ ಶಿವನ,
ಆಕಾಶದಲ್ಲಿ ಮಾಯೆ ನೋಡಿರೆ ಶಿವನ,
ಯಾಜಮಾನನಲ್ಲಿ ಮಾಯೆ ನೋಡಿರೆ ಶಿವನ,
ಷಡ್ಭೂತ ನಿರಂಜನ ಚನ್ನಬಸವಲಿಂಗವ ನೋಡಿರೆ ಸಾಕಾರವಿಡಿದು. ॥ ೩೪ ॥

೩೫

ನೋಡಿರೆ ನೋಡಿರೆ ಮಾಯೆಯ ಕುಟಿಲವನು ;
ದೂಡಿರೆ ದೂಡಿರೆ ಸಂಸಾರ ಸರಸವನು.
ಮಾಡಿರೆ ಮಾಡಿರೆ ಗುರುಪಾದ ಸೇವೆಯನು;
ಬೇಡಿರೆ ಬೇಡಿರೆ ನಿಮ್ಮ ಸ್ವರೂಪವನು.
ಆಡಿರೆ ಆಡಿರೆ ಸತಿ ಪತಿಯ ಸೊಂಪಿನಿಂದೆ ;
ಹಾಡಿರೆ ಹಾಡಿರೆ ಬಾಯಿಗೆ ಬಂದಂತೆ.
ಕೂಡಿರೆ ಕೂಡಿರೆ ನಿರಂಜನ ಚನ್ನಬಸವಲಿಂಗವ
ಬೇರೆ ಕಾಣದಂತೆ ಮುಮುಕ್ಷುಗಳಿರಾ. ॥ ೩೫ ॥

೩೬

ಚಂದ್ರ ಮೂಡಿದನಂತೆ, ಚಂದ್ರಿಕೆಯೊಳು ನಿಂದು ನೋಡಿದನಂತೆ,
ಎಮ್ಮೊಡೆಯನ ಕುತ್ತಿಗೆಯ ಕೊಯ್ದನಂತೆ,
ಎಮ್ಮೊಡತಿಯ ಮೊಲೆ ಮೂಗ ಹರಿದು ಹಾಕಿದನಂತೆ,
ಗಾರುಡಿಗನಾಟವ ಕಲಿತುಕೊಂಡನಂತೆ,
ನಮ್ಮೆಲ್ಲರ ಕೊಂದು ಕೊಂಬುವನಂತೆ, ನಿರಂಜನ ಚನ್ನಬಸವಲಿಂಗನಂತೆ,
ಬಲ್ಲಕಡೆಗೆ ಹೋಗುವ ಬನ್ನಿರತ್ತತ್ತ ಅರಿಯದಂತೆ. ॥ ೩೬ ॥

೩೭

ಹಿಂದುರಾಯನ ದಂಡು ಇಂದು ಬಂದರೆ,
ಕುಂದುರಾಯನ ಕಡಿದುಕೊಂದರು.
ಹಸ್ತಿಗಮನೆಯ ಹರಿದುಕೊಂಡರು,
ಪುರದ ಜನರನುರುಹಿ ಕಾಲ ಬಲಕಡಿದು ನೂಂಕಿತ್ತು ಕೇಳಾ.

ಕೋಟಿ ದ್ರವ್ಯವನೆತ್ತಿಕೊಂಡು ಹೋದರು.
ನಿರಂಜನ ಚನ್ನಬಸವಲಿಂಗವಿಟ್ಟು ಕೋಲ ಸುಟ್ಟುಕೊಂಡರು. ‖ ೩೭ ‖

೩೮

ಬೆಂದು ಹೋಯಿತ್ತೆ ಪಟ್ಟಣ ! ಚಂದವಳಿಯಿತ್ತೆ ಅರಸಿನ !
ಅಂದಗೆಟ್ಟಿತ್ತೆ ರಾಣಿವಾಸ !
ಸುಂಮುಗವಿಯಿತ್ತೆ ಸಕಲ ಪರಿಜನರ ಗರ್ಜನೆ !
ಪರವಾಯಿತ್ತೆ ಗಜನೇರಿ ಮೆರೆವ ಮಂತ್ರಿಯ ಸಿರಿಸಂಪತ್ತು !
ಅರಿಯಬಂದನೆ ನಿರಂಜನ ಚನ್ನಬಸವಲಿಂಗ !
ತನ್ನಿಂದ ತನ್ನ ಮೊರೆಯ ಹೋಗುವ ಬನ್ನಿ. ‖ ೩೮ ‖

೩೯

ಒಂದು ಓಡಿತೆಗೆ ಬಂದು ಕವಿದ ಕಾಳಗತ್ತಲೆಯ ಹರಿದು ಬಂದ ಬರವಿಂಗೆ,
ಚಿತ್ಕಾಂತನೊಲಿದು ಸದ್ರೂಪ ಸಲೆನಿಂದು,
ನೋಡಿ ನೋಡಿ, ಕಳೆದು ಕಣ್ದೆರಪ ಮಾಡಿ,
ಕರುಣಿಸಿ ಸಲಹಿದ ನಿತ್ಯನಿರಂಜನ ಚನ್ನಬಸವಲಿಂಗ. ‖ ೩೯ ‖

## ಗುರುಕರುಣಸ್ಥಲ

ಸೂತ್ರ : ಸಕಲ ಸಂಸಾರವನು ಹೇಯವ ಮಾಡಿ ಜ್ಞಾನಕಲಾತ್ಮನು ಗುರುವನರಸಿಕೊಂಡು ಬಂದು ಶರಣುಹೊಕ್ಕು ಗುರುಕರುಣೆಯನ್ನು ಪಡೆಯುವನು. ಆದುದರಿಂದ ಇದಕ್ಕೆ ಗುರುಕರುಣಸ್ಥಲವೆಂದು ಕರೆಯಲಾಗಿದೆ.

೪೦

ಗುರುವೆ ಶರಣು, ಮಹಾಗುರುವೆ ಶರಣು,
ಪರಮಗುರುವೆ ಶರಣು.
ಎನ್ನನಾಗುಮಾಡಿದ ಸಂಭೋಗ ಸಂಯೋಗಸಂಪನ್ನ ನೀನೆ,
ನಿರಂಜನ ಚನ್ನಬಸವಲಿಂಗ
ಜಯ ಜಯ ಜಯವೆನುತಿರ್ದೆನು. ‖ ೪೦ ‖

೪೧

ಕಾಡಡವಿಯೊಳೋರ್ವನೆ ದೆಸೆಯುಗಾಣದೆ ಅಸುವಳಿವ ಕಾಲದಲ್ಲಿ,
ಒಸೆದೋರ್ವ ಬಂದು ಬಾ ಬಾ ಎಂದೆತ್ತಿ
ಪೊಳಲುಬಳಗದ ಮಧ್ಯ ನಿಲಿಸುವಂತೆ,

ಎನ್ನಾದಿಮಧ್ಯವಸಾನವಳಿದು,
ಭವಾರಣ್ಯ ಭೀತಿತ್ರಯದೊಳಿರ್ಪ ಆತ್ಮನನು
ಅಭಯದಿಂದೆತ್ತಿ, ಅರಿ ಸಕಲ ಪರಿಸಿ ತಲೆದಡಹಿ,
ಮೋಹದ ಮಾತಿನಿಂ ಕೈಯೊಳಗೆ ಕೈಯನಿತ್ತು ಕರುಣಿಸಿದ
ಒಳಹೊರಗೆ ಸಹಜದಲ್ಲಿ
ನಿರಂಜನ ಚನ್ನಬಸವಲಿಂಗವೆಂಬ ಸದ್ಗುರುನಾಥನು. ॥ ४೧ ॥

४೨

ಆಹಾ ಎನ್ನಪುಣ್ಯದ ಫಲ !
ನಿರಾಕಾರ ಗುರುವೆನಗೆ ಸಾಕಾರವಾಗಿ ಬಂದುದು.
ಆಹಾ ಎನ್ನ ಬಹುಜನ್ಮದ ತಪಸ್ಸಿನ ಫಲ !
ನಿರವಯಾನಂದ ನಿಜವೆನಗೆ ಸಾಧ್ಯವಾದುದು.
ಆಹಾ ಎನ್ನ ಭಾಗ್ಯದ ನಿಧಿಯೆನಗಿತ್ತ
ನಿರಂಜನ ಚನ್ನಬಸವಲಿಂಗವೆಂಬ ಸದ್ಗುರುದೇವನು. ॥ ४೨ ॥

४೩

ಅನಾದಿಸಂಸಿದ್ಧ ನಿರಂಜನಲಿಂಗದಿಂದೊಗೆದವ ನಾನಾದ ಕಾರಣ,
ಜ್ಞಾನೋದಯವಾಗಿ ಮಾಯಾದಿ ಸಕಲಕರ್ಮಂಗಳ ವಿಸರ್ಜಿಸಿದೆನು.
ಆದಿ ಮಹಾಲಿಂಗದಂಗದಿಂದುದಯವಾದವ ನಾನಾದ ಕಾರಣ
ಶ್ರೀ ಗುರುಕಾರುಣ್ಯವಾಗಿ ಲಿಂಗಾಂಗ ಷಟ್‌ಸ್ಥಲಜ್ಞಾನಿಯಾದೆನು.
ಆದಿ ಮಧ್ಯ ಅವಸಾನದಿಂದಲತ್ತತ್ತಲಾದ
ನಿರವಯಾನಂದಪರಬ್ರಹ್ಮಾಂಶಿಕ ನಾನಾದ ಕಾರಣ
ತ್ರಿವಿಧ ಲಿಂಗಾನುಭಾವವೆಂಟಂಗ, ಪಂಚಪ್ರಾಣಾದಿ
ಸಕಲ-ನಿಃಕಲ ಸನುಮತಾನಂದ ಪರಬ್ರಹ್ಮವೆಯಾಗಿರ್ದೆನು
ನಿರಂಜನ ಚನ್ನಬಸವಲಿಂಗದಲ್ಲಿ. ॥ ४೩ ॥

४४

ಮುಸಿ ಕಳವು ಡಂಬಕದ ಸುಳುಹನಳಿದುಳಿದ
ಜ್ಞಾನಕಲಾತ್ಮನ ಕಂಡ ಚೌಪೀಠವಾಸನು,
ತ್ರಿವಿಧಾನುಗ್ರಹವ ಮಾಡಿ ಕಾಯ ಪ್ರಾಣಾತ್ಮ ಸನ್ನಿಹಿತನಾಗಿ
ತಾನೆಂಬ ಭಾವ ತಪ್ಪುವಂತೆಮಾಡಿ ಸಲಹಿದನೆನ್ನ
ನಿರಂಜನ ಚನ್ನಬಸವಲಿಂಗವೆಂಬ ಗುರುನಾಥಂಗೆ
ಶರಣು ಶರಣು ಶರಣೆನುತಿರ್ದೆನು. ॥ ४४ ॥

೪೫

ಆದಿ ಅನಾದಿಯಿಂದತ್ತತ್ತಲಾದ ಆ ಮಹಾಘನ ಬ್ರಹ್ಮವ
ತಂದೆನ್ನಂಗೈಯೊಳಗಿರಿಸಿದ ನೋಡಾ.
ಮೂದೇವರರಿಯದ ಅಸಮ ಚಿತ್ಪ್ರಾಣವಲಿಂಗವ
ಬೋಧಿಸಿ ತಂದೆನ್ನ ಮನದಕೈಯೊಳಗಿರಿಸಿದ ನೋಡಾ.
ನಾದ ಬಿಂದು ಕಲಾತೀತ ಗಮನಾಗಮನ
ನಿರಂಜನ ಚನ್ನಬಸವಲಿಂಗನ ತಂದೆನ್ನಭಾವದಕೈಯೊಳಗಿರಿಸಿದ ನೋಡಾ.
ಎನ್ನ ಸರ್ವಾಂಗದೊಳಹೊರಗೆ ತಾನೇ ಪರಿಪೂರ್ಣನಾಗಿರ್ದ
ನಿರಂಜನ ಚನ್ನಬಸವಲಿಂಗವು ಬೆಳಗಿನ ಮಂಟಪದೊಳಗಿರ್ದು. ॥ ೪೫ ॥

೪೬

ಎನ್ನ ಪೃಥ್ವಿಸಂಬಂಧವನಳಿಸಿ
ಚಿತ್ಪೃಥ್ವಿಯಲ್ಲಿ ತನ್ನ ತೋರಿ ಸಲಹಿದನು.
ಎನ್ನ ಅಪ್ಪುಸಂಬಂಧವನಳಿಸಿ
ಚಿದಪ್ಪುವಿನಲ್ಲಿ ತನ್ನ ತೋರಿ ಸಲಹಿದನು.
ಎನ್ನ ವಾಯುಸಂಬಂಧವನಳಿಸಿ
ಚಿದ್ವಾಯುವಿನಲ್ಲಿ ತನ್ನ ತೋರಿ ಸಲಹಿದನು.
ಎನ್ನಾಕಾಶಸಂಬಂಧವನಳಿಸಿ
ಚಿದಾಕಾಶದಲ್ಲಿ ತನ್ನ ತೋರಿ ಸಲಹಿದನು.
ಎನ್ನಾತ್ಮಸಂಬಂಧವನಳಿಸಿ
ಚಿದಾತ್ಮದಲ್ಲಿ ತನ್ನ ತೋರಿ ಸಲಹಿದನು.
ಎನ್ನ ಸ್ಥೂಲಾಂಗಸಂಬಂಧವನಳಿಸಿ
ತ್ಯಾಗಾಂಗವೆನಿಸಿ ತನ್ನ ತೋರಿ ಸಲಹಿದನು.
ಎನ್ನ ಸೂಕ್ಷ್ಮಾಂಗಸಂಬಂಧವನಳಿಸಿ
ಭೋಗಾಂಗವೆನಿಸಿ ತನ್ನ ತೋರಿ ಸಲಹಿದನು.
ಎನ್ನ ಕಾರಣಾಂಗಸಂಬಂಧವನಳಿಸಿ
ಯೋಗಾಂಗವೆನಿಸಿ ತನ್ನ ತೋರಿ ಸಲಹಿದನು.
ಎನ್ನ ಸರ್ವಾಂಗಸಂಬಂಧವನಳಿಸಿ
ಸರ್ವಾಂಗದಲ್ಲಿ ಸರ್ವಾಚಾರಸಂಪತ್ತು ತೋರಿ ಸಲಹಿದ
ನಿತ್ಯವಾಗಿ ನಿರಂಜನ ಚನ್ನಬಸವಲಿಂಗ. ॥ ೪೬ ॥

೪೭

'ನ ಗುರೋರಧಿಕಂ ನ ಗುರೋರಧಿಕಂ ನ ಗುರೋರಧಿಕಂ'
ಎಂಬ ಶ್ರುತಿಯುಂಟಾಗಿ,
ಹರ ಮುನಿದರೆ ಗುರು ಕಾಯ್ವ, ಗುರು ಮುನಿದರೆ ಹರ ಕಾಯನೆಂಬ ವಾಕ್ಯ ದಿಟ.
ಅದೆಂತೆಂದೊಡೆ : ಪರಶಿವನಾಣತಿವಿಡಿದ್ಯೆತಂದು
ತನುಸಂಗ ಮರವೆಯಾವರಿಸಿದಂದು,
ತನ್ನತ್ತ ತಾನೊಯ್ವ ಸತ್ವ ತನಗಿಲ್ಲ.
ಮತ್ತೆ ಸುಜ್ಞಾನಗುರುವಾಗಿ ಬಂದೆನ್ನೆಚ್ಚರಿಸಿ,
ಕ್ರಿಯಾಘನಗುರುವಾಗಿ ಬಂದೆನ್ನ ಬೋಧಿಸಿ
ಅತ್ತಲಾ ಪರಶಿವನ ತಂದೆನ್ನ ಕರ ಮನ ಭಾವದಲ್ಲಿ ತೋರಿ ಕಾಣಿಸಿದ
ನಿರಂಜನ ಚನ್ನಬಸವಲಿಂಗ ತಾನೆಂಬ ಭಾವವನು. || ೪೭ ||

೪೮

ಎನ್ನರುಹಿನಲ್ಲಿ ಗುರುವಾಗಿ ಬಂದು ನಿಂದಾನು,
ಎನ್ನ ಪ್ರಾಣದಲ್ಲಿ ಲಿಂಗವಾಗಿ ಬಂದು ನಿಂದಾನು,
ಎನ್ನ ಜ್ಞಾನದಲ್ಲಿ ಜಂಗಮವಾಗಿ ಬಂದು ನಿಂದಾನು,
ಎನ್ನ ಘ್ರಾಣದಲ್ಲಿ ಪ್ರಸಾದವಾಗಿ ಬಂದು ನಿಂದಾನು,
ಎನ್ನ ಜಿಹ್ವೆಯಲ್ಲಿ ಪಾದೋದಕವಾಗಿ ಬಂದು ನಿಂದಾನು,
ಎನ್ನ ನೇತ್ರದಲ್ಲಿ ರುದ್ರಾಕ್ಷಿಯಾಗಿ ಬಂದು ನಿಂದಾನು,
ಎನ್ನ ತ್ವಕ್ಕಿನಲ್ಲಿ ವಿಭೂತಿಯಾಗಿ ಬಂದು ನಿಂದಾನು,
ಎನ್ನ ಶ್ರೋತ್ರದಲ್ಲಿ ಪಂಚಾಕ್ಷರಿಮಂತ್ರವಾಗಿ ಬಂದು ನಿಂದಾನು,
ಇಂತು ಎನ್ನಂಗದಲ್ಲಿ ಅಷ್ಟಾವರಣವಾಗಿ
ಕರಸ್ಥಲಕ್ಕೆ ಇಷ್ಟಲಿಂಗವಾಗಿ ಬಂದು ನಿಂದಾನು,
ನಿರಂಜನ ಚನ್ನಬಸವಲಿಂಗ ತಾನೆ ನೋಡ : ಎನ್ನ ಗುರುವರನು. || ೪೮ ||

೪೯

ಅಯ್ಯಾ, ಶ್ರೀಗುರುವಿನ ವೇಧಾದೀಕ್ಷೆಯಿಂದೆ
ಸರ್ವಕಲಾಭಿಜ್ಞತೆಯೆಂಬ ಅನುಗ್ರಹವೇ ಭಾವಲಿಂಗವಾಗಿ
ಎನ್ನ ಭಾವದ ಕರಸ್ಥಲದಲ್ಲಿ ನಿಂದು,
ಭಾವ ತನುಮನಯುಕ್ತವಾದ
ಕಾರ್ಮಿಕಮಲ ಭ್ರಾಂತಿಯನಳಿಸಿ ನಿರ್ಭ್ರಾಂತನಾದೆ.
ಅಯ್ಯಾ, ಶ್ರೀಗುರುವಿನ ಮಂತ್ರದೀಕ್ಷೆಯಿಂದೆ

ವಿದ್ಯಾವಿನಯ ಸಂಪನ್ನತೆಯೆಂಬ ಅನುಗ್ರಹವೇ ಪ್ರಾಣಲಿಂಗವಾಗಿ
ಎನ್ನ ಮನದ ಕರಸ್ಥಲದಲ್ಲಿ ನಿಂದು,
ಮನ ಭಾವ ತನುಯುಕ್ತವಾದ ಮಾಯಾಮಲಸಂಕಲ್ಪನಳಿಸಿ ಅಕಲ್ಪಿತನಾದೆ.
ಅಯ್ಯಾ, ಶ್ರೀ ಗುರುವಿನ ಕ್ರಿಯಾದೀಕ್ಷೆಯಿಂದೆ
ವೀರಶೈವೋತ್ತಮತೆಯೆಂಬ ಅನುಗ್ರಹವೇ ಇಷ್ಟಲಿಂಗವಾಗಿ
ಎನ್ನ ಕಾಯದ ಕರಸ್ಥಲದಲ್ಲಿ ನಿಂದು,
ತನು ಮನ ಭಾವಯುಕ್ತವಾದ ಆಣವಮಲದನಿಷ್ಟವನಳಿಸಿ ಅಕಾಯಚರಿತನಾದೆ.
ಅಯ್ಯಾ, ನಿರಂಜನ ಚನ್ನಬಸವಲಿಂಗವ
ಕರ, ಕಕ್ಷ, ಕಂಠ, ಉರಸಜ್ಜೆ, ಉತ್ತಮಾಂಗ, ಅಮಳೊಕ್ಯದಲ್ಲಿ ಧರಿಸಿ
ಪರಮಸುಖಿಯಾಗಿ ನಮೋ ನಮೋ ಎನುತಿರ್ದೆನು. ॥ ೪೯ ॥

೫೦

ಇರುಳಿನಿಂದೆದ್ದು ಬಂದು ಸತ್ತು, ಹುಟ್ಟಿ,
ತಾಯಿ ಭಾವನ ಮಗನ ಹಡೆದಾಳು ನೋಡ !
ಹಡೆದ ಮಗನ ಕೈಯಲ್ಲಿ ಹಿಡಿದು ಬೀದಿ ಬಾಜಾರ
ಕೇರಿ ಕೇರಿಯಲ್ಲಿ ಮುದ್ದಾಡಲು,
ಮಾತೆಯ ತರ್ಕೈಸಿ ಒಳಗೊಯ್ದು ನೆರೆದು
ಹೆರೆಹಿಂಗದೆ ಮಾವ ಮುತ್ತೆಯರಿಗೊಂದಾಗಿ ಮಾಡಿ ಶರಣೆಂದರೆ
ನಿರಂಜನ ಚನ್ನಬಸವಲಿಂಗಕ್ಕೆ ಪರಿಣಾಮವಾಯಿತ್ತು. ॥ ೫೦ ॥

## ಲಿಂಗಧಾರಣಸ್ಥಲ

ಸೂತ್ರ : ಇಂತು ಗುರುಕಾರುಣ್ಯವಾದ ಶರಣನು ಆ ಮಹಾಜ್ಞಾನಿಯಾದ ಗುರುವಿನಿಂದ ತನ್ನಂತರಂಗದ ಚಿತ್ಕಳೆಯನೆ ಧ್ಯಾನಿಸಿ ಭಾವಕ್ಕೆ ತಂದು, ಭಾವದಿಂದ ಮನಕ್ಕೆ ತಂದು, ಮನದಿಂದ ನೇತ್ರಕ್ಕೆ ತಂದು, ನೇತ್ರದಿಂದ ಕರಸ್ಥಲಕ್ಕೆ ತಂದಿತ್ತ ಗುರುಲಿಂಗವನಗಲದೆ, ಅಂಗ ಮನ ಭಾವದಲ್ಲಿ ಧರಿಸಿ ಗುರುಮಾರ್ಗವಿಡಿದು ಚರಿಸಿದ ಕಾರಣ ಲಿಂಗಧಾರಣಸ್ಥಲ ವೆಂದು ಹೇಳಲಾಯಿತು.

೫೧

ಅಯ್ಯಾ, ಅನಾದಿ ಚಿನ್ಮಯಲಿಂಗವೆನ್ನ
ಕರಸ್ಥಲಕ್ಕೆ ಬಂದುದು ಚೋದ್ಯ ನೋಡಾ !
ಅಯ್ಯಾ, ಆಕಾರ ನಿರಾಕಾರ ನಿರಂಜನಲಿಂಗವೆನ್ನ ಕುರಿತು
ಗುರುಮುಖದಿಂದ ಸಾಕಾರವಾಗಿ ಬಂದುದೆನಗತಿ ಚೋದ್ಯ ನೋಡಾ.

ಸುರೇಂದ್ರಜ ವಿಷ್ಣುಗಳರಿಯದ ಅನುಪಮ ಅಖಂಡ ಅವಿರಳಾನಂದ
ಪರಬ್ರಹ್ಮವೆನ್ನನರಿದು ಬಂದುದಾಶ್ಚರ್ಯ ನೋಡಾ !
ಆರಾರರಿಯದಪ್ರತಿಮ ಗುರುನಿರಂಜನ ಚನ್ನಬಸವಲಿಂಗ
ತಾನೇ ಬಂದ ಪರಿಯ ನೋಡಾ. || ೫೧ ||

೫೨

ತನ್ನ ತಂದುಕೊಟ್ಟ, ಚನ್ನಗುರುಲಿಂಗವ ಭಿನ್ನವಿರಹಿತನಾಗಿ
ಮುನ್ನ ಕರದಲ್ಲಿಟ್ಟು, ಹೃದಯಕಾಸಾರಮುದಕ ಮಜ್ಜನಗೈದು,
ಅಷ್ಟದಳಕುಸುಮವನಿಟ್ಟು, ಶರಣೆಂದು ಮಾಡುವೆನು.
ಕರಸ್ಥಲದ ಲಿಂಗವ ಮನಸ್ಥಲದಲ್ಲಿ ಧರಿಸಿ,
ಉನ್ಮನಸೋದಕದಿ ಮಜ್ಜನಕ್ಕೆರೆದು
ತ್ರಿದಳಕುಸುಮವನಿಟ್ಟು, ಶರಣೆಂದು ಮಾಡುವೆನು.
ಮನಸ್ಥಲದ ಲಿಂಗವನು ಭಾವಸ್ಥಲದಲ್ಲಿ ಧರಿಸಿ,
ಚಿಜ್ಜಲದಿಂ ಮಜ್ಜನಕ್ಕೆರೆದು
ಸಾಸಿರದಳಕುಸುಮವನಿಟ್ಟು, ಶರಣೆಂದು ಮಾಡುವೆನು.
ಭಾವಸ್ಥಲದ ಲಿಂಗವನು ಸರ್ವಾಂಗದಲ್ಲಿರಿಸಿ
ಸತ್ತ್ವೋದಕದಿಂ ಮಜ್ಜನಕ್ಕೆರೆದು,
ಪಶ್ಚಿಮಕೋಣೆಯಲ್ಲಿಪ್ಪ ನಿಶ್ಚಲಕುಸುಮವನಿಟ್ಟು,
ಶರಣು ಶರಣೆಂದು ಬದುಕಿದೆನು ನಿರಂಜನ ಚನ್ನಬಸವಲಿಂಗವನು. || ೫೨ ||

೫೩

ನಾದ ಬಿಂದು ಕಲಾ ನಿರಂಜನಲಿಂಗವೆನ್ನಂಗದಲ್ಲಿ
ಸತ್ಕ್ರಿಯಾನುಭಾವ ಸುಖಿ.
ಆದಿ ಮಧ್ಯಾಂತ ಶೂನ್ಯ ಅಗಮ್ಯ ಅಗೋಚರಲಿಂಗವೆನ್ನಂಗದಲ್ಲಿ
ಸಮ್ಯಕ್‌ಜ್ಞಾನಾನುಭಾವ ಪರಿಣಾಮಿ.
ಶೂನ್ಯ ನಿಃಶೂನ್ಯ ನಿಃಕಳಂಕ ನಿಜಾನಂದಲಿಂಗವೆನ್ನಂಗದಲ್ಲಿ
ಸಮರಸಾನುಭಾವ ತೃಪ್ತಿ.
ಸತ್ತುಚಿತ್ತಾನಂದ ಗುರುನಿರಂಜನ ಚನ್ನಬಸವಲಿಂಗ
ಎನ್ನ ಸರ್ವಾಂಗ ಸಮಸುಖಾನಂದ. || ೫೩ ||

೫೪

ನಿಜಲಿಂಗಮುಖದಿಂದ ಗಜಬಜೆಯನಳಿದು
ಸುಜನಸಂಪದನೆಯೊಳೊಪ್ಪಿ,

ಸತ್ತುಚಿತ್ತಾನಂದ ನಿತ್ಯಪರಿಪೂರ್ಣ ಅಖಂಡ ತೇಜೋಮೂರ್ತಿಯ,
ನಿತ್ಯ ನಿರ್ಮಲಾನಂದ ಪ್ರಕಾಶದೊಳ್ಪೆರೆದು
ಸುಖಮಿರ್ದೆನು, ನಿರಂಜನ ಚನ್ನಬಸವಲಿಂಗಾ. || ೫೪ ||

೫೫

ನಿತ್ಯಾನಂದ ನಿಜಗುರುಪಿತ್ರ ನಿರ್ಮಲಲಿಂಗ
ಆಧಾರದಲ್ಲಿ ಆಚಾರಲಿಂಗವಾಗಿ ಪ್ರಕಾಶವ ತೋರುತಿಹನು.
ಎನ್ನ ಸ್ವಾಧಿಷ್ಠಾನದಲ್ಲಿ ಗುರುಲಿಂಗವಾಗಿ ಪ್ರಭೆಯ ತೋರುತಿಹನು.
ಎನ್ನ ಮಣಿಪೂರಕದಲ್ಲಿ ಶಿವಲಿಂಗವಾಗಿ ಕಳೆಯ ಪ್ರಭಾವಿಸುತಿರ್ದನು.
ಎನ್ನ ಅನಾಹತದಲ್ಲಿ ಜಂಗಮಲಿಂಗವಾಗಿ ಬೆಳಗುತಿರ್ದನು.
ಎನ್ನ ವಿಶುದ್ಧಿಯಲ್ಲಿ ಪ್ರಸಾದಲಿಂಗವಾಗಿ ಮಹಾಪ್ರಕಾಶವ ಬೀರುತಿರ್ದನು.
ಎನ್ನ ಆಜ್ಞೇಯದಲ್ಲಿ ಮಹಾಲಿಂಗವಾಗಿ ಸಕಲಮಹಾಪ್ರಕಾಶವ ಬೀರುತಿರ್ದನು.
ಎನ್ನ ಬ್ರಹ್ಮಚಕ್ರದಲ್ಲಿ ನಿಃಕಲಲಿಂಗವಾಗಿ ಅಖಂಡ ಬೆಳಕ ತೋರುತಿಹನು.
ಎನ್ನ ಶಿಖೆಯಲ್ಲಿ ನಿಶ್ಶೂನ್ಯಲಿಂಗವಾಗಿ ಅವಿರಳಪ್ರಕಾಶ ತೋರುತಿಹನು.
ಎನ್ನ ಪಶ್ಚಿಮದಲ್ಲಿ ನಿರಂಜನಲಿಂಗವಾಗಿ ಅಗಣಿತಪ್ರಕಾಶವ ತೋರುತಿಹನು.
ಇಂತು ಸರ್ವಾಂಗದಲ್ಲಿ ತನ್ನ ಪ್ರಭೆಯ ತೋರಿ
ಎನ್ನ ಕರಸ್ಥಲದಲ್ಲಿ ನಿತ್ಯ ನಿರಂಜನ ಚನ್ನಬಸವಲಿಂಗವು
ನಿತ್ಯವಾಗಿರ್ದುದ ಕಂಡು ನಮೋ ನಮೋ ಎನುತಿರ್ದೆನು. || ೫೫ ||

೫೬

ಕರ್ತು ಗುರುಮೂರ್ತಿಯೆನ್ನ ಮಿಥ್ಯವ ಪರಿಹರಿಸಿ
ಅತ್ತತ್ತಲಾದ ಅಸಮಾಕ್ಷಲಿಂಗವನ್ನು
ಸತ್ಯವಿದೆಂದು ಕರ-ಮನ-ಭಾವಕ್ಕೆ ಕರುಣಿಸಿ ಕೊಟ್ಟ ಬಳಿಕ
ಅತ್ತಣಿತ್ತಣ ಕಾರ್ಯಕ್ಕೆಳಸದೆನ್ನ ಕಾಯಭಾವ.
ಸುತ್ತಿಸುತ್ತಿ ಸುಳಿಯದೆನ್ನ ಮನ.
ಸೂಸಿದಲ್ಲಿ ಆಶೆಯನರಿಯದೆನ್ನ ಭಾವ.
ಅನುಪಮ ನಿರಂಜನ ಚನ್ನಬಸವಲಿಂಗವನಗಲಿ
ನೆನೆಯಲಾರದೆ ಆವರಿಸಿಕೊಂಡಿಪ್ಪೆನು. || ೫೬ ||

೫೭

ಘನಮಹಾಪ್ರಕಾಶಲಿಂಗವೆನ್ನ ಕರಸ್ಥಲದಲ್ಲಿ ಮಿನುಗುತ್ತಿರಲು,
ಎನ್ನ ಕರ್ಮೇಂದ್ರಿಯಗಳೆಲ್ಲ ಕಳೆಮಳೆದವು,
ಎನ್ನ ವಿಷಯಂಗಳೆಲ್ಲ ಸತ್ತುನಿಂದವು,

ಎನ್ನ ಧರ್ಮೇಂದ್ರಿಯವೆಲ್ಲ ಅಳಿದುಳಿದವು,
ಎನ್ನ ಪ್ರಾಣಾದಿ ವಾಯುಗಳೆಲ್ಲ ಮರೆದುನಿಂದವು.
ಎನ್ನ ಕರಣಂಗಳೆಲ್ಲ ಬಿಟ್ಟುನಿಂದವು,
ಕ್ರಿಯಾದಿ ಶಕ್ತಿಗಳೆಲ್ಲ ಪ್ರಕಾಶವಾಗಿನಿಂದವು,
ನಿರಂಜನ ಚನ್ನಬಸವಲಿಂಗದವಸರಕ್ಕೆ. || ೫೭ ||

೫೮

ಅವಿರಳಪರಶಿವಲಿಂಗಕ್ಕೆ
ಕ್ರಿಯಾಶಕ್ತಿ ಪಾದಸೇವೆಯ ಮಾಡುತಿರ್ದಳು
ಆಚಾರಲಿಂಗವೆನ್ನ ಪ್ರಾಣನಾಥನೆಂದು.
ಜ್ಞಾನಶಕ್ತಿಯು ಸವಿನಯಮಾತಿನಿಂದ ಮಜ್ಜನಮಾಡಿಸುತ್ತಿಹಳು
ಗುರುಲಿಂಗವೆನ್ನ ಪ್ರಾಣನಾಥನೆಂದು.
ಇಚ್ಛಾಶಕ್ತಿಯು ಇಚ್ಛೆಯ ಗ್ರಹಿಸುತ್ತಿಹಳು
ಶಿವಲಿಂಗವೆನ್ನ ಪ್ರಾಣನಾಥನೆಂದು.
ಆದಿಶಕ್ತಿಯು ಪೂಜಾನುಕೂಲೆಯಾಗಿಹಳು
ಜಂಗಮಲಿಂಗವೆನ್ನ ಪ್ರಾಣನಾಥನೆಂದು.
ಪರಶಕ್ತಿಯು ಮಂತ್ರ ಧ್ಯಾನ ಜಪ ಸ್ತೋತ್ರದಿಂದ ಸ್ತುತಿಯಮಾಡುತ್ತಿಹಳು
ಪ್ರಸಾದಲಿಂಗವೆನ್ನ ಪ್ರಾಣನಾಥನೆಂದು.
ಚಿಚ್ಛಕ್ತಿಯು ಪರಮಸುಖಾನಂದವ ತೋರುತ್ತಿಹಳು
ಮಹಾಲಿಂಗವೆನ್ನ ಪ್ರಾಣನಾಥನೆಂದು.
ಇಂತು ಷಡ್ವಿಧಶಕ್ತಿಯರೆನ್ನಲ್ಲಿ ನಿಂದು,
ನಿರಂಜನ ಚನ್ನಬಸವಲಿಂಗವೆನ್ನ ಪ್ರಾಣನಾಥನೆಂದು
ಕರಸ್ಥಲವಿಡಿದಾನಂದಿಸುತ್ತಿಹರು. || ೫೮ ||

೫೯

ಅರಿಯಲಿಲ್ಲದ ಅರಿವು ಎನ್ನಲ್ಲಿ ತೋರಿತ್ತಾಗಿ
ಧರೆ ಮೊದಲಖಿಳವನಳಿದುಳಿದ ಅಮಲಮೂರುತಿಯ ಕಂಡೆ.
ಆ ಮೂರುತಿಯಿಂದೆ ಅನಂತ ಮನುಮುನಿಗಳ
ಅರಿತರ್ಕ್ಕಗೋಚರವಾದ ಅನಾಮಯಮೂರುತಿಯ ಕಂಡೆ.
ಆ ಮೂರುತಿಯನೆನ್ನ ಕರದೊಳು ಧರಿಸಿಕೊಂಡು
ಅಗಣಿತಮಹಿಮನಾದೆನು ಕಾಣಾ
ನಿರಂಜನ ಚನ್ನಬಸವಲಿಂಗಾ ನಿಮ್ಮಲ್ಲಿ. || ೫೯ ||

೬೦

ಅಯ್ಯಾ, ಎನ್ನ ಕಾಲಕರ್ಮವ ಕಳೆದ ಕರುಣಾಸಾಗರಲಿಂಗವೇ ಶರಣು ಶರಣು.
ಎನ್ನ ಕರವ ನಿರ್ಮಲಮಾಡಿದ ನಿಜಲಿಂಗವೇ ಶರಣು ಶರಣು.
ಎನ್ನ ನಾಸಿಕದ ವಾಸನೆಯನಳಿದ ಶೇಷಲಿಂಗವೇ ಶರಣು ಶರಣು.
ಎನ್ನ ಜಿಹ್ವೆಯ ಕಲ್ಮಷವ ಕಳೆದ ಘನಮಹಾಲಿಂಗವೇ ಶರಣು ಶರಣು.
ಎನ್ನ ಕಂಗಳ ಕತ್ತಲೆಯ ಕಳೆದ ಮಂಗಳಮಹಾಲಿಂಗವೇ ಶರಣು ಶರಣು.
ಎನ್ನ ತ್ವಕ್ಕಿನ ಆಕಾರವನಳಿದ ಚಿತ್ಕಲಾಲಿಂಗವೇ ಶರಣು ಶರಣು.
ಎನ್ನ ಕರ್ಣದ ದೋಷವ ಪರಿದ ಪರಮಲಿಂಗವೇ ಶರಣು ಶರಣು.
ಎನ್ನ ಹೃದಯದ ಕಳವಳವನಳಿದ ಅನುಪಮಲಿಂಗವೇ ಶರಣು ಶರಣು.
ಇಂತು ಎನ್ನ ಸರ್ವಾಂಗದ ಗರ್ವಾದಿಗಳನಳಿದು ನಿರಂತರ ಕರಸ್ಥಲಕ್ಕನುವಾದ ನಿರಂಜನ ಚನ್ನಬಸವಲಿಂಗವೇ
ನಿಮಗೆ ಶರಣು ಶರಣೆಂದು ಬದುಕಿದೆನಯ್ಯಾ. || ೬೦ ||

೬೧

ಅಯ್ಯಾ, ಸದ್ರೂಪವಾದ ದೀಕ್ಷಾಗುರುವಿನ ಮುಖದಿಂದೊಗೆದ
ಇಷ್ಟಲಿಂಗವೆನ್ನ ಸತ್ಕ್ರೀಯಲ್ಲಿ ನಿಂದಿತ್ತು.
ಚಿದ್ರೂಪವಾದ ಶಿಕ್ಷಾಗುರುವಿನ ಮುಖದಿಂದೊಗೆದ
ಪ್ರಾಣಲಿಂಗವೆನ್ನ ಸುಜ್ಞಾನಕ್ರೀಯಲ್ಲಿ ನಿಂದಿತ್ತು.
ಆನಂದಸ್ವರೂಪವಾದ ಮೋಕ್ಷಗುರುವಿನಿಂದೊಗೆದ
ಭಾವಲಿಂಗವೆನ್ನ ಮಹಾಜ್ಞಾನಕ್ರೀಯಲ್ಲಿ ನಿಂದಿತ್ತು.
ನಿತ್ಯಪರಿಪೂರ್ಣ ಅಖಂಡ ನಿರಂಜನ ಚನ್ನಬಸವಲಿಂಗದ ಘನಕ್ಕೆ
ನಮೋ ನಮೋ ಎನುತಿರ್ದೆನು. || ೬೧ ||

## ವಿಭೂತಿಸ್ಥಲ

ಸೂತ್ರ : ಇಂತು ಗುರುಕರುಣೆಯ ಪಡೆದು ಇಷ್ಟಲಿಂಗಧಾರಣವಾದ ಶರಣನು ನಿಜಾನಂದ ಚಿತ್ಪ್ರಕಾಶವನು ಸರ್ವಾಂಗದಲ್ಲಿ ಧರಿಸಿದ ಕಾರಣ ವಿಭೂತಿಸ್ಥಲವೆಂದು ಹೇಳಲಾಯಿತು.

೬೨

ಅನಾದಿ ನಿರವಯಲಿಂಗದಲ್ಲಡಗಿರ್ದ ಅವಿರಳ ಪ್ರಕಾಶವೇ
ಬಹಿರ್ಗತಿಯ ಬಂದು ನಿಂದಲ್ಲಿ ಚಿತ್ತೆಂದೆನಿಸಿತ್ತು.

ಆ ಚಿತ್ತಿನಿಂದ ಚಿನ್ನಾದ, ಚಿದ್ಬಿಂದು, ಚಿತ್ಕಲೆಯೆಂಬ
ತ್ರಯಾಕ್ಷರಗಳುದಯವಾದವು.
ಆ ತ್ರಿವಿಧಪ್ರಣವವೇ ಚಿದ್ಭಸ್ತ್ಮವ.
ಆ ಚಿದ್ಭಸ್ತ್ಮವವೆಂಬ ಚಿದ್ಭಸ್ಮವ ಧರಿಸಿದರೆ
ಘನ ನಿರಂಜನ ಚನ್ನಬಸವಲಿಂಗವಾಗಿರ್ದೆನಯ್ಯಾ. . || ೬೨ ||

೬೩

ಅಯ್ಯಾ, ಸತ್ಪ್ರಕಾಶವೆಂಬ ವಿಭೂತಿಯನರಿದರಿದು ಧರಿಸಿದೆನಾಗಿ
ಗಮನವಳಿದು ಗುರುವಾಣಿಜಾತನೆನಿಸಿದೆನು.
ಚಿತ್ಪ್ರಕಾಶವೆಂಬ ಭಸಿತವನರಿದರಿದು ಧರಿಸಿದೆನಾಗಿ
ಸ್ಥಿತಿಯಳಿದು ಲಿಂಗಸ್ಥಿತಿಯುಕ್ತನೆನಿಸಿದೆನು.
ಆನಂದಪ್ರಕಾಶವೆಂಬ ಭಸ್ಮವನರಿದರಿದು ಧರಿಸಿದೆನಾಗಿ
ಲಯಗೆಟ್ಟು, ಜ್ಞಾನ ಜಂಗಮದಲ್ಲಿ ಲಯವೆನಿಸಿದೆನು.
ನಿತ್ಯಪ್ರಕಾಶವೆಂಬ ಕ್ಷಾರವನರಿದರಿದು ಧರಿಸಿದೆನಾಗಿ
ತಿರೋದಾನವಳಿದು ಶಿವಶರಣರಿಗೆ ದಿನದಿನಕ್ಕೆ ಶರಣೆಂದು
ಅನುಭಾವವನರಿದವನೆನಿಸಿದೆನು.
ಪರಿಪೂರ್ಣಪ್ರಕಾಶವೆಂಬ ಕ್ಷಾರವನರಿದರಿದು ಧರಿಸಿದೆನಾಗಿ
ಅನುಗ್ರಹಗೆಟ್ಟು ಗುರುಲಿಂಗಜಂಗಮದನುವಿಡಿದವಧರಿಸುತಿರ್ದವನೆನಿಸಿದೆನು.
ಇಂತು ಪಂಚಬ್ರಹ್ಮಪ್ರಕಾಶಯುಕ್ತವಾದ ಅಖಂಡಪ್ರಕಾಶದ
ಶ್ರೀ ವಿಭೂತಿಯನರಿದರಿದು ಧರಿಸಿದೆನಾಗಿ, ಪಂಚಕೃತ್ಯಂಗಳ ನಷ್ಟವ ಮಾಡಿ
ನಿರಂಜನ ಚನ್ನಬಸವಲಿಂಗಪ್ರಕಾಶವ ನಿತ್ಯಧರಿಸಿದವನೆನಿಸಿದೆನು. || ೬೩ ||

೬೪

ಅಂತರಂಗದವಿರಳಾನಂದ ಜ್ಯೋತಿರ್ಮಯ ಭಸಿತವನು
ಪಾದಾದಿ ಮಸ್ತಕಕೆ ಸರ್ವಾಂಗದಲಿ ಧರಿಸಿ
ಆದಿ ಮಧ್ಯ ಕಡೆಯೆಂಬ ಕರ್ಕಸವ ನೂಂಕಿ,
ಕರ್ತೃ ನಿರಂಜನ ಚನ್ನಬಸವಲಿಂಗದಲ್ಲಿ ಸುಖಿಯಾದೆನು. || ೬೪ ||

೬೫

ಗಂಭೀರ ಗುರುವೆನ್ನ ಸಂಗಸಮರಸವ ಮಾಡಿ,
ಅಂಗದೊಳಡಗಿರ್ದ ಕಂಗಳ ಬೆಳಗ
ಕರುಣದಿಂದೆತ್ತಿ ಪಣೆಗಿಡಲು,
ಗಣತಲಿಖಿತವು ಕಾಣದೋಡಿದವು.

ಕಳೆ ಬಿಂದು ನಾದ ಸಂಭ್ರಮೆಯಗೊಂಡು,
ನಿರಂಜನ ಚನ್ನಬಸವಲಿಂಗಕ್ಕೆ ತಲೆಯಿಡಲಮ್ಮದೆ. ॥ ೬೫ ॥

೬೬

ಅಯ್ಯಾ, ಶ್ರೀಮಹಾವಿಭೂತಿಯಿಂದೆ
ಎನ್ನ ಕರ್ಮದ ಕತ್ತಲೆಯ ಕಳೆದು
ನಿರ್ಮಲಾಂಗನೆಂದೆನಿಸಿದೆ ನೋಡಾ.
ಅಯ್ಯಾ, ಶ್ರೀಮಹಾವಿಭೂತಿಯಿಂದೆ
ಎನ್ನ ಇಂದ್ರಿಯಗಮನವಳಿದು
ನಿರ್ಗಮನಿಯಾಗಿ ನಿಜಜಂಗಮವೆನಿಸಿದೆ ನೋಡಾ.
ಅಯ್ಯಾ, ಶ್ರೀಮಹಾವಿಭೂತಿಯಿಂದೆ
ಎನ್ನ ಕರಣವೃತ್ತಿಜ್ಞಾನವಳಿದು
ನಿಜ ಜ್ಞಾನವೆಂದೆನಿಸಿದೆ ನೋಡಾ.
ಅಯ್ಯಾ, ಶ್ರೀಮಹಾವಿಭೂತಿಯಿಂದೆ
ಸಕಲ ವಿಷಯಮೋಹಂಗಳಳಿದು
ನಿರ್ವಿಷಯ ನಿಜಮೋಹಿಯೆಂದೆನಿಸಿದೆ ನೋಡಾ.
ಅಯ್ಯಾ, ಶ್ರೀಮಹಾವಿಭೂತಿಯಿಂದೆ
ಅಪ್ರತಿಮ ಶರಣನೆಂದೆನಿಸಿದೆ ನೋಡಾ.
ನಿರಂಜನ ಚನ್ನಬಸವಲಿಂಗದವಿರಳ ಪ್ರಕಾಶವೆಂಬ
ಶ್ರೀಮಹಾವಿಭೂತಿಯಿಂದೆ ಸದ್ಯೋನ್ಮುಕ್ತನೆಂದೆನಿಸಿದೆ ನೋಡ. ॥ ೬೬ ॥

೬೭

ತ್ರಿಪುರವ ಸುಟ್ಟು ಭಸಿತವೆಂದು, ಕಾಲನನುರುಹಿದ ಭಸ್ಮವೆಂದು,
ಕಾಮನ ದಹಿಸಿದ ವಿಭೂತಿಯೆಂದು
ಪ್ರೇಮದಿಂದಿತ್ತೆನ್ನ ಗುರುಲಿಂಗ.
ಅಂತಃಪ್ರಭಾನಂದಮಯ ವಿಭೂತಿಯನು
ಪಾದದ್ವಿ, ಮಧ್ಯ, ದ್ವಯಬಾಹು,
ಶಿರಮೂಲ, ತ್ರಿಪುಂಡ್ರ, ತ್ರಿವರ್ಣಂಗಳರಿದು ಧರಿಸಿ
ಪರಮಪದದೊಳಾನಂದಮಯನಾಗಿರ್ದೆನು ಕಾಣಾ
ನಿರಂಜನ ಚನ್ನಬಸವಲಿಂಗಾ. ॥ ೬೭ ॥

೬೮

ನಿರ್ಮಲ ನಿಜಾಂತಜ್ಯೋತಿ ಸುಪ್ರಕಾಶವೆಂಬ
ಘನಮಹಾ ಶ್ರೀವಿಭೂತಿಯನೊಲಿದು

ಷಡಷ್ಟಾಂಗವನರಿದು, ಷಡಕ್ಷರಸಂಯುಕ್ತದಿಂ ಧರಿಸಿ
ಷಟ್‌ಸ್ಥಲಜ್ಞಾನದನುಭಾವಿಯಾಗಿರ್ದೆನಯ್ಯಾ
ನಿತ್ಯನಿರಂಜನ ಚನ್ನಬಸವಲಿಂಗಾ. ॥ ೧೮ ॥

೧೯

ಪಂಚಗೋಮಯವ ತಂದು
ಪಂಚಪ್ರಣವ ಶಿಖಾಗ್ನಿಯಿಂದೆ ದಹಿಸಿ,
ವಂಚನೆಯಳಿದುಳಿದು ವರ್ಮವರಿದು
ಸ್ನಾನವು ಧೂಳನ ಧಾರಣವಾದ
ಮಹಾಘನಮಹಿಮ ಶಿವಶರಣಂಗೆ
ನಮೋ ನಮೋ ಎಂಬೆನಯ್ಯಾ ನಿರಂಜನ ಚನ್ನಬಸವಲಿಂಗಾ. ॥ ೧೯ ॥

೨೦

ಬಸವ ಶಗಣೆಯಿಂದಾದ ಅಸಮ ಶ್ರೀಮಹಾಭಸಿತವ,
ನೊಸಲಾದಿ ಪಾದಾಂತ್ಯವಾಗಿ ನಾಲ್ವತ್ತೆಂಟು ಸ್ಥಾನಂಗಳನರಿದು ಧರಿಸಿ,
ಪಸರಿಸಿ ಪ್ರಜ್ವಲಿಸುವ ಪಶುಪತಿಯ ಗತಿಮತಿಯೊಳೊಪ್ಪಿ,
ಎಸೆವ ಶಿವಶರಣರಂಘ್ರಿಯ ಜಲಶೇಷವನು ಸಸಿನೆಯಿಂದ ಸೇವಿಸುವ
ಶಿಶುವಾಗಿರ್ದೆ ಅನುದಿನ ನಿರಂಜನ ಚನ್ನಬಸವಲಿಂಗ ಸನ್ನಿಹಿತ. ॥ ೨೦ ॥

೨೧

ಅಪ್ರತಿಮಭಸಿತವನು ಸುಪ್ರಭಾಚಾರ್ಯನಿಂದೆ
ಅರಿದು ಅವಧರಿಸಿದ ಅನುಪಮ ಶರಣಂಗೆ
ಅಜ ವಿಷ್ಣು ಇಂದ್ರಾದಿ ಮನುಮುನಿ ಷಡುದರ್ಶನ
ಸಕಲ ನಿಃಕಲ ಸಂಭವಿತರೆಲ್ಲ ಶರಣು ಶರಣೆಂದು
ಬದುಕುವರು ಕಾಣಾ ನಿರಂಜನ ಚನ್ನಬಸವಲಿಂಗಾ. ॥ ೨೧ ॥

೨೨

ಅಖಂಡಶಿವ ಅನಂತ ಪ್ರಭಾನಂದಮಯ ಶ್ರೀಮಹಾಘನಭಸ್ಮವನು
ಸತ್ಕ್ರಿಯಾ ಸಮ್ಯಕ್‌ಜ್ಞಾನ ಸಮರಸಾನುಭಾವಸಂಯುಕ್ತವಾಗಿ
ಸದಾನಂದಸುಖದೊಳೋಲಾಡುತಿರ್ದನು ಕಾಣಾ
ನಿರಂಜನ ಚನ್ನಬಸವಲಿಂಗಾ. ॥ ೨೨ ॥

## ರುದ್ರಾಕ್ಷಿಸ್ಥಲ

ಸೂತ್ರ : ಇಂತು ಗುರುಕರಸರಸಿಜದೊಳುದಯವಾದ ಶರಣನು ತನ್ನ ಗುರುಭಾವದಿಂದೊಗೆದ ಪರಮ ಇಷ್ಟಲಿಂಗವ ಧರಿಸಿ ವಿಭೂತಿ ಧಾರಣವಾಗಿ ರುದ್ರಾಕ್ಷಿ ಧರಿಸಬೇಕಾದ ಕಾರಣ ಮುಂದೆ ರುದ್ರಾಕ್ಷಿಸ್ಥಲವಾದುದು.

೭೩

ಪರಮ ಗುರುಕರುಣಕಟಾಕ್ಷವೆಂಬ
ವರರುದ್ರಾಕ್ಷಿಯನೊಲಿದು ಧರಿಸಿದ ಹರಶರಣರ
ನಿರೀಕ್ಷಣೆ ಮಾತ್ರದಲ್ಲಿ ಪರಿಭವಂಗಳಿರದೆ ಹೋದವು ನೋಡಾ.
ಆ ಮಹಿಮರ ದರ್ಶನ ಸ್ಪರ್ಶನ ಸಂಭಾಷಣೆಯಿಂದೆ
ಮರವೆ ಮಾಯಾಸಂಬಂಧವಳಿದು
ಸ್ಥಿರಪದ ಸಾಧ್ಯವಪ್ಪುದು ತಪ್ಪದು ಕಾಣಾ
ನಿರಂಜನ ಚನ್ನಬಸವಲಿಂಗಾ. ॥ ೭೩ ॥

೭೪

ಅಕಳಂಕ ಮಹಿಮಾಚಾರ್ಯನ ನಿರ್ಮಲ ಕಟಾಕ್ಷಮಣಿಯನು
ಅರಿದರಿದು ಅವಧರಿಸಿದ ಅಪ್ರತಿಮ ಶರಣಂಗೆ
ಅರಿಷಡ್ವರ್ಗಂಗಳು ಮುಟ್ಟಲಮ್ಮವು,
ಷಡೂರ್ಮಿಯಂಗಳು ಸ್ಪರ್ಶಿಸಲಮ್ಮವು,
ಮರಳಿ ಮುಂದುಗಾಣದಿರ್ದವು ಗುಣಾಳಿ,
ಕರ್ಮತ್ರಯಂಗಳಳಿದು ನಿರ್ಮಳ ನಿಲವಾಗಿರ್ದವು
ನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೭೪ ॥

೭೫

ಕಾಲಕಾಲಕ್ಕೆ ಕೃಪಾನಿಧಿಯೆಂಬ ಪರಮರುದ್ರಾಕ್ಷಿಯನು
ಒಲಿದೊಲಿದು ನಲಿದು ಕೊರಳು ಮೊದಲಂಗದೊಳು ಧರಿಸಿ,
ಕಂಗೊಳಿಸುವ ನಿರಂಜನ ಚನ್ನಬಸವಲಿಂಗಕ್ಕೆ
ಮಂಗಳ ಜಯ ಜಯವೆಂದು ಸಂಗಸುಖಿಯಾಗಿರ್ದೆನು. ॥ ೭೫ ॥

೭೬

ಮಹದಾನಂದ ಸದ್ಗುರುಮೂರ್ತಿಗೊಲಿದು
ಒಂದುಮುಖದ ರುದ್ರಾಕ್ಷಿಯನಿತ್ತಡೆ,
ಮುಂಗೈಯೊಳು ಧರಿಸಿ ಮಂಗಳಾಂಗನಾದೆ.

ಮತ್ತೊಂದೆರಡುಮುಖದ ರುದ್ರಾಕ್ಷಿಯನು
ತನುಮನಭಾವದಲ್ಲಿ ಹೆಚ್ಚಿ ಧರಿಸಿ
ಅನುನಯಾಚಾರಜ್ಞಾನಿಯಾದೆನು.
ಮತ್ತೆ ನಾತ್ಕೃದುಮುಖದ ರುದ್ರಾಕ್ಷಿಯನು
ನವನೀಯಸ್ಥಾನದಲ್ಲಿ ಧರಿಸಿ ಚರಿತೆಯುಳ್ಳವನಾದೆನು.
ಆರುಮುಖದ ರುದ್ರಾಕ್ಷಿಯನು ಆರುಭಕ್ತಿಯಿಂದೆ ಧರಿಸಿ
ಷಡಾಚಾರಸಂಪನ್ನನಾದೆನು.
ಏಳೆಂಟೊಂಬತ್ತು ಹನ್ನೆರಡುಮುಖದ ರುದ್ರಾಕ್ಷಿಯನು
ಮನಮೆಚ್ಚಿ ಧರಿಸಿ, ಮನ ಕರಣ ಮಹಾಪ್ರಕಾಶಮಯನಾದೆನು.
ಮತ್ತೆರಡು ಹನ್ನೊಂದು ಹದಿನಾಲ್ಕು ಮುಖದ ರುದ್ರಾಕ್ಷಿಯನು
ಎಂಟುಸರಗೊಳಿಸಿ ಭಾವಶುದ್ಧದಿಂದೆ ಧರಿಸಿ ಸರ್ವಾಚಾರಸಂಪತ್ತಿನೊಳಗಾದೆನು.
ಮತ್ತೆ ಮೀರಿ ಉಳಿದ ರುದ್ರಾಕ್ಷಿಯನು ಸತ್ಯದಿಂದೆ ಸರ್ವಾಂಗದೊಳು ಧರಿಸಿ
ನಿತ್ಯಮುಕ್ತನಾದೆನು ಚನ್ನಗುರು ನಿರಂಜನ ಚನ್ನಬಸವಲಿಂಗ ಸನ್ನಿಹಿತ. ॥ ೭೬॥

೭೭

ಆದಿ ಅನಾದಿವಿಡಿದು ಸಾಧಿಸಿಬಂದ ಪರಮರುದ್ರಾಕ್ಷಿಯನು
ಸದಮಲನಾಗಿ ಸರ್ವಾಂಗದಲ್ಲಿ ಧರಿಸಿ,
ಇಹಪರಾನಂದ ಸುಗ್ಗಿಯೊಳು ಸುಖಪಡೆದೆ
ನಿರಂತರ ನಿರಂಜನ ಚನ್ನಬಸವಲಿಂಗ ಸನ್ನಿಹಿತನಾಗಿ. ॥ ೭೭ ॥

೭೮

ಅಯ್ಯಾ, ಮಹದಾನಂದ ಸದ್ಗುರುವಿತ್ತ,
ಪರಮಾಚಾರ ಪರಿಪೂರ್ಣೈಶ್ವರ್ಯವೆಂಬ ಪರಮರುದ್ರಾಕ್ಷಿಯ
ಎಂಟೇಳು ಮಣಿಮಾಲೆಯನು ಲಿಂಗಕ್ಕೆ ಧರಿಸಿ,
ಒಂಬತ್ತು ಮಣಿಮಾಲೆಯನು ಲಿಂಗಕ್ಕೆ ಧರಿಸಿ
ಲಿಂಗಭಕ್ತನಾದೆನಯ್ಯಾ.
ಒಂದೆಂಟು ಮಣಿಮಾಲೆಯ ಲಿಂಗಕ್ಕೆ ಧರಿಸಿ,
ಒಂದೆಂಟು ಮಣಿಯ ಆನು ಧರಿಸಿ ಲಿಂಗಮಹೇಶ್ವರನಾದೆನಯ್ಯಾ.
ಒಂದಾರು ಮಾಲೆಯ ಲಿಂಗಕ್ಕಿತ್ತು,
ಮೂರಾರು ಮಾಲೆಯ ಆನು ಧರಿಸಿ ಶಿವಪ್ರಸಾದಿಯಾದೆನಯ್ಯಾ.
ಒಂದು ನಾಲ್ಕು ಮಾಲೆಯ ಲಿಂಗಕ್ಕಿತ್ತು,
ಹನ್ನೆರಡು ಮಾಲೆಯ ಆನು ಧರಿಸಿ ಪ್ರಾಣಲಿಂಗಿಯಾದೆನಯ್ಯಾ.

ಒಂದು ಮೂರು ಮಾಲೆಯ ಲಿಂಗಕ್ಕಿತ್ತು,
ಆರು ಮೂರು ಮಾಲೆಯ ಆನು ಧರಿಸಿ ಶಿವಶರಣನಾದೆನಯ್ಯಾ.
ಒಂದು ಮೂರು ಮಾಲೆಯ ಲಿಂಗಕ್ಕಿತ್ತು,
ಮೂರು ಮೂರು ಮೂರು ಮಾಲೆಯ ಆನು ಧರಿಸಿ ಲಿಂಗೈಕ್ಯನಾದೆನಯ್ಯಾ.
ಇಂತು ಸರ್ವಾಂಗದಲ್ಲಿ ಧರಿಸಿ
ನಿರಂಜನ ಚನ್ನಬಸವಲಿಂಗಾಂಗಸ್ಥಲಕುಳವನರಿದು
ಸುಖಿಯಾಗಿರ್ದೆನಯ್ಯಾ. ॥ ೨೮ ॥

೨೯

ತನ್ನಿಂದಾದ ಚನ್ನರುದ್ರಾಕ್ಷಿಯನು
ಮುನ್ನ ಧರಿಸಿದ ಮುನಿಜನ ದೇವತಾದಿಗಳೆಲ್ಲ
ಮನ್ನಣೆಯ ಫಲಪದವ ಪಡೆದು ಸುಖಿಯಾಗಿರ್ದರು.
ಮತ್ತೆ ಸಕಲರೊಲಿದು ಧರಿಸಿ ಇಚ್ಛೈಸಿ ಪಡೆವರಗಣಿತ ಸೌಖ್ಯವನು.
ಇಂತಪ್ಪ ಮಹಾಘನ ರುದ್ರಾಕ್ಷಿಯನು
ಹಗಲಿರುಳು ಬಿಡದೆ ಧರಿಸಿ ಪರಮಸುಖಿಯಾಗಿರ್ದೆನು
ನಿರಂಜನ ಚನ್ನಬಸವಲಿಂಗದಲ್ಲಿ. ॥ ೨೯ ॥

೩೦

ಅನಾದಿ ಅಸಮಾಕ್ಷಮಾಲೆಯನುಳಿದು
ಚಿನುಮಯಲಿಂಗವ ಪೂಜಿಸಿದರೆ ನಿಜಪದವಸಾಧ್ಯವಯ್ಯಾ.
ಚಂದ್ರಮೌಳಿಯ ನಯನಜಲಬಿಂದೋದಯ ಮಣಿಮಾಲೆಯನುಳಿದು
ಪಲವು ಮಣಿಮಾಲೆಯಿಂದೆ ಜಪ ಧ್ಯಾನಾನುಷ್ಠಾನವನೆಸಗಿದರೆ
ಶಿವಪದವು ಅಸಾಧ್ಯವಯ್ಯಾ.
ಪರಶಿವನೂರ್ಧ್ವನಿರೀಕ್ಷಣಾನಂದೋದಕ ಮಾಲೆಯನುಳಿದು
ಪರಿಪರಿಯಾಭರಣವ ಧರಿಸಿ
ಗುರುಚಾರ ಭಕ್ತಿದಾಸೋಹವ ನಲಿನಲಿದು ಮಾಡಿದರೆ
ನಿರಂಜನ ಚನ್ನಬಸವಲಿಂಗಕ್ಕೆ ಪರಿಣಾಮವಲ್ಲ ಕಾಣಾ. ॥ ೩೦ ॥

೩೧

ಮೇರುವ ಮಣಿಸಂಬಂಧ ರುದ್ರಾಕ್ಷಿ,
ಸರ್ಪಿನ ತಲೆ ಬಾಲ ತಿರುಪಿ ಕಟ್ಟಿ ಬಂದ ರುದ್ರಾಕ್ಷಿ,
ನಾರಾಯಣನಂಬುಮಾಡಿ ಬಂದ ರುದ್ರಾಕ್ಷಿ,
ಬ್ರಹ್ಮನ ಸಾರಥಿಯನ್ನಿಡಬಂದ ರುದ್ರಾಕ್ಷಿ,

ತ್ರಿಪುರವ ಸಂಹರಿಸಿಬಂದ ರುದ್ರಾಕ್ಷಿ,
ಶಿವ ನಿರೀಕ್ಷಿಸಿ ಬಂದ ಪರಮರುದ್ರಾಕ್ಷಿಯನು
ಎನ್ನ ಸರ್ವಾಂಗದಲ್ಲಿ ಧರಿಸಿ
ನಿರಂಜನ ಚನ್ನಬಸವಲಿಂಗಕೆ ಶರಣು ಶರಣೆನುತಿರ್ದೆನು. || ೮೧ ||

೮೨

ಗುರುನಿರಂಜನ ಪರಮಕಟಾಕ್ಷಮಣಿಯೆನಗೆ
ಸರ್ವಾಚಾರ ಸಂಪತ್ತ ತೋರ ಬಂದುದು ನೋಡಾ.
ಆಚಾರಲಿಂಗವಾಗಿ ಶ್ರದ್ಧಾಭಕ್ತಿಯೊಳು ಸುಖಿಸಿ
ಎನ್ನ ಸುಚಿತ್ತಹಸ್ತವ ಕೊಳಬಂದ ನೋಡಾ.
ಗುರುಲಿಂಗವಾಗಿ ನೈಷ್ಠಿಕಭಕ್ತಿಯೊಳು ಪರಿಣಾಮಿಸಿ
ಎನ್ನ ಸುಬುದ್ಧಿಹಸ್ತವ ಕೊಳಬಂದುದು ನೋಡಾ.
ಶಿವಲಿಂಗವಾಗಿ ಸಾವಧಾನಭಕ್ತಿಯೊಳು ಆನಂದಿಸಿ
ಎನ್ನ ನಿರಹಂಕಾರಹಸ್ತವ ಕೊಳಬಂದುದು ನೋಡಾ.
ಜಂಗಮಲಿಂಗವಾಗಿ ಅನುಭಾವಭಕ್ತಿಯೊಳು ಸಂತೋಷಬಟ್ಟು
ಎನ್ನ ಸುಮನಹಸ್ತವ ಕೊಳಬಂದುದು ನೋಡಾ.
ಪ್ರಸಾದಲಿಂಗವಾಗಿ ಆನಂದಭಕ್ತಿಯೊಳು ಹರುಷಬಟ್ಟು
ಎನ್ನ ಸುಜ್ಞಾನಹಸ್ತವ ಕೊಳಬಂದುದು ನೋಡಾ.
ಮಹಾಲಿಂಗವಾಗಿ ಸಮರಸಭಕ್ತಿಯೊಳು ತೃಪ್ತಿಬಟ್ಟು
ಎನ್ನ ಸದ್ಭಾವಹಸ್ತವ ಕೊಳಬಂದುದು ನೋಡಾ.
ಇಂತು ಷಡುಲಿಂಗವಾಗಿ ಷಟ್‌ಸ್ಥಲವನ್ನಿತ್ತು
ಷಡುಭಕ್ತಿಯೊಳಾನಂದಿಸಿ
ನಿರಂಜನ ಚನ್ನಬಸವಲಿಂಗ ಸಂಬಂಧಿಯೆನಿಸಬಂದುದು ನೋಡಾ. || ೮೨ ||

೮೩

ಸುಜ್ಞಾನಸ್ವರೂಪ ಶಿಷ್ಯನ ಮುಂದೆ ತೋರುವ
ಪರಮಶಾಂತ ಪರಿಪೂರ್ಣಯ್ಯನಿಂದ,
ಘನಮಹದೈಶ್ವರ್ಯ ಕರುಣಕಟಾಕ್ಷವೆಂಬ ಚಿದ್ರುದ್ರಾಕ್ಷಿಯು
ಸಗುಣ ನಿರ್ಗುಣ ನಿಜ ಸಮರಸಾನಂದದೊಳಗೆಸಗೆಗೈದ ಬಳಿಕ,
ಆನು ಅನ್ಯವಾದಾಭರಣಂಗಳನರಿಯದೆ
ಅಪ್ರತಿಮಲಿಂಗಸನ್ನಿಹಿತನಾಗಿರ್ದ.
ಕರದ್ವಂದ್ವ, ದ್ವಯತೋಳು, ಉರ, ಶಿಖೆಯು, ಮಸ್ತಕ, ಕರ್ಣದಲ್ಲಿ ಧರಿಸಿ

ಗುರುನಿರಂಜನ ಚನ್ನಬಸವಲಿಂಗದಲ್ಲಿ
ಪರಮಪರಿಣಾಮದಲ್ಲಿ ಓಲಾಡುತಿರ್ದೆನು. || ೮೩ ||

೮೪

ಮಾಟದೊಳು ಮರೆದರಿಯದಂದು
ಚಿರಹೃದಯದಿಂದೊಡೆದು ಮೂಡಿ,
ಪರಿಭವಂಗಳ ಹರಿದ ಇರವರಿಸಬೇಕೆಂದು
ಪರಮಪಾವನ ಗುರುಕರುಣಾಮೃತವಾಗಿ ಬಂದ
ಚಿದ್ರುದ್ರಾಕ್ಷಿಯನೊಲಿದು ನಲಿನಲಿದು ಧರಿಸಿ,
ಮಲಮಾಯಾಮದಕರ್ಮಶೂನ್ಯನಾದೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೮೪ ||

## ಪಂಚಾಕ್ಷರಿಸ್ಥಲ

ಸೂತ್ರ : ಇಂತು ಗುರುಕಾರುಣ್ಯವಾದ ಶರಣನು ಲಿಂಗಧಾರಣವಾಗಿ ವಿಭೂತಿಯನು ಧರಿಸಿ, ರುದ್ರಾಕ್ಷಿಯನು ಧರಿಸಿ, ಪಂಚಾಕ್ಷರಿಯ ಜಪಿಸಬೇಕಾದ ಕಾರಣ ಮುಂದೆ ಪಂಚಾಕ್ಷರಿಸ್ಥಲವಾದುದು.

೮೫

ಸತ್ತುಚಿತ್ತಾನಂದ ನಿತ್ಯಪರಿಪೂರ್ಣ ಅಖಂಡವೆಂಬ
ಅವಿರಳ ಪರಶಿವನ ನಾಮಾಮೃತವನು
ಹಗಲಿರುಳೆನ್ನದೆ ಸೇವಿಸಿ ಸುಖಿಶರಧಿಯೊಳೋಲಾಡುತಿರ್ದೆನು
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತನಾಗಿ. || ೮೫ ||

೮೬

ಮೂರ್ತಿಬ್ರಹ್ಮ, ಪಿಂಡಬ್ರಹ್ಮ, ಕಲಾಬ್ರಹ್ಮ, ಆನಂದಬ್ರಹ್ಮ,
ವಿಜ್ಞಾನಬ್ರಹ್ಮ, ಪರಬ್ರಹ್ಮಸ್ವರೂಪವಾದ ಷಟ್ಪ್ರಣಮವನು
ಅಂಗ, ಆತ್ಮ, ಪ್ರಾಣ, ಕರಣ, ವಿಷಯತೃಪ್ತಿಸಂಬಂಧವೆಂದು
ಎನ್ನ ಮನದ ಕೊನೆಯಲ್ಲಿ ಮಡುಗಿ,
ಮರೆಯದವಧರಿಸೆಂದುಪದೇಶವಿತ್ತ
ಮಹಾಘನ ಗಂಭೀರ ಸದ್ಗುರುನಾಥನ ಪ್ರಸಾದವನು
ಪರಲಿಂಗದವಿರಳಕ್ರಿಯೆಯಿಂದೆ ಅವಧರಿಸಿ
ಮುಖದಿಂ ಸೇವಿಸಿ, ಬಾಹ್ಯಾಂತಸುಖಿಯಾಗಿರ್ದೆನು
ನಿರಂಜನ ಚನ್ನಬಸವಲಿಂಗ ಸನ್ನಿಹಿತನಾಗಿ. || ೮೬ ||

೮೭

ಎನ್ನಾಧಾರಚಕ್ರದಲ್ಲಿ ನಕಾರ ಪಂಚಾಕ್ಷರಸ್ವರೂಪವಾದ
ಆಚಾರಲಿಂಗವ ಕಂಡು ಉಚ್ಚರಿಸುತಿರ್ದೆನು.
ಎನ್ನ ಸ್ವಾಧಿಷ್ಠಾನಚಕ್ರದಲ್ಲಿ ಮಕಾರ ಪಂಚಾಕ್ಷರಸ್ವರೂಪವಾದ
ಗುರುಲಿಂಗವ ಕಂಡು ಉಚ್ಚರಿಸುತಿರ್ದೆನು.
ಎನ್ನ ಮಣಿಪೂರಕಚಕ್ರದಲ್ಲಿ ಶಿಕಾರ ಪಂಚಾಕ್ಷರಸ್ವರೂಪವಾದ
ಶಿವಲಿಂಗವ ಕಂಡು ಉಚ್ಚರಿಸುತಿರ್ದೆನು.
ಎನ್ನ ಅನಾಹತಚಕ್ರದಲ್ಲಿ ವಾಕಾರ ಪಂಚಾಕ್ಷರಸ್ವರೂಪವಾದ
ಜಂಗಮಲಿಂಗವ ಕಂಡು ಉಚ್ಚರಿಸುತಿರ್ದೆನು.
ಎನ್ನ ವಿಶುದ್ಧಿಚಕ್ರದಲ್ಲಿ ಯಕಾರ ಪಂಚಾಕ್ಷರಸ್ವರೂಪವಾದ
ಪ್ರಸಾದಲಿಂಗವ ಕಂಡು ಉಚ್ಚರಿಸುತಿರ್ದೆನು.
ಎನ್ನ ಆಜ್ಞಾಚಕ್ರದಲ್ಲಿ ಓಂಕಾರ ಪಂಚಾಕ್ಷರಸ್ವರೂಪವಾದ
ಮಹಾಲಿಂಗವ ಕಂಡು ಉಚ್ಚರಿಸುತಿರ್ದೆನು.
ಎನ್ನ ಸರ್ವಾಂಗದಲ್ಲಿ ಷಡಕ್ಷರಸ್ವರೂಪವಾದ
ಗುರುನಿರಂಜನ ಚನ್ನಬಸವಲಿಂಗವ ಕಂಡು
ಉಚ್ಚರಿಸುತಿರ್ದೆನು ನಿತ್ಯವಾಗಿ. || ೮೭ ||

೮೮

ಗುರುಮುಖದಿಂದುದಯವಾಗಿ ಬಂದ ಪ್ರಣವಾದಿ ಪಂಚಾಕ್ಷರವನು,
ತನು ಮನ ಭಾವವಿರಹಿತನಾಗಿ ನೆನಹು ನಿಂದರೆ
ಚಿನುಮಯ ಪರಶಿವಲಿಂಗ ತಾನೆ ಬೇರಿಲ್ಲ
ನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. || ೮೮ ||

೮೯

ಅಯ್ಯಾ, ಎನ್ನ ಸಂಚಿತಕರ್ಮದಿಂದುಲಿವ
ಆಣವಮಲಸಂಬಂಧವ ತೊಳೆದು,
ಇಷ್ಟಲಿಂಗ ಸಂಬಂಧವ ಮಾಡಿ
ಕ್ರಿಯಾಚಾರಸುಖಿಯೆನಿಸಿತ್ತು ನೋಡಾ ಪಂಚಾಕ್ಷರಿ.
ಅಯ್ಯಾ, ಎನ್ನ ಪ್ರಾರಬ್ಧಕರ್ಮದಿಂದುಲಿವ
ಮಾಯಾಮಲಸಂಬಂಧವ ತೊಳೆದು,
ಪ್ರಾಣಲಿಂಗಸಂಬಂಧವ ಮಾಡಿ
ಜ್ಞಾನಾಚಾರಸುಖಿಯೆನಿಸಿತ್ತು ನೋಡಾ ಪಂಚಾಕ್ಷರಿ.

ಅಯ್ಯಾ, ಎನ್ನ ಆಗಾಮಿಕರ್ಮದಿಂದುಲಿವ
ಕಾರ್ಮಿಕಮಲಸಂಬಂಧವ ತೊಳೆದು
ಭಾವಲಿಂಗಸಂಬಂಧವ ಮಾಡಿ
ಭಾವಾಚಾರಸುಖಿಯೆನಿಸಿತ್ತು ನೋಡಾ ಪಂಚಾಕ್ಷರಿ.
ಇಂತು ಎನ್ನಂಗ ಮನ ಪ್ರಾಣದಲ್ಲಿ ಲಿಂಗಸಂಬಂಧಿಯೆನಿಸಿ
ಭಾವ ತುಂಬಿ ನಿರಂಜನ ಚನ್ನಬಸವಲಿಂಗದಲ್ಲಿ
ಪರಮಪರಿಣಾಮವ ತೋರಿತ್ತು ನಿರಂತರ ನೋಡಾ ಪಂಚಾಕ್ಷರಿ. ‖ ೮೯ ‖

೯೦

ಕತ್ತಲೆಯ ಕಳೆದುಳಿಸಿಕೊಳಬಲ್ಲ ಪಂಚಾಕ್ಷರಿಯನುಳಿದು
ಕುಟಿಲ ಮಂತ್ರ ಯಂತ್ರಗಳ ಕಲಿತು,
ಗ್ರಾಸಕ್ಕೆ ತಿರುಗಿ ಹಿರಿಯರೆನಿಸಿ ಪರಿಭವವ ಕಾಣುವ
ನರಕಿಗಳನೆಂತು ಗುರುಕರಜಾತರೆನ್ನಬಹುದು ?
ಎಂತು ಲಿಂಗಸುಖಿಗಳೆನ್ನಬಹುದು ? ‖ ೯೦ ‖

೯೧

ಗುರುವಿನಿಂದುದಯವಾಗಿ ಕರಸ್ಥಲಕ್ಕೆ ಲಿಂಗವ ಪಡೆದು,
ಕರ್ಣದಲ್ಲಿ ಪರಮಪಂಚಾಕ್ಷರವ ತುಂಬಿ,
ಮುಖದಲ್ಲಿ ಉಚ್ಚರಿಸಿದ ಬಳಿಕ, ಮಂತ್ರಮೂರ್ತಿಯಾಗಿರಬೇಕಲ್ಲದೆ,
ಹುಸಿ, ದಿಟ, ರುಚಿ, ಅರುಚಿ, ಕುಯುಕ್ತವಾಕ್ಕು ದೋಷವರ್ತನೆಯುಳ್ಳಡೆ
ಅಷ್ಟಾವರಣ ಪಂಚಾಚಾರಕ್ಕೆ ವಿಹೀನವಾಗಿ ಅಧೋಗತಿಗಿಳಿವನು
ನಿರಂಜನ ಚನ್ನಬಸವಲಿಂಗವನರಿಯದೆ. ‖ ೯೧ ‖

೯೨

ಪಂಚಾಕ್ಷರಸಂಬಂಧವಾದ ನಿಜಾನಂದ ಶರಣ
ಗಜಬಜೆಯ ಗೋಷ್ಠಿಗಳನೊಮ್ಮೆ ತೋರ.
ಅದೇನು ಕಾರಣವೆಂದೊಡೆ :
ಆತನ ಜಿಹ್ವೆ ಪಂಚಾಕ್ಷರವ ನೆನೆದು ಪಂಚಲಿಂಗಸಂಬಂಧವಾದ ಕಾರಣ
ಸಕಲ ತತ್ವಾತತ್ವಂಗಳೆಲ್ಲ ಲಿಂಗಮಯವಾಗಿ ಕಾಣುತಿರ್ದುದು :
ಇತರ ನುಡಿಯನರಿಯದಿರ್ದ ನಿರಂಜನ ಚನ್ನಬಸವಲಿಂಗದಲ್ಲಿ. ‖ ೯೨ ‖

೯೩

ಮಡಿಕೆ ಮಣ್ಣಾಗಲರಿಯದು, ಪಟ್ಟಿ ಕಾಷ್ಠವಾಗಲರಿಯದು,
ಮುತ್ತು ನೀರಾಗಲರಿಯದು, ಸತ್ಯ ಗುರುವಿನಿಂದುಪದೇಶವಪಡೆದ

ನಿತ್ಯ ಶರಣನ ಜಿಹ್ವೆ ಪ್ರಸಾದ ಮಂತ್ರವಾಗಿರ್ದು ಉಚ್ಛಿಷ್ಟವಾಗಲರಿಯದು
ನಿರಂಜನ ಚನ್ನಬಸವಲಿಂಗಾ. || ೯೩ ||

೯೪

ಶ್ವಾನಮುಟ್ಟಿದ ಪಾಕ ನೈವೇದ್ಯಕ್ಕೆ ಬಾರದು,
ಬಚ್ಚಲಕೆ ಬಿದ್ದುದಕ ಬಳಕೆಗೆ ಬಾರದು,
ಮೃತದೇಹ ಕ್ರಿಯಕ್ಕೆ ಬಾರದು,
ಪರಮಜ್ಞಾನೋಪದೇಶವಾದವರೆಂದು
ಬಾಯಿಗೆ ಬಂದಂತೆ ತಿಂದು ದುರ್ವಾಕ್ಯ ಮುಂದುಗೊಂಡು ನಡೆದು
ದುರ್ಗತಿಯನುಂಬ ದುರಾಚಾರಿಗಳು
ಶ್ರೀ ಮಹಾಘನ ಪಂಚಾಕ್ಷರವೆಂಬ ಸತ್ಕ್ರಿಯೆಗೆ ಸಲ್ಲರು
ಗುರುನಿರಂಜನ ಚನ್ನಬಸವಲಿಂಗದಲ್ಲಿ ಅನಾದಿ ಅಂಶಿಕರಲ್ಲದವರಿಗೆ. || ೯೪ ||

೯೫

ಪಂಚಾಕ್ಷರವೇ ಪರಮಾಮೃತವೆಂದು ಕರ್ಣದ್ವಾರದಲ್ಲಿ ಕೊಂಡು
ಜಿಹ್ವೆ ಮನಕ್ಕೆ ಸಂಬಂಧವಾಯಿತ್ತೆಂದು ಹೇಳಿಕೊಂಡ ಬಳಿಕ
ಹುಸಿ ನುಡಿ ದುರ್ವಾಕ್ಯದಿಂದೆ ಮನ ಹೆಚ್ಚಿ ನಡೆದರೆ
ಆತನ ನಡೆಗೆ ವೈತರಣಿಯೇ ಗತಿ.
ಆತನ ನುಡಿ ಅಘೋಶಬ್ದ, ಆತನ ಮನ ಕಾಡ ಕಿರಾತ.
ಇಂತಪ್ಪ ಭವಿಗಳ ಹೃದಯಕ್ಕೂ
ಗುರುನಿರಂಜನ ಚನ್ನಬಸಲಿಂಗಕ್ಕೂ ಇರುಳು ಹಗಲು. || ೯೫ ||

೯೬

ಪಂಚಾಕ್ಷರವೆ ಪ್ರಾಣವಾಗಿರ್ದ ಪರಮ ಶಿವಭಕ್ತಲಿಂಗಮಹೇಶ್ವರರುಗಳಿಗೆ
ಬೆರಸವಿರಹಿತನಡೆ, ಬೆರಸವಿರಹಿತನುಡಿ, ಬೆರಸವಿರಹಿತ ನೋಡಾ.
ಬೆರಸವಿರಹಿತನಾಗಿ ಗುರುನಿರಂಜನ ಚನ್ನಬಸವನಲ್ಲಿ ಸದಾಸನ್ನಿಹಿತ. || ೯೬ ||

೯೭

ಅಯ್ಯಾ, ಎನ್ನ ಕರಸ್ಥಲದಲ್ಲಿ ಲಿಂಗವು.
ಎನ್ನ ಪ್ರಾಣಸ್ಥಲದಲ್ಲಿ ರುದ್ರಾಕ್ಷಿ,
ಎನ್ನ ಭಾವಸ್ಥಲದಲ್ಲಿ ಭಸಿತವು,
ಎನ್ನ ಅರುಹಿನ ಸ್ಥಲದಲ್ಲಿ ಪ್ರಸಾದ,
ಎನ್ನ ಜ್ಞಾನದ ಸ್ಥಲದಲ್ಲಿ ಪಾದೋದಕವು,

ಎನ್ನ ಮನದ ಸ್ಥಲದಲ್ಲಿ ಪಂಚಾಕ್ಷರಿ ಸಂಯುಕ್ತವಾಗಿ,
ಗುರುನಿರಂಜನ ಚನ್ನಬಸವಲಿಂಗಜಂಗಮಕ್ಕೆ
ನಮೋ ನಮೋ ಎನುತಿರ್ದೆನು. || ೯೭ ||

೯೮

ಅಯ್ಯಾ, ಎನ್ನ ಪರಮ ಗುರುಕರುಣದಿಂದೆ
ಪರಮೇಕಲಿಂಗವೆನ್ನ ಆಚಾರಾಂಗದ ಮೇಲೆ ಆಯುತವಾಯಿತ್ತು.
ಅಯ್ಯಾ, ಎನ್ನ ನಿರ್ಮಲ ಮನದ ಮೇಲೆ
ಪ್ರಾಣಲಿಂಗ ಸ್ವಾಯತವಾಯಿತ್ತು.
ಅಯ್ಯಾ, ಎನ್ನ ಸದ್ಭಾವದ ಮೇಲೆ
ಭಾವಲಿಂಗ ಸನ್ನಿಹಿತವಾಯಿತ್ತು.
ಅಯ್ಯಾ, ಎನ್ನ ಸರ್ವಾಂಗದಲ್ಲಿ
ಷಡಕ್ಷರ ಬೆಳಗುತ ಮಹಾಶೂನ್ಯವಾಗಿರ್ದುದು
ನಿರಂತರ ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೯೮ ||

೯೯

ಪರಶಿವನಾಮಾಮೃತವೆಂಬ ಪಂಚಾಕ್ಷರವನು
ಅವ್ಯಕ್ತಮುಖದಿಂದೆ ಸ್ವೀಕರಿಸಿದೆನಾಗಿ,
ಎನ್ನ ಘ್ರಾಣದಲ್ಲಿ ಆಚಾರಲಿಂಗವಾಗಿ ತೋರುತಿರ್ಪುದು.
ಎನ್ನ ಜಿಹ್ವೆಯಲ್ಲಿ ಗುರುಲಿಂಗವಾಗಿ ತೋರುತಿರ್ಪುದು.
ಎನ್ನ ನೇತ್ರದಲ್ಲಿ ಶಿವಲಿಂಗವಾಗಿ ತೋರುತಿರ್ಪುದು.
ಎನ್ನ ತ್ವಕ್ಕಿನಲ್ಲಿ ಜಂಗಮಲಿಂಗವಾಗಿ ತೋರುತಿರ್ಪುದು.
ಎನ್ನ ಶ್ರೋತ್ರದಲ್ಲಿ ಪ್ರಸಾದಲಿಂಗವಾಗಿ ತೋರುತಿರ್ಪುದು.
ಎನ್ನ ಹೃದಯದಲ್ಲಿ ಮಹಾಲಿಂಗವಾಗಿ ತೋರುತಿರ್ಪುದು.
ಎನ್ನ ಬ್ರಹ್ಮಸ್ಥಾನದಲ್ಲಿ ನಿಷ್ಕಲಲಿಂಗವಾಗಿ ತೋರುತಿರ್ಪುದು.
ಎನ್ನ ಶಿಖಾಗ್ರದಲ್ಲಿ ನಿಶ್ಶೂನ್ಯಲಿಂಗವಾಗಿ ತೋರುತಿರ್ಪುದು.
ಎನ್ನ ಪಶ್ಚಿಮದಲ್ಲಿ ನಿರಂಜನಲಿಂಗವಾಗಿ ತೋರುತಿರ್ಪುದು.
ಎನ್ನ ಸರ್ವಾಂಗದಲ್ಲಿ ತೋರಿ ತನ್ನಂತೆ ಮಾಡಿಕೊಂಡಿರ್ಪುದು
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೯೯ ||

೧೦೦

ಪಂಚಾಕ್ಷರಿಯ ಧ್ಯಾನದಿಂದೆ ಪಂಚಭೂತಪ್ರಕೃತಿಯನರಿಯದಿರ್ದೆ.
ಪಂಚಾಕ್ಷರಿಯ ನೆನಹಿನಿಂದೆ ಪಂಚೇಂದ್ರಿಯಪ್ರಕೃತಿಯನರಿಯದಿರ್ದೆ.

ಪಂಚಾಕ್ಷರಿಯ ಧ್ಯಾನದಿಂದೆ ಪಂಚವಿಷಯಪ್ರಕೃತಿಯನರಿಯದಿರ್ದೆ.
ಪಂಚಾಕ್ಷರಿಯ ಸ್ಮರಣೆಯಿಂದೆ ಪಂಚಕರಣಪ್ರಕೃತಿಯನರಿಯದಿರ್ದೆ.
ಪಂಚಾಕ್ಷರಿಯ ಮನನದಿಂದೆ ಪಂಚಪ್ರಾಣವಾಯುವಿನ ಪ್ರಕೃತಿಯನರಿಯದಿರ್ದೆ.
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಪಂಚಾಕ್ಷರಿಯ ನಿರ್ಧಾರದಿಂದೆ ಪರಮಸುಖಿಯಾಗಿರ್ದೆನು. ॥ ೧೦೦ ॥

೧೦೧

ಅಯ್ಯಾ, ನಿನ್ನ ನಾಮಧ್ಯಾನಸುಖದಿಂದೆ ಮತ್ತೇನು ಅರಿಯೆನಯ್ಯಾ.
ಅದೇನು ಕಾರಣವೆಂದಡೆ, ಎನ್ನ ಹೃದಯದಲ್ಲಿ ನೆಲೆಸಿರ್ಪ ಸಕಲನಿಃಕಲದಲ್ಲಿ
ಮಹದೈಶ್ವರ್ಯವಾಗಿ ಆನಂದಪ್ರಕಾಶಮಯವಾಗಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ ತೆರಹಿಲ್ಲದೆ
ಪರಿಣಾಮವ ತೋರುತಿರ್ಪುದು. ॥ ೧೦೧ ॥

## ಭಕ್ತಸ್ಥಲ

ಸೂತ್ರ : ಇಂತು ಶಿವಾಂಶಿಕನಾದಾತ್ಮನು ಸುಜ್ಞಾನೋದಯವಾಗಿ ಸಕಲವನಳಿದು ಗುರುಕಾರುಣ್ಯವಾಗಿ ಇಷ್ಟಲಿಂಗವಪಡೆದುಕೊಂಡು, ವಿಭೂತಿ, ರುದ್ರಾಕ್ಷಿ ಧರಿಸಿಕೊಂಡು, ಪ್ರಣವ ಪಂಚಾಕ್ಷರವನಂತರ್ಬಾಹ್ಯ ಭರಿತನಾಗಿ, ಸರ್ವಾಚಾರಸಂಪತ್ತೆಂಬ ಮಹದೈಶ್ವರ್ಯ ಮುಂತಾಗಿ ತನ್ನ ಚಿನ್ನಾದ ಸ್ವರೂಪವಾದ ಸದ್ಗುರು ಚಿತ್ಕಲಾ ಸ್ವರೂಪವಾದ ಮಹಾನುಭಾವಜಂಗಮಕ್ಕೆ ಚಿದ್ಬಿಂದು ಸ್ವರೂಪವಾದ ಲಿಂಗ ಸನ್ನಿಹಿತವಾಗಿ ಚಿದಾನಂದಶ್ರದ್ಧೆಯುಕ್ತವಾಗಿ ಭಕ್ತಿಯ ಮಾಡಿದಲ್ಲಿ ಭಕ್ತಸ್ಥಲವೆಂದು ಹೇಳಲಾಯಿತು.

೧೦೨

ಘಟಿತ ನನೆಯನಂತರ ಪರಿಮಳ ವಿಕಸನಮುಖದಿಂದೆ ಪ್ರಬಲಿಸುವಂತೆ,
ಸ್ವಾನುಭಾವಸೂತ್ರವರಿದ ಜ್ಞಾನಕಲಾತ್ಮನು
ಕಳೆದು ಕಂಡ ಕಾಣಬಾರದ ಕುರುಹ ಒಂದಿಸಿ ಕೂಡಿಕೊಂಡು
ಹಿಡಿದು ನಡೆದುಂಬ ನವೀನದ ಬೆಳಗು ನೀನೆ
ಗುರುನಿರಂಜನ ಚನ್ನಬಸವಲಿಂಗಾ. ॥ ೧೦೨ ॥

೧೦೩

ನಾದ ಬಿಂದು ಕಳೆಯ ಕಾಣಿಕೆಯನಿತ್ತು ಕರುಣವ ಪಡೆದುಕೊಂಡು,
ಅಂಗೈಯ ಚಾಚಲು ಕಂಗಳಗೂಡಿ ಸಂಗಸಮರಸಕ್ಕಿಂಬು ಹೇಳಿ,
ನಡೆಸಿದ ತನ್ನಿಂದೆನ್ನ ಭಕ್ತಿಯ ಬೆಳಗಿನೊಳು ತಾನೇ ತಾನು
ಗುರುನಿರಂಜನ ಚನ್ನಬಸವಲಿಂಗ. ॥ ೧೦೩ ॥

೧೦೪

ಸ್ವಯಾನಂದ ಪರಬ್ರಹ್ಮವೆ ಆನು ಬಂದೆನಯ್ಯಾ
ನೀನೆಂಬ ಕುಶಲಗತಿಗತಿಶಯವಾಗಿ,
ಅವಧಾರಯ್ಯಾ ಸತ್ತುಚಿತ್ತಾನಂದ ಮೂರ್ತಿಯೇ
ಸ್ಥೂಲ ಸೂಕ್ಷ್ಮ ಕಾರಣವ ನೋಡಯ್ಯಾ.
ಎನ್ನ ಸ್ಥೂಲಾಂಗದ ಸೌಖ್ಯವನು ಕೊಳ್ಳಯ್ಯಾ
ಎನ್ನ ಸದ್ರೂಪಸ್ವರೂಪವಾದ ಗುರುವೆ.
ಎನ್ನ ಸೂಕ್ಷ್ಮಾಂಗದ ಸುಲಲಿತಸುಖವ ಕೊಳ್ಳಯ್ಯಾ
ಎನ್ನ ಚಿನ್ಮಾದಸ್ವರೂಪವಾದ ಲಿಂಗವೆ.
ಎನ್ನ ಕಾರಣಾಂಗದ ತೃಪ್ತಿ ತನಿರಸವ ಕೊಳ್ಳಯ್ಯಾ
ಎನ್ನ ಆನಂದಸ್ವರೂಪವಾದ ಮಹಾನುಭಾವ ಜಂಗಮವೆ.
ಒಂದೆರಡಾಟವನಾಡುವ ಬಾರಯ್ಯ ಸರಿಯಾಗಿ
ಗುರುನಿರಂಜನ ಚನ್ನಬಸವಲಿಂಗಾ. ॥ ೧೦೪ ॥

೧೦೫

ಕಾಣಬಾರದ ಲಿಂಗ ಕಣ್ಣಮುಂದೆ ಬಂದಲ್ಲಿ
ಮಾಣಬಾರದ ಭಕ್ತಿಯ ಮಾಡುವುದೇ ಲೇಸು.
ನಡೆಯಿಲ್ಲದ ಲಿಂಗ ನಡೆದುಬಂದಲ್ಲಿ
ಒಡವೆರೆದು ಕೊಟ್ಟು ಕೊಂಡು ಭಕ್ತಿಯ ಮಾಡುವುದೇ ಸಹಜ.
ನುಡಿಯಿಲ್ಲದ ಲಿಂಗ ನುಡಿದು ಬಂದಲ್ಲಿ
ಬಡಿವಾರನುಳಿದು ಬಾಗಿ ಕಡವರ ಕಂಡ ಬಡವನಂತೆ
ಮುಡಿಯಿಕ್ಕಿ ಮುಂಬರಿದು ಭಕ್ತಿಯ ಮಾಡುವುದೇ ಸತ್ಯ.
ಇಂತು, ಗುರುಲಿಂಗಜಂಗಮವ ಕಂಡು ಕಂಡು ಕಾಣದೆ ಮಾಡುವುದು
ಬೇರಿಲ್ಲ ತಾನೇ ಗುರುನಿರಂಜನ ಚನ್ನಬಸವಲಿಂಗಾ. ॥ ೧೦೫ ॥

೧೦೬

ತನು ಇಂಪುಗೊಂಡು ಮನ ಭಾವ ಬೆಚ್ಚಿ ಮುಂದುವರಿದು ಮಾಡಲು
ಭಕ್ತಿರಸ ಮನ ಸೊಂಪುಗೊಂಡು
ಭಾವ ತನು ಕರಗಿ ಮಚ್ಚುಗೊಂಡು ಮಾಡಲು
ಭಕ್ತಿಯ ಮಧುರಭಾವ ತರಹರಗೊಂಡು
ತನು ಮನ ತುಂಬಿ ಕಂಗಳರತಿ ಕಡೆಗುಕ್ಕಿಮಾಡಲು ಭಕ್ತಿಯ ಸೌಖ್ಯ.
ಇಂತು ಶ್ರದ್ಧೆ ಸಾವಧಾನಾನಂದವೆಂತೆಂಬ

ಭಕ್ತಿತ್ರಯದ ಬೆಳೆಯೊಳಗೊಪ್ಪುತಿರ್ದ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಭಕ್ತ. || ೧೦೬ ||

೧೦೭

ಆಕಾರ ನಿರಾಕಾರವಾಗಿ ಸಾಕಾರ ಸನ್ನಿಹಿತನಾದ
ಸದಮಲಶರಣನ ಪರಮಶಾಂತಿಯ
ಮುಂದೆ-ಹಿಂದೆ, ಬಲ-ಎಡ, ಮೇಲೆ-ಕೆಳಗೆ, ಕಿಕ್ಕಿಂದವಾಗಿ
ನಿರಾಕಾರಭಕ್ತಿ ಸಾಕಾರಸದಾನಂದವಾಗಿ, ಉಲಿ ಉಲಿದಾಡುತಿರ್ದಿತ್ತು,
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ. || ೧೦೭ ||

೧೦೮

ಪೃಥ್ವಿಯೇ ಅಂಗವಾದ ಭಕ್ತನು ಎಲ್ಲಕ್ಕೂ ತಾನೇ ಆಶ್ರಯವಾಗಿಹನು.
ತನ್ನಂಗ ಪ್ರಾಣ ಜ್ಞಾನ ಕಳೆವರರಾದ ಗುರುಲಿಂಗಜಂಗಮಕ್ಕೆ ತಾನಲ್ಲದೆ,
ಇತರೇತರವಾದ ಬಹುಜನಾದಿಗಳಿಗೆ
ನಡೆ ನುಡಿ ನೋಟಕ್ಕಗಣಿತ ಅಗಮ್ಯವಾಗಿರಿಸಿಹನು.
ಗುರುನಿರಂಜನ ಚನ್ನಬಸವಲಿಂಗವನರಿವುದಕ್ಕೆ ಆದಿ ತಾನೆ. || ೧೦೮ ||

೧೦೯

ಆದಿಗುರುವನಪ್ಪಿ ಮಾಡುವ ಭಕ್ತಿ ಅಂಗ ಆಪ್ತ ಸ್ಥಾನ ಸದ್ಭಾವವೆನಿಪ
ಚತುರ್ವಿಧಭಕ್ತಿ ದಿವ್ಯಪ್ರಕಾಶಮಯವಾಗಿ ತೋರುತಿಪ್ಪುದು.
ಅನಾದಿಪರಶಿವಲಿಂಗವನಪ್ಪಿ ಮಾಡುವ ಮಂತ್ರ ಧ್ಯಾನ ಜಪ ಸ್ತೋತ್ರವೆನಿಪ
ಚತುರ್ವಿಧಭಕ್ತಿ ಘನಪ್ರಕಾಶಮಯವಾಗಿ ತೋರುತಿಪ್ಪುದು.
ನಿರಂಜನ ಜಂಗಮವನಪ್ಪಿ ಮಾಡುವ ಕನಕ,
ಖಟ್ವಾಂಗಾದಿ ಹದಿನೆಂಟು,
ಮಹಾಘನಪ್ರಕಾಶಮಯವಾಗಿ ತೋರುತಿಪ್ಪುದು.
ಇಂತು ತನ್ನ ಗುರುಲಿಂಗಜಂಗಮಕ್ಕೆ ತನ್ನ ತಾ ಭಕ್ತಿಯ ಭಿನ್ನವಳಿದುಳಿದು
ಭಿನ್ನವಾಗಿ ಮಾಡುತಿರ್ದನು ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ. ||೧೦೯||

೧೧೦

ಗುರು ಶಿಷ್ಯ, ಲಿಂಗ ಭಕ್ತ, ಜಂಗಮ ಶರಣ, ಭಾವದಂಗವರಿಯಬಂದ
ನಿಜಾನಂದ ನಿಲವಿಗೆ ನಾನರಿದರಿದಾನಂದಮುಖನಾಗಿಹೆನು.
ಕಾಯವರಿಯದು ಮನವರಿಯದು ಪ್ರಾಣವರಿಯದು ಭಾವವರಿಯದು
ನಡೆ ನುಡಿ ನೋಟವರಿಯವು
ಗುರುನಿರಂಜನ ಚನ್ನಬಸವಲಿಂಗ ನೀನಲ್ಲದೆ. || ೧೧೦ ||

೧೧೧

ಎನ್ನ ಕಾಲು ನಡೆಶೃಂಗರಿಸುತಿರ್ದವು,
ಎನ್ನ ಜಿಹ್ವೆ ನುಡಿಶೃಂಗರಿಸುತಿರ್ದುದು.
ಎನ್ನ ಕಂಗಳು ನೋಟಶೃಂಗರಿಸುತಿರ್ದವು.
ಎನ್ನ ಕರ್ಣ ಆಲಿಸಲನುಗೈಯುತಿರ್ದವು.
ಎನ್ನ ನಾಸಿಕ ಭಕ್ತಿವಾಸನೆಯ ಶೃಂಗರಿಸುತಿರ್ದುದು.
ಎನ್ನ ತ್ವಕ್ಕು ಸೇವಾನುಕೂಲಿಗೆ ಶೃಂಗರಿಸುತಿರ್ದುದು.
ಎನ್ನ ಭಾವ ಸಮರಸಾನಂದಸುಖವ ಕೊಂಬುವುದಕ್ಕೆ ಶೃಂಗರಿಸುತಿರ್ದುದು
ಗುರುನಿರಂಜನ ಚನ್ನಬಸವಲಿಂಗವೆಂಬ
ಗುರುಲಿಂಗ ಜಂಗಮಕ್ಕೆ ನಿರಂತರ. ॥ ೧೧೧ ॥

೧೧೨

ಕಂಗಳು ಬದುಕುತಲಿರ್ದವು ನಿಮ್ಮ ರೂಪವ ಕಾಣಲು.
ಕರ್ಣವಾಲಿಸಿ ಸುಯ್ಗರೆಯುತಿರ್ದವು
ನಿಮ್ಮ ನುಡಿಯನಾಲಿಸೆ.
ಹಸ್ತಂಗಳು, ನಿಮ್ಮ ಉಪಚಾರಕ್ಕೆಳಸಿ ಕಳವಳಿಸುತಿರ್ದವು
ಚರಣಗಳುಲಿದು ಹೆಜ್ಜೆದುಡುಕುತಿರ್ದವು ನಿಮ್ಮ ಬರವ ಭಾವಿಸುತ.
ಹೃದಯ ವಿಕಸನವಾಗಿ ಮುಂಬಾಗುತಿದೆ
ನಿಮ್ಮ ಸತ್ಕ್ರಿಯೆ ಸಮರಸಸುಖವನಿಚ್ಛೈಸಿ-
ಗುರುನಿರಂಜನ ಚನ್ನಬಸವಲಿಂಗ,
ನಿಮ್ಮ ಬರವಿಂಗೆ ಸದ್ಭಕ್ತನವಯವಂಗಳು. ॥ ೧೧೨ ॥

೧೧೩

ಮಹಾಘನ ಗಂಭೀರ ಗುರುವಿನಿಂದುದಯವಾದ ಚಿದಾನಂದ ಭಕ್ತನು,
ಸತ್ಯಕಾಯಕದಿಂದೆ ಗಳಿಸಿದರ್ಥವನು ತ್ರಿಕರಣ ಸುಪ್ರಕಾಶದೊಳು ನಿಂದು,
ಕಾಯದೆರೆಯಂಗೆ ಕಪಟರಹಿತನಾಗಿ, ಮನದೆರೆಯಂಗೆ ಸಂಕಲ್ಪರಹಿತನಾಗಿ,
ಪ್ರಾಣದೆರೆಯಂಗೆ ಭ್ರಾಮಕರಹಿತನಾಗಿ, ನಿರ್ವಂಚನೆ ತನಿರಸದೊಳ್ಮುಳುಗಿ
ಕೊಟ್ಟು ಕೊಳದಿರಬಲ್ಲಾತನೇ ಸಹಜವೆಂಬೆ
ಗುರುನಿರಂಜನ ಚನ್ನಬಸವಲಿಂಗಾ. ॥ ೧೧೩ ॥

೧೧೪

ತನುಸೂತ್ರಚೈತನ್ಯಕ್ಕಿದ್ದನೊಬ್ಬ, ಮನಸೂತ್ರಚೈತನ್ಯಕ್ಕಿದ್ದನೊಬ್ಬ,
ಆತ್ಮಸೂತ್ರಚೈತನ್ಯಕ್ಕಿದ್ದನೊಬ್ಬ,

ಈ ಮೂವರ ಮುಂಭಾರವ ಹೊತ್ತು ನಡೆಯದೆ,
ಮರೆದು ಬಳಸಿದರ್ಥದ ಬಡ್ಡಿಯನರಿದು ಕೊಟ್ಟು,
ಮೂಲದ್ರವ್ಯದಲ್ಲಡಗಿ ಅಮರಿಸಬಲ್ಲರೆ
ಆದಿಯ ಭಕ್ತನಹುದು ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೧೧೪ ||

೧೧೫

ಅನಾದಿಭಕ್ತನು ಆದಿಗುರುವಿನ ಕೈಯಿಂದೆ ಜನಿಸಿ,
ಆದಿ ಅನಾದಿಯಿಂದತ್ತತ್ತಲಾದ
ಅನುಪಮಲಿಂಗವ ಪಡೆದುಕೊಂಡು ಬಂದ ಬಳಿಕ,
ಆ ಲಿಂಗಕಳಾಚೈತನ್ಯವಾದ ಮಹಾನುಭಾವ ಜಂಗಮವ ಕಂಡು,
ಆ ಜಂಗಮಲಿಂಗ ಗುರುಮೂರ್ತಿಗಳಿಗೆ
ಕಾಯವುಳ್ಳನ್ನಕ್ಕರ ಭಕ್ತಿಯ ಮಾಡೂದು,
ಮನವುಳ್ಳನ್ನಕ್ಕರ ಪೂಜೆಯ ಮಾಡೂದು,
ಭಾವವುಳ್ಳನ್ನಕ್ಕರ ಇಚ್ಛೆಗೆ ಎಡೆ ಮಾಡೂದು
ಇದೇ ಸದ್ಭಕ್ತನಿರವು ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೧೧೫ ||

೧೧೬

ಬೇಡಲಿಲ್ಲದ ಭಕ್ತ ಮಾಡಲನುಗೈದಲ್ಲಿ
ಗುರುಚರಣದ ಬರವನಂಗೈಸುವನಲ್ಲದೆ ರೂಪವನರಸ.
ಬೆಳಗಿನೊಳಗಿರ್ದವನಾಗಿ ಗುಣಧರ್ಮವರ್ಮವನರಸ,
ಹಮ್ಮು ಬಿಮ್ಮುಗಳ ಹವಣಿಲ್ಲವಾಗಿ,
ಸಮ್ಮುಖಿ ಸ್ವಯವನರಸ
ಗುರುನಿರಂಜನ ಚನ್ನಬಸವಲಿಂಗದ ಅಂಗವಾಗಿ. || ೧೧೬ ||

೧೧೭

ಕಾಯ ದಣಿವರಿಯದು; ಮಾಡಿ ಮಾಡಿ ಮುಂದೆ ಉಲಿವುದು.
ಮನ ದಣಿವರಿಯದು; ಮಾಡಿ ಮಾಡಿ ಮುಂದೆ ಉಲಿವುದು.
ಭಾವ ದಣಿವರಿಯದು: ಮಾಡಿ ಮಾಡಿ ಮುಂದೆ ಉಲಿವುದು.
ಸರ್ವಾಂಗ ದಣಿವರಿಯದು ಮಾಡಿ ಮಾಡಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ ತಾನೆಯಾಗಿ. || ೧೧೭ ||

೧೧೮

ಅಚ್ಚಭಕ್ತನ ಭಾವಕ್ಕೆ ಗುರುಲಿಂಗಜಂಗಮವು ಬಂದ ಬರವು-
ವೃದ್ಧಂಗೆ ಯೌವ್ವನ, ಮೂರ್ಖಂಗೆ ವಿದ್ಯೆ, ಸುಖಿಗೆ ಆಯುಷ್ಯ,

ಯಾಚಕಂಗರ್ಥ, ಮರಣವಸ್ಯೆದುವಂಗೆ ಮರುಜೀವಣಿ ಬಂದಂತೆ.
ಗುರುನಿರಂಜನ ಚನ್ನಬಸವಲಿಂಗದಲ್ಲಿ ಅಭಿನ್ನವಾದ ಕಾರಣ. ॥ ೧೧೮ ॥

೧೧೯

ಮಣ್ಣಿನೊಳುನಿಂದು ಮಣ್ಣ ಹಿಡಿದುಮಾಡುವಲ್ಲಿ
ಅನ್ಯವಿಲ್ಲದೆ ಸನ್ನಿಹಿತ ಭಕ್ತ.
ಹೊನ್ನಿನೊಳು ನಿಂದು ಹೊನ್ನ ಹಿಡಿದು ಮಾಡುವಲ್ಲಿ
ತನ್ನನಿಲ್ಲದೆ ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ ಭಕ್ತ. ॥ ೧೧೯ ॥

೧೨೦

ಘನಮಹಿಮ ಶರಣರು ತನ್ನ ಮನೆಗೆ ಗಮನಿಸಿ ಬಂದರೆ,
ಅನುವರಿದು ಅವರವರ ಒಡವೆಯ ಅವರವರಿಗಿತ್ತು
ವಿನಯ ಮುಂದುಗೊಂಡಿಪ್ಪುದೇ ಸಹಜ.
ಒರೆದು ನೋಡಬಂದ ಹಿರಿಯರ ಗರ್ಜನೆಯನು ಸೈರಣೆಯೊಳರ್ಚಿಸಿ,
ಸಾವಧಾನಸುಖತನ ಮುಂದುಗೊಂಡಿಪ್ಪುದೇ ನಿಜಭಕ್ತಿ.
ಕೊಂಡು ಮಾಡಬಲ್ಲ ಪ್ರಚಂಡ ಒಡೆಯರಡಿಯಿಟ್ಟು ಬಂದರೆ
ತಡವಿಲ್ಲದರಿದು, ಒಡನಿರ್ದ ಧನವ ವಂಚನೆಯನರಿಯದೆ ಈವುದು
ಗುರುನಿರಂಜನ ಚನ್ನಬಸವಲಿಂಗಕ್ಕೆ ಅಭಿನ್ನಭಕ್ತಿ. ॥ ೧೨೦ ॥

೧೨೧

ಅನಾಮಯ ಜಂಗಮಲಿಂಗವೇ,
ಎಮ್ಮ ಗೃಹದಲ್ಲಿರ್ದ ಸಕಲಸ್ಯೆದಾನ
ಎನ್ನ ಅರುಹಿಂಗೆ ಶರಣುಹೊಕ್ಕು ಮುಂದುವರಿಯುತಿರ್ದವು.
ಎನ್ನ ಅರಿವು ಜ್ಞಾನಕ್ಕೆ ಶರಣುಹೊಕ್ಕು ಮುಂದುವರಿಯುತಿರ್ದವು.
ಎನ್ನ ಜ್ಞಾನ ಮನಕ್ಕೆ ಶರಣುಹೊಕ್ಕು ಮುಂದುವರಿಯುತಿರ್ದವು.
ಎನ್ನ ಮನ ಕಂಗಳಿಗೆ ಶರಣುಹೊಕ್ಕು ಮುಂದುವರಿಯುತಿರ್ದವು.
ಎನ್ನ ಕಂಗಳು ಹಸ್ತಂಗಳಿಗೆ ಶರಣುಹೊಕ್ಕು ಮುಂದುವರಿಯುತಿರ್ದವು.
ಎನ್ನ ಹಸ್ತಂಗಳು ನಿಮ್ಮ ಪದಕಮಲದ ಸೋಂಕಿನ ಸುಖವನೇ
ಮುಂದುವರಿಯುತಿರ್ದವು.
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ ಚಿತ್ತೈಸಬನ್ನಿ. ॥ ೧೨೧ ॥

೧೨೨

ಎಲೆ ಸಂಸಾರಿ ಜಂಗಮವೆ
ಎನ್ನ ಗೃಹಕ್ಷೇತ್ರದ ಸುಖವನರಿಯದೆ ಅರಿದವನಲ್ಲ ಬನ್ನಿ.

ಎನ್ನ ಸ್ತ್ರೀಯಾದಿ ಸೌಖ್ಯವನರಿಯದೆ ಅರಿದವನಲ್ಲ ಬನ್ನಿ.
ಎನ್ನ ಕನಕಾದಿ ದ್ರವ್ಯಂಗಳ ಸುಖವನರಿಯದೆ ಅರಿದವನಲ್ಲ ಬನ್ನಿ.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಬರವಿಂಗೆ ನೈಷ್ಠೆ ಮುಂದೆ ಉಲಿಯುತ್ತಿದೆ ಬನ್ನಿ. ॥ ೧೨೨ ॥

## ಭಕ್ತನ ಮಾಹೇಶ್ವರಸ್ಥಲ

೧೨೩

ಸಕಲಾನಂದಪರಬ್ರಹ್ಮವೆ ಕರ್ತನೆನಗೆ ;
ಸತ್ಕ್ರಿಯಾ ಸನ್ನಿಹಿತ ಭಕ್ತನೇ ಭೃತ್ಯ ನಿನಗೆ.
ನಿಃಕಲಾನಂದಚಿದ್ಬ್ರಹ್ಮವೆ ಒಡೆಯನೆನಗೆ ;
ನಿಃಕ್ರಿಯಾ ಸನ್ನಿಹಿತ ಚಿದ್ಭಕ್ತನೇ ಬಂಟ ನಿನಗೆ.
ಸಮರಸಾನಂದನಿಜಬ್ರಹ್ಮವೇ ಆಳ್ವನೆನಗೆ ;
ಅವಿರಳ ಕ್ರಿಯಾ ಸನ್ನಿಹಿತ ಅಭಿನ್ನಭಕ್ತನೇ ಆಳು ನಿನಗೆ,
ಗುರುನಿರಂಜನ ಚನ್ನಬಸವಲಿಂಗ ಅಂಗಪ್ರಾಣ. ॥ ೧೨೩ ॥

೧೨೪

ಎನ್ನ ಅಂಗ ಮನ ಪ್ರಾಣಾನಂದವೇ
ನೀವು ಬಂದ ಬರವಿಂಗೆ,
ನಿಮ್ಮ ಕಾಯದ ಕಾಯಕದಲ್ಲಿ ವಂಚನೆಯುಳ್ಳರೆ ತಲೆದಂಡ.
ನಿಮ್ಮ ಮನದ ಕಾಯಕದಲ್ಲಿ ಕಲ್ಪನೆಯುಳ್ಳರೆ ತಲೆದಂಡ.
ನಿಮ್ಮ ಪ್ರಾಣದ ಕಾಯಕದಲ್ಲಿ ಪರಿಭ್ರಾಂತನುಳ್ಳರೆ ತಲೆದಂಡ.
ಗುರುನಿರಂಜನ ಚನ್ನಬಸವಲಿಂಗಕ್ಕೆ
ಅಂಗ ಪ್ರಾಣ ತೆರ ಅಗಲಿದರೆ ಅದೇ ಭಂಗ. ॥ ೧೨೪ ॥

೧೨೫

ತಮ್ಮನ ಮದುವೆಯಾದೆ ತಾಯಿ ತಂದೆಯನೊಲಿಸಿ,
ಎನ್ನ ಶೃಂಗಾರದ ಸೊಬಗ ನೋಡಿ ನೋಡಿ ನೆರೆಯಬೇಕೆಂದು,
ನೋಟದ ಸಂಚವೊಳಗೆ ಆಟ ಹಣ್ಣಿ ನಿಂದಿತ್ತು,
ಆಟದ ಭರದಲ್ಲಿ ನೋಟಕರ ಸಂತವಿಡದಿರ್ದಡೆ,
ಅಂತಕನ ಕುಳವಯ್ಯಾ, ನಾನಂತಲ್ಲ ನಿನ್ನವರೆನ್ನಪ್ರಾಣ
ಗುರುನಿರಂಜನ ಚನ್ನಬಸವಲಿಂಗಾ. ॥ ೧೨೫ ॥

೧೨೬

ಗುರುಭಕ್ತನಾದ ಮೇಲೆ ಅಂಗದ ಸುಖವ ಮರೆದಿರಬೇಕು.
ಲಿಂಗಭಕ್ತನಾದ ಮೇಲೆ ಮನದ ಸುಖವ ಮರೆದಿರಬೇಕು.
ಜಂಗಮಭಕ್ತನಾದಮೇಲೆ ಪ್ರಾಣದ ಸುಖವ ಮರೆದಿರಬೇಕು.
ಪಾದೋದಕಭಕ್ತನಾದ ಮೇಲೆ ರಸನೆಯ ಸುಖವ ಮರೆದಿರಬೇಕು.
ಪ್ರಸಾದಭಕ್ತನಾದ ಮೇಲೆ ಅನ್ಯವಾಸನೆಯ ಸುಖವ ಮರೆದಿರಬೇಕು.
ವಿಭೂತಿಯ ಧರಿಸಿದ ಮೇಲೆ ಸೋಂಕಿನ ಸುಖವ ಮರೆದಿರಬೇಕು.
ರುದ್ರಾಕ್ಷಿಯ ಧರಿಸಿದ ಮೇಲೆ ಸ್ತ್ರೀರೂಪಿನ ಲಕ್ಷಣ ಮರೆದಿರಬೇಕು.
ಮಂತ್ರವೇದಿಯಾದ ಮೇಲೆ ಲಲನೆಯರ
ವಿನಯ ನುಡಿಯ ಒಲಿದು ಕೇಳದಿರಬೇಕು.
ಇಂತು ಅಷ್ಟಾವರಣವನು ಅಂಗದಲ್ಲಿ ಕಾಣಿಸಿಕೊಂಡ ಬಳಿಕ
ಭಕ್ತಿ ನಿಷ್ಠೆಯ ನೆರೆದು
ಗುರುನಿರಂಜನ ಚನ್ನಬಸವಲಿಂಗದಲ್ಲಿ ಸಚ್ಚರಿತನಾಗಿರಬೇಕು. ॥ ೧೨೬ ॥

೧೨೭

ಕಾಮವಿಲ್ಲ ಭಕ್ತಂಗೆ ಪರಸ್ತ್ರೀಯರ ಮೇಲೆ.
ಕ್ರೋಧವಿಲ್ಲ ಭಕ್ತಂಗೆ ಗುರುಲಿಂಗಜಂಗಮದಲ್ಲಿ.
ಲೋಭವಿಲ್ಲ ಭಕ್ತಂಗೆ ಹೊನ್ನು ಹೆಣ್ಣು ಮಣ್ಣಿನಲ್ಲಿ.
ಮೋಹವಿಲ್ಲ ಭಕ್ತಂಗೆ ತನುಮನಧನದಲ್ಲಿ.
ಮದವಿಲ್ಲ ಭಕ್ತಂಗೆ ಸಜ್ಜನಸದ್ಭಾವಿಗಳಲ್ಲಿ.
ಮತ್ಸರವಿಲ್ಲ ಭಕ್ತಂಗೆ ಯಾಚಕರ ಮೇಲೆ.
ಇಂತು ಷಡ್ಗುಣವಿರಹಿತನಾದ ಭಕ್ತನಲ್ಲಿ
ಸನ್ನಿಹಿತನಾಗಿರುವ ನಮ್ಮ ಗುರುನಿರಂಜನ ಚನ್ನಬಸವಲಿಂಗ. ॥ ೧೨೭ ॥

೧೨೮

ಕಾಮ ಉಲಿವುದು ಭಕ್ತಂಗೆ ಗುರುಲಿಂಗಜಂಗಮದ ಬರವಿಂಗೆ.
ಕ್ರೋಧ ಉಲಿವುದು ಭಕ್ತಂಗೆ ಮದಬದ್ಧ ಮಾನವರ ಮೇಲೆ.
ಲೋಭ ಉಲಿವುದು ಭಕ್ತಂಗೆ ಪಾದೋದಕ ಪ್ರಸಾದದ ನಿಲುವಿಂಗೆ.
ಮೋಹ ಉಲಿವುದು ಭಕ್ತಂಗೆ ಶಿವಾನುಭಾವಸನ್ನಿಹಿತರ ಸಂಭಾಷಣೆಗೆ.
ಮದ ಉಲಿವುದು ಭಕ್ತಂಗೆ ಶಿವದೂಷಕ ಜನರಿಂಗೆ.
ಮತ್ಸರ ಉಲಿವುದು ಭಕ್ತಂಗೆ ಶರಣಸಂಸಾರ ಸುಖಿತನಕೆ.

ಇಂತು ಷಡುವರ್ಗಸಂಪನ್ನನಾದರೆ ಭಕ್ತನ ನಿಷ್ಠೆ ನಿಜವೆಂಬೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೧೨೮ ||

೧೨೯

ನಿತ್ಯಾನಂದ ಸುಖಿಮುಖಿ ಶರಣರು ನುಡಿವರು-
ಕಾಯಕಳೆ ಸಂಗಮನೆಂದರೆ ಗುರುವಿಹೀನನೆಂದು.
ಮನಕಳೆ ಸಂಗಮನೆಂದರೆ ಲಿಂಗವಿಹೀನನೆಂದು.
ಪ್ರಾಣಕಳೆ ಸಂಗಮನೆಂದರೆ ಜಂಗಮವಿಹೀನನೆಂದು.
ಭಾವಕಳೆ ಸಂಗಮನೆಂದರೆ ಪ್ರಸಾದವಿಹೀನನೆಂದು,
ಅರುಹಿನ ಕಳೆ ಸಂಗಮನೆಂದರೆ ಗುರುನಿರಂಜನ ಚನ್ನಬಸವಲಿಂಗದಲ್ಲಿ
ಪಾದೋದಕ ಸಂಬಂಧಿ ಭಕ್ತನೆಂದು. || ೧೨೯ ||

೧೩೦

ಅಯ್ಯಾ, ನಿಮ್ಮ ಶರಣರೆನಗೆ ಭಕ್ತಿಯಿಲ್ಲೆಂಬುವರು
ಅದು ದಿಟವೆಂಬುದೇ ನಿಷ್ಠೆ:
ದ್ವೈತಾದ್ವೈತ ಯೋಗ ಮಾರ್ಗಿಗಳಲ್ಲಿ.
ಅಯ್ಯಾ, ನಿಮ್ಮ ಪ್ರಮಥರೆನಗೆ ಜ್ಞಾನವಿಲ್ಲೆಂಬುವರು.
ಅದು ಸಹಜವೆಂಬುದೇ ನಿಷ್ಠೆ:
ಅನಿತ್ಯ ನಿತ್ಯವೆಂಬುವ ಮನದಲ್ಲಿ.
ಅಯ್ಯಾ, ನಿಮ್ಮ ಭಕ್ತರು ಎನಗೆ ವೈರಾಗ್ಯವಿಲ್ಲೆಂಬುವರು
ಅದು ಬದ್ಧವೆಂಬುದೇ ನಿಷ್ಠೆ:
ತನ್ನ ಸತ್ಕ್ರಿಯಾನುಕೂಲೆಯಾದ ಸತಿಸುತಾಲಯಂಗಳಲ್ಲಿ.
ಅಯ್ಯಾ, ನಿಮ್ಮ ಶರಣರಿದು ಸತ್ಯವೆಂಬುವರು, ಅದು ನಿತ್ಯವೆಂಬುದೆ ನಿಷ್ಠೆ:
ಗುರುನಿರಂಜನ ಚನ್ನಬಸವಲಿಂಗದಲ್ಲಿ ಅಂದಂತಿಪ್ಪುದು. || ೧೩೦ ||

೧೩೧

ಸತ್ಯಕಾಯಕದಿಂದುಲಿದು ಬಂದ ಧನವನು,
ಮಿಥ್ಯವರಿಯದೆ ಚಿತ್ತಾದಿಕರಣಗೊತ್ತಿನೊಳು ನಿಲಿಸಿ,
ಗುರುಲಿಂಗಜಂಗಮವನರಿದು,
ಸ್ವಯ ಪರವಳಿದುಳಿದಿತ್ತು ಮರೆದಿರಬಲ್ಲ ಪರಮನಿಷ್ಠಾಂಗವಾದ ಭಕ್ತನಲ್ಲಿ
ನಿರಂತರ ಗುರುನಿರಂಜನ ಚನ್ನಬಸವಲಿಂಗ. || ೧೩೧ ||

೧೩೨

ಭಿನ್ನವಿಲ್ಲದೆ ಶರಣೆಂಬೀ ಚನ್ನಭಕ್ತರು ಎನ್ನರಸುತ್ತ ಬಂದರೆ
ಬೆನ್ನ ಹತ್ತಿ ಬಂದ ಎನ್ನಯ್ಯ ಸಾಕ್ಷಿಯಾಗಿ.
ಎಲ್ಲವೂ ನಿಮ್ಮದೆಂಬೆಯೆಂದಲ್ಲಿ ವಂಚನೆಯುಳ್ಳರೆ ಬಂಧನ ಬಪ್ಪುದು ತಪ್ಪದು.
ಅಂದಂದಿನ ಮಾತು ಇಂದುಳಿವನಲ್ಲ,
ಸಂದುಸಂಶಯ ನಿಂದುರುಹಿದ ನಿಷ್ಠೆಯೆನಗುಂಟು
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೧೩೨ ॥

೧೩೩

ಬಾಗಿ ಬಳುಕಿ ಬೀಗಿ ಬಿರಿದು ತೂಗಿಕೊಂಡು ಬಂದ ಭೋಗಿ ಸಾಕ್ಷಿಯಾಗಿ
ತ್ಯಾಗ ಭೋಗ ಯೋಗವೆಂಬ ಮಹದೈಶ್ವರ್ಯದೊಳಗಿರ್ದೆನಯ್ಯಾ.
ಬಂದು ಕೊಳ್ಳಿರಿ ಬಗೆಬಗೆಯಿಂದೆ, ಚಂದವಾದರೆ ಸಿಂದುದು ನಿಷ್ಠೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಆನು ಭಕ್ತನೆಂಬೆ. ॥ ೧೩೩ ॥

೧೩೪

ಕೇಳಿಕೊಂಡು ಸಗುಣ ನಿರ್ಗುಣ
ಬೆಳಗಿನಿಂದಾಡುವ ಕಡುಜಾಣ ಕಲಿಗಳು
ಬಡತನವ ಬೀರುವರಲ್ಲಯ್ಯಾ.
ಜಡವಿಡಿದರೇನು ಕಡುಲೋಭಿಯಯ್ಯಾ.
ಗುರುಲಿಂಗಜಂಗಮದಲ್ಲಿ ಪ್ರಾಣಾಂಗಭಾವ ತಪ್ಪದಿಪ್ಪುದು
ಗುರುನಿರಂಜನ ಚನ್ನಬಸವಲಿಂಗದಲ್ಲಿ ಭಕ್ತನ ನಿಷ್ಠೆ. ॥ ೧೩೪ ॥

೧೩೫

ಸಂದಸಂಪದವ ನಿಂದು ನೋಡಿ ಬೆಂದು ಹೋಗುವನಲ್ಲ.
ಅಂದಂದಿಂಗೀವ ಅವಧಾನ ಮುಂದಿಪ್ಪುದಾಗಿ ಅಚಲನಾಗಿರ್ದೆ.
ಅವಿರಳ ದ್ರವ್ಯವನಾದರಿಸಿಕೊಳ್ಳಿ
ಅಪ್ರತಿಮ ಗುರುನಿರಂಜನ ಚನ್ನಬಸವಲಿಂಗ. ॥ ೧೩೫ ॥

## ಭಕ್ತನ ಪ್ರಸಾದಿಸ್ಥಲ

೧೩೬

ಬಡಿದೆಬ್ಬಿಸಿ ಹಾಲನೆರೆದರೆ
ಸವಿದು ಪರಿಣಾಮಿಸುವುದೇ ಕರಲೇಸಯ್ಯಾ.
ಕ್ರೋಧ ಹೊಂದಿ ಜರಿದರೆ ದುಃಖದಾಗರವಯ್ಯಾ.

ಪರಮ ವೈರಾಗ್ಯ ಜಂಗಮವೆನ್ನ ಜರಿದು
ಅವಿರಳಬೋಧಾಮೃತವ ಎನ್ನ ಮಸ್ತಕದ ಮೇಲೆ ಸೂಸಿದರೆ
ಅತ್ಯಂತ ಸುಯಿಧಾನಿಯಾಗಿರ್ದೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. ‖ ೧೩೬ ‖

೧೩೭

ನಡೆವ ದಾರಿಯಲ್ಲೆನ್ನ ಒಡೆಯರು ಬರಲು
ಬಿಳಿಯಂಬರ ಗದ್ದುಗೆಯ ಮೇಲಿರಿಸಿ,
ಪಾದಪ್ರಕ್ಷಾಲನೆಯ ಮಾಡಿ,
ಇಚ್ಛಿತ ಪದಾರ್ಥವ ಮುಚ್ಚಿನೀಡಿ,
ನಚ್ಚಿ ಮೆಚ್ಚಿ ನಲಿದಾಡುವೆ.
ಹೆಚ್ಚಿ ಉಳಿಮೆಯ ಶೇಷವ ಕೊಂಡು
ಪಾದೋದಕವ ಧರಿಸಿ ಪಾವನನಾದೆನು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ‖ ೧೩೭ ‖

೧೩೮

ಅಚ್ಚ ಗುರುಲಿಂಗಜಂಗಮವನು ಆರತಿ ಎತ್ತಿ ವಂದಿಸಿ,
ಆರು ಆರಾರ ತೆರದಿಂದರ್ಚಿಸಿ,
ಆಯತಪ್ರಸಾದದೊಳವಧಾನಿಭಕ್ತ ನಾನು.
ನಿನ್ನಾಯತವ ಕಳೆದು ಕರ್ಮವನುಂಬುವನಲ್ಲ,
ನಿನ್ನ ಸ್ವಾಯತವ ಕಳೆದು ಕಲ್ಪನೆಯೊಳೊಂದುವನಲ್ಲ,
ನಿನ್ನ ಸನ್ನಿಹಿತವ ಕಳೆದು ಕತ್ತಲೆಯಗೂಡಿ ಹೋಗುವನಲ್ಲ.
ನೋಡಿ ಕೂಡು ಗುರುನಿರಂಜನ ಚನ್ನಬಸವಲಿಂಗನ. ‖ ೧೩೮ ‖

೧೩೯

ಸಂವಿತ್‌ಪ್ರಭಾನಂದ ಚರಲಿಂಗಮೂರ್ತಿಯೇ
ನಿನಗೆ ಕೊಟ್ಟುಕೊಳ್ಳೆನೆಂಬ ಭಾಷೆಯೆನಗುಂಟು.
ನಿಮ್ಮ ಮಹಾಶರಣರ ವಚನವುಂಟು.
ಆನು ಪೂರ್ವಭಾಗಿಯಲ್ಲಯ್ಯ.
ಅಯ್ಯಾ, ನಿಮಗೆ ಕೊಟ್ಟು ಕೊಳ್ಳಬೇಕೆಂಬ ಭಾವಯೆನಗುಂಟು.
ನಿಮ್ಮ ಪರಶರಣರೈಕ್ಯವುಂಟು.
ಆನು ಉತ್ತರಭಾಗಿಯಯ್ಯಾ ಗತಿಮತಿಯುಳ್ಳನ್ನಕ್ಕರ
ಆನು ನೀನು ಗುರುನಿರಂಜನ ಚನ್ನಬಸವಲಿಂಗಾ. ‖ ೧೩೯ ‖

೧೪೦

ಆಡುವೆನಯ್ಯಾ ಎನ್ನೊಡೆಯನ ಶರಗಹಿಡಿದು ಆರಾರ ಸಂಗತಿಯಿಂದೆ.
ಕೂಡುವೆನಯ್ಯಾ ಎನ್ನಯ್ಯನ ಬಳಿವಿಡಿದು ಆರಾರ ಸುಖತನದಿಂದೆ.
ಕೊಂಬುವೆನಯ್ಯಾ ಎನ್ನ ತಂದೆಯ ಮುಂದಿಟ್ಟು ಆರಾರ ರತಿಯಿಂದೆ.
ಆನಂದಿಸುವೆನಯ್ಯಾ ಎನ್ನ ಕರ್ತುಗಳನರಿದು ಆರಾರ ಪ್ರೀತಿಯಿಂದೆ.
ಎನ್ನಾವಾವ ಬಗೆಯಲ್ಲಿ ನಂಟುತನಕ್ಕೆ ಕಂಟಕ ಬಂದರೆ
ಗಂಟ ಬಿಡದಿರು ಅಂಟಿಕೊಂಬೆ ಗುರುನಿರಂಜನ ಚನ್ನಬಸವಲಿಂಗಾ. ॥ ೧೪೦ ॥

೧೪೧

ಗುರುವಿನ ಪ್ರಸಾದವ ಬೇಡಿದರೆ ಆಪ್ಯಾಡಿ ಉಣ್ಣೆಂದು ಕೊಟ್ಟ.
ಅಲ್ಲಿ ನಿನ್ನ ಹಿರಿಕಿರಿಯರ ಮರೆದರೆ ಹರಿದು ಹಾಕುವನೆಂದು-
ನೆರೆಮುಂಬೆ ನಿರ್ವಾಚಕದಿಂದೆ ಗುರುನಿರಂಜನ ಚನ್ನಬಸವಲಿಂಗಾ. ॥ ೧೪೧ ॥

೧೪೨

ಬೆಡಗಿನ ಕೀಲಿವಿಡಿದು ಬಂದು ಕಂಡವರ ಕಲ್ಯಾಣದ
ಅಡಿಗತಿಯನರಿಯದೆ ಅನಿತ್ಯಕಲ್ಯಾಣವೆಂದು
ಸುಡುಗಾಡದಲ್ಲಿ ಅಟ್ಟುಂಬ ಕಸಮನುಜರು
ನಿತ್ಯಕಲ್ಯಾಣದ ಸತ್ಯ ಶರಣರಿಗಿತ್ತು ಕೊಂಬ
ಚಿತ್ತವನವರೆತ್ತಬಲ್ಲರಯ್ಯಾ ಗುರುನಿರಂಜನ ಚನ್ನಬಸವಲಿಂಗಾ. ॥ ೧೪೨ ॥

೧೪೩

ನಡೆದು ಕಂಡವರೆಂದು ನುಡಿದು ಸಿಲುಕಿ ಬಿದ್ದು ಹೋಗುವ ಪಾತಕರು
ಒಡೆಯನವಸರವನವರೆತ್ತ ಬಲ್ಲರೋ !
ಮಾಂಸಕ್ಕೆ ಬಿದ್ದ ಶುನಿಭಾವದಂತೆ
ಕೊಡುಕೊಳ್ಳೆ ಬೆಳೆಯುಂಟು ಕಾಲನಲ್ಲಿ,
ಅರಿದು ಮರೆದವರಂತಲ್ಲ ಕೊಡುಕೊಳ್ಳೆ ಬೆಳೆಯುಂಟು
ಗುರುನಿರಂಜನ ಚನ್ನಬಸವಲಿಂಗಾ. ॥ ೧೪೩ ॥

೧೪೪

ಕತ್ತಲ ಸುತ್ತಿನಲ್ಲಿ ಸುಳಿದಾಡುವ ಕತ್ತೆಯ ತಂದು
ಜೀನವನಿಟ್ಟರೆ ಹೊತ್ತೇರೆ ಕುದುರೆಯಾಗಲರಿಯದು.
ಹುಸಿಯನುಂಬ ವಸಿಮಾನವನು ತಾಮಸವಿರ್ದಂತೆ ತಂದು ಭಕ್ತನಮಾಡಿದರೆ
ಗತಿ ಬೆಳಗಿನಲ್ಲಿ ಕಂಡರೆ ಭಕ್ತನಾದಾನೇ ನರನಲ್ಲದೆ
ಗುರುನಿರಂಜನ ಚನ್ನಬಸವಲಿಂಗಕ್ಕೆ. ॥ ೧೪೪ ॥

೧೪೫

ಆಡಾಡಿ ಉಂಡುಹೋಗುವರ ನಾಡಸಂಪನ್ನರ ಮಾಡಿಟ್ಟರೆ
ನೋಡ ಬಂದವರನುವನವರೆತ್ತ ಬಲ್ಲರಯ್ಯಾ?
ಬಾ ಎನ್ನ ಕೂಡಿ ಉಂಡು ಕುಲವ ನೋಡಯ್ಯಾ ನಿಮ್ಮಲ್ಲಿ
ಗುರುನಿರಂಜನ ಚನ್ನ ಬಸವಲಿಂಗಾ. ॥ ೧೪೫ ॥

೧೪೬

ಸಿಂಹನ ಹಾಲ ಆನೆಯಮರಿ ಉಣಬಲ್ಲುದೆ ?
ಹುಲಿಯ ಹಾಲ ಹುಲ್ಲೆಯಮರಿ ಉಣಬಲ್ಲುದೆ ?
ಗರುಡನಿಂದೆ ಗುಟುಕ ಹಂದಿಯಮರಿ ಕೊಳಬಲ್ಲುದೆ, ತಮ್ಮ ಮರಿಯಲ್ಲದೆ ?
ಗುರುನಿರಂಜನ ಚನ್ನಬಸವಲಿಂಗಾ,
ನಿಮ್ಮ ಘನಗಂಭೀರ ಗುರುಚರಲಿಂಗದ ದಯರಸವನುಣಬಲ್ಲರೆ
ಮಲಭುಂಜಕರು ? ನಿಮ್ಮವರಲ್ಲದೆ. ॥ ೧೪೬ ॥

೧೪೭

ಹುಟ್ಟು ಹೊಂದುಗಳರಿಯದೆ ನೆಟ್ಟನೆ ಹುಟ್ಟಿ ಬಂದವನೆಂದು
ಕಾರ್ಯದಲ್ಲಿ ಕರಿದು ಬಿಳಿದು ಕೂಡಿ ಮಾಡಿಕೊಂಡೆನೆಂದರೆ
ನಿಜವಾಗಲರಿಯದು.
ಭೂಪ ಧನಿಕರು ಕೊಲ್ಲಿಸಿ ಹಾಕುವರು
ಗುರುನಿರಂಜನ ಚನ್ನಬಸವಲಿಂಗಾ ನೀ ಸಾಕ್ಷಿಯಾಗಿ. ॥ ೧೪೭ ॥

೧೪೮

ಹಿಂದೆ ಮುಂದೆ ನಷ್ಟವಾಗದೆ ನಿಂದುಂಬ ನಿಃಕಾರಣ ಮಿಥ್ಯ ಬದ್ಧರಿಗೆ,
ನಿಜಕಾರಣದ ಗತಿಮತಿಗಳತಿಶಯ ಬರಲರಿಯದು.
ಅವರಂತಿರಲಿ, ಅನಿತ್ಯವ ನಿತ್ಯ ಮಾಡಿ, ಕೊಟ್ಟು ಕೊಂಬ
ಭೃತ್ಯಭಾವಿಯಾದ ಸತ್ಯಸಾವಧಾನಿಗಲ್ಲದೆ.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ವಿನಯಪ್ರಸಾದಿ ಸಾಮಾನ್ಯವೆ ? ॥ ೧೪೮ ॥

೧೪೯

ಅಯ್ಯಾ, ನಿಮ್ಮ ಬಿಂದುವಿನ ಕಳೆಯ ನೋಡಿಕೊಳ್ಳಿ,
ನಿಮ್ಮ ನಾದದ ಕಳೆಯ ನೋಡಿಕೊಳ್ಳಿ,
ನಿಮ್ಮ ಕಳೆಯ ಕಳೆಯ ನೋಡಿಕೊಳ್ಳಿ,

ನಾನು ಕದ್ದುಕೊಂಡು ಸೊಲ್ಲನೆಬ್ಬಿಸಿ ಅಲ್ಲದಾಟವನಾಡುವನಲ್ಲ.
ನಾ ಬಲ್ಲೆ ನೋಡಿಕೊಂಡು ಕೂಡು
ಗುರುನಿರಂಜನ ಚನ್ನಬಸವಲಿಂಗದಲ್ಲಿ ಸಾವಧಾನಿ ಭಕ್ತ. || ೧೪೯ ||

೧೫೦

ಅಚ್ಚ ಮತ್ತೈದೆರೈವರೆನ್ನಿಚ್ಛೆಯೊಳಗಿಪ್ಪರು
ನಿಮ್ಮಾದಿ ಶಿಶುವಾದಕಾರಣ.
ನಚ್ಚಿ ಮಾಡಿದಡಿಗೆಯು ಅಚ್ಚಳಿಯದಿದ್ದಿತ್ತು
ಆಡುತ ಬನ್ನಿ ಮೂವರೊಂದಾಗಿ.
ಬೇಡಿಕೊಂಬುವನಲ್ಲ, ನೀಡಿ ನೂಕಿ ನಿಲ್ಲುವೆ
ನಿಮ್ಮಾಣೆ ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೧೫೦ ||

೧೫೧

ಸಾವಧಾನಸನ್ನಿಹಿತಶರಣನ ಕಾಯದಲ್ಲಿ ಮಾಡುವ ಕಾರ್ಯ ಮೀಸಲು.
ಕ್ರಿಯಾಕಳೆ ವೇಧಿಸಿಹುದಾಗಿ ಮನದಲ್ಲಿ ಮಾಡುವ ಕಾರ್ಯ ಮೀಸಲು.
ಜ್ಞಾನಕಳೆ ವೇಧಿಸಿಹುದಾಗಿ ಭಾವದಲ್ಲಿ ಮಾಡುವ ಕಾರ್ಯ ಮೀಸಲು.
ನಿರ್ಭಾವಕಳೆ ವೇಧಿಸಿಹುದಾಗಿ ಸರ್ವಾಂಗದಲ್ಲಿ ಮಾಡುವ ಕಾರ್ಯ ಮೀಸಲು
ಗುರುನಿರಂಜನ ಚನ್ನಬಸವಲಿಂಗ ಲಿಂಗಾವಧಾನಿ ಭಕ್ತ ತಾನಾಗಿ. || ೧೫೧ ||

೧೫೨

ಅರಿದು ಅರಿದವನಲ್ಲ ಅರಿದುಕೊಳ್ಳಿ,
ಮರೆದು ಮರೆದವನಲ್ಲ ಕರೆದುಕೊಳ್ಳಿ.
ಬರಿದೆ ಬಂದವನಲ್ಲ ಬಂದುಕೊಳ್ಳಿ.
ನಾಳೆಂಬ ಬಾಳುವೆಯನರಿಯದಿರ್ದೆ,
ಸುಳಿದುಬಂದೆನ್ನ ಸುಖವ ಕೊಳ್ಳಿ,
ಗುರುನಿರಂಜನ ಚನ್ನಬಸವಲಿಂಗದಲ್ಲಿ ಒಕ್ಕುದ ಕೊಡಿ. || ೧೫೨ ||

೧೫೩

ಬಾಹಿರಬಾಳುವೆ ನಿಮ್ಮದಯ್ಯಾ ಕೊಂಡುಕೊಡಿ.
ಅಂತರಬಾಳುವೆ ನಿಮ್ಮದಯ್ಯಾ ಕೊಂಡುಕೊಡಿ.
ಮಧ್ಯ ಬಾಳುವೆ ನಿಮ್ಮದಯ್ಯಾ ಕೊಂಡುಕೊಡಿ.
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಎನ್ನ ಸಾವಧಾನಭಕ್ತಿಯ ಕೊಂಡುದಕ್ಕೆ ಅನುವಪ್ರಸಾದವ ಕೊಡಿ. || ೧೫೩ ||

## ಭಕ್ತನ ಪ್ರಾಣಲಿಂಗಿಸ್ಥಲ

೧೫೪

ಅಯ್ಯಾ, ಎನ್ನ ಭಕ್ತಿಯ ಬೆಳಗಿನೊಳಗೆ
ಮತ್ತೊಂದು ಬೆಳಗುಬಂದು ಆವರಿಸಿತ್ತು ಇದೇನು ನೋಡಾ !
ಅಯ್ಯಾ, ಎನ್ನ ಜ್ಞಾನದ ಬೆಳಗಿನೊಳಗೆ
ಮತ್ತೊಂದು ಬೆಳಗು ಬಂದು ಆವರಿಸಿತ್ತು ಇದೇನು ನೋಡಾ !
ಅಯ್ಯಾ, ಎನ್ನ ವೈರಾಗ್ಯದ ಬೆಳಗಿನೊಳಗೆ
ಮತ್ತೊಂದು ಬೆಳಗು ಬಂದು ಆವರಿಸಿತ್ತು ಇದೇನು ನೋಡಾ !
ಅಯ್ಯಾ, ಎನ್ನನಾವರಿಸಿದ ತ್ರಿವಿಧ ಬೆಳಗನೊಂದು ಮಾಡಿ
ಮೂಲ ಬೆಳಗನರಿಯದಿರ್ದಲ್ಲಿ,
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಅನುಭಾವಬೆಳಗೆನ್ನ ಭಕ್ತಿಯ ಬೆರೆಸಿತ್ತು. || ೧೫೪ ||

೧೫೫

ಭಿನ್ನಯೋಗಮಾರ್ಗಿಗಳಂತೆ ಹೃದಯ, ಭ್ರೂಮಧ್ಯ ಬ್ರಹ್ಮರಂಧ್ರದಲ್ಲಿ
ವಸ್ತುವ ಕಂಡು ಕೂಡಬೇಕೆಂಬ ವಾಗದ್ವೈತಿಯಲ್ಲ ನೋಡಾ.
ಅದೆಂತೆಂದೊಡೆ: ಪರಮಗುರುವಿನ ಕ್ರಿಯಾದೀಕ್ಷೆಯಿಂದೆ ಹೃದಯಕಮಲದಲ್ಲಿ
ನಿಃಕಲಗುರುವ ಕಂಡು ನಾನು ಗುರುಭಕ್ತಿಯ ಮಾಡುತಿರ್ದೆನಯ್ಯಾ.
ಪರಮಗುರುವಿನ ಮಂತ್ರದೀಕ್ಷೆಯಿಂದೆ ಭ್ರೂಮಧ್ಯದಲ್ಲಿ
ನಿಃಶೂನ್ಯಲಿಂಗವ ಕಂಡು ನಾನು ಲಿಂಗಭಕ್ತಿಯ ಮಾಡುತಿರ್ದೆನಯ್ಯಾ.
ಪರಮಗುರುವಿನ ವೇಧಾದೀಕ್ಷೆಯಿಂದ ಬ್ರಹ್ಮರಂಧ್ರದಲ್ಲಿ
ನಿರಂಜನಜಂಗಮುವ ಕಂಡು ನಾನು ಜಂಗಮಭಕ್ತಿಯ ಮಾಡುತಿರ್ದೆನಯ್ಯಾ.
ಇಂತು ಸತ್ಕ್ರಿಯಾಸುಜ್ಞಾನವನುಳಿದು ನಡೆವ ಗತಿಯೆನಗಿಲ್ಲವಯ್ಯಾ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೧೫೫ ||

೧೫೬

ಅಯ್ಯಾ, ಶ್ರದ್ಧಾಭಕ್ತಿಯೊಳಗೆ ಅನುಭಾವ ಬೆರಸಿದಲ್ಲಿ
ಆಚಾರಲಿಂಗದ ಬೆಳಗು ಎನ್ನ ಪೃಥ್ವಿತತ್ವದಲ್ಲಿ ಥಳಥಳಿಸುತ್ತಿಹುದು.
ಗುರುಲಿಂಗದ ಬೆಳಗೆನ್ನ ಅಪ್ಪುತತ್ವದಲ್ಲಿ ಥಳಥಳಿಸುತ್ತಿಹುದು.
ಶಿವಲಿಂಗದ ಬೆಳಗೆನ್ನ ಅಗ್ನಿತತ್ವದಲ್ಲಿ ಥಳಥಳಿಸುತ್ತಿಹುದು.
ಜಂಗಮಲಿಂಗದ ಬೆಳಗೆನ್ನ ವಾಯುತತ್ವದಲ್ಲಿ ಥಳಥಳಿಸುತ್ತಿಹುದು.
ಪ್ರಸಾದಲಿಂಗದ ಬೆಳಗೆನ್ನ ಆಕಾಶತತ್ವದಲ್ಲಿ ಥಳಥಳಿಸುತ್ತಿಹುದು.

ಮಹಾಲಿಂಗದ ಬೆಳಗೆನ್ನ ಆತ್ಮತತ್ವದಲ್ಲಿ ಥಳಥಳಸುತ್ತಿಹುದು.
ಇದು ಕಾರಣ, ಸರ್ವಸಕಲತತ್ವದಲ್ಲಿಯೂ
ಗುರುನಿರಂಜನ ಚನ್ನಬಸವಲಿಂಗದ ಬೆಳಗು
ಎನ್ನ ಭಕ್ತಿ ಬೆಳಗಿನೊಳಗೆ ಥಳಥಳಿಸುತ್ತಿರ್ದುದು. || ೧೫೬ ||

೧೫೭

ಅಯ್ಯಾ, ನಿಮ್ಮ ಭೃತ್ಯ ನಾನು, ನಿಮ್ಮನುಭಾವದಲ್ಲಿರ್ದು
ನಿಮ್ಮಿಂದನ್ಯವನಾಚರಿಸದಂತೆ
ಸತ್ಕ್ರಿಯಾನಂದಸ್ವರೂಪಕ್ಕೆ
ಎನ್ನ ಸರ್ವಾಂಗವನು ಸಮವೇದಿಸುವೆನು.
ನಿಮ್ಮಿಂದನ್ಯವ ನುಡಿಯದಂತೆ
ಸಮ್ಯಕ್‌ಜ್ಞಾನಾನಂದಸ್ವರೂಪಕ್ಕೆ
ಎನ್ನ ಮನ ಕರಣ ಸುಕೃತವಾಕ್ಯದಿಂದೆ ಕೂಡಿ
ಸ್ತೋತ್ರ ಮಂತ್ರ ಸನ್ನಿಹಿತನಾಗಿರ್ದೆನು.
ನಿಮ್ಮಿಂದನ್ಯವ ಭಾವಿಸದಂತೆ
ಎನ್ನ ಭಾವ ಭಾವ್ಯ ಭಾವಕವೆಂಬ ತ್ರಿಪುಟಿಯನು
ಸಚ್ಚಿದಾನಂದಸ್ವರೂಪಕ್ಕೆ ಮಹಾಧ್ಯಾನದೊಳೊಂದಿ
ಮುಗ್ಧಮುಖವಾಗಿರ್ದೆನು.
ಎನ್ನ ಮಹಾನುಭಾವ ಗುರುನಿರಂಜನ ಚನ್ನಬಸವಲಿಂಗವಾಗಿ
ಮುಂದಿರಿಸಿ ಭಕ್ತಿಯ ಮಾಡುವೆನು. || ೧೫೭ ||

೧೫೮

ಸುಜ್ಞಾನಕ್ರಿಯಾಘನಗುರುಮೂರ್ತಿ ಒಲಿದು
ಪರಶಿವಲಿಂಗವ ಕೊಟ್ಟ ಬಳಿಕ,
ಆ ಲಿಂಗದಲ್ಲಿಯೇ ಬೆಳಗನರಿದು ಕಂಡು ಸುಖಿಸಬೇಕಲ್ಲದೆ,
ಬೇರೆ ಬೆಳಗ ಕಂಡು ಸುಖಿಸಬೇಕೆಂದು
ಗುರು-ಲಿಂಗ-ಜಂಗಮ-ಪಾದೋದಕ-ಪ್ರಸಾದವನುಳಿದು
ಕಂಡಂತೆ ನಡೆವ ತಂಡ ಭಾವಕರಿಗೆ
ಗುರುನಿರಂಜನ ಚನ್ನಬಸವಲಿಂಗದ ಬೆಳಗು ಎಂದಿಗೂ ಕಾಣಬಾರದು. ||೧೫೮||

೧೫೯

ಕಾಣಬಾರದ ಲಿಂಗ ಕೈಗೆ ಬಂದಿತ್ತಾಗಿ
ಮಾಡಬಾರದ ಭಕ್ತಿಯ ಮಾಡುತಲಿರ್ದೆನು.

ನಡೆಯಬಾರದ ನಡೆಯ ನಡೆವೆ,
ಮತ್ತೊಂದನರಿಯೆ,
ನೋಡಬಾರದ ನಡೆ ಕಣ್ಣಮುಂದೆ ಬಂದಿತ್ತಾಗಿ ಅದ್ವೈತನಡೆಯ ಕಾಣಲಿಲ್ಲ.
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಕಷ್ಟಕರ್ಮದ ಬಟ್ಟೆಯ ಬೆಳಗಿನೊಳಗಿರ್ಪ
ಹೊಟ್ಟೆಹೊರಕರ ಮಾತನೆಣಿಸಲಿಲ್ಲ. ॥ ೧೫೯ ॥

೧೬೦

ಅಭೇದನಖಂಡ ಪರಶಿವಲಿಂಗವೆನ್ನ ಕುರಿತು,
ಸುಭೇದಸುಪ್ರಕಾಶತ್ರಯವಾಗಿ,
ಕ್ರಿಯಾಪಾದ, ಜ್ಞಾನಪಾದ, ಚರ್ಯಾಪಾದವೆಂಬ
ಪಾದತ್ರಯಕ್ಕನುಗ್ಗೈದು ಬಂದಲ್ಲಿ,
ಕರಣತ್ರಯ ಕರ್ಮವಿರಹಿತನಾಗಿ,
ಕಾರ್ಯದಿಂದರ್ಚಿಸಿ ಮಾಡಿ ಆನಂದಿಸುವೆ
ಗುರುವಿನೊಳು ಲಿಂಗಜಂಗಮವ ಕಂಡು.
ಮನದಿಂದರ್ಚಿಸಿ ಮಾಡಿ ಆನಂದಿಸುವೆ
ಲಿಂಗದಲ್ಲಿ ಜಂಗಮಗುರುವ ಕಂಡು.
ಪ್ರಾಣದಲ್ಲಿ ಅರ್ಚಿಸಿ ಮಾಡಿ ಆನಂದಿಸುವೆ
ಜಂಗಮದಲ್ಲಿ ಗುರುಲಿಂಗವ ಕಂಡು.
ಅರ್ಥ ಪ್ರಾಣ ಅಭಿಮಾನವಿಲ್ಲ ಗುರುನಿರಂಜನ ಚನ್ನಬಸವಲಿಂಗ. ॥ ೧೬೦ ॥

೧೬೧

ಎನ್ನ ತನುವಿನಲ್ಲಿ ಗುರುಪ್ರಕಾಶವ ಕಂಡು
ಮಾಡುವೆನಯ್ಯಾ ದಣಿವಂತೆ ಭಕ್ತಿಯ.
ಎನ್ನ ಮನದಲ್ಲಿ ಲಿಂಗಪ್ರಕಾಶವ ಕಂಡು
ಮಾಡುವೆನಯ್ಯಾ ದಣಿವಂತೆ ಪೂಜೆಯ.
ಎನ್ನ ಭಾವದಲ್ಲಿ ಜಂಗಮಪ್ರಕಾಶವ ಕಂಡು
ಮಾಡುವೆನಯ್ಯಾ ದಣಿವಂತೆ ದಾಸೋಹವ.
ಗುರುಲಿಂಗಜಂಗಮವೊಂದೆಂದು ಅಭಿನ್ನಭಾವದ ಬೆಳಗಿನೊಳಗೆ
ಒಪ್ಪುತಿರ್ದೆನಯ್ಯಾ ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ. ॥೧೬೧॥

೧೬೨

ಆಕಾಶದ ಬೆಳಗು ಲೋಕೇಶನ ಮಠಕ್ಕೆ ಬಂದಲ್ಲಿ
ಅನೇಕರು ಕೊಡನೊಡೆದು ಸೀರಿಗೆ ಬಂದರು ನೋಡಾ !

ಲೋಕೇಶ ಕೂಡಿ ದಾರಿ ತಪ್ಪಿಸಿ, ಮಾರ್ಗವಿಡಿದು
ಕಪ್ಪವ ಕೊಟ್ಟು ತನ್ನ ತಪ್ಪಿಸಿಕೊಂಡಡೆ
ಒಪ್ಪಾಯಿತ್ತು ಗುರುನಿರಂಜನ ಚನ್ನಬಸವಲಿಂಗಕ್ಕೆ ಭಕ್ತಿ. ॥ ೧೬೨ ॥

೧೬೩

ಕೆಂಡದ ಹೆಡಿಗೆಯ ಹೊತ್ತು ಮಂಡಲದೊಳಗಾಡುವ
ಪುಂಡನ ಕೈಯೊಳಗೆ ಬಿಳಿಯವೆರಡು ದಾರ ನೋಡಾ !
ಮೂದೇವರ ಕೊರಳ ಕಟ್ಟಿ ಮತ್ತೆ ಮೂವರಿಗೆತ್ತಿ ನೀಡಿ
ಅತ್ತಲರಿಯದಿರ್ದಡೆ ಎತ್ತಿಕೊಂಬುವ
ಗುರುನಿರಂಜನ ಚನ್ನಬಸವಲಿಂಗ. ॥ ೧೬೩ ॥

೧೬೪

ಮಡುವಿನೊಳು ನಿಂದು ಹರಿವ ನೀರ ಮುಟ್ಟಿ,
ಬೇರೊಬ್ಬನ ಕೂಡ ಹಾದರವ ಮಾಡುವಳ ಕಂಡು,
ಬಯಲೊಳಗೆ ನಿಂದು ಎಲ್ಲಗಳು ಅಹುದೆಂದು
ಕೆಟ್ಟ ಕಣ್ಣಿನಿಂದ ಜರಿಯುತಿರ್ದನೊಬ್ಬ ಸುಳ್ಳ.
ಗಾಳಿ ಮೊಟ್ಟೆಯ ಕಟ್ಟಿ ಕಾಳೋರಗನ ಹೆಡೆಯನೆತ್ತಿ
ಮನೆ ಮನೆ ತಿರಿದುಂಡು ಹೋಗಿ ಬರುವನೊಬ್ಬ ಭ್ರಾಂತ.
ಹೆಂಗಸು ಗಂಡಸು ಕಷ್ಟಿಗನು ಇವರ ಕಂಡು
ನಗುತ ಮಾಡಿಕೊಂಡಿರ್ದ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಅಭಿನ್ನ ಭಕ್ತ. ॥ ೧೬೪ ॥

೧೬೫

ಕರಿಯ ಕಾಳಿನೊಳಗೆ ಕತ್ತಲ ಬೆಳಗಿನೊಳು
ನರಳುತ್ತ ನೇಯುತಿದ್ದನೊಬ್ಬ ಜಾಡ.
ಕುಳಿಯೊಳಗಣ ಬೆಂಕಿಯುಳಿದು
ಮಗ್ಗದ ನೂಲು ಸುಟ್ಟು, ಚಿಂತೆ ಮಾಡುತ್ತಿರಲು,
ಮೇಲುಮನೆಯಿಂದೊಬ್ಬ ನೋಡಿ ಕೈಗೊಟ್ಟು
ಕಾಲೆರಡು ಸಂದಿನೊಳಗೆ ಇಕ್ಕಿದಮೇಲೆ ತಿರುಗಿ ಜೀವಿಸಲುಂಟೆ ?
ಗುರುನಿರಂಜನ ಚನ್ನಬಸವಲಿಂಗಕ್ಕೆ
ಇರ್ದುದ ಕೊಟ್ಟು ಸದ್ದಿಲ್ಲದಿರ್ದಡೆ ಸದ್ಭಕ್ತನೆಂಬೆ. ॥ ೧೬೫ ॥

೧೬೬

ಭಕ್ತನ ಶ್ರದ್ಧೆ ಗುರುಲಿಂಗಜಂಗಮವೇ ಪ್ರಾಣವೆಂಬುದು.
ಭಕ್ತನ ನಿಷ್ಠೆ ಪಂಚಾಕ್ಷರಿಯೇ ಪ್ರಾಣವೆಂಬುದು.
ಭಕ್ತನ ಸಾವಧಾನ ಪ್ರಸಾದವೇ ಪ್ರಾಣವೆಂಬುದು.
ಭಕ್ತನ ಅನುಭಾವ ರುದ್ರಾಕ್ಷಿಯೇ ಪ್ರಾಣವೆಂಬುದು.
ಭಕ್ತನ ಆನಂದ ಪಾದೋದಕವೇ ಪ್ರಾಣವೆಂಬುದು.
ಭಕ್ತನ ಸಮರಸ ಶ್ರೀ ವಿಭೂತಿಯೇ ಪ್ರಾಣವೆಂಬುದು.
ಇಂತು ಅಷ್ಟಾವರಣ ಪ್ರಾಣವಾಗಿ,
ನಡೆಯೇ ಪ್ರಕಾಶವಾಗಿರ್ದ ನಮ್ಮ
ಗುರುನಿರಂಜನ ಚನ್ನಬಸವಲಿಂಗ ಮೆಚ್ಚುವಂತೆ. ॥ ೧೬೬ ॥

೧೬೭

ಗುರುಲಿಂಗಜಂಗಮವನು ಭಿನ್ನವಿಟ್ಟರಿದರೆ
ಶ್ರದ್ಧೆ ನಾಚಿ ಭಕ್ತತ್ವವ ನುಂಗಿ ಬಯಲಾಯಿತ್ತು.
ಪಂಚಾಕ್ಷರಿಯ ಭಿನ್ನವಿಟ್ಟರಿದರೆ
ನಿಷ್ಠೆ ನಾಚಿ ಮಹೇಶ್ವರತ್ವವ ನುಂಗಿ ಬಯಲಾಯಿತ್ತು.
ಪ್ರಸಾದವ ಭಿನ್ನವಿಟ್ಟರಿದರೆ
ಸಾವಧಾನ ನಾಚಿ ಪ್ರಸಾದಿಸ್ವರೂಪವ ನುಂಗಿ ಬಯಲಾಯಿತ್ತು.
ರುದ್ರಾಕ್ಷಿಯ ಭಿನ್ನವಿಟ್ಟರಿದರೆ
ಅನುಭಾವ ನಾಚಿ ಪ್ರಾಣಲಿಂಗಿಸ್ವರೂಪವ ನುಂಗಿ ಬಯಲಾಯಿತ್ತು.
ಪಾದೋದಕ ಭಿನ್ನವಿಟ್ಟರಿದರೆ
ಆನಂದಭಕ್ತಿ ನಾಚಿ ಶರಣತ್ವವ ನುಂಗಿ ಬಯಲಾಯಿತ್ತು.
ಶ್ರೀ ವಿಭೂತಿಯ ಭಿನ್ನವಿಟ್ಟರಿದರೆ
ಸಮರಸ ನಾಚಿ ಐಕ್ಯತ್ವವ ನುಂಗಿ ಬಯಲಾಯಿತ್ತು.
ಇಂತು ಅಷ್ಟಾವರಣ ಭಿನ್ನವಿಟ್ಟು ಷಟ್‌ಸ್ಥಲಬ್ರಹ್ಮ ಯಾದೆನೆಂದರೆ
ಫಲಪದವತ್ತ ನಿಜಪದವರಿಯಬಾರದು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿತನು. ॥ ೧೬೭ ॥

೧೬೮

ಅಯ್ಯಾ, ಭಕ್ತಿವಿರಹಿತ ಗುರುವನರಿಯಬಾರದು.
ನಿಷ್ಠೆವಿರಹಿತ ಲಿಂಗವನರಿಯಬಾರದು.
ಸಾವಧಾನವಿರಹಿತ ಪ್ರಸಾದವನರಿಯಬಾರದು.

ಅನುಭಾವವಿರಹಿತ ಜಂಗಮವನರಿಯಬಾರದು.
ಆನಂದವಿರಹಿತ ಪಾದೋದಕವನರಿಯಬಾರದು.
ಸಮರಸವಿರಹಿತ ಮಹಾನುಭಾವಸಂಗವನರಿಯಬಾರದು.
ಇದು ಕಾರಣ, ಭಕ್ತಿಶೂನ್ಯನಾದಲ್ಲಿ ಭವದಿಂದತ್ತ ಕಾಣನು
ಗುರುನಿರಂಜನ ಚನ್ನಬಸವಲಿಂಗದ ನಿಜವ. || ೧೬೮ ||

೧೬೯

ಮೂರೊಲಿಯ ಬೆಂಕಿಯ ಹಚ್ಚಲೊಲ್ಲದೆ ಊರು ಸುಡದು.
ಊರು ಸುಟ್ಟಲ್ಲದೆ ಕೇರಿಯವರು ಸಾಯರು.
ಕೇರಿಯವರು ಸತ್ತಲ್ಲದೆ ಪರಿಜನರು ತಿರುಗರು.
ಪರಿಜನರು ತಿರುಗಲಲ್ಲದೆ ಶ್ರದ್ಧೆ ನೆಲೆಗೊಳ್ಳದು.
ಶ್ರದ್ಧೆ ನೆಲೆಗೊಂಡಲ್ಲದೆ ಗುರುನಿರಂಜನ ಚನ್ನಬಸವಲಿಂಗವನರಿಯಬಾರದು.
||೧೬೯||

## ಭಕ್ತನ ಶರಣಸ್ಥಲ

೧೭೦

ಅಯ್ಯಾ, ಎನ್ನ ತನುಶುದ್ಧವ ಕಂಡು ಸೇವೆಯ ಕೊಳ್ಳಯ್ಯಾ.
ಲಿಂಗಯ್ಯಾ, ಎನ್ನ ಮನಶುದ್ಧವ ಕಂಡು ಪೂಜೆಯ ಕೊಳ್ಳಯ್ಯಾ.
ಸಂಗಯ್ಯಾ, ಎನ್ನ ಪ್ರಾಣಶುದ್ಧವ ಕಂಡು ದಾಸೋಹವ ಕೊಳ್ಳಯ್ಯಾ.
ಎಲೆ ಅಯ್ಯಾ, ಎನ್ನ ಭಾವಶುದ್ಧವ ಬಂದು ಕೂಡಯ್ಯಾ.
ಗುರುನಿರಂಜನ ಚನ್ನಬಸವಲಿಂಗಯ್ಯಾ ತಪ್ಪೆನ್ನದು ತಪ್ಪೆನ್ನದು. || ೧೭೦ ||

೧೭೧

ಕಾಲುತೊಳೆದು ಬಾಯಿತೊಳೆದು
ಅಕ್ಕಿಯ ಥಳಿಸಿ ಪಾಕವ ಮಾಡಿ ಕೈಯೆತ್ತಿ ನೋಡುತ್ತಿರ್ದೆನು.
ಕಸ ಮಣ್ಣು ಹರಳ ತೆಗೆದೊಗೆದು
ರಸನೆಗಿಕ್ಕದ ಸಕ್ಕರೆ ಹಾಲುಗೂಡಿ
ಸಸಿನೆ ಬಾಗಿ ಭಾವಿಸುತಿರ್ದೆ ಎಲೆ ಅಕ್ಕ.
ಏನೆನಗೆ ವಶಗತ ಮಾಡಿದರೆ ಶಶಿಧರನೊಲಿವ
ನಮ್ಮ ಗುರುನಿರಂಜನ ಚನ್ನಬಸವಲಿಂಗ ಕಾಣೆಯಕ್ಕಾ. || ೧೭೧ ||

೧೭೨

ನಾಚಿಕೆಯಿಲ್ಲದ ಹೆಂಡತಿ, ಗುಣವಿಲ್ಲದ ಗಂಡನ ಮದುವೆಯ ನಿಬ್ಬಣವಲ್ಲಿ.
ಮಿಂಡರ ಗುದ್ದಾಟ ಘನವಾಯಿತ್ತು ನೋಡಾ !

ಚೆನ್ನೆಯ ಜಪ್ಪನದ ಸುಖವ ಚನ್ನಿಗರು ಮೋಹಿಸಿ ಭೋಗವ ಮಾಡಿದರೆ,
ಗುರುನಿರಂಜನ ಚನ್ನಬಸವಲಿಂಗಕ್ಕೆ ಪರಿಣಾಮವಾಯಿತ್ತು. ॥ ೧೭೨ ॥

೧೭೩

ಬಿಳಿಯಶೃಂಗಾರದಂಗನೆ ಸಂಗವಮಾಡಿ ಕುಲಗೆಟ್ಟಳು ನೋಡಾ !
ಆರಾರ ಮನೆಯ ಹೊಕ್ಕು, ಅಲ್ಲಲ್ಲೆ ನಲ್ಲರ ಕೂಡಿ
ಉಂಡು ಭೋಗವ ಮಾಡುತ್ತಿರಲು,
ಗಂಡಸಹಿತ ಮಾವ ಮುತ್ತೆಯರು ಬಂದು ಬಂದು ಕಾಡಿವರೆ
ಮಂಡಲಪತಿಗೊಂದು ಲಕ್ಷವನಿಟ್ಟು ಕಾಲು ಕೈಹಿಡಿದು,
ವೀಳ್ಯೆಯಿಂದೆ ಅವರ ಮನ್ನಿಸಿ,
ಕಪ್ಪವ ಕೊಟ್ಟು, ಒಲುಮೆಯ ಪಡೆದು ಓಲಾಡುತಿರ್ದಳು ನೋಡಾ,
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮಾದಿಕುಳವಂಗನೆ ನೋಡಾ ! ॥೧೭೩॥

೧೭೪

ಗಂಡನ ತಾಳಿಯ ಒರೆದು ನೋಡಿದರೆ
ಮೂರು ಬಣ್ಣದೊಳಗೆ ಅನಂತ ಬಣ್ಣಗಳಾಗಿ ಒಪ್ಪುತಿರ್ದವು ನೋಡಾ !
ನಮ್ಮಾತನ ಒಲುಮೆಗೆ ಬಣ್ಣದ ಸಾರವ ಸುಖಿಸಬಂದ
ಅಣ್ಣಗಳ ಕಣ್ಮನ ಭಾವಕ್ಕೆ ಕಾರ್ಯವಾದರೆ
ಕಾರಣನಾಗಿರ್ದ ನಮ್ಮ ಗುರುನಿರಂಜನ ಚನ್ನಬಸವಲಿಂಗ. ॥ ೧೭೪ ॥

೧೭೫

ಐದಂಗದಂಗನೆಯಾನು ಬಾರಯ್ಯಾ.
ಐದು ಕೆಳದಿಯರೆನಗೆ ನೋಡಯ್ಯಾ.
ಹಿರಿಯ ಕಾಲದ ದೇವರ ಪರವೆನಗಯ್ಯಾ.
ಬೇಡಿದ್ದು ಮಾಡಿ ಮನೆ ತುಂಬಿಸುವ ಬಾರಯ್ಯಾ.
ಕೈಗೂಡಿ ಕಾರ್ಯವ ಮಾಡಿ, ಮನಗೂಡಿ ಒಗತನ ಮಾಡಿ,
ಪ್ರಾಣಗೂಡಿ ಇಚ್ಛೆಯನರಿದಿತ್ತು,
ಪರಮಪದವಿಯೊಳೋಲಾಡುವ ಬಾರಯ್ಯಾ.
ಗುರುನಿರಂಜನ ಚನ್ನಬಸವಲಿಂಗ ಮೆಚ್ಚುವಂತೆ. ॥ ೧೭೫ ॥

೧೭೬

ದಿವದಿವಸಾನು ಅವಸ್ಥಾತ್ರಯದೊಳಾಲೋಚನೆಯಂಗೆಯ್ಯುತಿರ್ದೆನವ್ವಾ.
ಕೆಳದಿಯರೊಂದಾಗಿ ಬೆಳುದಿಂಗಳೊಳು ನಿಂದು

ಕಳವಳಗೊಂಡು ಸುಳುಹನಾಲಿಸುತಿರ್ದೆನಪ್ಪ,
ಎನ್ನಂಗಳ ಮುಂದೆ ಆತ ಸನ್ನಿಹಿತ ಬಂದರೆ
ನೋತ ಫಲ ಸಂಭವಿಸಿತ್ತೆನಗಪ್ಪ.
ಕಾಯವದಣಿವಂತೆ ಮಾಡಿ ಮುಂದುಗೊಂಡಿಪ್ಪೆ,
ಮನವದಣಿವಂತೆ ನೋಡಿ ಮುಂದುಗೊಂಡಿಪ್ಪೆ,
ಪ್ರಾಣವದಣಿವಂತೆ ನೀಡಿ ಮುಂದುಗೊಂಡಿಪ್ಪೆನಪ್ಪ.
ಭಾವದಣಿವಂತೆ ಸಮಸುಖಾನಂದದೊಳೋಲಾಡುತ್ತ ಮುಂದುಗೊಂಡಿಪ್ಪೆ.
ಗುರುನಿರಂಜನ ಚನ್ನಬಸವಲಿಂಗ ಶರಣರೆನ್ನ
ಮನೆಗೆ ಬರುವಂತೆ ಮಾಡಾ ಎಲೆ ಅಪ್ಪಾ. ॥ ೧೭೬ ॥

೧೭೭

ಮುತ್ತೈದೆ ಸತ್ಯಕ್ಕಗಳಿರಾ !
ನಿತ್ಯರೆನ್ನ ಮನೆಗೆ ಕರ್ತುವಾಗಿ ಬಂದರೆ ಅರ್ಥವನೀವೆ.
ಅವರಿರತಕ್ಕ ಇಚ್ಛೆ ಬಾರದಮುನ್ನ ಎಚ್ಚರವನೀವುತ ಬನ್ನಿರೆ.
ಪಂಚವರ್ಣದಾಭರಣವ ನಿಮ್ಮ ಕೈಯಿಂದೆ ಕೊಡಿಸುವೆ,
ನಾನಚ್ಚುತಗೊಂಡೆ ಎನ್ನ ಬಯಕೆಯನೊಯ್ದೊಪ್ಪಿಸಿ
ಅವರ ಸಮರಸಾನಂದವೆನಗಿತ್ತಡೆ
ನಿಮ್ಮ ಕೈಯಲ್ಲಿ ನಿರಂತರ ಗುರುನಿರಂಜನ ಚನ್ನಬಸವಲಿಂಗ. ॥ ೧೭೭ ॥

೧೭೮

ಅಂಗವಿಲ್ಲದೆ ಸಂಗಸನ್ನಿಹಿತ ಜಂಗಮವೆನ್ನಲ್ಲಿಗೈತಂದರೆ,
ಮಂಗಳಾರತಿಯನೆತ್ತಿ,
ಎನ್ನ ಸಂಗ ಎನ್ನ ಅಂಗ ಮನ ಭಾವಂಗಳೊಪ್ಪಿ ಕರೆತರುವೆ ಕೇಳಿರವ್ವಾ !
ಬಂದ ಬರವ ಕಂಡು ಕರಣತ್ರಯ ಕೈಗೂಡಿ ಮಾಡುವೆ
ನೀವು ಮೆಚ್ಚುವಂತೆ ಕೇಳಿರವ್ವ ಕೆಳದಿಯರೆಲ್ಲ.
ಮತ್ತೆ ನಿಮ್ಮ ನಿಲವೆನ್ನವೊಳಹೊರಗೆ ಸಯವಾದರೆ
ಗುರುನಿರಂಜನ ಚನ್ನಬಸವಲಿಂಗದೊಲುಮೆ ನಿತ್ಯ ಕಾಣಿರವ್ವಾ. ॥ ೧೭೮ ॥

೧೭೯

ಬಂಗಾರವನೊಲ್ಲೆ, ಶೃಂಗಾರವನೊಲ್ಲೆ,
ಇಹದ ವಾರಿಯನೊಲ್ಲೆ, ಪರವ ನೆರವಿಯನೊಲ್ಲೆ,
ಮತ್ತೇನುವೊಲ್ಲೆ ಕಂಗಳ ಮುಂದೆ ಸಂಗಯ್ಯ ಬಂದುದೆನಗೆ ಸಾಕು.
ಮನಹೆಚ್ಚಿ ಮಾಡಿ ನೇಮಿಸಿದ ಘನರತಿಯನು,

ಹೆಂಗಳೆಯರ ಸಹವಾಗೆನ್ನಕೂಡಿ ಪರಿಣಾಮಿಸಿದರೆ ಸಾಕು.
ಗುರುನಿರಂಜನ ಚನ್ನಬಸವಲಿಂಗವೆನಗೆ ಮೆಚ್ಚಿದರೆ ಸಾಕು. ॥ ೧೭೯ ॥

೧೮೦

ಆದಿಯ ನಲ್ಲನು ಹಾದಿಗೆ ಬಂದರೆ ಸಾಧಿಸಿ ಕರೆತಂದುಕೊಡಿರಮ್ಮ.
ಎನಗೆ ಕುಸುಮಾಳಿ ಕಸ್ತೂರಿ ಚಂದನ ತೈಲವ
ತಾನರಿದು ಧರಿಸಿ ಮುಡಿಸಲಿ,
ಚಲುವಾಭರಣವ ತಾ ಮುಟ್ಟಿ ಧರಿಸಲಿ,
ಸೌಖ್ಯಗೀತ ನೂತನಾದಿಗಳ ತಾ ನೋಡಿ, ಕೇಳಿ, ತೋರಿ ತಿಳಿಸಲಿ.
ಸುಷಡುರಸವ ತಾ ರುಚಿಸೀಯಲಿ,
ಎನ್ನ ಸಕಲ ಸುಖಾನಂದವ ತಾ ಭೋಗಿಸೆನಗಿತ್ತರೆ
ಸಕಳೆಯರೊಲವೆನಗೆಂಬೆ ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೧೮೦ ॥

೧೮೧

ಮುತ್ತಿನ್ನೈದೊಂದೆಳೆಯ ಕಟ್ಟಾಣಿ ಎನ್ನ ಕೊರಳಲ್ಲಿ ಒಪ್ಪುತಿಪ್ಪುದು.
ಸುತ್ತಿಬಂದ ಒಡ್ಯಾಣ ಎನ್ನ ನಡುಮಧ್ಯದಲ್ಲಿ ಝುಗಝುಗಿಸುತಿಪ್ಪುದು.
ಕಾಲ ರುಳಿ ಕಣ್ಣಿಂಗೆ ಮಿರುಗುತಿಪ್ಪುದು,
ನವನೂತನ ಚಿಂತಾಕರ ಮಧ್ಯೆಕೊರಳಿಗೆ ಸಮನಾದ ಮೇಲೆ,
ತವಕ ಮುಂದುಗೊಂಡಿತ್ತು ತಡವೇಕೆ ನಡೆ
ನಮ್ಮ ಗುರುನಿರಂಜನ ಚನ್ನಬಸವಲಿಂಗವ ಮನ್ನಿಸಿ ಕರತನ್ನಿ. ॥ ೧೮೧ ॥

೧೮೨

ಅಯ್ಯನರಾಣಿಯೆಂಬುದ ಊರೆಲ್ಲ ಬಲ್ಲುದು.
ಕೇರೆಲ್ಲ ಬಲ್ಲುದು, ಜನರೆಲ್ಲ ಬಲ್ಲರು ಇನ್ನಾರಂಜಿಕೆಯೆನಗೆ?
ಸಾರಿದಡಹುದು ಸಾರದಿರ್ದಡಹುದು,
ಕೊಟ್ಟಡಹುದು ಕೊಡದಿರ್ದಡಹುದು,
ಎಂತಿರ್ದಂತೆ ಸಂತ ನೋಡಾ,
ಗುರುನಿರಂಜನ ಚನ್ನಬಸವಲಿಂಗ ತನ್ನಂಗವಾದವಳನೇನ ಮಾಡಿವರೇನು?
॥ ೧೮೨ ॥

೧೮೩

ರಾಜನ ಭೂಮಿಯಲ್ಲಿ ಗ್ರಾಮ ಕ್ಷೇತ್ರ ಪ್ರಬಲಿತವಾಗಿ
ಜನರು ಸುಖಿಸಿದರೆ ಭಿನ್ನವೆಲ್ಲಿಹದೋ!

ಪರಿಣಾಮವಲ್ಲದೆ ಪರಶಿವಾಂಶಿಕರು ಅಂಗವಿಡಿದು
ಸರ್ವಾಚಾರಸಂಪತ್ತಿನೊಳಗಿರ್ದರೆ ಭಿನ್ನವೆಲ್ಲಿಹದೊ,
ಗುರುನಿರಂಜನ ಚನ್ನಬಸವಲಿಂಗಕ್ಕೆ ಪತ್ನಿಯ ಸೌಭಾಗ್ಯಸುಖ ಪತಿ. ॥ ೧೮೩ ॥

೧೮೪

ಪತಿಮೋಹಪೂರ್ಣೆ ಅತಿ ಉನ್ನತೆಯೆನಿಸುವಳು ಒಳ ಹೊರಗೆ,
ಲಿಂಗ ಮೋಹಭರಿತ ಭಕ್ತ ಗತಿಮತಿಗಂಭೀರನೆಂದುಲಿದು
ಹೊರಳುವರು ಅಂತರ್ಬಾಹ್ಯಶರಣರು,
ಆನು ಅಂಗೋಪಚಾರಿ,
ಗುರುನಿರಂಜನ ಚನ್ನಬಸವಲಿಂಗ ಪ್ರಾಣ,
ಮತ್ತೇನುಯಿಲ್ಲ. ॥ ೧೮೪ ॥

೧೮೫

ವಂಚನೆವಿರಹಿತ ಕಾಯ ಉಪಚಾರಕ್ಕತಿ ಸೌಖ್ಯವಯ್ಯಾ.
ಚಂಚಲವಿಲ್ಲದ ಮನ ಅನುಕೂಲಗತಿ ರಮ್ಯವಯ್ಯಾ.
ಭಿನ್ನಭ್ರಾಮಕವಳಿದ ಭಾವ ಸ್ನೇಹಸೌಖ್ಯಾನಂದವಯ್ಯಾ.
ಈ ತ್ರಿವಿಧವಳಿದುಳಿದು ನಿಂದ ನಿಯತನಯ್ಯಾ ನಾನು
ಗುರುನಿರಂಜನ ಚನ್ನಬಸವಲಿಂಗಕ್ಕೆ
ಅಭಿನ್ನಭಾವಿ ನಾನು, ಬಾರಯ್ಯಾ ತಂದೆ. ॥ ೧೮೫ ॥

೧೮೬

ಬಾರಯ್ಯಾ ಬಾರಯ್ಯಾ ಬಂದೊಮ್ಮೆ ನೋಡಯ್ಯಾ
ಎನ್ನ ತನುಭಕ್ತಿ ಕೊರತೆಯನು.
ಬಾರಯ್ಯಾ ಬಾರಯ್ಯಾ, ನಿಂದು ನಿಂದೊಮ್ಮೆ ನೋಡಯ್ಯಾ.
ಬಾರಯ್ಯ ಬಾರಯ್ಯ, ಬಂದು ನಿಂದು ಸಂದೊಮ್ಮೆ ನೋಡಯ್ಯಾ,
ಎನ್ನ ಭಾವಭಕ್ತಿ ಕೊರತೆಯನು.
ಗುರುನಿರಂಜನ ಚನ್ನಬಸವಲಿಂಗಯ್ಯಾ
ನಿನ್ನಂಗದಲ್ಲಿ ಎನ್ನ ನೋಡಯ್ಯಾ. ॥ ೧೮೬ ॥

೧೮೭

ಅತ್ತಿತ್ತರಿಯದವಳ ಚಿತ್ತ ಸತ್ಯವೆಂದು ಕಾಣಯ್ಯಾ.
ಹಿಂದೆ ಮುಂದೆ ತಂದು ನಿಂದವಳ ಚಂದ ನಿಮಗಂದವಾಯಿತ್ತಯ್ಯಾ.
ಬಂದ ಬಂದೊಲುಮೆಯನೊಂದು ತೋರದೆ ಇಂದು ಕೊಳ್ಳಾ,

ಮುಂದೆನಗೆ ಸಮರಸದ ಕಲೆಯಿತ್ತು ಕೂಡಾ
ಗುರುನಿರಂಜನ ಚನ್ನಬಸವಲಿಂಗಾ. || ೧೮೭ ||

## ಭಕ್ತನ ಐಕ್ಯಸ್ಥಲ

೧೮೮

ಅನಾದಿ ಪರಶಿವನು ಭೂಮಿಯ ನಿರ್ಣಯಲಲ್ಲಿ ನೆಲೆಸಿದ ಮೇಲೆ,
ಬೆಳೆದಳಿವ ಭೂರುಹಕ್ಕೆ ಆಸ್ಪದ ಹರಿಯಣಲೊಳಗಡಗಿತ್ತು.
ಆ ಪಾವಕಪ್ರಭೆ ಸಕಲಪನೊಳಕೊಂಡು
ಅನಿಲವೆರೆದು ಅಂಬರಂಗಳನಾವರಿಸಲು
ನೆಲ್ಲು ಪಲ್ಲವಿಸಿತ್ತು, ಅಲ್ಲಮಲ್ಲರು ವಿದ್ಯೆಯ ಬೀರುತ್ತ ಶಬ್ದವಿಟ್ಟರೆ
ಬದ್ಧಮಂದಿರ ಶುದ್ಧಸುವ್ಯವಧಾನದಿಂದೆತ್ತಿಯಲು,
ಎತ್ತಿಕೊಂಡರು ಭಕ್ತಸಹಿತ ಗುರುನಿರಂಜನ ಚನ್ನಬಸವಲಿಂಗ. || ೧೮೮ ||

೧೮೯

ಹಲವು ಕಾಷ್ಠವನೊಟ್ಟಿ ಕಿಚ್ಚನಿಕ್ಕಿದರೆ
ಅದರುರಿ ಆಕಾಶಕ್ಕೆ ನೆಗೆವುದಲ್ಲದೆ ಅಧೋಕಡೆಗಾಗದು ನೋಡಾ !
ಹಲವು ಬಿತ್ತುಗಳು ಅಸ್ತಬೆಸ್ತ ಅಡಿ ಮಗ್ಗುಲಮುಖವಿರಲು
ಬೆಳೆಯಾಕಾಶದತ್ತ ಮುಖವಲ್ಲದೆ ಅಧೋಕಡೆಗಾಗದು ನೋಡಾ !
ತನುವಿಡಿದ ಭಕ್ತನಲ್ಲುದಯಿಸಿದ ಸುಜ್ಞಾನಾಗ್ನಿ
ಸಕಲವ ದಹಿಸಿ ಪ್ರಕಾಶ ಶಿವನತ್ತ ನೆಗೆದುದು.
ಅನಾದಿಭಕ್ತನಂಗದಲ್ಲಿ ಗುರುಕೃಪೆ ಹೇಗೆ ಬಿತ್ತಿದಡೇನು
ಶಿವಜ್ಞಾನ ಬೀಜಾದಿಗಳು ಪಲ್ಲವಿಸಿ
ಗುರುನಿರಂಜನ ಚನ್ನಬಸವಲಿಂಗಕ್ಕೆ ಸಸಿನ. || ೧೮೯ ||

೧೯೦

ಅಂಗಕ್ಕೆ ಅಷ್ಟಾವರಣ, ಮನಕ್ಕೆ ಮಂತ್ರ, ಪ್ರಾಣಕ್ಕೆ ಪಂಚಾಚಾರ,
ಭಾವಕ್ಕೆ ಅರಿವುಸಂಬಂಧವಾದ ಭಕ್ತ ಎಂತು ನಡೆದಂತೆ ಸಂತು.
ಹಿಂದುಮುಂದೆಂಬ ಸಂದೇಹಿಗಳ ಮಾತು ಹಿಂದಕೆ ಸರಿ.
ಗುರುನಿರಂಜನ ಚನ್ನಬಸವಲಿಂಗದಂಗವಾದ ಅಗಮ್ಯರಿಗೆ ಅಂತಿಂತೆನ್ನಲಾಗದು.
|| ೧೯೦ ||

೧೯೧

ಅವಿರಳ ಜ್ಞಾನಕ್ರಿಯೆಯಲ್ಲಿ ಅಂಗಮನವಳಿದು,
ಅಷ್ಟಾಂಗಸಂಬಂಧವಾದ ಶ್ರೇಷ್ಠ ಭಕ್ತನ.

ಸಮರಸವನರಿದಾನಂದಿಸುವ ಶಿವ ತಾನೆ.
ಆರಂಗಕ್ಕೆ ಲಿಂಗವಾಗಿರ್ದು ತನ್ನ ಸದ್ವಾಸನೆಯ ಶ್ರದ್ಧೆಗೀವ,
ತನ್ನ ಸುರಸವ ನಿಷ್ಠೆಗೀವ, ತನ್ನ ಸುರೂಪವ ಸಾವಧಾನಕ್ಕೀವ,
ತನ್ನ ಸುಸ್ಪರ್ಶನವ ಅನುಭವಕ್ಕೀವ,
ತನ್ನ ಸುಶಬ್ದವ ಆನಂದಕ್ಕೀವ,
ತನ್ನ ಮಹಾತೃಪ್ತಿಯ ಸಮರಸಕ್ಕೀವ,
ತನ್ನ ನಿಜವ ಷಟಸ್ಥಲಭಕ್ತಂಗೀವ ಗುರುನಿರಂಜನ ಚನ್ನಬಸವಲಿಂಗಾ. ||೯೧||

೯೨

ನಡೆನೋಟ ಚೈತನ್ಯದೊಡವೆರೆದು
ಒಡೆಯನ ಪಿಡಿದು ಸಡಗರಮುಖನಾದಲ್ಲಿ
ಮೊದಲು-ಮಧ್ಯ-ತುದಿ ಭಜನೆಯೆಂಬ
ಕಣ್ಮನದ ಕಳವಳನಳಿದುಳಿದ ನಿಜಾನಂದ ನೋಡಾ !
ಮಾಡಿದರೆ ಮಾಟ ಶೂನ್ಯ, ನೋಡಿದರೆ ನೋಟ ಶೂನ್ಯ,
ನೀಡಿದರೆ ನಿಲವು ಶೂನ್ಯ, ಮಾಟತ್ರಯದಾಟಭರಿತ,
ಗುರುನಿರಂಜನ ಚನ್ನಬಸವಲಿಂಗದಂಗ ತಾನೆಯಾಗಿ. || ೯೨ ||

೯೩

ಗುರುಭಕ್ತಿಯ ಮಾಡುವೆ ಗುರುವನರಿಯದೆ.
ಲಿಂಗಭಕ್ತಿಯ ಮಾಡುವೆ ಲಿಂಗವನರಿಯದೆ.
ಜಂಗಮಭಕ್ತಿಯ ಮಾಡುವೆ ಜಂಗಮುವನರಿಯದೆ.
ಪ್ರಸಾದಭಕ್ತಿಯ ಮಾಡುವೆ ಪ್ರಸಾದವನರಿಯದೆ.
ಚತುರ್ವಿಧಸಾರಾಯ ಸಗುಣಾನಂದಸುಖಿ
ಚತುರ್ವಿಧಸಾರಾಯವನರಿಯದೆ
ಗುರುನಿರಂಜನ ಚನ್ನಬಸವಲಿಂಗದೊಡಲುಗೊಂಡು
ಉಲುಹನರಿಯದಿರ್ದೆನು. || ೯೩ ||

೯೪

ಅರುವಿನ ಮಂದಿರದೊಳಡಗಿರ್ದ
ಅಜಗಣ್ಣ ಮೂರುತಿಯ ಮೂಜಗದ ಮೇಲೆ ಸ್ಥಾಪಿಸಿ,
ಗಜಬಜೆಯ ಬೆಳಗ ಪರಹಿದಲ್ಲಿ ಶ್ರದ್ಧೆಯೆಡೆಗೊಂಡಿತ್ತು,
ನಿಷ್ಠೆಯಾಪರಿಸಿತ್ತು, ಸಾವಧಾನ ಸಮವೇದಿಸಿತ್ತು,

ಅನುಭಾವ ಮುಸುಗಿತ್ತು, ಆನಂದ ತಲೆದೋರಿತ್ತು.
ಸಮರಸದಲ್ಲಿ ನಿಂದು ಪರವಶನಾದಲ್ಲಿ
ಮುಂದೆ ಗುರುನಿರಂಜನ ಚನ್ನಬಸವಲಿಂಗವೆನ್ನ ಕೈಪಿಡಿದ
ಮಹಾಲಿಂಗವಾಗಿ. || ೧೯೪ ||

೧೯೫

ಆರುಬಣ್ಣದ ಸೀರೆಯನುಟ್ಟು ಭೂಪಾಲನ ಮಡದಿ,
ತನ್ನ ಕೈಯಲ್ಲಿ ಆರುರತ್ನವ ಹಿಡಿದಿರ್ದಳು ನೋಡಾ !
ಒಂದೊಂದು ರತ್ನವ ತೋರುವಲ್ಲಿ
ಒಂದೊಂದು ಸೋಂಗ ತಾಳಿದಳು ನೋಡಾ !
ಅವಳು ನಟನೆಯ ಮಾಡುವಲ್ಲಿ ಪರಪುರುಷರ ಮೇಲೆ ಮೋಹ ನೋಡಾ !
ಮನೆಗಂಡನುಪಚಾರವನುಳಿದು ಪರಪುರುಷರ ಮೆಚ್ಚಿ ಬಿಡದೆ
ಅಚ್ಚೊತ್ತಿದಂತಿರ್ದಡೆ ಅರಿದವರು ನಗುವರು.
ಲೌಕಿಕರು ತಲೆತಗ್ಗಿಸಿ ನಾಚುವರು,
ನಮ್ಮ ಗುರುನಿರಂಜನ ಚನ್ನಬಸವಲಿಂಗ ನೋಡಿ ಅಪ್ಪಿಕೊಂಡನು. || ೧೯೫ ||

೧೯೬

ಅಯ್ಯಾ, ಎನ್ನ ಕುಲವಳಿದು ಗುರುವಿನೊಳಗಾದೆ,
ಛಲವಳಿದು ಲಿಂಗದೊಳಗಾದೆ,
ಧನವಳಿದು ಜಂಗಮದೊಳಗಾದೆ,
ರೂಪುಮದವಳಿದು ಭಸ್ಮದೊಳಗಾದೆ,
ಯವ್ವನಮದವಳಿದು ರುದ್ರಾಕ್ಷಿಯೊಳಗಾದೆ,
ವಿದ್ಯಾಮದವಳಿದು ಮಂತ್ರದೊಳಗಾದೆ,
ರಾಜಮದವಳಿದು ಪಾದೋದಕದೊಳಗಾದೆ,
ತಪಮದವಳಿದು ಪ್ರಸಾದದೊಳಗಾದೆ,
ಇಂತು ಸಕಲವಳಿದು ಗುರುನಿರಂಜನ ಚನ್ನಬಸವಲಿಂಗಕ್ಕೆ
ಅಂಗವಾದೆ ಕಾಣಾ. || ೧೯೬ ||

೧೯೭

ಭಕ್ತಿತ್ರಯದಲ್ಲಿ ಯುಕ್ತರಾದ ಮಹಿಮರು :
ಇಹಪರದಲ್ಲಿ ಚಂದ್ರನ ಇರವು ಸಕಲರಿಗೆ,
ಇಹಪರದಲ್ಲಿ ಸೂರ್ಯನಿರವು ಸಕಲರಿಗೆ.

ಇಹಪರದಲ್ಲಿ ಅಗ್ನಿಯಿರವು ಸಕಲರಿಗೆ,
ಇಹಪರದಲ್ಲಿ ಗುರುನಿರಂಜನ ಚನ್ನಬಸವಲಿಂಗದಂಗದಿರವು
ಸಕಲನಿಃಕಲರಿಗೆ. || ೧೯೭ ||

೧೯೮

ಭಕ್ತ ಭವಿಯಾಗಲರಿಯನು, ಭವಿ ಭಕ್ತನಾಗಲರಿಯನು.
ಬೇವು ಸಿಹಿಯಾಗಲುಂಟೆ ?
ಭವಿಯ ತಂದು ಭಕ್ತನ ಮಾಡಿದರೆ ಮಾಟಕರ ನೋಟವ ಬಲ್ಲನೆ ?
ನೋಟಹೀನನ ಮಾಟ ಕೂಟಕ್ಕೆ ದೂರ
ಗುರುನಿರಂಜನ ಚನ್ನಬಸವಲಿಂಗಕ್ಕಂಗವಾದಖಂಡ ಭಕ್ತನಲ್ಲದೆ. || ೧೯೮ ||

೧೯೯

ಮದವಳಿದು ಗುರುಭಕ್ತಿಗೂಡಿ ಬಂದನಯ್ಯಾ ನಿಮ್ಮ ಶ್ರದ್ಧಾಭಕ್ತ.
ಕಾಮವಳಿದು ಲಿಂಗಭಕ್ತಿಗೂಡಿ ಬಂದನಯ್ಯಾ ನಿಮ್ಮ ನಿಷ್ಠಾಭಕ್ತ.
ಮತ್ಸರವಳಿದು ಜಂಗಮಭಕ್ತಿಗೂಡಿ ಬಂದನಯ್ಯಾ ನಿಮ್ಮ ಸಾವಧಾನಭಕ್ತ.
ಮೋಹವನಳಿದು ಪಾದೋದಕಪ್ರಸಾದ ಭಕ್ತಿಯಗೂಡಿ ಬಂದನಯ್ಯಾ
ನಿಮ್ಮ ಅನುಭಾವಭಕ್ತ.
ಕ್ರೋಧವನಳಿದು ವಿಭೂತಿ ರುದ್ರಾಕ್ಷಿಭಕ್ತಿಗೂಡಿ ಬಂದನಯ್ಯಾ
ನಿಮ್ಮ ಆನಂದಭಕ್ತ.
ಲೋಭವನಳಿದು ಪಂಚಾಕ್ಷರಿಭಕ್ತಿಗೂಡಿ ಬಂದನಯ್ಯಾ ನಿಮ್ಮ ಸಮರಸಭಕ್ತ.
ಇಂತು ಅಷ್ಟಾವರಣದ ಭಕ್ತಿಸಂಯುಕ್ತವಾಗಿ
ಗುರುನಿರಂಜನ ಚನ್ನಬಸವಲಿಂಗಕ್ಕೆ ಅಂಗವಾಗಿ ಬಂದನಯ್ಯಾ
ನಿಮ್ಮ ನಿಜಭಕ್ತ. || ೧೯೯ ||

೨೦೦

ಅಂಗವಿಲ್ಲದ ಭಕ್ತನ ಶೃಂಗಾರವ ನೋಡಾ !
ಮನವಿಲ್ಲದ ಭಕ್ತನ ಮಚ್ಚು ನೋಡಾ !
ಪ್ರಾಣವಿಲ್ಲದ ಭಕ್ತನ ಘನವ ನೋಡಾ !
ಭಾವವಿಲ್ಲದ ಭಕ್ತನ ಸುವಿಚಾರವ ನೋಡಾ !
ಪರಿಜ್ಞಾನವಿಲ್ಲದ ಭಕ್ತನ ಇರವ ನೋಡಾ !
ಗುರುನಿರಂಜನ ಚನ್ನಬಸವಲಿಂಗದಲ್ಲಿ ಸಮರಸವ ನೋಡಾ ! || ೨೦೦ ||

೨೦೧

ಇತರನರಿಯದ ಇತರ ಮರೆಯದ ಪತಿವ್ರತಾಂಗನೆಯೆನಿಪ,
ಋತಿ ಕೇಣಾದಿಗಳ ಜರಿದಿರವನುಳ್ಳ
ಪರಮಭಕ್ತನ ಪರಿಯನೇನೆಂದುಪಮಿಸುವೆನಯ್ಯಾ?
ಹತ್ತಿ ಹತ್ತಿ ಬಂದು ಸುತ್ತಲಿಕ್ಕಿ ಎತ್ತಿ ಮುಳುಗುವ
ನಿತ್ಯಭಕ್ತಂಗೆ ನಮೋ ನಮೋ ಎಂಬೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. ॥ ೨೦೧ ॥

೨೦೨

ಆದಿಭಕ್ತಿವಿಡಿದು ಮೆಲ್ಲಮೆಲ್ಲನೆ ಸಾಧಿಸಿ ಕೈಗೊಟ್ಟ ಪರಿಯ ನೋಡಾ !
ಹಾದಿ ಬಟ್ಟೆಯ ಸಾಧಕರತ್ತ ಸವೆಯದೆ
ಮೂದೇವರ ಮಾಟದೊಳಗಿರ್ದು
ಕೂಟಕೈದಿದ ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೨೦೨ ॥

೨೦೩

ಭೂ ಪೃಥ್ವಿಯ ಸುಖ ಜಲದೊಳು ನಿಂದು,
ಅಗ್ನಿವಿಡಿದು, ಅನಿಲವೆರೆದು, ಅಂಬರಗೂಡಿ,
ಆತ್ಮ ಗುರುನಿರಂಜನ ಚನ್ನಬಸವಲಿಂಗದಲ್ಲಿ
ಸಮರಸಾನಂದಸುಖಿ ನಿಮ್ಮ ಭಕ್ತ. ॥ ೨೦೩ ॥

೨೦೪

ಗುರುಲಿಂಗವು ಬಂದೆನ್ನ ಕರಸ್ಥಲಕ್ಕೈದಿದ ಮೇಲೆ,
ಸಿರಿಸಂಪತ್ತು ಸಂಭ್ರಮವಾಯಿತ್ತು ;
ಸಕಲ ಗಣತಿಂತಿಣಿ ನೆರೆಯಿತ್ತು.
ಅನುಸರಣೆ ಅಡಗಿತ್ತು, ಆಚಾರ ಬೆಳಗಿತ್ತು,
ಪುರದರಮನೆ ಪರಿಪರಿ ಶೃಂಗರಿಸಿತ್ತು,
ಎನ್ನ ಸುಚಿತ್ತವೆಂಬ ಹಸ್ತ ಸುಬುದ್ಧಿಯಸ್ಯೆದಲು,
ಗುರುನಿರಂಜನ ಚನ್ನಬಸವಲಿಂಗದಾಣತಿಗೆ
ಮಹೇಶ್ವರತ್ವ ಮುಂದುವರಿಯಿತ್ತು. ॥ ೨೦೪ ॥

## ಮಾಹೇಶ್ವರಸ್ಥಲ

ಸೂತ್ರ : ಇಂತು ಮಹಾಘನಪರಂಜ್ಯೋತಿರ್ಲಿಂಗವು ತಾನೇ ತನ್ನ ವಿನೋದಕಾರಣ, ಅಂಗಲಿಂಗಸಂಬಂಧವೆಂಬ ಅತಿಶಯಾನಂದವ ಪಸರಿಸಿದಲ್ಲಿ, ಷಟ್‍ಸ್ಥಲ ಪ್ರಕಾಶವಾಗಿ ಷಡುಲಿಂಗವಾಗಿ ನಿಂದಲ್ಲಿ, ತಾನೇ ಷಡುಭಕ್ತಿಸಂಯುಕ್ತವಾದ ಸದ್ಭಕ್ತನಾಗಿ, ಆಚಾರಲಿಂಗವ ಷಡುಭಕ್ತಿಯಿಂದರ್ಚಿಸಿ ಸಮರಸವನೈದಿ ಮಾಹೇಶ್ವರನಾಗಿ ಗುರುಲಿಂಗವ ಷಡುಭಕ್ತಿಯಿಂದ ಆಚರಿಸುತ್ತಿರಲು ಮುಂದೆ ಮಾಹೇಶ್ವರಸ್ಥಲವಾದುದು.

೨೦೫

ದಶಪಂಚಮಾಯಾಟಲಸುರುಹಿ, ಪಂಚಾಚಾರವೇ ಪ್ರಾಣವಾಗಿ,
ಕಾಯದ ಕರ್ಮಕತ್ತಲೆಯ ಪರಿಸಿ, ಅಷ್ಟಾವರಣವೇ ಅಂಗವಾಗಿ,
ಗುರುಭಕ್ತಿ, ಲಿಂಗಪೂಜೆ ಜಂಗಮದಾಸೋಹವೆ
ಮಹಾನುಭಾವವಾದ ಘನಮಹಿಮನೆ,
ಮಹಾಮಹೇಶ್ವರ ಕಾಣಾ ಗುರುನಿರಂಜನ ಚನ್ನಬಸವಲಿಂಗ. ॥ ೨೦೫ ॥

೨೦೬

ಅಪ್ರತಿಮ ಅಖಂಡ ಪರಶಿವಾನಂದ ಸಕಳನಿಃಕಳನು
ತನ್ನ ಸರ್ವಾಚಾರಸಂಪತ್ತಿನೊಳಗಿರ್ದು,
ಭಿನ್ನವಿಲ್ಲದೆ ಗುರುಲಿಂಗಜಂಗಮಕ್ಕರಿದು ಮಾಡುವಲ್ಲಿ,
ಅತ್ತಣಿತ್ತಣಿಂದೆತ್ತಿ ಬಂದು ಬೆರಸಿದ ಕತ್ತಲೆವೆರಸಿ ಚರಿಸುವ
ಷಟ್‍ಸ್ಥಲದ ಭಕ್ತ ಮಹೇಶ್ವರರುಗಳ ಮಿಥ್ಯವ ಜರೆದು ತೊಳೆಯುತ್ತ,
ಚಿತ್ತನಿರ್ಮಲಮಾಡೆತ್ತಿ ತೋರುತ್ತ,
ನಡೆಸಿ ನಡೆವ ಸತ್ಯಸದಾಚಾರವೆ ಕರ್ತುಮಹೇಶ್ವರ ಅದು ತಾನೆಯೆಂಬೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. ॥ ೨೦೬ ॥

೨೦೭

ಅಯ್ಯಾ, ಗುರುಲಿಂಗವೆನ್ನ ಕುರಿತು ಕರಸ್ಥಲಕ್ಕೆ ಬಂದ ಬಳಿಕ
ನೆರೆಹೊರೆಯವರತ್ತ ಸಾರಿ, ಕೆಂಚಕೆಡಿಗರತ್ತ ಸಾರಿ,
ಬಿಳಿಯ ಬೆಂಗಡಿಗರತ್ತ ಸಾರಿ, ಕರಿಯಗೊಂದಣಿಗರತ್ತ ಸಾರಿ,
ಮುಂದೆ ಹುಣ್ಣಿವೆಗಮ್ಮಯ್ಯನ ಯಾತ್ರೆ ಬೇಕಾದರೆ
ಅಮಾವಾಸ್ಯೆಯ ಕಳೆದು ಅಂಗ ಮಡಿಯಾಗಿ
ಕಂಗಳ ಮುಂದೆ ಬಂದರೆ

ಸಂಗಯ್ಯನ ತೇರು ಸುಖದಿಂದೆ ರಂಗಮಂಟಪಕ್ಕೆ ಸಾಗಿ,
ಧರೆಯಾಕಾಶ ತುಂಬಿದ ಪರಿಸೆ
ಹರಹರ ಶಿವಶಿವ ಜಯಜಯ ಚಾಂಗು ಭಲೆಯೆಂದು
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ ಓಲ್ಯಾಡುವ ಬನ್ನಿರಿ. ॥ ೨೦೭ ॥

೨೦೮

ಅಂಗವನರಿಯದೆ ಗುರುಭಕ್ತಿಯ ಮಾಡಲೊಪ್ಪಿದೆನು:
ಮನವನರಿಯದೆ ಲಿಂಗಪೂಜೆಯ ಮಾಡಲೆಸವುತಿರ್ದೆನು.
ಪ್ರಾಣವನರಿಯದೆ ಜಂಗಮದಾಸೋಹವ ಮಾಡಲು ಪ್ರಕಾಶವಾದೆನು.
ಸತ್ತುಚಿತ್ತಾನಂದಕೆ ನಿತ್ಯ ಅಂಗ ಮನ ಪ್ರಾಣ ನಿರಂತರ ಶೋಭನ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೨೦೮ ॥

೨೦೯

ಆಕಾರದನುವಿಡಿದು ಸಾಕಾರಸನ್ನಿಹಿತನಾಗಿ,
ಆಕಾರವ ಮರೆದನುಭವಿಸಿದರೆ ಸಾಕಾರದ್ರೋಹ ಸವೆಯದು.
ನಿರಾಕಾರದನುವಿಡಿದು ನಿರಾವಯಸನ್ನಿಹಿತನಾಗಿ,
ನಿರಾಕಾರವ ಮರೆದು ಅನುಭವಿಸಿದರೆ ನಿರಾವಯದ್ರೋಹ ಪರಿಯದು.
ಬಯಲದನುವಿಡಿದು ನಿರ್ವಯಲಸನ್ನಿಹಿತನಾಗಿ,
ಬಯಲ ಮರೆದು ಅನುಭವಿಸಿದರೆ ನಿರ್ವಯಲದ್ರೋಹ ಸರಿಯದು.
ಹೀಗೆಂಬ ಶ್ರುತಿಯ ಗುರುಸ್ವಾನುಭಾವದಿಂದರಿದು
ಮರೆಯದೆ ಮಾಟತ್ರಯದಲ್ಲಿ ನೀಟವಾಗಿರ್ದೆನು
ನಿಮ್ಮಾಣೆ ಗುರುನಿರಂಜನ ಚನ್ನಬಸವಲಿಂಗಾ. ॥ ೨೦೯ ॥

೨೧೦

ತನುವ ದಂಡಿಸಿ ಧನವ ಗಳಿಸಿ
ಅನುವರಿಯದೆ ಬಿನುಗು ಮುಖನಾಗಿ,
ಕಲ್ಲುಮಣ್ಣಿಗೆ ಕಳೆದುಳಿವ ಕಾಲನ ಬಾಧೆಗೆ ಉಳಿವಿಲ್ಲ,
ಮನವ ಕನಲಿಸಿ ಕ್ಷುಧೆಯ ಮರುಗಿಸಿ ಅರ್ಥವ ಗುಡಿಸಿ
ಆಳ್ದನ ಮರೆದು ಸತಿಪುತ್ರ ವಿಷಯಭ್ರಾಂತಕ್ಕೊಲಿದು,
ಅಳಿಸಿ ಕಸಗೂಡಿ ಕಳೆದುಳಿವ ಮಾಯೆಗುಳಿವಿಲ್ಲ.
ಭಾವ ಬೆಚ್ಚಿ ಕೊನರಿ ಕೊಸದು ಧನವ ತಂದು,
ಮಹಾದೇವನ ಮರೆದು, ಅನಿತ್ಯಸಂಸಾರ ಅಪವಾದ ಅರಿಷ್ಟಭಾವಕ್ಕೆಳಸಿ,
ದುಷ್ಕರ್ಮಿಯಾಗಿ ಉಳಿದು, ದುರ್ಗತಿಯನೈದುವದೊಡಕೊಳವಲ್ಲ.

ಮತ್ತೆಂತೆಂದೊಡೆ : ಒಡೆಯರಿಗೊಡವೆಯನು ವಂಚಿಸುವ
ತುಡುಗುಣಿಯರ ಬಾಯಲ್ಲಿ
ಹುಡಿಯ ಹೊಯ್ಯಿಸಿ ನಡೆವ ಕಡುಗಲಿ ವೀರಮಾಹೇಶ್ವರ ನಾನು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. || ೨೧೦ ||

೨೧೧

ಪ್ರಾಣವೇ ಜಂಗಮವೆಂದರಿದು ಮಾಡುವಲ್ಲಿ
ಮನಕೆ ಮನ ಸಾಕ್ಷಿಯಾಗಿಹನಲ್ಲದೆ,
ಬೇರಿಟ್ಟು ಮಾಡಿ ತೋರುವ ಭಾವಗಡಕ ಭ್ರಾಂತನಲ್ಲ,
ಅದೆಂತೆಂದೊಡೆ : ಪತಿವ್ರತಾಂಗನೆ
ತನ್ನ ಪ್ರಾಣಸುಖವ ಪುರುಷಂಗಿತ್ತು
ಸುಖಿಸಿ ಆನಂದಿಸುವಳಲ್ಲದೆ ಬೇರಿಟ್ಟು ತೋರಲಿಲ್ಲ.
ಇದರಂದವನರಿದು ನಡೆನುಡಿಯೊಳಿರ್ದನು
ಗುರುನಿರಂಜನ ಚನ್ನಬಸವಲಿಂಗಸಹಿತ. || ೨೧೧ ||

೨೧೨

ಗುರುಕರಜಾತನಾಗಿ ಸಕಲಚೈತನ್ಯವೇ ಜಂಗಮವೆಂದರಿದ ಬಳಿಕ,
ಕ್ರಿಯೆಯಲ್ಲಿ ಜಂಗಮ ಸನ್ನಿಹಿತ ಸುಖಿಸಬೇಕಲ್ಲದೆ
ವಿರಹಿತ ನಡೆ ಹೀನವಯ್ಯಾ.
ಧರೆಯೊಳು ಚೈತನ್ಯವನಗಲಿ ಜೀವಿಸಲುಂಟೆ ?
ಹಸಿಯ ಭೂತದ ವಶಗತರ ಮಾತು
ಮುಟ್ಟಲರಿಯದು ಗುರುನಿರಂಜನ ಚನ್ನಬಸವಲಿಂಗ ಭಕ್ತಿಯ. || ೨೧೨ ||

೨೧೩

ಮೂವರು ಮುಟ್ಟದ ದೇವ ದೇವರದೇವನ,
ಭಾವದಿಂ ತೆಗೆದುಕೊಟ್ಟ ಗುರುವಿನ ಮಗನೆಂದು ನುಡಿದು ನಡೆವಲ್ಲಿ
ಇದನಳಿದು ಅಧೋದ್ವಾರದಿಂದೆ ಬಂದೆನೆಂಬ ಭಾವ ದಿಟವಾಗಿ,
ಮಾಯೋಚ್ಛಿಷ್ಟ ಮದಮೋಹಿತನಾಗಿ
ತಂದೆ ತಾಯಿ ಬಂಧು ಬಳಗ ನನ್ನದೆಂದು ನುಡಿದು,
ಹಂದಿ ನಾಯಿಯ ಜನ್ಮಕ್ಕೆ ಬಂದು ಬಿದ್ದು ಹೋಗುವ
ಮಂದಮತಿ ಮಾದಿಗರನೇನೆಂಬೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. || ೨೧೩ ||

೨೧೪

ಪೂರ್ವದಂದುಗವನಳಿದು ಪುನರ್ಜಾತನಾದ ಬಳಿಕ
ಸೂತಕದ ಪಾತಕದೊಳಿರಲಾಗದು.
ಅದೇನು ಕಾರಣ,
ಪಂಚಾಚಾರಸ್ವರೂಪನಾದ ಆಚಾರಲಿಂಗಸನ್ನಿಹಿತನಾದ ಕಾರಣ.
ಅಷ್ಟ ಕುಶಬ್ದದ ಹೊಲೆಯೊಳಿರಲಾಗದು.
ಅದೇನು ಕಾರಣ,
ಮಂತ್ರಾತ್ಮಕಸ್ವರೂಪವಾದ ಗುರುಲಿಂಗ ಸನ್ನಿಹಿತನಾದ ಕಾರಣ.
ಚಂಚಲ ದೃಷ್ಟಿಯ ವಂಚನೆಯೊಳಗಿರಲಾಗದು.
ಅದೇನು ಕಾರಣ,
ನಿರೀಕ್ಷಣಾಸ್ವರೂಪವಾದ ಶಿವಲಿಂಗಸನ್ನಿಹಿತನಾದಕಾರಣ.
ತನುವಿನ ದುಸ್ಸಾರಾಯದುನ್ನತಿಯೊಳಿರಲಾಗದು,
ಅದೇನು ಕಾರಣ,
ಯಜನಸ್ವರೂಪವಾದ
ಜಂಗಮಲಿಂಗಸನ್ನಿಹಿತನಾದ ಕಾರಣ.
ಹುಸಿ ಕಳವು ಪಾರದ್ವಾರ ಹಿಂಸಾದಿ ದುರ್ಗೋಷ್ಠಿಯನಾಲಿಸಲಾಗದು.
ಅದೇನು ಕಾರಣ,
ಸ್ತೌತ್ರ್ಯಸ್ವರೂಪವಾದ ಪ್ರಸಾದಲಿಂಗ ಸನ್ನಿಹಿತನಾದ ಕಾರಣ.
ಅಂತರಂಗದಲ್ಲಿ ಗುಣತ್ರಯ ಮದಾವಳಿಯೊಳಿರಲಾಗದು.
ಅದೇನು ಕಾರಣ,
ಪರಮ ಶಾಂತಸ್ವರೂಪವಾದ ಮಹಾಲಿಂಗಸನ್ನಿಹಿತನಾದ ಕಾರಣ.
ಗುರುನಿರಂಜನ ಚನ್ನಬಸವಲಿಂಗವನು ಹಿಂಗಿ ಇರಲಾಗದು.
ಅದೇನು ಕಾರಣ, ತನು ಮನ ಭಾವವ ಕೊಟ್ಟುಳಿದವನಾದ ಕಾರಣ. ॥೨೧೪॥

೨೧೫

ಅರ್ಥ ಪ್ರಾಣ ಅಭಿಮಾನದೊಳಣುಮಾತ್ರವಿಲ್ಲದೆ
ಮಾಡುವ ಭಕ್ತನಂಗಳ ಪಾವನಕ್ಷೇತ್ರ.
ಆತನ ಮಂದಿರ ಶಿವನಮನೆ.
ಆತನೊಡನೆ ದರ್ಶನ ಸ್ಪರ್ಶನ ಸಂಭಾಷಣೆ ಮಾಡಿದ ಸಜ್ಜನರೆಲ್ಲ
ಅಮರಗಣ ಮನು ಮುನಿಗಳು.
ಆ ಮಹಾಪುರುಷನೇ ಸಾಕ್ಷಾತ್ ಪರಮೇಶನೆಂಬೆನಯ್ಯಾ.
ಅವಲ್ಲದೆ ಹೊನ್ನು, ಹೆಣ್ಣು, ಮಣ್ಣುಗಳ ಮೋಹವೇ ಪ್ರಾಣವಾಗಿ

ಚನ್ನಗುರುಲಿಂಗಜಂಗಮವೇ ಅನ್ಯವಾಗಿ
ದಂಡಕ್ಕನುಗ್ಗೈದ ರಾಜನ ದರ್ಶನದಂತೆ
ಮುಖವನಡಗಿಸಿಕೊಂಬ ದ್ರೋಹಿಗಳ
ತೆರಹಿಲ್ಲದೆ ನರಕವನುಂಡು ಕಡೆಗಾಣದ ಸೊಣಗರೆಂಬೆನಯ್ಯಾ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೨೧೫ ॥

೨೧೬

ಹೊನ್ನ ನೋಡಿ ಹೊನ್ನ ಹಿಡಿಯದಿರ್ದಡೆ ಮಹೇಶ್ವರ.
ಹೆಣ್ಣ ನೋಡಿ ಹೆಣ್ಣ ಹಿಡಿಯದಿರ್ದಡೆ ಮಹೇಶ್ವರ.
ಮಣ್ಣ ನೋಡಿ ಮಣ್ಣ ಹಿಡಿಯದಿರ್ದಡೆ ಮಹೇಶ್ವರ.
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತನಾಗಿ
ಭಿನ್ನವಿಲ್ಲದೆ ನಡೆಯಬಲ್ಲರೆ ಆತನಚ್ಚ ಮಹೇಶ್ವರ. ॥ ೨೧೬ ॥

೨೧೭

ಅನಾದಿಸಂಸಿದ್ಧ ನಿರಂಜನ ಪರಶಿವಲಿಂಗಸನ್ನಿಹಿತವಾದ ವೀರಮಾಹೇಶ್ವರರು,
ಗೌರವಬುದ್ಧಿ ಲಿಂಗಲೀಯಾದಿ ಷಡ್ವ್ರತಾಚಾರವೇ ಅಂಗವಾಗಿ,
ಅಕ್ರೋಧ ಸತ್ಯವಚನಾದಿ ಷಡ್ವಿಧ ಶೀಲಸಂಪನ್ನತೆಯೇ ಪ್ರಾಣವಾದ ಕಾರಣ,
ಹಿಡಿದು ಬಿಡೆನೆಂಬುದೊಂದು ಛಲ.
ಬಿಟ್ಟು ರಚ್ಚೆಯ ಬಳಸೆನೆಂಬುದೊಂದು ಛಲ.
ಹಿಡಿದು ತಪ್ಪಿದವರ ಕೆಡಹಿಬಿಡುವೆನೆಂಬುದೊಂದು ಛಲ.
ಬಿಟ್ಟುದ ಹಿಡಿದು ಮೋಹಿಸುವವರ ಕುಟ್ಟಿ ಕಳೆದುಹಾಕುವೆನೆಂಬುದೊಂದು ಛಲ.
ಭಿನ್ನ ದೈವವ ಪೂಜಿಸುವವರ ಕುನ್ನಿಗಳ ಸರಿಗಾಂಬುದೊಂದು ಛಲ.
ಅನ್ಯರುಗಳ ಬೇಡದಿರುವುದೊಂದು ಛಲ.
ಇಂತು ಷಡ್ವಿಧಛಲದ ಮೇಲೆ
ಗುರುನಿರಂಜನ ಚನ್ನಬಸವಲಿಂಗವಿಲ್ಲದಂಗಿಗಳೊಡನೆ
ಮಾತನಾಡಬಾರದೆಂಬುದೊಂದು ಘನ ಛಲವು. ॥ ೨೧೭ ॥

೨೧೮

ವೀರಮಾಹೇಶ್ವರರುಗಳೆಂಬ ಪೋರಜಂಗುಳಿಗಳನೇನೆಂಬೆನಯ್ಯಾ ?
ಮಣ್ಣವಿಡಿದು ಬಣ್ಣಗೆಟ್ಟು, ಬರಿಯ ಬಸಿರ ಹೊರೆಯಲಿಕ್ಕೆಂದು,
ಕಾಸು ವಿಷಯಾದಿ ಗೃಹ ಕ್ಷೇತ್ರಕ್ಕೆ ಮೆಚ್ಚಿ
ಗುರುಹಿರಿಯನರಿಯದೆ ಹೋರಾಡಿ ಹೊಲಬುಗೆಟ್ಟು ಹೋಗುವ
ಮಲಬದ್ಧ ಮೂಢರು ವೀರಮಾಹೇಶ್ವರರಪ್ಪರೆ ?

ಕನ್ಯೆಯರೊಲವಿಂಗೆ ಕಲೆತು ಮನ್ನಣೆಮರ್ಯಾದೆಗಳ ಹರಿದು,
ಚುನ್ನಾಟದ ಕುನ್ನಿಗಳಂತೆ ಬೆನ್ನಹತ್ತಿ ತಿರುಗುವ
ಶುನಿಸಂಬಂಧಿಗಳನೆಂತು ಮಾಹೇಶ್ವರರೆಂಬೆನಯ್ಯಾ ?
ಹೊನ್ನ ಹಿಡಿದು ಅನ್ಯರಿಗೆ ಬಡ್ಡಿಯ ಕೊಟ್ಟು,
ಬಂಧನವ ಮಾಡಿ ತಂದು ಕೂಡಹಾಕಿ,
ಬಂದ ಜಂಗಮಕ್ಕೊಂದು ಕಾಸನೀಯದೆ ಬೆಂದವೊಡಲಿಗೆ ಸಂದಿಸದೆ,
ಹಂದಿ ನಾಯಿಯಂತೆ ಸಾವ, ಹೆಂದ ಮೂಢರು ಮಾಹೇಶ್ವರರಪ್ಪರೆ ?
ಇಂತು ತ್ರಿವಿಧದೊಳಗಿರ್ದ ತ್ರಿವಿಧವನರಿಯದ
ತ್ರಿವಿಧ ಮಲಭುಂಜಕರನೆಂತು ಮಾಹೇಶ್ವರರೆಂಬೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ ? ॥ ೨೧೮ ॥

೨೧೯

ಸ್ವತಂತ್ರತ್ವಾನುಭಾವವೇ ಅಂಗವಾದ ಮಹೇಶ್ವರನು
ಮಂತ್ರಾತ್ಮಕಸ್ವರೂಪವಾದ ಗುರುಲಿಂಗಸನ್ನಿಹಿತವಾಗಿ,
ಆಚಾರ ಗೌರವ ಲಿಂಗ ಜಂಗಮ ಪ್ರಸಾದ ಮಹದ ನಿಷ್ಠೆಯೆಂಬಾರರೊಳುನಿಂದು,
ಕ್ರಿಯಾ ಜ್ಞಾನ ಚರ್ಯಾಪದತ್ರಯದಿಂದಾಚರಿಸಲರಿಯದೆ
ತನ್ನ ದುರ್ಗುಣಂಗಳ ಮಡುಗಿ ಇತರ ಗುಣವನರಸಿ ಎತ್ತಿತೋರುವ
ಬಿನುಗು ಮೂಕೊರೆಯರನೆಂತು ಮಹೇಶ್ವರರೆನಬಹುದು ?
ಕೀಳುಶಾಸ್ತ್ರವನೋದಿ ಹಾಳುಗೋಷ್ಠಿಯ ಕಲಿತು,
ಬಾಳಬಲ್ಲೆವೆಂದು ಕೂಳಿನಾಸೆಗೆ ದೇವಭಕ್ತರುಗಳ ಹಳಿವುತ್ತ
ತೋಳ ಕುರಿಯ ಕೂಸು ನೆಗೆದಂತೆ ಬಾಳುವರ ತಪ್ಪಿನೊಳಿಕ್ಕಿ
ಅರ್ಥವ ಸೆಳೆದುನುಂಗುವ ಹೇಯಸಂಬಂಧಿಗಳನೆಂತು ಮಹೇಶ್ವರರೆಂಬೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ ? ॥ ೨೧೯ ॥

೨೨೦

ಆಸೆಗೆ ಹುಟ್ಟಿದ ಭಾಷೆಹೀನ ವೇಷಧಾರಿಗಳು
ಸಹಜವನೆತ್ತ ಬಲ್ಲರಯ್ಯಾ ?
ಭಕ್ತಿ ಯುಕ್ತಿ ವಿರಕ್ತಿಯ ಪಥವನರಿಯದೆ
ಸತ್ತು ಹುಟ್ಟುವ ಮುಕ್ತಿಗೇಡಿಗಳೆತ್ತ ಬಲ್ಲರಯ್ಯಾ
ಲಿಂಗದ ನಿಜವ ?
ಅರ್ಥವ ಹಿಡಿದು, ಅರಿವ ಮರೆದು, ಕರ್ತುಗಳಾಪ್ಯಾಯನವರಿಯದ
ಅನುಮಾನಭರಿತ ಅಧಮರುಗಳೆತ್ತ ಬಲ್ಲರಯ್ಯಾ
ಗುರುನಿರಂಜನ ಚನ್ನಬಸವಲಿಂಗ ಶರಣರ ಘನವ. ॥ ೨೨೦ ॥

೨೨೧

ಬಹುಜನ್ಮಭಾರಿಗಳ ಕರತಂದು
ಓರಿಯತನದಾಸೆಗೆ ಹರಿದು ಉಪದೇಶವ ಕೊಟ್ಟರೆ
ಗುರುಶಿಷ್ಯಭಾವ ಸರಿಯಪ್ಪುದೆ ?
ಕಣ್ಣಿಲ್ಲದ ಗುರು, ಕುರುಡ ಶಿಷ್ಯ,
ಅವರಿಗಾಚಾರ ವಿಚಾರ ಸಮಯಾಚಾರಸಂಬಂಧವೆಂತಪ್ಪುದಯ್ಯಾ,
ಭೂತ ಅದ್ಭೂತ ಅವಿಚಾರ ಘಟಿತರಿಗೆ
ಗುರುನಿರಂಜನ ಚನ್ನಬಸವಲಿಂಗಾ ? || ೨೨೧ ||

೨೨೨

ಕನಕದ ಮನೆಯೊಳಗೆ ಕಲ್ಪವೃಕ್ಷವ ಬೆಳೆದು
ಕೈಯಲ್ಲಿ ಚಿಂತಾಮಣಿಯಿರಲು,
ಕೈಕೂಲಿಮಾಡಿ ಕಷ್ಟಬಡುವನಂತೆ !
ಸದ್ಗುರುನಾಥನ ಕೃಪೆಯಿಂದೆ ತ್ರಿವಿಧನುಗ್ರಹವೆಂಬಾಲಯದೊಳಗೆ
ಸರ್ವಾಚಾರಸಂಪತ್ತು ಪಸರಿಸಿ,
ಕರಸ್ಥಲದಲ್ಲಿ ಚಿಂತಿತಾರ್ಥವನೀವ ಚಿನ್ಮಯಮೂರುತಿಯಿರಲು,
ಅದನರಿದು ಮುಕ್ತಿಯನೈದಲರಿಯದೆ,
ಬರುಕಾಯನಾಗಿ ಅಷ್ಟಾಂಗಯೋಗದಿಂದೆ ಕಷ್ಟಬಡುವ
ಭ್ರಷ್ಟಭವಿಗಳನೇನೆಂಬೆನಯ್ಯಾ!
ಅದಲ್ಲದೆ ರಾಷ್ಟ್ರದೊಳಗುಳ್ಳ ಕ್ಷೇತ್ರ ಸ್ಥಾವರ
ನದಿಗಳ ಕಂಡು ಬದುಕುವೆನೆಂದು,
ತನುಮನವ ದಂಡಿಸುವ ದಿಂಡಿಯದ್ವೈತರನೆಂತೆಂಬೆನಯ್ಯಾ ?
ನಾಲಿಗಿಲ್ಲದ ರುಚಿಯನರಿದವರುಂಟೆ
ಗುರುನಿರಂಜನ ಚನ್ನಬಸವಲಿಂಗಾ ? || ೨೨೨ ||

೨೨೩

ಅಂಗಯ್ಯಲಿಂಗದನುವರಿದು ಅನಿಮಿಷಸುಖಿಯಾಗಲರಿಯದೆ,
ತುಂಗಭದ್ರೆಯ ಹಂಪೆ, ನಂಜುಂಡಪರ್ವತ, ಕಾಶಿ,
ಸಂಗಮಾದಿ ಪುಣ್ಯಕ್ಷೇತ್ರವ ಕಂಡು ಬದುಕುವೆನೆಂದು
ಮಂಡಲವ ಸುತ್ತಿ ಬೆಂಡಾಗಿ ಅಸುವಳಿದು ಹೋಗುವ
ಕಸಮನುಜರು, ಅವರೆತ್ತ ಬಲ್ಲರಯ್ಯಾ
ಗುರುನಿರಂಜನ ಚನ್ನಬಸವಲಿಂಗದ ಘನವ. || ೨೨೩ ||

೨೨೪

ಇಷ್ಟಲಿಂಗವನು ಅಂಗದ ಮೇಲೆ ಧರಿಸಿಕೊಂಡು
ಸೃಷ್ಟಿಯೊಳುಳ್ಳ ಸ್ಥಾವರಕ್ಕೆ ಮೆಚ್ಚಿ ಮಾಡಿ,
ಮುಕ್ತಿಯ ಕಂಡವರುಂಟೆ ಮೂಜಗದೊಳಗೆ ?
ಬಲ್ಲರೆ ಹರಗುರುವಾಕ್ಯದಲ್ಲಿ ತೋರಿ ನಾಚಿಸುವುದು,
ಇಲ್ಲದಿರ್ದಡೆ ನಿಮ್ಮ ಮುಖದಲ್ಲಿ ಮಾಯೋಚ್ಚಿಷ್ಟ.
ಅದಲ್ಲದೆ ಶೈವರಿಗೆ ಸಲ್ಲುವ ಮಾರ್ಗ ನಮಗುಂಟೆಂದು
ಬರುನುಡಿಯ ಬೊಗಳಿದರೆ ಕತ್ತೆ ನಾಯಿ ಗೂಗಿಗಳೆಂದು ಹರಿದುನೂಕುವನತ್ತ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೨೨೪ ॥

೨೨೫

ಮಠಮಾನ್ಯದಯ್ಯತನದ ಹಿರಿಯರೆನಿಸುವ ಅಟಮಟದಯ್ಯಗಳ
ಹಟದ ಕುಟಿಲಗಳ ಪರಿಯ ನೋಡಾ !
ತಾವು ದೇವರೆಂದು ಸಕಲ ಭಕ್ತಜನರಿಂದೆ ಪೂಜೆಯ ಕೈಕೊಂಡು
ಮೆರೆಯುತಲಿರ್ದು ತಮಗೊಂದು ದೇವರುಂಟೆಂದು,
ಈರಣ್ಣ, ಬಸವಣ್ಣ, ಕಲ್ಲಣ್ಣ, ಮಲ್ಲೇಶ,
ಜಗುಲಿಯ ಮೇಲೆ ಭುಗಿಭುಗಿಲೆನಿಸುತ್ತ,
ಅಪ್ಪ, ಅಜ್ಜ, ಮುತ್ತಯ್ಯನ ಮುಚ್ಚಿದ ಗರ್ದುಗೆಯೆಂದು,
ಹಾವುಗೆ ಬೆತ್ತ ಪುರಾಣ ಧೂಳತಾದಿಗಳಿಂಗೆ
ನೇಮಿಸಿದ ವಾರ ತಿಥಿವಿಡಿದರ್ಚಿಸಿ,
ಕಾಯಿ ಫಲ ಕೂಳ ತೋರಿ ತೋರಿ ತಿಂಬುವ
ನಾಯಿಭವಿಗಳನೆಂತು ದೇವರೆಂದು ಪೂಜಿಸಬಹುದು !
ಕಾಲತೊಳೆದ ನೀರು, ತಿಂದ ಕೂಳು ಇವನೆಂತು ಘನವೆನ್ನಬಹುದು !
ಮತ್ತೆ ಮನೆಯೊಳಗೆ ಸತ್ತವರಿಗೆಂದು, ಕರಿಮರಿಯಮ್ಮಗೆಂದು,
ಲಕ್ಕಿಜಕ್ಕಣೆರಿಗೆಂದು ಹಚ್ಚಡ ಸೀರೆ ಕುಪ್ಪಸಾದಿಗಳ ತಂದು
ಹುಣ್ಣಿವೆ, ಅಮವಾಸ್ಯೆಗೆ ವಸ್ತ್ರವಿಡಿದು ಮಾಡಿ,
ಕರ್ಮಕಾಟವ ಕಳೆದು ಗೆದ್ದೆವೆಂಬ ಮೂಳ ಹೊಲೆಯರು
ತಾವು ದೇವರೆನ್ನಬಹುದೆ ?
ಇಂಥ ಕಾಳಕೂಳರಿಗೆ ಮಾಡಿದ ದುರ್ಗತಿ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೨೨೫ ॥

೨೨೬

ತಾ ದೇವರೆನಿಸಿ ಪೂಜೆಗೊಂಬ ವೀರಮಹೇಶ್ವರಗೆ,
ತನಗೊಂದು ಹಿರಿದುಂಟೆ ? ತಾನಾಗಿಹನು ಎಲ್ಲಕ್ಕೂ
ಗುರುನಿರಂಜನ ಚನ್ನಬಸವಲಿಂಗ ಶರಣರು ಮೆಚ್ಚುವಂತೆ. ॥ ೨೨೬ ॥

೨೨೭

ಆದಿಯ ಲಿಂಗವ ಸಾಧಿಸಿಕೊಂಡ ಅಚ್ಚಮಹೇಶ್ವರನು
ಅಲ್ಲದಾಟವನಾಡುವನಲ್ಲ.
ಬಲ್ಲಿದ ಕ್ರಿಯಾಜ್ಞಾನಭರಿತನಾಗಿ,
ವೇದಾಂತ ಸಿದ್ಧಾಂತ ಯೋಗಮಾರ್ಗಿಗಳಿಗೆ ಹಿರಿದೆಂದು ಹೇಳಿಕೊಳ್ಳ.
ಗುರುಲಿಂಗಜಂಗಮದ ಭೃತ್ಯನಾಗಿ
ಷಟ್ಸಮಯಾಚಾರಮತವರಿಯ.
ಷಟ್‌ಸ್ಥಲಜ್ಞಾನಾನುಭವಿಯಾಗಿ,
ಪರಧನ ಪರಸ್ತ್ರೀ ಪರಭೂಮಿಗಿಚ್ಛೈಸುವನಲ್ಲ.
ಸರ್ವಾಚಾರಸಂಪತ್ತಿನೊಳಗಿರ್ದವನಾಗಿ
ಅನ್ಯಭವಿನುಡಿಗಡಣಕ್ಕಿಂಬುಗೊಟ್ಟವನಲ್ಲ
ಗುರುನಿರಂಜನ ಚನ್ನಬಸವಲಿಂಗ ನಾಮಸುಖಿ ತಾನಾಗಿ. ॥ ೨೨೭ ॥

೨೨೮

ಅನುಪಮಲಿಂಗದಲ್ಲಿ ಘನವಿನಯ ಮಂಗಲಮಹೇಶ್ವರನು
ಒಂದನುವಿಡಿದಾಚಾರಸನ್ನಿಹಿತ ತಾನಾಗಿ,
ತನುಮನಭಾವಾತ್ಮ ನಿರ್ಮಲ ಸ್ವಯಂಜ್ಯೋತಿ ನೋಡಾ !
ಒಂದಿಪ್ಪ ಅನುಮಾನ ಟಕ್ಕು ಅನುಸರಣೆಗಳನರಿಯ ನೋಡಾ !
ಎರಡು ಚರಿತೆಯ ಹಿಡಿದು ಕಳೆವರ ಹಳಿದು ತಿಳುಹುವ ನೋಡಾ !
ಬಳಿವಿಡಿದು ಬೆಳೆಯುವರ ತಿಳಿಯಕೂಡಿ ಬೆಳಗುವ ನೋಡಾ !
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತದಿರುವಿನ ಪರಿ ನೋಡಾ. ॥ ೨೨೮ ॥

೨೨೯

ಸಗುಣ ನಿರ್ಗುಣಸನ್ನಿಹಿತ ವೀರಮಾಹೇಶ್ವರನು,
ಜಡಮನುಜರಿಗೊಮ್ಮೆ ಕೈಯೆತ್ತಿ ಬೇಡುವನಲ್ಲ ಉಚ್ಛಿಷ್ಟವಾಯಿತ್ತೆಂದು.
ಹೆಂಗಳೆಯರ ನೋಡಿ ಕಾಮಿಸುವನಲ್ಲ ಕಂಗಳಮೀಸಲು ಕೆಟ್ಟೀತೆಂದು,
ಲಿಂಗಜಂಗಮವನರ್ಚಿಸಿ ಹಂಗಿನೊಳಗಿಲ್ಲ ಭವದ ನಿಲುವೆಂದು
ಗುರುನಿರಂಜನ ಚನ್ನಬಸವಲಿಂಗದ ಬಿರುದಿನ ಪತಾಕೆಯು. ॥ ೨೨೯ ॥

೨೩೦

ಮಾಡಿದಣೆಯದೆ ಮುಂದುವರಿವ ಮಹಿಮನ ನೋಡಾ !
ನೋಡಿದಣೆಯದೆ ಕೂಡಿಯಗಲದ ಬೇಡಬಾರದ ಧೀರ ನೋಡಾ !
ನೀಡಿ ನಿಲ್ಲದ ಬೇಡಿದೋರದ ನೀಡಿಕೊಳ್ಳದ ನಿಲವ ನೋಡಾ !
ಗುರುನಿರಂಜನ ಚನ್ನಬಸವಲಿಂಗನ ಶರಣರಲ್ಲದೆ
ಹಾಡಿಹಡೆದ ಬೆಡಗು ನೋಡಾ ! ‖ ೨೩೦ ‖

೨೩೧

ತೆರಹಿಲ್ಲದ ಕುರುಹಿಲ್ಲದ ಸರಿಯಿಲ್ಲದ
ಪರಮನ ಪಡೆದವರೊಲವ ನೋಡಾ !
ಮರಹಿಲ್ಲದ ಕರಕಮಲದಲ್ಲಿ ತಾ ಹೆರೆಹಿಂಗದೆ
ಬಗೆಬಗೆಯೊಳು ನೆರೆವ ಸಿರಿಯ ನೋಡಾ !
ಗುರುನಿರಂಜನ ಚನ್ನಬಸವಲಿಂಗನ ಶರಣರ ಮಚ್ಚಿನ ಇರವ ನೋಡಾ. ‖೨೩೧‖

೨೩೨

ಸಂಗವನರಿದು ಜರೆದು ಸಂಗಸಂಬಂಧವಾದ ಚಿನುಮಯ ಚನ್ನಮಹೇಶ್ವರನ
ತನುಮನಭಾವಂಗಳು ಮತ್ತೊಂದಕ್ಕೆ ಆಸ್ಪದವಿರಹಿತವಾಗಿರ್ದವು.
ಅದೆಂತೆಂದೊಡೆ, ಗುರುಭಕ್ತಿಸೇವಾನುಕೂಲಿ
ಕಾಯದ ಗತಿಯುಳ್ಳನ್ನಕ್ಕರ ಕಂಡು ಮಾಡಿ ವಿನೋದಿಸಬೇಕೆಂಬುದೊಂದು ನಿರುತ,
ಮಂತ್ರ ಧ್ಯಾನ ಜಪ ಸ್ತೋತ್ರಾದಿಗಳಿಂದೆ
ಲಿಂಗಾರ್ಚನೆಯವಸರ ಮನವುಳ್ಳನ್ನಕ್ಕರ
ಮಾಡಿ ನೋಡಿ ಆನಂದಿಸಬೇಕೆಂಬುದೊಂದು ನಿಷ್ಠೆ.
ಅನ್ನ ವಸ್ತ್ರ ಆಭರಣಾದಿ ಹದಿನೆಂಟು ತೆರದ ಭಕ್ತಿಯಾರಾಧನೆ
ಪ್ರಾಣಾದಿ ದ್ರವ್ಯವುಳ್ಳನ್ನಕ್ಕರ
ಮಾಡಿ ನೀಡಿ ಸುಖಿಸಬೇಕೆಂಬುದೊಂದು ಭಾವದ ನಿರುತ.
ಇಂತು ತ್ರಿವಿಧ ಪದದಲ್ಲಿ ತ್ರಿವಿಧ ವಿದ್ಯಾಸನ್ನಿಹಿತನಾಗಿ
ಎಡೆದೆರಹಿಲ್ಲದಿರುತಿರ್ದನು ಗುರುನಿರಂಜನ ಚನ್ನಬಸವಲಿಂಗನಲ್ಲಿ. ‖ ೨೩೨ ‖

೨೩೩

ಅಷ್ಟಮದಸೂತಕದ ಕೆಟ್ಟಗುಣವಳಿದುಳಿದು,
ಇಷ್ಟಲಿಂಗದಲ್ಲಿ ನಿಷ್ಠೆ ನಿಚ್ಚೆರಸಿದ ವೀರಮಾಹೇಶ್ವರನ
ಘನಮಹಿಮೆಯನಾರು ಬಲ್ಲರು ಹೇಳಾ !
ಪರಮನಾಣತಿವಿಡಿದು, ಪೊಡವಿಯೊಳು ಬಂದು,

ನಡೆಗೆಟ್ಟ ಜಡರುಗಳ ಕಡೆದಾರಿಯನು ತೋರಿ
ಹಿಡಿದು ನಡೆಸಿದ ಕಡುಗಲಿಯನಾರು ಬಲ್ಲರು ಹೇಳಾ !
ಗಮನಾಗಮನವಾದಿಗಳನಮಿತಕ್ಕಗಣಿತ
ಗಮನಾಗಮನ ಗುರುನಿರಂಜನ ಚನ್ನಬಸವಲಿಂಗ
ಸನ್ನಿಹಿತದಿರವನಾರುಬಲ್ಲರು ಹೇಳಾ ! || ೨೩೩ ||

೨೩೪

ಜಡಶೀಲಗಳ ಹೊತ್ತು ಕೆಡುವೊಡಲಹೊರೆವ
ತುಡುಗುಣಿಗಳಾಚಾರಕ್ಕಗಣಿತ ನೋಡಾ ನಮ್ಮ ವೀರಮಾಹೇಶ್ವರನು.
ಮನದಿಚ್ಛೆಗನುವಾದ ತನುಸುಖಪದಾರ್ಥವನು
ದಿನದಿನಕ್ಕೆ ವ್ರತವೆಂದು ತಿನಬಂದ ಶುನಕನಲ್ಲ ನೋಡಾ ನಮ್ಮ
ವೀರಮಾಹೇಶ್ವರನು.
ಮುಟ್ಟುತಟ್ಟುಗಳಿಂದೆ ಕೆಟ್ಟೆನಲ್ಲಾಯೆಂದು
ಕಟ್ಟುಕಾವಲಿಗೊಂಡು ಕೆಟ್ಟಸಿಟ್ಟುಗಳಿಂದೆ ಬಟ್ಟೆಯನು ಹಿಡಿವ
ಪಟ್ಟುಗುಡುವನಂತಲ್ಲ ನೋಡಾ ನಮ್ಮ ವೀರಮಾಹೇಶ್ವರನು.
ಮತ್ತೆಂತೆಂದೊಡೆ :
ಪರಧನ ಪರಸತಿ ಪರಹಿಂಸೆ ಪರನಿಂದೆ ಪರದೈವ
ಪರಸಮಯಾದಿ ದುರಾಸೆವಿಡಿದು
ನಡೆಯದಿಹುದೇ ಶೀಲ ನೋಡಾ ನಮ್ಮ ವೀರಮಾಹೇಶ್ವರಂಗೆ.
ತನು ಮನ ಪ್ರಾಣಾದಿ ಸಕಲ ಕರಣಾದಿ ಗುಣವಳಿದು
ಗುರುನಿರಂಜನ ಚನ್ನಬಸವಲಿಂಗನ ನೆನಹು ಬಿಡದಿಹುದೇ ವ್ರತ ನೋಡಾ
ನಮ್ಮ ವೀರಮಾಹೇಶ್ವರಂಗೆ. || ೨೩೪ ||

೨೩೫

ಗಂಡಸು ಹೆಂಗಸು ಕಂಡು ಕಾಣದ ಬಂಟಾಟಬಗೆಯ
ಖಂಡಿಸಿ ನಡೆವ ಮಹಿಮನು.
ನಾದ ಬಿಂದು ಕಳೆಯ ಸಡಗರವ ಸುಟ್ಟು ಉರಿಯ ಬೆಳಗಕೂಡಿ,
ಹಿಂದಮುಂದನುಣ್ಣದೆ ಪುಣ್ಯ ಪಾಪವ ನೋಡಿ
ಸುಖಿಸುವ ಗುರುನಿರಂಜನ ಚನ್ನಬಸವಲಿಂಗಸನ್ನಿಹಿತ. || ೨೩೫ ||

೨೩೬

ಗಂಡನಿಂದೆ ಹುಟ್ಟಿದ ಕೂಸ ತೊಟ್ಟಿಲೊಳಗಿಟ್ಟು ಮುದ್ದಾಡಿದರೆ
ಮೊಲೆ ತೊರೆದು ಹಾಲು ಸುರಿಯಲು ಅದರ ಸವಿಯ ಕಾಲಲ್ಲಿ ಕಂಡು

ತಾಯಿಮಗಸಹಿತ ಗುರುನಿರಂಜನ ಚನ್ನಬಸವಲಿಂಗನ
ಶರಣರೊಳು ಸುಖಿಸಿದರು. || ೨೩೬ ||

೨೩೭

ಮುಟ್ಟಬಾರದ ತಲೆ ತಟ್ಟಬಾರದ ಗಮನ
ಬಿಟ್ಟು ಬಿಟ್ಟು ನಡೆವ ದಿಟ್ಟರಾರು ಹೇಳಾ ?
ಹಬ್ಬಿದ ಮುಸಿಯೊಳಗೆ ಬೆಳೆದ ಬೆಳಸಿಯ ಕೊಯ್ದು ಮರಳಿ ಚಿಗುರಿಸಿ
ಬೆಳೆದು ವೇದಿಸಿ ಸುಖಿಸುವ ಮಹಿಮರಿನ್ನಾರು ಹೇಳಾ ?
ನೀರ ಹಕ್ಕಿಯ ಪಕ್ಕವಮುರಿದು, ಹುಲಿಯ ಕೊಂದು ಕಾಡಕೋಣನ ಕಡಿದು,
ಊರಮೇಗಣ ಮಠದೊಳಗೆಸೆವ ಗುರುನಿರಂಜನ ಚನ್ನಬಸವಲಿಂಗಕ್ಕೆ
ಶರಣೆಂದು ಬದುಕುವರಾರು ಹೇಳಾ ? || ೨೩೭ ||

೨೩೮

ತಂದೆಯ ಹೆಸರ ಮಗನಮಡದಿಗೆ ಮಿಂಡರು ಮೂವರು ನೋಡಾ.
ಒಬ್ಬಂಗೆ ಕೈಗೊಟ್ಟು ಗುದ್ದಾಡುವಳು,
ಒಬ್ಬಂಗೆ ಮಾತುಕೊಟ್ಟು ಚಿಂತಿಸುವಳು,
ಒಬ್ಬನ ನೆರೆದು ಸುಖಿಸುವಳು,
ಇಂತಪ್ಪ ನಿತ್ಯ ನೇಮದ ಹಾದರಗಿತ್ತಿಗೆ
ಗುರುನಿರಂಜನ ಚನ್ನಬಸವಲಿಂಗವ
ಕೂಡುವಳೆಂದು ನಗುವರು ಶರಣರು. || ೨೩೮ ||

೨೩೯

ಒಡದು ಮೂಡಿ ನಿಗುರಿ ನೋಡಿ
ಕಡಿದು ಬಿಸಾಟಿದಲ್ಲಿ ಬೆಂಕಿ ಹುಟ್ಟಿತ್ತು ನೋಡಾ !
ಬೆಂಕಿಪುರುಷನ ಸಂಗದಿಂದೆ ಮಂಗಲಮಹಿಮನ ಕಂಡು
ಅಂಗಳದಲ್ಲಿ ಕೂಡಿದರೆ,
ಮನೆ ಸುಟ್ಟು ಹಾವೆದ್ದು ಕಿಚ್ಚ ಹಿಡಿದು ಮೇಲು ಮಂಟಪಕ್ಕೆ ನೆಗೆಯಲು,
ಉರಿಯ ಬೆಳಗಿನೊಳಗಿರ್ದ ಗುರುನಿರಂಜನ ಚನ್ನಬಸವಲಿಂಗದಂಗವ
ಬೆರೆದು ಚರಿಸುವ ಲೀಲೆಯ ನೋಡಾ. || ೨೩೯ ||

೨೪೦

ವೇಷಕ್ಕೆ ತಕ್ಕ ಭಾಷೆಯುಳ್ಳರೆ ಹಿರಿಯರು ಮೆಚ್ಚುವರು.
ರಾಜಂಗೆ ಯಾಚಕತನ ಹೀನ,

ಅಂಗದ ಮೇಲೆ ಲಿಂಗಸನ್ನಿಹಿತನಾಗಿ
ಶಿವಜ್ಞಾನ ಬೀಜ, ಭಕ್ತನ ಬಂಧುತ್ವ, ದ್ರವ್ಯತ್ರಯಲಿಂಗಾರ್ಪಣವೆಂಬ
ತ್ರಿವಿಧಾಚರಣೆಸಂಪನ್ನ ವೀರಮಾಹೇಶ್ವರ
ವೇಷವ ಹೊತ್ತುಕೊಂಡು, ಕಾಸು ವಿಷಯಾದಿಗಳಿಗಾಸೆಮಾಡಿ,
ಜಡಸಂಸಾರದೊಳಗಿರ್ಪ ಜನರಿಗೆ ಕೈಯಾಂತು ಬೇಡಿ ಬೆಂಡಾಗಿ
ತಿರುಗಿ ಹೊತ್ತುಗಳೆದರೆ ಹಳಸಿತ್ತು ವೇಷ, ಮುಳಿಸಿತ್ತು ಭಾಷೆ,
ಮುಂದೆ ಕೆಡಹಿತ್ತು ಆಸೆ ದುರ್ಗತಿ
ಗುರುನಿರಂಜನ ಚನ್ನಬಸವಲಿಂಗವನರಿಯದೆ. ॥ ೨೪೦ ॥

೨೪೧

ಅಚ್ಚ ಮಹೇಶ್ವರನ ಕಚ್ಚುಟವ ಧರಿಸಿ ನಿಚ್ಚ ನಿಚ್ಚಕೆ
ಕಾಳು ಕಾಂಚಾಣ ಕಪಟಕ್ಕೆ ಕೈಯೊಡ್ಡಿ,
ಸಚ್ಚಿದಾನಂದ ಶಿವನ ಅರಿಯದ ನುಚ್ಚಮಾನವರು
ಬೇಡಿಕೊಂಡು ಆಡಿಗಳವ ಕುಚಿತ್ತ ಖೂಳರ ಚುಚ್ಚಿಹಾಕುವರು ಭವದತ್ತ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೨೪೧ ॥

೨೪೨

ಇಪ್ಪತ್ತೈದು ಬಿಳಿಯ ಮೂರುಗಾಲಿಯ ರಥದ ಮೇಲೆ
ಮುತ್ತಿನ ಚೆಂಡು ಕೈಯಲ್ಲಿ ಹಿಡಿದು
ಕಾಸಭೋಗದ ತೋಂಟದೊಳಗೆ ಕದಳಿಯ ಬನವ ಸುತ್ತಿ
ವಯ್ಯಾಳಿಯ ಮಾಡುವ ವೀರಮಾಹೇಶ್ವರ ರಾಹುತನ ನೋಡಲು
ಕಾಲಿಲ್ಲದೆ ನಡೆವರಿಗೆ ಪ್ರಿಯ,
ಕೈಯಿಲ್ಲದೆ ಮುಟ್ಟುವರಿಗೆ ಸ್ನೇಹ,
ಕಣ್ಣಿಲ್ಲದೆ ನೋಡುವರಿಗೆ ಪ್ರೀತ,
ಕಿವಿಯಿಲ್ಲದೆ ಕೇಳುವರಿಗೆ ಸುಖ,
ಬಾಯಿಲ್ಲದೆ ಸವಿವರಿಗೆ ಮಚ್ಚು,
ಗುರುನಿರಂಜನ ಚನ್ನಬಸವಲಿಂಗದಂಗಕ್ಕೆ ಅಚ್ಚು. ॥ ೨೪೨ ॥

೨೪೩

ಇಳೆಯಮೇಲೆ ಎಲುವಾಲದ ಮರನಿರ್ದುಫಲವೇನು ?
ಸಾರಾಯಹೀನ ಕಾಯದಮೇಲೆ ಲಾಂಛನವಿರ್ದು ಫಲವೇನು ?
ಭಕ್ತಿ ಜ್ಞಾನ ವೈರಾಗ್ಯಹೀನ ಭಾರ ಭಾರ ಭವಭಾರ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೨೪೩ ॥

೨೪೪

ಕಾಯದ ಬಣ್ಣವ ಸುಟ್ಟು ಮಾಡಿ ಕಡೆಗೆ ನಿಲ್ಲಬಲ್ಲರೆ ಮಾಹೇಶ್ವರ.
ಮನದ ಬಣ್ಣವ ಕೆಡಿಸಿ ಮಾಡಿ ಕಡೆಗೆ ನಿಲ್ಲಬಲ್ಲರೆ ಮಾಹೇಶ್ವರ.
ಭಾವದ ಬಣ್ಣವ ಅಳಿಸಿ ಮಾಡಿ ಕಡೆಗೆ ನಿಲ್ಲಬಲ್ಲರೆ ಮಾಹೇಶ್ವರ.
ಗುರುನಿರಂಜನ ಚನ್ನಬಸವಲಿಂಗದಲ್ಲಿ ಹೊರೆಯಿಲ್ಲದಿರಬಲ್ಲರೆ
ಆತನಚ್ಚ ಮಾಹೇಶ್ವರ. ॥ ೨೪೪ ॥

೨೪೫

ಪೂರ್ವದೈವರ ಕಾಲತೊಳೆಸಿ ನಡೆಸಬೇಕು.
ಉತ್ತರದೈವರ ಕಾಲತೊಳೆಸಿ ನಡೆಸಬೇಕು.
ಪಶ್ಚಿಮದೈವರ ಬಾಯಿತೊಳೆಸಿ ನಡೆಸಬೇಕು.
ಮೆರೆವ ಮೂವರ ಸಿರಿಯತೊಳೆಸಿ,
ಇಂತಿವರಕೂಡಿ ಗುರುನಿರಂಜನ ಚನ್ನಬಸವಲಿಂಗದತ್ತ
ಅಭಿಮುಖವಾಗಿ ನಡೆಯಬೇಕು. ॥ ೨೪೫ ॥

೨೪೬

ಅಚ್ಚಮುತ್ತೈದೆ ಮೆಚ್ಚಿದ ಗಂಡನ ಕೈವಿಡಿದು
ಬಿಸಿಲು ಬೆಳದಿಂಗಳದಲ್ಲಿ ಸಸಿನೆ ನಡೆವಳು ನೋಡಾ.
ನೀರ ಜಲದಲ್ಲಿ ತೊಳೆದು ಗುರುನಿರಂಜನ ಬಸವಲಿಂಗದಭಿಷೇಕವ
ನಿತ್ಯ ಮಾಡುವಳು ನೋಡಾ. ॥ ೨೪೬ ॥

೨೪೭

ಕೋಣನ ಹತ್ತಿ ನಡೆವ ಕರಿಯಸತ್ತಿಗೆಯ ಹಿರಿಯರು ನೀವು ಕೇಳಿರೊ,
ನಿಮ್ಮ ದಾರಿ ಡೊಂಕು ಬಹಳ, ಹೊತ್ತುಳ್ಳಲ್ಲಿ ಹೋಗುವ ಪರಿಯಿನ್ನೆಂತೊ ?
ಕೋಣನ ಉರುಹಿ, ಕೊಂಬು ಕಿತ್ತೊಗೆದು, ಸತ್ತಿಗೆಯ ಸುಟ್ಟು,
ಹಾರುವನ ತಲೆಯ ಬೋಳಿಸಿ,
ಊರ ದೇವತೆಯ ಕಡಿದು ನಿಂತುನೋಡಲು
ನೆಲ ಒಣಗಿ, ಬಿಳಿಯ ದಾರಿ ಕಾಣಬಹುದು.
ಮೆಲ್ಲಮೆಲ್ಲನೆ ದಾರಿಯ ಬಿಡದೆ ನಡೆವರೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಎರಡನೆಯವತಾರವೊಪ್ಪಿತ್ತು. ॥ ೨೪೭॥

೨೪೮

ನಾದ-ಬಿಂದು-ಕಲಾಸಂಚ ನಿರಂಜನಲಿಂಗವನು
ಪರಮಗುರುಮುಖದಿಂದೆ ಸಾಧಿಸಿ,

ಕರಕಂಜಮೊಳಗಿರಿಸಿ, ಉರವಣೆ ಬಟ್ಟೆಗಳ ಸವರಿ,
ಕಳೆವ ಕರಡವಿಯೊಳೆಸೆವುತ,
ಪರಿಪರಿಯಿಂದೆ ಅಣುಮಾತ್ರ ಮೂರು ವಿದ್ಯೆಕೆ ಮರವೆಯ ತಾರದೆ,
ಎಡಬಲದ ನಡೆನುಡಿ ಜಾಣರನೊಳಕೊಳ್ಳದೆ
ಹಿಡಿತ ಬಿಡಿತಗಳರಿದು,
ಜರೆದು ನೂಂಕುತ ಹಿಡಿದುಕೊಂಬುತ
ಶರಣು ಶರಣೆಂದು ಬೆರೆದು ಬೆರಗಾಗಿರ್ಪ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಪರಮಮಾಹೇಶ್ವರ. ॥ ೨೪೮ ॥

೨೪೯

ಕ್ರಿಯಾಗಮ್ಯಲಿಂಗವನು ಸತ್ಕ್ರಿಯಾ ಭಕ್ತಿಯಿಂದೆ
ತ್ಯಾಗಾಂಗದಲ್ಲಿ ಧರಿಸಿದ ವಿರಾಗ್ರತೆಯನುಳ್ಳ ಮಾಹೇಶ್ವರನು
ಕಾಯಕದಲ್ಲಿ ವಾಚಕ ಮಾನಸ ಸಂವಿತ್ಪ್ರಭಾನಂದಮಯವಾಗಿ ತೋರುತ್ತಿಹನಲ್ಲದೆ,
ಅಂಗಭವಿ ವೇಷಧಾರಿಗಳಂತಲ್ಲ ನೋಡಾ .
ಜ್ಞಾನಗಮ್ಯಲಿಂಗವನು ಸುಜ್ಞಾನಭಕ್ತಿಯಿಂದೆ
ಭೋಗಾಂಗದಲ್ಲಿ ಧರಿಸಿದ ಕಡುಗಲಿ ವೀರಮಾಹೇಶ್ವರನು
ವಾಚಕದಲ್ಲಿ ಮಾನಸ ಕಾಯಕ ಮಹೋತ್ಸಾಹಮಯವಾಗಿ
ತೋರುತ್ತಿಹನಲ್ಲದೆ, ಪ್ರಾಣಭವಿ ವೇಷಧಾರಿಗಳಂತಲ್ಲ ನೋಡಾ !
ಭಾವಗಮ್ಯಲಿಂಗವನು ಮಹಾಜ್ಞಾನಭಕ್ತಿಯಿಂದೆ
ಯೋಗಾಂಗದಲ್ಲಿ ಧರಿಸಿದ ಘನಗಂಭೀರಮಾಹೇಶ್ವರನು
ತನ್ನ ಮಾನಸದಲ್ಲಿ ಕಾಯಕ ವಾಚಕ
ಪರಮಶಾಂತ ಜ್ಞಾನಮಯವಾಗಿ ತೋರುತ್ತಿಹನಲ್ಲದೆ,
ಆತ್ಮಭವಿ ವೇಷಧಾರಿಗಳಂತಲ್ಲ ನೋಡಾ !
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಷಟ್‌ಸ್ಥಲಗಮ್ಯ ಷಡುದರ್ಶನಗಮ್ಯ ನೋಡಾ ! ॥ ೨೪೯ ॥

೨೫೦

ಪರಮಗುರುವಿನಿಂದರಿದಬಳಿಕ ಮರೆದು ಮಾ[illegible]ದು,
ಬೆರೆದು ನೋಡಲಾಗದು, ಒಲಿದು ಕ[illegible]ಗದು,
ಅದೇನು ಕಾರಣವೆಂದೊಡೆ
ಕೊಟ್ಟು[illegible] ಬಿಟ್ಟರೆ ಹುಟ್ಟು ಹೊಂದುಗಳಟ್ಟಿಬಾರದು,
[illegible]ನಿರಂಜನ ಚನ್ನಬಸವಲಿಂಗದಲ್ಲಿ ಇತರ ಸುಖಿಹಿತವಲ್ಲದ ಕಾರಣ. ॥೨೫೦॥

೨೫೧

ಕಚ ನವೀನ ಕುಚ ಜಘನವ ಕುವರಿಯರ ಸವಿನುಡಿಯ ಸೆಳವಿಗೆ
ಕವಳಿಸಿ ಬಿದ್ದು ಮುಳುಗಿ ಬೆಳಗುಗತ್ತಲೆಯೊಳಿರುವರಗಣಿತರು.
ಹಿರಿಯರೆಂದೆನಿಸಿಕೊಂಡ ಬರಿ ಮನುಜರು
ಮನೆಮನೆಯರಸಿಯರ ವಿನಯವೆರೆದು,
ಘನಭಕ್ತಿಜ್ಞಾನವೈರಾಗ್ಯದಿಂದನುಪಮಲಿಂಗಕ್ಕೆ
ತನುಮನಧನವೀವ ಅನುವನವರೆತ್ತಬಲ್ಲರಯ್ಯಾ ?
ಹುಸಿ ದಿಟ, ಕಳ್ಳ ಸಹಜ, ಮಸಿ ಧವಲ ಮಾಡಲುಂಟೆ ?
ಗುರುನಿರಂಜನ ಚನ್ನಬಸವಲಿಂಗಕ್ಕೆ ತಪ್ಪಕರು ಅಪ್ಪಬಲ್ಲರೆ ? ॥ ೨೫೧ ॥

೨೫೨

ಇಷ್ಟಲಿಂಗವ ಹಿಡಿದು ಕಷ್ಟಯೋನಿಗೆ ತಿರುಗುವ
ಕೆಟ್ಟ ಪಾತಕರ ನೋಡಲಾಗದು.
ಜಂಗಮವೆಂದು ಮಾಡಲಾಗದು ಪೂಜೆಯ.
ನಮಿಸಿಕೊಳ್ಳಲಾಗದು ಹರನೆಂದು.
ಅದೇನು ಕಾರಣವೆಂದೊಡೆ :
ತನುಮನಭಾವನಷ್ಟವಾದಿಷ್ಟಲಿಂಗಜಂಗಮವು ಪೂಜೆಗೆ ಯೋಗ್ಯ.
ತನುಮನಭಾವವು ತ್ರಿವಿಧಮಲದಲ್ಲಿ ಮುಳುಗಿ ಮಲರೂಪಮನುಜರಿಗೆ,
ಗುರುನಿರಂಜನ ಚನ್ನಬಸವಲಿಂಗವೆಂದೊಡೆ ನಾಚಿಕೆಗೊಂಡಿತ್ತು ಆಚಾರ.॥೨೫೨॥

೨೫೩

ಆಚಾರಶೂನ್ಯ ಅಂಗ ಗುರುದ್ರೋಹಿ ಮಾಡಲಾಗದು ಭಕ್ತಿಯ.
ಆಚಾರಶೂನ್ಯ ಮನ ಲಿಂಗದ್ರೋಹಿ ಮಾಡಲಾಗದು ಪೂಜೆಯ.
ಆಚಾರಶೂನ್ಯ ಭಾವ ಜಂಗಮದ್ರೋಹಿ ಮಾಡಲಾಗದು ದಾಸೋಹವ.
ಆಚಾರತ್ರಯವಿರಹಿತವಾದ ಅನಾಚಾರ ಭ್ರಷ್ಟರುಗಳ
ಶ್ರೇಷ್ಠರೆಂದು ಪೂಜೆಯ ಮಾಡಿದರೆ ಭವತಪ್ಪದು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೨೫೩ ॥

೨೫೪

~ನೆ ಪೂಜೆಗೊಂಬ ಒಡೆಯರು ತಾವಾದಬಳಿಕ,
~ವಿರಹಿತರಾಗಿ,

ಕಾಯವನು ಮಣ್ಣಿನೊಳು ಸಿಕ್ಕಿಸಿ ಕೋಟಲೆಗೊಳ್ಳುತ್ತ,
ಕರಣವನು ಹೆಣ್ಣಿನ ವಿಷಯವಿಕಾರಭ್ರಾಂತಿಗೊಳಿಸುತ್ತ,
ಆತ್ಮನನುಳಿದು ದುಸ್ಸಂಸಾರ ಪ್ರಪಂಚದೊಳು ಮುಳುಗಿಸಿ ಕಳವಳಿಸುತ್ತ,
ದುಷ್ಕರ್ಮ ಗಳಿಸಿ ಭವರಾಟಣಂಗೈವ ನರಕಿಗಳಿಗೆತ್ತಣ ದೇವತ್ವವಯ್ಯಾ,
ಗುರುನಿರಂಜನ ಚನ್ನಬಸವಲಿಂಗಕ್ಕೆ ದೂರವಾದ ದುರ್ಮತಿಗಳಿಗೆ. ॥ ೨೫೪ ॥

೨೫೫

ಪೃಥ್ವಿ ಅಂಶವನಳಿದು ಚಿತ್ಪೃಥ್ವಿಯಂಗವಾಗಿ
ಭೃತ್ಯಾಚಾರ ನೆಲೆಸಿದುದೇ ಆಚಾರಲಿಂಗಸಂಬಂಧ.
ಅಪ್ಪುವಿನಂಶವನಳಿದು ಚಿದಪ್ಪುವೇ ಅಂಗವಾಗಿ
ಗಣಾಚಾರ ನೆಲೆಸಿದುದೇ ಗುರುಲಿಂಗಸಂಬಂಧ.
ಅಗ್ನಿಯಂಶವನಳಿದು ಚಿದಗ್ನಿಯೇ ಅಂಗವಾಗಿ
ಶಿವಾಚಾರ ನೆಲೆಸಿದುದೇ ಶಿವಲಿಂಗಸಂಬಂಧ.
ವಾಯುವಿನಂಶವನಳಿದು ಚಿದ್ವಾಯುವೇ ಅಂಗವಾಗಿ
ಸದಾಚಾರ ನೆಲೆಸಿದುದೇ ಜಂಗಮಲಿಂಗಸಂಬಂಧ.
ಆಕಾಶದಂಶವನಳಿದು ಚಿದಾಕಾಶವೇ ಅಂಗವಾಗಿ
ಲಿಂಗಾಚಾರ ನೆಲೆಸಿದುದೇ ಪ್ರಸಾದಲಿಂಗಸಂಬಂಧ.
ಇಂತು ಪಂಚಾಚಾರ ಪಂಚತತ್ವವಳಿದುಳಿದು ನೆಲೆಸಿ ಪಂಚಲಿಂಗಸಂಬಂಧವಾದಲ್ಲಿ
ಆತ್ಮನಂಶವನಳಿದುಳಿದು ಸರ್ವಾಚಾರಸಂಪತ್ತು ನೆಲೆಸಿ
ಮಹಾಲಿಂಗಗುರುನಿರಂಜನ ಚನ್ನಬಸವಲಿಂಗ
ಸಂಬಂಧವಾಯಿತ್ತು ಮಾಹೇಶ್ವರಂಗೆ. ॥ ೨೫೫ ॥

## ಮಾಹೇಶ್ವರನ ಭಕ್ತಸ್ಥಲ

೨೫೬

ನಡೆನುಡಿಯಿಲ್ಲದ ಘನವು ನಡೆನುಡಿಗಡಿಯಿಟ್ಟು ಬಂದರೆ
ಎನ್ನ ಸಡಗರ ಹೆಚ್ಚಿತ್ತು ನೋಡಾ !
ಬಡಿವಾರದ ಬಲವಯ್ಯಾ,
ಕರ್ತು ಭೃತ್ಯಕಳೆ ಉನ್ನತವಾಗಿ
ಶಕ್ತಿಯನು ಮುಕ್ತಿದಾಯಕ ಮುನಿಸಿಲ್ಲದೆ ಮುಂದುವರಿ.
ನಾದ ಬಿಂದು ಕಳೆ ನವೀನವಯ್ಯಾ.
ಮೂದೇವರೊಡೆಯ ಶರಣು ಶರಣು ಕರುಣಾನಿಧಿ
ಗುರುನಿರಂಜನ ಚನ್ನಬಸವಲಿಂಗಾ. ॥ ೨೫೬ ॥

೨೫೭

ನರಮುನಿಗಳರಿಯರು ನಿಮ್ಮಂತುವ,
ಸುರಪಾದಿ ಸಕಲಮನು ಷಡ್‌ದರ್ಶನಗಳರಿಯರು, ನಿಮ್ಮ ಪದಬೆರೆಯರು.
ಹದುಳಿಗರ ಸದುಹೃದಯ ನಿವಾಸ,
ಮುದದಿಂದೊಲಿದೆನ್ನ ಕರಸರಸಿಜಕ್ಕೈತಂದು,
ಘನಸಾರಾಯದನುವಿನೊಳು ನೆರೆದು
ಪರಿಣಾಮಿಸುವ ಪರಮಮೂರುತಿ,
ನಿಮಗೆ ಶರಣು ಶರಣೆಂಬೆನನುದಿನ
ಗುರುನಿರಂಜನ ಚನ್ನಬಸವಲಿಂಗಾ. ॥ ೨೫೭ ॥

೨೫೮

ಶರಣು ಶರಣೆಂಬೆ ನಿಮ್ಮ ಪದಕಮಲಕ್ಕೆ.
ಶರಣು ಶರಣೆಂಬೆ ನಿಮ್ಮ ಹೃದಯಕಮಲಕ್ಕೆ.
ಶರಣು ಶರಣೆಂಬೆ ನಿಮ್ಮ ಮುಖಕಮಲಕ್ಕೆ.
ಆದಿ ಆಧಾರ ಚೈತನ್ಯ ಚಲುವಿಕೆಯನವಧರಿಸು
ಗುರುನಿರಂಜನ ಚನ್ನಬಸವಲಿಂಗಾ. ॥ ೨೫೮ ॥

೨೫೯

ಅಯ್ಯಾ, ಕಾಲತೊಳೆದುಕೊಂಡು ಬಂದರೆ ಕಣ್ಣಮುಂದೆ ನಿಂದೆ.
ಕೈಯ ತೊಳೆದುಕೊಂಡು ಬಂದರೆ ಮನದ ಮುಂದೆ ನಿಂದೆ.
ತಲೆಯ ತೊಳೆದುಕೊಂಡು ಬಂದರೆ ಭಾವದ ಮುಂದೆ ನಿಂದೆ.
ಸಂದು ಸಂಶಯ ಕುಂದು ಕಲೆಯ ಕಳೆದುಳಿದು ಬಂದರೆ
ಸರ್ವಾಂಗಸನ್ನಿಹಿತನಾಗಿ ನಿಂದೆ.
ಬಂದ ಬರವು ಚಂದವಾಗಿ ನಿಂದರೆ ಅಂದಂದಿಗೆ ಅವಧರಿಸು
ಮುಂದುವರಿವೆನು ಮುದದಿಂದೆ ಗುರುನಿರಂಜನ ಚನ್ನಬಸವಲಿಂಗಾ. ॥ ೨೫೯॥

೨೬೦

ಅತ್ತಿತ್ತಲುಗದೆ ತನು ತರಹರವಾಯಿತ್ತು ನಿಮ್ಮಡಿಗೆ.
ಸಂಚಲವಳಿದುಳಿದೀ ಮನವು ಒಲಿದು ಉಲಿಯುತ್ತಿದೆ ನಿಮ್ಮ ನೆನಪಿಂಗೆ.
ವಂಚನೆಯ ಜರೆದು ಮರೆದು ನೆರೆದಿಪ್ಪವು
ನಿಮ್ಮ ಸುಳುಹಿನ ಬರವ ಪಂಚೇಂದ್ರಿಯಗಳು.
ಇಚ್ಛೆ ಆಮಿಷ ಅಳಿದುಳಿದು ಆಚ್ಛಾದಿಸಿ ಆಹ್ವಾನಿಸುತಿರ್ದವು
ನಿಮ್ಮತ್ತ ಪಂಚವಿಷಯಗಳು.

ಇಂತು ಸಕಲ ಸಂಭ್ರಮ ನೆರವಿಯೊಳೊಂದಿ ಪರವಶದೊಳಿರ್ದೆನು
ಪರಮಗುರು ಚರಲಿಂಗವೆ,
ಅರಿದರಿದೆನ್ನವಧರಿಸು ಅಪ್ರತಿಮ ಗುರುನಿರಂಜನ ಚನ್ನಬಸವಲಿಂಗಾ. ॥ ೨೬೦ ॥

೨೬೧

ಆಳಿದೊಡೆಯರು ಮೇಳೈಸಿ ಕೆಳಗೆ ಬಂದಲ್ಲಿ
ನಾಳೆಂದರೆ ಹಾಳಾಗಿ ಹೋಯಿತ್ತೆನ್ನ ಪತಿಭಾವದ ಬಾಳುವೆ.
ಅಳಿಯಾಸೆಯೆಂಬ ಸುಳುಹೆನ್ನ ಕೆಡಿಸಿತ್ತು,
ಎನಗೆಂತು ಭಕ್ತಿಸಂಭವಿಸುವದು !
ಎನಗೆಂತು ಯುಕ್ತಿ ಸಂಭವಿಸುವದು !
ತಪ್ಪೆನ್ನದು ತಪ್ಪೆನ್ನದು ಬಟ್ಟೆಗೆಟ್ಟು ಬಿದ್ದೆ ನಿಮ್ಮೊಳಗೆ
ಗುರುನಿರಂಜನ ಚನ್ನಬಸವಲಿಂಗಾ. ॥ ೨೬೧ ॥

೨೬೨

ಕಡಗೊಂಡ ಧನದಿಂದೆ ಗಳಿಸಿಕೊಡಲೊಲ್ಲದೆ
ನೋಡಿ ನೋಡಿ ಮಿಡುಕುವ ತುಡುಗುಣಿಯಂತೆ,
ಎನ್ನೊಡೆಯರು ಅಡಿಯಿಟ್ಟು ಬರಲು ಗಡಬಡಗೊಂಡು
ಮನೆ ಮಡದಿ ಮಕ್ಕಳ ಮೋಹ ತಲೆಗೇರಿ,
ಸಲುಗೆಯನಿದಿರಿಟ್ಟು ಸರಿದುಕೊಂಡಿರುವ
ಒಳಗಳ್ಳಗೆಂತು ಭಕ್ತಿಯಪ್ಪುದಯ್ಯಾ !
ನಿಮ್ಮಡಿಯೊಳು ಬಿದ್ದ ಆ ಜಡ ಭಕ್ತಿಗನುವಾಗಿ
ಬಾ ಗುರುನಿರಂಜನ ಚನ್ನಬಸವಲಿಂಗಾ. ॥ ೨೬೨ ॥

೨೬೩

ಗಂಡಗಿಕ್ಕದೆ ಮಾಡಿ ತಪ್ಪಿಸಿ ತಿಂಬ ದಿಂಡೆಹೆಂಗಳೆಯಂತೆ
ಕರ್ತುಗಳಿಗೆ ಅರ್ಥವ ಸವೆಯದೆ
ಸಟೆವೆರೆದು ಬಾಳುವ ಕುಟಿಲಗಳ್ಳರಿಗೆಂತಪ್ಪುದಯ್ಯಾ ಭಕ್ತಿ ?
ಸತ್ಯ ಧನವ ನಿತ್ಯ ನಿತ್ಯವರಿದು ಮರೆದಿತ್ತಡೆ
ಕರ್ತುವೊಲಿವ ನಮ್ಮ ಗುರುನಿರಂಜನ ಚನ್ನಬಸವಲಿಂಗಾ. ॥ ೨೬೩ ॥

೨೬೪

ಧರೆ ಗಗನದಲ್ಲಿರ್ದು ಬಯಲ ಕುರುಹರಿಯದೆ
ಬಡಿದಾಡಿ ಮಡಿದು ಹೋದರು ಅನಂತ ಹಿರಿಯರು.

ಇದ ಕಂಡು ಮರಳಿದರೆ ಮನದೊಡೆಯ ನೀ ಸಾಕ್ಷಿ.
ಮಧ್ಯಮಂಟಪದೊಳಗಿಪ್ಪ ಶುದ್ಧಧನವೆಲ್ಲ
ಚಿದ್ರೂಪಗಲ್ಲದೆ ಮತ್ತೊಂದನರಿಯದ ಭಾವ
ಗುರುನಿರಂಜನ ಚನ್ನಬಸವಲಿಂಗ ನಿಮ್ಮಾಣೆ. ॥ ೨೬೪ ॥

೨೬೫

ಮಾತೆಪಿತರುಗಳಿಂದೆ ಉದಯವಾದ ಸುತನು
ಮಾತೆಪಿತರುಗಳ ನಾಮವಿಡಿದು ಗಳಿಸಿದರ್ಥವ,
ಮಾತೆಪಿತರು ತನ್ನ ಪ್ರಾಣವಾಗಿ ಸುಖಿಸಿ ಬಾಳಿದರೆ
ಲೋಕಧರ್ಮಿಗಳು ಮೆಚ್ಚುವರು,
ಮರೆದು ಬಾಳಿದರೆ ಪಾತಕನೆಂಬುವರು.
ಚಿದ್ಘನ ಗುರುವಿನಿಂದುದಯವಾದ ಚಿಲ್ಲಿಂಗಭಕ್ತನು,
ಚಿದಾನಂದ ದ್ರವ್ಯವ ಗಳಿಸಿ ಸತ್ತುಚಿತ್ತಾನಂದ ಪ್ರಾಣವಾಗಿ
ಸುಖಿಸಿ ಬಾಳಿದರೆ ಆ ಲೋಕಧರ್ಮಿಗಳಾವರಿಸಿಕೊಂಬುವರು,
ಮರೆದು ಸುಖಿಸಿದರೆ ಭವಕರ್ಮಿಯೆಂಬುವರು.
ಇದನರಿದು ಬಂದೆ ನೀ ನೋಡಿ ಬಾರಾ
ಎನ್ನ ಪ್ರಾಣವಾದ ಗುರುನಿರಂಜನ ಚನ್ನಬಸವಲಿಂಗಾ. ॥ ೨೬೫ ॥

೨೬೬

ಗುರುಲಿಂಗಜಂಗಮದ ಭಕ್ತನಾದೆನೆಂದು,
ಪಂಚವಿಧ ಪತಾಕಿಯ ಮುಂದೆ ನಿಲಿಸಿ ಮಾತನಾಡುವರಯ್ಯಾ.
ಪಂಚಾಂಗವ ಕೇಳಿ ನಡೆದಲ್ಲಿ ಗುರುದ್ರೋಹಿಯೆಂಬೆ.
ಅನ್ಯ ಸ್ಥಾವರ ಘನವೆಂದು ನಡೆದಲ್ಲಿ ಲಿಂಗದ್ರೋಹಿಯೆಂಬೆ.
ಅಪಾತ್ರ ದ್ರವ್ಯನಿತ್ತಲ್ಲಿ ಜಂಗಮದ್ರೋಹಿಯೆಂಬೆ.
ತದ್ವಾದಿ ಕುಷ್ಟರೋಗಕ್ಕೆ ಕಸಮಲೌಷಧ ಹಚ್ಚಿದಲ್ಲಿ ಭಸ್ಮದ್ರೋಹಿ.
ಚಿನ್ನ ಬೆಳ್ಳಿ ಮೊದಲಾದ ಸಕಲಾಭರಣವ ಧರಿಸಿದಲ್ಲಿ ರುದ್ರಾಕ್ಷಿದ್ರೋಹಿ.
ತೀರ್ಥಯಾತ್ರೆ ಘನವೆಂದುಕೊಂಡಲ್ಲಿ ಪಾದೋದಕದ್ರೋಹಿ.
ಸಕಲರಿಂದೆ ಔಷಧವ ಭಕ್ಷಿಸಿದಲ್ಲಿ ಪ್ರಸಾದದ್ರೋಹಿ.
ಯಂತ್ರ ಮಂತ್ರ ತಂತ್ರಗಳಿಂದೆ ಚರಿಸಿದಲ್ಲಿ ಪಂಚಾಕ್ಷರಿದ್ರೋಹಿ.
ಇಂತು ಅಷ್ಟಾವರಣವ ಹೊತ್ತು ಅಷ್ಟದ್ರೋಹಿಯಾದ
ಭ್ರಷ್ಟಭವಿಗಳಿಗೆತ್ತಣ ಮುಕ್ತಿಯಯ್ಯಾ
ಗುರುನಿರಂಜನ ಚನ್ನಬಸವಲಿಂಗಾ ? ॥ ೨೬೬ ॥

೨೬೭

ಶ್ರೇಷ್ಠ ಶಿವಭಕ್ತರೆಂದು ಇಷ್ಟಲಿಂಗವ ಕೆಳಗೆ ಮಾಡಿ,
ಸೃಷ್ಟಿಯೊಳಿಟ್ಟ ಸ್ಥಾವರಕ್ಕೆರಗಿ,
ಮುಟ್ಟಿಹಾರುವ, ಜೈನ, ರಾಜ, ಮಂತ್ರಿ, ಹಿರಿಯರುಗಳೆಂದು
ಪೆಟ್ಟುಪೆಟ್ಟಿಗೆ ಶರಣೆಂದು ಹೊಟ್ಟೆಯ ಹೊರೆದು
ನರಕಸಮುದ್ರದೊಳ್ಮುಳುಗಾಡುವ ದುರ್ಭವಿಗಳಿಗೆತ್ತಣ ಲಿಂಗಭಕ್ತಿಯಯ್ಯಾ
ಗುರುನಿರಂಜನ ಚನ್ನಬಸವಲಿಂಗಾ ? || ೨೬೭ ||

೨೬೮

ತಾ ಭಕ್ತನಾಗಿ ಭವಿಯ ನಿರೀಕ್ಷಣೆಯ ಮಾಡಿದರೆ ಒಂದನೆಯ ಪಾತಕ.
ಕೊಡುಕೊಳ್ಳುವ ವ್ಯವಹಾರ ಮಾಡಿದರೆ ಎರಡನೆಯ ಪಾತಕ.
ತಂದೆ, ಮಗ, ಸಹೋದರ, ನೆಂಟನೆಂದು ನಡೆದರೆ ಮೂರನೆಯ ಪಾತಕ.
ಶಿವಪ್ರಸಂಗವ ಮಾಡಿದರೆ ನಾಲ್ಕನೆಯ ಪಾತಕ.
ಸಂಗಸಮರಸವ ಮಾಡಿದರೆ ಐದನೆಯ ಪಾತಕ.
ಇಂತು ಪಂಚಮಹಾಪಾತಕರಿಗೆ ಭಕ್ತನೆಂದರೆ ಭವತಪ್ಪದು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೨೬೮ ||

೨೬೯

ಭವಿಯಕಳೆದು ಭಕ್ತನಾದೆವೆಂದು ಭವಿಯೊಡನೆ ಬೆರೆಸಿದವರಿಗೆಂದು,
ಪರದ್ವಾರ ಹಿಂಸೆ ಹುಸಿ ಕಳವು ದುರ್ಭಕ್ಷ್ಯಯುಕ್ತರಿಗೆಂದು,
ಪರದೈವ ಪೂಜೆ, ಪರಸಮಯಚರಿತ್ರೆಯುಳ್ಳವರಿಗೆಂದು,
ವೈತರಣಿ, ಕುಂಭಿ, ರೌರವಗಳಾಗಿರ್ದವು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. || ೨೬೯ ||

೨೭೦

ಅಯ್ಯಾ, ತನುವಿತ್ತು ಮಗನೆಂದು ಮಾಡುವೆನಲ್ಲದೆ
ಪ್ರಕೃತಿಗಿತ್ತೆನಾದರೆ ಕಷ್ಟದೊಳಗಿಕ್ಕು ದೇವ.
ಮನವಿತ್ತು ಮಗನೆಂದು ಮಾಡುವೆನಲ್ಲದೆ
ಪ್ರಕೃತಿಗಿತ್ತೆನಾದಡೆ ಕರ್ಮದೊಳಿಕ್ಕು ಲಿಂಗವೆ.
ಪ್ರಾಣವನಿತ್ತು ಮಗನೆಂದು ಮಾಡುವೆನಲ್ಲದೆ
ಪ್ರಕೃತಿಗಿತ್ತೆನಾದಡೆ ಮರಣದೊಳಿಕ್ಕು ಶಿವನೆ.
ಅಯ್ಯಾ, ಎನ್ನ ತನು ಮನ ಪ್ರಾಣವೇ ಗುರುಲಿಂಗಜಂಗಮ.

ಗುರುಲಿಂಗಜಂಗಮವೇ ಎನ್ನ ತನು ಮನ ಪ್ರಾಣ.
ಇದಕ್ಕೆ ನೀವೇ ಸಾಕ್ಷಿ ಗುರುನಿರಂಜನ ಚನ್ನಬಸವಲಿಂಗಾ. ॥ ೨೭೦ ॥

೨೭೧

ಪ್ರಾಣವ ಹಿಂಗಿ ಅಂಗಸುಖಿಸಲು ಪರಿಯಾವುದಯ್ಯಾ ?
ಚಿತ್ಪ್ರಾಣನಾಥನೆಂಬಾ ಚಿತ್ಪ್ರಕಾಶ ಜಂಗಮಲಿಂಗವನುಳಿದು,
ಸತ್ಕ್ರಿಯಾಚಾರಸಂಬಂಧಿಗಳೆಂದರೆ ಸತ್ಯವಪ್ಪುದೇ ?
ಹುಸಿ ದುರ್ವಾಸನೆಯಾಗಿ ಹೋಗುವದು.
ನಾನಿಂತಲ್ಲ ನಿತ್ಯವಾಗಿರ್ದೆ ನಿನ್ನಂಗವಿಡಿದು
ಗುರುನಿರಂಜನ ಚನ್ನಬಸವಲಿಂಗಾ. ॥ ೨೭೧ ॥

೨೭೨

ಸಂತೆಯ ಬೆವಹಾರಿಯಂತೆ ಅಂತಗತ್ತರೆಯುಳ್ಳರೆ
ನಿಜನಿಷ್ಠೆ ಭಕ್ತಿಯೆಂತಪ್ಪುದಯ್ಯಾ?
ಛಿದ್ರಭಾವಕ್ಕೆ ಛಿದ್ರವಲ್ಲದೆ ಮುದ್ರೆಮರೆಯ ಭಕ್ತಿಯಿರ್ದಂತೆಯಿರಲು
ಗುರುನಿರಂಜನ ಚನ್ನಬಸವಲಿಂಗ ತಾನೆಂಬ. ॥ ೨೭೨ ॥

೨೭೩

ಹುಟ್ಟಿದ ಮನೆಯ ಸುಟ್ಟು, ನೆರಮನೆಯ ಸುಟ್ಟು,
ಹೋಗುವಾಹುತಿ ಹೋತ್ರನಂತೆ,
ದೇಹಾಭಿಮಾನವಿಡಿದು ಉಪದೇಶವಾಗಿ
ತನುವಿಕಾರ ಬಿಡದೆ ಗುರುಭಕ್ತಿ ದಹನಮಾಡಿ,
ಜಂಗಮಲಿಂಗವ ಕಂಡು ನಿಂದಿಸಿ ಜಂಗಮಭಕ್ತಿಯ ದಗ್ಧಮಾಡಿ
ದುರ್ಗತಿಯಕೂಡಿ ಹೋಗುವ ನರಕಜೀವಿಗಳಿಗೆಂತು
ಭಕ್ತಿ ನೆಲೆಗೊಂಬುವುದಯ್ಯಾ?
ನಿತ್ಯಾನಂದ ನಿಲುವಿಗೆ ಸತ್ಯವಾಗಿತ್ತಡೆ
ಕರ್ತುವಿಗೆ ಭಕ್ತಿ ನಿಜವೆಂಬೆ ಗುರುನಿರಂಜನ ಚನ್ನಬಸವಲಿಂಗಾ. ॥ ೨೭೩ ॥

೨೭೪

ನೀತಿಯನರಿಯದ ಸೂತಕಪ್ರಾಣಿಗಳಿಗೆ
ಅಜಾತಗುರೂಪದೇಶ ಅಳವಡುವುದೇ ?
ಅದೆಂತೆಂದೊಡೆ, ಸಮ್ಯಕ್‌ಜ್ಞಾನದಿಂದೆ ಜಾತಿಸೂತಕವಳಿಯಲಿಲ್ಲ.
ಕ್ರಿಯಾಘನ ಗುರುವಿನಿಂದೆ ಜನನ ಸೂತಕವಳಿಯಲಿಲ್ಲ.

ಲಿಂಗ ಕ್ರಿಯಾಸಂಪರ್ಕದಿಂದೆ ರಜಸೂತಕವಳಿಯಲಿಲ್ಲ.
ಜಂಗಮ ಪಾದೋದಕ ಪ್ರಸಾದದಿಂದ ಉಚ್ಛಿಷ್ಟ ಸೂತಕವಳಿಯಲಿಲ್ಲ.
ಮಹಾಘನದೊಳ್ಕನೋರ್ಲಯವಾಗಿ ಪ್ರೇತಸೂತಕವಳಿಯಲಿಲ್ಲ.
ಇಂತು ಪಂಚಸೂತಕವಳಿಯದೆ ಪಂಚೇಂದ್ರಿಯಪ್ರಪಂಚಸೂತಕದೊಳ್ಮುಳುಗಿ
ಪಂಚಾಚಾರಸಂಬಂಧಿಗಳೆಂದರೆ ನಾಚಿ ನಗುತಿರ್ದರು
ಗುರುನಿರಂಜನ ಚನ್ನಬಸವಲಿಂಗ ನಿಮ್ಮ ಶರಣರು. || ೨೭೪ ||

೨೭೫

ಅನಾದಿಸಂಸಿದ್ಧ ನಿರಂಜನಗುರುಲಿಂಗದಿಂದುದಯವಾದ
ವೀರಮಾಹೇಶ್ವರನು,
ತಾಯಿ ತಂದೆಯಿಂದೆ ಹುಟ್ಟಿದವನೆಂದು ಬಂಧುಪ್ರಿಯನಲ್ಲ.
ಹರಿಯಜರರಿತಕ್ಕಗೋಚರವಾದ ಪರಮಲಿಂಗವು
ಕರಕಮಲದಲ್ಲೊಪ್ಪುತಿಪ್ಪುದಾಗಿ,
ಅನ್ಯದೈವವೆಂಬ ಜಂಗುಳಿಗಳ ಕುಕ್ಕುರಾಳಿಯೆಂದು ಕಾಂಬುವ.
ಕರಸ್ಥಲದ ಲಿಂಗಕ್ಕೆ ಮನ ಕರಣಂಗಳ ಮಾರುಗೊಟ್ಟವನಾಗಿ,
ಮಾನಿನಿಯರ ಮರುಕಾಳಿಗೆರ್ದು ಪಿಶಾಚಿಯಾಚರಿಯೆಂದು ತಿಳಿವ.
ಗುರುಚರಲಿಂಗ ಭಸಿತಾಕ್ಷಿಮಣಿಮಂತ್ರ, ಚರಣಜಲಶೇಷ ಪ್ರಾಣವಾದಕಾರಣ,
ಹೇಮ ರಜತಾಭರಣವ ಹೇಯವ ಮಾಡಿ ಜರೆವ.
ಸಕಲದಾಸೋಹಿತನಾಗಿ,
ಆದಿ ಮಧ್ಯ ಅವಸಾನವರಿದರಿದಾನಂದಮುಖನಾದ ಕಾರಣ,
ಅನ್ಯೋಪಾಧಿಡಂಭಕದನುಸರಣೆಗಳೆಲ್ಲ ಅಪಾತ್ರವೆಂದು ಅರಿದು ಬಿಡುವ.
ಇಂತಪ್ಪ ಭಕ್ತಿ ಜ್ಞಾನ ವೈರಾಗ್ಯಸ್ವರೂಪವಾದ ವೀರಮಾಹೇಶ್ವರಂಗೆ
ನಮೋ ನಮೋ ಎಂದು ಬದುಕುವೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. || ೨೭೫ ||

೨೭೬

ಪರಧನ ಪರಸ್ತ್ರೀ ಪರನಿಂದೆ ಪರದೈವ ಅನೃತಾದಿ
ಪಂಚಮಹಾಪಾತಕವ ಪರಿಹರಿಸದನ್ನಕ್ಕರ
ವೀರಮಾಹೇಶ್ವರನೆಂತಪ್ಪನಯ್ಯಾ ?
ಸಂಚಿತಾದಿ ಕರ್ಮತ್ರಯದೊಳಿರ್ದು ಕೆಂಚ, ಧವಲಕ್ಕಜಲವರ್ತಕವಳಿಯದೆ
ವೀರಮಾಹೇಶ್ವರನಾದೆನೆಂದರೆ ಅಸಾಧ್ಯ ಕಾಣಾ
ಗುರುನಿರಂಜನ ಚನ್ನಬಸವಲಿಂಗ ನಿಮ್ಮಲ್ಲಿ. || ೨೭೬ ||

೨೭೭

ಅಂಗ ಆಚಾರಂಗವಾಗದನ್ನಕ್ಕರ,
ಮನಸು ಉನ್ಮನಸಾಗದನ್ನಕ್ಕರ,
ಪ್ರಾಣ ಚಿತ್ಪ್ರಾಣವಾಗದನ್ನಕ್ಕರ,
ಭಾವ ಮಹಾನುಭಾವವಾಗದನ್ನಕ್ಕರ,
ಜೀವ ಸಜ್ಜೀವವಾಗದನ್ನಕ್ಕರ,
ಇಹಪರಕಾಂಕ್ಷೆ ಅಳಿಯದನ್ನಕ್ಕರ,
ಎಂತು ಮಾಹೇಶ್ವರನಪ್ಪನಯ್ಯಾ?
ಕಾಯದಲ್ಲಿ ಗುರುಭಕ್ತಿ ಕಾಣದನ್ನಕ್ಕರ,
ಮನದಲ್ಲಿ ಲಿಂಗಭಕ್ತಿ ಕಾಣದನ್ನಕ್ಕರ,
ಪ್ರಾಣದಲ್ಲಿ ಜಂಗಮಭಕ್ತಿ ಕಾಣದನ್ನಕ್ಕರ,
ಭಾವದಲ್ಲಿ ಪ್ರಸಾದಭಕ್ತಿ ಕಾಣದನ್ನಕ್ಕರ
ಎಂತು ಮಾಹೇಶ್ವರನಪ್ಪನಯ್ಯಾ ?
ಗುರುನಿರಂಜನ ಚನ್ನಬಸವಲಿಂಗದಲ್ಲಿ ಶರಣರ ಸಂಗವಿಲ್ಲದನ್ನಕ್ಕರ
ಎಂತು ಮಾಹೇಶ್ವರನಪ್ಪನಯ್ಯಾ ? || ೨೭೭ ||

೨೭೮

ಎಲೆ ಅಯ್ಯಾ, ಆನು ನಿಮ್ಮಿಂದುದಯವಾದಕಾರಣ
ನಿಮ್ಮ ವೇಷವ ಧರಿಸಿ ನಿಮ್ಮಿಚ್ಛೆಯಿಂದಾಚರಿಸಿದೆನಯ್ಯಾ.
ನೀನೊಂದಾದಲ್ಲಿ ನಾನೊಂದಂಗವಾದೆ.
ನೀನು ಮೂರಾದಲ್ಲಿ ನಾನು ಮೂರಂಗವಾದೆ.
ನೀನಾರಾದಲ್ಲಿ ನಾನು ಆರಂಗವಾದೆ.
ನೀನು ಮೂವತ್ತಾರಾದಲ್ಲಿ ನಾನು ಮೂವತ್ತಾರಂಗವಾದೆ.
ನೀನು ಇನ್ನೂರಾಹದಿನಾರಾದಲ್ಲಿ ನಾನು ಇನ್ನೂರಾಹದಿನಾರಂಗವಾದೆ.
ನೀನು ಪರಿಪೂರ್ಣವಾದರೆ ನಾನು ಪರಿಪೂರ್ಣ ಅಂಗವಾದೆ
ನೀನು ಗುರುನಿರಂಜನ ಚನ್ನಬಸವಲಿಂಗವಾದಲ್ಲಿ
ನಾನು ನಿರಾವಯನಾದೆ. || ೨೭೮ ||

೨೭೯

ಅಯ್ಯಾ, ನಿಮ್ಮ ಶ್ರೀಪಾದಕ್ಕೆರಗಿದ ಕಾಯವು
ಮತ್ತೊಂದಕ್ಕೆರಗಬಾರದೆಂಬ ಭಾಷೆ
ಇದೇ ಎನ್ನ ಮಸ್ತಕಕ್ಕೆ ಹೇಮರತ್ನಕಿರೀಟವಯ್ಯಾ.

ನಿಮ್ಮ ಪೂಜಿಸಿದ ಕರವು ಅನ್ಯದೈವದರ್ಚನೆ
ಪರಧನಕಿಚ್ಛೈಸಬಾರದೆಂಬ ಭಾಷೆ
ಇದೇ ಎನ್ನ ಬೆರಳುಂಗರವಯ್ಯಾ.
ಅಯ್ಯಾ, ನಿಮಗೊಲಿದು ಸಕಲ ನಿಷ್ಕಲಸನುಮತವೀವ ಭಾವ
ವನಿತಾದಿಸಕಲಪ್ರಪಂಚಭ್ರಾಂತಿಯಲ್ಲಿ ಸುಳಿಸಬಾರದೆಂಬ ಭಾಷೆ
ಇದೇ ಎನ್ನ ಪ್ರಾಣಪದಕವಯ್ಯಾ.
ನಿಮ್ಮ ಗುರುಲಿಂಗಜಂಗಮವೇ ಎನ್ನಂಗ ಮನ ಪ್ರಾಣವೆಂಬ ಸಂಪತ್ತು
ಮಾಯಾಮೋಹ ವಿಷಯವೆಂಬ ದುಷ್ಟಕೃತಿಗನುಗ್ಗೆಯಬಾರದೆಂಬ ಭಾಷೆ.
ಇದೇ ಎನ್ನ ಸರ್ವಾಭರಣಭೂಷಣವಯ್ಯಾ.
ಗುರುನಿರಂಜನ ಚನ್ನಬಸವಲಿಂಗವೆಂಬ ಭಾವ
ಇದೇ ಎನ್ನ ನಿಜವಯ್ಯಾ. || ೨೭೯ ||

೨೮೦

ಆಡಿ ದಣಿವರಿಯವಯ್ಯಾ ಎನ್ನ ಕಾಲುಗಳು,
ಮಾಡಿ ದಣಿವರಿಯವಯ್ಯಾ ಎನ್ನ ಕೈಗಳು,
ನೋಡಿ ದಣಿವರಿಯವಯ್ಯಾ ಎನ್ನ ಕಂಗಳು,
ಹಾಡಿ ದಣಿವರಿಯದಯ್ಯಾ ಎನ್ನ ಜಿಹ್ವೆಯು.
ಕೇಳಿ ದಣಿವರಿಯವಯ್ಯಾ ಎನ್ನ ಶ್ರೋತ್ರ,
ಬೇಡಿ ದಣಿವರಿಯವಯ್ಯಾ ಗುರುನಿರಂಜನ ಚನ್ನಬಸವಲಿಂಗ
ನಿಮ್ಮ ಶರಣರೊಲವೆ ಎನ್ನಭಾವ. || ೨೮೦ ||

### ಮಾಹೇಶ್ವರನ ಪ್ರಸಾದಿಸ್ಥಲ

೨೮೧

ಪ್ರಸಾದಮುಖದಿಂದುದಯವಾದ ಮಹೇಶ್ವರನಂಗದಲ್ಲಿ
ಪ್ರಸಾದಪ್ರಕಾಶವೇ ತೋರುತಿಹುದು.
ತನ್ನ ಪ್ರಾಣವಾದ ಶಿವಜಂಗಮಾರ್ಯಂಗೆ
ಉಪಚಾರ ಅರ್ಪಿತದ ಪರಿಯನೊಬ್ಬರು ಹೇಳುವರಿಲ್ಲ ನೋಡಾ,
ಕೇಳುವರಿಲ್ಲ ನೋಡಾ, ಕಾಣುವರಿಲ್ಲ ನೋಡಾ.
ಚತುರಂಗ ಚತುರಂಗ ಕೂಡಿ ಮಾಡುವಲ್ಲಿ
ಸದನದೊಳಗಿರ್ದ ಸಕಳರು ನಿಮ್ಮವರಯ್ಯಾ.
ನೋಟ, ಮಾಟ, ಕೂಟಕ್ಕೆ ನೀವೆಯಯ್ಯಾ
ಗುರುನಿರಂಜನ ಚನ್ನಬಸವಲಿಂಗ. || ೨೮೧ ||

೨೮೨

ಆಡಬಂದ ಮೂರ್ತಿಗೆ ಕೂಡಿ ಮಾಡಬಲ್ಲವರಾರಯ್ಯಾ ?
ಮಾತು ನೀತಿಯ ಕೇಳಿ, ಜಾತಿ ಮೂಲ ಜಂಜಡವೊಂದೆ ಮಾಡಿ
ಲಾಭವನುಂಬ ಹಾದಿಯ ಹಿರಿಯರಂತಿರಲಿ
ನೀಡಿಯಾಡದೆ ಕೊಟ್ಟು ಕಾಣುವ ದಿಟ್ಟಗಲ್ಲದೆ
ಬಟ್ಟೆಗಳ್ಳರಿಗೆಂತೊಲಿವ ನಮ್ಮ ಗುರುನಿರಂಜನ ಚನ್ನಬಸವಲಿಂಗ ? ॥೨೮೨॥

೨೮೩

ಆಡಬಹುದು ಅನಂತ ನುಡಿಗಳ,
ನೋಡಬಹುದು ಬಹುಮುಖಪುರಾಣ ಶಾಸ್ತ್ರಾಗಮ ಶ್ರುತಿಗಳ,
ಮಾಡಬಹುದು ಅಷ್ಟಾಂಗಯೋಗಾದಿ ಸಕಲಭ್ಯಾಸಂಗಳ,
ನೀಡಿ ಮರೆದಿರುವ ನೆರೆದುಂಬ ಮಹಾಂತರಿಗಲ್ಲದೆ
ಸಾಮಾನ್ಯವೇ ಗುರುನಿರಂಜನ ಚನ್ನಬಸವಲಿಂಗ ? ॥ ೨೮೩ ॥

೨೮೪

ಗುಂಜುರಂಜಿನ ಮೋಹದ ಸಂಜೆ ಬೆಳಗ ಸಂಯುಕ್ತರು
ನಿರ್ಮ್ಮಾರ್ಚನೆಯಾರ್ಪಣವೆಂದು ರಂಜಿಕ್ಕಿ ಮಾಡುವರಯ್ಯಾ,
ಎಲೆ ನಿರಂಜನ ನಿಸ್ಸೀಮ ನಿಗಮಗೋಚರ ಲಿಂಗವೇ,
ಅರ್ಥ ವಿಷಯಕ್ಕೆ ಅರ್ಚನೆಯನೆಸಗುವರಯ್ಯಾ ಬಲ್ಲಂತೆ.
ಹೆಣ್ಣಿನ ವಿಷಯಕ್ಕೆ ನಲಿನಲಿದರ್ಚನೆಯ ಮಾಡುವರಯ್ಯಾ ಮೈದುಂಬಿ.
ಹಲವುಪರಿ ಅಶನಕ್ಕೆ ಕುನ್ನಿಗಳಂತೆ ಬಾಲವ ಬಡಿದು,
ನಿಮ್ಮ ನೆನೆವನೆಬ್ಬಿಸಿ ಗರ್ಭವ ತುಂಬಿ
ಮಬ್ಬುಗೊಂಡು ಬೀಳುವ ಮಲಭುಂಜಕ ಮನುಜರು
ನಿಮಗಾರ್ಚನೆಯಾರ್ಪಣೆ ಮಾಡಿಕೊಂಬ ಪರಿಯೆಂತಯ್ಯಾ ?
ಈ ವೇಷಧಾರಿಗಳಿಗೆ ನಿಮ್ಮ ನಿಜಾನಂದ
ಶೇಷಪ್ರಸಾದ ನಿಲುವೆಂತು ಸಿಕ್ಕುವುದಯ್ಯಾ
ಗುರುನಿರಂಜನ ಚನ್ನಬಸವಲಿಂಗಾ ? ॥ ೨೮೪ ॥

೨೮೫

ಡಂಭಕರೊಂದು ಲಿಂಗವ ಕೊಂಡು ಮಂಡಲದೊಳಗಾಡುವರಯ್ಯಾ.
ಒಡೆಯನ ಪೂಜೆಯ ಮಾಡುವರಯ್ಯಾ.
ಹೊತ್ತಾರೆಮ್ಮ ಕ್ಷೇತ್ರ ಮನೆಕೆಲಸವ ಮುಂದಿಟ್ಟು,
ಒಂದೊಂದು ಕುರುಹ ಮುಂದಿಟ್ಟು, ಸಂಧಿಸಿ ಮಾಡಿಕೊಂಬ

ಬಂಧಮೋಹಿಗಳ ಪೂಜೆ ಎಂದೆಂದು ನಿಮ್ಮ ಕಾಣಲರಿಯದು.
ಮತ್ತಂತೆಂದೊಡೆ, ಹಿಂದುಮುಂದಿನ ಸಂದೇಹವಳಿದು
ಆನಂದಮುಖನಾಗಿ, ಆಯಾಯ ಕಾಲಕ್ಕೆ ಪೂಜಾರ್ಪಣವ ಪರಿಣಾಮಿಸಿ
ನಿರಂತರಸಾವಧಾನಿಯಾದರೆ ಆತ ನಿಜವೆಂಬೆ
ಗುರುನಿರಂಜನ ಚನ್ನಬಸವಲಿಂಗಾ. || ೨೮೫ ||

೨೮೬

ಕಾಯವನರ್ಪಿಸಿಕೊಂಡವರೆಂದು ಹೇಳುವರು
ಕರ್ಮಬಾಧೆಯಲ್ಲಿ ಮುಳುಗುವರು.
ಮನವನರ್ಪಿಸಿಕೊಂಡವರೆಂದು ಹೇಳುವರು
ಕರಣಗುಣಕಲ್ಪನೆಯೊಳೊಪ್ಪುವರು.
ಪ್ರಾಣವನರ್ಪಿಸಿಕೊಂಡವರೆಂದು ಹೇಳುವರು
ದಶವಾಯುಪ್ರಕೃತಿಯಲ್ಲಿ ವರ್ತಿಸುತ್ತಿಹರು.
ಸರ್ವಾಂಗವನರ್ಪಿಸಿಕೊಂಡವರೆಂದು ಹೇಳುವರು.
ಮಿಥ್ಯಾಸಂಸ್ಕೃತಿ ಭ್ರಾಂತಗೊಂಡಿಪ್ಪರು.
ಇಂತೀ ಸಂತೆಯ ಮಾಡಿ ಹೋಗುವ ಸಕಲ ಪ್ರಾಣಿಗಳು
ನಿಮಗೆಂತು ಅರ್ಪಿಸಿಕೊಂಬುವರಯ್ಯಾ
ಗುರುನಿರಂಜನ ಚನ್ನಬಸವಲಿಂಗಾ ? || ೨೮೬ ||

೨೮೭

ಲಕ್ಷಾನುಲಕ್ಷರು ಅವರು ನಿಮಗೆ ಮಾಡಲರಿಯರು.
ಲಕ್ಷ ಮೂರು ವರಪ್ರಸಾದಿಗಳೆಂಬೆ.
ಮೂರು ಲಕ್ಷ ಕೋಟಿಗಳು ತ್ರಿವಿಧಪ್ರಸಾದಿಗಳೆಂಬೆ.
ಆರು ಲಕ್ಷ ಕೋಟಿಗಳು ಷಟ್ಪ್ರಸಾದಿಗಳೆಂಬೆ
ಮುನ್ನೂರು ಲಕ್ಷ ಕೋಟಿಯೊಳಗೆ
ಗುರುನಿರಂಜನ ಚನ್ನಬಸವಲಿಂಗ ಶರಣಸನ್ನಿಹಿತ. || ೨೮೭ ||

೨೮೮

ಕೆಸರೊಳಗೆ ನಿಂದು ಕೊಡವ ಹೊತ್ತು
ಕಂಡಕಂಡವರ ಕಾಲಿಗೆ ಕೈಗೊಟ್ಟು, ಶರಣೆಂಬ ರಂಡೆಯ
ಬಾಯಿ ನೋಡಾ ಹೇಸಿಕೆ,
ಮೂಗು ನೋಡಾ ದುರ್ವಾಸನೆ, ಕಣ್ಣು ನೋಡಾ ಗಂಜಲ,
ಕಿವಿಯು ನೋಡಾ ಕಿಲ್ಬಿಷ, ಸರ್ವಾಂಗವೆಲ್ಲ ಮಸಿಯು.

ಕತ್ತಲಹೊತ್ತು ಕಾರ್ಯನೀತಿಯ ತೆರೆದರೆ
ಬೆಳಗಾಗಿ ಬಂದವರ ಕಾರಣವನರಿದುಣ್ಣಲಾಯಿತ್ತೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಬಕಹಂಸ ! ॥ ೨೮೮ ॥

೨೮೯

ಬಿಟ್ಟಾಡುವ ಮಡದಿಗೆ ಇಚ್ಛೆಗೈಯ್ದು ಕೊಟ್ಟು,
ಸುಖಿಸಿಕೊಂಬ ಪರಿಯದಯ್ಯಾ !
ಲಿಂಗವನುಳಿದು ಅನ್ಯದೈವದೆಂಜಲಗೊಂಬ ಚನ್ನಕುನ್ನಿ
ಗುರುನಿರಂಜನ ಚನ್ನಬಸವಲಿಂಗಕ್ಕಂಗವನಿತ್ತು
ಮಂಗಲಗೊಂಬ ಇಂಗಿತವನೆತ್ತ ಬಲ್ಲದು ಹೇಳಾ! ॥ ೨೮೯ ॥

೨೯೦

ಪರಮಚೈತನ್ಯ ಜಂಗಮವ ನೆರೆಯರಿದು
ಇರವಿನೊಳು ಹಿರಿದು ಹೆಚ್ಚಿ ನಿತ್ಯಕಾಲದಿಂದಿತ್ತು ಕೊಂಬ
ಪರಿಣಾಮಿಯ ಪಾದಕ್ಕೆ ನಮೋ ನಮೋ ಎಂಬೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. ॥ ೨೯೦ ॥

## ಮಾಹೇಶ್ವರನ ಪ್ರಾಣಲಿಂಗಿಸ್ಥಲ

೨೯೧

ಆದ್ಯರನುಭಾವವನರಿದು ಕಂಡೆನೊಂದು ಮುಖದಲ್ಲಿ,
ವೇದ್ಯರನುಭಾವವನರಿದು ಕಂಡೆನೊಂದು ಮುಖದಲ್ಲಿ,
ಸಾಧ್ಯರನುಭಾವವನರಿದು ಕಂಡೆನೊಂದು ಮುಖದಲ್ಲಿ,
ನೂತನ ಪುರಾತನರು ಕೂಡಿ ಸೋತು ಮಾಡಿದನುಭಾವದಲ್ಲಿ
ಪರಮಸುಖಿಯಾಗಿರ್ದೆನು ಗುರುನಿರಂಜನ ಚನ್ನಬಸವಲಿಂಗಾ. ॥ ೨೯೧ ॥

೨೯೨

ಆದ್ಯರನುಭಾವ ಲಕ್ಷ ಬಂದಲ್ಲಿ ದಾಸೋಹಿಯಾಗಿರ್ದೆನು.
ವೇದ್ಯರನುಭಾವ ಲಕ್ಷ ಬಂದಲ್ಲಿ ಪೂಜಿತನಾಗಿರ್ದೆನು.
ಸಾಧ್ಯರನುಭಾವ ಲಕ್ಷ ಬಂದಲ್ಲಿ ಸೇವಕನಾಗಿರ್ದೆನು.
ನೂತನಪುರಾತನರನುಭಾವ ಲಕ್ಷ ಬಂದಲ್ಲಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಸರ್ವಾಚಾರಸಂಪತ್ತಿನೊಳಿರ್ದೆ. ॥೨೯೨॥

೨೯೩

ಅರಿಯಲಿಲ್ಲದ ಅರಿವಿಂಗೆ ಬರಸೆಳೆದು ಕೊಟ್ಟನೊಂದು ಲಕ್ಷವನು.
ಹಿರಿಯ ಮಾರ್ಗವಲ್ಲಿ ನಿಂದು ಹಗಲಿರುಳು ವ್ಯಾಪಾರ ನಡೆವಲ್ಲಿ,
ಸುಂಕಿಗರೈತಂದು ನೋಡಲು ಕಾಡದ ಮುನ್ನ
ಲೆಕ್ಕವ ಕೊಟ್ಟು ಕೌಲು ಕೊಂಡಲ್ಲಿ ಮೂಲದ್ರವ್ಯ ಮುಳುಗಿತ್ತು.
ಹೇಳಲಿಲ್ಲ ಕೇಳಲಿಲ್ಲ,
ಗುರುನಿರಂಜನ ಚನ್ನಬಸವಲಿಂಗದಲ್ಲಿ ಗಂಭೀರ ನಿಮ್ಮ ಮಹೇಶ್ವರ. ॥ ೨೯೩॥

೨೯೪

ಅಯ್ಯಾ, ಎನ್ನ ಗುರುವಿನಲ್ಲಿ ಗುಣವನರಸಿ ಬೋಧೆಯ ಹೇಳಿ ನಡೆಸುವೆ.
ಅಯ್ಯಾ, ಎನ್ನ ಲಿಂಗದಲ್ಲಿ ಶಿಲೆಯನರಸಿ ತಿದ್ದಿ ಕೈಯೊಳು ಹಿಡಿವೆ.
ಅಯ್ಯಾ, ಎನ್ನ ಜಂಗಮದಲ್ಲಿ ಕುಲವನರಸಿ ಜರೆದು ಅನುಭಾವದೊಳಗಿರಿಸುವೆ.
ಇಂತು ಎನ್ನ ಗುರುಲಿಂಗಜಂಗಮದ ಇಚ್ಛೆಯಲ್ಲಿರ್ದೆನಾದರೆ ಭವತಪ್ಪದೆಂದು,
ಎನ್ನಿಚ್ಛೆಯಲಿರಿಸಿ ನಿಮ್ಮಲ್ಲಿ ಸುಖಿಯಾಗಿರ್ದೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ, ಧರ್ಮವೇ ಜಯವೆಂದು. ॥ ೨೯೪ ॥

೨೯೫

ಅಯ್ಯಾ, ಅಭ್ಯಾಸ ಕಾಯದಿಂದೆ ವಸ್ತುವ ಕಂಡವರೆಂದು
ಬಂಧನದೊಳು ಬಿದ್ದುಹೋಗುವ ತುಂಡಜ್ಞಾನದ ಪಶುಗಳನೇನೆಂಬೆನಯ್ಯಾ !
ಕಾಣಲಿಲ್ಲದ ಲಿಂಗವ ಕಂಡವರುಂಟೆ ?
ಮತ್ತೆಂತೆಂದೊಡೆ, ಸಕಳ ನಿಃಕಳಾನುಮತಕ್ಕಗೋಚರ
ಅನುಪಮ ಶಿವನನುಗ್ರಹತ್ರಯವೆಂಬ
ಸರ್ವಕಲಾಭಿಜ್ಞತೆಯೊಳ್ಮೂಡಿದ ಭಾವಲಿಂಗವು,
ಕೋಟಿ ಸೋಮಸೂರ್ಯಾಗ್ನಿ ಪ್ರಕಾಶವಾಗಿ ತೋರುತಿದ್ದಿತ್ತು.
ವಿದ್ಯಾ ವಿನಯಸಂಪನ್ನತೆಯೊಳ್ಮೂಡಿದ ಪ್ರಾಣಲಿಂಗವು
ಕೋಟಿ ಸೋಮಸೂರ್ಯಾಗ್ನಿ ಪ್ರಕಾಶವಾಗಿ ತೋರುತಿದ್ದಿತ್ತು.
ವೀರಶೈವೋತ್ತಮತೆಯೊಳ್ಮೂಡಿದ ಇಷ್ಟಲಿಂಗವು
ಕೋಟಿ ಸೋಮಸೂರ್ಯಾಗ್ನಿ ಪ್ರಕಾಶವಾಗಿ ತೋರುತಿದ್ದಿತ್ತು.
ಇಂತು ತ್ರಿವಿಧಲಿಂಗಪ್ರಕಾಶದೊಳ್ಮುಳುಗಿ ನಿತ್ಯಸುಖಿಯಾದೆನು
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣರೊಳಗೆ. ॥ ೨೯೫ ॥

೨೯೬

ಬಿಂದುಪ್ರಕಾಶ ನಾದಪ್ರಕಾಶ ಕಲಾಪ್ರಕಾಶ
ಭಾವಪ್ರಕಾಶವನವಧರಿಸಿದ ಅಚ್ಚಮಹೇಶ್ವರನ ಮಹದರುವಿನ ಮುಂದೆ,

ಕಾಮಾದಿ ಷಡ್ವರ್ಗಂಗಳಳಿದುಳಿದು ಬಂದು ಶರಣೆನುತ್ತಿಹವು,
ಅಸ್ತಿತೆಯಾದಿ ಷಡ್ಭಾವವಿಕಾರಂಗಳೆಲ್ಲ ಅಳಿದುಳಿದು
ಮಹಾನುಭಾವಕ್ಕೆ ಆಸ್ಪದವಾಗಿಹವು.
ಪಂಚೇಂದ್ರಿಯಂಗಳಳಿದುಳಿದು ಪೂರ್ವದವರ ಮೇಲೆ
ಶಸ್ತ್ರವ ಪಿಡಿದು ಶರಣೆನುತ್ತಿಹವು.
ದಶವಾಯುಗಳೆಲ್ಲ ಅಳಿದುಳಿದು ಪೂರ್ವದವರ ಮೇಲೆ
ಮುನಿದು ನಮೋ ನಮೋ ಎನುತ್ತಿಹವು.
ಕರಣ ಸಮೂಹಂಗಳಳಿದುಳಿದು ಸಹಾಯಿಗಳಾಗಿ ಶರಣೆನುತ್ತಿಹವು.
ಕರ್ಮೇಂದ್ರಿಯಂಗಳಳಿದುಳಿದು ಸದ್ಭಕ್ತರಾಗಿ ಸೇವೆಯನೆಸಗುತ್ತಿಹವು.
ಪಂಚವಿಷಯಂಗಳಳಿದುಳಿದು ಸುಖವದೋರಿ ಆನಂದಿಸುತ್ತಿಹವು.
ಇಂತು ಸಕಲಸನುಮತಸಂಬಂಧಿ ಗುರುನಿರಂಜನ ಚನ್ನಬಸವಲಿಂಗ. ॥ ೨೯೬ ॥

೨೯೭

ಅಯ್ಯಾ, ಎನ್ನಲ್ಲಿ ಅರುಹಿನ ಮುಖವನರಿದೆನಾಗಿ
ಕುಲಮದವಳಿದುಳಿದು ಬಂದಿತ್ತು.
ಅಯ್ಯಾ, ಎನ್ನಲ್ಲಿ ಪ್ರಾಣನ ಮುಖವನರಿದೆನಾಗಿ
ಛಲಮದವಳಿದುಳಿದು ಬಂದಿತ್ತು.
ಅಯ್ಯಾ, ಎನ್ನಲ್ಲಿ ಜ್ಞಾನಮುಖವನರಿದೆನಾಗಿ
ಧನಮದವಳಿದುಳಿದು ಬಂದಿತ್ತು.
ಅಯ್ಯಾ, ಎನ್ನಲ್ಲಿ ನೇತ್ರಮುಖವನರಿದೆನಾಗಿ
ರೂಪಮದವಳಿದುಳಿದು ಬಂದಿತ್ತು.
ಅಯ್ಯಾ, ಎನ್ನಲ್ಲಿ ಅಂಗಮುಖವನರಿದೆನಾಗಿ
ಯವ್ವನಮದವಳಿದುಳಿದು ಬಂದಿತ್ತು.
ಅಯ್ಯಾ, ಎನ್ನಲ್ಲಿ ಜಿಹ್ವೆಮುಖವನರಿದೆನಾಗಿ
ವಿದ್ಯಾಮದವಳಿದುಳಿದು ಬಂದಿತ್ತು.
ಅಯ್ಯಾ, ಎನ್ನಲ್ಲಿ ಶ್ರೋತ್ರಮುಖವನರಿದೆನಾಗಿ
ರಾಜಮದವಳಿದುಳಿದು ಬಂದಿತ್ತು.
ಅಯ್ಯಾ, ಎನ್ನಲ್ಲಿ ಘ್ರಾಣಮುಖವನರಿದೆನಾಗಿ
ತಪಮದವಳಿದುಳಿದು ಬಂದಿತ್ತು.
ಇಂತು ಅಷ್ಟಸ್ಥಲವನರಿದೆನಾಗಿ
ಅಷ್ಟಮದವಳಿದುಳಿದು ಬಂದಿತ್ತು.

ಅಷ್ಟಾವರಣವಾಗಿ ಉಳಿದು ಎನ್ನ ವಿರಳಕ್ರಿಯಾಜ್ಞಾನಕ್ಕೆ ಆಸ್ಪದವಾಯಿತ್ತು
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೨೯೭ ||

೨೯೮

ಅಯ್ಯಾ, ಎನ್ನಾಧಾರಚಕ್ರದಲ್ಲಿ ಕರ್ಮಸಾದಾಖ್ಯ ಹೊಂದಿ,
ನಿವೃತ್ತಿಕಲಾಪರ್ಯಾಯನಾಮವನುಳ್ಳ
ಕ್ರಿಯಾಶಕ್ತಿಸಮೇತವಾದ ಆಚಾರಲಿಂಗವ ಧರಿಸಿಪ್ಪೆನಾಗಿ
ಅಲುಪ್ತಶಕ್ತಿತ್ವಾನುಭಾವಿಯಾದೆನಯ್ಯಾ.
ಎನ್ನ ಸ್ವಾಧಿಷ್ಠಾನಚಕ್ರದಲ್ಲಿ ಕರ್ತೃಸಾದಾಖ್ಯ ಹೊಂದಿ
ಪ್ರತಿಷ್ಠಾಕಲಾಪರ್ಯಾಯನಾಮವನುಳ್ಳ ಜ್ಞಾನಶಕ್ತಿಸಮೇತವಾದ
ಗುರುಲಿಂಗವ ಧರಿಸಿಪ್ಪೆನಾಗಿ ಸ್ವತಂತ್ರತ್ವಾನುಭಾವಿಯಾದೆನಯ್ಯಾ.
ಎನ್ನ ಮಣಿಪೂರಕಚಕ್ರದಲ್ಲಿ ಮೂರ್ತಿಸಾದಾಖ್ಯ ಹೊಂದಿ
ವಿದ್ಯಾಕಲಾಪರ್ಯಾಯನಾಮವನುಳ್ಳ ಇಚ್ಛಾಶಕ್ತಿಸಮೇತವಾದ
ಶಿವಲಿಂಗವ ಧರಿಸಿಪ್ಪೆನಾಗಿ ನಿತ್ಯತ್ವಾನುಭಾವಿಯಾದೆನಯ್ಯಾ.
ಎನ್ನ ಅನಾಹತಚಕ್ರದಲ್ಲಿ ಅಮೂರ್ತಿಸಾದಾಖ್ಯ ಹೊಂದಿ
ಶಾಂತಿಕಲಾಪರ್ಯಾಯನಾಮವನುಳ್ಳ ಆದಿಶಕ್ತಿಸಮೇತವಾದ
ಜಂಗಮಲಿಂಗವ ಧರಿಸಿಪ್ಪೆನಾಗಿ ಅನಾದಿಬೋಧತ್ವಾನುಭಾವಿಯಾದೆನಯ್ಯಾ.
ಎನ್ನ ವಿಶುದ್ಧಿಚಕ್ರದಲ್ಲಿ ಶಿವಸಾದಾಖ್ಯ ಹೊಂದಿ
ಶಾಂತ್ಯತೀತಕಲಾಪರ್ಯಾಯನಾಮವನುಳ್ಳ ಪರಶಕ್ತಿಸಮೇತವಾದ
ಪ್ರಸಾದಲಿಂಗವ ಧರಿಸಿಪ್ಪೆನಾಗಿ ಸರ್ವಜ್ಞತ್ವಾನುಭಾವಿಯಾದೆನಯ್ಯಾ.
ಎನ್ನ ಆಜ್ಞಾಚಕ್ರದಲ್ಲಿ ಮಹಾಸಾದಾಖ್ಯ ಹೊಂದಿ
ಶಾಂತ್ಯತೀತೋತ್ತರೆಕಲಾಪರ್ಯಾಯನಾಮವನುಳ್ಳ ಚಿಚ್ಛಕ್ತಿ ಸಮೇತವಾದ
ಮಹಾಲಿಂಗವ ಧರಿಸಿಪ್ಪೆನಾಗಿ ತೃಪ್ತತ್ವಾನುಭಾವಿಯಾದೆನಯ್ಯಾ.
ಇಂತು ಎನ್ನ ಷಡಂಗದಲ್ಲಿ ಷಡುಲಿಂಗವ ಧರಿಸಿ
ಷಟ್‌ಸ್ಥಲಜ್ಞಾನಾನುಭಾವಿಯಾದೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮಲ್ಲಿ. || ೨೯೮ ||

೨೯೯

ಆಚಾರನಿಷ್ಠೆಯೆನಗಂಗವಾದಲ್ಲಿ
ಕ್ರಿಯಾದೀಕ್ಷೆಸ್ವರೂಪವಾದ ಆಚಾರಲಿಂಗವೆನ್ನ
ಕರಸ್ಥಲವನಿಂಬುಗೊಂಡು ಬೆಳಗುತಿದ್ದಿತ್ತು ನೋಡಾ.
ಗೌರವನಿಷ್ಠೆಯೆನಗಂಗವಾದಲ್ಲಿ

ಮಂತ್ರದೀಕ್ಷೆಸ್ವರೂಪವಾದ ಗುರುಲಿಂಗವೆನ್ನ
ನಯನಸ್ಥಲವನಿಂಬುಗೊಂಡು ಬೆಳಗುತಿದ್ದಿತ್ತು ನೋಡಾ.
ಶಿವನಿಷ್ಠೆಯೆನಗಂಗವಾದಲ್ಲಿ
ವೇಧಾದೀಕ್ಷೆಸ್ವರೂಪವಾದ ಶಿವಲಿಂಗವೆನ್ನ
ಭ್ರುಕುಟಿಸ್ಥಲವನಿಂಬುಗೊಂಡು ಬೆಳಗುತಿದ್ದಿತ್ತು ನೋಡಾ.
ಚರನಿಷ್ಠೆಯೆನಗಂಗವಾದಲ್ಲಿ
ಬೋಧಾದೀಕ್ಷೆಸ್ವರೂಪವಾದ ಜಂಗಮಲಿಂಗವೆನ್ನ
ಹೃದಯಸ್ಥಲವನಿಂಬುಗೊಂಡು ಬೆಳಗುತಿದ್ದಿತ್ತು ನೋಡಾ.
ಪ್ರಸಾದನಿಷ್ಠೆಯೆನಗಂಗವಾದಲ್ಲಿ
ಪ್ರಸನ್ನದೀಕ್ಷೆಸ್ವರೂಪವಾದ ಪ್ರಸಾದಲಿಂಗವೆನ್ನ
ಮಂತ್ರಸ್ಥಲವನಿಂಬುಗೊಂಡು ಬೆಳಗುತಿದ್ದಿತ್ತು ನೋಡಾ.
ಮಹದನಿಷ್ಠೆಯೆನಗಂಗವಾದಲ್ಲಿ
ನಿರ್ವಾಣದೀಕ್ಷೆಸ್ವರೂಪವಾದ ಮಹಾಲಿಂಗವೆನ್ನ
ಲಯಸ್ಥಲವನಿಂಬುಗೊಂಡು ಬೆಳಗುತಿದ್ದಿತ್ತು ನೋಡಾ.
ಇಂತು ಷಡುನಿಷ್ಠೆಯೆನಗಂಗವಾದಲ್ಲಿ
ಷಡ್ವಿಧಲಿಂಗವೆನ್ನ ಷಡುಸ್ಥಲವನಿಂಬುಗೊಂಡು ಬೆಳಗುತಿರ್ದಬಳಿಕ
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಮಹಾನುಭಾವಿಮಹೇಶ್ವರನಾದೆನು. ॥ ೯೯ ॥

೩೦೦

ಆಣವಮಲವ ಕರುಣಜಲದಿಂದೆ ತೊಳೆದು
ಸದ್ಗುರುಲಿಂಗವೆನ್ನ ಅಂಗದಲ್ಲಿರಲು,
ಸಕಲಕ್ರಿಯಂಗಳೆಲ್ಲ ಸತ್ಕ್ರಿಯಾಸ್ವರೂಪವಾಗಿ ಕಾಣಿಸುತಿರ್ದವು.
ಮಾಯಾಮಲವ ವಿನಯಜಲದಿಂದೆ ತೊಳೆದು
ಚಿದ್ಗುರುಲಿಂಗವೆನ್ನ ಪ್ರಾಣದಲ್ಲಿರಲು,
ಸಕಲಜ್ಞಾನಂಗಳೆಲ್ಲ ಸುಜ್ಞಾನಸ್ವರೂಪವಾಗಿ ಕಾಣಿಸುತಿರ್ದವು.
ಕಾರ್ಮಿಕಮಲವ ಸಮತಾಜಲದಿಂದೆ ತೊಳೆದು
ಆನಂದಗುರುಲಿಂಗವೆನ್ನ ಭಾವದಲ್ಲಿರಲು,
ಸಕಲಭಾವಂಗಳೆಲ್ಲ ಮಹಾನುಭಾವವಾಗಿ ಕಾಣಿಸುತಿರ್ದವು.
ಇಂತು ಸತ್ಕ್ರಿಯಾ ಸಮ್ಯಕ್‌ಜ್ಞಾನ ಮಹಾನುಭಾವ ಸನ್ನಿಹಿತನಾಗಿ
ಒಳಹೊರಗೆ ಪರಿಪೂರ್ಣ ಪ್ರಕಾಶಮಯವಾಗಿರ್ದೆನು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೩೦೦ ॥

೩೦೧

ಸಾಧಕಯೋಗದಿಂದ ನಾದಬಿಂದುಕಳೆಯ ಹುಡುಕಿ ಕಂಡು ಕೂಡಬೇಕೆಂಬ
ಆಯಾಸಯೋಗಿಗಳನೇನೆಂಬೆನಯ್ಯಾ.
ನಾದಬಿಂದುಕಳೆಯೊಳಡಗಿರ್ದ ಮಹಾಪ್ರಕಾಶವ
ಗುರುಮುಖದಿಂದೆ ಕರಸ್ಥಲಕ್ಕೆ ತಂದು,
ಸತ್ಕ್ರಿಯೆಯಿಂದೆ ಸಮವೇದಿಸಿ ಸರ್ವಾಂಗಲಿಂಗಮಯವಾಗಿ
ಸುಖಿಸುವ ಭೇದವನರಿಯದೆ ಬಂದುಹೋದ
ಗುರುನಿರಂಜನ ಚನ್ನಬಸವಲಿಂಗಕ್ಕೆ ಭಿನ್ನವಾಗಿ. ॥ ೩೦೧ ॥

೩೦೨

ಲಕ್ಷ್ಯ ಮೂರರಿಂದೆ ಸಿಕ್ಕಿಸಿ ಕಂಡು ಕೂಡಬೇಕೆಂದು
ಮರುಳಜ್ಞಾನಯುಕ್ತಮನುಜರು ಮಹಾಘನಪ್ರಕಾಶಲಿಂಗವ ಕಾಣದಾದರಲ್ಲ!
ಲಿಂಗಮೂರರಿಂದೆ ಸಂಗಸಂಬಂಧ ಸುಲಭಾನುಭಾವಬೆಳಗಿನೊಳು
ಆದಿಬೆಳಗ ಬಿಂದುವಿನಲ್ಲಿ ನೋಡಿ,
ನಾದಬಿಂದುಕಳಾತೀತ ಗುರುನಿರಂಜನ ಚನ್ನಬಸವಲಿಂಗದಲ್ಲಿ
ಮಹಾಮಹೇಶ್ವರನೊಪ್ಪುತಿರ್ದನು. ॥ ೩೦೨ ॥

೩೦೩

ಗಗನದಾವರೆ ಮೇರುಗಿರಿಪರ್ವತದೊಳೆಸೆವ ಪರಬ್ರಹ್ಮಶಿವನ
ಮುಖಮುಖಾಂತರದಿಂ ನೋಡಿ ಕಂಡು ಸುಖಮಯನಾಗಿರಬೇಕಲ್ಲದೆ,
ಯುಕುತಿಯಾಯಾಸದಿಂದರಿದು ಕಂಡು ಕೂಡಬೇಕೆಂಬ
ಮುಕುತಿಗೇಡಿಗಳಿನ್ನೆಂತು ಪಥವನರಿದಿರುವರಯ್ಯಾ
ಗುರುನಿರಂಜನ ಚನ್ನಬಸವಲಿಂಗಾ ! ॥ ೩೦೩ ॥

೩೦೪

ಇಷ್ಟಲಿಂಗವನರಿಯದೆ ಕಷ್ಟದಿಂದೆ ಕಷ್ಟವ ಕಾಂಬ ಅಷ್ಟಾಂಗಬದ್ಧರು,
ಮುಟ್ಟಿ ಮುಟ್ಟಿ ಮುಟ್ಟುವ ಶ್ರೇಷ್ಠಗತಿಗಳರಿಯಬಲ್ಲರೆ ?
ಮರಳಿ ಮರಳಿ ಹಗಲಿರುಳು ನೆರೆದಿರುವ ಬರಿ ಸಿರಿಸಂಪನ್ನರೆತ್ತ ?
ಇಂದು ರವಿ ಕಳೆಯಗಲದೆ ಕಂಡು ಸುಖಿಸುವ
ಮಹಾನುಭಾವಿ ಮಹೇಶ್ವರನೆತ್ತ ?
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೩೦೪ ॥

೩೦೫

ಬೆಳಗಿನ ಬೆಳಗಿನ ಬೆಳಗಿನಲ್ಲಿ ಹೊಳೆವ ಇಳೆ
ನಿರಂಜನ ಲಿಂಗವ, ಕರ ಮನ ಭಾವದಲ್ಲಿ ಕಂಡು,
ಆದಿಯಾಧಾರ ಚೈತನ್ಯಕ್ಕರಿದರಿದೀವ ಪರಮಮಹೇಶ್ವರಂಗೆ
ನಮೋ ನಮೋ ಎಂಬೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. || ೩೦೫ ||

## ಮಾಹೇಶ್ವರನ ಶರಣಸ್ಥಲ

೩೦೬

ಅರಿದ ಶರಣ ಮರೆದು ಮಾಡುವನಲ್ಲ,
ಮಾಟದ ಕಳೆ ಅಳಿದಿರ್ದುದಾಗಿ.
ಹಿಡಿದ ಶರಣ ಹರಿದು ನೋಡುವನಲ್ಲ,
ನೋಟದ ಜ್ವಾಲೆ ದೂಟಿಸಿರ್ದುದಾಗಿ.
ಮಾಟ ನೋಟ ಕೂಟವ ಒಳಹೊರಗಾಡುವ
ಗುರುನಿರಂಜನ ಚನ್ನಬಸವಲಿಂಗಕ್ಕೆ ಸತಿಯೆಂದು. || ೩೦೬ ||

೩೦೭

ಓರಿದು ಲಿಂಗವ ಮರೆದ ಕೈಯಲ್ಲಿ ಹಿಡಿದು
ಪರಿಪರಿಯಿಂದಾಡುವ ಮಡದಿ ಇವಳಾರಯ್ಯ !
ಸಿರಿವುಳ್ಳ ಹಿರಿಯರ ಭಿನ್ನಭಾವದಲ್ಲಿ ಹರಿದು ಹರಿದು ನೆರೆವ
ಉರವಣೆಯವಳು ಇವಳಾರಯ್ಯಾ !
ತುಂಬಿದ ಪುರದೊಳಗೆ ಸಂಭ್ರಮಸುಖಿ
ಗುರುನಿರಂಜನ ಚನ್ನಬಸವಲಿಂಗಕ್ಕೊಂದಿಟ್ಟು,
ತಾನೊಂದಾಡುವ ಸಗುಣಶೌರಿ. || ೩೦೭ ||

೩೦೮

ದ್ವಾದಶೇಂದ್ರಿಯಂಗಳು ಶೀಲಸಂಪಾದನೆಯ ಹಿಡಿದು
ನಡೆವುತಿರ್ದ ಕಾರಣ,
ಇಂದ್ರಿಯಾನಂದವೆಂಬಂಗದಲ್ಲಿ ನಾನೊಪ್ಪುತಿರ್ದೆನು.
ದಶವಾಯುಗಳು ಸಚ್ಚರಿತದಿಂದಾಚರಿಸುತಿರ್ದ ಕಾರಣ,
ಪ್ರಾಣಾನಂದವೆಂಬಂಗದಲ್ಲಿ ನಾನೊಪ್ಪುತಿರ್ದೆನು.
ಶ್ರುತಿಜ್ಞಾನ ಮತಿಜ್ಞಾನ ಅವಧಿಜ್ಞಾನ ಮನಪರ್ಯಾಯಜ್ಞಾನ

ನಿರುತಜ್ಞಾನ ವಿರಾಗತೆಜ್ಞಾನಂಗಳೆಲ್ಲ ಮಹಾಜ್ಞಾನವಿಡಿದಿರ್ದವಾಗಿ
ಜ್ಞಾನಾನಂದವೆಂಬಂಗದಲ್ಲಿ ನಾನೊಪ್ಪುತಿರ್ದೆನು.
ಜ್ಞಾನವಿಕೃತಿಭಾವ ವರ್ತನಾವಿಕೃತಿಭಾವ ಮೋಹನವಿಕೃತಿಭಾವಂಗಳೆಲ್ಲ
ಮಹಾನುಭಾವವಾಗಿ ಸೂಚಿಸುತಿರ್ದಕಾರಣ,
ಭಾವಾನಂದವೆಂಬಂಗದಲ್ಲಿ ನಾನೊಪ್ಪುತಿರ್ದೆನು.
ಪುರಾಣತೂರ್ಯ ದ್ವೈತತೂರ್ಯ ಅದ್ವೈತತೂರ್ಯ
ತ್ರಿಪುಟಿತೂರ್ಯ ಯೋಗತೂರ್ಯಾದಿಗಳೆಲ್ಲಾ
ಶಿವಯೋಗತೂರ್ಯವಾಗಿ ಪರವಶವಾಗಿರ್ದಕಾರಣ,
ತೂರ್ಯಾನಂದವೆಂಬಂಗದಲ್ಲಿ ನಾನೊಪ್ಪುತಿರ್ದೆನು.
ಇಂತು ಪಂಚಾಂಗದಲ್ಲಿ ಪಂಚಾಚಾರ ಪೀಠವಾಗಿ ನಾನೊಪ್ಪುತಿರ್ದಕಾರಣ
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ
ಮಹದಾನಂದದೊಳೋಲಾಡುತಿರ್ದೆನು. ॥ ೩೦೮ ॥

೩೦೯

ಚಂದ್ರಸೂರ್ಯರ ಬೆಳಗಿನಲ್ಲಿ ಆಡುವ ಮಡದಿ ಪುರುಷರನುವ ಕಂಡಾಡು.
ಅತ್ತಲವರು ಬಂದಡೆ, ಮತ್ತೇನೆಂದು ಬೆಸಗೊಳ್ಳಬಾರದು.
ಅಹಮ್ಮೆನ್ನದ ಅರ್ಥವ ತಂದು, ಸೋಹಮ್ಮೆಂಬ ಕುಳಕಿತ್ತಡೆ,
ದಾಸೋಹಂ ಭಾವ ಧರಿಸುವದು.
ಗುರುನಿರಂಜನ ಚನ್ನಬಸವಲಿಂಗದಲ್ಲಿ ॥ ೩೦೯ ॥

೩೧೦

ಕಾಳುದೈವಕ್ಕೆ ಕೈಯತ್ತಲೊಲ್ಲದೆ
ಕಾರಣಮೂರ್ತಿಯ ಕರತಂದು ಪೂಜೆಯ ಮಾಡಿ,
ಭವಿಮುಟ್ಟದ ವರತೆಯ ನೀರ ತಂದು,
ಪಶುಕಾಲು ಸೋಂಕದ ಧಾನ್ಯಗೂಡಿ,
ಮಾಡದ ಒಲೆಯಲ್ಲಿ ಮಾಡಿದ ಪಾಕವ
ಚಲುವಾಗಿ ನೀಡಿದರೆ ಒಲಿದು ಬಂದೆನ್ನಪ್ಪಿದ
ಗುರುನಿರಂಜನ ಚನ್ನಬಸವಲಿಂಗ. ॥ ೩೧೦ ॥

೩೧೧

ಗಂಡನಿಂದ ಗಳಿಸಿದರ್ಥವನು ಹಗಲಿರುಳಗೂಡಿ,
ಮಂಡಲದೊಳಗುಳ್ಳ ಮಿಂಡರ ನೋಡಿ ನೋಡಿಯಿತ್ತಡೆ
ಗಂಡನೈಶ್ವರ್ಯದ ಬೆಳಗು ಘನವಾಯಿತ್ತು ಮೂರು ಲೋಕದೊಳಗೆ ;

ವಿನಯವಾಯಿತ್ತು ಸಕಲಸನ್ನಿಹಿತರಿಗೆ :
ಸನುಮತವಾಯಿತ್ತು ಗುರುನಿರಂಜನ ಚನ್ನಬಸವಲಿಂಗಕ್ಕೆ. ॥ ೩೧೧ ॥

೩೧೨

ನೆಲ ಗಗನಕ್ಕೆ ನಿಲುಕದ ಗಂಭೀರ ಮಹಾಘನ ಪರಬ್ರಹ್ಮಮೂರುತಿ
ಕರಸ್ಥಲದಲ್ಲಿ ಬಂದಿರಲು,
ಭವಿಬೆರಸಿದುದಕವ ಮಜ್ಜನಕ್ಕೆರೆದರೆ ಗುರುದ್ರೋಹ.
ಭವಿಬೆಳೆದ ಪತ್ರಿ ಪುಷ್ಪಂಗಳ ಧರಿಸಿದರೆ ಲಿಂಗದ್ರೋಹ.
ಭವಿಬೆರಸಿದ ಗಂಧಾಕ್ಷತೆ ಪರಿಮಳದ್ರವ್ಯಂಗಳ ಧರಿಸಿದರೆ ಜಂಗಮದ್ರೋಹ.
ಭವಿಬೆರಸಿದ ಪಾಕಪದಾರ್ಥವನರ್ಪಿಸಿದರೆ ಪ್ರಸಾದದ್ರೋಹ.
ಭವಿಸೋಂಕಿದ ಹಾಲು ತುಪ್ಪ ಸಕ್ಕರೆ ಮಧು ಮೊಸರು
ಮೊದಲಾದವನರ್ಪಿದರೆ ಪಾದೋದಕದ್ರೋಹ.
ಇಂತು ಪಂಚವಿಧವನರಿಯದೆ ಪಂಚಮಹಾಪಾತಕಕ್ಕೀಡಾಗುವ
ಪಾಶಬದ್ಧರಿಗೆ ದೂರವಾಗಿಪ್ಪ ನಮ್ಮ ಗುರುನಿರಂಜನ ಚನ್ನಬಸವಲಿಂಗ. ॥ ೩೧೨ ॥

೩೧೩

ಗುರುಲಿಂಗವ ಪಡೆವರೆಂದು
ನರರು ದುರ್ವರ್ತನೆಯೊಳಿರಲು ಅರೆಭಕ್ತರೆನಿಸುವರು,
ಅನಾದಿಭಕ್ತನಾಗಿ ಆದಿಗುರುವಿನ ಕೈಯಿಂದೆ
ಆದಿ ಅನಾದಿಯಿಂದತ್ತತ್ತಲಾದ ಮೂದೇವರರಿಯದ
ನಿರಂಜನಲಿಂಗವ ಸಾಧಿಸಿ ಕರಸ್ಥಲಕ್ಕೆ ತಂದು,
ತ್ರಿವಿಧಾಚರಣೆವಿಡಿದಾಚರಿಸುವಲ್ಲಿ
ಅರೆಭಕ್ತರಿಗೆ ಆಪ್ತರೆಂದರೆ ಸಂಧಿಸಿತು ಕರ್ಮತ್ರಯ.
ಅವರಿಗೆ ಶರಣೆಂದರೆ ಕುರುಹುಗೊಂಡಿತ್ತು ಲಯಗಮನ.
ಅವರಿಗೆ ಶಿವನೆಂದು ಭಕ್ತಿಯ ಮಾಡಿ ನೀಡಿದರೆ
ಸೈದಾನದ ಕೇಡು ದುಃಖದ ಬೀಡು.
ಅವರಲ್ಲಿ ಪಾದೋದಕ ಪ್ರಸಾದ ಕೊಡಕೊಳ್ಳಿಯಾದರೆ
ಪಂಚಮಹಾಪಾತಕ ಘಟಿಸುವದು.
ಅವರಿಗೆ ಶಿವಾನುಭಾವವನಿತ್ತಡೆ ಬ್ರಹ್ಮಹತ್ಯವೆಡೆಗೊಡುವದು.
ಅದೇನುಕಾರಣವೆಂದೊಡೆ,
ಅವರು ಆದ್ಯರು ವೇದ್ಯರು ಸಾಧ್ಯರು ಆಚರಿಸಿದ ಆಚರಣೆಗೆ ಕೂಡಿ
ದುರ್ನಡೆಯಲ್ಲಿ ಬಿದ್ದು ದೂರಿಕೊಂಬವರಾಗಿ.

ಅವರ ಕೂಡೆ ಸಕಲವ ಬಿಟ್ಟು, ಮತ್ತೊಂದು ವೇಳೆ ಬೇಕಾದರೆ,
ಲೌಕಿಕರ ಭಕ್ತಿ ಅವರ ಸ್ನೇಹ ಅವರ ಸೇವೆಯು ಅವರು ಮಾಡಿದ ಪೂಜೆ
ಅವರಿಂದೆ ಸಕಲವನು ಶುದ್ಧಮಾಡಿಕೊಂಡು ಸುಖಿಸುವದು
ಗುರುನಿರಂಜನ ಚನ್ನಬಸವಲಿಂಗಸನ್ನಿಹಿತವಾಗಿ. ॥ ೩೧೩ ॥

೩೧೪

ಅಂಗಭವಿಯೊಡನೆ ಕ್ರಿಯೆಗೂಡಿ ನಡೆಯಲಾಗದು.
ಮನಭವಿಯೊಡನೆ ಮಾತನಾಡಿ ಸುಖಿಸಿಕೊಳ್ಳಲಾಗದು.
ಪ್ರಾಣಭವಿಯೊಡನೆ ಮಹಾನುಭಾವಪ್ರಸಾದ ಸಮರಸ ಮಾಡಲಾಗದು.
ಅದೇನು ಕಾರಣವೆಂದಡೆ.
ಅವರು ತ್ರಿವಿಧ ದ್ರೋಹಿಯಾದಕಾರಣ.
ಗುರುಮಾರ್ಗಶೂನ್ಯರು ಗುರುನಿರಂಜನ ಚನ್ನಬಸವಲಿಂಗಕ್ಕೆ ದೂರ. ॥ ೩೧೪ ॥

೩೧೫

ಲಿಂಗಜಂಗಮ ಸಂಗಸನ್ನಿಹಿತನಾದ ಶರಣಂಗೆ
ಭಾವವಿಲ್ಲದ ಕಾಯ, ಕಲ್ಪನೆಯಿಲ್ಲದ ಮನ, ಗುಣಶೂನ್ಯ ಪ್ರಾಣ,
ಭ್ರಾಂತಿವಿರಹಿತ ಭಾವ, ಧರ್ಮವಿಲ್ಲದ ಇಂದ್ರಿಯ,
ಇಂತು ಸಕಲ ವಿಷಯ ಹೊಂದಿ ಶರಣೆಂದು
ನ್ಯಷ್ಟೈವೆರೆದು ನಲಿಯುತಿರ್ದವು ಗುರುನಿರಂಜನ ಚನ್ನಬಸವಲಿಂಗಕ್ಕೆ. ॥ ೩೧೫ ॥

೩೧೬

ಶ್ರದ್ಧೆ ಸಾವಧಾನ ಲಿಂಗಸ್ಥಲವಾಗಿ,
ನಿಷ್ಠಾನುಭಾವ ಅಂಗಸ್ಥಲವಾಗಿ,
ಸಮರಸಾನಂದ ಕರಸ್ಥಲವಾಗಿ,
ಮನದಲ್ಲಿ ಭಕ್ತಿ, ಮನನದಲ್ಲಿ ಜ್ಞಾನ,
ಮನನೀಯದಲ್ಲಿ ವೈರಾಗ್ಯಗೂಡಿ ನಡೆವ
ಸಚ್ಚಿದಾನಂದಮಾಹೇಶ್ವರನ ಪಾದಕಮಲಕ್ಕೆ ಭೃಂಗನಾಗಿ
ನಮೋ ನಮೋ ಎನುತಿರ್ದೆನು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೩೧೬ ॥

೩೧೭

ನೆನವು ನಿರಂತರ ನಿಜಾನಂದಶರಣನು
ಖಂಡಿತವಳಿದುಳಿದು ಕಾಣಿಸಿಕೊಂಬನು.

ಪರಿಮುಪತ್ತಿದ ಕ್ರಿಯಾಸನ್ನಿಹಿತ ಗುರುವೆಂಬೆನು.
ಮರೆಮು ನೆರೆದ ಜ್ಞಾನಸನ್ನಿಹಿತ ಲಿಂಗವೆಂಬೆನು.
ಜರೆಮುಳಿದ ಭಾವಸನ್ನಿಹಿತ ಜಂಗಮವೆಂಬೆನು.
ಗುರುನಿರಂಜನ ಚನ್ನಬಸವಲಿಂಗಕ್ಕೆಯಿಲ್ಲದೆ
ನಡೆನುಡಿ ಗಂಭೀರ ಮಹೇಶ್ವರನು. || ೩೧೭ ||

೩೧೮

ಮರೆದು ಮಾಡಿ ನಡೆವೆನಯ್ಯಾ ನಿಮ್ಮ ಶಿಷ್ಯನಾಗಿ ಬಂದುದಕ್ಕೆ.
ಕಳೆದು ಮಾಡಿ ನಡೆವೆನಯ್ಯಾ ನಿಮ್ಮ ಭಕ್ತನಾಗಿ ಬಂದುದಕ್ಕೆ.
ಕಡಿದು ಮಾಡಿ ನಡೆವೆನಯ್ಯಾ ನಿಮ್ಮ ಶರಣನಾಗಿ ಬಂದುದಕ್ಕೆ.
ಇಂತು ಶಿಷ್ಯ ಭಕ್ತ ಶರಣನಾಗಿ ನಿಂದಲ್ಲಿ ನಿಮ್ಮ ಸಗುಣದ ಸೌಖ್ಯ.
ನಿಲ್ಲುವರತ್ತಲ್ಲಿ ಗುರುನಿರಂಜನ ಚನ್ನಬಸವಲಿಂಗಾ. || ೩೧೮ ||

೩೧೯

ಅಯ್ಯಾ, ಎನ್ನ ಬೆನ್ನಿಂದೆ ಬಂದ ಕರ್ತು ನೀನೆಂದರಿದೆ.
ಅದೇನು ಕಾರಣ, ಎನ್ನ ಕರ್ಮವ ಕಳೆದು, ಪರ್ಮವ ತಿಳುಹಿ,
ನಿರ್ಮಳ ಮೂರುತಿಯಾಗಿನಿಂದಲ್ಲಿ.
ಅಯ್ಯಾ, ಎನ್ನಾದಿಮುಖದಿಂದೆ ವೇಧಿಸಬಂದ ಮಹಿಮ ನೀನೆಂದರಿದೆ,
ಅದೇನು ಕಾರಣ, ಎನ್ನ ಪಂಚದಶ ಮಾಯಾಪಟಲ ಹರಿದು
ಪ್ರಾಣಮಯಮೂರುತಿಯಾಗಿ ನಿಂದಲ್ಲಿ.
ಅಯ್ಯಾ, ಎನ್ನನಾದಿಯನರುಹಿಸಲುದಯವಾಗಿ ಬಂದ ಚಿನುಮಯ ನೀನೆಂದರಿದೆ.
ಅದೇನು ಕಾರಣ, ಎನ್ನ ಸಪ್ತವ್ಯಸನ ವಿಷಯವಿಕಾರವನ್ನುರುಹಿ
ಆನಂದಮಯ ಮೂರುತಿಯಾಗಿನಿಂದಲ್ಲಿ.
ಅಯ್ಯಾ, ಎನ್ನ ಸರ್ವಾಂಗ ಸುಖಮುಖ ನೀನೆಂದರಿದೆ.
ಅದೇನು ಕಾರಣ, ಗುರುನಿರಂಜನ ಚನ್ನಬಸವಲಿಂಗ
ಮೂರುತಿಯಾಗಿನಿಂದಲ್ಲಿ. || ೩೧೯ ||

೩೨೦

ಅಲಕ್ಷ ಅನಾಮಯ ಅಖಂಡ ನಿಲವು ಲಕ್ಷಕ್ಕೆ ಬಂದು ನಿಂದಲ್ಲಿ
ನಿರ್ಗಮನ ನಿರ್ಮಾಯ ನಿಸ್ಸೀಮದಿರವು ಸೀಮೆಗೊಂಡಿತ್ತು ನೋಡಾ.
ಕಣ್ಣಿಗೆ ನಿಲುಕದಾಟ, ಹಣ್ಣಿತು ಮೂರುಲೋಕದೊಳಗೆ
ಒಳಗೊಳಗಿನಾಟ ಬಳಿವಿಡಿದು ಬಂದು
ಉಭಯಕ್ಕಾವರಿಸಿ ಗಮಿಸುವಲ್ಲಿ ಅಂತು ಇಂತುಯೆನಲುಂಟೆ ?

ಜಡ ಅಜಡಯೆನಲುಂಟೆ ಜಾತಾದಿ ಸಕಲ ತೃಣಾಗ್ನಿ ?
ಗುರುನಿರಂಜನ ಚನ್ನಬಸವಲಿಂಗ ನಿಮ್ಮ ಶರಣ
ಅನುಸರಣೆತಮಾದಿತ್ಯ. ॥ ೩೨೦ ॥

೩೨೧

ಅಂಗದಿಚ್ಛೆಗೆ ಅನುಸರಣೆವಿಡಿದು
ಲಿಂಗಪಂಚಾಚಾರ ಗತಿಗೆಡಿಸಿದಲ್ಲಿ ಗುರುಕರುಣಯೆಲ್ಲಿಹುದೊ !
ಷಟ್‌ಸ್ಥಲಸಂಬಂಧವೆಲ್ಲಿಹುದೋ ?
ಅಷ್ಟಾವರಣದವಿರಳಸುಖವೆಲ್ಲಿಹುದೋ ?
ಗುರುನಿರಂಜನ ಚನ್ನಬಸವಲಿಂಗದ ನಿಜವೆಲ್ಲಿಹುದೋ ? ॥ ೩೨೧ ॥

೩೨೨

ಭುವನಾಪಸಂಪರ್ಕಶೂನ್ಯವಾದಲ್ಲಿ ಬೀಜದಲ್ಲಿ ಅಂಕುರ ಪಲ್ಲೈಸದು.
ತನುಜ್ಞಾನಸಂಗಶೂನ್ಯಶರಣಂಗೆ ಸರ್ವಾಚಾರ ಪಲ್ಲೈಸದು.
ಮರಹನಳಿದುಳಿದ ಗುರುನಿರಂಜನ ಚನ್ನಬಸವಲಿಂಗ ಸಮರಸಕ್ಕೆ. ॥ ೩೨೨ ॥

೩೨೩

ಪ್ರಣತಿಯೊಳು ತೈಲ ಬತ್ತಿ ಅಗ್ನಿ ಕೂಟವಾದಲ್ಲಿ
ಜ್ಯೋತಿಯಾಗಿ ನಿಂದಿತ್ತು.
ತನುವಿನೊಳು ರತಿ ಮನ ಜ್ಞಾನ ಸಂಯೋಗವಾದಲ್ಲಿ
ಗುರುನಿರಂಜನ ಚನ್ನ ಬಸವಲಿಂಗದಂಗವಾಗಿ ನಿಂದನು. ॥ ೩೨೩ ॥

೩೨೪

ಮಾಡಿ ಮಾಡಿ ಬೇಡಲಿಲ್ಲದ ಮಹೇಶ್ವರ.
ನೀಡಿ ನೀಡಿ ಆಡಿಕೊಳ್ಳದ ಮಹೇಶ್ವರ.
ಆಡುತಾಡುತ ದೂಡಿ ದೂರಿದ ಮಹೇಶ್ವರ.
ಆದಿ ಅನಾದಿಯ ಕೋಡಿಗಳದು ಕೂಡಿ ನಿಂದನು
ಗುರುನಿರಂಜನ ಚನ್ನಬಸವಲಿಂಗದಂಗವಾಗಿ. ॥ ೩೨೪ ॥

೩೨೫

ನಿಷ್ಠೆಯಿಲ್ಲದ ಪೃಥ್ವಿ ಜಡ, ನಿಷ್ಠೆಯಿಲ್ಲದ ಅಪ್ಪು ಜಡ,
ನಿಷ್ಠೆಯಿಲ್ಲದ ಅಗ್ನಿ ಜಡ, ನಿಷ್ಠೆಯಿಲ್ಲದ ವಾಯು ಜಡ,
ನಿಷ್ಠೆಯಿಲ್ಲದ ಆಕಾಶ ಜಡ, ನಿಷ್ಠೆಯಿಲ್ಲದ ಆತ್ಮ ಜಡ.
ಇಂತು ಷಡ್ಭೂತದಲ್ಲಿ ನಿಷ್ಠೆರಹಿತವಾಗಿರ್ದು

ಷಟ್‌ಸ್ಥಲಜ್ಞಾನಿಗಳೆಂದರೆ ಮನೋಮೂರ್ತಿ ಮಹಾಲಿಂಗಮೂರ್ತಿಯಾಗಿರ್ಪನು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. || ೩೨೫ ||

## ಮಾಹೇಶ್ವರನ ಐಕ್ಯಸ್ಥಲ

೩೨೬

ಅಷ್ಟಾಂಗವಾದ ಮಾಹೇಶ್ವರನ ಸರ್ವಾಂಗವೆಲ್ಲ ಲಿಂಗವೆಯಾಗಿರ್ಪುದು.
ಅದೆಂತೆಂದೊಡೆ :
ವ್ಯಾಲಗರಳ ಸೋಂಕಿದಂಗ ಸರ್ವಮಯವಾದಂತೆ.
ಶ್ರದ್ಧೆ ನಿಷ್ಠೆಯೊಳೊಂದಿ ಅಂಗವಾದಲ್ಲಿ
ಸಾವಧಾನಸುಭಾವ ಆನಂದ ಸಮರಸ ಪ್ರಾಣವಾಗಿರಲು
ಗುರುನಿರಂಜನ ಚನ್ನಬಸವಲಿಂಗವು ಎತ್ತೆತ್ತ ನೋಡಿದಡತ್ತತ್ತ ತಾನೆ. || ೩೨೬ ||

೩೨೭

ಕಾಯವಳಿದು ಲಿಂಗವ ಕಂಡು ಕಾಯವನು ಜರೆಯುತಿರ್ದೆ.
ಮನವಳಿದು ಲಿಂಗವ ಕಂಡು ಮನವ ಜರೆಯುತಿರ್ದೆ.
ಪ್ರಾಣವಳಿದು ಲಿಂಗವ ಕಂಡು ಪ್ರಾಣವ ಜರೆಯುತಿರ್ದೆ.
ಭಾವವಳಿದು ಲಿಂಗವ ಕಂಡು ಭಾವವ ಜರೆಯುತಿರ್ದೆ.
ಶ್ರುತಿಗುರುಸ್ವಾನುಭಾವದಿಂದೆ ಆಚಾರವಳಿದು
ಲಿಂಗವ ಕಂಡು ಆಚಾರವ ಜರೆಯುತಿರ್ದೆ.
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ ಭಿನ್ನವಳಿದು
ಗುರುಲಿಂಗಜಂಗಮವ ಕಂಡು ಗುರುಲಿಂಗಜಂಗಮದಲ್ಲಿ ಜರೆಯುತಿರ್ದೆ. ||೩೨೭||

೩೨೮

ಗುರುವ ಕಂಡು ಗುರುವಿನಲ್ಲಿ ಅನುಸರಣೆಯ ಮಾಡಿದರೆ
ಗುರುದ್ರೋಹವೆಂದು ಕೈಮುವ ಪಿಡಿದು ಕಡಿದು ಗೆಲುವೆನಯ್ಯಾ.
ಲಿಂಗವ ಕಂಡು ಲಿಂಗದಲ್ಲಿ ಅನುಸರಣೆಯ ಮಾಡಿದರೆ
ಲಿಂಗದ್ರೋಹವೆಂದು ಕೈಮುವ ಪಿಡಿದು ಕಡಿದು ಗೆಲುವೆನಯ್ಯಾ.
ಜಂಗಮವ ಕಂಡು ಜಂಗಮದಲ್ಲಿ ಅನುಸರಣೆಯ ಮಾಡಿದರೆ
ಜಂಗಮದ್ರೋಹವೆಂದು ಕೈಮುವ ಪಿಡಿದು ಕಡಿದು ಗೆಲುವೆನಯ್ಯಾ.
ಪ್ರಸಾದವ ಕಂಡು ಪ್ರಸಾದದಲ್ಲಿ ಅನುಸರಣೆಯ ಮಾಡಿದರೆ
ಪ್ರಸಾದದ್ರೋಹವೆಂದು ಕೈಮುವ ಪಿಡಿದು ಕಡಿದು ಗೆಲುವೆನಯ್ಯಾ.
ಶರಣಭಕ್ತರ ಕಂಡು ಶರಣಭಕ್ತರಲ್ಲಿ ಅನುಸರಣೆಯ ಮಾಡಿದರೆ

ಶರಣಭಕ್ತದ್ರೋಹವೆಂದು ಕೈದುವ ಪಿಡಿದು ಕಡಿದು ಗೆಲುವೆನಯ್ಯಾ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. || ೩೨೮ ||

೩೨೯

ಅಚ್ಯೋತ್ತಿರ್ದ ಸಚ್ಚಿದಾನಂದೈಶ್ವರ್ಯ ಪ್ರಭಾಮಯ ಶರಣನು
ನಿಚ್ಚನಿರ್ಮಲ ದಾಸೋಹಿ ಸಕಲಮಲಿನ ಸಂಹಾರಿ,
ತ್ರಿಕರಣ ಸತ್ಯ, ಮಿಥ್ಯಾಚಾರಧ್ವಂಶಿ,
ಕಾರಣರೂಪ ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೩೨೯ ||

೩೩೦

ಅಖಂಡ ಪ್ರಕಾಶಾಲಯ ಬ್ರಹ್ಮವನರಸಿಕೊಂಡು
ಆ ವೀರಸ್ಥಲದಲ್ಲಿ ಧರಿಸಿಪ್ಪ
ಅನುಪಮ ವೀರಮಾಹೇಶ್ವರನ ನಡೆಯಲ್ಲಿ ತೋರುವುದು, ನುಡಿಯಲ್ಲಿ ತೋರುವುದು,
ಪಿಡಿವಲ್ಲಿ ಕಾಣುವುದು, ಕೊಡುವಲ್ಲಿ ಕಾಂಬುವುದು, ಕೊಂಬಲ್ಲಿ ಕಾಣುವುದು,
ಬರುವಲ್ಲಿ ತೋರುವುದು, ಹೋಗುವಲ್ಲಿ ತೋರುವುದು
ಗುರುನಿರಂಜನ ಚನ್ನಬಸವಲಿಂಗವು ತಾನೇ ನಿರುತವಾಗಿ. || ೩೩೦ ||

೩೩೧

ಕರಸ್ಥಲ ಲಿಂಗ, ಮನಸ್ಥಲ ಮಂತ್ರ, ಪ್ರಾಣಸ್ಥಲ ಪ್ರಸಾದ,
ಭಾವಸ್ಥಲ ಪರಮಪಾದೋದಕವಾದ ಮಾಹೇಶ್ವರನು
ನಡೆವಲ್ಲಿ ಶುದ್ಧ, ನುಡಿವಲ್ಲಿ ಸಿದ್ಧ, ಕೂಡುವಲ್ಲಿ ಪ್ರಸಿದ್ಧ.
ಅದಲ್ಲದೆ ವೇಷಧಾರಿ ಗುರುವಿನ ಕೈಯ ಲಿಂಗವ ಅಂಗದ ಮೇಲೆ ಧರಿಸಿ ನಡೆವ,
ಕಂಗುರುಡ ಕಸಮಲಮನುಜರನೇನೆಂಬೆನಯ್ಯಾ ?
ಆಸೆಯ ಇಚ್ಛೆಗೆ ಆವ ಕುಲದವನಾದರು
ಅವನ ಓಲೈಸುವರು ಶರಣೆಂದು ಗುರುದ್ರೋಹಿಗಳು.
ವಿಷಯದಿಚ್ಛೆಗೆ ಆವ ಕುಲದ ಸ್ತ್ರೀಯಾದರು
ಅವಳ ಅಧೋದ್ವಾರದಲ್ಲಿ ಮುಳುಗುವರು ಲಿಂಗದ್ರೋಹಿಗಳು.
ಹಸಿವಿನಿಚ್ಛೆಗೆ ಶುಚಿಯಶುಚಿಯೆನ್ನದೆ
ಭವಿ ಭಕ್ತನೆನ್ನದೆ ಕಂಡ ಕಂಡ ಜನರ ಕೊಂಡಾಡಿ
ಉದರ ಹೊರೆವರು ಜಂಗಮದ್ರೋಹಿಗಳು.
ಇಂತು ತ್ರಿವಿಧ ದ್ರೋಹಿಗಳಿಗೆ ಗುರುವಿಲ್ಲ ಲಿಂಗವಿಲ್ಲ
ಜಂಗಮವಿಲ್ಲ ಪಾದೋದಕಪ್ರಸಾದವಿಲ್ಲ

ಮುಕ್ತಿಯೆಂಬುದು ಎಂದೆಂದಿಗೂ ಇಲ್ಲ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. || ೩೩೧ ||

೩೩೨

ಸಕಲವನಳಿದುಳಿದು ಶರಣೆಂದು ಕೊಂಡಾಡುವಲ್ಲಿ
ಪಂಚಾಚಾರಮೂರ್ತಿಯೊಳಗೆ
ಕರ್ಮಾಂಗಸ್ವರೂಪವಾದ ಭಕ್ತನಡಗಿ ಕಾಣಿಸುತಿರ್ದನು.
ಮಂತ್ರಾತ್ಮಕಸ್ವರೂಪವಾದಮೂರ್ತಿಯೊಳಗೆ
ವಿದ್ಯಾಂಗಸ್ವರೂಪವಾದ ಮಾಹೇಶ್ವರನಡಗಿ ಕಾಣಿಸುತಿರ್ದನು.
ನಿರೀಕ್ಷಣಾಮೂರ್ತಿಯೊಳಗೆ ಕಾಮಾಂಗಸ್ವರೂಪವಾದ
ಪ್ರಸಾದಿಯಡಗಿ ಕಾಣಿಸುತಿರ್ದನು.
ಯಜನಮೂರ್ತಿಯೊಳಗೆ ಯೋಗಾಂಗಸ್ವರೂಪವಾದ
ಪ್ರಾಣಲಿಂಗಿಯು ಅಡಗಿ ಕಾಣಿಸುತಿರ್ದನು.
ಸ್ತೋತ್ರಮೂರ್ತಿಯೊಳಗೆ ಭೋಗಾಂಗಸ್ವರೂಪವಾದ
ಶರಣನಡಗಿ ಕಾಣಿಸುತಿರ್ದನು.
ತೃಪ್ತಿ ಮೂರ್ತಿಯೊಳಗೆ ಶಿವಾಂಗಸ್ವರೂಪವಾದ
ಶರಣನೈಕ್ಯನಡಗಿ ಕಾಣಿಸುತಿರ್ದನು.
ಮುಂದೆ ಗುರುನಿರಂಜನ ಚನ್ನಬಸವಲಿಂಗದಲ್ಲಿ
ಪ್ರಸಾದಿಯಾಗಿ ಕಾಣಿಸುತಿರ್ದನು. || ೩೩೨ ||

## ಪ್ರಸಾದಿಸ್ಥಲ

ಸೂತ್ರ : ಇಂತು ನಿಷ್ಠಾಮುಖದಿಂದಾಚರಿಸಿದ ವೀರಮಾಹೇಶ್ವರನು, ತನ್ನ ಸುಬುದ್ಧಿಯೆಂಬ ಹಸ್ತವನು ಗುರುಲಿಂಗದಲ್ಲಿ ಅಡಗಿಸಿದರೆ ಗುರುಲಿಂಗವೇ ಶಿವಲಿಂಗವಾಗಿ, ಸಾವಧಾನಭಕ್ತಿಗಡಿಯಿಡಲು, ಆ ಮಹೇಶ್ವರನು ಪ್ರಸಾದಿಯಾಗಿ ನಿರಹಂಕಾರವೆಂಬ ಹಸ್ತದಲ್ಲಿ ಮೂರ್ತಿಗೊಳಿಸಿ, ಸಾವಧಾನಾದಿ ಷಡುಭಕ್ತಿಯಿಂದರ್ಚಿಸಿ ಆನಂದಿಸಿದಲ್ಲಿ ಪ್ರಸಾದಿಸ್ಥಲವೆಂದು ಹೇಳಲಾಯಿತ್ತು.

೩೩೩

ಆದಾದಿಷ್ಟಮುಖದಿಂ ಸಾಧಿಸಿಕೊಂಡು ಬಂದ ಇಷ್ಟಲಿಂಗವನು
ಮಕುಟಸ್ಥಾನದಲ್ಲಿ ಧರಿಸಿ,
ನಿರಹಂಕಾರವೆಂಬ ಹಸ್ತಕ್ಕೆ ಸಾಧಿಸಿ ಬಂದ ಸಕಲನಿಃಕಲತತ್ವ ಪದಾರ್ಥವನು,
ಇಚ್ಛಾಶಕ್ತಿಸಮೇತ ಸಾವಧಾನಭಕ್ತಿಯುಕ್ತವಾಗಿ

ಅಳಿದುಳಿದು ಅರ್ಪಿಸಿ ಭೋಗಿಸುತ್ತಿಹನು
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಪ್ರಸಾದಿಶರಣ. || ೩೩೩ ||

೩೩೪

ಮೂರುಮುಖದಗ್ನಿಯ ಸುಟ್ಟು,
ಮೂರುಬಣ್ಣದ ಹೇಸಿಕೆಯ ತೊಳೆದು,
ಮೂರು ಮನೆಯಲ್ಲಿ ದೇವರ ಪೂಜೆಯ ಮಾಡಿ,
ಇದ್ದುದ ಕಳಿಸದೆ ಸಂಚಲವಳಿದು,
ಸಮರ್ಪಿಸಿಕೊಳ್ಳಬಲ್ಲ ಸಗುಣ ನಿರ್ಗುಣ ಸಂಪನ್ನಂಗಲ್ಲದೆ
ಸಾಧ್ಯವಲ್ಲ ಕಾಣಾ ಗುರುನಿರಂಜನ ಚನ್ನಬಸವಲಿಂಗ. || ೩೩೪ ||

೩೩೫

ಮೊದಲಿಂದತ್ತಲರಿಯದೆ, ಕಡೆಯಿಂದ ಮೇಲೆ ಕಾಣದೆ,
ಚದುರಿನ ಹದನ ಸದನ ಸಂಭ್ರಮಕ್ಕೆ ಒದಗಿ ಬಿದ್ದೊರಲಿದರು
ಅಜ ವಿಷ್ಣು ಇಂದ್ರಾದಿ ಸಕಲ ಸಂದೋಹ.
ಉಳಿದ ಉಚ್ಚಿಷ್ಟ ಬಚ್ಚಲದೊಳು ಬಿದ್ದ ಪ್ರಾಣಿಗಳಂತಿರಲಿ,
ಮತ್ತೆ ಕೋಟಲೆಯ ಕಳೆದು ರಾಟಣವ ಹರಿದು,
ನಿಜಬೇಟವರಿದು ನಿರ್ಮಲವನರ್ಪಿಸಿ,
ನಿರಾವಯವ ಕೊಂಡಾಡುವ ನಿಜಪ್ರಸಾದಿಗಲ್ಲದೆ
ಅಸಾಧ್ಯ ಕಾಣಾ ಗುರುನಿರಂಜನ ಚನ್ನಬಸವಲಿಂಗ. || ೩೩೫ ||

೩೩೬

ಲಿಂಗಸಂಬಂಧಿಗಳೆಂದು ಹೇಳಿಕೊಂಬ ಹೆಂಗಳೆ
ಹೇಮಲೋಷ್ಟರತಿಸಂಯುಕ್ತ ಮತಿನಾಶ ಮಲಭುಂಜಕರು,
ಅತೀತಪ್ರಸಾದವನರಿದರ್ಪಿಸಿಕೊಂಬ ಭೇದವನರಿಯದೆ
ಹಸುವಿನೊಡಲಿಗೆ ಹವಣವರಿಯದೆ ಜಿನುಗುವ
ಜಿಹ್ವೆಲಂಪಟಗೂಢಿ ಕೈದುಡುಕಿಗಳಿಂದೆ
ನೆಗೆನೆಗೆದು ಕೊಂಬ ಅಘಬಂಧರೆತ್ತ ?
ಅಪ್ರತಿಮನೆತ್ತ ? ಸಲೆ ತತ್ವವೆತ್ತ ?
ಗುರುನಿರಂಜನ ಚನ್ನಬಸವಲಿಂಗಕ್ಕಂಗವಾಗಿರ್ದ
ಅನುಪಮ ಪ್ರಸಾದಿಯೇ ನಿತ್ಯ ಕಾಣಾ. || ೩೩೬ ||

೩೩೭

ಪ್ರಸಾದವ ಪಡೆದವರೆಂದು ಬದ್ಧ ಸಂಕಲ್ಪ ದುರ್ವರ್ತನೆಗಳನೇನೆಂಬೆನಯ್ಯಾ!
ಗಣಸಮೂಹದಲ್ಲಿ ಸೌಖ್ಯವಿಲ್ಲೆಂದು ಚಿಕ್ಕ ಬಟ್ಟಲಲ್ಲರ್ಪಿಸಿಕೊಂಡು,
ಪೂರ್ವ ಬಳಗಗೂಡಿ ಹಂದಿ ನಾಯಿಯಂತೆ ಒಗೆದಾಡಿ ತಿಂಬುವ
ಬೆಂದ ನರಕಿಗಳಿಗೆ ಪ್ರಸಾದವೆಲ್ಲಿಹದಯ್ಯಾ ?
ಪ್ರಸಾದಿ ಒಮ್ಮೆ ಪ್ರಸಾದವ ಸೇವಿಸಿ, ಒಮ್ಮೆ ಉಚ್ಛಿಷ್ಟಕೂಳ ಸೇವಿಸುವನೆ ?
ಛೀ ಅದೇತರ ನಡೆನುಡಿ ಅತ್ತ ಹೋಗಿ,
ನಮ್ಮ ಗುರುನಿರಂಜನ ಚನ್ನಬಸವಲಿಂಗಶರಣರ ತಿಂಥಿಣಿಯ ಸೋಂಕದೆ.॥೩೩೭॥

೩೩೮

ಕ್ರಿಯಾಘನಗುರುವಿನಿಂದೊಗೆದು
ಪಂಚಾಚಾರಸ್ವರೂಪವನು ಕರ ಮನ ಭಾವದಲ್ಲಿ ಧರಿಸಿ,
ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರಮಾರ್ಗವಿಡಿಯದುಳಿದು
ಸ್ಥೂಲತನುವಿನಲ್ಲಿ ಆಣವಮಲಸಂಗ ಹಿಂಗದೆ,
ನಾನು ಶುದ್ಧಪ್ರಸಾದಿಯೆಂದು
ಸೂಕ್ಷ್ಮತನುವಿನಲ್ಲಿ ಮಾಯಾಮಲಯೋಗ ಹಿಂಗದೆ,
ನಾನು ಸಿದ್ಧಪ್ರಸಾದಿಯೆಂದು,
ಕಾರಣ ತನುವಿನಲ್ಲಿ ಕಾರ್ಮಿಕಮಲಸಂಬಂಧ ಹಿಂಗದೆ,
ನಾನು ಪ್ರಸಿದ್ಧಪ್ರಸಾದಿಯೆಂದು ನುಡಿಯುತಿಪ್ಪರಲ್ಲ !
ನುಡಿವ ನಾಲಿಗೆ, ನುಡಿಸುವ ಮನ,
ಎಚ್ಚರಿಸುವ ಅರಿವು, ಇವು ಯಾತಕ್ಕೆ ಬಾತೆಯಯ್ಯಾ ?
ಇವು ಹಿಡಿದು ನಡೆವ ಜೀವನಿಗೆ ನಿರಿಯಾಮಾರ್ಗ ತಪ್ಪುವ ಬಗೆಯೆಂತು ?
ನಿರಂತರದುಃಖಿಗಳು ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೩೩೮ ॥

೩೩೯

ಶುದ್ಧಪ್ರಸಾದಿಯಾದಡೆ ತನು ಸತ್ಕ್ರಿಯಾ ಸನ್ನಿಹಿತನಾಗಿ,
ಅಣುಮಾತ್ರ ದ್ವೈತಿಯಾಗದೆ ಚರಿಸಬೇಕು.
ಸಿದ್ಧ ಪ್ರಸಾದಿಯಾದಡೆ ಮನ ಜ್ಞಾನಸನ್ನಿಹಿತನಾಗಿ,
ಕಿಂಚಿತ್ತು ಮಲವಿಷಯಕ್ಕೆ ಜಿನುಗದೆ ಚರಿಸಬೇಕು.
ಪ್ರಸಿದ್ಧ ಪ್ರಸಾದಿಯಾದಡೆ ಭಾವ ಮಹಾನುಭಾವಸನ್ನಿಹಿತನಾಗಿ,
ಒಂದಿನಿತು ಭ್ರಾಂತನಾಗದೆ ಚರಿಸಬೇಕು.
ಈ ಭೇದವನರಿಯದೆ ಅವರವರಂತೆ, ಇವರಿವರಂತೆ,

ತಾನು ತನ್ನಂತೆ ನಡೆನುಡಿ ಕೊಡುಕೊಳ್ಳಿಯುಳ್ಳರೆ
ಕಡೆ ಮೊದಲಿಲ್ಲದೆ ನರಕವನ್ನೈಯ್ದುವ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೩೩೯ ॥

೩೪೦

ನಾವು ಗುರುಲಿಂಗಜಂಗಮಪ್ರಸಾದಿಗಳೆಂದು ಹೇಳಿಕೊಂಡು ನಡೆವ
ಅಬದ್ಧ ಮೂಢಮನುಜರನೇನೆಂಬೆನಯ್ಯಾ !
ಗುರುಪ್ರಸಾದಿಯಾದಡೆ, ಕಾಯಗುಣವಳಿದು
ಪರಸ್ತ್ರೀಸಂಗ ಪರದ್ರವ್ಯ ಅಪಹರಣ
ಅಭಕ್ಷಭಕ್ಷಣ ಹಿಂಸಾದಿಗಳನಳಿದುಳಿದಿರಬೇಕು.
ಲಿಂಗಪ್ರಸಾದಿಯಾದಡೆ ಹುಸಿ ನಿಷ್ಠುರಾದಿ ವಾಕ್‌ದೋಷಂಗಳನಳಿದಿರಬೇಕು.
ಜಂಗಮಪ್ರಸಾದಿಯಾದಡೆ ಆಸೆ ಆಮಿಷ ಮರ್ಮೋಹಾದಿಗಳನಳಿದಿರಬೇಕು.
ಇಂತಲ್ಲದೆ ಕರಣತ್ರಯವಳಿಯದೆ ಕರ್ಮತ್ರಯವನುಂಬ
ಕಾಳಕೂಳರಿಗೆ ತ್ರಿವಿಧಪ್ರಸಾದವೆಲ್ಲಿಹದಯ್ಯಾ ?
ನಮ್ಮ ಗುರುನಿರಂಜನ ಚನ್ನಬಸವಲಿಂಗದ ನಿಜಪ್ರಸಾದಿಗಳಿಗಲ್ಲದೆ. ॥ ೩೪೦ ॥

೩೪೧

ಆದಿಯ ಪ್ರಸಾದವ ಸಾಧಿಸಿಕೊಂಡು ಬಂದವರೆಂದು
ಸಮಯಾಚಾರದಲ್ಲಿ ಬಲ್ಲಬಲ್ಲಂತೆ ಅಲ್ಲಲ್ಲಿಗಾಚರಿಸಿ,
ಧೂಮ್ರ ಸೇವನೆ, ಭಂಗಿ, ಅಫು, ಮಧುಪಾನಕ, ನಾಸಿಕಹುಡಿಯನೇರಿಸಿಕೊಂಬ
ಕತ್ತೆ ಕರ್ಮಭವಿ ಶುನಕ ಜನರಿಗೆ ಸಾಧ್ಯವಪ್ಪುದೆ ?
ಅಸಾಧ್ಯ ಅನುಪಮಪ್ರಸಾದ.
ಅನಾದಿ ಸಂಸಿದ್ಧ ನಿರಂಜನಪ್ರಸಾದಿಯೇ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಸಹಜ ಕಾಣಾ. ॥ ೩೪೧ ॥

೩೪೨

ನಿತ್ಯಾನಂದಸಂವಿತ್ಪ್ರಭಾಮೂರ್ತಿಯಾದ
ಸತ್ಯಸ್ಥಲಾಶ್ರಯದಲ್ಲೊಪ್ಪುವ ಸದ್ಗುರುವರನಾಜ್ಞೆವಿಡಿದಾಚರಿಸುವ
ಸಗುಣನಿರ್ಗುಣಸನ್ನಿಹಿತ ಸದಮಲಾನಂದ
ಪ್ರಸಾದಿಯ ವೇಷವ ಹೊತ್ತು ನಡೆವಣ್ಣಗಳಿರಾ,
ನಿಮ್ಮ ನಡೆಯೊಳು ತಪ್ಪಿ ನಡೆಯಬೇಡಿರಿ,
ನಿಮ್ಮ ನುಡಿಯೊಳು ತಪ್ಪಿ ನುಡಿಯಬೇಡಿರಿ,
ನಿಮ್ಮ ಭಕ್ತಿಯಲ್ಲಿ ಬೆರಸಬೇಡಿರಿ;

ನಿಮ್ಮ ಜ್ಞಾನದಲ್ಲಿ ಕಲಸಬೇಡಿರಿ,
ನಿಮ್ಮ ವಿರಾಗತೆಯಲ್ಲಿ ಅನುಸರಿಸಬೇಡಿರಿ,
ನೂರು ವರುಷ ಬಾಳಿ ನರಕವನುಂಬುವಕಿಂತ,
ಒಂದೈದುದಿವಸ ಅಹುದಹುದೆನಿಸಿ
ಗುರುನಿರಂಜನ ಚನ್ನಬಸವಲಿಂಗದಂಗವಾಗಿ
ಅಮಲಪ್ರಸಾದಿಯೆನಿಸಿಕೊಂಬುವುದು ಕಾಣಾ. || ೩೪೨ ||

೩೪೩

ಜಾಗ್ರ ಸ್ವಪ್ನ ಸುಷುಪ್ತಿ ತೂರ್ಯ ತೂರ್ಯಾತೀತ
ನಿರಂಜನಲಿಂಗವ ಪಡೆದ ಅಗಣಿತಪ್ರಸಾದಿಯು
ತಾನು ತನ್ನಾನಂದಕ್ಕೆ ಅಡಿಯಿಟ್ಟು ನಡೆವಲ್ಲಿ,
ತನ್ನ ಪದದನುವನರಿದು ಸಾಕಾರ, ನಿರಾಕಾರ, ನಿರ್ಮಾಯಕ್ಕಿತ್ತು,
ಅರಿದರಿದುಕೊಂಡಾನಂದಿಸುವನಲ್ಲದೆ,
ಅಘಭರಿತ ಜಗಭಂಡ ಜಂಗುಳಿಗಳಂತೆ,
ಮಣ್ಣಿನ ಕರ್ಮದಲ್ಲಿ ನಿಂದು, ಹೆಣ್ಣಿನ ಮೋಹದಲ್ಲಿ ಸಿಲ್ಕಿ,
ಹೊನ್ನಿನಾಸೆಯಲ್ಲಿ ಮುಳುಗಿ ಚನ್ನಗುರುಲಿಂಗ ಜಂಗಮಕಿತ್ತು
ಕೊಂಬ ಉನ್ನತಪ್ರಸಾದಿಗಳೆಂದು,
ಕುನ್ನಿಗಳ ಧ್ವನಿ ಸಹಜದಂತಿರುವರಲ್ಲಾ,
ಗುರುನಿರಂಜನ ಚನ್ನಬಸವಲಿಂಗಾ. || ೩೪೩ ||

೩೪೪

ಗುರುಕರಜಾತರಾಗಿ ಬಂದವರೆಂದು
ಹರಿವಾಣತುಂಬಿ ಸೂಸುತ ನೀಡಿಸಿಕೊಂಡು,
ತೋರಿಕೊಂಬ ಭೇದವನರಿಯದೆ
ಕುಂಡಿತುಂಬಿದ ತೊಂಡುಪಶುವಿನಂತೆ ಕೈಬಾಯಿದುಡುಕಿ ತಿಂದು,
ಸೂರ್ಯಾಡಿ ಸಮಯಾಚಾರಕ್ಕಂಜಿ ಥೀ ಥೀ ಎಂದು
ಥೂಕ ಹಾಕುವರೆಂದು ಕೊಟ್ಟು, ಕೊಟ್ಟುಂಬ
ಸೊಟ್ಟನಡೆಯ ಭ್ರಷ್ಟ, ಮೂಳ ಹೊಲೆಯರ
ಹೊಟ್ಟೆಯ ತುಳಿದುಹಾಕುವರು ದುರ್ಗತಿಗೆ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. || ೩೪೪ ||

೩೪೫

ಹೊರಗೆ ಪ್ರಸಾದಿಗಳು ಒಳಗೆ ಸಂಸಾರಿಗಳು.
ಬೆರೆಯಲುಂಟೆ ಶಿವಪಥಕ್ಕೆ ?
ಸುರೆಯ ತುಂಬಿದ ಕೊಡನು ಶೃಂಗಾರವಡೆದರೆ ಭಂಗ,
ಕಾಯವಳಿದಲ್ಲಿ ನರಕ ಗುರುನಿರಂಜನ
ಚನ್ನಬಸವಲಿಂಗವನರಿಯದ ಕುಟಿಲಕಾಯವುಳ್ಳನ್ನಕ್ಕರ. || ೩೪೫ ||

೩೪೬

ಕಸಗೂಡಿದ ಭೂಮಿಯಲ್ಲಿ ಸಸಿ ಪಲ್ಲೈಸುವುದೇ ?
ಅನಾದಿ ಮಲಸಂಬಂಧ ಕಾಯದಲ್ಲಿ ಗುರೂಪದೇಶ ಫಲಿಸಲರಿಯದು.
ಭೂತದೇಹಿಗಳಿಗೆ ಪ್ರಸಾದವಕೊಟ್ಟರೆ ಅಘೋರನರಕತಪ್ಪದು,
ಅದೇನು ಕಾರಣ ? ಗುರುನಿರಂಜನ ಚನ್ನಬಸವಲಿಂಗದ
ಲೀಲೆಯ ನಟಿಸುವರಾಗಿ. || ೩೪೬ ||

೩೪೭

ನಡೆನಡೆದು ನಡಗರದಲ್ಲಿಪ್ಪ ಶಿವಜ್ಞಾನಿ ಶರಣನು,
ಪಡೆವರ್ಥದಿಂದೊಡವೆರೆದು ಸುಖಿಸುವಲ್ಲಿ,
ಅಡಿಗಡಿಗೆ ಅವಧಾನಭರಿತನಾಗಿ, ಅಂಗಮನಭಾವದನುವರಿದು
ಅರ್ಪಿಸಿಕೊಳಬಲ್ಲ ಪರಮಪರಿಣಾಮಿ
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ. || ೩೪೭ ||

೩೪೮

ಕಾಯದ ಕರ್ಮವ ಕಳೆದುಳಿದು ಕೊಟ್ಟು ಕೊಳಬಲ್ಲ ಪ್ರಸಾದಿ.
ಮನದ ಕಲ್ಪನೆಯಳಿದುಳಿದು ಕೊಟ್ಟು ಕೊಳಬಲ್ಲ ಪ್ರಸಾದಿ.
ಭಾವದ ಬಲೆಯ ಹರಿದು ಅರಿದು ಕೊಟ್ಟು ಕೊಳಬಲ್ಲ ಪ್ರಸಾದಿ.
ಈ ತ್ರಿವಿಧವನು ತ್ರಿವಿಧಾವಸ್ಥೆಯೊಳಗೆ ಕೊಟ್ಟು ಕೊಳಬಲ್ಲ ಸಾವಧಾನಿ
ನಮ್ಮ ಗುರುನಿರಂಜನ ಚನ್ನಬಸವಲಿಂಗಕ್ಕೆ. || ೩೪೮ ||

೩೪೯

ನಿತ್ಯಪದದಲ್ಲಿ ನಿಂದು ತತ್ವಮೊತ್ತವನರಿದು
ಚಿತ್ತಾದಿ ಮಲಿನವಳಿದುಳಿದು
ಹಸ್ತದಿಂದೆ ಪಿಡಿದೆತ್ತಿ ಕರ್ತು ಗುರುನಿರಂಜನ ಚನ್ನಬಸವಲಿಂಗಕ್ಕಿತ್ತು
ಕೊಳಬಲ್ಲವನವಿರಳಪ್ರಸಾದಿ. || ೩೪೯ ||

೩೫೦

ಭುವನಾದಿ ಜನಿತವ ನಿರ್ಮಲಪದಾರ್ಥವ ಮಾಡಿ
ಪರಮಾನಂದ ಪ್ರಸಾದಿ ಪರಿಪೂರ್ಣಲಿಂಗಕ್ಕೆ ಸಮರ್ಪಿಸಿಕೊಂಬುವನಲ್ಲದೆ,
ಭುವನಾದಿ ಜನಿತ ಗುಣಸಂಭವಿತನಾಗಿ
ಪ್ರಸಾದವ ಪಡೆದ ಪ್ರಸಾದಿಗಳೆಂದು ಪರಪದಾರ್ಥವನರ್ಪಿಸಿಕೊಂಬ
ದುರ್ವಿವೇಕನಲ್ಲ ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೩೫೦ ||

೩೫೧

ಹಡೆದವರಿಂದೆ ಪಡೆದ ಪ್ರಸಾದವ ಹಿಡಿದುಕೊಟ್ಟು,
ನೋಡಿಕೊಟ್ಟು, ತಿಳಿದುಕೊಟ್ಟು, ನಿತ್ಯಸುಖಿಸುವನಲ್ಲದೆ
ಜಡದೇಹದೊಡವೆಯ ಸುಖವಿಡಿದು ಒಡೆಯರ ಪ್ರಸಾದವ ಪಡೆದವರೆಂದು
ಓಗರವ ಗಡಣಿಸಿಕೊಂಡು ಮೃತ್ಯುಂಜಯಲಿಂಗಕ್ಕೆ ತೋರಿ ತೋರಿ ಉಂಬ
ಡಂಭಕನಂತಲ್ಲ ಗುರುನಿರಂಜನ ಚನ್ನಬಸವಲಿಂಗ ನಿಮ್ಮ ಪ್ರಸಾದಿ. || ೩೫೧ ||

೩೫೨

ತನ್ನ ನೇಮಿಸಿ ಕಳಿವಿದಖಂಡಪರಶಿವನು
ತನ್ನಿಂದೆ ತಾ ಬಂದು ನಿಂದಲ್ಲಿ,
ತನತನಗೆ ಬಂದ ಬಂಧವನರಿದು ಹಿಂದುಮುಂದರಿಯದೆ
ಚಂದಚಂದದಲಿ ಅರ್ಪಿಸಿಕೊಂಡು ಸುಖಿಸುವನಲ್ಲದೆ,
ಒಂದನರಿಯದೆ ಸಂದವರೆಂದು, ಬಂದ ಬಂದ ಪದಾರ್ಥವನು,
ಸಂಧಿ ಸಂಧಿಸಿ ಕೊಟ್ಟು ಕೊಂಡು,
ಬೆಂದುಹೋಗುವ ಮಂದಮತಿಯಂತಲ್ಲ
ಗುರುನಿರಂಜನ ಚನ್ನಬಸವಲಿಂಗ ನಿಮ್ಮ ಪ್ರಸಾದಿ. || ೩೫೨ ||

೩೫೩

ಮರೆದು ಕೊಟ್ಟು ಕೊಂಡರೆ ಸುಖವಾಯಿತ್ತು ಲಿಂಗಕ್ಕೆ.
ಹರಿದು ಕೊಟ್ಟು ಕೊಂಡರೆ ಪರಿಣಾಮವಾಯಿತ್ತು ಜಂಗಮಕ್ಕೆ.
ತೊರೆದು ಕೊಟ್ಟು ಕೊಂಡರೆ ಆನಂದವಾಯಿತ್ತು
ಗುರುನಿರಂಜನ ಚನ್ನಬಸವಲಿಂಗಕ್ಕೆ ಪ್ರಸಾದಿಯಮುಖದಿಂದೆ. || ೩೫೩ ||

೩೫೪

ನೇಮಿಸಿದ ನಿಲುವಿಂಗೆ ಕಾಮಿಸಿ ಬಂದಲ್ಲಿ ಕಲ್ಪಿತವೇಕಯ್ಯಾ ?
ಕರ್ಮವನುಂಡರೆ ತ್ರಿವಿಧದ್ರೋಹ.
ಅರಿದರ್ಪಿಸು ಗುರುನಿರಂಜನ ಚನ್ನಬಸವಲಿಂಗಕ್ಕೆ ಪ್ರಸಾದಿಯಾದಡೆ. || ೩೫೪ ||

೩೫೫

ಅರ್ಪಿತವನರಿಯದ ಕಾಯಾರ್ಪಿತ ಕರ್ಮದಬೀಜ.
ಅರ್ಪಿತವನರಿಯದ ಕರಣಾರ್ಪಿತ ದುಃಖದಾಗರ.
ಅರ್ಪಿತವನರಿಯದ ಭಾವಾರ್ಪಿತ ಭವದ ಬೀಡು.
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಅರ್ಪಿತವನರಿದು ಅರ್ಪಿಸಿಕೊಂಬ ಪರಮಪ್ರಸಾದಿ. || ೩೫೫ ||

೩೫೬

ಮದಮಲದ ಸೋಂಕನಳಿದ ಸದಮಲಪ್ರಸಾದಿ
ಸಾವಧಾನಮುಖಸನ್ನಿಹಿತನಾಗಿ, ನಡೆನುಡಿಯೊಳೊಪ್ಪಿ ಚರಿಸುವನಲ್ಲದೆ
ಆ ಮದಜಡದೇಹಿಗಳಂತೆ ಅರಿವಿನ ಬೆಳಗು ಮರೆದು
ಮನವರಿದಂತೆ ಕಾಯ ಪ್ರಾಣವ ಕಂಡು ಸುಖಿಸಿಕೊಂಬುವನಲ್ಲ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಅಜಡಾನಂದಮುಖಿ. || ೩೫೬ ||

೩೫೭

ನಿಚ್ಚನಿರ್ಮಲ ಅಚ್ಚಪದಾರ್ಥವನು
ಸಚ್ಚಿದಾನಂದಲಿಂಗಸನ್ನಿಹಿತ ಸುಖಾನಂದಮಯ ಅವಿರಳಪ್ರಸಾದಿ
ಅರ್ಪಿಸಿ ಕೊಂಬ ದ್ವೈತಸುಖಿಯಲ್ಲ, ಅರ್ಪಿಸದೆ ಕೊಂಬ ಅದ್ವೈತಸುಖಿಯಲ್ಲ,
ಅರ್ಪಿಸದೆ ಅರ್ಪಿಸಿ ಕೊಂಬ ನಿತ್ಯ ಪರಿಣಾಮಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೩೫೭ ||

೩೫೮

ತನುವಿಡಿದು ಮಾಡಿದ ಪದಾರ್ಥವು ಘನಲಿಂಗಕ್ಕೆ ಸಲ್ಲದು.
ಮನವಿಡಿದು ಮಾಡಿದ ಪದಾರ್ಥವು ಅನುವಿಂಗೆ ಸೊಗಸದು.
ಧನವಿಡಿದು ಮಾಡಿದ ಪದಾರ್ಥವು ಪರಮಲಿಂಗಕ್ಕೆ ಸಮನಿಸದು.
ಅದು ಕಾರಣ ತನು ಮನ ಧನವಿಡಿದ ಸುಖಿಗಳು
ಗುರುನಿರಂಜನ ಚನ್ನಬಸವಲಿಂಗಕ್ಕತ್ತತ್ತ ದೂರ. || ೩೫೮ ||

೩೫೯

ಪ್ರಸಾದಿ ಪ್ರಸಾದಿಗಳೆಂಬ ಕಸಮಲಯುಕ್ತರನೇನೆಂಬೆನಯ್ಯಾ !
ಹಸಿವಿನಿಚ್ಛೆಗೆ ಹರಿದಾಡಿ ಅಸುವಿನ ಪ್ರಕಾಶದಲ್ಲಿ
ಅನುಗೆಟ್ಟು, ತಿಂಬುವ ಅಬದ್ಧ[ರು] ಪರಮಪ್ರಸಾದಿಗಳಹರೆ ?
ಅಂಗದ ಮುಖವ ಲಿಂಗವರಿಯದು, ಲಿಂಗದ ಮುಖವ ಅಂಗವರಿಯದು.

ಕಂಗಳು ಕೆಟ್ಟು, ಕಲ್ಪಿಸಿಕೊಂಬ ಭಂಗಭವಿಗಳು ಲಿಂಗಪ್ರಸಾದಿಗಳಹರೆ ?
ಹುಟ್ಟು ಹೊಂದಿಸ ಕಷ್ಟ, ಕಳೆಯದೆ, ಹರಟೆಯೆತ್ತಿ
ಹೊಟ್ಟೆಹೊರವ ಭ್ರಷ್ಟಮಾನವರು ಶ್ರೇಷ್ಠಪ್ರಸಾದಿಗಳಹರೆ
ಗುರುನಿರಂಜನ ಚನ್ನಬಸವಲಿಂಗಾ ? || ೩೫೯ ||

೩೬೦

ಆಡುವರಯ್ಯಾ ಅಂಗವ ಹೊತ್ತು,
ನೋಡುವರಯ್ಯಾ ಕಂಗಳು ಕೆಟ್ಟು,
ಬೇಡುವರಯ್ಯಾ ಬಾಯಿಸವಿಗೆ,
ಹಾಡುವರಯ್ಯಾ ಅಶನವ ಕಂಡು,
ಕೂಡುವರಯ್ಯಾ ಆಡುವ ರಚನೆಗೆ,
ಸತ್ತು ಹೋಗುವರಯ್ಯಾ ದುಃಸಂಸಾರದೊಳಗೆ,
ಗುರುನಿರಂಜನ ಚನ್ನಬಸವಲಿಂಗಾರ್ಪಿತವನರಿಯದೆ
ಬೀಳುವರಯ್ಯಾ ನರಕದೊಳಗೆ. || ೩೬೦ ||

೩೬೧

ಕಂಗಳ ಕಾಂತಿಯನರಿಯದೆ ಅರ್ಪಿತವೆಲ್ಲಿಹದೊ ?
ಕಾಯದ ಕಳೆಯನರಿಯದೆ ಅರ್ಪಿತವೆಲ್ಲಿಹದೊ ?
ಕರ್ಣದ ಹೊಳಪನರಿಯದೆ ಅರ್ಪಿತವೆಲ್ಲಿಹದೊ ?
ನಾಲಿಗೆಯ ಸುಖವಕಾಣದೆ ಅರ್ಪಿತವೆಲ್ಲಿಹದೊ ?
ಘ್ರಾಣದ ಪ್ರಾಣವನರಿಯದೆ ಅರ್ಪಿತವೆಲ್ಲಿಹದೊ ?
ಹೃದಯದ ಬೆಳಗನರಿಯದೆ ಅರ್ಪಿತವೆಲ್ಲಿಹದೊ ?
ಅಸಮ ಗುರುನಿರಂಜನ ಚನ್ನಬಸವಲಿಂಗದ ಸುಳುಹಕಾಣದೆ
ಅರ್ಪಿತವೆಲ್ಲಿಹದೊ ? || ೩೬೧ ||

೩೬೨

ಅರಿಯಬಲ್ಲ ಹಿರಿಯರೆಂದು
ನೋಡಿಕೊಡುವರಯ್ಯಾ ಅಜ್ಞಾನಿಗಳು.
ಲಿಂಗವಬಲ್ಲ ಸಂಗವಿರಹಿತರೆಂದು
ಮುಟ್ಟಿಕೊಡುವರಯ್ಯಾ ಅಂಗಹೀನರು.
ಜಂಗಮಾರ್ಪಿತವಬಲ್ಲ ಜಗದಾರಾಧ್ಯರೆಂದು
ಸವಿದುಕೊಡುವರಯ್ಯಾ ಜಿಹ್ವೆಲಂಪಟರು.
ಪ್ರಸಾದವಬಲ್ಲ ಪ್ರಸಾದಿಗಳೆಂದು

ಕೇಳಿಕೊಡುವರಯ್ಯಾ ಶಬ್ದಹೀನರು.
ಸಾವಧಾನಭಕ್ತಿಯ ವಾಸನೆಯ ಬಲ್ಲವರೆಂದು
ಸೇವಿಸಿಕೊಡುವರಯ್ಯಾ ಮೂಕೊರೆಯರು.
ಮಹಾತೃಪ್ತಿಯ ಬಲ್ಲ ಸಮುಹೃದಯರೆಂದು
ಪರಿಣಾಮಿಸಿಕೊಡುವರಯ್ಯಾ ಅಂತಃಶೂನ್ಯರು.
ಗುರುನಿರಂಜನ ಚನ್ನಬಸವಲಿಂಗದ ನಿಜವನರಿಯದೆ
ವಾಗ್ಬ್ರಹ್ಮವ ನುಡಿವರಯ್ಯಾ ಉಚ್ಛಿಷ್ಟಭುಂಜಕರು. || ૩೬೨ ||

૩೬૩

ಬಹಿರ್ಮುಖಸುಖವಿರಹಿತಂಗೆ ಸಗುಣಾರ್ಪಿತ ಶೂನ್ಯ ಕಾಣಾ.
ಅಂತರ್ಮುಖಸುಖವಿರಹಿತಂಗೆ ನಿರ್ಗುಣಾರ್ಪಿತ ಶೂನ್ಯ ಕಾಣಾ.
ಸಮತೆಮುಖಸುಖವಿರಹಿತಂಗೆ ಸನ್ನಿಹಿತಸುಖಾರ್ಪಿತ ಶೂನ್ಯ ಕಾಣಾ.
ಈ ತ್ರಿವಿಧಾರ್ಪಿತ ನಾಸ್ತಿಯಾಗಿ ಗುರುನಿರಂಜನ ಚನ್ನಬಸವಲಿಂಗ
ಪ್ರಸಾದಿಯೆಂದಡೆ ನಾಯಕನರಕ ತಪ್ಪದು ಕಾಣಾ. || ૩೬૩ ||

૩೬೪

ಉಪಾಧಿವಿಡಿದು ಮಾಡುವ ಭಕ್ತನ ಮನೆಯ
ಕೆಟ್ಟಕೂಳ ತಿನ್ನಲಾಗದು ಶಿವಜ್ಞಾನಿಗಳು.
ಅದೇನು ಕಾರಣವೆಂದೊಡೆ :
ಲಿಂಗತ್ರಯವನು ಮಾರಿ ಅಂಗತ್ರಯವನು ತುಂಬಿ
ಮಂಗಲಮಹಿಮರೆಂದು ಭಂಗವಿಟ್ಟಾಡುವ ಜಂಗುಳಿಗಳ ಸಂಗ ಸಹಪಂಕ್ತಿ
ಪಂಚಮಹಾಪಾತಕವೆಂದು ಕಂಗಳಿಂದೆ ನಿರೀಕ್ಷಿಸಲೊಲ್ಲರು
ನಮ್ಮ ಗುರುನಿರಂಜನ ಚನ್ನಬಸವಲಿಂಗದ ನಿಜಶರಣರು. || ૩೬೪ ||

૩೬೫

ದಾಸೋಹಿ ದಾಸೋಹಿಗಳೆಂದು ಬೇಸರಿಲ್ಲದೆ ಅಂಚೆಬೆಂತನಂತೆ
ದೇಶ ದೇಶವ ತಿರುಗಿ ಆಸೆಯೆಂಬ ಅದ್ಭುತ ಅಂಗಗೊಂಡು
ಹೇಸಿಕೆಯೊಳು ಬಿದ್ದೇಳದ ಮಕ್ಷಿಕನಂತೆ
ಮಲಬದ್ಧ ಮನುಜರ ಬೋಧಿಸಿ ಕಾಡಿ ಕರೆಕರೆಸಿ,
ಕಾಸಾದಿ ದ್ರವ್ಯವ ಕೊಂಡು ಬಂದು ಹಾಸಿ ಹಬ್ಬಿಕಿಕ್ಕಿ,
ನಾಮಾಡಿದೆನೆಂಬ ನಾಯಿಯ ತೇಜವ ಹೊತ್ತು ತೊಳಲುವ
ತಥ್ಯ ಭಂಡರ ಸೋಗಿಗೆ ಸೊಗಸರಯ್ಯಾ
ನಿಮ್ಮ ಭಕ್ತರು ಗುರುನಿರಂಜನ ಚನ್ನಬಸವಲಿಂಗಾ. || ૩೬೫ ||

೩೬೬

ತನುಲೋಭಿಯ ಭಕ್ತಿ ಗುರುದ್ರೋಹ :
ಮನಲೋಭಿಯ ಪೂಜೆ ಲಿಂಗದ್ರೋಹ.
ಧನಲೋಭಿಯ ದಾಸೋಹ ಜಂಗಮದ್ರೋಹ.
ಈ ತ್ರಿವಿಧಲೋಭಿಯ ಸಂಗಸಂಭಾಷಣೆಯಿಂದೆ,
ಭವದ ಬಲೆ ಹರಿಯದು ನೋಡಾ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೩೬೬ ॥

೩೬೭

ಜಂಗಮವಿರಹಿತ ಲಿಂಗಾರ್ಪಿತ
ಸಂಗವಿಲ್ಲದ ಸತಿಪತಿಯಂತೆ ಸುಖವೆಲ್ಲಿಹದೊ !
ಕಂಗಳರಿಯದ ನೋಟ
ಕನಸಿನೊಳಗಿನ ಬೇಟ ನಿಜವೆಲ್ಲಿಹದೊ !
ಇದು ನಿಜವಲ್ಲ, ಗುರುನಿರಂಜನ ಚನ್ನಬಸವಲಿಂಗಕ್ಕೆ ದೂರ. ॥ ೩೬೭ ॥

೩೬೮

ಮಾಡಿ ಕಾಣುವದು ಗುರುಸೇವೆಯ,
ನೋಡಿ ಕಾಣುವದು ಶಿವಲಿಂಗವ,
ನೀಡಿ ಕಾಣುವಮು ಜಂಗಮಕ್ಕೆ.
ಈ ತ್ರಿವಿಧದೊಳೊಂದನಗಲಿದರೆ ಸಂದೇಹಸಂಬಂಧ.
ಜ್ಞಾನವಿಲ್ಲದಾಚಾರ ಅನಾಚಾರವಾದುದಾಗಿ,
ಜಂಗಮವಿಲ್ಲದ ಮಾಟಕೋಟಲೆಗೊಳಗಾಗಿತ್ತು
ಗುರುನಿರಂಜನ ಚನ್ನಬಸವಲಿಂಗಾ. ॥ ೩೬೮ ॥

೩೬೯

ಕತ್ತಲೆಯ ಕೈಮರೆ ಜನಸೇವೆ ಸಂಬಂಧ
ಅರುಹಿರಿಯರೆಲ್ಲ ಹಿಂದು ಮುಂದರಿಯದೆ
ಸಂದಿನಡೆವರು ಸವೆಯದ ಬಟ್ಟೆಯ.
ಇದನರಿದು ಬೆಂದ ಬೇಗೆಯನುರುಹಿ,
ಬಂದ ಬರವನರಿದು ಸಂತತ ಸಕಲನುಮತವಾಗಿ
ಬಾಗಿ ನಿಂದು ಭಾವಿಸಿ ಅರ್ಪಿಸಿಕೊಳಬಲ್ಲ
ಅವಧಾನಿಗಲ್ಲದೆ ಅರ್ಪಿತವನರಿಯಬಾರದು
ಗುರುನಿರಂಜನ ಚನ್ನಬಸವಲಿಂಗಾ. ॥ ೩೬೯ ॥

೩೭೦

ಸತ್ಯವನರಿಯದೆ ಮಿಥ್ಯ ಮಾಯೆಯ ತುತ್ತಿನೊಳಗಿರ್ದು
ಅತ್ತಲರಿದರ್ಪಿಸುವೆನೆಂಬ ಅಬದ್ಧ ಮೂಢರಿಗೆ
ಅಮಲಪ್ರಸಾದ ಅಳವಡಲರಿಯದು.
ಕರ್ಮಕತ್ತಲೆಯ ಕಳೆದು ನಿರ್ಮಲಮಥನದಿಂದೊಗೆದ,
ನಿಜಮುಖಸನ್ನಿಹಿತನಾಗಿ, ತ್ರಿವಿಧವನರ್ಪಿಸಿ ಅವಧರಿಸಬಲ್ಲ
ಅಪ್ರತಿಮ ಪ್ರಸಾದಿಗಲ್ಲದೆ ಇಲ್ಲ.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಪ್ರಸಾದಿಗೆ ನಮೋ ನಮೋ ಎಂದು ಬದುಕಿದೆನ್ನೈ. || ೩೭೦ ||

೩೭೧

ಗುರುಮುಖದಿಂದೊಗೆದ ನಿರವಯಾನಂದ ಪ್ರಸಾದಮೂರ್ತಿಗೆ
ಪರಿಯಿಂದೆಸೆವ ತನು ಮನ ಭಾವಾದಿ ಸಚ್ಚಿತ್ಪದಾರ್ಥವನು
ಸಂಚಲವಿಲ್ಲದೆ ಸಾವಧಾನಿಯಾಗಿ,
ಭಿನ್ನವಳಿದರ್ಪಿಸಿಯಾನಂದಿಸಬಲ್ಲಾತನೆ ಪ್ರಸಾದಿಯಯ್ಯಾ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೩೭೧ ||

೩೭೨

ಸಾಕಾರವಾಗಿ ಬಂದ ಪದಾರ್ಥವನು ನಿರಾಕಾರಲಿಂಗಕೆ ಅರ್ಪಿಸಿ
ಪ್ರಸಾದವ ಕೊಂಡಿಹೆವೆಂದಡೆ ಅದು ದಿಟವೆನ್ನಲರಿಯದು.
ಸಾಕಾರ ಕಾಯ ನಿರಾಕಾರ ನಿಜ ಅರ್ಪಿತವನಾರ್ಪಿತ ನೋಡಾ.
ಅರಿದು ಅರಿಯದರ್ಪಿಸಬಲ್ಲರೆ ಆತ ಅಚ್ಚಪ್ರಸಾದಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೩೭೨ ||

೩೭೩

ಅರ್ಪಿಸಿಕೊಂಡಿಹೆನೆಂದು ಹುಸಿಯನೆ ತುಂಬುವರು :
ಅರ್ಪಿಸಿದೆನೆಂಬುದು ಹುಸಿ.
ಲಿಂಗವೆಲ್ಲಿಹದೊ ? ಅಂಗವೆಲ್ಲಿಹದೊ ? ಪದಾರ್ಥವೆಲ್ಲಿಹದೊ ?
ಲಿಂಗಾಂಗಪದಾರ್ಥವನರಿದರ್ಪಿಸಬಲ್ಲಾತಂಗಲ್ಲದೆ
ಗುರುನಿರಂಜನ ಚನ್ನಬಸವಲಿಂಗಾ ನಿಜಪ್ರಸಾದವೆಲ್ಲರಿಗೆಲ್ಲಿಹದೊ ? || ೩೭೩||

೩೭೪

ಕಾಯವನರ್ಪಿಸಲರಿಯದೆ ಶುದ್ಧಪ್ರಸಾದಿಯೆಂದರೆ
ಆಣವಮಲಸಂಬಂಧಿ ಸಂಚಿತಸುಖಿ.

ಮನವನರ್ಪಿಸಲರಿಯದೆ ಸಿದ್ಧಪ್ರಸಾದಿಯೆಂದರೆ
ಮಾಯಾಮಲಸಂಬಂಧಿ ಪ್ರಾರಬ್ಧಸುಖಿ.
ಪ್ರಾಣವನರ್ಪಿಸಲರಿಯದೆ ಪ್ರಸಿದ್ಧಪ್ರಸಾದಿಯೆಂದರೆ
ಕಾರ್ಮಿಕಮಲಸಂಬಂಧಿ ಆಗಾಮಿಸುಖಿ.
ಮಲತ್ರಯಸಂಬಂಧವಾಗಿ ಕರ್ಮತ್ರಯನುಂಬ ಭ್ರಾಮಕರರಿವರೆ
ತ್ರಿವಿಧ ಪ್ರಸಾದದಿರವ ?
ಅನಾದಿಸಂಸಿದ್ಧ ನಿರಂಜನ ಪ್ರಸಾದಿಯೇ ಬಲ್ಲನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. || ೩೭೪ ||

೩೭೫

ಪೃಥ್ವಿಯಂಶವನಳಿದು ಆಚಾರಲಿಂಗವನರಿದು,
ಸುಚಿತ್ತವೆಂಬ ಹಸ್ತದಿಂದೆ ಶ್ರದ್ಧೆಯುಕ್ತವಾಗಿ
ಅರ್ಪಿಸಿಕೊಳ್ಳಬಲ್ಲರೆ ಪ್ರಸಾದಿಯಯ್ಯಾ.
ಅಪ್ಪುವಿನಂಶವನಳಿದು ಗುರುಲಿಂಗವನರಿದು
ಸುಬುದ್ಧಿಯೆಂಬ ಹಸ್ತದಿಂದೆ ನೈಷ್ಠಿಕಾಯುಕ್ತವಾಗಿ
ಅರ್ಪಿಸಿಕೊಳ್ಳಬಲ್ಲರೆ ಪ್ರಸಾದಿಯಯ್ಯಾ.
ಅಗ್ನಿಯಂಶವನಳಿದು ಶಿವಲಿಂಗವನರಿದು
ನಿರಹಂಕಾರವೆಂಬ ಹಸ್ತದಿಂದೆ ಸಾವಧಾನಯುಕ್ತವಾಗಿ
ಅರ್ಪಿಸಿಕೊಳ್ಳಬಲ್ಲರೆ ಪ್ರಸಾದಿಯಯ್ಯಾ.
ವಾಯುವಿನಂಶವನಳಿದು ಜಂಗಮಲಿಂಗವನರಿದು
ಸುಮನವೆಂಬ ಹಸ್ತದಿಂದೆ ಅನುಭಾವಯುಕ್ತವಾಗಿ
ಅರ್ಪಿಸಿಕೊಳ್ಳಬಲ್ಲರೆ ಪ್ರಸಾದಿಯಯ್ಯಾ.
ಆಕಾಶದಂಶವನಳಿದು ಪ್ರಸಾದಲಿಂಗವನರಿದು
ಸುಜ್ಞಾನವೆಂಬ ಹಸ್ತದಿಂದೆ ಆನಂದಯುಕ್ತವಾಗಿ
ಅರ್ಪಿಸಿಕೊಳ್ಳಬಲ್ಲರೆ ಪ್ರಸಾದಿಯಯ್ಯಾ.
ಇಂತು ಪಂಚತತ್ವಪ್ರಕೃತಿಯನಳಿದು
ಗುರುನಿರಂಜನ ಚನ್ನಬಸವಲಿಂಗವನರಿದು ಸದ್ಭಾವವೆಂಬ ಹಸ್ತದಿಂದೆ
ಸಮರಸಯುಕ್ತವಾಗಿ ಅರ್ಪಿಸಿಕೊಳ್ಳಬಲ್ಲರೆ ಪ್ರಸಾದಿಯಯ್ಯ. || ೩೭೫ ||

೩೭೬

ಅರ್ಪಿತಾಂಗದ ಮೇಲಿಪ್ಪ ಅಖಂಡಲಿಂಗಕ್ಕೆ
ಅರ್ಪಿತವನರ್ಪಿಸಿ ಆನಂದಿಸಿಕೊಂಬುವನಯ್ಯ ತನ್ನ ವಿನೋದಕ್ಕೆ.

ಅರ್ಪಿತ ಪ್ರಾಣದಮೇಲಿಪ್ಪ ಅವಿರಳಲಿಂಗಕ್ಕೆ
ಅರ್ಪಿತವನರ್ಪಿಸಿ ಆನಂದಿಸಿಕೊಂಬುವನಯ್ಯ ತನ್ನ ವಿನೋದಕ್ಕೆ,
ಅರ್ಪಿತ ಭಾವದಮೇಲಿಪ್ಪ ಅಭಿನ್ನ ಲಿಂಗಕ್ಕೆ
ಅರ್ಪಿತವನರ್ಪಿಸಿ [ಆನಂದಿಸಿ] ಕೊಂಬುವನಯ್ಯ ತನ್ನ ವಿನೋದಕ್ಕೆ.
ಅರ್ಪಿಸಿಕೊಂಡಿಪ್ಪ ಗುರುನಿರಂಜನ ಚನ್ನಬಸವಲಿಂಗಕ್ಕೆ
ಅರ್ಪಿತವನರ್ಪಿತವಾಗಿರ್ಪನಯ್ಯ ತನ್ನ ವಿನೋದಕ್ಕೆ ನಿಮ್ಮ ಪ್ರಸಾದಿ. ॥ ೩೭೬॥

೩೭೭

ಹಲಾಯುಧನು ತನ್ನುಡಿಯೊಳಿರ್ದ ಯವನಾಳದಿ
ಸಕಲಬೀಜವನು ಚೆನ್ನಾಗಿ ಭೂಮಿಯೊಳು ಬಿತ್ತಲು
ಆ ಬಿತ್ತು ಅಂಕುರಿಸಿ ಪಲ್ಲವಿಸಿ ತಾ ಸಹಿತ ಒಡೆಯಂಗೆಡೆಯಾಗುವುದು.
ಸದ್ಗುರುನಾಥನು ತನ್ನ ಚಿದ್ಭಾವದಲ್ಲಿರ್ದ ತ್ರಿವಿಧನುಗ್ರಹವನು
ನೆರೆ ಭೂಪ್ಯಾದಿ ತತ್ವಯುಕ್ತವಾದ ಆತ್ಮನ ಹೃದಯದಲ್ಲಿ ಉಪದೇಶಿಸಲು,
ಅಂಕುರಿಸಿ, ಪಲ್ಲವಿಸಿ ಸರ್ವಾಚಾರಸಂಪತ್ತಿನಿಂದೆ
ಗುರುಚರಲಿಂಗಕ್ಕೆ ತಾಸಹಿತರ್ಪಿಸಿ ಆನಂದಗೊಡಬಲ್ಲರೆ ಅದು ಸಾಹಸ.
ಅಂತಲ್ಲದೆ ಕಂಡವರ ಕಂಡುಕೊಂಡು ನಡೆಗೆಟ್ಟು ನುಡಿಹೀನನಾಗಿ
ಮಡಿದು ಹೋಗುವ ನರಕಿಗಳು ನಿರುತಪ್ರಸಾದಿಗಳಹರೆ
ಗುರುನಿರಂಜನ ಚನ್ನಬಸವಲಿಂಗಕ್ಕೆ. ॥ ೩೭೭ ॥

೩೭೮

ತಾನು ಪ್ರಸಾದಿಯೆನಿಸಿಕೊಂಬ ಹಿರಿಯನು
ತನ್ನ ಪ್ರಾಣವಾದ ಗುರುಚರಲಿಂಗಕ್ಕೆ ತನ್ನನರಿಯದೆ ಮಲತ್ರಯಕ್ಕೆ
ಮಗ್ನತೆಯಾಗಿ ಹೊತ್ತುಗಳೆದರೆ
ಕಿತ್ತು ಹಾಕುವರು ನಾಯಕನರಕದೊಳಗೆ ಅನಂತಕಾಲ
ಗುರುನಿರಂಜನ ಚನ್ನಬಸವಲಿಂಗಾ. ॥ ೩೭೮ ॥

೩೭೯

ಗುರುಪ್ರಸಾದಿಯೆನಿಸಿಕೊಂಡಬಳಿಕ
ತನ್ನ ಕಾಯವನುಪಚಾರದನುಕೂಲಿಗಲಸಿದರೆ
ಆ ಕಾಯ ಮಾಯೋಚ್ಚಿಷ್ಟ.
ಲಿಂಗಪ್ರಸಾದಿಯೆನಿಸಿಕೊಂಡಬಳಿಕ
ತನ್ನ ಕರಣವ ಮಂತ್ರಧ್ಯಾನ ಜಪಸ್ತೋತ್ರೋಪಚಾರದನುಕೂಲಿಗಲಸಿದರೆ
ಆ ಕರಣ ಮಾಯೋಚ್ಚಿಷ್ಟ.

ಜಂಗಮಪ್ರಸಾದಿಯೆನಿಸಿಕೊಂಡಬಳಿಕ
ತನ್ನಾತ್ಮವನು ದಾಸೋಹದುಪಚಾರದನುಕೂಲಿಗಲಸಿದರೆ
ಆ ಆತ್ಮನು ಮಾಯೋಚ್ಛಿಷ್ಟ.
ಇಂತು ತ್ರಿವಿಧಪ್ರಸಾದಿಗಳೆನಿಸಿಕೊಂಡಬಳಿಕ
ತ್ರಿವಿಧಕ್ಕನುಕೂಲಿಯಾಗದಿರ್ದಡೆ ತ್ರಿವಿಧೋಚ್ಛಿಷ್ಟ.
ತ್ರಿವಿಧೋಚ್ಛಿಷ್ಟವಾದ ಜೀವನಿಗೆ ನಾಯಕ ನರಕ ತಪ್ಪದು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೩೭೯ ॥

೩೮೦

ಕಾಯ ಮನ ಭಾವದಲ್ಲಿ ಸಂಬಂಧವಾದ ಮಾಯೋಚ್ಛಿಷ್ಟವ
ತೊಳೆದುಕೊಂಡು ಬಂದಲ್ಲದೆ ಪ್ರಸಾದಿಯಲ್ಲ.
ಅದೇನು ಕಾರಣವೆಂದಡೆ,
ಕುಲಾಲನ ಸಂಪರ್ಕದಿಂದಾದ ಭಾಂಡಗಳನು
ತೊಳೆದುಕೊಂಡಲ್ಲದೆ ಭೋಜನಬಳಕೆಗೆ ಸಲ್ಲ.
ಸಲ್ಲಿದ ಬಳಿಕ ಪೂರ್ವಸೋಂಕವಾದರೆ ಹೊರಬಳಕೆಯನುಳಿದುಬಾರದು.
ಪ್ರಸಾದಿಯೆನಿಸಿ ಪೂರ್ವಸೋಂಕವಾದರೆ ನರಕವನುಳಿದುಬಾರದು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೩೮೦ ॥

೩೮೧

ಕಾಲಿಲ್ಲದ ಗುರು ಕಣ್ಣಿಲ್ಲದ ಕಂದಗೆ
ಬಣ್ಣವಿಲ್ಲದ ತಲೆಯ ತೋರಿದರೆ
ಕೈಯಿಲ್ಲದೆ ಹಿಡಿದು ಕರ್ಮವಿಲ್ಲದ ಕಾಯದ ಮೇಲೆ ಮಡಗಿದರೆ
ಹೊರಗೊಳಗೆ ಸುಳಿವುದೈ.
ಆ ಸುಳಿಹಿನ ಬೆಳಗಿನೊಳಗೆ ಕಳೆಯುಳ್ಳ ಪುರುಷನ ಪುತ್ಥಳಿಯ ಕಂಡೆನೈ.
ಆ ಪುತ್ಥಳಿಗೆ ಸಕಲವ ಕೊಟ್ಟು ನಿಃಕಲವ ನಿಲಿಸಿ ನಿರಂಜನವನಿತ್ತಡೆ
ಎತ್ತಿಕೊಂಡಿತ್ತ ತನ್ನ ಗುರುನಿರಂಜನ ಚನ್ನಬಸವಲಿಂಗ ಪ್ರಸಾದಿಗೆ. ॥ ೩೮೧ ॥

## ಪ್ರಸಾದಿಯ ಭಕ್ತಸ್ಥಲ

೩೮೨

ಮಿಥ್ಯವಿಲ್ಲದ ಭಕ್ತನ ಭಾವ
ನಿತ್ಯ ಜಂಗಮಾರ್ಚನೆಯನೆ ಮುಂದುಗೊಂಡಿಪ್ಪುದು.
ಭೃತ್ಯತ್ವವೆಂಬ ರತ್ನಾಂಬರವ ಹೊದ್ದು

ಕರ್ತೃಗಳಡಿಯನು ಕೂಡಿದ ಕರದ ಮೇಲೆ ಕುಡಿನೋಟ ಬಿಡದಿಹುದು,
ಸತ್ಯಪದಾರ್ಥವ ನೀಡಿ ಮಿಕ್ಕುದಕ್ಕೆಳಸಲಲ್ಲಿಟ್ಟಿಹನು ಚಿತ್ತವ.
ಒಡೆಯರಿಂಗಿತವನರಿಯಲಿಟ್ಟಿಹನು ಮನವ.
ಸಮತೋಪಚಾರ ಸಮರಸ ನುಡಿಯನನುಕೂಲಿಗಿಟ್ಟಿಹನು ಗುರುಚರಲಿಂಗ.
ಎನ್ನ ಪ್ರಾಣವೆಂಬುದ ಸುಜ್ಞಾನದಲ್ಲಿಟ್ಟಿಹನು
ಗುರುನಿರಂಜನ ಚನ್ನಬಸವಲಿಂಗ ಮೆಚ್ಚುವಂತೆ. || ೩೮೨ ||

೩೮೩

ಪೃಥ್ವಿಯಲ್ಲಿ ತಲೆಯ ಕಂಡು ಪರಿಮಳವ ಹೂಸಿಕೊಳಬಲ್ಲರೆ ಭಕ್ತನೆಂಬೆ.
ನೀರೊಳಗೆ ತಲೆಯ ಕಂಡು ರಸವ ಕುಡಿಸಿಕೊಳಬಲ್ಲರೆ ಭಕ್ತನೆಂಬೆ.
ಬೆಂಕಿಯಲ್ಲಿ ತಲೆಯ ಕಂಡು ಸಕಲವ ತೋರಿಕೊಳಬಲ್ಲರೆ ಭಕ್ತನೆಂಬೆ.
ಗಾಳಿಯಲ್ಲಿ ತಲೆಯ ಕಂಡು ಅಪ್ಪಿಕೊಳಬಲ್ಲರೆ ಭಕ್ತನೆಂಬೆ.
ಗಗನದಲ್ಲಿ ತಲೆಯ ಕಂಡು ಕೇಳಿಸಿಕೊಳಬಲ್ಲರೆ ಭಕ್ತನೆಂಬೆ.
ಯಜಮಾನನಲ್ಲಿ ತಲೆಯ ಕಂಡು ಪರಿಣಾಮಿಸಿಕೊಳಬಲ್ಲರೆ ಭಕ್ತನೆಂಬೆ.
ಈ ತಲೆಯ ಸುಖವನರಿಯದೆ ಕೈಯಲ್ಲಿ ಹಿಡಿದು ಕಾಣಲರಿಯದೆ,
ತಿರುಗಾಡುವವರನೆಂತು ಭಕ್ತನೆಂಬೆನೈ ಗುರುನಿರಂಜನ ಚನ್ನಬಸವಲಿಂಗಾ? ||೩೮೩||

೩೮೪

ತ್ರಿವಿಧಾನುಗ್ರಹಸಂಬಂಧವಾದ ದೇಹ ಲಿಂಗಕ್ಷೇತ್ರವೆಂದು
ಸದ್ಗುರುನಾಥ ಕರಸ್ಥಲಕ್ಕೆ ಕೊಟ್ಟ ಲಿಂಗವ ಕಿರಿದು ಮಾಡಿ,
ಭೂಕ್ಷೇತ್ರದೊಳಗಿಪ್ಪ ಸ್ಥಾವರವ ಹಿರಿದೆಂದು,
ತೊಳಲಿ ಬಳಲಿ ಹೋಗಿ ಅರ್ಚನೆಯಾರಾಧನೆಯ ಮಾಡಿ
ಕರ್ಮವ ಕಳೆದು ನಿರ್ಮಲವಾದೆವೆಂಬ
ಚರ್ಮಗೇಡಿಗಳಿಗೆ ಎತ್ತಣನುಗ್ರಹ ಎತ್ತಣಭಕ್ತಿಯೈ
ಗುರುನಿರಂಜನ ಚನ್ನಬಸವಲಿಂಗಾ. || ೩೮೪ ||

೩೮೫

ಹರಗುರುವಾಕ್ಯಪ್ರಮಾಣವರಿಯದೆ ಅಜ್ಞಾನವಾವರಿಸಿ
ವಾರ ತಿಥಿಯೆಂದು, ಸಂಕ್ರಾಂತಿ ಅಮವಾಸ್ಯೆಯೆಂದು ನೇಮಿಸಿ,
ಮಾಡಿ ನೀಡಿ ಕರ್ಮ ಕಳೆದೆನೆಂಬ ಪರ್ಮಗೇಡಿಗಳ ನೋಡಾ !
ಮತ್ತೊಂದು ವೇಳೆ ಜಂಗಮ ಮನೆಗೆ ಬಂದರೆ ಅಷ್ಟಮೋರೆಯಿಕ್ಕುವ
ಗೊಡ್ಡು ಮಾದಿಗರ ಶಿವಭಕ್ತರೆಂದರೆ ಅಘೋರ ನರಕವೈ
ಗುರುನಿರಂಜನ ಚನ್ನಬಸವಲಿಂಗಾ. || ೩೮೫ ||

೩೮೬

ಭಿಕ್ಷೆಕ್ಕೆ ಬಂದಾ ಚರಮೂರ್ತಿಗಳ ಕಂಡು
ಕುಕ್ಷಿಯಲ್ಲಿ ಮರುಗುವ ಯಕ್ಕಲನರಕಿಗಳಿಗೆತ್ತಣ ಉಪದೇಶವಯ್ಯಾ ?
ಸುತ್ತಿರ್ದ ಪ್ರಪಂಚಕ್ಕೆ ಸವೆದು ಕರ್ತುಗಳಿಗೆ ಅರೆಕಾಸು ಸವೆಯದೆ
ನಾವು ನಿತ್ಯಭಕ್ತರೆಂದರೆ ಒತ್ತಿ ಹಾಕುವರು ಬಾಯಲ್ಲಿ ಹುಡಿಯಯ್ಯಾ ಯಮನವರು
ಗುರುನಿರಂಜನ ಚನ್ನಬಸವಲಿಂಗಕ್ಕೆ ದೂರವಾದ ದುರ್ಮುಖಿಗಳೆಂದು. ‖ ೩೮೬‖

೩೮೭

ಒಳ್ಳೆಯತನಕ್ಕೆ ಉಪದೇಶವಾಗಿ ಕಳ್ಳತನವೆರೆದು
ಕಡೆಗೆ ವಂಚನೆಯುಳ್ಳರೆ ಆಚಾರವಲಸಿತ್ತು,
ಕರ್ಮಕವಿಯಿತ್ತು, ಯುಕ್ತಿಗೆಟ್ಟಿತ್ತು, ಅವಿದ್ಯಾಶಕ್ತಿ ಅಟ್ಟಿಕೊಂಡಿತ್ತು,
ಭಕ್ತಿ ಬಯಲಾಯಿತ್ತು, ನಿರಯಮಾರ್ಗವಾವರಿಸಿ ಬಂಧನವನುಣಿಸಿತ್ತು
ಗುರುನಿರಂಜನ ಚನ್ನಬಸವಲಿಂಗವನುಳಿದ ಆ ಭಂಗಗೇಡಿಗಳಿಗೆ. ‖ ೩೮೭ ‖

೩೮೮

ಭಕ್ತಿವಿಹೀನ ಕಾಯಕ್ಕೆ ಲಾಂಛನವಿರ್ದಡೇನು ?
ನೆನಹಿಲ್ಲದ ಮನಕ್ಕೆ ವಿನಯನುಡಿ ಘನವಿರ್ದಡೇನು ?
ಆಪ್ಯಾಯನಕ್ಕರಿಯದ ದ್ರವ್ಯ ಅನಂತವಿರ್ದಡೇನು ?
ಬೂರದ ತರು, ಸಾರವಿಲ್ಲದ ಸಿಂದಿಯಗಿಡ, ಸೂಳೆ, ಸರ್ಪನ ತೆರ.
ಗುರುನಿರಂಜನ ಚನ್ನಬಸವಲಿಂಗವಲ್ಲಿ, ಅಂತಲ್ಲ ನಿಜಭಕ್ತನಿರವು. ‖ ೩೮೮ ‖

೩೮೯

ಎಚ್ಚರಿಸಿಕೊಟ್ಟ ಸಚ್ಚಿದಾನಂದ ಗುರುವಿಂಗೆ
ಮುಚ್ಚುಮರೆಯಾಗದೆ ಅಚ್ಯೋತ್ತಿವಂತಿರ್ದೆ.
ಅರ್ಪಿಸಲರಿಯದೆ ಕಾರಣಕ್ಕೆ ಬಂದ ಕರ್ತುಗಳನರಿದು,
ಅತ್ತಿತ್ತಲರಿಯದೆ ಚಿತ್ತವೆರಸಿ ಮರೆಯದೆ ಮರವಿರ್ದೆ ಅರ್ಪಿಸಲರಿಯದೆ.
ಬೋಧಾನಂದಮಯಮೂರ್ತಿಗಳನರಿದು ಭೇದವಿರಹಿತನಾಗಿ
ಆದಾದಿ ಸಕಲವನಿತ್ತು ಮರೆದಿರ್ದೆ ಅರ್ಪಿಸಲರಿಯದೆ.
ಗುರುನಿರಂಜನ ಚನ್ನಬಸವಲಿಂಗಕ್ಕೆ ಭೃತ್ಯನಾಗಿತ್ತು
ಮರೆದಿರ್ದೆ ಅರ್ಪಿಸಲರಿಯದೆ. ‖ ೩೮೯ ‖

೩೯೦

ಕೊಟ್ಟುಕೊಂಡೆನೆಂಬುದೊಂದುಳ್ಳರೆ ಒಂದಕ್ಕೆ ಭಂಗ,
ಕೊಡುಕೊಳ್ಳಿಯಳಿದುಳಿದರೆ ಎರಡಕ್ಕೆ ಬಂಗ.
ಒಂದು ಭಂಗ ಭವಕ್ಕೆ ಬೀಜ, ಎರಡು ಭಂಗ ಲೀಲೆಗೇಡು,
ಒಂದೆರಡರಿಯದೆ ಅಂದಂದಿಗಿತ್ತಡೆ
ಅವಧಾನಿಸಿಕೊ ಗುರುನಿರಂಜನ ಚನ್ನಬಸವಲಿಂಗಾ. ॥ ೩೯೦ ॥

೩೯೧

ಕಾಲವನರ್ಪಿಸಿ ಕಾಲದೊಳಗಿರ್ದೆ ಕರ್ತುಗಳವಸರಕ್ಕೆ ಭೃತ್ಯನಾಗಿ.
ಕರ್ಮವನರ್ಪಿಸಿ ಕರ್ಮದೊಳಗಿರ್ದೆ ಕಾರಣಕ್ಕೆ ಕಾರ್ಯನಾಗಿ.
ಸ್ವಯವನರ್ಪಿಸಿ ಪರವೆಂದೆನಿಸಿರ್ದೆ ಸ್ಥಲವಿರ್ದುದಾಗಿ.
ಗುರುನಿರಂಜನ ಚನ್ನಬಸವಲಿಂಗಕ್ಕೆ ಅರ್ಪಿಸುತಿರ್ದೆ
ಅನ್ಯವನರಿಯದೆ ಆಯತವಾಗಿ. ॥ ೩೯೧ ॥

೩೯೨

ಅಂಗವನರ್ಪಿಸಿದ ಮಂಗಲರೆಂದು ಹೇಳಿ ನಡೆವರಯ್ಯಾ
ಉಚ್ಛಿಷ್ಟವನರಿಯದೆ.
ಮನವನರ್ಪಿಸಿದ ಮಹಿಮರೆಂದು ಹೇಳಿ ನಡೆವರಯ್ಯಾ
ಮಲಸಂಬಂಧವನರಿಯದೆ.
ಪ್ರಾಣವನರ್ಪಿಸಿದ ಜಾಣರೆಂದು ಹೇಳಿ ನಡೆವರಯ್ಯಾ
ಮಾಯಾಮೋಹದ ಮಚ್ಚುಬಿಚ್ಚದೆ.
ಭಾವವನರ್ಪಿಸಿದ ಮಹಾನುಭಾವಿಗಳೆಂದು ಹೇಳಿ ನಡೆವರಯ್ಯಾ ಭ್ರಾಂತಿಹಿಂಗದೆ.
ಇಂತು ಚತುರಾರ್ಪಿತವಿಹೀನವಾಗಿ ಚತುರ್ವಿಧಸಾರಾಯರೆಂದರೆ
ಗುರುಲಿಂಗಜಂಗಮಪ್ರಸಾದ ಮರೆಯಾಗಿರ್ದವು
ಲಯಗಮನದತ್ತ ಕೆಡಹಿ ಗುರುನಿರಂಜನ ಚನ್ನಬಸವಲಿಂಗಾ. ॥ ೩೯೨ ॥

೩೯೩

ಎಚ್ಚರವಿರಲೆಂದು ನಿಶ್ಚಯಿಸಿದಿಷ್ಟ,
ಅಷ್ಟವಾಗಿ ಅಂಗಮನಪ್ರಾಣಭಾವಂಗಳಿಗೆ ಗೋಚರವಾಗಿರಲು,
ಅನ್ಯವ ನೆಚ್ಚಿ ನಾನು ಕೆಟ್ಟೆನಯ್ಯಾ ದಿಟವಾಗಿ.
ಚಂದ್ರ ಸೂರ್ಯಮಾರ್ಗವಿಡಿದು ಕಟುಕರೊಳಗಿರ್ದ ಸ್ವೈತಾನಸೌಖ್ಯವೇದಿ,
ಸಗುಣ ನಿರ್ಗುಣ ನಿರಾವಯವರಿದು ನಿವೇದಿಸಿಕೊಂಬ

ನಿಜಪ್ರಸಾದಿಯ ದರ್ಶನ ಸ್ಪರ್ಶನ ಸಂಭಾಷಣೆಯೆಂಬ
ಘನಪ್ರಸಾದವ ಕರುಣಿಸಯ್ಯಾ ಗುರುನಿರಂಜನ ಚನ್ನಬಸವಲಿಂಗಾ. ॥ ೩೯೩ ॥

೩೯೪

ಸುಜ್ಞಾನಸತ್ಕ್ರಿಯಾನುಭಾವ ಗುರುಲಿಂಗಜಂಗಮವೆನ್ನ
ಅಂಗ ಮನ ಪ್ರಾಣವೆಂದರಿದು,
ಕಸಗಳೆದು ವಿಷಯ ಪದಾರ್ಥವನು, ಸುಶೀಲ ಸಾವಧಾನದಿಂದರ್ಪಿಸಿ
ಅಸಮಪ್ರಸಾದವಕೊಂಡು,
ಪರಮಾನಂದಸುಖಿಮುಖಿಯಾಗಿರ್ದೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. ॥ ೩೯೪ ॥

೩೯೫

ಬೇರಿಲ್ಲದ ವೃಕ್ಷಕ್ಕೆ ಹಾರಲಿಲ್ಲದ ಪಕ್ಷಿ ಸಾರಿರ್ದ ಸಂಬಂಧವ ನೋಡಾ !
ನೀರಿಲ್ಲದೆ ಪಸರಿಸಿ ಗಂಧವಿಲ್ಲದ ಕುಸುಮದಿಂದಾದ
ಸಾರವಿಲ್ಲದ ಹಣ್ಣ ಸೇವಿಸುವದು ನೋಡಾ.
ಊರಿಲ್ಲದ ಹಾರುವ ಬೇರಿಲ್ಲದ ಉಂಗುಷ್ಠದಿಂದೆ
ತೋರಿ ತೋರಿಕೊಂಡು ಸುಖಿಸಿದ
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೩೯೫ ॥

೩೯೬

ಅಯ್ಯಾ, ಎನಗೆ ಬರುವ ಗಂಧದ್ರವ್ಯ, ನಿನ್ನನುಭಾವಿಸಿ ಬಂದ ಬರವಯ್ಯಾ.
ಎನಗೆ ಬರುವ ರಸದ್ರವ್ಯ ನಿನ್ನ ಸುಖಿಸಿ ಬಂದ ಬರವಯ್ಯಾ.
ಎನಗೆ ಬರುವ ರೂಪುದ್ರವ್ಯ ನಿನ್ನ ಪರಿಣಾಮಿಸಿ ಬಂದ ಬರವಯ್ಯಾ.
ಎನಗೆ ಬರುವ ಸ್ಪರ್ಶದ್ರವ್ಯ ನಿನ್ನ ಆನಂದಿಸಿ ಬಂದ ಬರವಯ್ಯಾ.
ಎನಗೆ ಬರುವ ಶಬ್ದದ್ರವ್ಯ ನಿನಗೆ ಸೊಗಸನಿಟ್ಟು ಬಂದ ಬರವಯ್ಯಾ.
ಎನಗೆ ಬರುವ ತೃಪ್ತಿದ್ರವ್ಯ ನಿನ್ನ ತೃಪ್ತಿಯಪಡಿಸಿ ಬಂದ ಬರವಯ್ಯಾ.
ಎನಗೆ ಬರುವ ಸಕಲವು
ಗುರುನಿರಂಜನ ಚನ್ನಬಸವಲಿಂಗ ಸಹಿತವಯ್ಯಾ. ॥ ೩೯೬ ॥

೩೯೭

ಕಾಯದ ಕೈಗಳರಿಯವು
ಗುರುಲಿಂಗಜಂಗಮಕ್ಕರ್ಪಿತವನುಳಿದು ಕರ್ಮದ ಕಾಳಿಕೆಯ.
ಕರಣದ ಕೈಗಳರಿಯವು

ಲಿಂಗಜಂಗಮಗುರುವಿಂಗರ್ಪಿತವನುಳಿದು ಸಂಸ್ಕೃತಿಯ ಸಂಕಲ್ಪದ ಸುಳುಹ.
ಭಾವದ ಕೈಗಳರಿಯವು
ಜಂಗಮಗುರುಲಿಂಗದರ್ಪಿತವನುಳಿದು
ಜ್ಞಾನವಿಕೃತಿಭಾವ ವರ್ತ್ತನವಿಕೃತಿಭಾವಮೋಹದ ವಿಕೃತಿಭಾವಂಗಳೆಂಬ ವಿಷಮವ.
ಸರ್ವಾಂಗದ ಕೈಗಳರಿಯವು
ಗುರುನಿರಂಜನ ಚನ್ನಬಸವಲಿಂಗದರ್ಪಿತವನುಳಿದು ಇತರ. || ೩೯೭ ||

೩೯೮

ನಿಮ್ಮರ್ಪಿತದನುವಿಂಗಲ್ಲದೆ ಎನ್ನ ಕಾಲುಗಳು ಮುಂದಕ್ಕೆ ಹರಿಯವು.
ನಿಮ್ಮರ್ಪಿತದವಸರಕ್ಕಲ್ಲದೆ ಎನ್ನ ಕೈಗಳು [ಪಿಡಿ]ಯವು.
ನಿಮ್ಮರ್ಪಿತದ ಕುರುಹಿಂಗಲ್ಲದೆ ಎನ್ನ ತನುವು ಅಲಸದು.
ನಿಮ್ಮರ್ಪಿತದ ಬರುವಿಂಗಲ್ಲದೆ ಎನ್ನ ನುಡಿ ಅನುಕರಿಸದು.
ನಿಮ್ಮರ್ಪಿತದ ಸುಳುಹಿಂಗಲ್ಲದೆ ಎನ್ನ ಕಂಗಳು ಸೂಸವು.
ನಿಮ್ಮರ್ಪಿತದ ಕೇಳಿಗಲ್ಲದೆ ಎನ್ನ ಕರ್ಣಂಗಳೊಲಿದು ಲಾಲಿಸವು.
ನಿಮ್ಮರ್ಪಿತದ ಸುಖಕ್ಕಲ್ಲದೆ ಎನ್ನಾತ್ಮ ಪರಿಣಾಮಿಸದು
ಗುರುನಿರಂಜನ ಚನ್ನಬಸವಲಿಂಗವಾದ ಕಾರಣ. || ೩೯೮ ||

೩೯೯

ಪ್ರಸಾದಿಯ ಕಾಯವೆಲ್ಲ ಅಷ್ಟಾವರಣ ಪ್ರಕಾಶಮಯವಾಗಿ ತೋರುವವಲ್ಲದೆ
ಪ್ರಕೃತಿಮಯತೋರದು ನೋಡಾ.
ಪ್ರಸಾದಿಯ ಮನವೆಲ್ಲ ಚತುರ್ವಿಧಭಕ್ತಿಪ್ರಕಾಶಮಯವಾಗಿ ತೋರುವವಲ್ಲದೆ
ಪ್ರಕೃತಿಮಯತೋರದು ನೋಡಾ.
ಪ್ರಸಾದಿಯ ಭಾವವೆಲ್ಲ ಮಹಾನುಭಾವಪ್ರಕಾಶಮಯವಾಗಿ ತೋರುವವಲ್ಲದೆ
ಪ್ರಕೃತಿಮಯತೋರದು ನೋಡಾ.
ಪ್ರಸಾದಿಯು ನಿರಂತರ ಗುರುನಿರಂಜನ ಚನ್ನಬಸವಲಿಂಗ
ತಾನಾಗಿ ತೋರುವನಲ್ಲದೆ ಪ್ರಕೃತಿಮಯತೋರದು ನೋಡಾ. || ೩೯೯ ||

೪೦೦

ಭಾವಮರೆದು ಭಕ್ತಿಯ ಮಾಡುವರು ;
ಬರುಕಾಯರಿಗೆ ಸುಖವೆಲ್ಲಿಹದೋ !
ಭಾವಮರೆದು ಪೂಜೆಯ ಮಾಡುವರು ;
ಹುಸಿಮನಯುಕ್ತರಿಗೆ ರತಿಪ್ರೇಮವೆಲ್ಲಿಹದೊ !
ಭಾವಮರೆದು ದಾಸೋಹವ ಮಾಡುವರು ;

ಭ್ರಾಂತಂಗೆ ಪರಿಣಾಮವೆಲ್ಲಿಹದೊ!
ಭಾವಮರೆದು ಗುರುನಿರಂಜನ ಚನ್ನಬಸವಲಿಂಗಕ್ಕರ್ಪಿಸಿಕೊಂಡೆವೆಂಬುವರು
ದ್ವೈತರು ಪ್ರಸಾದವೆಲ್ಲಿಹದೊ ! ॥ ೪೦೦ ॥

೪೦೧

ಅನುವನರಿಯದ ಮನುಜರು ಘನಲಿಂಗಸನ್ನಿಹಿತರೆಂದು
ಅನ್ಯದೈವವನೆ ಮನೆಯೊಳಗಿರಿಸಿ ದೀಕ್ಷವ ಮಾಡಿಸಿಕೊಂಡು ನಡೆವ
ಮಂದಮತಿ ಹೀನಜಾತಿ ದ್ರೋಹಿಗಳನೇನೆಂಬೆನಯ್ಯಾ ?
ಜರಿದು ಹರಿದು ಮೆರೆದು ನಡೆವ ಪರಿಪೂರ್ಣಂಗಲ್ಲದೆ
ಗುರುನಿರಂಜನ ಚನ್ನಬಸವಲಿಂಗವೆಂಬ
ಘನಪ್ರಸಾದ ಸಾಮಾನ್ಯವೇ ಹೇಳಾ ? ॥ ೪೦೧ ॥

೪೦೨

ಪ್ರಸಾದವ ಪಡೆದವರೆಂದು ಅಗಲತುಂಬ ಒಟ್ಟೈಸಿಕೊಂಡು
ಮಿಗೆ ಸೂಸಿ ಜಿಹ್ವೆಲಂಪಟವಿಷಯದೊಳ್ಮುಳುಗಿ,
ನೆಗೆನೆಗೆದು ಕೊಂಬ ಭಗಜನಿತ ಬಟ್ಟೆಹರಕರಿಗೆ
ಅಪ್ರತಿಮಪ್ರಸಾದ ಸಾಧ್ಯವಹುದೆ
ಅನಿಮಿಷಪ್ರಕಾಶ ಆನಂದಮಯಪ್ರಸಾದಿಗಲ್ಲದೆ ?
ಅನಿಷ್ಟಬದ್ಧರಂತಿರಲಿ ;
ಗುರುನಿರಂಜನ ಚನ್ನಬಸವಲಿಂಗಕ್ಕೆ ಸಾವಧಾನಭಾವಿಯೇ ಪ್ರಸಾದಿ ಕಾಣಾ.
॥೪೦೨॥

೪೦೩

ಪ್ರಸಾದಿಯಂಗದಲ್ಲಿ ಮೃದುಕಠಿಣ ಸೀತೋಷ್ಣ ಸುಖಕ್ಕೆಳಸುವ
ರತಿಮೋಹವುಂಟೆ ? ಇಲ್ಲ.
ಅದೇನು ಕಾರಣ, ಜಂಗಮಲಿಂಗಕ್ಕಂಗವಾದಕಾರಣ.
ಪ್ರಸಾದಿಯ ಮನದಲ್ಲಿ ಷಡುರಸರುಚಿ ಸೌಖ್ಯಕ್ಕೆ ಇಚ್ಛೈಸುವ
ವಿಷಯ ಮೋಹವುಂಟೆ ? ಇಲ್ಲ.
ಅದೇನು ಕಾರಣ, ಗುರುಲಿಂಗಕ್ಕಂಗವಾದಕಾರಣ.
ಪ್ರಸಾದಿಯ ಭಾವದಲ್ಲಿ ಷಡುತೃಪ್ತಿಯ ಸೌಖ್ಯದ ಗ್ರಾಹಕತ್ವವುಂಟೆ ?
ಇಲ್ಲ. ಅದೇನು ಕಾರಣ, ಮಹಾಲಿಂಕ್ಕಂಗವಾದಕಾರಣ.
ಇಂತು ಅಂಗ ಮನ ಭಾವದಿಚ್ಛೆಯನಳಿಮುಳಿದ ನಿರ್ಮಲಪ್ರಸಾದಿಯಲ್ಲದೆ
ಗುರುನಿರಂಜನ ಚನ್ನಬಸವಲಿಂಗಕ್ಕೆ ಭಕ್ತನಾಗಬಾರದು. ॥ ೪೦೩ ॥

೪೦೪

ಊರ ಸುಟ್ಟು ಉರಿಯಹೊದೆದು ನಡೆವ ಧೀರಂಗಲ್ಲದೆ
ಗುರುಪ್ರಸಾದವೆಲ್ಲಿಹದೊ?
ಜನರ ಸುಟ್ಟು ಬೂದಿಯ ಧರಿಸಿ ನಡೆವ ಶೂರಂಗಲ್ಲದೆ
ಲಿಂಗಪ್ರಸಾದ ವೆಲ್ಲಿಹದೊ ?
ಬಯಲ ಸುಟ್ಟು ನೀರ ಹೊಯ್ದು ನಡೆವ ಸಾರಾಯಂಗಲ್ಲದೆ
ಜಂಗಮಪ್ರಸಾದವೆಲ್ಲಿಹದೊ ?
ಹಾಳುಮಾಡಿ ಸುಳಿದು ತುಂಬಿಸಿ ನಡೆವ ಧೀರಂಗಲ್ಲದೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ ನಿಜಪ್ರಸಾದವೆಲ್ಲಿಹದೊ ? ॥ ೪೦೪ ॥

೪೦೫

ನಾಲ್ಕು ಬಿಟ್ಟು ನೋಡುವದು.
ಸಾಕಾರದ ಬೆಳಗು ಸ್ವಯಂ ಆದಲ್ಲಿ ಶುದ್ಧವನರಿಯೆ.
ನಿರಾಕಾರದ ಬೆಳಗು ನಿಜವಾದಲ್ಲಿ ಸಿದ್ಧವನರಿಯೆ.
ನಿಜಾನಂದದ ಬೆಳಗು ನಿಷ್ಪತಿಯಾದಲ್ಲಿ ಪ್ರಸಿದ್ಧವನರಿಯೆ.
ಗುರುನಿರಂಜನ ಚನ್ನಬಸವಲಿಂಗದ ಬೆಳಗೆನ್ನನೊಳಕೊಂಡಲ್ಲಿ
ಪರಮಾನಂದವನರಿಯೆ ಭಿನ್ನವಿಟ್ಟು. ॥ ೪೦೫ ॥

೪೦೬

ಪೃಥ್ವಿಯ ಹಿಡಿದು ಆಚಾರಲಿಂಗಾನುಭಾವಿಯಾಗಿ
ಗಂಧಪ್ರಸಾದವ ಕಂಡು ಸುಖಿಯಾದೆನಯ್ಯಾ.
ಸಲಿಲವಿಡಿದು ಗುರುಲಿಂಗಾನುಭಾವಿಯಾಗಿ
ರಸಪ್ರಸಾದವ ಕಂಡು ಸುಖಿಯಾದೆನಯ್ಯಾ.
ತೇಜವಿಡಿದು ಶಿವಲಿಂಗಾನುಭಾವಿಯಾಗಿ
ರೂಪುಪ್ರಸಾದವ ಕಂಡು ಸುಖಿಯಾದೆನಯ್ಯಾ.
ವಾಯುವಿಡಿದು ಜಂಗಮಲಿಂಗಾನುಭಾವಿಯಾಗಿ
ಸ್ಪರ್ಶನಪ್ರಸಾದವ ಕಂಡು ಸುಖಿಯಾದೆನಯ್ಯಾ.
ಆಕಾಶವಿಡಿದು ಪ್ರಸಾದಲಿಂಗಾನುಭಾವಿಯಾಗಿ
ಶಬ್ದಪ್ರಸಾದವ ಕಂಡು ಸುಖಿಯಾದೆನಯ್ಯಾ.
ತತ್ವವಿಡಿದು ಪರತತ್ವಾನುಭಾವಿಯಾಗಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ
ತೃಪ್ತಿಪ್ರಸಾದವ ಕಂಡು ನಿರಂತರ ಸುಖಿಯಾದೆನಯ್ಯಾ. ॥ ೪೦೬ ॥

೪೦೭

ಅನಾದಿವಿಡಿದು ಬಂದ ಸದೋದಿತ ಶರಣಂಗೆ
ನಾದ ಬಿಂದು ಕಳೆಯ ಸುಖ ಹಿಂಗಿ, ಆದಿ ಮಧ್ಯ ಅವಸಾನ ಸನ್ನಿಹಿತವಾಗಿ,
ಮಾರ್ಗವಿಡಿದಡಿಯಿಟ್ಟು ಸಾವಧಾನಿ ಸಂಭಾವಿತ ನೋಡಾ.
ಆದಿ ಅನಾದಿಯನರಿದು ಆರೋಗಣೆಯಮಾಡಿಕೊಂಬ ಸುಖಾನುಭಾವಿ
ನಿಮ್ಮ ಪ್ರಸಾದಿ ನೋಡಾ, ಗುರುನಿರಂಜನ ಚನ್ನಬಸವಲಿಂಗಾ. ॥ ೪೦೭ ॥

೪೦೮

ಆತ್ಮನೇ ಲಿಂಗವೆಂದು ಕಂಡುಂಬ ಬಹಿರ್ಗತ್ತಲೆನುಡಿಯ ಭಾವಿಸರು.
ಅದೇಕೆಂದೊಡೆ, ಅಂಗದಲ್ಲಿ ಇಷ್ಟಲಿಂಗ ಪ್ರಕಾಶಿಸುತ್ತಿಹುದಾಗಿ.
ಇಟ್ಟು ಮಾಡಿ ಕೆಟ್ಟುಂಬ ಅಂತರಗತ್ತಲೆಯ ನಡೆಯ ಭಾವಿಸರು.
ಅದೇಕೆಂದೊಡೆ, ಮನ ಪ್ರಾಣಲಿಂಗದಲ್ಲಿ ತರಹರವಾದುದಾಗಿ.
ಯೋಗಚರಿಯ ಭೋಗಿಗಳ ತೂಗಿ ಭಾವಿಸರು.
ಅದೇಕೆಂದೊಡೆ, ಶಿವಯೋಗಭೋಗತೃಪ್ತರಾದ ಕಾರಣ.
ಗುರುನಿರಂಜನ ಚನ್ನಬಸವಲಿಂಗಾ,
ನಿಮ್ಮ ಪ್ರಸಾದಿಯ ಕಾರ್ಯಕಾರಣ ತಿಳಿಯಬಾರದಾರಿಗೆಯೂ. ॥ ೪೦೮ ॥

## ಪ್ರಸಾದಿಯ ಮಾಹೇಶ್ವರಸ್ಥಲ

೪೦೯

ಕಣ್ಣಿಲ್ಲದ ಗುರುವಿನ ಕೈಯಿಂದೆ ಮಣ್ಣಿಲ್ಲದ ಮಗನಾಗಿ
ತಾನೊಂದು ಕಣ್ಣ ಕೊಂಡು ಕಾಮ್ಯನಾದ ಬಳಿಕ
ಬಣ್ಣವಿಲ್ಲದ ಧಾನ್ಯವ ತಂದು ಚೆನ್ನಾಗಿ ಪಾಕವಮಾಡಿ
ಮತ್ತಾರ ಕಾಣಗೊಡದೆ, ಸತ್ಯ ಭೋಜ್ಯಗಟ್ಟಿ
ನಿತ್ಯವಾಗಿ ಕೊಟ್ಟು ಕೊಂಡು ಸುಖಿಸಿದರೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ ತಥ್ಯಪ್ರಸಾದಿಯೆಂಬೆ. ॥ ೪೦೯ ॥

೪೧೦

ಪಡೆಮುಂಬ ಕಾಲಕ್ಕೆ ಒಡೆಯರು ಬಂದರೆ
ಓರೆಮುಖವಾಗಿ ನಡೆವ ಘೋರಪಶುಗಳನೇನೆಂಬೆನಯ್ಯಾ.
ತನ್ನಿಷ್ಟದ ಕಳೆಯನರಿಯದೆ ಅನ್ನಕ್ಕೆ ತಲೆಯಿಟ್ಟು ಅರ್ಪವ ಸವೆಸಿ
ಭಂಗಬಟ್ಟು ಭವಕ್ಕೆ ಬೀಳುವ ಕುನ್ನಿ ಮಾನವರ ನಿಷ್ಠೆಯ ನೋಡಾ.

ಮುಂದೆ ಭವಭವಕ್ಕೆಡೆಯಾಡುವ ಕಷ್ಟ ನೋಡಾ
ಗುರುನಿರಂಜನ ಚನ್ನಬಸವಲಿಂಗವನರಿಯದೆ. || ೪೧೦ ||

೪೧೧

ಆಡಬಲ್ಲವನಾಡಿದರೆ ಚಂದವಾಯಿತ್ತು ಲಿಂಗಕ್ಕೆ.
ಮಾಡಬಲ್ಲವ ಮಾಡಿದರೆ ಚಂದವಾಯಿತ್ತು ಲಿಂಗಕ್ಕೆ.
ನೀಡಬಲ್ಲವ ನೀಡಿದರೆ ಚಂದವಾಯಿತ್ತು ಲಿಂಗಕ್ಕೆ.
ಈ ಭೇದವನರಿಯದೆ ಕೂಡಿ, ನಡೆಹೀನ ಭವದುಃಖಿಗಳಿಗೆ,
ಕೊಡುಕೊಳ್ಳಿ, ಸಲುವುದೆಂದು ನಡೆದುಣ್ಣಲಾಗದು.
ಬಿಡುವದು ಲೌಕಿಕದತ್ತ
ನಮ್ಮ ಗುರುನಿರಂಜನ ಚನ್ನಬಸವಲಿಂಗಕ್ಕಲ್ಲದ ಮಲಭುಂಜಕರ. || ೪೧೧ ||

೪೧೨

ಹಿಂದನರಿಯದೆ, ಮುಂದನರಿಯದೆ, ಈಗನರಿಯದೆ,
ಆಗಿ ಬಂದವರೆಂದು ಅರಿದು ಮರೆದು
ಹರಿದುಮಾಡುವ ಕುರಿಗಳಿಗೆತ್ತಣ ದೇವತ್ವವಯ್ಯಾ !
ಬರಿಯ ಭ್ರಾಂತಿಗಳಿಗೆತ್ತಣ ಭಕ್ತತ್ವವಯ್ಯಾ !
ಮಾಡಲರಿಯದೆ ಮಾಡುವರು, ನೀಡಲರಿಯದೆ ನೀಡುವರು.
ಬೇಡಿ ಉಣಲರಿಯದೆ ಬೇಡಿ ಉಂಬುವ ನಾಡಮಾನವರ
ನಡೆನುಡಿಗತ್ತತ್ತಲಾಗಿರ್ದ ನಮ್ಮ ಗುರುನಿರಂಜನ ಚನ್ನಬಸವಲಿಂಗ. || ೪೧೨ ||

೪೧೩

ತಾನು ತನ್ನ ವಿನೋದವನುಳಿದು ಬಂದವನಲ್ಲ :
ಬಯಲುವಿಡಿದು ನಿಂದವನಲ್ಲ ;
ಹುಸಿ ಹುಂಡನ ಕೈಯ ಕೊಂಡವನಲ್ಲ :
ಗಂಡು ಹೆಣ್ಣಿನ ದಾರಿಯ ನಡೆದವನಲ್ಲ :
ತನ್ನ ತಾಯಿ ತಂದೆಯ ಮರೆದವನಲ್ಲ :
ತಾನೊಂದು ಬೇರೆ ನೀಡಿಕೊಂಡುಂಡು ಹೋಗುವನಲ್ಲ.
ಗುರುನಿರಂಜನ ಚನ್ನಬಸವಲಿಂಗದಲ್ಲಿ
ತಾನು ತಾನಾಗಿರ್ದ ಪ್ರಸಾದ ಪ್ರಸಾದಿ. || ೪೧೩ ||

೪೧೪

ನೋಡಬಂದ ನಲ್ಲಂಗೆ ಕೂಡಿ ಮಾಡಿದ ಶುದ್ಧಪ್ರಸಾದಿ.
ಆಡಬಂದ ನಲ್ಲಂಗೆ ಕೂಡಿ ನೀಡಿದ ಸಿದ್ಧಪ್ರಸಾದಿ.

ಕೂಡಬಂದ ನಲ್ಲಂಗೆ ಕೂಡಿ ಕೂಡಿದ ಪ್ರಸಿದ್ಧಪ್ರಸಾದಿ.
ನೋಟ ಆಟ ಕೂಟದ ಕುಳವನರಿಯದೆ
ಬೇಟಕ್ಕೊಳಗಾದರು ಗುರುನಿರಂಜನ ಚನ್ನಬಸವಲಿಂಗ. || ೪೧೪ ||

೪೧೫

ಕರಣತ್ರಯದಪ್ಪುಗೆಯ ಪರಿಹರಿಸದೆ ಮರಣವ ಗೆದ್ದೆವೆಂಬ
ಬರುನುಡಿಯ ಕಂಗುರುಡರನೇನೆಂಬೆನಯ್ಯಾ ?
ತ್ರಿವಿಧಭಕ್ತಿಯನರಿಯದೆ ತ್ರಿವಿಧಮಲಸಂಬಂಧವಾಗಿ
ತ್ರಿಕೂಟವ ಕಂಡವರೆಂದು ಕೂಗಿದರೆ ಗೂಗೆ ಕಾಗೆಯ ಕೂಗಿನಂತೆ ಸೊಗಸದಯ್ಯಾ.
ನಿಮ್ಮ ಶರಣರಿಗೆ ಕೊಡುಕೊಳ್ಳಿಯುಳ್ಳರೆ ಭವ ತಪ್ಪದೆಂದು
ನುಡಿದುಂಡು ನಡೆಗೆಟ್ಟು ಹೋಗುವ ತುಡುಗುಣಿಗಳ
ಕೆಡಹಿ ಮೂಗಕೊಯ್ವ ಗುರುನಿರಂಜನ ಚನ್ನಬಸವಲಿಂಗ. || ೪೧೫ ||

೪೧೬

ಅತ್ತಿತ್ತರಿಯದ ನಿತ್ಯಾನಂದಪ್ರಸಾದಿಯ ಚಿತ್ತ ವಾಚಾರಲಿಂಗಕ್ಕರ್ಪಿತವಾಗಿ
ಮಿಥ್ಯವನರಿಯದು ನೋಡಾ.
ತನುಭಾವಶೂನ್ಯ ಘನಪ್ರಸಾದಿಯ ಬುದ್ಧಿ ಗುರುಲಿಂಗಕರ್ಪಿತವಾಗಿ
ಪರವನೆಣಿಸದು ನೋಡಾ.
ಷೋಡಶಮದವಳಿದುಳಿದ ಮಹಾಪ್ರಸಾದಿಯ ಅಹಂಕಾರ
ಶಿವಲಿಂಗಕರ್ಪಿತವಾಗಿ ಅಹಮಮತೆಯನರಿಯದು ನೋಡಾ.
ಸಂಕಲ್ಪ ವಿಕಲ್ಪ ವಿರಹಿತ ಪ್ರಸಾದಿಯ ಮನ ಜಂಗಮಲಿಂಗಕ್ಕರ್ಪಿತವಾಗಿ
ಮನತ್ರಯದ ಮಸಕ ಹಿಡಿಯದು ನೋಡಾ.
ತ್ರಿಪುಟಿಶೂನ್ಯ ಚಿನುಮಯಾನಂದಪ್ರಸಾದಿಯ ಜ್ಞಾನ
ಪ್ರಸಾದಲಿಂಗಕ್ಕರ್ಪಿತವಾಗಿ ಮಾಯಾವಿಷಯವನರಿಯದು ನೋಡಾ.
ಸಮರಸಾನುಭಾವಪ್ರಸಾದಿಯ ಭಾವ ಮಹಾಲಿಂಕ್ಕರ್ಪಿತವಾಗಿ
ವಿಪರೀತಭ್ರಮೆಯನರಿಯದು ನೋಡಾ.
ಪರಮನಿಷ್ಠೆ ಮಾಹೇಶ್ವರನ ಭಾವ ಗುರುನಿರಂಜನ ಚನ್ನಬಸವಲಿಂಗಕ್ಕಂಗವಾಗಿ
ಇತರನಂಗಯಿಸಲರಿಯದು ನೋಡಾ. || ೪೧೬ ||

೪೧೭

ಅನುಪಮಲಿಂಗದಂಗ ಶರಣಂಗೆ
ಅನುಸರಣೆಯೇನೂ ಇಲ್ಲವಯ್ಯ.
ಅವಿರಳ ಕ್ರಿಯೆಯಲ್ಲಿ ಜಡಮಿಶ್ರವಿರಹಿತನಾಗಿ

ಕಡುಗಲಿವೀರಪ್ರಸಾದಿಯಯ್ಯಾ.
ವಿಪರೀತ ಜ್ಞಾನವಳಿದು ಸುಜ್ಞಾನಸಮೇತ ಸಾರಾಯ ಸಂಗಸುಖಿಯಯ್ಯಾ.
ಅಭಿನ್ನ ಪ್ರಸಾದಿ ತನ್ನ ಅಪ್ರತಿಮಾಚಾರದಲ್ಲಿ
ದ್ವೈತಾದ್ವೈತಚರಿಯ ಸುಳಿಯಲೆಸೆದರ್ಪಿತ ಅಸಮಘನಮಹಿಮನಯ್ಯಾ.
ಗುರುನಿರಂಜನ ಚನ್ನಬಸವಲಿಂಗದಲ್ಲಿ ಅಗಮ್ಯಪ್ರಸಾದಿಯಯ್ಯಾ. ||.೪೧೭ ||

೪೧೮

ಪರಿಪಿಂಗದಾಚಾರ ಅಂಗವೇದಿಯಾಗಿ,
ಇತರ ಸಂಗಸಂಯೋಗದತಿಶಯವನಳಿದು
ನಿರತಿಶಯ ನಿಜಾನಂದಮಹಿಮನು ನೋಡಾ.
ಕರಣವೃತ್ತಿ ಚರಣವ ಕೊಯ್ದು ಅರಿದರ್ಪಿತಮುಖಿ ಅನುಭಾವಿ ನೋಡಾ.
ಶಿವಾಣತಿವಿಡಿದು ಸತ್ತುಚಿತ್ತಾನಂದ ನಿತ್ಯದಾಸೋಹಿಯಾಗಿರ್ದ
ಗುರುನಿರಂಜನ ಚನ್ನಬಸವಲಿಂಗದಲ್ಲಿ ನೋಡಾ. || ೪೧೮ ||

೪೧೯

ಅಯ್ಯಾ, ನಿಮ್ಮ ಕಾಯದನುವಿಡಿದಖಿಳಸುಖವ
ನಿಮ್ಮ ಲಾಂಛನಕ್ಕೀಯದೆ ಎನ್ನ ಪೂರ್ವಪ್ರಕೃತಿಗಿತ್ತೆನ್ನ ಸುಖವನರಿದೆನಾದರೆ
ಮುಂದೆ ಕಿಲ್ಬಿಷದಗತಿಯೆಂಬುದ ಬಲ್ಲೆನಯ್ಯಾ.
ಅಯ್ಯಾ, ನಿಮ್ಮ ಮನದನುವಿಡಿದಖಿಳಸುಖವ
ನಿಮ್ಮ ಲಾಂಛನಕ್ಕೀಯದೆ ಪೂರ್ವಪ್ರಕೃತಿಗಿತ್ತೆನ್ನ ಸುಖವನರಿದೆನಾದರೆ
ಮುಂದೆ ನರಕದಗತಿಯೆಂಬುದ ಬಲ್ಲೆನಯ್ಯಾ.
ಅಯ್ಯಾ. ನಿಮ್ಮ ಲಾಂಛನಕ್ಕೀಯದೆ ಪೂರ್ವಪ್ರಕೃತಿಗಿತ್ತೆನ್ನ ಸುಖವನರಿದೆನಾದರೆ
ಮುಂದೆ ವೈತರಣಿಗತಿಯೆಂಬುದ ಬಲ್ಲೆನಯ್ಯಾ.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮಾತ್ಮದಿ ಸಕಲತತ್ವಯುಕ್ತಸೌಖ್ಯವ ನಿಮಗೀಯದೆ ಸುಖಿಸಿದರೆ
ಅಘೋರನರಕವೆಂಬುದ ಕಂಡು ಕೇಳಿ ಮೊರೆಹೊಕ್ಕು ಮಾಡಿದೆನಯ್ಯಾ. || ೪೧೯||

## ಪ್ರಸಾದಿಯ ಪ್ರಾಣಲಿಂಗಿಸ್ಥಲ

೪೨೦

ಗಂಪುಹಣ್ಣಿಲ್ಲದಾರು ಹನ್ನೊಂದುಕೋಟಿಗಳನಳಿದು ನೀಟವಾಗಿಪ್ಪವಹಿಡಿದು
ಮಾಟಗಳೆದು ಮಾಡಿದರೆಮ್ಮ ಬಸವಾದಿಪ್ರಮಥರು.
ಅವರಾಟವನರಿದು ಮಾಡುವಲ್ಲಿ ಪಂಚೇಂದ್ರಿಯಂಗಳಲ್ಲಿ

ಪ್ರಕಾಶ ಮುಂದುವರಿಯಬೇಕು.
ವಿಷಯಂಗಳಲ್ಲಿ ಕಳೆ ಸೂಸುತಿರಬೇಕು,
ಕರಣಂಗಳಲ್ಲಿ ಬೆಳಗು ಬೆಂಬಳಿಗೊಂಡಿರಬೇಕು.
ಗುರುನಿರಂಜನ ಚನ್ನಬಸವಲಿಂಗದ ಪ್ರಭೆಯೊಳಡಗಿ ಆಚರಿಸುತ್ತಿಬೇಕು. ||೪೨೦||

೪೨೧

ಆಚಾರವನಾಚಾರವೆಂಬನುವರಿದುಕೊಂಡು ಬಂದವರೆಂದು
ಸೋಗುತೊಟ್ಟು ನಡೆವಲ್ಲಿ, ಕಾಯಕ್ಕೆ ಭಕ್ತಿಯನಗಲಿಸಿದರೆ
ಕತ್ತೆಯ ಬಸುರಲ್ಲಿ ಬಂದು ನರಕವನೈಯ್ದುವರು.
ಮನಕ್ಕೆ ಜ್ಞಾನವನಗಲಿಸಿದರೆ
ಶ್ವಾನನ ಯೋನಿಯಲ್ಲಿ ಬಂದು ನರಕವನೈದುವರು.
ಭಾವಕ್ಕೆ ಅರಿವನಗಲಿಸಿದರೆ
ಸೂಕರನ ಗರ್ಭದಿಂದೆ ಬಂದು ನರಕವನೈದುವರು.
ಗುರುನಿರಂಜನ ಚನ್ನಬಸವಲಿಂಗದ ಬೆಳಗನಗಲಿ
ಮಾಯಾಮೋಹವಿಷಯದ ಬೆಳಗಿನೊಳು ನಿಂದು ನಡೆದರೆ
ಅನಂತಕೋಟಿವರುಷ ಪಿಶಾಚಿಯಾಗಿ ನರಕವನೈದುವರು. || ೪೨೧ ||

೪೨೨

ಅನಾದಿ ಮಹಾಬೆಳಗಿನಿಂದೆ ಬೆಳಗ ಕೊಂಡು
ಬೆಳೆಯೊಳಿರ್ಪ ಭೇದಾಭೇದ ಗತಿಶೂನ್ಯಶರಣರ ಬಳಿವಿಡಿದು ಬಂದ
ಭಕ್ತ ಮಹೇಶ್ವರರೆಂದು ಹೇಳಿಕೊಂಡು ಬಳಿಕ
ಹೊನ್ನು ಹೆಣ್ಣು ಮಣ್ಣುವಿಡಿದು ತಾನೊಂದು ಕಾಯಕವ ಮಾಡಿ ನಡೆವಲ್ಲಿ
ಜಂಗಮಲಿಂಗಸನ್ನಿಹಿತವಾಗಿರಬೇಕಲ್ಲದೆ ಉಳಿದು ಬದುಕಲಾಗದು.
ಅದೇನು ಕಾರಣವೆಂದೊಡೆ :
ಜಂಗಮವಿರಹಿತವಾದಲ್ಲಿ ಆ ಹೊನ್ನು ಹೆಣ್ಣು ಮಣ್ಣು ಮಲವಾಗಿರ್ಪುದು.
ಆ ಜಂಗಮವನುಳಿದು ನೀರಕುಡಿದರೆ ಏನಾಯಿತ್ತು ನೋಡಿ ?
ಅಲ್ಲಿ ಅನ್ನವನುಂಡರೇನಾಯಿತ್ತು ನೋಡಿ ?
ಅಲ್ಲಿ ಸಕಲ ಭೋಗವ ಮಾಡಿದರೇನಾಯಿತ್ತು ನೋಡಿ ?
ಅಲ್ಲಿರ್ದು ಗುರುನಿರಂಜನ ಚನ್ನಬಸವಲಿಂಗದ
ಬೆಳಗುಕೂಡುವೆನೆಂದರೆ ಕತ್ತಲೆಯು ಕಾಣಾ. || ೪೨೨ ||

೪೨೩

ಪ್ರಾಣಲಿಂಗತ್ವ ಲಿಂಗಪ್ರಾಣತ್ವ ಪ್ರಸಾದಮುಕ್ತತ್ವವೆಂಬ
ಅನುವನರಿದ ಅಭಿನ್ನಪ್ರಸಾದಿಗೆ ದ್ವೈತಾದ್ವೈತ ಕಷ್ಟ ;
ಭಾವಿಕರು ಕಾರಣದ ಬರವೆಂದು ಕಾಣಲಿಲ್ಲ.
ಅದೇನು ಕಾರಣವೆಂದೊಡೆ :
ಅಜಾತ ಅನುಪಮಾನಂದಪ್ರಕಾಶ
ಗುರುನಿರಂಜನ ಚನ್ನಬಸವಲಿಂಗ ಪ್ರಾಸದಕ್ಕೆ ಪ್ರಸಾದಿಯಾದ ಕಾರಣ. ॥ ೪೨೩॥

೪೨೪

ಆದಿಮುಖದಿಂದೆ ಅಂಗ ಮನ ಪ್ರಾಣಂಗಳಲ್ಲಿ
ಅನುಭಾವಿಯಾಗಿ ಅರಿದುಂಬ ಘನವನರಿಯದೆ,
ಆ ಮಹಾಘನಪ್ರಕಾಶವ ಭಿನ್ನವಿಟ್ಟು, ಕಂಡು ಕೂಡಿ ಸುಖಿಸೆನೆಂಬ
ಅಪಶಬ್ದ ನುಡಿಯ ಅಜ್ಞಾನಿಗಳಿಗತ್ತತ್ತಲಾದ
ಗುರುನಿರಂಜನ ಚನ್ನಬಸವಲಿಂಗ. ॥ ೪೨೪ ॥

೪೨೫

ದಶವಾಯುಗಳ ದೆಸೆಗೆಡಿಸಿ ಮಸಿಯ ಹಂಗಳೆಯ ವಿಷಯನುರುಹಿ,
ಕಸಮಲವ ಕಳೆದುಳಿದು ಶಶಿಧರನ ವಶಗತ ಮಾಡಿಕೊಂಡಾಚರಿಸುವಲ್ಲಿ
ಅನುಪಮ ಕ್ರಿಯಾಜ್ಞಾನಬೆಳಗಿನ ಸುಖವೇದಿಯಾಗಿ
ಆದಿ ಮಧ್ಯ ಅವಸಾನದನುವರಿದಿರಬೇಕು.
ಅಂಗ ಮನ ಪ್ರಾಣ ಪ್ರಕಾಶಾವಧಾನ
ನಿರಂತರ ನಿಜಾನಂದ ನಿಶ್ಚಿಂತನಾಗಿರಬೇಕು.
ಗುರುನಿರಂಜನ ಚನ್ನಬಸವಲಿಂಗ ಪ್ರಸಾದಕ್ಕೆ ಪ್ರಸಾದಿಯಾಗಿರಬೇಕು. ॥ ೪೨೫॥

೪೨೬

ಅಗಮ್ಯ ಅವಿರಳ ಗುರುವಿನತಿಶಯ ದೀಕ್ಷಾತ್ರಯದಿಂದೆನ್ನಂಗ
ಪ್ರಾಣ ಭಾವಂಗಳಲ್ಲಿ
ಗುರು ಲಿಂಗ ಜಂಗಮ ಪ್ರಸಾದಬೆಳಗು ಪ್ರಜ್ವಲಿಸುತ್ತಿಹುದು.
ಭಿನ್ನ ಭಕ್ತಿಯನರಿತು, ಅಭಿನ್ನ ಭಕ್ತಿ ಆವರಿಸಿತ್ತು.
ಪ್ರಾಣಲಿಂಗತ್ವ ಲಿಂಗಪ್ರಾಣತ್ವ ಪ್ರಸಾದಮುಕ್ತತ್ವವೆಂಬ
ಸಂಪತ್ತಿನ ಸಾರಾಯಪ್ರಭೆಯೊಳೊಪ್ಪುತಿರ್ದೆನು
ಗುರುನಿರಂಜನ ಚನ್ನಬಸವಲಿಂಗಸನ್ನಿಹಿತವಾಗಿ. ॥ ೪೨೬ ॥

೪೨೭

ಅಖಂಡಲಿಂಗವೆನ್ನ ಕರಪೀಠದಲ್ಲಿ ಬೆಳಗ ಬೀರುತಿರ್ದನು.
ಆ ಬೆಳಗಿನೊಳು ನಿಂದು ಒಳಗರಿದು,
ಇಳೆ ಜಲಾಗ್ನಿ ಮರುತಾಂಬರ ಬೆಳೆ ಕಳೆಯ ಪಾಕ ನಿವೇದಿಸಿಕೊಂಡು,
ನಿರಂತರಪರಿಣಾಮಿ ನಾನು ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೪೨೭ ॥

೪೨೮

ಅಸಮಗಂಭೀರ ಲಿಂಗಶರಣರಡಿವಿಡಿದು ಬಂದು
ಸಸಿನೆ ಗತಿಯುಕ್ತನಾಗಿರ್ದುದೆ ಸಹಜಮತಿ.
ಮಡದಿ ಪುರುಷರಡಿವಿಡಿಯಲಾಗದು.
ಆಚಾರಬ್ರಹ್ಮ ಕಣ್ಮನಭಾವಭರಿತ ಸ್ವಯವಿತ್ತುಕೊಂಡು ಸುಖಿಸುವದು
ಗುರುನಿರಂಜನ ಚನ್ನಬಸವಲಿಂಗದಂಗವಾಗಿ. ॥ ೪೨೮ ॥

೪೨೯

ಆಚಾರ ಗುರು ಶಿವ ಜಂಗಮ ಶೇಷ
ಮಹಾ ಇಷ್ಟ ಪ್ರಾಣ ಭಾವಲಿಂಗ ಬೆಳಗಿನೊಳು
ಬೆಳಗುತಿರ್ದ ಘನಮಹಾಪ್ರಸಾದಿಯ ನಡೆಯ ಬಲ್ಲವರಾರು ?
ನುಡಿಯ ಬಲ್ಲವರಾರು ? ಹಿಡಿಯಬಲ್ಲವರಾರು ?
ಕೊಡಬಲ್ಲವರಾರು ? ಕೊಳ್ಳಬಲ್ಲವರಾರು ?
ಗುರುನಿರಂಜನ ಚನ್ನಬಸವಲಿಂಗದಂಗವಾದ ಇರವ ಬಲ್ಲವರಾರು ? ॥ ೪೨೯ ॥

೪೩೦

ಲಿಂಗಬೆಳಗಿನೊಳು ಗಂಧವನಿತ್ತು ಕೊಂಬ ಮಂಗಲಮಹಿಮನ ನೋಡಾ.
ಲಿಂಗಬೆಳಗಿನೊಳು ರಸವನಿತ್ತು ಕೊಂಬ ಚದುರಗುಣಯುತನ ನೋಡಾ.
ಲಿಂಗಬೆಳಗಿನೊಳು ರೂಪವನಿತ್ತು ಕೊಂಬ ಸುಪ್ರಭಾಮಯನ ನೋಡಾ.
ಲಿಂಗಬೆಳಗಿನೊಳು ಸ್ಪರ್ಶನವನಿತ್ತು ಕೊಂಬ ಪರುಷಮಯನ ನೋಡಾ.
ಲಿಂಗಬೆಳಗಿನೊಳು ಶಬ್ದವನಿತ್ತು ಕೊಂಬ ಶುದ್ಧಪ್ರಭಾಮಯನ ನೋಡಾ.
ಲಿಂಗಬೆಳಗಿನೊಳು ತೃಪ್ತಿಯನಿತ್ತು ಕೊಂಬ ಚಿತ್ಪ್ರಕಾಶಮಯನ ನೋಡಾ.
ಗುರುನಿರಂಜನ ಚನ್ನಬಸವಲಿಂಗ ಬೆಳಗಿನೊಳು
ಸಮರಸಪ್ರಸಾದಿಯ ಸಾವಧಾನವ ನೋಡಾ. ॥ ೪೩೦ ॥

## ಪ್ರಸಾದಿಯ ಶರಣಸ್ಥಲ

೪೩೧

ಅಯ್ಯಾ, ಆನು ನಿನಗೆಂದು ಬಂದೆ, ನಿನಗೆಂದು ನೋಡಿಹಿಡಿದೆ,
ನಿನಗೆ ಶರಣೆಂದು ನಿನ್ನಿಂದೆ ನಿನ್ನ ಕೊಂಡೆ,
ನಿನ್ನ ಸೆರಗ ಹಿಡಿದು ಸತಿಭಾವ ತಪ್ಪದೆ
ನಿನಗೆ ನಾನೆತ್ತಿ ಇತ್ತು ಸುಖಿಸಿದಡೆ ಉತ್ತುಮತೆಯಾದೆನಯ್ಯಾ
ಗುರುನಿರಂಜನ ಚನ್ನಬಸವಲಿಂಗ. || ೪೩೧ ||

೪೩೨

ಅತ್ತತ್ತಲಾದ ಅನುಪಮಲಿಂಗ ತನ್ನ ವಿನೋದಕ್ಕೆ ತಾನೇ
ಶರಣನಾಗಿ ಜಂಗಮವಾಗಿ ಭಕ್ತನಾಗಿ ಲಿಂಗವಾಗಿ ಶಿಷ್ಯನಾಗಿ ಗುರುವಾಗಿ
ಕ್ರಿಯಾಜ್ಞಾನ ಭಾವಾಚಾರವಿಡಿದು, ಪರಿಪೂರ್ಣಾಚಾರದೊಳು ನಿಂದು ವರ್ತಿಸುವ
ಪರಮಾನಂದಸುಖಭೋಕ್ತನೆಂಬ ಭೇದವನರಿಯದೆ,
ಭಿನ್ನವಿಟ್ಟು ನುಡಿವ ಮರುಳು ಕುನ್ನಿ ಮಾನವರ
ಎನ್ನ ಗತಿಮತಿಯತ್ತ ತಾರದಿರಾ,
ಗುರುನಿರಂಜನ ಚನ್ನಬಸವಲಿಂಗಾ, ನಿಮ್ಮ ಧರ್ಮ ನಿಮ್ಮ ಧರ್ಮ. || ೪೩೨ ||

೪೩೩

ಶರಣಸತಿ ಲಿಂಗಪತಿಯೆಂಬ ಕುಶಲಗತಿಯುನ್ನತವನರಿಯದೆ
ಅರ್ಚನೆಯಾರ್ಪಣಕ್ಕೆ ಭಿನ್ನರೆಂದು ನುಡಿವ
ಅದ್ವೈತ ಗೊಡ್ಡು ವೇದಾಂತಿಗಳ ಕಸ್ಮಮನವ ನೋಡಾ !
ನಿಜಭಕ್ತಿ ಸುಜ್ಞಾನ ಪರಮವೈರಾಗ್ಯವೇ ಅಂಗ ಮನ ಭಾವವಾಗಿರ್ದಡೆ
ಅದ್ವೈತಿಗಳಿರವೆಂದು ನುಡಿವ ಅಪಶೈವ ಸಿದ್ಧಾಂತಿಗಳ ದುರ್ಭಾವದಂಗವ ನೋಡಾ!
ಈ ಜೀವಕಾಯರಂತಂತಿರಲಿ,
ಸಕಲನಿಃಕಲಸನುಮತ
ಗುರುನಿರಂಜನ ಚನ್ನಬಸವಲಿಂಗಾ, ನಿಮ್ಮ ಪ್ರಸಾದಿ ಶರಣ. || ೪೩೩ ||

೪೩೪

ನಾಸಿಕದಲ್ಲಿ ಆಚಾರಲಿಂಗವನರಿದರ್ಪಿಸಿಕೊಂಡು
ಅನ್ಯವಾಸನೆಯ ನೆನೆವ ಮನ ಶೂನ್ಯ ಕಾಣಾ.
ಜಿಹ್ವೆಯಲ್ಲಿ ಗುರುಲಿಂಗವನರಿದರ್ಪಿಸಿಕೊಂಡು
ಅನ್ಯರುಚಿಯ ಭಾವಿಪ ಮನ ಶೂನ್ಯ ಕಾಣಾ.

ನೇತ್ರದಲ್ಲಿ ಶಿವಲಿಂಗವನರಿದರ್ಪಿಸಿಕೊಂಡು
ಅನ್ಯದೃಷ್ಟಿಗೆಳಸುವ ಮನವಿರಹಿತ ಕಾಣಾ.
ತ್ವಕ್ಕಿನಲ್ಲಿ ಜಂಗಮಲಿಂಗವನರಿದರ್ಪಿಸಿಕೊಂಡು
ಅನ್ಯಸ್ಪರ್ಶನಕ್ಕಾಸ್ಪದವಾದ ಮನ ನಾಸ್ತಿ ಕಾಣಾ.
ಶ್ರೋತ್ರದಲ್ಲಿ ಪ್ರಸಾದಲಿಂಗವನರಿದರ್ಪಿಸಿಕೊಂಡು
ಅನ್ಯಶಬ್ದರಮಿಸಲು ಮನವಿಲ್ಲ ಕಾಣಾ.
ಹೃದಯದಲ್ಲಿ ಮಹಾಲಿಂಗವನರಿದರ್ಪಿಸಿಕೊಂಡು
ಅನ್ಯಪರಿಣಾಮಕ್ಕೆಳಸುವ ಮನವಿರಹಿತ ಕಾಣಾ.
ಕಾಯ ಕರಣ ಪ್ರಾಣಶೂನ್ಯ ಲಿಂಗಮಯ
ಗುರುನಿರಂಜನ ಚನ್ನಬಸವಲಿಂಗಾ, ನಿಮ್ಮ ಪ್ರಸಾದಿ. || ೪೩೪ ||

೪೩೫

ಪಂಚವರ್ಣಗೆ ಪಟ್ಟಣ ಪಂಚಮಾಲುಪೂರ್ಣ ಪೇಟೆಯಲ್ಲಿ
ಹರದರನಂತರ ಕೊಳುಕೊಡೆ ಕಡೆ ಮೊದಲಿಲ್ಲ, ನೋಡುವ ಬನ್ನಿರೆ.
ಅರಿಷಿಣ ಬೆಳ್ಳೊಳ್ಳಿ ಗುಗ್ಗಳ ಚಂದನ ವೀಳ್ಯೆದೆಲೆ
ಲವಂಗ ಪತ್ರಿ ಜಾಜಿಕಾಯಿ ಖಾರೀಕ ಮಾರುವದೊಂದು
ಮಳಿಗೆಸಾಲು ಕೊರತೆಯಾಗದೆ ತಿಳಿಯಿರೆಯಮ್ಮ.
ಕಲ್ಲುಸಕ್ಕರೆ ಜೇನುತುಪ್ಪ ಸೆಲ್ಲಿಯಕಾಯಿ ಬೆಟ್ಟಡಕೆ ಮೆಣಸು
ಶುಂಠಿ ಸೋಲು ಹುಣಸೆಫಳ ಕಾಚುಗರಳ ಮಾರುವದೊಂದು
ಮಳಿಗೆಸಾಲು ಮನವೊಪ್ಪಿ ಅರಿಯಿರೆಯಮ್ಮ.
ಹೊನ್ನು ಬಂಗಾರ ಬೆಳ್ಳಿ ಮುತ್ತು ಪ್ರವಳ ನಾರಂಜಿ
ಪಚ್ಚೆ ಪಸುರುಂಬರ ನೀಲ ಕಸ್ತೂರಿಗಳೊಪ್ಪಿ ಮಾರುವದೊಂದು
ಮಳಿಗೆಸಾಲು ಇರ್ದಂತೆ ನೋಡಿರೆಯಮ್ಮ.
ತಟ್ಟು ಕಂಬಳಿ ಕುಸುಮಸುಪ್ಪತ್ತಿಗೆ ಸೂರ್ಯಚಂದ್ರ
ಬಿಸಿಲು ಉರಿ ಬೆಳಗು ಇರುಳು ಬೆಳದಿಂಗಳವಿಡಿದು
ಕಾಜುಕಪ್ಪೆ ಮುಟ್ಟಿ ಮಾರುವದೊಂದು ಮಳಿಗೆಸಾಲು ಕಾಣಿರೆಯಮ್ಮ.
ಕಂಚುಗಳು ಕಾರ್ಜೊನ್ನವೆಳೆದೊಗಲು ಕಾಷ್ಠಗೂಡಿ
ಕೊಂಬು ಶಂಖ ಘಾತುಮಾತಿನಿಂದೆ ಮಾರುವದೊಂದು
ಮಳಿಗೆಸಾಲು ಕೇಳಿರೆಯಮ್ಮ.
ತರುಮೂಲ ಹಣ್ಣು ಬೆಲ್ಲಾದಿ ಹಾಗಲಫಲಗಸೆ
ತಾಳಾದಿ ವಚನಗಳಿನಿತು ಪರಿಣಾಮಗೊಂಡು ಮಾರುವದೊಂದು
ಮಳಿಗೆಸಾಲು ಸಂತೋಷ ಕಾಣಿರಮ್ಮ.

ಇಂತಪ್ಪ ಪುರದ ಬಾಜಾರ ನೆರವಿಯೊಳಿಪ್ಪ ಶೆಟ್ಟಿ ಎಮ್ಮ ಕೈಪಿಡಿದರೆ
ಚೌಕ ಚಾವಡಿಯಲ್ಲಿ ನಮ್ಮ ನಮ್ಮ ಗಂಡರ ನಂಟು ಬಲಿಸಿದರೆ
ಕಂಟಕವಿಲ್ಲದೆ ಕಾಣಿಸಬಹುದು
ಗುರುನಿರಂಜನ ಚನ್ನಬಸವಲಿಂಗ ಪ್ರಸಾದಸುಖಪದವ. ॥ ೪೩೫ ॥

೪೩೬

ಪಾರಮಾರ್ಥಜಂಗಮಲಿಂಗವು ಜಂಗಿಟ್ಟು ಅನಾದಿಭಕ್ತನ
ಮಂದಿರಕ್ಕೈಯ್ದಿದಲ್ಲಿ
ಬಯಕೆ ಬಾರದ ಮುನ್ನ ಮಾಡಿ ನೀಡುತಿಪ್ಪನು.
ಮಾಡಿ ನೀಡದ ಮುನ್ನ ಕಾಡಿಕೊಂಬ ಕಲ್ಪಿತಕರಣತ್ರಯದಲ್ಲಿ ಕಾಣಿಸದಿಪ್ಪನು.
ಭಕ್ತಿಬೆಳಗಿನೊಳಗಿಪ್ಪಾತನೇ ಭಕ್ತ.
ವೈರಾಗ್ಯಪ್ರಭೆಯೊಳಿಪ್ಪಾತನೇ ಜಂಗಮ.
ಈ ಭೇದವನರಿಯದೆ ಬೇಡಿಸಿ ಕೊಟ್ಟು ಕೊಂಬ ಭಕ್ತ,
ಬೇಡಿ ಕೊಂಡು ಕೊಡುವ ಜಂಗಮ, ಉಭಯವೇಷಕ್ಕೆ ಭವ ತಪ್ಪದು.
ಈ ಉಭಯಕೂಟದಲ್ಲಿ ಪಾದೋದಕ ಪ್ರಸಾದ ಉದಯವಾಗುವ ಪರಿಯೆಂತೊ!
ಸತಿಪತಿಭಾವ ಕಾಣಿಸದು ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೪೩೬ ॥

೪೩೭

ಹೊಟ್ಟೆಯ ಹೊರೆಯಲಾರದೆ ಕಟ್ಟುಸಂಸಾರವ ಕಡೆಗಿಟ್ಟು,
ನೆಟ್ಟನೆ ಜಂಗಮವೇಷವ ಹೊತ್ತು,
ಬಟ್ಟೆಯ ಬೆಳಗನರಿಯದೆ ಕಟ್ಟು ಕ್ರಿಯಾರಾಧನೆಯ ತೋರಿ,
ಪಡೆದುಂಬ ಭಕ್ತರನರಸಿ,
ಕುಟಿಲವೈರಾಗ್ಯದಿಂದವರ ದ್ರವ್ಯವ ಸೆಳೆದುಕೊಂಡು
ಮಾಡಿ ನೀಡಿ ಕೊಂಬ ದಾಸೋಹಿಜಂಗಮವೆನಿಸಿ ನಡೆವವರನೆಂತು
ಜಂಗಮಲಿಂಗವೆನ್ನಬಹುದು ?
ಕೆಟ್ಟೊಡಲ ನಷ್ಟಜಂಗುಳಿಗಳ ಎನ್ನತ್ತ ತೋರದಿರಾ
ಗುರುನಿರಂಜನ ಚನ್ನಬಸವಲಿಂಗಾ. ॥ ೪೩೭ ॥

೪೩೮

ಹೆಂಡರ ಮಕ್ಕಳ ಸಲಹಲಾರದೆ ಒಂದು ನೆವದಿಂದೆ
ವೈರಾಗ್ಯ ತಲೆಗೇರಿ ಲೋಚು ಬೋಳು ದಿಗಂಬರ ವೇಷವ ತಾಳಿ
ದಿಗ್ದೇಶವ ತಿರುಗುತ್ತ ತಿನಿಸು ಮೈಯುಂಡು,
ಆಸೆ ವಿಷಯವಂಕುರಿಸಿ ಕೊಡುವ ಅಳಿಭಕ್ತರನರಸುತ್ತ

ತಲೆಹುಳಿತ ಶುನಕಸಂತೆ ಮನೆಮನೆಯ ಶೋಧಿಸುತ ಕನಕ ಕಾಮಿನಿ
ವಸ್ತ್ರಕೃತಿಮೋಹವೆರಸಿ
ಉಗಿದುಚ್ಛಿಷ್ಟದೊಳು ಬಿದ್ದು ಹೊರಳ್ಯಾಡುವ ಸೂಕರಾಳಿಗೆ
ಇನ್ನೆತ್ತಣ ಒಡೆತನವಯ್ಯಾ ಗುರುನಿರಂಜನ ಚನ್ನಬಸವಲಿಂಗಾ. ॥ ೪೩೮ ॥

೪೩೯

ಕಾಲಲ್ಲಿ ತಲೆಯ ಕಟ್ಟಿಕೊಟ್ಟು ಪಡೆಯಬಲ್ಲರೆ ಶರಣ.
ತಲೆಯಲ್ಲಿ ಕಾಲ ಕಟ್ಟಿಕೊಟ್ಟು ಪಡೆಯಬಲ್ಲರೆ ಶರಣ.
ಈ ಉಭಯಗೂಡಿ ಕೊಟ್ಟು ಪಡೆಯಬಲ್ಲರೆ ಶರಣ.
ಗುರುನಿರಂಜನ ಚನ್ನಬಸವಲಿಂಗದಲ್ಲಿ ಪಡೆದು
ಮೂಲವ ಕಿತ್ತೊಗೆಯಬಲ್ಲರೆ ನಿಜಶರಣ. ॥ ೪೩೯ ॥

೪೪೦

ತಾಯಿಯಲ್ಲಿ ಬಯಸಿ ತಂದ ತಲೆಯ
ಕೈಯೊಳಿಟ್ಟು ಕಾಣದಿರ್ದೊಡೆ ಸವಿಸುಖ ತಪ್ಪಿತ್ತು.
ಮಣ್ಣೊಳಗೆ ಮುಚ್ಚಿದರೆ ಒಂದನೆಯ ಸುಖ ತಪ್ಪಿತ್ತು.
ಜಲದೊಳಗೆ ಮುಚ್ಚಿದರೆ ಎರಡನೆಯ ಸುಖ ತಪ್ಪಿತ್ತು.
ಕಿಚ್ಚಿನೊಳಗೆ ಮುಚ್ಚಿದರೆ ಮೂರನೆಯ ಸುಖ ತಪ್ಪಿತ್ತು.
ಗಾಳಿಯೊಳಗೆ ಮುಸುಕಲಿಟ್ಟರೆ ನಾಲ್ಕನೆಯ ಸುಖ ತಪ್ಪಿತ್ತು.
ಅಂಬರದೊಳಗಡಗಿಸಿದರೆ ಐದನೆಯ ಸುಖ ತಪ್ಪಿತ್ತು.
ಕರ್ತಾರನಲ್ಲಿಟ್ಟು ಕಾಣಿಸದಿರ್ದಡೆ ಆರನೆಯ ಸುಖ ತಪ್ಪಿತ್ತು.
ಈ ಸುಖವನರಿಯದೆ ಮತ್ತೆ ಮತ್ತೆ ಮಾಡಿಕೊಂಡರೇನು
ಅತ್ತತ್ತಲರಿಯದೆ ವ್ಯರ್ಥವಾಯಿತ್ತು
ಗುರುನಿರಂಜನ ಚನ್ನಬಸವಲಿಂಗವು ಸಾಕ್ಷಿಯಾಗಿ. ॥ ೪೪೦ ॥

೪೪೧

ನಾದಸುಖವಿಡಿದು ಸಾಧಿಸಿ ಮಾಡಿಕೊಂಡವನಲ್ಲ ಶರಣ.
ಬಿಂದುವಿನಲ್ಲಿ ಸುಖವಿಡಿದು ಸಂಕೋಚಿಸಿ ಮಾಡಿಕೊಂಡವನಲ್ಲ ಶರಣ.
ಕಳೆಯ ಸುಖವಿಡಿದು ಕಂಡು ಕಂಡು ಮಾಡಿಕೊಂಡವನಲ್ಲ ಶರಣ.
ವೃಷಿಕಂಗಳ ಸುಖವಿಡಿದು ಮಾಟದಲ್ಲಿ ನಿಂತು ಮಾಡಿಕೊಂಡವನಲ್ಲ ಶರಣ.
ಗುರುನಿರಂಜನ ಚನ್ನಬಸವಲಿಂಗದಂಗ ಸುಖಿಯಾಗಿರ್ದ ಪ್ರಸಾದಿ ಶರಣ.
॥ ೪೪೧ ॥

೪೪೨

ಹಿಂದುಮುಂದಿನ ಸಂದುಸಂಶಯ ಮುಂದೆ ತೋರದೆ
ತೋರಿ ಸುಖಿಸುವ ಶರಣ.
ಬಂದ ಸುಖದುಃಖವ ಹೆಚ್ಚಿ ನೊಂದವ ಸಂದಸುಖಿ ಶರಣ.
ಬೆಂದ ಒಡಲಿಗೆ ಹುಸಿದು ಮಸಿಹೂಸಿ ಮರೆದ ಹಸಿವರತು ಕೊಂಬಸುಖಿ ಶರಣ.
ಹೊರಗೊಳಗಿನ ನಡೆಯ ಹರಿದು ಹಾರದ ಸುಖಿ ಶರಣ.
ಗುರುಲಿಂಗಜಂಗಮಪ್ರಸಾದ ಸಮರಸವರಿದು ಮರೆಯದೆ ಮಾಟಸುಖಿ ಶರಣ.
ಗುರುನಿರಂಜನ ಚನ್ನಬಸವಲಿಂಗದಂಗವಾಗಿ
ಸುಖವಿತ್ತುಕೊಂಬ ಪ್ರಸಾದಿ ಶರಣ. || ೪೪೨ ||

೪೪೩

ಹಾರುವ ಹಾರುವ ಹಾರುವನೆಂದೆಂಬುವರು ಪ್ರಮಥರು.
ಊರೊಳಗೆ ಹಾರುವನಲ್ಲ, ಹದಿನಾಲ್ಕು ಲೋಕದೊಳಗೆ ಹಾರುವನಲ್ಲ,
ಹೊನ್ನು ಹೆಣ್ಣು ಮಣ್ಣಿಗೆ ಹಾರುವನಲ್ಲ.
ಗುರುನಿರಂಜನ ಚನ್ನ ಬಸವಲಿಂಗಕ್ಕಿತ್ತು
ನಿತ್ಯ ಹಾರುವನೆಂಬುದು ಸತ್ಯ ಕಾಣಾ. || ೪೪೩ ||

೪೪೪

ತಂದೆ ತಾಯಿ ಬಂಧುಬಳಗ ದಂದುಗದ ಸಂದುಬಿಚ್ಚಿ
ಗುರುವಿಂಗೆ ಕಂದನಾಗಿ ಲಿಂಗಸತಿಯಾಗಿ ಕೈಕೊಟ್ಟಮೇಲೆ
ಅಂದಿನಂತೆ ಅರಿಯಬೇಕಲ್ಲದೆ,
ಅರಿವುಗೆಟ್ಟು ಮರವೆಯೊಳ್ನಿಂದು
ಸರಿದು ಸಂಸಾರದೊಳು ಕೂಡಿ ಬೆರೆದು ಬೆಟ್ಟವನೇರಿ,
ಬರಿಯ ವಾಗದ್ವೈತದೊಳಗಿಪ್ಪ ಕುರಿಮಾನವರು
ತೆರವಕಾಣರು ನಮ್ಮ ಗುರುನಿರಂಜನ ಚನ್ನಬಸಲಿಂಗಪ್ರಸಾದದಲ್ಲಿ. || ೪೪೪ ||

೪೪೫

ಚರಲಿಂಗ ಗುರುಹಿರಿಯರ ಜರಿಯಬಾರದೆಂದು ಹೇಳುವಿರಿ.
ಬಾಳೆಯೆಲೆಯಮೇಲೆ ತುಪ್ಪವತೊಡದಂತೆ,
ನಿಮ್ಮ ಔದುಂಬಫಳ ಛಾಯ ನುಡಿಯ ತೆಗೆದಿಡಿರಿ.
ಜಂಗಮಲಿಂಗ ಗುರುಹಿರಿಯರನರಸುವರೆ ಜ್ಞಾನಿಗಳು ?
ಅವರ ಕಾಯ್ದಿಪ್ಪ ತನು ಮನ ಭಾವ ವಿಕೃತಿಯನರಸುವರಲ್ಲದೆ.

ಅದೇಸು ಕಾರಣವೆಂದೊಡೆ :
ತನು ಮನ ಭಾವವಿಡಿದಿರ್ಪ ಜನರನ್ನು
ಒಂದುವೇಳೆ ತಿಳಿಸಿಕೊಳ್ಳಬಹುದು;
ಅಳಿದುಳಿದಂಗಲಿಂಗಸಂಬಂಧಿಗಳೆಂದು ನುಡಿದು
ಅಳಿದಲ್ಲಿ ಉಳಿದರೆ ಅದು ಮಲದೇಹಿ, ಮರಳಿ ಶುದ್ಧವಾಗದು ನೋಡಾ.
ಹೇಮ ಮೌಕ್ತಿಕದಂತೆ ಅರಿದಾಚರಿಸುವುದು
ಗುರುನಿರಂಜನ ಚನ್ನಬಸವಲಿಂಗ ಪ್ರಸಾದಿಯಾಗಬೇಕಾದರೆ. || ೪೪೫ ||

೪೪೬

ಗುರುವಿನಲ್ಲಿ ಗುಣವನರಸಿ ಕಡಿದುಹಾಕಿದಲ್ಲಿ
ಎನಗೆ ಶುದ್ಧಪ್ರಸಾದ ಸಾಧ್ಯವಾಯಿತ್ತು.
ಲಿಂಗದಲ್ಲಿ ಶಿಲೆಯನರಸಿ ಸುಟ್ಟು ಬಿಸಾಟಿದಲ್ಲಿ
ಎನಗೆ ಸಿದ್ಧಪ್ರಸಾದ ಸಾಧ್ಯವಾಯಿತ್ತು.
ಜಂಗಮದಲ್ಲಿ ಕುಲವನರಸಿ ಕೊಂದು ಹಾಕಿದಲ್ಲಿ
ಎನಗೆ ಪ್ರಸಿದ್ಧಪ್ರಸಾದ ಸಾಧ್ಯವಾಯಿತ್ತು.
ಇಂತು ಇವರ ದುರ್ಗುಣ ಕಠಿಣ ಅಕುಲವನರಸದೆ
ಕೊಡುಕೊಳ್ಳೆ ಸಮರಸದೊಳಿರ್ದೆನಾದಡೆ
ಕಡೆಯಿಲ್ಲದ ನರಕವೆಂಬ ಶ್ರುತಿ ಗುರುಸ್ವಾನುಭಾವದಿಂದರಿದು ನೂಂಕಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಸಮರಸಪ್ರಸಾದಿಯಾಗಿರ್ದೆನಯ್ಯಾ. || ೪೪೬ ||

## ಪ್ರಸಾದಿಯ ಐಕ್ಯಸ್ಥಲ

೪೪೭

ಸುಖಿಮುಖಿ ಸನ್ನಿಹಿತ ಶರಣಂಗೆ ಸಕಲವನರಿದಾಗಳೆ ಅರ್ಪಿತವಹುದು.
ಮಿಥ್ಯಸಂಭ್ರಮಸಂಪನ್ನತೆವಡೆದ ಸುತ್ತಮೋಹಿಗೆತ್ತಣರ್ಪಿತವಯ್ಯಾ
ಚಿತ್ತಮಲಿನ ಗುರುನಿರಂಜನ ಚನ್ನಬಸವಲಿಂಗಕ್ಕೆ. || ೪೪೭ ||

೪೪೮

ಭುವನಾದಿ ಜನಿತ ನಿರ್ಮಲ ಪದಾರ್ಥವ ಮಾಡಿ
ಪರಮಾನಂದಪ್ರಸಾದಿ ಪರಿಪೂರ್ಣಲಿಂಗಕ್ಕೆ ಸಮರ್ಪಿಸಿ ಕೊಂಬುವನಲ್ಲದೆ,
ಭುವನಾದಿ ಜನಿತ ಗುಣಸಂಭವಿತನಾಗಿ
ಅನ್ಯಪದಾರ್ಥವನರಿದರಿದಾಯಾಸಗೊಂಡು ಕೊಂಬ
ದುರ್ವಿವೇಕಿಯಲ್ಲ ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೪೪೮ ||

೪೪೯

ಸುಖದುಃಖವನುಂಡು ಕೊಡುವರು ಸಕಲಸಂಪನ್ನರು.
ಸುಖದುಃಖವ ಕೊಟ್ಟುಕೊಂಬುವರು ಸಕಲನಿಃಕಲರು.
ಸುಖದುಃಖಸಹಿತ ಸುಖಿಸುವರು ಪ್ರಸಾದಿಗಳು
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೪೪೯ ||

೪೫೦

ಕೊಟ್ಟುಕೊಂಬುವರು ಕುರುಹುಳ್ಳವರು.
ಕೊಡದೆಕೊಂಬುವರು ಅನಿಷ್ಟಬದ್ಧರು.
ಕೊಟ್ಟು ಕೊಳ್ಳದೆ, ಕೊಡದೆ ಕೊಳ್ಳದೆ
ಕಡೆಮೊದಲರಿದು ಮರೆದು ಕೊಟ್ಟು ಕೊಳ್ಳಬಲ್ಲ
ಗುರುನಿರಂಜನ ಚನ್ನಬಸವಲಿಂಗದಲ್ಲಿ ದಿಟ್ಟಪ್ರಸಾದಿ. || ೪೫೦ ||

೪೫೧

ಕತ್ತಲೆ ಬೆಳಗಿನೊಳಿಪ್ಪ ಮಿಥ್ಯಮಾರಿಯ ಮಕ್ಕಳಿಗೆ
ನಿತ್ಯರೆಂಬ ನುಡಿ ಮತ್ತೆಲ್ಲಿಹದೊ ?
ಬಗೆ ಬಗೆ ಸೋಂಗ ತೊಟ್ಟು, ನಗುತ್ತಲಳುತ್ತ
ಶರಧಿಯೊಳು ನೀರಾಟವನಾಡುವವರು
ಮಹಾನಂದದಲ್ಲೊಪ್ಪುವ ಮಹಾಲಿಂಗಪ್ರಸಾದಸುಖವನವರೆತ್ತಬಲ್ಲರು
ಗುರುನಿರಂಜನ ಚನ್ನಬಸವಲಿಂಗಪ್ರಸಾದಿಯೈಕ್ಯರಲ್ಲದೆ. || ೪೫೧ ||

೪೫೨

ನೀರೊಳು ಬಿದ್ದು ನೀರಪುಳುವ ಭಕ್ಷಿಸುವ ಕುಕ್ಕುಟ
ಕ್ಷೀರವನೀಂಟಬಲ್ಲುದೆ ಹೇಳಾ ?
ತಿಪ್ಪೆಯಕೆದರಿ ಮಲಪುಳುವ ತಿಂಬ ಕೋಳಿ
ಮಧುರಾಮೃತಸುಖವ ಬಲ್ಲುದೆ ಹೇಳಾ ?
ಮಾಯಾಮೋಹ ವಿಷಯರಸವನೀಂಟುವ ಜೀವ ಜಾತಿಗಳು,
ಆದಿಗುರು ಕರುಣಾಮೃತ ಅನಾದಿ ಮಹಾನುಭಾವ
ಜಂಗಮಪ್ರಸಾದಸೇವಿಪ ಸುಖವನವರೆತ್ತಬಲ್ಲರು ಹೇಳಾ ?
ಗುರುನಿರಂಜನ ಚನ್ನ ಬಸವಲಿಂಗ ಚಿದಾಂಶಿಕರಲ್ಲದೆ. || ೪೫೨ ||

೪೫೩

ಅವಿರಳಾನಂದಮುಖದಿಂದೊಗೆದು ಬಂದ ನಿಲುವಿಂಗೆ
ಹಲವು ಪ್ರಕಾರ ಹುಸಿಮುಸುಕಿ,

ಆ ಕಾಲಕ್ಕರಿದು ಬೆರಗುವಟ್ಟಲ್ಲಿ ಪರಿಪಿಡಿಯಿಂದೆ ಬಂದು
ನೋಡುತ್ತ ಮುಟ್ಟುತ್ತ ಹೇಳುತ್ತ ಕೊಟ್ಟುಯಿಟ್ಟಲ್ಲಿ,
ಬಟ್ಟೆಗಳ ಕಂಡೆನಲ್ಲ ದಿಟ್ಟರನರಿದೆನಲ್ಲ.
ಅತ್ತಿತ್ತರಿಯದೆ ನಿರ್ಮಲತನುಮನಭಾವವನರಿದಲ್ಲಿ
ಮತ್ತೇನು ಕೊಡು ಕೊಳ್ಳಿ ಕಾಣಲಿಲ್ಲ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಪ್ರಸಾದಿಯ ಪ್ರಸಾದ. || ೪೫೩ ||

೪೫೪

ಅಂಗ-ಲಿಂಗ, ಶಕ್ತಿ-ಭಕ್ತಿ, ಹಸ್ತ–ಮುಖ, ಪದಾರ್ಥ–ಪ್ರಸಾದವೆಂಬ
ಅಷ್ಟವಿಧ ಸಕೀಲನರಿದು,
ಎನ್ನ ಸ್ಥೂಲತತ್ವದೊಳಗಣ ಸಕಲನಿಃಕಲ ನಿರಂಜನವನು
ಸತ್ತುಸ್ವರೂಪಕ್ಕಿತ್ತು ಶುದ್ಧವಾಗಿ ಮರೆದೆನಯ್ಯಾ,
ಎನ್ನ ಸೂಕ್ಷ್ಮ ತತ್ವದೊಳಗಣ ಸಕಲನಿಃಕಲ ನಿರಂಜನವನು
ಚಿತ್ಸ್ವರೂಪಕ್ಕಿತ್ತು ಸಿದ್ಧವಾಗಿ ಮರೆದೆನಯ್ಯಾ.
ಎನ್ನ ಕಾರಣತತ್ವದೊಳಗಣ ಸಕಲನಿಃಕಲ ನಿರಂಜನವನು
ಆನಂದಸ್ವರೂಪಕ್ಕಿತ್ತು ಪ್ರಸಿದ್ಧವಾಗಿ ಮರೆದೆನಯ್ಯಾ.
ಗುರುನಿರಂಜನ ಚನ್ನಬಸವಲಿಂಗ ಪ್ರಸಾದದೊಳಡಗಿ
ನಾನು ಪ್ರಸಾದಿಯೆಂಬುದನರಿಯೆನಯ್ಯಾ. || ೪೫೪ ||

೪೫೫

ಅಂದು ಬಂದ ಮುಸುಕು ತೆರೆದು ಹೊಂದಿಸಿಕೊಂಡು
ಅಂದಂದಿಂಗವಧಾನ ಸುಖಾನಂದಮಯದೊಳಗೆ
ಸುಳಿವುತಿರ್ದನಾಚಾರಲಿಂಗವೆನ್ನ ಸುಚಿತ್ತಪಾಣಿಯಲ್ಲಿ.
ಶ್ರದ್ಧೆಸುಖಪರಿಣಾಮಿಯಾಗಿ ಮುಂದೆ ನೋಡುತ್ತ ಸುಳಿಯುತಿರ್ದ
ಗುರುಲಿಂಗವೆನ್ನ ಸುಬುದ್ಧಿಹಸ್ತದಲ್ಲಿ.
ನಿಷ್ಠೆ ಸುಖಪರಿಣಾಮಿಯಾಗಿ ಮುಂದೆ ನೋಡುತ್ತ ಸುಳಿಯುತಿರ್ದ
ಶಿವಲಿಂಗವೆನ್ನ ನಿರಹಂಕಾರ ಪಾಣಿತಾಣದಲ್ಲಿ.
ಸಾವಧಾನಸುಖಪರಿಣಾಮಿಯಾಗಿ ಮುಂದೆ ನೋಡುತ್ತ ಸುಳಿಯುತಿರ್ದ
ಜಂಗಮಲಿಂಗವೆನ್ನ ಸುಮನಹಸ್ತದಲ್ಲಿ.
ಅನುಭಾವಸುಖಪರಿಣಾಮಿಯಾಗಿ ಮುಂದೆ ನೋಡುತ್ತ ಸುಳಿಯುತಿರ್ದ
ಪ್ರಸಾದಲಿಂಗವೆನ್ನ ಸುಜ್ಞಾನಕರಸ್ಥಲದಲ್ಲಿ.
ಆನಂದಸುಖಪರಿಣಾಮಿಯಾಗಿ ಮುಂದೆ ನೋಡುತ್ತ

ಸುಳಿಯುತಿರ್ದ ಮಹಾಲಿಂಗವೆನ್ನ ಸದ್ಭಾವಹಸ್ತದಲ್ಲಿ.
ಸಮರಸಸುಖಪರಿಣಾಮಿಯಾಗಿ ಮುಂದೆ ನೋಡುತ್ತ ಸುಳಿಯುತಿರ್ದ
ಗುರುನಿರಂಜನ ಚನ್ನಬಸವಲಿಂಗವೆನ್ನ ಪ್ರಾಣಲಿಂಗಿಯೆಂದೆನಿಸಿ. || ೪೫೫ ||

## ಪ್ರಾಣಲಿಂಗಿಸ್ಥಲ

ಸೂತ್ರ : ಇಂತು ಪ್ರಸಾದಿಸ್ಥಲದಲ್ಲಿ ಆಚರಿಸಿದ ಮಹಾಂತನು, ತನ್ನ ಸುಮನವೆಂಬ ಹಸ್ತದಲ್ಲಿ ಜಂಗಮಲಿಂಗಸನ್ನಿಹಿತನಾಗಿ, ಪ್ರಾಣಲಿಂಗಿಯೊಳಗಣ ಷಟ್‌ಸ್ಥಲ ದಿಂದೆ ಜಂಗಮಲಿಂಗದೊಳಗಣ ಷಡುಲಿಂಗ ಸಮೇತನಾಗಿ ಆಚರಿಸುವ ಭೇದವೆಂತಿರ್ದಿತ್ತೆಂದೊಡೆ, ಮುಂದೆ ಪ್ರಾಣಲಿಂಗಿಸ್ಥಲ.

೪೫೬

ಕಾಯಶುದ್ಧ ಲಿಂಗಾನುಭಾವಿ,
ಮನಸಿದ್ಧ ಲಿಂಗಾನುಭಾವಿ,
ಭಾವಪ್ರಸಿದ್ಧ ಲಿಂಗಾನುಭಾವಿ-
ಸರ್ವಾಂಗ ಮಹಾಪ್ರಸಿದ್ಧ ಗುರುನಿರಂಜನ ಚನ್ನಬಸವಲಿಂಗಾನುಭಾವಿ. || ೪೫೬||

೪೫೭

ಅನುಭಾವವಿಲ್ಲದ ಕ್ರಿಯೆ ಆಚಾರಕ್ಕೆ ದೂರ.
ಅನುಭಾವವಿಲ್ಲದ ಜ್ಞಾನ ವಿಚಾರಕ್ಕೆ ದೂರ.
ಅನುಭಾವವಿಲ್ಲದ ಭಕ್ತಿ ಅರುವಿಂಗೆ ದೂರ.
ಅನುಭಾವವಿಲ್ಲದ ವೈರಾಗ್ಯ ಅಗಮ್ಯಕ್ಕೆ ದೂರ.
ಗುರುನಿರಂಜನ ಚನ್ನಬಸವಲಿಂಗವನರಿವರೆ ಅನುಭಾವವೇ ಬೀಜ ಕಾಣಾ. ||೪೫೭||

೪೫೮

ಲಿಂಗವನರಿವ ಸಂಗವಿರಹಿತರು ಅನುಭಾವಿಗಳ ಸುಳುಹನರಸಬೇಕು.
ಶಿವಶರಣರ ಸಂಗವ ಹಾರೈಸಬೇಕು.
ಸದ್ಭಕ್ತರಲ್ಲಿ ಪ್ರೇಮರಸವಿರಬೇಕು.
ತನು ಮನ ಪ್ರಾಣದ ಗುಣವನಳಿದಿರಬೇಕು.
ಗುರುನಿರಂಜನ ಚನ್ನಬಸವಲಿಂಗದಲ್ಲಿ ಭಕ್ತಿಬೆಳಗ ಕೂಡಿರಬೇಕು. || ೪೫೮ ||

೪೫೯

ಅನುಭಾವಿ ಅನುಭಾವಿಗಳೆಂದು ನುಡಿದುಕೊಂಬ
ಬಿನುಗುನರರುಗಳನೇನೆಂಬೆನಯ್ಯಾ ?

ಅನುಭಾವಿಯಂಗದಲ್ಲಿ ಆಶೆ ಆಮಿಷಯಿರಲುಂಟೆ ?
ಅನುಭಾವಿಯ ಮನದಲಿ ಮಲತ್ರಯದ ಮೋಹವುಂಟೆ ?
ಅನುಭಾವಿಯ ಪ್ರಾಣದಲ್ಲಿ ದುರ್ವಂಚನೆ ಸಂಕಲ್ಪವುಂಟೆ ?
ಅನುಭಾವಿಯ ಭಾವದಲ್ಲಿ ಕರಣೇಂದ್ರಿಯ ವಿಷಯಭ್ರಾಂತಿಯುಂಟೆ ?
ಇಂತು ದುರ್ಗುಣಾನುಭಾವಿತನಾಗಿ ಶಿವಾನುಭಾವಿಯೆಂದೊಡೆ
ಬಾಯಲ್ಲಿ ಬಾಲ್ಬುಳ ಸುರಿಯವೆ
ಗುರುನಿರಂಜನ ಚನ್ನಬಸವಲಿಂಗಾ ? ॥ ೪೫೯ ॥

೪೬೦

ಗುರುಲಿಂಗಚರಶೇಷ ಪದಜಲ ಭಸಿತ ರುದ್ರಾಕ್ಷಿ ಪ್ರಣವದ
ಪ್ರಕಾಶ ಸುಖೋನ್ನತಿಯನರಿಯದೆ,
ಮುದ್ರೆ ಭದ್ರ ಛಿದ್ರ ಚೆದುರಿಕೆಯಿಂದೆ
ಬೆಳಗು ಕಂಡುಕೊಂಡೆನೆಂಬ ಕುಂಭಿನಿಯುಳ್ಳ ಸುಂಬಳಗುರಿಗಳ
ಗತಿಮತಿಗತೀತ ಕಾಣಾ ನಮ್ಮ ಗುರುನಿರಂಜನ ಚನ್ನಬಸವಲಿಂಗವು. ॥ ೪೬೦ ॥

೪೬೧

ಅತ್ತಿತ್ತಲುಕದೆ ನೆತ್ತಿಯೊಳಗುಸಿರು ಸುತ್ತಿ ಕಣ್ಣಸಿಕ್ಕಿಸಿ
ಕಂಡೆವೆಂಬ ಭಿನ್ನಭಾವಿಗಳರಿವಿಂಗೆ,
ಚನ್ನಷಟ್‌ಸ್ಥಲ ಕ್ರಿಯಾಸುಜ್ಞಾನ ಸುವಿಲಾಸ ಸುಪ್ರಭಾಲಿಂಗವು
ಸ್ವಪ್ನದಲ್ಲಿ ಸುಳಿಯದು ಕಾಣಾ, ಗುರುನಿರಂಜನ ಚನ್ನಬಸವಲಿಂಗಾ. ॥ ೪೬೧ ॥

೪೬೨

ಕಷ್ಟಯೋಗಿಗಳ ಕರ್ಮವ ನೋಡಬಾರದು ಕಾಣಾ.
ಅಷ್ಟಾಂಗಯೋಗವಿಡಿದು ಅನ್ನುದಕವ ತೊರೆದು,
ಆಯಾಸಬಟ್ಟು ಅಭಿನ್ನ ವಸ್ತುವನು ಭಿನ್ನವಿಟ್ಟು,
ಕಂಡು ಕೂಡಿ ಮುಕ್ತಿಯ ಹಡೆಯಬೇಕೆಂದು,
ಕಣ್ಣ ಕಳಕೊಂಡು ಕಾಂತಾರ ಬಿದ್ದುಹೋಗುವ ಭ್ರಾಂತಬಾಲಕರು
ಎಂತು ಮುಕ್ತಿಯ ಹಡೆವರಯ್ಯಾ ಗುರುನಿರಂಜನ ಚನ್ನಬಸವಲಿಂಗಾ ? ॥ ೪೬೨॥

೪೬೩

ಬೊಮ್ಮತಿಮ್ಮರರಿಯಬೇಕೆಂದು ಅಡರಿಪೊಕ್ಕು
ಕಂಗೆಟ್ಟು, ಬಳಲಿ ಅಂಗಭಂಗವಾದುದರಿಯದೆ
ಹಾವಿ ಬೀದಿಯವೊಡ ಕೇಳಿ ಸಾಧಿಸಿ

ಕಂಡೆನೆಂಬ ಭೇದವಾದಿಗಳನೇನೆಂಬೆನಯ್ಯಾ ?
ನಾದಬಿಂದುಕಲಾತೀತ ನಿಜಾನಂದ ನಿರ್ಮಲ
ಅಖಂಡತೇಜೋಮಯಲಿಂಗವ
ಆದಿಮುಖದಿಂದೆ ಸಾಧಿಸಿಕೊಂಡರಿದು
ಅಂಗ ಮನ ಭಾವಂಗಳಲ್ಲಿ ಸಂಗಸಂಯೋಗಿಯಾದ
ಮಂಗಳಮಹಿಮ ಶರಣರಿಗಲ್ಲದೆ ಅರಿಯಬಹುದೆ
ಗುರುನಿರಂಜನ ಚನ್ನಬಸವಲಿಂಗಾ ? || ೪೬೩ ||

೪೬೪

ಅಂತರಂಗದಲ್ಲಿ ಅರಿಯದಿರ್ದ ಪರಮಮಹಾಲಿಂಗವು
ಗುರುಮುಖದಿಂದೆ ಕರ ಮನ ಭಾವದಲ್ಲಿ ಥಳಥಳಿಸಿ ಬೆಳಗುತ್ತಿರಲು,
ಅಲ್ಲಿಯೇ ಮುಕ್ತಿಯ ಪಡೆದಾನಂದಿಸಲರಿಯದೆ,
ಕಾಶಿ ಗೋಕರ್ಣ ರಾಮೇಶ ನದಿ ಕಡಲತೀರವೆಂಬ ಪುಣ್ಯಕ್ಷೇತ್ರಂಗಳೆಂದು
ಕಾಗೆ ಶಿಖರವನೇರಿ ಕರ್‍ರೆಂದು ಹೋದಂತೆ
ಕಂಡರೇನು ಕಾಣಿಸಿಕೊಂಡರೇನು ಹೋಗಿ ಬರುವ ಮಾರ್ಗ ತಪ್ಪದು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. || ೪೬೪ ||

೪೬೫

ಲಕ್ಷವಂದನು ಲಕ್ಷಿಸಿ ಲಕ್ಷಿಸಲರಿಯದೆ
ಅಂತರ್ಲಕ್ಷ, ಮಧ್ಯರ್ಲಕ್ಷ, ಬಹಿರ್ಲಕ್ಷವೆಂದು
ತನುಕರಣೇಂದ್ರಿಯಾಯಾಸದಿಂದರಿವುದೇನು ? ಆದದ್ದೇನು ?
ಅವಿರಳಪ್ರಭಾನಂದ ಪ್ರಾಣಲಿಂಗವನರಿವಡೆ
ಆಯಾಸವಿಲ್ಲದೆ ಅರಿದಾನಂದಿಸಬೇಕು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೪೬೫ ||

೪೬೬

ಪ್ರಾಣಲಿಂಗವಾದ ಬಳಿಕ ಪ್ರಾಣದಲ್ಲಿ ಗುಣವಿರಲುಂಟೆ ?
ಪ್ರಪಂಚ ತೋರಲುಂಟೆ ?
ಸಂಕಲ್ಪಭ್ರಮೆಯುಂಟೆ ?
ಅಜ್ಞಾನ ಸುಜ್ಞಾನ ಆವರಿಸಲುಂಟೆ ?
ಮಾಯಾಮೋಹ ಮಲದಲ್ಲಿ ಮಗ್ನತೆಯುಂಟೆ ?
ಇಂತು ಸಕಲ ಸಂಭವಿತನಾಗಿ ನಾನು ಪ್ರಾಣಲಿಂಗಸಂಬಂಧಿಯೆಂದರೆ

ಕಾಲನ ಕರ್ಮ ಕಡೆಗಾಣದಿರ್ದನು,
ಗುರುನಿರಂಜನ ಚನ್ನಬಸವಲಿಂಗಕ್ಕೆ ದೂರವಾಗಿ. || ೪೬೬ ||

೪೬೭

ಶ್ರದ್ಧೆಯಲ್ಲಿ ಮುಳುಗಿದರೆ ನೈಷ್ಠೆ ನೆರೆಯುವುದು,
ಸಾವಧಾನ ಸಂಭವಿಸುವುದು.
ಅನುಭಾವವಿಡಿದು ಆಚರಿಸುವ ಪ್ರಾಣಲಿಂಗಿಯ ಮನಸ್ಸು
ಆನಂದವನು ಬಯಸುತ್ತಿಹುದು,
ಕರ್ಮವನು ಕತ್ತರಿಸುತ್ತಿಹುದು, ಖಂಡಿತವ ಕಡೆಗಿಡುತ್ತಿಹುದು.
ಬಂಡುಂಬ ಭ್ರಮರದಂತೆ ಮಂಡಲತ್ರಯದ
ಮಧ್ಯದಲ್ಲಿ ನಿರ್ಮಲಬೆಳಗ ಸೇವಿಸುತ್ತಿಹುದು
ಗುರುನಿರಂಜನ ಚನ್ನಬಸವಲಿಂಗವ ಮುಟ್ಟಿ. || ೪೬೭ ||

೪೬೮

ತಂದೆತಾಯಿಗಳಿಂದುದಯವಾಗಿ ಬಂದು
ಮೂರೂರು ಭೂಮಿಯೊಳಗೆ ಮೂರು ಮುಖದ ಎತ್ತು,
ಹಗಲಿರುಳು ಕಾಳಗತ್ತಲೆಯಲ್ಲಿ ಮೂರು ನಾಮವ ಹೊತ್ತು,
ಮೂರು ಹುಲ್ಲಿನ ರಸವನು ನೀರ ಮೇಲೆ ನಿಂದು ಸೇವಿಸುತ್ತಿರಲು,
ನಾಭಿಯಿಂದೆ ಅಗ್ನಿ ಸೂಸಿ ಉರಿಹತ್ತಿ ಎತ್ತು ಬೆಂದಿತ್ತು ನೋಡಾ !
ನೀರೊಳಗಿರ್ದ ಗಜಾಳಿ ಕುರಿಗಳ ಕೂಡಿ ನೋಡುತಿರ್ದವು.
ಪರಿಪರಿಯಿಂದೆ ಬೀಸುವ ಗಾಳಿ ನಿಂದಿತ್ತು ನೋಡಾ !
ಗೊರವನ ಕೈಪಂಜಿನ ಬೆಳಗ ಕಂಡು
ಕೈಕಾಲುಮುಖದೊಳೆದು ನಡೆದು ನಿಂದಲ್ಲಿ ಬೆಳಗಿನ ಬೆಳಗು ತಾನೆ ನೋಡಾ
ಗುರುನಿರಂಜನ ಚನ್ನಬಸವಲಿಂಗಾ ! || ೪೬೮ ||

೪೬೯

ಪ್ರಾಣಲಿಂಗದ ಬೆಳಗ ಕಂಡೆವೆಂದು
ಕಣ್ಣಸಿಕ್ಕಿಸಿ ಕಷ್ಟದಿಂದೆ ಕಳೆಯನೆಬ್ಬಿಸಿ ಕಳೆದುಳಿವ ಖಂಡಿತರು
ಪ್ರಾಣಲಿಂಗ ಸಂಬಂಧಿಗಳೆಂತಪ್ಪರಯ್ಯಾ ?
ಕಾಯದ ಕರ್ಮವಳಿಯದೆ, ಮನದ ಮಲಿವನ ತೊಳೆಯದೆ,
ಭಾವದ ಜಂಜಡ ಹರಿಯದೆ ಪ್ರಾಣಲಿಂಗಸಂಬಂಧಿಗಳೆಂತಪ್ಪರಯ್ಯಾ ?
ಎಂತಿರ್ದಂತೆ ಭ್ರಾಂತಿ.

ಗುರುನಿರಂಜನ ಚನ್ನಬಸವಲಿಂಗದಲ್ಲಿ
ಪ್ರಾಣಲಿಂಗಾನುಭಾವ ಸರಸವಲ್ಲ ಕಾಣಾ. || ೪೭೯ ||

೪೭೦

ಆತ್ಮನು ಪರಮಾತ್ಮನುಯೆಂದು ಭಾವಿಸುವ
ಭಾವ ಬಂಧನವಲ್ಲಿಪ್ಪ ಬರಿಜ್ಞಾನಿಗಳಿಗಳವಲ್ಲ.
ನಿಜಾನುಭಾವದ ನಿಲವು ಕತ್ತಲೆ ಬೆಳಗಿನ ಕಳೆಯೊಳೊಂದಿ
ನಿತ್ಯದ ನಿಜವನರಿದಿಹೆನೆಂಬ ಮಿಥ್ಯಮನನೀಯ ಕೊನೆಗೆ ನಿಲುಕದು,
ಸತ್ಯಜ್ಞಾನಾನುಭಾವದ ಬೆಳಗು.
ದಶಮಾರುತನ ಸುಳುಹ ತಪ್ಪಿ ಸುಳಿಯಲರಿಯದಿರ್ದಡೆ,
ಪ್ರಾಣಲಿಂಗದ ಸಮರಸಾನುಭಾವಸಂಬಂಧಿ
ಸದ್ಗುರು ನಿರಂಜನ ಚನ್ನಬಸವಲಿಂಗದಲ್ಲಿ. || ೪೭೦ ||

೪೭೧

ಆರು ಕಮಲದ ಶತಪತ್ರದ ತ್ರಿದಳದೊಂದೆಸಳದ
ಅವಿರಳಾಲಯದಿಂದೆಸೆವ ಪರಬ್ರಹ್ಮವು
ಕ್ರಿಯಾಜ್ಞಾನ ಭಾವಾಚರಣೆಗೆ ಕೂರ್ತು ಕರಸ್ಥಲಕ್ಕೆ ಬಂದಬಳಿಕ
ಕಣ್ಮನ ಭಾವ ತುಂಬಿ ಪ್ರಾಣವೇದಿಯಾಗಿರಬೇಕಲ್ಲದೆ
ದ್ವೈತಾದ್ವೈತ ಯೋಗಮಾರ್ಗವಿಡಿದು
ಬ್ರಹ್ಮರಂಧ್ರದಲ್ಲಿಪ್ಪ ಚಿತ್ಕಳೆಯ ಕಂಡು ಕೂಡಿ ಮುಕ್ತನಾಗಬೇಕೆಂಬ
ಪಶುಪ್ರಕೃತಿಗಳನೇನೆಂಬೆನಯ್ಯಾ ಗುರುನಿರಂಜನ ಚನ್ನಬಸವಲಿಂಗಾ. || ೪೭೧ ||

೪೭೨

ರೇಚಕ ಪೂರಕ ಕುಂಭಕವಿಡಿದು ಮಾಡಿ ಮಾಡಿ ಕೆಟ್ಟರು
ಅನಂತ ಬರಿಯ ಹಿರಿಯರು.
ಅರಿದು ಮರೆದು ನೆರೆದು ನಿಂದಲ್ಲಿ
ಹೊರಗೊಳಗೆ ತುಂಬಿ ತೋರಿತ್ತು
ಗುರುನಿರಂಜನ ಚನ್ನಬಸವಲಿಂಗದ ಬೆಳಗು. || ೪೭೨ ||

೪೭೩

ಪ್ರಾಣಲಿಂಗವ ಕಂಡವರೆಂದು ನುಡಿದುಕೊಂಬ
ಕೋಣಮೂಳರನೇನೆಂಬೆನಯ್ಯಾ ?
ಕಂಡ ಲಿಂಗವ ಕೊಂಡ ಪರಿಯೆಂತು ಹೇಳಾ !

ಕಂಡವರಾರು ? ಕಾಣಿಸಿಕೊಂಡವರಾರು ?
ಬೆಂಡಾಗಿ ಬಿದ್ದು ಹೋದರು ನೋಡಾ
ಗುರುನಿರಂಜನ ಚನ್ನಬಸವಲಿಂಗದಾದಿ ಮಧ್ಯಂತವನರಿಯದೆ. ॥ ೪೭೩ ॥

೪೭೪

ಆರಾರರಿಂದೆ ಮೀರಿದ ಅಪ್ರತಿಮಲಿಂಗವ ಆರಿಸಿಕೊಂಡ ಬಳಿಕ
ಅರಿದರಿದಾಚರಿಸಲರಿಯದೆ,
ಪುರಾಣವಾಕ್ಯವನರಿದು ಕಾಂಬುವೆನೆಂದು
ಸತ್ಕ್ರಿಯಾ ಸುಜ್ಞಾನ ಬಾಹ್ಯನಾಗಿ,
ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ
ಧ್ಯಾನ ಧಾರಣ ಸಮಾಧಿಗಳೆಂಬ
ಅಷ್ಟಾಂಗಯೋಗಾಭ್ಯಾಸದಿಂದ ಕಷ್ಟ ಕಡೆಗಾಣದೆ
ಕೆಟ್ಟು ಹೋಗಿಬರುವ ಮಿಟ್ಟೆಯ ಭಂಡರ ಎನಗೊಮ್ಮೆ ತೋರದಿರಾ
ಗುರುನಿರಂಜನ ಚನ್ನಬಸವಲಿಂಗಾ. ॥ ೪೭೪ ॥

೪೭೫

ಲಿಂಗಸಂಬಂಧಿಗಳೆಂಬ ಭಂಗಗೇಡಿ ಭವಿಗಳನೇನೆಂಬೆನಯ್ಯಾ ?
ಲಿಂಗಸಂಬಂಧಿಗಳ ಅಂಗದಲ್ಲಿ ಆಸೆ ಆಮಿಷ ಪ್ರಕೃತಿಪರಿಗಳೆಲ್ಲಿಹದೊ ?
ಲಿಂಗಪ್ರಾಣಿಗಳಿಗೆ ಮನದ ಸಂಕಲ್ಪವಿಕಲ್ಪಗಳೆಲ್ಲಿಹದೊ ?
ಪ್ರಾಣಲಿಂಗಿಗಳಿಗೆ ಪ್ರಾಣೇಂದ್ರಿಯ ವಿಷಯಸುಖವೆಲ್ಲಿಹದೊ ?
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಹುಸಿಡಂಭಕ ಹುಳುಕನಲ್ಲ ಪ್ರಾಣಲಿಂಗಿ. ॥ ೪೭೫ ॥

೪೭೬

ಸ್ವಪ್ನದ ಸುಖದಣ್ಣಗಳು ಜಾಗ್ರದ ಸುಖವನರಿಯರು,
ಮೂರು ಬಣ್ಣದ ಮನೆಯೊಳಿಪ್ಪ ನಾರಿಯ ಸಂಗವ ತೊರೆದು
ಮೂರುಪರ್ವತವ ಹಿಡಿದಾಡುವ
ಕರಿಯ ಪರಿಯ ಮೋಹದಲ್ಲೆಸೆವರು ನೋಡಾ !
ಕಾಲಸಂದಿನ ಬಾಲೆಯೊಳು ಸಿಲ್ಕಿ
ಮೇಲು ಕಾಸಾರ ಪದ್ಮಪ್ರಭೆಯೊಳಿರ್ದೆನೆಂಬ
ಶಬ್ದಜಾಲಿಗಳನೊದ್ದು ಕೆಡಹುವರು ಕಾಲನವರು,
ಗುರುನಿರಂಜನ ಚನ್ನಬಸವಲಿಂಗವತ್ತ ಬರಗೊಡದೆ. ॥ ೪೭೬ ॥

೪೭೭

ಪಂಚವಕ್ತ್ರದ ಮಿಂಚು ಮೈ ಸೋಂಕಿ
ಪಂಚವಕ್ತ್ರನ ಸಂಚವನರಿಯದೆ
ಕೆಂಚ ಕರಿಕರತ್ತಿತ್ತಾವರಲ್ಲಾ !
ಪಂಚ ಪಂಚವದಾಟಿ ಗೊಂಚಲ ಫಳಿಕಿನಲ್ಲಿ ಹೊಳೆವ ಪರಶಿವಲಿಂಗವನು,
ಪರಿಪರಿಯಿಂದೆ ಕಂಡು ಪರಮಸುಖಿಯಾಗಿರ್ದೆನು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೪೭೭ ||

೪೭೮

ಸೂರ್ಯ ಚಂದ್ರ ಅಗ್ನಿಯೆಂಬ ಮಂಡಲಮಧ್ಯದಲ್ಲಿ ತೋರುವ
ಪ್ರಚಂಡಮೂರುತಿಯ ಕಂಡೆನಯ್ಯಾ.
ಕಂಡೆನೆಂಬ ಕಾಯವಂತರಿಗೆ ಕಾಣದಿರ್ಪ ನೋಡಾ !
ಕಾಣೆನೆಂಬ ಕಲ್ಪರಹಿತರಿಗೆ ಕಾಣುತಿರ್ಪ ನೋಡಾ !
ಆತನೇ ಎನ್ನ ಪ್ರಾಣಲಿಂಗ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೪೭೮ ||

೪೭೯

ವಡಬಾಗ್ನಿಯೆದ್ದು ಕಡಲನೆಲ್ಲ ಹೀರಿದರೆ
ಮಡದಿ ಪುರುಷರ ಪಡಿಪಾಟಯೇನೆಂಬೆನಯ್ಯಾ.
ಹಡೆದ ಮಗನ ಹದ್ದು ನುಂಗಿದರೆ ಇದ್ದವರೆಲ್ಲಯೆದ್ದು ಬಂದಾರು
ಗುರುನಿರಂಜನ ಚನ್ನಬಸವಲಿಂಗದಲ್ಲಿಗೆ. || ೪೭೯ ||

೪೮೦

ಅತ್ತೆ ಅಳಿಯನ ಸಂಗವ ಮಾಡಿ
ಒಳ ಒಳಗಿನ ಗೆಳೆಯರ ಬಳಿವಿಡಿಯನಾರು ಬಲ್ಲರಯ್ಯಾ !
ಅಳಿಯ ನೆಂಟರ ಕೂಟವಂದಾದಲ್ಲಿ
ನಿಂದಿತ್ತು ಪ್ರಾಣಲಿಂಗಸಂಬಂಧ ಗುರುನಿರಂಜನ ಚನ್ನಬಸವಲಿಂಗದಲ್ಲಿ. ||೪೮೦||

೪೮೧

ಆರೆತ್ತಿನ ಹರದಂಗೆ
ನೂರೊಂದು ಬಗೆಯಲ್ಲಿ ತೆರಿಗೆಯ ಕೊಳುತಿರ್ದನೊಬ್ಬ ರಾಜ.
ಐವತ್ತಾರು ದೇಶದೊಳಗೆ ಹೆಂಡರ ಕುಶಲತ್ವದಿಂದೆ ಹರದ ಬಾಳಿ,
ಹಿರಿಯ ಮನೆಯೊಳಗೆ ಚರಣಗಳನೂರಿ ನೆರೆಯಲು

ಸಂಬಂಧವಾಯಿತ್ತು ಪ್ರಾಣಲಿಂಗ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೪೮೧ ||

೪೮೨

ನಡುಮನೆ ಕಂಬದೊಳಗಿರ್ದ ಬೆಂಕಿ
ಹೊರಗೆದ್ದು ಊರನೆಲ್ಲ ಸುಟ್ಟಿತ್ತು ನೋಡಾ !
ತಳವಾರನ ಮಡದಿ ಹಡೆದಮಕ್ಕಳ ಬಿಟ್ಟು
ಉರಿಯ ಸೀರೆಯನುಟ್ಟು ಗಂಡನ ಶಿರವ ಕೊಯ್ದು
ಹಿರಿಯ ಮಗನ ನುಂಗಿ ಉಗುಳದಿರಲು
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಪ್ರಾಣಲಿಂಗಸಂಬಂಧವೆಂಬೆ ಕಾಣಾ. || ೪೮೨ ||

೪೮೩

ಆಧಾರಚಕ್ರದಲ್ಲಿ ಅವಿರಳಪ್ರಕಾಶವನು ತೋರಿ ಬೀರಲಿಲ್ಲದ ಲಿಂಗವ
ಆಚಾರಮುಖದಲ್ಲೈದಿ ಕಂಡು ಸುಖಿಸಬಲ್ಲರೆ ಪ್ರಾಣಲಿಂಗಿ.
ಸ್ವಾಧಿಷ್ಠಾನಚಕ್ರದಲ್ಲಿ ಬಹುಪ್ರಕಾಶವನು ತೋರಿ ಬೀರಲಿಲ್ಲದ ಲಿಂಗವ
ಮಂತ್ರಮುಖದಲ್ಲೈದಿ ಕಂಡು ಸುಖಿಸಬಲ್ಲರೆ ಪ್ರಾಣಲಿಂಗಿ.
ಮಣಿಪೂರಕಚಕ್ರದಲ್ಲಿ ಅಗಣಿತಮಯಪ್ರಕಾಶವನು ಕಾಣಿಸಿಕೊಳ್ಳದ ಲಿಂಗವ
ನಿರೀಕ್ಷಣೆಮುಖದಲ್ಲೈದಿ ಕಂಡು ಪರಿಣಾಮಿಸಬಲ್ಲರೆ ಪ್ರಾಣಲಿಂಗಿ.
ಅನಾಹತಚಕ್ರದಲ್ಲಿ ಅಚ್ಚಪ್ರಕಾಶವ ತೋರಿ ತೋರದ ಲಿಂಗವ
ಅಜನಮುಖದಲ್ಲೈದಿ ಕಂಡು ಆನಂದಮಯನಾಗಬಲ್ಲರೆ ಪ್ರಾಣಲಿಂಗಿ.
ವಿಶುದ್ಧಿಚಕ್ರದಲ್ಲಿ ಘನಪ್ರಕಾಶವನು ತೋರಿ ನಿಲುಕದ ಲಿಂಗವ
ಅಂತಸ್ತೌತ್ರ್ಯಮುಖದಲ್ಲೈದಿ ಕಂಡು ಪರಿಣಾಮಿಸಬಲ್ಲರೆ ಪ್ರಾಣಲಿಂಗಿ.
ಆಜ್ಞಾಚಕ್ರದಲ್ಲಿ ಮಹಾಘನಪ್ರಕಾಶವನು ತೋರಿ ಆರಿಸದ ಲಿಂಗವ
ಆನಂದಮುಖದಲ್ಲೈದಿ ಕಂಡು ಹೆಚ್ಚಬಲ್ಲರೆ ಪ್ರಾಣಲಿಂಗಿ.
ಬ್ರಹ್ಮಚಕ್ರದಲ್ಲಿ ಅನಂತಪ್ರಕಾಶವ ತೋರಿ ತೋರದ ಲಿಂಗವ
ಪರಿಪೂರ್ಣಮುಖದಲ್ಲೈದಿ ಕಂಡು ಆನಂದಿಸಬಲ್ಲರೆ ಪ್ರಾಣಲಿಂಗಿ.
ಶಿಖಾಚಕ್ರದಲ್ಲಿ ಅಖಂಡಪ್ರಕಾಶವನು ತೋರಿ ಕಾಣಿಸದ ಲಿಂಗವ
ಅರುವಿನಮುಖದಲ್ಲೈದಿ ಕಂಡು ಸುಖಮಯನಾಗಬಲ್ಲರೆ ಪ್ರಾಣಲಿಂಗಿ.
ಪಶ್ಚಿಮಚಕ್ರದಲ್ಲಿ ಅಖಂಡ ಮಹಾಪ್ರಕಾಶವನು ತೋರಿ ಮೀರಿದ ಲಿಂಗವ
ಮಹದರುವಿನಮುಖದಲ್ಲೈದಿ ಕಂಡು ಅಹ್ಲಾದಿಸಿಕೊಳಬಲ್ಲರೆ ಪ್ರಾಣಲಿಂಗಿ.
ಇಂತು ನವಚಕ್ರದಲ್ಲಿ ನವಪ್ರಕಾಶವಾಗಿ ತೋರಿ ಮೀರುವ ಅಪ್ರತಿಮಲಿಂಗವ

ಸದ್ಗುರುವಿನ ಮುಖದಲಿ ಕರಸ್ಥಲಕ್ಕೈದಿಸಿ
ಕಂಡು ವಿನೋದಮಯನಾಗಬಲ್ಲರೆ ಪ್ರಾಣಲಿಂಗಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೪೮೩ ||

೪೮೪

ಎನ್ನ ಕಾಯದಲ್ಲಿ ನಿನ್ನ ಕಂಡು ನಾನು ಕಾಣಿಸಿಕೊಳ್ಳದಿರ್ದಡೆ
ಹೊತ್ತು ನಡೆಯಬಹುದು.
ಎನ್ನ ಮನದಲ್ಲಿ ನಿನ್ನ ಕಂಡು ನಾನು ಶೂನ್ಯನಾದಡೆ
ಹೊತ್ತು ನಡೆಯಬಹುದು.
ಎನ್ನ ಪ್ರಾಣದಲ್ಲಿ ನಿನ್ನ ಕಂಡು ನಾನು ವಿರಹಿತನಾದಡೆ
ಹೊತ್ತು ನಡೆಯಬಹುದು.
ಎನ್ನ ಭಾವದಲ್ಲಿ ನಿನ್ನ ಕಂಡು ನಾನು ಲಯವನೈದಿದಡೆ
ಹೊತ್ತು ನಡೆಯಬಹುದು,
ಗುರುನಿರಂಜನ ಚನ್ನಬಸವಲಿಂಗದಲ್ಲಿ ಪ್ರಾಣಲಿಂಗಿಯ ನಾಮವನು. || ೪೮೪ ||

೪೮೫

ನಚ್ಚುಮಚ್ಚಿನ ಅಚ್ಚು ಬಿಚ್ಚಿ ಬೇರಿಲ್ಲದಿಪ್ಪ
ಅಚ್ಚಪ್ರಕಾಶಲಿಂಗವ ಕಂಡ ಶರಣನ ಭಾವಕ್ಕೆ
ವೇದಾಗಮಶಾಸ್ತ್ರ ತರ್ಕಾಳಿಯನರಿದಾಡುವ
ಮರ್ಕಟ ಕೂಕ ಕುಟಿಲ ವ್ಯವಹಾರಿಗಳ ಅರಿವು ಆಶ್ಚರ್ಯವಾಗಿ ಹೋಗುವದು
ಗುರುನಿರಂಜನ ಚನ್ನಬಸವಲಿಂಗದ ಪದಬೆಳಗನರಿಯದೆ. || ೪೮೫ ||

೪೮೬

ಅನಂತಕೋಟಿ ಸೋಮಸೂರ್ಯಾಗ್ನಿ
ಪ್ರಕಾಶವ ಕಂಡು ಮುಳುಗಿದ ಮಹಾತ್ಮನು
ಖಂಡಿತ ಮಾರ್ಗದ ಕರ್ಮಕತ್ತಲೆಯ ಕನಸಿನೊಳಗರಿಯನು.
ಭಿನ್ನ ನುಡಿಗಡಣಕ್ಕಿಂಬುಗೊಟ್ಟರಿವ ಮನತ್ರಯವು ಮಹದಲ್ಲೊಪ್ಪುತ್ತಿಹುದು.
ಸಕಲನಿಃಕಲಸನುಮತ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಪ್ರಾಣಲಿಂಗಿ. || ೪೮೬ ||

೪೮೭

ಏಳು ಸುತ್ತಿನ ಐದು ವರ್ಣದ ಪಟ್ಟಣಕ್ಕೆ ಒಂಬತ್ತು ಬಾಗಿಲು.
ಮೊರವೊಳಯವಲೆರಡಗುಸೆಯ ಬಾಗಿಲು.

ಮುಂದೇಳು ದ್ವಾರ, ತುಂಬಿದ ವ್ಯಾಪಾರ, ಸರಕ ಕೊಳುಕೊಡೆಗಳುಂಟು.
ಅದೆಂತೆಂದೊಡೆ :
ಎರಡು ಬಾಗಿಲಲ್ಲಿ ತಳವಾರನ ವಾಸನೆಯನರಿದು ಮಾರುವದು.
ಮತ್ತೆರಡು ಬಾಗಿಲಲ್ಲಿ ರಮ್ಯವಾದಖಿಳಜೀನಸು ಮಾರುವದು
ಕೊತವಾಲನ ಮುಂದಿಟ್ಟು.
ಮತ್ತೆರಡು ಬಾಗಿಲಲ್ಲಿ ಊರಹಿರಿಯನ ಮಾತಕೇಳಿ ಸಕಲವ ಮಾರುವದು.
ಮತ್ತೊಂದು ಬಾಗಿಲಲ್ಲಿ ಶೆಟ್ಟಿ ಮುಂತಾಗಿ ಬೇಕಾದಂತೆ ಮಾರುವದು.
ಇಂತು ಹೊರಗೊಳಗಿರ್ದ ಜನರು ಲೆಕ್ಕವಿಲ್ಲದೆ
ಪಟ್ಟಣಶೆಟ್ಟಿಯ ಮಾತಿನೊಳಗಿರ್ದರು.
ಎಂಟು ಕೊತ್ತಲ ಸುತ್ತಿ ವ್ಯಾಪಾರ ಮಾಡುವಲ್ಲಿ
ಕಂಟಕ ಬಂದುದನೇನೆಂಬೆನಯ್ಯಾ !
ಅಂಗೈಯೊಳರಳಿದ ಬೆಂಕಿ ಪಟುವಾಗಿ ಅಂಗಳದಲ್ಲಿ ಉರಿಯಿತ್ತು.
ಪಟ್ಟಣ ಬೆಂದು, ಮಳಿಗೆಗಳು ಸುಟ್ಟು, ಜನರೆಲ್ಲ ಉರಿದು
ಕೊತ್ತಲೆಂಟಕ್ಕಾವರಿಸಲು
ಶೆಟ್ಟಿ ಮಧ್ಯಬುರುಜನೇರಲು,
ಬೆಂದ ತಲೆ ಉರಿದು ನಿಂದು ನೋಡಲು
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಪ್ರಾಣಲಿಂಗಸಂಬಂಧವದು ಕಾಣಾ. || ೪೮೭ ||

೪೮೮

ಬ್ರಹ್ಮನಂಶವ ಸವರಿ ಸತ್ಯಲೋಕವ ಸುಟ್ಟು ಅಲ್ಲಿಪ್ಪಜನರ ಕೊಳುಕೊಟ್ಟು,
ವಿಷ್ಣುವಿನಂಶವ ಸವರಿ ವೈಕುಂಠವ ಸುಟ್ಟು ಅಲ್ಲಿಪ್ಪ ಜನರ ಕೊಳುಕೊಟ್ಟು,
ರುದ್ರನಂಶವ ಸವರಿ ಕೈಲಾಸವ ಸುಟ್ಟು ಅಲ್ಲಿಪ್ಪ ಜನರ ಕೊಳುಕೊಟ್ಟು,
ಹಾಳು ದೇಶದೊಳಗಿರ್ದ ಮೂರುಪುರವ ತುಂಬಿಸಿ
ಮೂರುದೊರೆಗಳ ಮುಂದಿಟ್ಟು ತೂಗಿಸ್ಯಾಡಬಲ್ಲರೆ
ಅದೇ ಕಾಣಾ ಗುರುನಿರಂಜನ ಚನ್ನಬಸವಲಿಂಗದಲ್ಲಿ
ಪ್ರಾಣಲಿಂಗಸಂಬಂಧ. || ೪೮೮ ||

೪೮೯

ಭೂಮಿಯ ಕುಟ್ಟಿ ಶೋಧಿಸಿ ಕಂಡು,
ನೀರಜಲದಲ್ಲಿ ತೊಳೆದು ಹೊಳವಮಾಡಿ ಕಂಡು,
ಕೆಂಡವ ಸುಟ್ಟು ಬಯಲಮಾಡಿ ಕಂಡು,

ಎರಡು ಆಟವಾಡಿ ಬಯಲಾಟದಲ್ಲಿ ನಿಂದು ನೋಡಲು,
ಆಟನೋಟದೊಳು ಕೂಡಿ ಕೋಟೆಯಮೇಲಣ
ಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶಮಂಡಲಗಳಮಧ್ಯ ಝಗಝಗಿಸುತಿರ್ದ
ಗುರುನಿರಂಜನ ಚನ್ನಬಸವಲಿಂಗವ ಕಂಡು
ಕಣ್ಮುಚ್ಚಿ ಕರಗಿದ ನೋಡಾ ಅಚ್ಚಪ್ರಾಣಲಿಂಗಿ. || ೪೮೯ ||

೪೯೦

ಹೇಮಾದ್ರಿಯ ನಡುವೆ ಹೆರೆಹಿಂಗದಿರ್ದ
ಅನಂತಕೋಟಿ ಸೂರ್ಯಪ್ರಕಾಶವ ಕಂಡೆನಯ್ಯಾ.
ರಜತಾದ್ರಿಯನಡುವೆ ಅಚಲವಾಗಿರ್ದ
ಅನಂತಕೋಟಿ ಚಂದ್ರಪ್ರಕಾಶವ ಕಂಡೆನಯ್ಯಾ.
ಮಂದರಾದ್ರಿಯನಡುವೆ ಅಗಲಬಾರದ
ಅವಿರಳವಾದ ಅಗ್ನಿಪ್ರಕಾಶವ ಕಂಡೆನಯ್ಯಾ.
ಈ ತ್ರಿವಿಧಪ್ರಕಾಶದೊಬ್ಬುಳಿಯೊಳಗೆ ಗುರುನಿರಂಜನ ಚನ್ನಬಸವಲಿಂಗನ ಕಂಡು
ತನುಮನಭಾವ ಬೆಚ್ಚಿ ನಮೋ ನಮೋ ಎನುತಿರ್ದೆನಯ್ಯ. || ೪೯೦ ||

೪೯೧

ಕಾಲತ್ರಯವಿರಹಿತ ಪ್ರಾಣಲಿಂಗಿ,
ಕರ್ಮತ್ರಯವಿರಹಿತ ಪ್ರಾಣಲಿಂಗಿ,
ಕಾಮಿತ ಕಲ್ಪಿತವ ಕಳೆದುಳಿದ ಪ್ರಾಣಲಿಂಗಿ,
ವಾಯುಸಂಚಾರವಳಿದುಳಿದ ಪ್ರಾಣಲಿಂಗಿ,
ಇಂದು ರವಿ ಶಿಖಿಮಂಡಲದ ನಡುವೆ
ಅಖಂಡ ಮಹಾಬೆಳಗಿನೊಳೋಲಾಡುತಿರ್ದ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಪ್ರಾಣಲಿಂಗಿ. || ೪೯೧ ||

೪೯೨

ಸಕಲಸನ್ನಿಹಿತವಾಗಿ ಹೇಮಾದ್ರಿಯನೇರಿ ನಿನ್ನನರಸಿ ಕಂಡಿಹೆನೆಂದಡೆ
ಬ್ರಹ್ಮನ ಬೆಳಗ ತೋರಿ ಕಡೆಸಾರಿದೆಯಯ್ಯಾ !
ಸಕಲಸಂಭ್ರಮದಿಂದೆ ರಜತಾದ್ರಿಯನೇರಿ ನಿನ್ನನರಸಿ ಕಂಡಿಹೆನೆಂದಡೆ
ವಿಷ್ಣುವಿನ ಬೆಳಗ ತೋರಿ ಕಡೆಗೆ ಸಾರಿದೆಯಯ್ಯಾ !
ಸಕಲಸಂಪತ್ತಿನಿಂದೆ ಮಂದರಾದ್ರಿಯನೇರಿ ನಿನ್ನನರಸಿ ಕಂಡಿಹೆನೆಂದರೆ
ರುದ್ರನ ಬೆಳಗ ತೋರಿ ಕಡೆಸಾರಿದೆಯಯ್ಯಾ !
ಕಾಳಬೆಳಗಿನ ಕಾರಣದ ಹಿರಿಯರಿಗೆ

ಬಂದುಂಡು ಹೋಗುವ ಬಟ್ಟೆಯ ತೋರಿ ಕಡೆಸಾರಿದೆಯಯ್ಯಾ.
ಮತ್ತೆ ನಿನ್ನ ಕಾಂಬುವ ಬಗೆ ಯಾವುದೆಂದೊಡೆ
ಕಡೆಗೆ ನಿಂದು ಕೊಡಹಿ ಬೆಡಗಿನಿಂದೆ ಬಂದವನ ಕೂಡಿ ನೋಡಿದಲ್ಲಿ
ಗುರುನಿರಂಜನ ಚನ್ನಬಸವಲಿಂಗದ ಬೆಳಗು ಬೇರಿಲ್ಲ. || ೪೯೨ ||

೪೯೩

ಹೊರಗಿಲ್ಲದ ಒಳಗಿಲ್ಲದ ಕೆಳಗಿಲ್ಲದ ಮೇಲಿಲ್ಲದ
ಹಿಂದಿಲ್ಲದ ಮುಂದಿಲ್ಲದ ತೆರಹಿಲ್ಲದ ಲಿಂಗವ
ಪರಿಪರಿಯಿಂದ ಕಂಡು ಕೂಡಿದೆನೆಂಬ
ಮಂಡೆಹೀನ ಮಲಸಂಯುಕ್ತ ಮಾನವರ ನೋಡಾ !
ಪಲವು ಕಷ್ಟ ಅಭ್ಯಾಸದಿಂದೆ ಗೆಲವುಗೆಟ್ಟು,
ಆಲಿಯೇರಿಸಿ ಆಯಾಸಬಟ್ಟು
ಅರ್ಕೇಂದು ವಹ್ನಿಯಂತೆ ಹೊಳವುದೋರಿ ಹೋದಲ್ಲಿ
ನಾವು ಶಿವನ ಕಂಡೆವೆಂದು ನುಡಿದುಕೊಂಬ ವಾಗದ್ವೈತ ಭವಪ್ರೇರಕರ ಭಾವಕ್ಕೆ
ಗುರುನಿರಂಜನ ಚನ್ನಬಸವಲಿಂಗಪ್ರಕಾಶವು ತೋರಬಾರದು. || ೪೯೩ ||

೪೯೪

ಅಂಗಕ್ಕೆ ಲಿಂಗವ ಭಿನ್ನವಿಟ್ಟು ಆರಾಧಿಸಿ ಅರಿವ
ಕುನ್ನಿಸಿದ್ಧಾಂತಿಯ ಭಾವಕ್ಕೆ ಚಿನ್ಮಯಪ್ರಕಾಶ ಪ್ರಾಣಲಿಂಗವು
ಅಗೋಚರ ನೋಡಾ.
ಅಂಗದಮೇಲೆ ಲಿಂಗಶೂನ್ಯವಾಗಿ ಆತ್ಮನೇ ಲಿಂಗವೆಂದು
ಅಹಂಕಾರದಿಂದರಿವ ಅಪಲಕ್ಷಣಪಸು ಗೊಡ್ಡುವೇದಾಂತಿಯ ಭಾವಕ್ಕೆ
ಮಹಾಪ್ರಕಾಶಮಯ ಪ್ರಾಣಲಿಂಗವು ಅಪ್ರಮಾಣವಾಗಿಹುದು ನೋಡಾ.
ಮತ್ತಂತೆಂದೊಡೆ, ಅಂಗಕ್ಕೆ ಆಚಾರಸಂಬಂಧವಾಗಿ
ಮನಕ್ಕೆ ಸುಜ್ಞಾನಸಂಬಂಧವಾಗಿ
ಭಾವಕ್ಕೆ ಮಹಾನುಭಾವಸಂಬಂಧವಾದಲ್ಲಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಪ್ರಾಣಲಿಂಗಸಂಬಂಧ ನೋಡಾ. ||೪೯೪||

೪೯೫

ಭೂಮಿಯ ಮೇಲೆ ಸೂರ್ಯಚಂದ್ರರ
ಹಿಡಿದು ತಂದು ಕೂಡಿಸಿ ನಿಮಿಷವಳಿದು ನಿಂದಲ್ಲಿ,
ಅತಿಶಯಾನಂದಪ್ರಕಾಶಪ್ರಾಣಲಿಂಗ ತಾನೆ
ಗುರುನಿರಂಜನ ಚನ್ನಬಸವಲಿಂಗ. || ೪೯೫ ||

೪೯೬

ಬ್ರಹ್ಮಮಂಡಲದ ಪರಿಜನಪ್ರಮೋದವಳಿದು,
ವಿಷ್ಣುಮಂಡಲದ ವಿಷಮರುಗಳಳಿದು,
ರುದ್ರಮಂಡಲದ ನಿದ್ರಾಮುದ್ರದ ಛದ್ರ ಬಿಚ್ಚಿ,
ಶುದ್ಧನಿರ್ಮಳವಜಡವಾದಲ್ಲಿ
ಚಿದ್ರಮಣ ಗುರುನಿರಂಜನ ಚನ್ನಬಸವಲಿಂಗ ತಾನೆ ಬೇರಿಲ್ಲ. ॥ ೪೯೬ ॥

೪೯೭

ಜಾಗ್ರಪತಿಯ ವ್ಯವಹಾರ ಕತ್ತಲ ಬೆಳಗಾಯಿತ್ತು.
ಸ್ವಪ್ನಕರ್ತುವಿನ ಕಳವಳ ಸರಿದು ಸಮವೇದಿಸಿತ್ತು.
ಸುಷುಪ್ತ್ಯಾಳ್ವನ ಸೊಗಸುರಿದು ನಿಂದಿತ್ತು.
ಮೂವರ ಹಿಂದೆ ಸಂದಲ್ಲಿ ಬಂದಿತ್ತು
ಗುರುನಿರಂಜನ ಚನ್ನಬಸವಲಿಂಗದ ಬೆಳಗು. ॥ ೪೯೭ ॥

೪೯೮

ಅರಿಯಲಿಲ್ಲದ ಬೆಳಗ ಅರಿದುಕಂಡೆನು ಎನ್ನ ಕಂಗಳ ಮುಂದೆ.
ಮರೆಯಲಿಲ್ಲದ ಬೆಳಗ ಮರೆದುಕಂಡೆನು ಎನ್ನ ಮನದ ಮುಂದೆ.
ಕರೆದು ಕಳುಹಲಿಲ್ಲದ ಬೆಳಗ ಕಳುಹಿ ಕರೆಯದೆ ಕಂಡೆನು ಎನ್ನ ಭಾವದ ಮುಂದೆ.
ಕಾರ್ಯಕಾರಣವಿರಹಿತ ಗುರುನಿರಂಜನ ಚನ್ನಬಸವಲಿಂಗವೆಂಬ ಬೆಳಗ
ಕಾರ್ಯಕಾರಣದಿಂದೆ ಕಂಡೆನು. ॥ ೪೯೮ ॥

೪೯೯

ಪಂಚಸ್ಥಾನದ ಕಳೆಯ ಬೆಳಗಿನ ಬೆಳಗ ಕಂಡು
ಕೂಡಿ ಸುಖಿಸಿದೆನು ಆದಿಯಲ್ಲಿ.
ಮತ್ತೆ ಪಂಚಸ್ಥಾನದ ಕಳೆಯ ಬೆಳಗಿನ ಬೆಳಗ ಕಂಡು
ಕೂಡಿ ಸುಖಿಸಿದೆನು ಮಧ್ಯದಲ್ಲಿ.
ಮತ್ತೆ ಪಂಚಸ್ಥಾನದ ಕಳೆಯ ಬೆಳಗಿನ ಬೆಳಗ ಕಂಡು
ಕೂಡಿ ಸುಖಿಸಿದನು ಅಂತ್ಯದಲ್ಲಿ.
ಇಂತು ತ್ರಿವಿಧ ಕಲೆಯ ಬೆಳಗಿನ ಬೆಳಗು
ಗುರುನಿರಂಜನ ಚನ್ನಬಸವಲಿಂಗ ತಾನೆ ಬೇರಿಲ್ಲ. ॥ ೪೯೯ ॥

೫೦೦

ತನ್ನ ಕಾರ್ಯಕ್ಕಾಸ್ಪದ ಕಳೆಯಳಿಯದ ಮುನ್ನ ಕಂಡು ಕಾಣಿಸಿದ ಸುಳುಹ.
ಸುಳುಹಿಡಿದಮೇಲೆ ಬಳಿವಿಡಿದು ಬಂದು ತೋರಿಕೊಟ್ಟನು.

ಮೂರಾರು ಕೋಟಿ ಸೋಮಸೂರ್ಯರೊಂದಾದ
ಮಹಾಪ್ರಕಾಶವು ಎನ್ನ ಕಂಗಳಮುಂದೆ,
ಕಂಗಳ ಮುಂದಿನ ಬೆಳಗು ಕಾಯವನುಂಗಿ,
ಕರಣವನುಂಗಿ, ಪ್ರಾಣವನುಂಗಿ ಭಾವಬಿಚ್ಚಿ
ಮಹಾನುಭಾವ ಗುರುನಿರಂಜನ ಚನ್ನಬಸವಲಿಂಗ ತಾನಾದುದು. ॥ ೫೦೦ ॥

೫೦೧

ಲಿಂಗವನರಿದ ನಿರ್ಮಲಾತ್ಮಕ ಶರಣನು
ಕಂಗಳಬೆಳಗುಕೂಡಿ ನುಡಿವ, ಕಂಗಳಬೆಳಗುಕೂಡಿ ಹಿಡಿವ,
ಕಂಗಳಬೆಳಗ ಕಡೆಗಿಟ್ಟು, ಸಂಗಸನ್ನಿಹಿತನೆಂದು
ಹಂಗಿನಲ್ಲಿ ಬಾಳುವ ಭಂಗಭಾವನಲ್ಲ,
ಗುರುನಿರಂಜನ ಚನ್ನಬಸವಲಿಂಗ ಪ್ರಾಣಿಯಯ್ಯಾ. ॥ ೫೦೧ ॥

೫೦೨

ಸತ್ತುಚಿತ್ತಾನಂದ ನಿತ್ಯಪರಿಪೂರ್ಣ
ಅಖಂಡಮಯ ಪರಶಿವನ ಕಿಂಚಿತ್‌ಗತಿಮತಿಗಳು,
ಸಂಚಿತಾದಿ ಸಂಬಂಧಕರ್ಮವಿಡಿದ ಮನಭಾವದಿಂದೆ
ಕಂಡರಿದೆವೆಂದು ಹೇಳುವ ಕಲ್ಪಿತವಂತಿರಲಿ,
ಕಂಗಳಮುಂದೆ ಮಂಗಳಮಯವಾಗಿ ಮೂರ್ತಿಗೊಂಡಿಪ್ಪ
ಲಿಂಗವನಂಗಮನಪ್ರಾಣವಾಗಿ ಭಾವಬೆರೆಸಿ
ಮಹಾನುಭಾವವಾದ ಮಹಾಮಹಿಮನೆ ಪ್ರಾಣಲಿಂಗಿ,
ಉಳಿದವರೆಲ್ಲ ಅಧಮರು ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ॥೫೦೨॥

೫೦೩

ಹಂಸಪಕ್ಷಿಯ ದ್ವೈತಲಹರಿಯಿಂದೆ ಉದಯವಾದ ಹಕ್ಕಿ,
ಮೂರುಬಣ್ಣದ ಹೆಡಿಗೆಯ ಹೊತ್ತ ನಾರಿಯ ಕೈಯೊಳು ಮೂರುಪಂಟಿಯಾಗಿ,
ಹಗಲು ಸಂಜೆಗತ್ತಲೆಯಲ್ಲಿ ತಾವೆಯಾಗಿರ್ದವು ನೋಡಾ.
ಒಂದೊಂದು ಬಾಗಿಲಲ್ಲಿ ನಿಂದು ಬಂದ ಬಂದವರ ನುಂಗುತ್ತ
ಮೊದಲು ಮಧ್ಯ ಕಡೆಯೊಳು ಕೆಡಹಿ ಮರೆದಿರ್ದಲ್ಲಿ,
ಅಡಗಿರ್ದ ಸಿಂಹ ಎದ್ದು ಪಡಮುರಿದು ನುಂಗಲು
ಸಿಂಹನ ಮುಖದಲ್ಲಿ ಮೂರುಲಕ್ಷ ಸಿಂಹ ಹುಟ್ಟಿ
ಒಂದಿರುವೆಯೊಳಡಗಿರುವ
ಗುರುನಿರಂಜನ ಚನ್ನಬಸವಲಿಂಗ ತಾನೆ ಬೇರಿಲ್ಲ. ॥ ೫೦೩ ॥

೫೦೪

ಭೂಪಾಲನ ಹೆಂಡತಿಯ ಭುಜದ ಮೇಲಿರ್ದ ಕೋಡಗ
ಗಾಲುಮೇಲಾದ ಶಾಖೆಗಳಿಗೆ ಲಂಘಿಸುವದು ನೋಡಾ !
ಕೋಡಗನ ನಾಭಿಯಲ್ಲಿ ಚಿಕ್ಕೆಮೂಡಿ ಚಂದ್ರನ ಕೂಡಲು
ದೇವಗನ್ನೆಯರು ಆರತಿಯ ಬೆಳಗುತಿರ್ದರು ನೋಡಾ !
ಆ ಬೆಳಗಿನೊಳಗೆ ಗುರುನಿರಂಜನ ಚನ್ನಬಸವಲಿಂಗವನಿದಿರುಗೊಳ್ಳಬಲ್ಲರೆ
ಪ್ರಾಣಲಿಂಗಿಯೆಂಬೆ ಕಾಣಾ. || ೫೦೪ ||

೫೦೫

ಉರಿಯ ಸೀರೆಯನುಟ್ಟ ವನಿತೆಯರ ಶರಗ ಹಿಡಿದುಬರುವವರಾರೊ !
ಹಾವಿನ ಹೆಡೆಯ ನೆಗಹಿ ಕಾಲಕುಣಿಸುತ ಬರುವವರಾರೊ !
ತಲೆಯೊಳಗೆ ಕಾಲಮಡಗಿ ಕಾಲೊಳಗೆ ತಲೆಯ ಮಡಗಿ
ಗಗನದುರಿಯ ಹೊಗುವರಾರೊ !
ಕೆಳಗಣ ಮೂರುಮನೆಯ ದೀಪವ ತಂದು ಮೇಗಣ ಮನೆಗೆ ಬಂದವರಾರೊ !
ಗುರುನಿರಂಜನ ಚನ್ನಬಸವಲಿಂಗಕ್ಕಂಗವಾದ
ಪ್ರಾಣಲಿಂಗಿಯೆಂಬೆ ಕಾಣೊ. || ೫೦೫ ||

೫೦೬

ಕಿಚ್ಚ ಸುಟ್ಟು ಉರಿಯೊಳು ನಿಲ್ಲಬಲ್ಲರೆ ಪ್ರಾಣಲಿಂಗಿ.
ನೀರ ತೊಳೆದು ಚಂದ್ರನ ಪ್ರಭೆಯೊಳಗೆ ನಿಲ್ಲಬಲ್ಲರೆ ಪ್ರಾಣಲಿಂಗಿ.
ತಾ ಸತ್ತು ಕೂಡಿದ ಹೆಣ್ಣಿನ ಕುಲಗೆಡಿಸಿ ಕೂಡಬಲ್ಲರೆ ಪ್ರಾಣಲಿಂಗಿ.
ಗುರುನಿರಂಜನ ಚನ್ನಬಸವಲಿಂಗದಂಗವಾಗಬಲ್ಲರೆ ಪ್ರಾಣಲಿಂಗಿ. || ೫೦೬ ||

೫೦೭

ಕಾಯದೊಳಗೆ ಲಕ್ಷವಿರ್ದಡೆ ಕಾಣಬಾರದು.
ಕರಣದೊಳಗೆ ಲಕ್ಷವಿರ್ದಡೆ ಕಾಣಬಾರದು.
ಪ್ರಾಣದೊಳಗೆ ಲಕ್ಷವಿರ್ದಡೆ ಕಾಣಬಾರದು.
ಭಾವದೊಳಗೆ ಲಕ್ಷವಿರ್ದಡೆ ಕಾಣಬಾರದು.
ತನ್ನೊಳಗೆ ಲಕ್ಷವಿಲ್ಲದಿರ್ದಡೆ ಕಾಣಬಾರದು
ಗುರುನಿರಂಜನ ಚನ್ನಬಸವಲಿಂಗವನು. || ೫೦೭ ||

೫೦೮

ಅಂಗವಾರರಲ್ಲಿ ಬೆಳಗ ನಿಲ್ಲಿಸಿ, ಪ್ರಾಣಾಂಗವಾರರಲ್ಲಿ ಬೆಳಗ ನಿಲ್ಲಿಸಿ,
ಎರಡೊಂದು ಪಾದವಿಡಿದು ಸಕಲರು ಕೂಡಿ ಬಂದು ಶರಣೆಂದು ಮರೆವರೆ,
ಗುರುನಿರಂಜನ ಚನ್ನಬಸವಲಿಂಗದಲ್ಲಿ ಅದೇ ಪ್ರಾಣಲಿಂಗಸಂಬಂಧವು. || ೫೦೮||

೫೦೯

ಮೂವರರಿಯದ ಮುಗ್ಧಮಾತಿನ ಜಾಣರರಿಯರು,
ನೀತಿಯ ಜಾಣರರಿಯರು, ಕಷ್ಟದ ಕರ್ಮಿಗಳರಿಯರು.
ಸೋತುಕಾಣದ ಜಾತಶೂನ್ಯ ಅಜಾತ ಬಲ್ಲ
ನಮ್ಮ ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೫೦೯ ॥

೫೧೦

ಜೀವಪರಮರನೊಂದುಮಾಡಿ ಕಾಣಬೇಕೆಂಬ
ಸಂದೇಹಸೂತಕಭಾವಕ್ಕೆ ಅತೀತ ಕಾಣಾ.
ಅಭಿನ್ನವಸ್ತುವ ಭಿನ್ನವಿಡುವ ಬಗೆಯೆಂತು ?
ಭಿನ್ನವಾಗಿರ್ದ ಜೀವ ಶಿವನಾಗುವ ಬಗೆಯೆಂತು ?
ಹಗಲಿರುಳುವೊಂದಾದರೆ ಕಾಣಬಹುದು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೫೧೦ ॥

೫೧೧

ತಾಮಸವ ತರಿದು ಕಲ್ಪನೆಯ ಕಳೆದು, ಸಂಶಯಗುಣವಳಿದು,
ಭ್ರಾಂತಿವಿರಹಿತನಾಗಿ, ಕಾಯಮನಪ್ರಾಣಭಾವಕ್ಕೆ ಪ್ರಭೆಯನೂಡಿ,
ಮತ್ಸ್ಯ ಕೂರ್ಮ ವಿಹಂಗ ಗತಿಯರಿದು ಕಂಡು ಮರೆದು
ಪರಿಣಾಮಮುಖಿ ತಾನೆ ಪ್ರಾಣಲಿಂಗಿ ಕಾಣಾ
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೫೧೧ ॥

೫೧೨

ಶಿವಶಕ್ತಿಯರೊಂದಾಗಿ
ನಂದಿಯನೇರಿ ಮುಂದುವರಿದು ನಿಂದಲ್ಲಿ
ಬಂದುದು ಪ್ರಾಣಲಿಂಗಸಂಬಂಧ ನೋಡಾ
ಗುರುನಿರಂಜನ ಚನ್ನಬಸವಲಿಂಗಾ. ॥ ೫೧೨ ॥

## ಪ್ರಾಣಲಿಂಗಿಯ ಭಕ್ತಸ್ಥಲ

೫೧೩

ಪ್ರಾಣಲಿಂಗಸಂಬಂಧಿಯಾದ ಮಹಾತ್ಮನು
ಅರಿಷಡ್ವರ್ಗಂಗಳರಿಯ,
ಕ್ಷುತ್ತು ಪಿಪಾಸು ಶೋಕ ಮೋಹ ಜರೆ ಮರಣ ಗುಣತ್ರಯಮೊಳೊಂದಿ ನಿಲ್ಲ.

ತನುತ್ರಯ ಮಲತ್ರಯ ಈಷಣತ್ರಯ ಜೀವತ್ರಯ
ಅವಸ್ಥಾತ್ರಯವೆಂಬ ಪಂಚದಶ ಮಾಯಾಪಟಲ ಹರಿದು ಮರೆದು
ಮಹಾಘನ ಬೆಳಗಿನ ಸುಖವ ಸುಗ್ಗಿಯೊಳಿರ್ದು
ಪ್ರಾಣಲಿಂಗವನರ್ಚಿಸುತ್ತಿಹನು ಭಕ್ತಿತ್ರಯಗೂಡಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೫೧೩ ||

೫೧೪

ನೆಲದಮೇಲೆ ಲಿಂಗಸ್ಥಾಪನವಮಾಡಿ ಪೂಜಿಸುವ,
ನೀರಮೇಲೆ ಲಿಂಗಸ್ಥಾಪನವಮಾಡಿ ಪೂಜಿಸುವ,
ಬೆಂಕಿಯಮೇಲೆ ಲಿಂಗಸ್ಥಾಪನವಮಾಡಿ ಪೂಜಿಸುವ,
ಗಾಳಿಯಮೇಲೆ ಲಿಂಗಸ್ಥಾಪನವಮಾಡಿ ಪೂಜಿಸುವ,
ಆಕಾಶದಮೇಲೆ ಲಿಂಗಸ್ಥಾಪನವಮಾಡಿ ಪೂಜಿಸುವ,
ಪಾತಾಳದಲ್ಲಿ ಲಿಂಗಸ್ಥಾಪನವಮಾಡಿ ಪೂಜಿಸುವ,
ಇಂತಿಷ್ಟವನು ಅಂಗೈಯಲ್ಲಿ ಸ್ಥಾಪನವಮಾಡಿ ಪೂಜಿಸುವ
ನಿತ್ಯಪ್ರಾಣಲಿಂಗಿ ತಾನೆ ಗುರುನಿರಂಜನ ಚನ್ನಬಸವಲಿಂಗ. || ೫೧೪ ||

೫೧೫

ಪ್ರಾಣಲಿಂಗವನು ಮಾಣದೆ ನೋಡಿ,
ಹೂಣೆಹೋದ ಜಾಣರ ಕಾಣೆನಯ್ಯಾ ಮೂರುಲೋಕದೊಳಗೆ.
ಇರ್ದು ಇಲ್ಲದ, ಬಂದು ಬಾರದ, ನಿಂದು ನಿಲ್ಲದ
ಚಂದ ಚಂದದ ನಡೆಯೊಳೆಸೆಯುತ,
ನುಡಿಯೊಳೊಂದಿದ ಬಿಂದು ಅಲಸದೆ
ಹಿಂದು ಹಿಂದನು ಮುಂದು ಮುಂದನು
ತಂದು ಆರಾಧಿಸಿ ಸುಖಿಸುವ ಗುರುನಿರಂಜನ ಚನ್ನಬಸವಲಿಂಗದಲ್ಲಿ
ಅನುಭಾವಿಭಕ್ತನಲ್ಲದೆ ಮತ್ತಾರನು ಕಾಣೆನಯ್ಯಾ. || ೫೧೫ ||

೫೧೬

ಅನುಭಾವಿಯ ಭಕ್ತಿ ಗುರುವನರಿದು
ಅನುವನರಿದು ಆರಾಧಿಸಿ ನಿಂದಿತ್ತು.
ಅನುಭಾವಿಯ ಭಕ್ತಿ ಲಿಂಗವನರಿದು
ಅನುವನರಿದು ಆರಾಧಿಸಿ ನಿಂದಿತ್ತು.
ಅನುಭಾವಿಯ ಭಕ್ತಿ ಜಂಗಮವನರಿದು
ಅನುವನರಿದು ಆರಾಧಿಸಿ ನಿಂದಿತ್ತು.

ಅನುಭಾವಿಯ ಭಕ್ತಿ ತನ್ನನರಿದು
ಅನುವನರಿದು ಆರಾಧಿಸಿ ನಿಂದಿತ್ತು
ಗುರುನಿರಂಜನ ಚನ್ನಬಸವಲಿಂಗದಲ್ಲಿ ಪ್ರಾಣಲಿಂಗಿಯಾಗಿ. || ೫೧೬ ||

೫೧೭

ಅನುಭಾವಿಯಾದ ಅಪ್ರತಿಮಶರಣಂಗೆ
ಖಂಡಿತಕರ್ಮಂಗಳೆಲ್ಲ ಭಕ್ತಿಯೊಡನೈದಿ
ಜ್ಞಾನಲಿಂಗಸನ್ನಿಹಿತವಾಗಿ ಒಪ್ಪುತಿರ್ದವು ನೋಡಾ.
ಫಲ ನಿಯಮ ವ್ರತಂಗಳೆಲ್ಲ ಭಕ್ತಿ ಪ್ರಕಾಶದೊಡನೈದಿ
ಜ್ಞಾನಲಿಂಗಾಭರಣವಾಗಿ ತೋರುತಿರ್ದವು ನೋಡಾ.
ಸಕಲ ಸಂಭ್ರಮಂಗಳೆಲ್ಲ ಭಕ್ತಿಗೂಡಿ ಸುಜ್ಞಾನಪ್ರಭೆಯನೈದಿ
ಗುರುನಿರಂಜನ ಚನ್ನಬಸವಲಿಂಗಾರ್ಚನೆಯ
ಸೊಬಗಿನ ಸುಖದೊಳೋಲಾಡುತಿರ್ದವು ನೋಡಾ. || ೫೧೭ ||

೫೧೮

ನಾಲ್ಕು ಇಪ್ಪತ್ತುನಾಲ್ಕುಲಕ್ಷಯೋಜನ ಪ್ರಮಾಣದೊಳಗೆ
ಛಪ್ಪನ್ನದೇಶ ಮಂಡಲದಲ್ಲಿ ಮಿಗೆ ಒಪ್ಪುತಿರ್ಪುದೊಂದು ಸೊಬಗಿನ ಕಲ್ಯಾಣ.
ಅಂತಪ್ಪ ಕಲ್ಯಾಣಮಧ್ಯದಲ್ಲಿ
ಮುಂತೆಸೆವ ಸಿಂಹಪೀಠಾಗ್ರದ ಪವಳ ಪೊಸಮುತ್ತು
ನೀಲಪ್ರಕಾಶದೊಬ್ಬುಳಿಯೊಳೊಪ್ಪುವ
ಬಸವಣ್ಣ, ಚನ್ನಬಸವಣ್ಣ ಪ್ರಭುಸ್ವಾಮಿಗಳವರ
ವರಚರಣವನರಿದು ಕರ ಮನ ಭಾವದಲ್ಲಿ
ಹೆರೆಹಿಂಗದರ್ಚಿಸುವ ಪರಮ ಶಿವಯೋಗಿಯ ಪಾದಕ್ಕೆ
ನಮೋ ನಮೋ ಎಂದು ಬದುಕಿದೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. || ೫೧೮ ||

೫೧೯

ಬಸವಣ್ಣನ ಪಾದವನ್ನು ಕರ ಮನ ಭಾವದಲ್ಲಿ ಕಂಡು
ಸರ್ವಾಂಗ ಬೆಚ್ಚಿ ಬೇರಿಲ್ಲದರ್ಚಿಸಿ ಸುಖಿಯಾಗಿದ್ದೆನಯ್ಯಾ.
ಚನ್ನಬಸವಣ್ಣನ ಪಾದವನ್ನು ಮನ ಭಾವದಲ್ಲಿ ಕಂಡು
ಕರಣಕೊಬ್ಬಿ ಅಭಿನ್ನವಾಗಿ ಅರ್ಚಿಸಿ ಸುಖಿಯಾಗಿರ್ದೆನಯ್ಯಾ.
ಪ್ರಭುವಿನ ಪಾದವನ್ನು ಭಾವ ಕರ ಮನದಲ್ಲಿ ಕಂಡು
ಬೆಚ್ಚಿ ಭೇದವಳಿದರ್ಚಿಸಿ ಸುಖಿಯಾಗಿರ್ದೆನಯ್ಯಾ.

ತ್ರಿವಿಧವನೊಂದುಮಾಡಿ ಸಕಲ ಪರಿಣಾಮ ಪರವಶವ ನೆರೆದು
ಆರಾಧಿಸುತಿರ್ದೆನು ಗುರುನಿರಂಜನ ಚನ್ನಬಸವಲಿಂಗಕ್ಕಂಗವಾಗಿ. || ೫೧೯ ||

೫೨೦

ನೀಲಲೋಚನೆಯಮ್ಮನ ಗರ್ಭದಿಂದುದಯವಾಗಿ ಬಂದವ ನಾನೆಂದು
ಬಸವಣ್ಣನ ಮನೆಗೆ ಶರಣೆನ್ನಹೋದರೆ
ಮಡಿವಾಳತಂದೆ, ಚನ್ನಬಸವಣ್ಣ, ಸಿದ್ಧರಾಮದೇವರು,
ಪ್ರಭುಸ್ವಾಮಿ, ಅಜಗಣ್ಣಯ್ಯಗಳು ಸಹವಾಗಿ
ಬಸವಣ್ಣನ ಪಾದದಲ್ಲಿ ಕಂಡು ಶರಣೆಂದು ಸುಖಿಯಾದೆನು.
ಮಡಿವಾಳತಂದೆಯ ಮನೆಗೆ ಶರಣೆನ್ನಹೋದರೆ
ಚನ್ನಬಸವಣ್ಣ, ಸಿದ್ಧರಾಮಯ್ಯ, ಪ್ರಭುದೇವರು,
ಅಜಗಣ್ಣತಂದೆ, ಬಸವಣ್ಣ ಸಹವಾಗಿ
ಮಡಿವಾಳತಂದೆಯ ಪಾದದಲ್ಲಿ ಕಂಡು ಶರಣೆಂದು ಸುಖಿಯಾದೆನು.
ಚನ್ನಬಸವಣ್ಣನ ಮನೆಗೆ ಶರಣೆನ್ನಹೋದರೆ
ಸಿದ್ಧರಾಮಯ್ಯತಂದೆ, ಪ್ರಭುದೇವರು,
ಅಜಗಣ್ಣಯ್ಯಗಳು, ಬಸವರಾಜದೇವರು, ಮಡಿವಾಳಯ್ಯಗಳು ಸಹವಾಗಿ
ಚನ್ನಬಸವಣ್ಣನ ಪಾದದಲ್ಲಿ ಕಂಡು ಶರಣೆಂದು ಸುಖಿಯಾದೆನು.
ಸಿದ್ಧರಾಮಯ್ಯನ ಮನೆಗೆ ಶರಣೆನ್ನಹೋದರೆ
ಪ್ರಭುದೇವ, ಅಜಗಣ್ಣಯ್ಯಗಳು, ಬಸವಣ್ಣ, ಮಡಿವಾಳಯ್ಯ,
ಚನ್ನಬಸವಣ್ಣನವರು ಸಹವಾಗಿ
ಸಿದ್ಧರಾಮಯ್ಯನ ಪಾದದಲ್ಲಿ ಕಂಡು ಶರಣೆಂದು ಸುಖಿಯಾದೆನು.
ಪ್ರಭುವಿನ ಸ್ಥಲಕ್ಕೆ ಶರಣೆನ್ನಹೋದರೆ
ಅಜಗಣ್ಣ, ಬಸವಣ್ಣ, ಮಡಿವಾಳ, ಚನ್ನಬಸವಣ್ಣ,
ಸಿದ್ಧರಾಮಯ್ಯಗಳು ಸಹವಾಗಿ
ಪ್ರಭುವಿನ ಪಾದದಲ್ಲಿ ಕಂಡು ಶರಣೆಂದು ಸುಖಿಯಾದೆನು.
ಅಜಗಣ್ಣಯ್ಯನ ಮನೆಗೆ ಶರಣೆನ್ನಹೋದರೆ
ಬಸವರಾಜ, ಮಡಿವಾಳತಂದೆ, ಚನ್ನಬಸವಣ್ಣ,
ಸಿದ್ಧರಾಮ, ಪ್ರಭುದೇವರು ಸಹವಾಗಿ
ಅಜಗಣ್ಣಯ್ಯಗಳ ಪಾದದಲ್ಲಿ ಕಂಡು ಶರಣೆಂದು ಸುಖಿಯಾದೆನು.
ಇಂತು ಬಲ್ಲಂತೆ ಕಂಡು ಶರಣೆಂದು ಸುಖಿಯಾದೆನು
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೫೨೦ ||

೫೨೧

ಭೂಮಿಯನುರುಹಿ ತನ್ನ ನೋಡಿ ಅರ್ಚಿಸುವರಾರಯ್ಯಾ?
ಜಲವ ದಹಿಸಿ ತನ್ನ ನೋಡಿ ಅರ್ಚಿಸುವರಾರಯ್ಯಾ ?
ಅನಲನ ಸುಟ್ಟು ತನ್ನ ನೋಡಿ ಅರ್ಚಿಸುವರಾರಯ್ಯಾ?
ಅನಿಲವ ದಗ್ಧಮಾಡಿ ತನ್ನ ನೋಡಿ ಅರ್ಚಿಸುವರಾರಯ್ಯಾ?
ಭಾವ ದಹನವ ಮಾಡಿ ತನ್ನ ನೋಡಿ ಅರ್ಚಿಸುವರಾರಯ್ಯಾ?
ಕರ್ತಾರನ ಕರ್ಮವನುರುಹಿ ತನ್ನ ನೋಡಿ ಅರ್ಚಿಸುವರಾರಯ್ಯಾ?
ಸಕಲವನುರುಹಿ ಬೆಳಗ ಮಾಡಿ ಕೂಡಿ ಅರ್ಚಿಸುವರಾರಯ್ಯಾ?
ಅಪ್ರತಿಮಶರಣರಲ್ಲದೆ ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೫೨೧ ॥

೫೨೨

ಅಯ್ಯಾ, ಎನ್ನ ಸ್ಥೂಲತತ್ವದಲ್ಲಿ ದ್ವಾದಶಕಳೆಯೊಳು ನಿಂದು
ಅನಂತಕೋಟಿಪ್ರಕಾಶವಾಗಿ ತೋರುವ ಪ್ರಾಣಲಿಂಗವನು
ಸತ್ಕ್ರಿಯಾನುಭಾವದಿಂದೆ ಕಾಯದ ಕರಸ್ಥಲದಲ್ಲಿಟ್ಟು ಅಷ್ಟವಿಧಾರ್ಚನೆಯ ಮಾಡಿ,
ಕಂಗಳಾರತಿಯನೆತ್ತಿ ಮಂಗಳ ಜಯ ಜಯವೆನುತಿರ್ದೆನಯ್ಯಾ.
ಅಯ್ಯಾ, ಎನ್ನ ಸೂಕ್ಷ್ಮತತ್ವದಲ್ಲಿ ಷೋಡಶಕಳೆಯೊಳು ನಿಂದು
ಅನಂತಕೋಟಿಪ್ರಕಾಶವಾಗಿ ತೋರುವ ಪ್ರಾಣಲಿಂಗವನು
ಸಮ್ಯಕ್‌ಜ್ಞಾನಾನುಭಾವದಿಂದೆ ಮನದ ಕರಸ್ಥಲದಲ್ಲಿಟ್ಟು
ಅಷ್ಟವಿಧಾರ್ಚನೆಯ ಮಾಡಿ ಮನದಾರತಿಯನೆತ್ತಿ
ಮಂಗಳ ಜಯ ಜಯವೆನುತಿರ್ದೆನಯ್ಯಾ.
ಅಯ್ಯಾ, ಎನ್ನ ಕಾರಣತತ್ವದಲ್ಲಿ ದಶಕಳೆಯೊಳು ನಿಂದು
ಅನಂತಕೋಟಿ ಪ್ರಕಾಶವಾಗಿ ತೋರುವ ಪ್ರಾಣಲಿಂಗವನು
ಮಹಾಜ್ಞಾನಾನುಭಾವದಿಂದೆ ಭಾವದ ಕರಸ್ಥಲದಲ್ಲಿಟ್ಟು
ಅಷ್ಟವಿಧಾರ್ಚನೆಯ ಮಾಡಿ ಭಾವದಾರತಿಯನೆತ್ತಿ
ಮಂಗಳ ಜಯ ಜಯವೆನುತಿರ್ದೆನಯ್ಯಾ.
ಅಯ್ಯಾ, ಎನ್ನ ಸರ್ವಾಂಗದಲ್ಲಿ ಮೂವತ್ತೆಂಟು ಕಳಾತೀತನಾಗಿ
ಅಗಣಿತಕೋಟಿಪ್ರಕಾಶಮಯದಿಂದೊಪ್ಪುವ
ಗುರುನಿರಂಜನ ಚನ್ನಬಸವಲಿಂಗವೆಂಬ ಪ್ರಾಣಲಿಂಗವನು
ಮಹದರುವಿನ ಕರಸ್ಥಲದಲ್ಲಿಟ್ಟು ಅಷ್ಟವಿಧಾರ್ಚನೆಯ ಮಾಡಿ
ಜ್ಞಾನದಾರತಿಯನೆತ್ತಿ ಮಂಗಳ ಜಯ ಜಯವೆನುತಿರ್ದೆನಯ್ಯಾ. ॥ ೫೨೨ ॥

೫೨೩

ಅಯ್ಯಾ, ನೆಲಜಲಾಗ್ನಿ ಮರುತಾಕಾಶವಿಲ್ಲದ
ಪಂಚವರ್ಣಗೆಯ ಗರ್ದುಗೆಯ ಹಾಸಿ,
ಪಶ್ಚಿಮದತ್ತ ಸ್ವಾಚ್ಭಾಲಯದ ಸ್ವಯಾನಂದ ಮೂರುತಿಯ
ಎನ್ನರುವಿನಮುಖದಿಂದೆ ಕರೆತಂದು ಮೂರ್ತಿಗೊಳಿಸಿ,
ಸತ್ಯೋದಕದಿಂದೆ ಪಾದಾಭಿಷೇಕವ ಮಾಡಿ
ತ್ರಿಪುಟಿಯ ದಹಿಸಿ ಭಸಿತವ ಧರಿಸಿ, ಹೃದಯಕಮಲವನೆತ್ತಿ ಧರಿಸಿ,
ಶ್ರದ್ಧೆ ಧೂಪವರ್ಪಿಸಿ, ಸೋಹಂ ಎಂಬ ಚಾಮರ ಢಾಳಿಸಿ,
ಸುಜ್ಞಾನಜ್ಯೋತಿಯ ಬೆಳಗನೆತ್ತಿ
ಜಯ ಜಯ ಮಂಗಳವೆಂದು ಅರ್ಚಿಸುವೆನಯ್ಯಾ ಅನುದಿನ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಎನ್ನ ಪ್ರಾಣಲಿಂಗಕ್ಕೆ. ॥ ೫೨೩ ॥

೫೨೪

ಶರಣ ತನ್ನ ಪ್ರಾಣಲಿಂಗಪೂಜೆಯ ಮಾಡುವಲ್ಲಿ
ತನು ಮನ ಪ್ರಾಣ ನಷ್ಟವಾಗಲೆಂದು ಕಷ್ಟಬಟ್ಟವನಲ್ಲ.
ಇಂದ್ರಿಯವಿಷಯನಳಿಯಬೇಕೆಂದು ಕಳೆಗುಂದಿ ಬಳಲುವನಲ್ಲ.
ವಾಗ್ಜಾಲವುಡುಗಲೆಂದು, ದುರ್ಭೂತಪ್ರವೇಶ ಮೌನಿಯಲ್ಲ.
ಕಣ್ಣು ಮುಚ್ಚಿ ಧ್ಯಾನವ ಮಾಡುವನಲ್ಲ.
ಸಂಕಲ್ಪ ಕಳವಳವ ಕಳೆದುಳಿದ ನಿಃಸಂಕಲ್ಪ ನಿರ್ವಾಣಿ ನೋಡಾ.
ಸತ್ಕ್ರಿಯಾ ಸುಜ್ಞಾನ ಸಮರಸಪ್ರಕಾಶ ಪರಿಪೂರ್ಣ
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೫೨೪ ॥

೫೨೫

ಕಾಲಲ್ಲಿ ಕಣ್ಣನಿಟ್ಟು ಇಷ್ಟಲಿಂಗಭಕ್ತಿಯ ಮಾಡುವ.
ಕಣ್ಣಿನಲ್ಲಿ ಕಾಲನಿಟ್ಟು ಪ್ರಾಣಲಿಂಗಭಕ್ತಿಯ ಮಾಡುವ.
ಕಾಲಕಣ್ಣ ಕದಡಿ ಭಾವಲಿಂಗಭಕ್ತಿಯ ಮಾಡುವ.
ಮಾಟವನ್ನು ಗುರುನಿರಂಜನ ಚನ್ನಬಸವಲಿಂಗದಲ್ಲಡಗಿಸಿ
ಮಂಗಳ ಜಯ ಜಯವೆನುತಿರ್ದ ನಿರಂತರದಲ್ಲಿ. ॥ ೫೨೫ ॥

## ಪ್ರಾಣಲಿಂಗಿಯ ಮಾಹೇಶ್ವರಸ್ಥಲ

೫೨೬

ಷಡುದರ್ಶನಗತಿಯ ಮರೆದೊಮ್ಮೆ ಕೇಳನಯ್ಯಾ.
ಯೋಗಮಾರ್ಗಿಗಳ ನಿರೀಕ್ಷಣೆಯ ಮಾಡನಯ್ಯಾ.

ವೇದಾಂತಿಗಳ ಕೂಡೆ ಮಾತನಾಡನಯ್ಯಾ.
ಸಿದ್ಧಾಂತಿಗಳ ಕ್ರೀಯ ಸೋಂಕನಯ್ಯಾ.
ಗುರುನಿರಂಜನ ಚನ್ನಬಸವಲಿಂಗದಲ್ಲಿ ಸಕಲೇಂದ್ರಿಯನಳಿದಿರ್ದನಾಗಿ ॥ ೫೨೬ ॥

೫೨೭

ಲಿಂಗಾಂಗಸಮರಸಾನುಭಾವವ ಬಲ್ಲೆನೆಂದು ನುಡಿದು ಕೊಂಬ
ಖಿಲ್ಲ ಕುಚೇಷ್ಟಿಗಳ ವಾಕ್ಪಟುವ ನೋಡಾ !
ಕಾಯಸಂಗವರಿದಬಳಿಕ ಕರ್ಮಕ್ರಿಯಾವೇಷಧಾರಿಯಾಗಿ
ಡಂಭಕನಡೆಯುಂಟೆ ?
ಮನಸಂಗವನರಿದಬಳಿಕ ಸೂತಕ ಪಾತಕ ಸಂಕಲ್ಪ ಸಂಶಯವೆಂಬ
ಸಂಸ್ಕೃತಿಯೊಳೊಡವೆರೆಯಲುಂಟೆ ?
ಪ್ರಾಣಸಂಗವನರಿದಬಳಿಕ
ವಾಯುಪ್ರಕೃತಿಯ ವರ್ತಕವುಂಟೆ ?
ಭಾವಸಂಗವನರಿದಬಳಿಕ
ಮಾಯಾಮೋಹ ವಿಷಯ ಭ್ರಾಂತಿನಸುಳುಹುಂಟೆ ?
ಕಾಯ ಮನ ಪ್ರಾಣ ಭಾವ ಕಳೆ ಹಿಂಗದೆ
ಸಂಗಭಾವಿಯೆಂದರೆ ಹಿಂಗುವದು
ಗುರುನಿರಂಜನ ಚನ್ನಬಸವಲಿಂಗಾನುಭಾವ. ॥ ೫೨೭ ॥

೫೨೮

ಮನವನಳಿದುಳಿದ ಮಹಾನುಭಾವಿಗಳ ವಚನವ ನೋಡಿ,
ವಾಕ್ಕಿನಿಂದೆ ವಿರತಿಯ ನುಡಿದು, ಮಾನಸದಿಂದೆ ಮಲವ ಹಿಡಿದು,
ಕಾಯದಿಂದೆ ಕೆಟ್ಟು ನಡೆವ ಭ್ರಷ್ಟ ಮನುಜರಿಗೆ
ಇನ್ನೆಷ್ಟುಜನ್ಮದ ಕಷ್ಟವನಳಿದು ಬರುವ
ಬಟ್ಟೆಯನರಿವ ಪರಿಯಿನ್ನೆಂತೊ ?
ನಿಮ್ಮಾದಿಯ ಬಲ್ಲ ಅಪ್ರತಿಮಂಗಲ್ಲದೆ ಅನುಭಾವವಿಲ್ಲ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೫೨೮ ॥

೫೨೯

ಗುರುಕರಜಾತರೆಂದು ಬರಿಯ ಬೊಮ್ಮದ ಮಾತ ನುಡಿದು
ಮನಬಲ್ಲಂತೆ ಹರಿದಾಡಿ,
ಹಿರಿಯರನರಿಯದೆ ಹಳಿದು ಮರೆಯಿಂದೆ
ದುರ್ಬುದ್ಧಿಯ ಮಡುಗಿ ಹೆಮ್ಮೆ ಮುಮ್ಮೊಗನಾಗಿ

ಮೆರೆದು ಹೋಗುವ ಬರಿವೇಷಭಾರಕರಿಗೆ
ಪರಮಕ್ರಿಯಾ ನಿಜಜ್ಞಾನದ ನಿಲುವೆಂತು ಸಾಧ್ಯವಪ್ಪುದಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. || ೫೨೯ ||

೫೩೦

ಆದ್ಯರವಚನ ಸಾಧ್ಯವಾಯಿತೆಂದು
ಮದ್ದು ತಿಂದು ಕುಣಿತ ಮನುಜನಂತೆ,
ಇರುಳುಗಳೆದ ಗೂಗೆಯಂತೆ,
ಮೂಲಿ ಗೊಂದಿ ಗುಹ್ಯ ಗುಹ್ಯಂಗಳ ಸೇರಿ
ಮದಷು ತಿಳಿದು ಹಗಲುಗಳೆದು ಉದರ ಬಗೆವಂತೆ,
ದುರ್ವೈರಾಗ್ಯವುಳಿದು, ಮೊದಲ ಸಂದು ಮುಂದೆ ಹೋಗುವ
ತುದುಗುಣಿ ಗುಹ್ಯವಾದನುಭಾವದ ಕುರುಹನವನೆತ್ತಬಲ್ಲನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. || ೫೩೦ ||

೫೩೧

ಅನುಭಾವಮಾಡಬಲ್ಲವರೆಂದು ಮನ ಭಾವ ಕಳೆಯೊಳು ನಡೆವ
ಲಿಂಗಜಂಗಮ ದ್ರೋಹಿಗಳ ಸಂಗಸಮರಸ ಮಾಡಲಾಗದು ಶಿವಜ್ಞಾನಿಗಳು.
ಅದೇನು ಕಾರಣವೆಂದೊಡೆ :
ಶುಕನ ಮಾತು, ಚೆಲುವು ನೀತಿ, ಹೊಲೆಯ ವಿಹಂಗನ ಊಟ ವಿಸರ್ಜನೆಯಂತೆ
ಗುರುನಿರಂಜನ ಚನ್ನಬಸವಲಿಂಗಕ್ಕೆ ದೂರ. || ೫೩೧ ||

೫೩೨

ಉರಿಯೊಳು ಮುಳುಗಿದ ತಾವರೆಯ ಕುಸುಮವ ತಂದು ಮೂಸಿದರೆ
ಸದ್ವಾಸನೆಯ ತೋರಲರಿಯದು.
ಗುರೂಪದೇಶವಾದ ಹೃದಯಕಮಲವನು
ತಾಪತ್ರಯ ಉರಿಯೊಳು ಹಾಕಿದಾತನ ಹೃದಯದಲ್ಲಿ,
ನಿಜಾನುಭಾವದ ವಾಸನೆ ಶಿವಶರಣರಿಗೆ ತೋರಲರಿಯದು
ಗುರುನಿರಂಜನ ಚನ್ನಬಸವಲಿಂಗಕ್ಕೆ ಅಯೋಗ್ಯ ಕಾಣಾ. || ೫೩೨ ||

೫೩೩

ನಿರ್ಮಲವಾದ ಕುಸುಮವನೆತ್ತಿ ಧರಿಸುವರು.
ಸ್ಥಾವರ ಜಂಗಮದ ಪೂಜೆಗೆ ಸಕಲ ಭಕ್ತರುಗಳು ನಲುವಿಂದೆ
ಮಲದಲ್ಲಿ ಬಿದ್ದ ಕುಸುಮವನು ಹೇಸಿ ನೋಡರು.

ಸದುಹೃದಯನುಳ್ಳ ಭಕ್ತನ ಕರಣೇಂದ್ರಿಯವಿಷಯವೆಂಬ ಚಿತ್ಕುಸುಮವನೆತ್ತಿ,
ಸತ್ತುಚಿತ್ತಾನಂದಲಿಂಗಕ್ಕೆ ಧರಿಸಿದರೆ ಪರಿಣಾಮವಾಗುವದು.
ಮಲತ್ರಯದಲ್ಲಿ ಬಿದ್ದ ಮನುಜನ
ಕರಣೇಂದ್ರಿಯವಿಷಯಗೂಡಿ ಮಾಡುವ ಪೂಜೆಗೆ
ದೂರದಿಂದತ್ತ ನಿಲುಕದಿರ್ದ ನಮ್ಮ ಗುರು
ನಿರಂಜನ ಚನ್ನಬಸವಲಿಂಗವು. || ೫೩೩ ||

೫೩೪

ಸಿಂಹದ ಹಾಲು ತಂದು ಶುನಕಂಗಿತ್ತು ಸಲಹಿದರೆ
ನಡೆ ನುಡಿಯಲ್ಲಿ ಶುನಕನಲ್ಲದೆ ಸಿಂಹನಾಗಿತ್ತೆ?
ಮಹಾನುಭಾವ ಜ್ಞಾನಗುರುವಿನ ಬೋಧಸುಧೆಯನು
ತನು ಮನ ಭಾವ ಪ್ರಕೃತಿಯುಕ್ತ ನರನಿಗಿತ್ತಡೆ
ನಡೆ ನುಡಿಯಲ್ಲಿ ಪೂರ್ವಪ್ರಕೃತಿಯುಕ್ತ ನರನಲ್ಲದೆ
ಸತ್ಕ್ರಿಯಾಜ್ಞಾನಾನುಭಾವಿಯಾದಾನೆಯೇ ? ಆಗಲರಿಯನು.
ಅದು ಕಾರಣ, ಗುರುನಿರಂಜನ ಚನ್ನಬಸವಲಿಂಗಕ್ಕೆ
ಅಂಗವಾದ ಅಂಶಿಕರಿಗಲ್ಲದೆ ಆಗಬಾರದು ಕಾಣಾ. || ೫೩೪ ||

೫೩೫

ಗಜಬಜೆಯ ನೀಗಿ ನಿಜಬೆಳಗಿನಲ್ಲಿ ಸುಳಿವ ಸುಜ್ಞಾನಿ ಶರಣನಂಗವು
ಆಚಾರಪ್ರಭೆಯೊಳಡಗಿಪ್ಪುದು.
ಮನವು ಮಹಾನುಭಾವಪ್ರಕಾಶದೊಳಡಗಿರ್ಪುದು.
ಪ್ರಾಣವು ಸಂಗಸುಖವಾಗಿರ್ಪುದು.
ಅರಿವು ಗುರುನಿರಂಜನ ಚನ್ನಬಸವಲಿಂಗವಾಗಿರ್ಪುದು. || ೫೩೫ ||

೫೩೬

ನಡೆಯನಿತ್ತು ನಡೆದುಂಬ, ನುಡಿಯನಿತ್ತು ನುಡಿದುಂಬ,
ನೋಟವಿತ್ತು ನೋಡಿ ಉಂಬ.
ನಾಡಮೇಗಣ ಜ್ಯೋತಿಯ ಬೆಳಗ ಹಿಡಿದುಕೊಂಡು
ಸುಖಿಸುತಿರ್ದನು ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೫೩೬ ||

೫೩೭

ಆದಿ ಅನಾದಿಯಿಂದತ್ತತ್ತಲಾದ
ಮಹಾಘನಾನಂದಪ್ರಕಾಶಪ್ರಸಾದವ ಕಂಡ ಶರಣಂಗೆ,

ಬ್ರಹ್ಮ ವಿಷ್ಣು ಇಂದ್ರಾದಿ ಮನುಮುನಿಗಳ
ಅನಿತ್ಯಪದವೊಂದು ತೃಣವಾಗಿಪ್ಪುದು.
ಅದೇನು ಕಾರಣವೆಂದೊಡೆ :
ಅನಂತ ಗುಣಧರ್ಮದಿಂದಾದ ಸಕಲ ಸಂಭ್ರಮವು,
ಅಂತಪ್ಪ ಶರಣ ತನ್ನ ವಿನೋದಕಾರಣ ಲೀಲೆಯನವಧರಿಸಿದನಲ್ಲದೆ,
ಮಲಬದ್ಧ ಮೂಢ ವೇಷಧಾರಿ ಪಾಷಂಡಿಗಳಂತೆ
ಹೊನ್ನೇ ಪ್ರಾಣ, ಮಣ್ಣೇ ಪ್ರಾಣವಾಗಿ,
ಸುಂಬಳದಲ್ಲಿ ಸಿಗಬಿದ್ದ ಮಕ್ಷಿಕನಂತೆ ಬಿದ್ದು ಹೋಗಬಂದವನಲ್ಲ.
ಮತ್ತೆಂತೆಂದೊಡೆ :
ತನ್ನಂಶೀಭೂತರನರಸುತ್ತ ಅಡಿಗೆರಗಿನಿಂದವರಿಗೆ ಅನುವ ತೋರುತ್ತ,
ಘನಮಹಿಮ ಗುರುಚರಶೇಷಾಮೃತವ ಸೇವಿಸುತ್ತ
ತನತನಗೆ ಸುಜ್ಞಾನ ಸದ್ಭಕ್ತಿಯಿಂದರಿದು ಬಂದುದ ನೋಡಿ
ಪರಮವೈರಾಗ್ಯದಿಂದೆ ಕೈಕೊಂಡು ಪಾವನಸ್ವರೂಪನಾಗಿ ಚರಿಸುವ
ನಮ್ಮ ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೫೩೭ ॥

೫೩೮

ಅನಾದಿಸಂಸಿದ್ಧ ನಿರಂಜನ ಪ್ರಾಣಲಿಂಗಿಯ ಘನವನೇನೆಂದುಪಮಿಸುವೆನಯ್ಯಾ!
ಚಿತ್ಕಾಯದಲ್ಲೆಸೆವ ಸುಚಿತ್ತ ಸುಬುದ್ಧಿಯೆಂಬ ಹಸ್ತದಲ್ಲಿ ಪಿಡಿದರ್ಚಿಸಿಕೊಂಬ
ಸದ್ರೂಪಸ್ವರೂಪವಾದ ಇಷ್ಟಮಹಾಲಿಂಗವನು.
ಉನ್ಮಾನಸದಲ್ಲೊಪ್ಪುವ ನಿರಹಂಕಾರಸುಮನವೆಂಬ
ಹಸ್ತದಲ್ಲಿ ಪಿಡಿದರ್ಚಿಸಿಕೊಂಬ
ಚಿದ್ರೂಪಸ್ವರೂಪವಾದ ಪ್ರಾಣಲಿಂಗವನು.
ಅನುಭಾವದಲ್ಲೊಪ್ಪುವ ಸುಜ್ಞಾನಸದ್ಭಾವವೆಂಬ
ಹಸ್ತದಲ್ಲಿ ಪಿಡಿದು ಅರ್ಚಿಸಿಕೊಂಬ
ಆನಂದಸ್ವರೂಪವಾದ ಭಾವಲಿಂಗವನು.
ಇಂತು ಕಾಯ ಮನ ಭಾವದಲ್ಲಿ ಪರಿಪೂರ್ಣಪೂಜೆ ಅಳವಡಿಸಿಕೊಂಡು
ಸುಖಮಯನಾದಲ್ಲಿ
ನೇಮ ಸೀಮೆ ಖಂಡಿತಕ್ರಿಯಂಗಳೆಲ್ಲ ಕರಗಿ ಅಖಂಡಮಯವಾಗಿ
ಅನುಪಮ ಬೆಳಗಿನೊಳೊಪ್ಪುತಿರ್ದನು
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೫೩೮ ॥

೫೩೯

ಭೂಮಿಯ ನೆಳಲಲ್ಲಿ ಉಂಬುತ ತಾಯ ಬೆಳಗಿನಲ್ಲಿರ್ದು
ಮೂರು ಬಣ್ಣದ ಗಿರಿಯನೇರಿ,
ಮೂರೈದು ಗತಿಯಿಂದೆ ಉರಿಯಮಂದಿರದೊಳಗಿರ್ಪ
ಬಯಲಶೃಂಗಾರವ ಕಾಣಬಹುದೆ ?
ಭೂಮಿಯ ನೆಳಲ ಸುಟ್ಟು, ಊಟವ ಮೀರಿ, ತಾಯ ಕೊಂದು,
ಬೆಳಗನುರುಹಿ, ಗಿರಿಯಬಣ್ಣವ ಕಳೆದು,
ಮೇಲಕ್ಕೆ ನೋಡಿ ನಿಂದಲ್ಲಿ ಬಿಳಿಯ ಕುರುಹ ಕಂಡುಕೊಂಡು
ಮೂರೈದು ಗತಿಯನರಿದು, ಎರಡು ಕಾಣದೆ ನಡೆದು ನಿಂದಲ್ಲಿ
ಉರಿಯಮಂದಿರದೊಳಗಿರ್ಪ ಬಯಲಶೃಂಗಾರವ ಕಾಣಬಹುದು
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೫೩೯ ||

೫೪೦

ಮೂರುತನುವಿನ ಮೇಲೆ ತೋರುವ ಆಲಿಕಲ್ಲಿನಂತದಲ್ಲಿರ್ದ
ಸಾರಾಯಗೊಂಡು ತೋರುವ ಸೂರ್ಯಕಿರಣವ ಸೇವಿಸುವ
ನಿತ್ಯಾನಂದಸುಖಿ ನಿಮ್ಮ ಶರಣ ಗುರುನಿರಂಜನ ಚನ್ನಬಸವಲಿಂಗಾ. || ೫೪೦ ||

೫೪೧

ಪರಮಶಾಂತ ಪರಿಪೂರ್ಣ ಪ್ರಾಣಲಿಂಗಿಯು
ಮಹಾನುಭಾವ ಜಂಗಮಲಿಂಗ ಸುಖಮಯನಾದ ಬಳಿಕ
ಹುಸಿಯೆಂಬ ಮಸಿಯ ಪೂಸದೆ,
ಆಸೆಯೆಂಬ ಮದ್ದು ತಿನ್ನದೆ, ಭಾಷೆ ಬಣ್ಣಗನಾಗದೆ,
ಕಣ್ಣುಗೆಟ್ಟು ಮಲತ್ರಯ ಮೋಹಿಯಾಗದೆ,
ಸಂದುಸಂಶಯ ಮಂದಮರುಳನಾಗದೆ,
ಬೆಂದ ಒಡಲಿಗೆ ಸಂದು ಯಂತ್ರ ಮಂತ್ರ ವೈದ್ಯ ವಶ್ಯಾದಿ
ಉಪಾಧಿ ಉಲುಹಿನ ಭ್ರಾಂತನಾಗದೆ,
ಸದ್ಭಕ್ತಿ ಸುಜ್ಞಾನ ಪರಮವಿರಾಗತೆಯೆಂಬ ರತ್ನವ ಕಳೆಯದೆ
ಪಂಭಕ ಜಡಕರ್ಮವ ಸೋಂಕದೆ
ಕರಣಾದಿ ಗುಣಗಳ ಜರಿದು ಏಕಾಂತವಾಸನಾಗಿ ಚರಿಸುತಿರ್ದ
ಗುರುನಿರಂಜನ ಚನ್ನಬಸವಲಿಂಗದ ಲೀಲೆಯುಳ್ಳನ್ನಕ್ಕರ. || ೫೪೧ ||

೫೪೨

ನವಖಂಡಮಂಡಲದೊಳಗೆ ಬೀಸುವ ಗಾಳಿಯ
ತಡೆದು ಬೀಸುವುದೊಂದು ರೂಪು.

ಮೂರಾರು ದ್ವಾರದವರಂದವ ಕೆಡಿಸಿ ಸುಳಿವುದೊಂದು ರೂಪು.
ಎರಡೈದು ದುಃಖವನು ಐದು ವರತೆಯೊಳು
ತೊಳೆದು ಸೇವಿಸುವುದೊಂದು ರೂಪು.
ಇಂತು ರೂಪತ್ರಯಾನಂದವಳಿದುಳಿದ ಸುಖಿ
ಗುರುನಿರಂಜನ ಚನ್ನಬಸವಲಿಂಗ ನಿಮ್ಮ ಪ್ರಾಣಲಿಂಗಿ. || ೫೪೨ ||

೫೪೩

ಕೋಣನ ತಾಯ ಹಾಲಕುಡಿದು ಮಲಗಿರ್ದ ಕುರುಹ,
ಬೆಳಗಾಗಿ ಕಂಡು ಮೊದಲ ಹಿಡಿದು ತುದಿಯ ಸೇವಿಸಿದಾತನೇ
ಪ್ರಾಣಲಿಂಗಪ್ರಸಾದಿ ಕಾಣಾ ಗುರುನಿರಂಜನ ಚನ್ನಬಸವಲಿಂಗಾ. || ೫೪೩ ||

೫೪೪

ಕಾಣಿಸುವ ಕಮಲದೊಳಗಿರ್ಪ ಜಾಣನ ಕಂಡು
ಕಾಣಬಂದ ಧರೆಗಗನದೊಳಗುಳ್ಳ ಸಿರಿಸಂಪದನಿತ್ತುಕೊಂಬ
ನಿಯತವನರಿಯದೆ ಕಷ್ಟದಿಂದೆಬ್ಬಿಸಿ
ಕಾರಣವೆಂದು ಸೇವಿಸಿ ಕಾಲಬೆಳೆಯ ಕಳೆಯನುಂಬ
ಕಲ್ಪಿತರೇನು ಬಲ್ಲರಯ್ಯಾ ನಿಮ್ಮ ಪ್ರಾಣಲಿಂಗದ ನಿಲವ
ಗುರುನಿರಂಜನ ಚನ್ನಬಸವಲಿಂಗಾ? || ೫೪೪ ||

೫೪೫

ಅತ್ತಿತ್ತಲುಕದೆ ನಿಟ್ಟೆಲುವ ನೇವರಿಸಿ
ಮೂರೇಳು ಗ್ರಂಥಿಯ ತಟ್ಟಿಸಿ ಕುಂಡಲಿಯ ನೆಗೆದು ಬಂಧಿಸಿದಂದಕ್ಕಿಳಿದು
ವಾತ ಪಿತ್ತ ಶ್ಲೇಷ್ಮಯೇರಿಸಿದ ರಸನೆಗಿಳಿಯೆ
ಚಿದಾಮೃತವೆಂದು ಸೇವಿಸಿ ಬಾಳಿಹೋಗುವ
ಬಯಲಭ್ರಾಂತರಿಗಿನ್ನೆಂತು ಪ್ರಾಣಲಿಂಗದ ಪ್ರಸಾದ ಸಾಧ್ಯವಪ್ಪುದು ಹೇಳಾ
ಗುರುನಿರಂಜನ ಚನ್ನಬಸವಲಿಂಗಾ ? || ೫೪೫ ||

೫೪೬

ಸುಖ-ದುಃಖ, ಪುಣ್ಯ-ಪಾಪ, ಸ್ವರ್ಗ-ನರಕವೆಂಬ
ದ್ವಂದ್ವಕರ್ಮಂಗಳನು ಸಾಕ್ಷಿಕನಾಗಿ ನೋಡುವಾತ ತಾನೆಂದರಿಯದೆ
ಮಾಡುವರೊಂದೊಂದ, ಕೇಳುವರೊಂದೊಂದ, ನೋಡುವರೊಂದೊಂದ.
ಬೆಂದ ಒಡಲ ಬೇರಿಟ್ಟು ಬೆಳಗಿನಲ್ಲಿ ಬೆಳಗಿಂತುಕೊಂಡು
ಸುಖಮಯನಾದಾತನೇ ಪ್ರಸಾದಿ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೫೪೬ ||

೫೪೭

ಗುರುವರನಿಂದುದಿಸಿ, ಜಂಗಮಪಾದೋದಕಪ್ರಸಾದದಿಂದೆ ಬೆಳೆದು,
ಪರಮಲಿಂಗೈಕ್ಯವು ನಮಗುಂಟೆಂದು ನುಡಿವ ನಾಲಿಗೆ ನೀಟಾಗಿಹುದು ;
ಗುರುವಿಗಿತ್ತ ತನುವು ನೀಟಾಗಿಹುದು.
ಲಿಂಗದ ಮನ ಚೆಲುವಾಗಿಹುದು.
ಜಂಗಮದ ಧನ ಸ್ವಚ್ಛವಾಗಿಹುದು.
ಆಡಿರ್ದಂತೆ ಆಚರಿಸಿ ಅರ್ಪಿತವಾಗಲರಿಯದೆ
ನಾಲಿಗೆ ಮರಳಿದರೆ ಕೀಳರೆ ?
ತನು ವಂಚಿಸಿ ಬಿದ್ದರೆ ದುರ್ಗತಿಗೆ ಎಳೆದುಹಾಕರೆ ?
ಮನಸ್ಸು ಮರಳಿ ಬಿದ್ದರೆ ನಾಚಿಕೆಯ ಕೊಳ್ಳರೆ ?
ದ್ರವ್ಯವ ಮರಳಿ ಸುಖಿಸಿದರೆ ವೈತರಣಿಯೊಳು ದುಃಖಬಡಿಸರೆ ?
ಇದು ಕಾರಣ ನಿಮ್ಮ ನಡತೆ ಯಮನಿಗೆ ಹಿಡಿತ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. || ೫೪೭ ||

೫೪೮

ಪ್ರಾಣಲಿಂಗವಾದ ಬಳಿಕ, ಕಾಯದಲ್ಲಿ ನೋಡಿದರೆ ಲಿಂಗಬೆಳಗು,
ಮನದಲ್ಲಿ ನೋಡಿದರೆ ಲಿಂಗಬೆಳಗು,
ಭಾವದಲ್ಲಿ ನೋಡಿದರೆ ಲಿಂಗಬೆಳಗು,
ಸರ್ವಾಂಗದಲ್ಲಿ ನೋಡಿದರೆ ಲಿಂಗಬೆಳಗು.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಪ್ರಾಣಲಿಂಗಿ ಬೆಳಗಿನೊಳು ಬೆಳಗ ಸೇವಿಸುತಿರ್ದನು. || ೫೪೮ ||

## ಪ್ರಾಣಲಿಂಗಿಯ ಶರಣಸ್ಥಲ

೫೪೯

ಗಂಡನ ಚಿತ್ತವನರಿದು ಒತ್ತೆಯನಿತ್ತ ಒಲುಮೆ ಗೆಲುವಾಗಿತ್ತು ನೋಡಾ!
ಲಿಂಗದ ಬೆಳಗನರಿದ ಕಳೆಯನೊತ್ತೆಯು ಕಲ್ಪವೃಕ್ಷ ಕಾಣಾ!
ಅರಿಯದ ಗುದ್ಯಾಟ ಬರಿಗೈಯ ಸುರಿದಂತೆ ಪರಿಣಾಮದ ಪ್ರಭೆಯಿಲ್ಲ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ! || ೫೪೯ ||

೫೫೦

ಪುರುಷನ ಪುಣ್ಯದಿಂದ ಉಟ್ಟಸೀರೆ, ಪುರುಷನ ಪುಣ್ಯದಿಂದಿಟ್ಟಾಭರಣ,
ಪುರುಷನ ಪುಣ್ಯದಿಂದಾಯಿತ್ತು ಮುತ್ತೈದೆತನ.

ಜವ್ವನದ ಸೊಬಗಿನ ಬೆಳಗ ಪುರುಷನನೊಂಚಿಸಿ
ಪರಪುರುಷರ ನೆರೆದರೆ ಪತಿವ್ರತಕ್ಕೆ ಭಂಗ.
ಲೋಕದವರಿಗೆ ಹೇಸಿಕೆ, ಕಡೆಗೆ ನರಕ.
ಶಿವನಿಂದಾದ ಸುಜ್ಞಾನತನು, ಶಿವನಿಂದಾದ ಗುರುಕರುಣ,
ಶಿವನಿಂದಾದ ಶರಣತ್ವ,
ತನ್ನ ತನು ಮನ ಪ್ರಾಣದ ಕಳೆಯ ಬೆಳಗ ವಂಚಿಸಿ
ಅನ್ಯದೈವ, ಪರಸಮಯ, ಮಲತ್ರಯಕ್ಕಿಚ್ಛೈಸಿತ್ತದೆ
ಸತ್ಪಾತ್ರಕ್ಕೆ ಭಂಗ, ಸಮಯಾಚಾರಕ್ಕೆ ಹೇಸಿಕೆ,
ಕಡೆಗೆ ದುರ್ಗತಿ ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ॥ ೫೫೦ ॥

೫೫೧

ಕಂಡಮಂಡಲದಲ್ಲಿ ಕಂಡವರೆಂದು
ಕಾಲಿಗೆ ಬಂದಂತೆ ನಡೆವರಯ್ಯಾ ;
ಬಾಯಿಗೆ ಬಂದಂತೆ ಆಡುವರಯ್ಯಾ ;
ಮನಕ್ಕೆ ಬಂದಂತೆ ಮಾಟಕೂಟದೊಳಿರ್ದು,
ಶರಣಪದ ಬೆಳಗ ಸುಖಮಯರೆಂದರೆ ನಗುವರಯ್ಯಾ ನಿಮ್ಮ ಶರಣರು,
ಗುರುನಿರಂಜನ ಚನ್ನಬಸವಲಿಂಗಾ. ॥ ೫೫೧ ॥

೫೫೨

ಹಿಂದೇನರಿಯದೆ, ಮುಂದೆ ತಿಳಿಯದೆ,
ಸಂದಿನ ಮಂಜಿನ ಸುಖದಲ್ಲಿರ್ದು,
ನಿರಂಜನಲಿಂಗಸನ್ನಿಹಿತರೆಂಬ ನಂಜುಭಾವರ ನಡೆನುಡಿಯ ಕಂಡು,
ಬಿಡುಮುಖದಿಂದೆ ಗಹಗಹಿಸುವರಯ್ಯಾ ಪ್ರಾಣಲಿಂಗಿಗಳು.
ಗುರುನಿರಂಜನ ಚನ್ನಬಸವಲಿಂಗದಡಿಗತ್ತತ್ತ
ಬೇಡವೆಂದು ನೂಂಕುವರಯ್ಯಾ. ॥ ೫೫೨ ॥

೫೫೩

ಮಾಯಾಕಳೆಯೊಳಿರ್ದು ದೇವಕಳೆಯ ನೆನೆದರೆ ಸ್ವಯಮಪ್ಪುದೆ ?
ಸಾಯದಕಿಂತ ಮುನ್ನ ಸಾಯಸಂಗೊಳಿಸಿ ನಿಯತವಾದಲ್ಲಿ
ನಿಜಬೆಳಗನರಿಯಬಹುದು ಗುರುನಿಂಜನ ಚನ್ನಬಸವಲಿಂಗದಲ್ಲಿ. ॥ ೫೫೩ ॥

೫೫೪

ತಪ್ಪಿಸಿ ಒಪ್ಪಿಸಿ ಒಲಿಸಿಕೊಂಡು ಬಂದು ನಡೆವ
ಮಡದಿಯ ಸಡಗರವ ನೋಡಾ !

ಕಡುಲೋಭಿ ಮನೆಯಗಂಡನೊಂದಿಗೆ ಬಾಳಿ
ಅರಳುಪ್ಪರಿಗೆಯಲ್ಲಿ ಸುಪ್ಪತ್ತಿಗೆಯ ಮೇಲೆ ಸುಳಿದಾಡುವ,
ಶುದ್ಧನ ಕಳೆಯ ನೆರೆದಪ್ಪಿ ಕಾಣುವಳು
ಗುರುನಿರಂಜನ ಚನ್ನಬಸವಲಿಂಗಕ್ಕಂಗವಾಗಿ. ॥ ೫೫೪ ॥

೫೫೫

ಉಲುಹನಡಗಿಸಿ ಹೆಜ್ಜೆಯನೊಲವಿಂದೆ ನಲ್ಲಂಗೆ ಹೆಚ್ಚಿಸಿ
ಬೆಳಗಿನೊಳಗಿರಬಲ್ಲರೆ ಪತಿವ್ರತೆ.
ಸಕಲ ಕಲೆಗಳ ಕಣ್ಣೊಳು ತೋರಿ ಸುಖಿಸಿ
ಬೆಳಗಿನೊಳಿರಬಲ್ಲರೆ ಪತಿವ್ರತೆ.
ಕೈ ಕುಶಲ ನುಡಿಗೂಡಿ ನೆರೆದು ಸುಖಬೆಳಗಿನೊಳಗಿರಬಲ್ಲರೆ
ಗುರುನಿರಂಜನ ಚನ್ನಬಸವಲಿಂಗಕ್ಕಂಗವಾದ ಪ್ರಾಣಲಿಂಗಿ ಕಾಣಾ. ॥ ೫೫೫ ॥

೫೫೬

ವಲ್ಲಭನ ಒಲುಮೆಯ ವನಿತೆಯರು ಬನ್ನಿರವ್ವ,
ಸಲುಗೆಯ ಮಾತಿನ ಸವಿಯ ಕೇಳಿರವ್ವ.
ಬೆಚ್ಚಿ ಬೆರಗಾಗಿ ಹೇಳದಿರಿರವ್ವ.
ಲಕ್ಷಪತಿ ಏನು ಕಾರಣ ಬಂದಿರ್ದನವ್ವ ?
ನಲ್ಲನ ಹಾವುಗೆಯಬೆಳಗು ಭುವನಾದಿ ಆಕಾಶಕ್ಕೆ ಮುಸುಕಿತ್ತು.
ಮುಕುಟದ ಬೆಳಗು ಸಪ್ತದ್ವೀಪ ಸಮುದ್ರಂಗಳನೆಲ್ಲ ಮುಸುಕಿತ್ತು.
ಹೇಮ ರಜತ ಮಂದರಾದ್ರಿಗಳ ಸುತ್ತಮುತ್ತಲಿರುವ
ಮನು ಮುನಿ ದೇವತೆಗಳಾದಿ ಸಕಲಸಂದೋಹವೆಲ್ಲ ಬೆಳಗಿನೊಳು ನಿಂದು.
ಹರಹರ ಶಿವಶಿವ ಜಯಜಯವೆನಲಾನು
ಉಬ್ಬಿ ಕೊಬ್ಬಿ ಶರಣೆನ್ನಲಾರದೆ ಕೂಡಿ ನೆರೆಯಲು,
ಅರಿಯದ ಸುಖವ ಕಂಡು ಮರೆದಿರ್ದೆ ಕಾಣಿರವ್ವ
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೫೫೬ ॥

೫೫೭

ಧನರತಿಯುಳ್ಳ ಸೂಳೆಯ ಮನ ಭುಜಂಗನ ರತಿವೆರಸಮುಪಚಾರದಂತೆ.
ಪದಫಲ ರತಿಭಕ್ತನ ಮನಸ್ಸು ನಿಜವೆರಸದ ಪೂಜೆ
ಗಜಬಜೆಯಾಯಿತ್ತು
ಗುರುನಿರಂಜನ ಚನ್ನಬಸವಲಿಂಗದ ಬೆಳಗನರಿಯದೆ. ॥ ೫೫೭ ॥

೫೫೮

ಆಕಾಶದಲ್ಲಿರ್ದ ತಾವರೆಯೊಳಗಿನ ಮುತ್ತಿನ ನೀಲದ ಮುಮ್ಮೊನೆಯೊಳು
ಥಳಥಳನೆ ಹೊಳೆವ ಪರಮ ಪುರುಷನ ನೆರೆದು ಸುಖಿಸಬಲ್ಲ ಮಹಿಮನೆ
ಪ್ರಾಣಲಿಂಗಿ ಕಾಣಾ ಗುರುನಿರಂಜನ ಚನ್ನಬಸವಲಿಂಗಾ. || ೫೫೮ ||

೫೫೯

ಮೂರುಮಂಡಲದಲ್ಲಿ ಮೂರು ಕಮಲದ ಮಧ್ಯೆ
ಮೂರು ಪ್ರಣವಪೀಠದಮೇಲೆ,
ಅಖಂಡಮಯ ಜ್ಯೋತಿರ್ಲಿಂಗವನು
ಗುರುಮುಖದಿಂದರಿದು ಆಚರಿಸಿ ನೆರೆಯಬಲ್ಲಾತಂಗಲ್ಲದೆ
ಪ್ರಾಣಲಿಂಗಸಂಬಂಧವಿಲ್ಲವಯ್ಯಾ ಗುರುನಿರಂಜನ ಚನ್ನಬಸವಲಿಂಗಾ. || ೫೫೯ ||

೫೬೦

ಅಪ್ರತಿಮ ಸುಖಮಯ ಬೆಳಗಿನ ಸುಳುವರಿದು ಕರತಳಾಮಳಕವಾಗಿ,
ನೋಟ ನಡೆಯಲ್ಲಿ ಬೇಟ ಬೆಂಬಳಿವಿಡಿದು
ಕುಂಟಕುರುಡರ ನಂಟು ನೆರೆಯದೆ, ಒಂಟಿವೊಗತನವಪ್ಪಿನಿಂದರೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ ತಾನೆ ಪ್ರಾಣಲಿಂಗಿಶರಣ. || ೫೬೦ ||

೫೬೧

ಅರಿಯಬಾರದ ನೋಡಬಾರದ ಕೂಡಬಾರದ
ಅಗಲಬಾರದ ಅವಿರಳಲಿಂಗವನು,
ಅಂಗ ಮನ ಭಾವದಲ್ಲರಿದ ಅನುಪಮ ಶರಣನ ನಾಸಿಕದಲ್ಲಿ
ಬೆಳಗು ನಿಂದು ವಾಸನೆಯನರಿಯದು.
ಜಿಹ್ವೆಯಲಿ ಬೆಳಗು ನಿಂದು ರುಚಿಯನರಿಯದು.
ನೇತ್ರದಲ್ಲಿ ಬೆಳಗು ನಿಂದು ರೂಪವನರಿಯದು.
ತ್ವಕ್ಕಿನಲ್ಲಿ ಬೆಳಗು ನಿಂದು ಸ್ಪರ್ಶನವನರಿಯದು.
ಶ್ರೋತ್ರದಲ್ಲಿ ಬೆಳಗು ನಿಂದು ಶಬ್ದವನರಿಯದು.
ಹೃದಯದಲ್ಲಿ ಬೆಳಗು ನಿಂದು ಇನ್ನೊಂದರ ಸುಖವನರಿಯದು.
ಗುರುನಿರಂಜನ ಚನ್ನಬಸವಲಿಂಗದ ಬೆಳಗು ತನ್ನ ಸರ್ವಾಂಗದಲ್ಲಿ ನಿಂದು
ತ್ರಿಪುಟಿಶೂನ್ಯನಾಗಿರ್ದ ಕಾಣಾ. || ೫೬೧ ||

೫೬೨

ಒಂದೆರಡು ಬಾಗಿಲದಾಟಿ ಉತ್ತರದಕ್ಷಿಣದ ಗೊತ್ತಿನ
ಗೊರವರ ಮನೆಯ ಮುಂದೆರಡು ನಂದಾದೀವಿಗೆಯ ಮಂಟಪದೊಳಗೆ

ಸೂರ್ಯೇಂದು ವಹ್ನಿಕೋಟಿಪ್ರಭಾಮಯನಾಗಿತೋರುವ
ಪರಮಪ್ರಾಣಲಿಂಗವನು
ತೆರಹಿಲ್ಲದೆ ಕಂಡು ಕೂಡಿ ಸುಖಿಸಬಲ್ಲ ಸುಜ್ಞಾನಿ ಶರಣನ ಪಾದಕ್ಕೆ
ನಮೋ ನಮೋ ಎಂಬೆನಯ್ಯಾ ಗುರುನಿರಂಜನ ಚನ್ನಬಸವಲಿಂಗಾ. ‖ ೫೬೨ ‖

## ಪ್ರಾಣಲಿಂಗಿಯ ಐಕ್ಯಸ್ಥಲ

೫೬೩

ನಿರ್ಮನವೆಂಬ ಭೂಮಿಯಮೇಲೆ ಚಿದ್ವೃಷ್ಟಿಗರೆಯಲು,
ಹದನರಿದು ಹಲಾಯುಧ ಮೂರುತಾಳಕೂರಿಗೆಯಿಂದ ಬಿತ್ತಿದಲ್ಲಿ
ಒಂದಂಕುರದಿಂದಂಕುರಿಸಿದ ಪೈರದಿ ಸಕಲ ಚರಾಚರಕ್ಕೆ ಸೌಖ್ಯದೋರಿ,
ಉರಹಿತಂಗೆ ಉಲ್ಲಾಸವಾಗಿ,
ತೆರಿಗೆಯ ಹೊನ್ನ ಒಂದೆರಡು ಹಪ್ತಿಯ ಮಾಡಿಕೊಟ್ಟು,
ಹಿರಿಯರ ಗತಿಹಿಂಗದೆ ಮಂಗಳಮಂಟಪದಲ್ಲಿರ್ಪ
ಮಹಾರಾಜನ ಪ್ರಭೆಯಲ್ಲಡಗಿ,
ಮನೆ ಹೊಲ ಸುಖ ಮರೆದು ಮರುಳುಗೊಂಡರೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಪ್ರಾಣಲಿಂಗೈಕ್ಯ ತಾನೆ. ‖ ೫೬೩ ‖

೫೬೪

ಹಂಗಿಲ್ಲದ ಉದ್ಯೋಗ ಭಂಗವಿಲ್ಲ ಕಾಣಾ.
ಅಗಸನ ಕಾರ್ಯದಂತೆ ಅಚಲನಾಗಿ,
ತಿಳಿಗಾಜಿನಗುಪ್ಪಿಯಂತೆ
ಜ್ಯೋತಿರ್ಲಿಂಗ ಪ್ರಾಣವೇದಿಸಿ ಕತ್ತಲಕ್ಕಿಂಬಿಲ್ಲದೆ
ಕರ್ತು ಗುರುನಿರಂಜನ ಚನ್ನಬಸವಲಿಂಗದ ಪ್ರಭೆಯೊಳಡಗಿರ್ದ ಶರಣ. ‖೫೬೪‖

೫೬೫

ಪ್ರಾಣಲಿಂಗತ್ವ ಲಿಂಗಪ್ರಾಣತ್ವ ಪ್ರಸಾದಮುಕ್ತತ್ವವೆಂಬ
ಭೇದವನಾರು ಅರಿಯಬಾರದು ನೋಡಾ,
ಅದೆಂತೆಂದೊಡೆ, ಸುಜ್ಞಾನ ಪರಿಪೂರ್ಣಭರಿತವೆಂಬುದೇ ಪ್ರಾಣಲಿಂಗತ್ವ.
ಸತ್ಕ್ರಿಯಾಸನ್ನಿಹಿತ ಸತ್ಪ್ರೇಮಮುಖವೆಂಬುದೇ ಲಿಂಗಪ್ರಾಣತ್ವ.
ಉರಿಕರ್ಪೂರಸಂಯೋಗಲಯದಂತೆ
ಸಮರಸಾನುಭಾವೈಕ್ಯವಾದುದೇ ಪ್ರಸಾದಮುಕ್ತತ್ವ.
ಇಂತು ಇವರಂದವನರಿದ ಅಪ್ರತಿಮ ಪ್ರಕಾಶಮಯ ತಾನೆ
ಪ್ರಾಣಲಿಂಗೈಕ್ಯ ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ‖ ೫೬೫ ‖

೫೬೬

ಅನಾದಿಯ ಬೆಳಗು ಆದಿಯಲ್ಲುದಯವಾಗಿ
ಆದಿಯ ಕುಳಗತಿಯ ಕೆಡಿಸಿತ್ತು ನೋಡಾ !
ಮತ್ತಾದಿಯ ಮುಖವನರಸಿತ್ತು.
ಮಥನದಿಂದಾಗಿ ಬಂದು ಎನ್ನ ಕಂಗಳ ಮುಂದೆ ನಿಂದು,
ಕಾರಣನಾಗಿ ಕಾರ್ಯದಿಂದೆ ಸಕಲ ಸಂಜನಿತ ಸುಖಮಯ ವ್ಯಾಪಾರಗೊಂಡು
ತನ್ನ ಮೂಲದ್ರವ್ಯಪ್ರಕಾಶದೊಳಪ್ಪಿಕೊಂಡನು
ಎನ್ನ ಗುರುನಿರಂಜನ ಚನ್ನಬಸವಲಿಂಗ. ॥ ೫೬೬ ॥

೫೬೭

ಮುತ್ತ ತೆತ್ತಿಸಿದ ಪದಕವೆನ್ನ ಕೊರಳಲ್ಲಿ ಕಟ್ಟಿದನಯ್ಯಾ.
ಸೂತ್ರವನೆತ್ತಿದರೆ ಮುತ್ತಿಂಗಾರು ಅದರೊಳಗಾರು ?
ಒತ್ತೆಯ ಒಡವಿಂಗೆ ನಿತ್ಯವಾಗಿ ಒಪ್ಪಿ,
ಸತ್ಯವಾಗೆತ್ತಿಕೊಂಡನು ತನ್ನೊಡಲೊಳಗೆ
ಗುರುನಿರಂಜನ ಚನ್ನಬಸವಲಿಂಗ. ॥ ೫೬೭ ॥

೫೬೮

ಒತ್ತೆಯ ಕಾರ್ಯಕಾಗಿ ಮಿಥ್ಯವನರಿದಲ್ಲಿ ತಥ್ಯತಪ್ಪಿತ್ತು.
ಸಗುಣಕಳೆ ನಿರ್ಗುಣಕ್ಕೆ ಸಲ್ಲದು, ನಿರ್ಗುಣ ಚೈತನ್ಯ ಬೆಳಗ ಕಾಣಲಿಲ್ಲ.
ಗುರುನಿರಂಜನ ಚನ್ನಬಸವಲಿಂಗ ತಾನೆಂದೆನಲಿಲ್ಲ. ॥ ೫೬೮ ॥

೫೬೯

ಕಾಲೊಳಗಿನ ಮುಳ್ಳ ಕಣ್ಣಿನಿಂದೆ ತೆಗೆಯಬಹುದು.
ಕಣ್ಣೊಳಗಿನ ಮುಳ್ಳ ಕಾಲಲ್ಲಿ ತೆಗೆವ ಜಾಣರನಾರನು ಕಾಣೆ
ಮೂರುಲೋಕದೊಳಗೆ.
ಇದು ಕಾರಣ ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣರು ಕಣ್ಣ ಮುಚ್ಚಿ ಕಾಲ ಮುಳ್ಳ ತೆಗೆವರು
ಕಾಲಕೊಯ್ದು ಕಣ್ಣ ಮುಳ್ಳ ತೆಗೆವರು,
ಮರಳಿ ನೋಡಿದರೆ ದೀಪದೊಳಡಗುವರು. ॥ ೫೬೯ ॥

೫೭೦

ಮನಮಾಯಾಮಥನದಿಂದುದಯವಾದ ಬೆಂಕಿ
ಮೂರುಲೋಕವ ಸುಟ್ಟಿತ್ತು ನೋಡಾ.

ಮೂರುಲೋಕದ ಕಿಚ್ಚು ಹರಿ ಬ್ರಹ್ಮ ಇಂದ್ರ ಚಂದ್ರಾದಿ
ಸಕಲರ ನುಂಗಿ ಭಂಗಬಡಿಸಿ ಕೆಡಹಿತ್ತು ಕಾಣಾ.
ಮತ್ತೆಂತೆಂದೊಡೆ, ಮನಶಕ್ತಿಮಥನದಿಂದೆ ಉದಯವಾದ ಲಿಂಗವು
ಲಯಗಮನ ಸ್ಥಿತಿಯ ಸಂಹರಿಸಿ
ಸತ್ಕ್ರಿಯಾಪ್ರಕಾಶ ಸುಜ್ಞಾನಪ್ರಕಾಶ ಮಹಾಜ್ಞಾನಪ್ರಕಾಶವಾಗಿ
ಶರಣನ ಸರ್ವಾಂಗವ ನುಂಗಿ
ಗುರುನಿರಂಜನ ಚನ್ನಬಸವಲಿಂಗವಾಗಿ ಕಾಣಿಸುತಿರ್ದಿತ್ತು ನೋಡಾ. || ೫೭೦ ||

೫೭೧

ಅಖಂಡಬೆಳಗಿನೊಳಗಿರ್ದ ಅನುಪಮ ಶರಣನ
ಕರಸ್ಥಲದಲ್ಲಿ ಕಾಣಿಸಿಕೊಂಬ ಜ್ಯೋತಿರ್ಮಯಲಿಂಗವು
ತನ್ನ ವಿನೋದಕಾರಣ ಆ ಶರಣನ ಶ್ರದ್ಧೆಗೆ ಆಚಾರಲಿಂಗವಾಗಿ,
ನಿಷ್ಠೆಗೆ ಗುರುಲಿಂಗವಾಗಿ, ಸಾವಧಾನಕ್ಕೆ ಶಿವಲಿಂಗವಾಗಿ,
ಅನುಭಾವಕ್ಕೆ ಪ್ರಾಣಲಿಂಗವಾಗಿ, ತನ್ನ ಬೆಳಗಿನೊಳಡಗಿಸಿಕೊಂಡು
ಆನಂದಭಕ್ತಿಯ ನೋಡುತಿರ್ದ
ಗುರುನಿರಂಜನ ಚನ್ನಬಸವಲಿಂಗ ತಾನು ತಾನಾಗಿ. || ೫೭೧ ||

## ಶರಣಸ್ಥಲ

ಸೂತ್ರ : ಇಂತು ಪ್ರಾಣಲಿಂಗಿಸ್ಥಲದಲ್ಲಿ ಆಚರಿಸಿದ ಶರಣನು ತನ್ನ ಸುಮನವೆಂಬ ಹಸ್ತವನು ಪ್ರಾಣಲಿಂಗದಲ್ಲಡಗಿಸಿ, ಆನಂದಮುಖನಾದಲ್ಲಿ ಆ ಮುಖದ ಭಕ್ತಿಗೆ ಪ್ರಸಾದಲಿಂಗವಾಗಲು ಮುಂದೆ ಶರಣಸ್ಥಲವಾಯಿತ್ತು.

೫೭೨

ನಾದ ಬಿಂದು ಕಳೆ ನಿರಂಜನ ಘನಗಂಭೀರ ಮಹಾಪ್ರಸಾದಲಿಂಗವು
ತನ್ನ ತಾನರ್ಚಿಸಿ ವಿನೋದಿಸಬೇಕೆಂಬ ಲೀಲೆಗೆ,
ತಾನೇ ಲಿಂಗವಾಗಿ, ತಾನೇ ಅಂಗವಾಗಿ, ತಾನೇ ದ್ರವ್ಯವಾಗಿ,
ಶರಣಸತಿ ಲಿಂಗಪತಿಯೆಂಬ ಭಾವದಿಂದೆ
ತಾ ನೆರವಿವ ಲೋಕೋಪಕಾರವಾಗಿ ಆಚರಿಸುತಿರ್ದನು
ಗುರುನಿರಂಜನ ಚನ್ನಬಸವಲಿಂಗ. || ೫೭೨ ||

೫೭೩

ಕ್ರಿಯಾಶಕ್ತಿಸಮೇತ ಆಚಾರಲಿಂಗವನು
ಪೃಥ್ವಿತತ್ವದಲ್ಲಿರಿಸಿ ಸದ್ವಾಸನೆಯೊಳು ಚರಿಸುತಿರ್ದನು.

ಜ್ಞಾನಶಕ್ತಿಸಮೇತ ಗುರುಲಿಂಗವನು
ಅಪ್ಪುತತ್ವದಲ್ಲಿರಿಸಿ ಸದ್ರುಚಿಯೊಳು ಚರಿಸುತಿರ್ದನು.
ಇಚ್ಛಾಶಕ್ತಿಸಮೇತ ಶಿವಲಿಂಗವನು
ಅಗ್ನಿತತ್ವದಲ್ಲಿರಿಸಿ ಸುರೂಪಿನೊಳು ಚರಿಸುತಿರ್ದನು.
ಆದಿಶಕ್ತಿಸಮೇತ ಜಂಗಮಲಿಂಗವನು
ವಾಯುತತ್ವದಲ್ಲಿರಿಸಿ ಸುಸ್ಪರ್ಶನದಲ್ಲಿ ಚರಿಸುತಿರ್ದನು.
ಪರಶಕ್ತಿಸಮೇತ ಪ್ರಸಾದಲಿಂಗವನು
ಆಕಾಶತತ್ವದಲ್ಲಿರಿಸಿ ಸುಶಬ್ದದಲ್ಲಿ ಚರಿಸುತಿರ್ದನು.
ಚಿತ್‌ಶಕ್ತಿಸಮೇತ ಮಹಾಲಿಂಗವನು
ಆತ್ಮತತ್ವದಲ್ಲಿರಿಸಿ ಸುತೃಪ್ತಿಯಲ್ಲಿ ಚರಿಸುತಿರ್ದನು.
ಇಂತಿಪ್ಪಲಿಂಗವನು ಕಂಗಳ ಮುಂದೆ ಇರಿಸಿ ಹಿಂಗದನಿಮಿಷನಾಗಿರ್ದನು
ಗುರುನಿರಂಜನ ಚನ್ನಬಸವಲಿಂಗ. ॥ ೫೭೩ ॥

೫೭೪

ಚಲುವ ಲಿಂಗಯ್ಯ ಒಲಿದು ಬಂದನೆಂದು
ನಲುವಿಂದೆ ಮನೆಯ ನಿರ್ಮಿಸಿದಳು.
ಗೋಡೆಯ ತೊಳೆದು ಸಾರಣೆಯ ಮಾಡಿ ಚಿತ್ರವಗೊಳಿಸಿದಳು.
ಹಳೆಯ ತೊಲೆಪಟ್ಟಿ ಜಂತೆಗಳ ತೊಳೆದು
ಬಿಳಿಯ ಬಣ್ಣದಿಂದ ಒಪ್ಪವಿಟ್ಟಳು.
ನೆಲಗಚ್ಚನೆಬ್ಬಿಸಿ ಸುಟ್ಟು ನಿರ್ಮಲರಿವೆಯ ನಡೆಮುಡಿಯ ಮಾಡಿದಳು.
ಮೇಲಣ ಪಟ್ಟಸಾಲೆಯ ಮೊದಲು ನಿರ್ಮಿಸಿದ
ಚದುರಗೆಲಸದ ಪೀಠವನರಿದು ಕೆಳದಿಯರೊಂದಾಗಿ
ಕೈಗೊಟ್ಟು ನೆರೆದರೆ ಪರಿಣಾಮವಾಯಿತ್ತು
ಗುರುನಿರಂಜನ ಚನ್ನಬಸವಲಿಂಗಕ್ಕೆ. ॥ ೫೭೪ ॥

೫೭೫

ತನುವಿನಮೋಹ ತರಹರವಾಗಿ
ಮನದ ರಭಸ ಮುಂದುವರಿದು
ಪ್ರಾಣನಪ್ರಕೃತಿಪ್ರವೇಶದೊಳು ಭಾವಭ್ರಾಂತಿಗೊಂಡು
ತನ್ನ ಸ್ವಭಾವನರಿಯದೆ, ಸುಲಲಿತ ಶರಣರೆನಿಸಿಕೊಂಬ
ಅಬದ್ಧ ಮೂಢರ ಗುರುನಿರಂಜನ
ಚನ್ನಬಸವಲಿಂಗದಲ್ಲಿ ನೆನೆಯಲಾಗದು. ॥ ೫೭೫ ॥

೫೭೬

ಅರುವ ಮರೆದು ತಿರುಗುವ ಕುರಿಗಳಿಗಿನ್ನೆತ್ತಣ ಶರಣಪದವಯ್ಯಾ.
ಬರಿಮಾತಿನಿಂ ಮೆರೆದು ಸೂತಕ ಪಾತಕದಲ್ಲಿ ಹರಿವ
ಹಲವು ಕುಟಿಲಬುದ್ಧಿಯ ಮುಖವಾಗಿರುವ ದುಶ್ಶಲರಿಗೆ
ನಿಶ್ಚಲ ನಿರ್ಮಾಯ ನಿರುಪಮ ಶರಣಪದವೆಂತು ಎನ್ನಬಹುದು
ಗುರುನಿರಂಜನ ಚನ್ನಬಸವಲಿಂಗಾ. ॥ ೫೭೬ ॥

೫೭೭

ಆಡುವರಯ್ಯಾ ಆಚಾರವನಳಿದು,
ನೋಡುವರಯ್ಯಾ ಶಿವರತಿಯ ಮರದು,
ಮಾಡುವರಯ್ಯಾ ವಂಚನೆಯ ನೆರದು
ಬೇಡುವರಯ್ಯಾ ಮನದೊಳು ಮರದು,
ನೆಟ್ಟನೆ ಕೂಡುವರಯ್ಯಾ ಮಲತ್ರಯಮೋಹದೊಳು
ಹೇಳುವರಯ್ಯಾ ಲಿಂಗಶರಣರೆಂದು,
ಇಂತಪ್ಪ ಕಾಳಕೂಳರಿಗೆ ಸಚ್ಚಿದಾನಂದ ಪರಶಿವಾಂಗ ಶರಣರೆಂತೆನ್ನಬಹುದು
ಗುರುನಿರಂಜನ ಚನ್ನಬಸವಲಿಂಗಾ ? ॥ ೫೭೭ ॥

೫೭೮

ವರುಷದಬ್ಬರದೊಳುದುರಿಬಿದ್ದು ಒದರುವ ಮಂಡೂಕಾಳಿಯಂತೆ,
ಹರಗುರುವಾಕ್ಯಾನುಭಾವದುಲುಹನೆಬ್ಬಿಸಿ
ಉದರಪೋಷಣದ ಅನುವಿಡಿದು,
ಅಬ್ಬರಿಸಿ ಹೇಳಿ ಅನಾಚಾರ ವರ್ತನೆಯೊಳ್ಮುಳುಗಿ
ಘನಗಂಭೀರ ಶರಣಪದ ಸನ್ನಿಹಿತರೆಂದರೆ,
ಯಮನಾಳು ಸೀಳಿ ಬಂಧಿಸರೇ,
ಗುರುನಿರಂಜನ ಚನ್ನಬಸವಲಿಂಗಾ. ॥ ೫೭೮ ॥

೫೭೯

ಉದಕದಲ್ಲುದಯಿಸಿದ ಪ್ರಾಣಿಗಳು
ಉದಕದಲ್ಲಿ ಸ್ಥಿತಿ, ಉದಕದಲ್ಲಿ ಮರಣವಲ್ಲದೆ ಬೇರೆ ಹೇಳಲುಂಟೆ ?
ದುರ್ಮಾಯಾ ಸಂಸಾರದಲ್ಲಿ ಹುಟ್ಟಿದ ಅನಿತ್ಯಜನರಿಂಗೆ
ಆ ದುರ್ಮಾಯಾ ಸಂಸಾರದಲ್ಲಿಯೇ ಸ್ಥಿತಿ.
ಆ ದುರ್ಮಾಯಾ ಸಂಸಾರದಲ್ಲಿಯೇ ಮರಣವಲ್ಲದೆ,
ಗುರುಕರದಲ್ಲುದಿಸಿ ಸರ್ವಾಚಾರಸಂಪತ್ತೆಂಬಾಚರಣೆ ಚರಿತೆಯಲ್ಲಿ ಬೆಳೆದು

ಪರಬ್ರಹ್ಮ ಪರದಲ್ಲೇ ನಿರ್ಣಯಲೆಂಬ
ನಿಜಶರಣಪದವೆಂತು ಸಾಧ್ಯವಪ್ಪುದು ಹೇಳಾ
ಗುರುನಿರಂಜನ ಚನ್ನಬಸವಲಿಂಗಾ ? || ೫೭೯ ||

೫೮೦

ಅಜ್ಞಾನ ಸುಜ್ಞಾನವಪ್ಪುದೆ ?
ಗರಳ ಮಧುರವಪ್ಪುದೆ ?
ಬಕ ಹಂಸವಪ್ಪುದೆ ?
ಗುರುನಿರಂಜನ ಚನ್ನಬಸವಲಿಂಗಾ
ಸಂಸಾರಿ ಶರಣನಪ್ಪನೆ ? || ೫೮೦ ||

೫೮೧

ನಡುಗಡಲಲ್ಲಿರ್ಪ ಪಾಷಾಣಕ್ಕೆ ಸೂರ್ಯನ ಧ್ಯಾಸವುಂಟೆ
ಧರೆಯ ಪಾಷಾಣಕ್ಕಲ್ಲದೆ ?
ಕಡುಜಡಸಂಸಾರಮಧ್ಯದಲ್ಲಿರ್ಪ ಕಲುಹೃದಯಮನುಜಂಗೆ
ಚಿತ್ಮರಣಾಚಾರಪದ ಸಾಧ್ಯವಪ್ಪುದೆ
ಚಿತ್ಕಾಯ ಸುಜ್ಞಾನ ಕಾರುಣ್ಯಹೃದಯಗಲ್ಲದೆ ?
ಗುರುನಿರಂಜನ ಚನ್ನಬಸವಲಿಂಗಾ. || ೫೮೧ ||

೫೮೨

ನಡೆಯಲರಿಯದೆ ನಡೆವರಯ್ಯಾ ತನುವಿಡಿದು,
ನೋಡಲರಿಯದೆ ನೋಡುವರಯ್ಯಾ ಮನವಿಡಿದು,
ಮುಟ್ಟಲರಿಯದೆ ಮುಟ್ಟುವರಯ್ಯಾ ಪ್ರಾಣವಿಡಿದು,
ವಾಸಿಸಲರಿಯದೆ ವಾಸಿಸುವರಯ್ಯಾ ಭಾವವಿಡಿದು,
ಕಾಣಲರಿಯದೆ ಕಾಣುವರಯ್ಯಾ ಜೀವವಿಡಿದು,
ಹೋಗಿ ಬರುವ ದಾರಿಯ ಸುಖಿಗಳಿಗೆತ್ತಣ ಶರಣಸ್ಥಲವಯ್ಯಾ,
ಗುರುನಿರಂಜನ ಚನ್ನಬಸವಲಿಂಗಕ್ಕಂಗವಾದ ಅಸಮಜ್ಞಾನರಿಗಲ್ಲದೆ. || ೫೮೨ ||

೫೮೩

ನೋಟಲಂಪಟರಿಗೆ ಸ್ತ್ರೀಯರ ರೂಪವಲ್ಲದೆ
ಶರಣಸ್ವರೂಪವೆಲ್ಲಿಹದೊ ?
ನಡೆಲಂಪಟರಿಗೆ ದುರಾಚಾರವಲ್ಲದೆ
ಶರಣನ ಸದಾಚಾರವೆಲ್ಲಿಹದೊ ?

ಜಿಹ್ವೆಲಂಪಟರಿಗೆ ಕೂಳೇ ಪ್ರಾಣವಲ್ಲದೆ
ಶರಣನುಡಿರಸವೆಲ್ಲಿಹದೊ ?
ಗುಹ್ಯಲಂಪಟರಿಗೆ ಯೋನಿಮೋಹವಲ್ಲದೆ
ಶರಣಮೋಹವೆಲ್ಲಿಹದೊ ?
ಶಬ್ದಲಂಪಟರಿಗೆ ದುರ್ಗೋಷ್ಠಿಗೆ ರತಿಯಲ್ಲದೆ
ಶರಣರನುಭಾವಕ್ಕೆ ರತಿಯೆಲ್ಲಿಹದೊ ?
ವಾಕ್ಪಟುಗಳಿಗೆ ಬರಿಗರ್ಜನೆಯಲ್ಲದೆ
ಶರಣನೆನಹೆಲ್ಲಿಹದೊ ?
ವಾಸನೆಯಲಂಪಟರಿಗೆ ಮಲತ್ರಯವಾಸನೆಯಲ್ಲದೆ
ಶರಣಸತಿ ಲಿಂಗಪತಿವಾಸನೆಯೆಲ್ಲಿಹದೊ ?
ಸ್ಪರ್ಶನಲಂಪಟರಿಗೆ ಸ್ತ್ರೀಯಪ್ಪುಗೆಯಲ್ಲದೆ
ಶರಣರಪ್ಪುಗೆಯೆಲ್ಲಿಹದೊ ?
ಹಸ್ತಲಂಪಟರಿಗೆ ಕುಚ ಹೇಮಾಸೆಯಲ್ಲದೆ
ಶರಣಸೇವೆಯೆಲ್ಲಿಹದೊ ?
ಮನಲಂಪಟರಿಗೆ ಸಂಕಲ್ಪವಿಕಲ್ಪವಲ್ಲದೆ
ಶರಣಲಿಂಗ ಒಂದೆಂಬ ಭಾವವೆಲ್ಲಿಹದೊ ?
ಪ್ರಾಣಲಂಪಟರಿಗೆ ಮಾಯಾಮೋಹ ವಿಷಯಹಂಭಾವವಲ್ಲದೆ
ಶಿವೋಹಂಭಾವವೆಲ್ಲಿಹದೊ ?
ಇಂತು ಈ ಪ್ರಾಣಿಗಳಿಗೆ ಶರಣರೆನ್ನಬಹುದೆ ?
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ,
ಭವಸಂಬಂಧಿಗಳಿಗೆ ಲಿಂಗಸಂಬಂಧಿಯೆನ್ನಬಾರದು ಕಾಣಾ. || ೫೮೩ ||

೫೮೪

ಪ್ರಾಣವೇ ಲಿಂಗವಾದ ಶರಣಂಗೆ
ಕಂಡರು ಕಾಣಬಾರದು, ಕೇಳಿದರು ಕೇಳಬಾರದು,
ಹಿಡಿದರು ಹಿಡಿಯಬಾರದು,
ಬಂದರು ಬರಬಾರದು, ನಿಂತರು ನಿಲ್ಲಬಾರದು.
ಅಂದಂದಿಂಗತ್ತತ್ತ ಇಂದಿಂದಿಂಗಿತ್ತಿತ್ತ
ಸತ್ಯ ಸದಾನಂದ ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣಸಪರಿ ಆಶ್ಚರ್ಯವು. || ೫೮೪ ||

೫೮೫

ಸತ್ತುಚಿತ್ತಾನಂದ ನಿತ್ಯಪರಿಪೂರ್ಣ ಅಖಂಡಲಿಂಗವನು ಧರಿಸಿಪ್ಪ
ಇಂದ್ರಿಯಾನಂದ ಪ್ರಾಣಾನಂದ ಜ್ಞಾನಾನಂದ ಭಾವಾನಂದ
ತೂರ್ಯಾನಂದ ಮಹದಾನಂದಸ್ವರೂಪವಾದ ಶರಣನು,
ಕಾರಣಕ್ಕೆ ಕಾರ್ಯನಾಗಿ ಲೋಕೋಪಕಾರ ಚರಿಸುವನಲ್ಲದೆ
ಪಂಚಭೂತಕಾಯದ ಪಂಚೇಂದ್ರಿಯವಿಷಯಪ್ರಕೃತಿಯೊಳು ಮುಕ್ತನಾಗಿ
ಕಾಮಾದಿ ಷಡ್ವರ್ಗಂಗಳಂತರಂಗದಲ್ಲಿ ಮಡಗಿ,
ಕೊಟ್ಟವರ ಹೊಗಳಿ, ಕೊಡದವರ ಬೊಗಳಿ,
ತಟ್ಟಿ ಬಾಗಿಲಲರಸುವ ತುಡುಗ ಶುನಕನಂತೆ
ಧನವನಿತೆಯರಾಸೆ ತಲೆಗೇರಿ ಮನೆಮನೆ ಹಳ್ಳಿ ಪಟ್ಟಣವ ಹುಡುಕುತ್ತ,
ಒಡಲ ಹೊರೆದು ಗುಡಿ ಮಳಿಗೆ ಮಠವ ಸೇರಿ
ಸತ್ತುಹೋಗಬಂದ ಮಿಥ್ಯವೇಷಧಾರಿಗಳಂತಲ್ಲ ನೋಡಾ ನಿಮ್ಮ ಶರಣ,
ಗುರುನಿರಂಜನ ಚನ್ನಬಸವಲಿಂಗದ ಅಭಿಮಾನಿ ಕಾಣಾ. || ೫೮೫ ||

೫೮೬

ಶರಣನ ನಡೆಚಂದ ಲಿಂಗಕ್ಕೆ, ನುಡಿಚಂದ ಲಿಂಗಕ್ಕೆ,
ಹಿಡಿತಚಂದ ಲಿಂಗಕ್ಕೆ, ಬಿಡಿತಚಂದ ಲಿಂಗಕ್ಕೆ,
ಅಂಗಹೀನ ಅನ್ನಕತ್ತರೆ, ಆಶೆಭರಿತ ವೇಷಧಾರಿಯ
ನಡೆ ನುಡಿ ಹಿಡಿತ ಬಿಡಿತಕೆ ಹೇಸಿಕೆಯಾಗಿ ಹೆರೆ ಸಾರಿ,
ಅತ್ತತ್ತಲಿರ್ದ ನಮ್ಮ ಗುರುನಿರಂಜನ ಚನ್ನಬಸವಲಿಂಗಾ. || ೫೮೬ ||

೫೮೭

ಲೋಕಮುಟ್ಟು ನಡೆಯ ಬಲಿಸುವನು, ಲೋಕಮುಟ್ಟು ನುಡಿಯ ಕಲಿವನು.
ಲೋಕದ ಮುಟ್ಟು ಸೂತಕಾದಿ ಸಕಲಸನ್ನಿಹಿತನಾಗಿ
ಪಾತಕದಲ್ಲಿ ಮುಳುಗಿ ಹೋಗುವ ವೇಷಗಳ್ಳನಂತಲ್ಲ.
ಮತ್ತೆಂತೆಂದಡೆ, ಲಿಂಗಮುಟ್ಟು ನಡೆಸಾಧಿಸುವ, ಲಿಂಗಮುಟ್ಟು ನುಡಿಯ ಗಳಿಸುವ,
ಲಿಂಗಮುಟ್ಟು ಸೂತಕಪಾತಕಂಗಳ ವಿಸರ್ಜಿಸಿ
ಅಜಾತ ಅಪ್ರತಿಮನಾಗಿಪ್ಪ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. || ೫೮೭ ||

೫೮೮

ಅತ್ತಿಯ ಹಣ್ಣು ಹಸ್ತ ನೇತ್ರಕ್ಕೆ ಮೃದು ಮಿಶ್ರವಿರ್ದಡೇನು,
ಬಿಚ್ಚಿದರೆ ಕ್ರಿಮಿ ಘನವಯ್ಯಾ.

ದುಃಸಂಸಾರಿ ಸಮಯಕ್ಕೆ ನಾಚಿ ಲಾಂಛನಧಾರಿಯಾದಡೇನು,
ನುಡಿ ರೂಪು ನಯನ ನುಣುಪಲ್ಲದೆ,
ಮನಭಾವವನೊರೆದುನೋಡಿದರೆ ದುಷ್ಕರ್ಮಘನ ಕಾಣಾ.
ಇಂತಲ್ಲದೆ ನಿಮ್ಮ ಶರಣ ಗುರುನಿರಂಜನ ಚನ್ನಬಸವಲಿಂಗಾ
ತೆಂಗು ಬಾಳೆಯ ಫಲದಂತೆ ಬಿಚ್ಚಿನೋಡಿದರೆ
ಲಿಂಗಸಾರಾಯಸುಖಿ ನೋಡಾ. ॥ ೫೮೮ ॥

೫೮೯

ಬಯಲಪುರುಷನ ನೆರೆದು ಬಯಲರೂಪಕೆ ತಂದು,
ಬಯಲರೂಪಿನಲ್ಲಿರಿಸಿ ನಡೆಯಬಲ್ಲ ಶರಣ.
ರೂಪ ಬಯಲಲ್ಲಿರಿಸಿ ನೋಡಬಲ್ಲ ಶರಣ.
ರೂಪ ಬಯಲೆಂಬ ಕುರುಹಳಿದು ಕೂಡಬಲ್ಲ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಘನಮಹಿಮ ಶರಣ. ॥ ೫೮೯ ॥

೫೯೦

ಸಕಲಸಂಬಂಧಿಯಾಗಿ ನಿಃಕಲವನಳಿದು
ನಿಷ್ಕಲಸಂಬಂಧಿಯಾಗಿ ಸಕಲವನಳಿದು,
ಸಕಲನಿಷ್ಕಲಸನ್ನಿಹಿತ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಶುದ್ಧಶರಣ. ॥ ೫೯೦ ॥

೫೯೧

ಸಂಸಾರಿಯ ಸಂಗಸುಖ ತಲೆಗೇರಿ ತರಹರವಾದ
ನಿಸ್ಸಂಸಾರಿಯ ನಿಯತ ಆಚಾರಕ್ಕೆ,
ಎಂತೆಂದೊಡೆ ಅಂತೆ ಮಾರ್ಗತಪ್ಪಿ ನಡೆವಲ್ಲಿ ಆಚಾರಹೀನನೆಂಬುದು.
ವಾಕ್ ತಪ್ಪಿನಡೆವಲ್ಲಿ ವಚನಹೀನನೆಂಬುದು.
ಕಣ್ಣುಕೆಟ್ಟು ನೋಡುವಲ್ಲಿ ಹೀನದೃಷ್ಟಿಯೆಂಬುದು.
ಚರ್ಮಗೆಟ್ಟು ಮಾಡಿದಲ್ಲಿ ಅಂಗಹೀನನೆಂಬುದು.
ಕರ್ಣವ ಕೆಡಿಸಿಕೊಂಡಲ್ಲಿ ಕಿವಿಹೀನನೆಂಬುದು.
ಮೂಗ ಮುಚ್ಚಿ ನೋಡುವಲ್ಲಿ ಮುಕರಿಯನೆಂಬುದು.
ಮಾನಸಕೆಟ್ಟು ಮೌನಗೊಂಡಲ್ಲಿ ಮುಸುಕನೆಂಬುದು.
ಗುರುನಿರಂಜನ ಚನ್ನಬಸವಲಿಂಗವಾದಲ್ಲಿ
ನೋಡಲರಿಯದೆ ಹಿಮ್ಮೆಟ್ಟುವರು ಮೂರುಲೋಕದಲ್ಲಿಪ್ಪವರು. ॥ ೫೯೧ ॥

೫೯೨

ಅನಂತಬ್ರಹ್ಮಾಂಡ ಸಚರಾಚರ ಯುಗಜುಗವನರಿದು ನಿಂದ
ನಿಶ್ಚಿಂತ ನಿಜಾನಂದನಿಲುವಿಂಗೆ,
ಸಂದುಸಂಶಯ ದ್ವಂದ್ವಕರ್ಮಕಂಡು ಕಲೆ ನಿಂದಿರಲೆಡೆಯಿಲ್ಲ.
ಅದೇನು ಕಾರಣವೆಂದೊಡೆ,
ಸೂರ್ಯಂಗಿದಿರುಕತ್ತಲೆ, ನೀರಿಂಗಿದಿರು ಬೆಂಕಿ, ಮರುತಂಗಿದಿರು ಮೇಘ,
ಮಹಾಜ್ವಾಲೆಗಿದಿರು ಶೀತ, ಮಹದರುವಿಂಗಿದಿರು ಮಾಯೆ,
ಇನಿತಕ್ಕಿಂಬಿಲ್ಲದಂತೆ ನಿತ್ಯ ನಿತ್ಯ ಗುರುನಿರಂಜನ ಚನ್ನಬಸವಲಿಂಗ
ನಿಮ್ಮ ಶರಣ. || ೫೯೨ ||

೫೯೩

ಸಕಲನಿಃಕಲಸನ್ನಿಹಿತ ಸದಮಲಾನಂದ ಶರಣಂಗೆ
ಆವ ಮಾಯಾ ಅವಿದ್ಯೋಚ್ಛಿಷ್ಟಸುಖಿಗಳುಲುಹು ತಾಗಲರಿಯದಿರ್ದವು.
ಅದೆಂತೆನ್ನಲು, ಉರಿಗೆ ಸೊರಜು, ಕೆಂಡಕ್ಕೆ ಗೊರಲೆ,
ಪುಣ್ಯಕ್ಕೆ ಪಾಪ ಸೋಂಕದಂತೆ,
ನಾದ ಬಿಂದು ಕಲಾನಿರಂಜನ ತಾನಾದ ನೋಡಾ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೫೯೩ ||

೫೯೪

ಕಮಲದ ಬಂಡುಂಬ ಭೃಂಗ
ಭೂಜ ರಜ ಹುಡಿಯ ಸೋಂಕಲಮ್ಮದು ನೋಡಾ.
ಐದದು ನಿರಂಜನ ಅಪ್ರತಿಮ ಗಂಭೀರ
ಗುರುನಿರಂಜನ ಚನ್ನಬಸವಲಿಂಗ ನಿಮ್ಮ ಶರಣ. || ೫೯೪ ||

೫೯೫

ನಡೆಯಲರಿಯದ ನಡೆಯ ನಡೆದನಯ್ಯಾ.
ನುಡಿಯಲರಿಯದ ನುಡಿಯ ನುಡಿದನಯ್ಯಾ.
ಮಾಡಬಾರದ ಮಾಟವ ಮಾಡಿದನಯ್ಯಾ.
ನೋಡಬಾರದ ನೋಟವ ನೋಡಿದನಯ್ಯಾ.
ಕೂಡಬಾರದ ಕೂಡವ ಕೂಡಿದನಯ್ಯಾ.
ಗುರುನಿರಂಜನ ಚನ್ನಬಸವಲಿಂಗದಂಗವಾಗಿ ಶರಣನು. || ೫೯೫ ||

೫೯೬

ಕಾಣಬಾರದ ಕಳೆ ಕಣ್ಣಿಂಗೆ ಗೋಚರಿಸಿದಲ್ಲಿ
ಕಳೆಯಬಾರದ ಕಲ್ಪನೆ ಕಳಚಿತ್ತು ನೋಡಾ.
ಬರಬಾರದ ಬರವು ಬಂದು ನಿಂದಲ್ಲಿ
ಆಗಬಾರದ ಭೋಗ ಆದುದು ನೋಡಾ.
ಹುಟ್ಟಬಾರದ ಹುಟ್ಟು ಹುಟ್ಟಿಬಂದುದಾಗಿ
ನೆಟ್ಟನೆ ಬಂದು ಕೈಹಿಡಿದುದು ನೋಡಾ.
ಆಡಬಾರದ ಆಟ ಬಂದುದಾಗಿ ಮಾಡಬಾರದ ಸ್ನೇಹ ಹೆಚ್ಚಿತ್ತು ನೋಡಾ.
ಹೇಳಬಾರದ ಸುಖವು ಹೇಳಿ ಸಾರಿತ್ತಾಗಿ
ಅಪ್ರತಿಮ ಗುರುನಿರಂಜನ ಚನ್ನಬಸವಲಿಂಗ ತಾನೆ ಶರಣ ನೋಡಾ. || ೫೯೬||

೫೯೭

ಸತ್ತುಚಿತ್ತಾನಂದ ನಿತ್ಯಪರಿಪೂರ್ಣ ನಿಜಾನಂದ ಶರಣ,
ಇತರ ಭಜನೆ ಭಾವನೆ ಗಜಬಜೆಗಂಗೈಸುವ
ರಜನೆ ಮಲಸಂಯುಕ್ತ ಕುಜನ ಕುಲಾದಿ ಮದ ದುಃಸುಖಿಯಲ್ಲ ನೋಡಾ.
ನಾದ ಬಿಂದು ಕಳೆಯ ತಪ್ಪಿಸಿ ಗುರುಚರಲಿಂಗವನಪ್ಪಿ
ಕುರುಹಿಲ್ಲದ ನಿಲುವು ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. ||೫೯೭||

೫೯೮

ಸತ್ತುವೇ ಲಿಂಗ, ಚಿತ್ತುವೇ ಅಂಗ, ಆನಂದವೇ ಸಮರಸ,
ನಿತ್ಯವೇ ಪ್ರಸಾದ, ಪರಿಪೂರ್ಣವೇ ಪ್ರಕಾಶ, ಅಖಂಡಮಯ ತಾನಾದ ಶರಣನು.
ಉಪಾಧಿ ನಿರುಪಾಧಿಸಹವೆಂಬ
ಮಾಟತ್ರಯದ ಕೋಟಲೆಯ ಕಾಣ ನೋಡಾ.
ಅಷ್ಟವಿಧಾರ್ಚನೆ ಷೋಡಶೋಪಚಾರವೆಂಬ
ಕಷ್ಟಕರ್ಮವ ಹೊದ್ದ ನೋಡಾ.
ಕೂಟ ಬಟ್ಟೆಗಳ ಕೂಡೆ ಕೂರ್ಮೆಸುಖಾನುಭಾವ
ಕುರುಹಿಟ್ಟು ಹೇಳಿಕೊಳ್ಳನೋಡಾ.
ಉಚ್ಛಿಷ್ಟ ವಾಕ್ಯಮಥನವನನುಕರಿಸ
ಗುರುನಿರಂಜನ ಚನ್ನಬಸವಲಿಂಗಕ್ಕಂಗವಾಗಿರ್ದ ಅಚ್ಚಶರಣ. || ೫೯೮ ||

೫೯೯

ಅಷ್ಟತನುವಿನ ಕಷ್ಟದೊಳಗಿರ್ದ ದೃಷ್ಟಲಿಂಗವ ಕರದಲ್ಲಿ ಪಿಡಿದು
ಕೆಟ್ಟ ವಾಕ ಜಿನುಗುತ ಮುಟ್ಟಿ ಲಿಂಗಾನುಭಾವವ ಮಾಡುವ

ಘ್ರಷ್ಟಜೀವಿಗಳನೆಂತು ಶರಣರೆನ್ನಬಹುದಯ್ಯಾ?
ಹುಟ್ಟಿದ ಯೋನಿಯ ಬಿಟ್ಟು ಕಳೆಯದೆ
ನೆಟ್ಟನೆ ಲಿಂಗಶರಣನೆಂದೊಡೆ ಕೆಟ್ಟು ಹೋಯಿತ್ತು ಇವರರುಹು
ಗುರುನಿರಂಜನ ಚನ್ನಬಸವಲಿಂಗವ ಮುಟ್ಟದೆ. || ೫೯೯ ||

೬೦೦

ಆದಿಗುರುವಿನ ಕೈಯಿಂದೆ ಅನಾದಿಲಿಂಗವ ಪಡೆದವರೆಂದು
ಭೇದಾಭೇದವನರಿಯದೆ ಸಾಧಿಸುವರು ತನುವಿಡಿದು ಇಂದ್ರಿಯ ಸುಖವ :
ಭೇದಿಸುವರು ಮನವಿಡಿದು ಕಾರಣದ ಸುಖವ :
ಆವೇದಿಸುವರು ಪ್ರಾಣವಿಡಿದು ವಿಷಯದ ಸುಖವ.
ಇದು ಕಾರಣ ಗುರುವೆಲ್ಲಿಹದೋ ! ಲಿಂಗವೆಲ್ಲಿಹದೋ !
ಜಂಗಮವೆಲ್ಲಿಹದೋ ! ಪ್ರಸಾದವೆಲ್ಲಿಹದೋ !
ಗುರುನಿರಂಜನ ಚನ್ನಬಸವಲಿಂಗದಲ್ಲಿ ಮುಕ್ತಿಯೆಲ್ಲಿಹದೋ ! || ೬೦೦ ||

೬೦೧

ಅಪ್ರತಿಮ ಶಿವಯೋಗಿಯ ವೇಷವ ಧರಿಸಿ
ಅನುಪಮಸುಖಮುಖಾನಂದವನರಿಯದೆ,
ಹಗಲೇ ಕತ್ತಲೆಯಣ್ಣಗಳ ಮಾತಿಗರುವಿತ್ತು
ಅತ್ತಿತ್ತನರಿಯದೆ ಸುತ್ತಿ ಸುತ್ತಿ ಸುಳಿವರು
ಅಶುದ್ಧಬದ್ಧ ಹುಸಿಕರು ಗುರುನಿರಂಜನ ಚನ್ನಬಸವಲಿಂಗವನರಿಯದೆ. || ೬೦೧||

೬೦೨

ತಥ್ಯತಾನೆಂಬ ನಿತ್ಯದ ನಿಲುವ ಮರೆದು,
ಮಿಥ್ಯಮಂದಿರದ ಸತ್ಯಸಂಸ್ಕೃತಿಯೊಳೊತ್ತಗೆಯ್ದು,
ಕರ್ತು ಗುರುಲಿಂಗಜಂಗಮದ ಅನುವಿನ
ಗೊತ್ತು ಸುಟ್ಟು ಮಾಡುವ ಬಡವರಿಗೆ
ಮತ್ತೆ ಇನ್ನೆಲ್ಲಿಯದು ಹೇಳಾ ಲಿಂಗಶರಣಸ್ಥಲ
ಗುರುನಿರಂಜನ ಚನ್ನಬಸವಲಿಂಗಾ. || ೬೦೨ ||

೬೦೩

ನಿತ್ಯಾನಂದ ನಿರ್ಮಲ ಜ್ಯೋತಿರ್ಮಯಲಿಂಗಸುಖಿ ಶರಣಂಗೆ,
ಅವಿದ್ಯಾಮಾಯಾಮಲದುಸ್ಸಂಸಾರದಾಯಾಸದೋರಲು ಕಾರಣವೇನು.
ಇದು ಸಂಗತಿಯೊಳಿರ್ದು ನಾವು ಲಿಂಗ ನಮಗೆ ಪಾಶವಿಲ್ಲೆಂದು-

ತನುಮನಭಾವವ ಮೀರಿರ್ದ ಮಹಿಮರೆಂದು
ಬೊಗಳಿ ಬಿದ್ದು ಹೋಗುವ ವಾಗದ್ವೈತಿ ಭಂಡಮೂಢರ ಶರಣರೆಂದರೆ
ಅಘೋರನರಕ ತಪ್ಪದು ನೋಡಾ ಗುರುನಿರಂಜನ ಚನ್ನಬಸವಲಿಂಗಾ. ‖ ೬೦೩‖

೬೦೪

ಕಂಗಳಲ್ಲಿ ಹೆಜ್ಜೆ ಮೂಡಿ, ಹೆಜ್ಜೆಯಲ್ಲಿ ಕಂಗಳು ಮೂಡಿ,
ಕಣ್ಣಿನಲ್ಲಿ ಕಂಗಳು ಮೂಡಿ, ಕಿವಿಯಲ್ಲಿ ಕಂಗಳು ಮೂಡಿ,
ಮೂಗಿನಲ್ಲಿ ಕಂಗಳು ಮೂಡಿ, ನಾಲಿಗೆಯಲ್ಲಿ ಕಂಗಳು ಮೂಡಿ,
ಮೈಯಲ್ಲಿ ಕಂಗಳು ಮೂಡಿ, ಕೈಯಲ್ಲಿ ನಲ್ಲನ ಬಿಗಿದು ಮುದ್ದಿಸಿ,
ನೆರೆದು ಸುಖಿಸಬಲ್ಲಾತಂಗಲ್ಲದೆ ಶರಣಸ್ಥಲ ಸಾಮಾನ್ಯವೇ
ಗುರುನಿರಂಜನ ಚನ್ನಬಸವಲಿಂಗಾ ? ‖ ೬೦೪ ‖

೬೦೫

ಮಾತು ಮಾತಿನ ತೂತಜ್ಞಾನಿಗಳಿಗೆತ್ತಣ ಶರಣಸ್ಥಲವಯ್ಯಾ ?
ಸೋತು ನಡೆಯರು ಗುರುಹಿರಿಯರಿಗೆ
ಖ್ಯಾತಿಯ ಮುಂದಿಟ್ಟು ಮಲತ್ರಯದಾಸೆಯೊಳು ಮುಳುಗಿ.
ಇತರರ್ಗೆ ನೀತಿ ಸೂತಸದಿಂದೆ ಜರಿದು
ತನ್ನನರಿಯದೆ ಭಿನ್ನವಿಟ್ಟು ಮನಗೂಡಿ ಚರಿಸುವ
ಶುನಕರು ಶರಣರೆಂದರೆ ಸರಿಯಪ್ಪುದೆ ?
ನಾಚಿಕೆಯಿಲ್ಲದ ನಾಡಭೂತಗಳನೆನಗೊಮ್ಮೆ ತೋರದಿರಯ್ಯಾ
ನಿಮ್ಮ ಧರ್ಮ ಗುರುನಿರಂಜನ ಚನ್ನಬಸವಲಿಂಗಾ. ‖ ೬೦೫ ‖

೬೦೬

ಸತ್ಯಶರಣರ ಗೊತ್ತು ಹೇಳಿ ನಡೆವ ಮಿಥ್ಯ ಜನರುಗಳನೇನೆಂಬೆನಯ್ಯಾ.
ನಡೆಯೊಂದು ಕಡೆಗೆ ನುಡಿಯೊಂದು ಕಡೆಗೆ
ನೋಟವೊಂದು ಕಡೆಗೆ ಮಾಟವೊಂದು ಕಡೆಗೆ
ವಂಚನೆಯ ಒಳಗಿಟ್ಟು ಮಿಂಚುತ ಮಾತನಾಡುತ್ತ
ಕಾಗೆಯ ಬಳಗದಂತೆ ಕೂಡಿ ಕೂಗಿ ಕಡೆಗೆ ಹೋಗಿ ಬೀಳುವ
ಕಪಟಗಳ್ಳರಿಗೆತ್ತಣ ಶರಣಸ್ಥಲವಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. ‖ ೬೦೬ ‖

೬೦೭

ಅತ್ಯತಿಷ್ಠದ್ದಶಾಂಗುಲವೆಂಬ ಅನುಪಮಲಿಂಗವನು
ಸಗುಣಸದ್ಗುರುವಿನಿಂದ ಪಡೆದು,

ಅಂಗ ಮನ ಭಾವಂಗಳಲ್ಲಿ ಹೆರೆಹಿಂಗದಾಚರಿಸುವ
ಪರಮಾನಂದ ಶರಣರ ನೆರೆಯಲ್ಲಿರ್ದ ನರರೆಲ್ಲ
ಪರಿಭವಂಗಳ ನೀಗುವರಯ್ಯಾ.
ಅವರ ನುಡಿಯ ಕೇಳಿ ನಡೆದವರು ಪರಮಸುಖದೊಳಗಿರ್ಪರಯ್ಯಾ.
ಅವರ ಸೇವೆಯಮಾಡಿ ಒಲಿಸಿಕೊಂಡವರು ಸದ್ಯೋನ್ಮುಕ್ತರಯ್ಯಾ.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣರ ದರ್ಶನ ಸ್ಪರ್ಶನ ಸಂಭಾಷಣೆಯೇ ನಿಜಪದವಯ್ಯಾ. ॥ ೬೦೭॥

೬೦೮

ಕರ್ಮವ ಜರಿದು ಕಾಯದಲ್ಲಿ ಅರಿದು,
ಕರ್ಮವ ಹೊದ್ದದಿಪ್ಪುದೇ ಶರಣಸ್ಥಲ.
ಸಂಶಯಕಲ್ಪನೆಯ ಕಳೆದು ಮನದಲ್ಲಿ ಅರಿದು,
ಆ ಸಂಶಯಕಲ್ಪನೆಯ ಹೊದ್ದದಿರ್ಪುದೇ ಶರಣಸ್ಥಲ.
ಭ್ರಾಂತನಳಿದು ಭಾವದಲ್ಲಿ ಅರಿದು
ಆ ಭ್ರಾಂತ ಹೊದ್ದದಿರ್ಪುದೇ ಶರಣಸ್ಥಲ.
ನಿತ್ಯಾನಿತ್ಯವರಿದು ಚಿತ್ತ ಗುರುನಿರಂಜನ ಚನ್ನಬಸವಲಿಂಗಕ್ಕೆ
ಅಚ್ಚೊತ್ತಿ ಅರಿಯದಿರ್ಪುದೇ ಅನಾದಿಶರಣಸ್ಥಲ ಕಾಣಾ. ॥ ೬೦೮ ॥

೬೦೯

ಕಾರಣಮಾತನರಿವ ಕಲ್ಪಿತಭರಿತನಲ್ಲದೆ
ಅಕಾರಣಮಾತನರಿಯನಯ್ಯಾ.
ಕಾರ್ಯನಾಗಿ ಕಾರಣಾನುಕೂಲಿಗಾಸ್ಪದನಲ್ಲದೆ
ಅಕಾರ್ಯನಾಗಿ ಅಕಾರಣಾನುಕೂಲಿಗಾಸ್ಪದವಿರಹಿತನಯ್ಯಾ.
ಗುರುನಿರಂಜನ ಚನ್ನಬಸವಲಿಂಗಾ, ನಿಮ್ಮ ಶರಣ ಅನುಪಮಸುಖಿ. ॥ ೬೦೯ ॥

೬೧೦

ಕಾಯದಲ್ಲಿ ಕರುಣರಸವಿರಹಿತನಲ್ಲ ಕಾಣಾ.
ಮನದಲ್ಲಿ ಪ್ರೇಮರಸ ಶೂನ್ಯನಲ್ಲ ಕಾಣಾ.
ಪ್ರಾಣದಲ್ಲಿ ಅಭಿನ್ನಮೋಹರಸರಹಿತನಲ್ಲ ಕಾಣಾ.
ಭಾವದಲ್ಲಿ ಅಖಂಡಪರಿಪೂರ್ಣರಸವಿರಹಿತನಲ್ಲ ಕಾಣಾ.
ಅರುವಿನಲ್ಲಿ ಘನಸಮರಸ ನಾಶನಲ್ಲ ಕಾಣಾ.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಗಣತತಿಗೆ ಅಜರುಗಳ ಸ್ಥಾನದಂತಲ್ಲ ಕಾಣಾ ಲಿಂಗಶರಣ. ॥ ೬೧೦ ॥

೬೧೧

ಅಯ್ಯಾ, ಅನಾದಿ ಪರಶಿವ ತನ್ನ ವಿನೋದಕಾರಣ
ಮರ್ತ್ಯಲೋಕದ ಮಹಾಗಣಂಗಳ ನೋಡಲೋಸುಗ
ನಾದಬಿಂದುಕಳಾಮೂರ್ತಿಯಾಗಿ ಸತ್ಯವೆಂಬ ಕಂತೆಯ ಧರಿಸಿ,
ಸಮತೆಯೆಂಬ ಕಮಂಡಲವ ಪಿಡಿದು, ನಿರ್ಮಲವೆಂಬ ಟೊಪ್ಪರವ ಧರಿಸಿ,
ನಿಜದರುವೆಂಬ ದಂಡವ ತಳೆದು, ಮಹಾಜ್ಞಾನವೆಂಬ ಭಸ್ಮವ ಧರಿಸಿ,
ಘನಭಕ್ತಿವೈರಾಗ್ಯವೆಂಬ ಹಾವುಗೆಯ ಮೆಟ್ಟಿ,
ಸದ್ಭಾವವೆಂಬ ಹಸ್ತದಲ್ಲಿ ಪರಮಾನಂದವೆಂಬ ಪಾವಡವ ಕಟ್ಟಿ,
ಭಕ್ತದೇಹಿಯೆಂದು ಸಜ್ಜನ ಸಮಹೃದಯ ಶಾಂತರುಗಳನರಸುತ್ತ
ತಾಮಸವ ಪರಿಸುತ್ತ ಅಡ್ಡಿಗೆರಗಿ ಬಂದವರಿಗನುಭಾವವ ತಿಳಿಸುತ್ತ
ಸುಪವಿತ್ರಕ್ಕೆಳಿಸುತ್ತ ಸುಜ್ಞಾನವೆರಸಿ ತನ್ನಂತೆ ಮಾಡುತ್ತ ಚರಿಸುತಿರ್ದ
ಗುರುನಿರಂಜನ ಚನ್ನಬಸವಲಿಂಗ ಭಕ್ತೋಪಕಾರವಾಗಿ. ॥ ೬೧೧ ॥

೬೧೨

ಅಂಗದಲ್ಲಿ ಲಿಂಗಸನ್ನಿಹಿತನಾಗಿ, ಲಿಂಗದಲ್ಲಿ ಅಂಗಸನ್ನಿಹಿತನಾಗಿ,
ಅಂಗಲಿಂಗಸಂಗದಲ್ಲಿ ಪರಮಪರಿಣಾಮಿಯಾಗಿ,
ಇಹಪರವರಿಯದ ಪರಿಪೂರ್ಣಸುಖಾನಂದ ಶರಣಂಗೆ
ನಮೋ ನಮೋ ಎಂದು ಬದುಕಿದೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. ॥ ೬೧೨ ॥

೬೧೩

ಅಂಗದಲ್ಲಿ ಆಚಾರ, ಆತ್ಮನಲ್ಲಿ ಗೌರವ,
ಪ್ರಾಣದಲ್ಲಿ ಶಿವ, ಕರಣಂಗಳಲ್ಲಿ ಜ್ಞಾನ,
ವಿಷಯಂಗಳಲ್ಲಿ ಪರಮಾನಂದ,
ಹೃದಯದಲ್ಲಿ ಪರಮಪರವಶ,
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ ಅನುಪಮಸುಖಿ. ॥ ೬೧೩ ॥

೬೧೪

ಸ್ವಾಂತಪರಿಪೂರ್ಣಜ್ಞಾನಮಹಿಮ ಶರಣನ ನಿಜದನುವಿಂಗಿತ್ತು,
ನಿರ್ಮಲ ತನು ಮನ ಪ್ರಾಣವನೀಕ್ಷಿಸಲು
ಸತ್ತುಚಿತ್ತಾನಂದ ಲಿಂಗವಾಗಿರ್ದುದಲ್ಲದೆ ಮತ್ತೇನು ಕಾಣದು ನೋಡಾ.
ಅಗಣಿತ ಸುಖಮಯ ಶರಣನ ನಡೆಯೇ ಪಾವನ,

ನುಡಿಯೇ ಮಹಾನುಭಾವ,
ಆತ ಸೋಂಕಿದ ಜಲವೆಲ್ಲ ಪುಣ್ಯತೀರ್ಥ, ಆತ ನಿಂತ ನೆಲವೆಲ್ಲ ಕಾಶೀಕ್ಷೇತ್ರ.
ನೋಡಿ ಶರಣೆಂದವರೆಲ್ಲ ಭವನಾಶರು.
ಆತಂಗೆ ಸೇವೆಯನಿತ್ತು ಕೊಂಡವರೆಲ್ಲ ನಿಜಮುಕ್ತರು ಕಾಣಾ,
ಗುರುನಿರಂಜನ ಚನ್ನಬಸವಲಿಂಗಾ. || ೬೧೪ ||

೬೧೫

ಬರಬಾರದ ಬರವು ನೆರದಲ್ಲಿ,
ಹುಟ್ಟಬಾರದ ಹುಟ್ಟು ಘಟಿಸಿ ಬಂದಾತನೆ ಶರಣ.
ತೋರಬಾರದ ರೂಪವನು ತೋರಿ ನಡೆವಾತನೆ ಶರಣ.
ನೋಡಬಾರದ ನೋಟ ನೀಟಾಗಿ ನಿಂದಲ್ಲಿ
ಕಾಟ ಬೇಟದ ಕಳವಳವ ದಾಟಿಸಿ,
ಮರೆದಿರುವ ಮಡದಿ-ಪುರುಷರ ನಡೆಯಲ್ಲಿ
ಎರಡಿಲ್ಲದಿಪ್ಪ ಮಹಿಮ,
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. || ೬೧೫ ||

೬೧೬

ಹುಟ್ಟಿಬಂದ ಮನೆಯ ಸುಟ್ಟು
ತಾಯಿಯ ಸಂಗ ಮಾಡಿದರೊಂದು ಕೂಸು ಹುಟ್ಟಿ
ಕೈಯೊಳಗೆ ನಿಂದು ಮೈಯನೆಲ್ಲ ಮುಟ್ಟಿತ್ತು ಇದೇನು ಹೇಳಾ !
ನಾ ನೋಡಿ ಹೆಣ್ಣಾಗಿ ಬಗೆಬಗೆಯಾಟದಿಂದೆ ಸೊಗಸು ತೋರಿದರೆ
ನೆಲಮನೆಯೊಳಿಪ್ಪ ಬಳಿವಿಡಿಯೆ ಭೋಗವ ನೆಗಹಿ ತೋರಿದನು
ಮೇಲುಮನೆಯಲ್ಲಿ ಗುರುನಿರಂಜನ ಚನ್ನಬಸವಲಿಂಗ. || ೬೧೬ ||

೬೧೭

ಅರಿದು ಮರೆದವನಲ್ಲ, ಮರೆದು ಅರಿದವನಲ್ಲ,
ಅರಿವು ಮರೆವು ಹಿಡಿದು ಚರಿಸಿದವನಲ್ಲ, ಗಗನ ಧರೆಹಿರಿಯರ ನೆರವಿಯವನಲ್ಲ.
ಪರಮ ಪರಿಣಾಮಿ ನಿರಂತರ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. || ೬೧೭ ||

೬೧೮

ನಿಜಕ್ರಿಯಾಸುಜ್ಞಾನ ಸು[illegible]ಸನೊಮ್ಮೆ ಜಡಕ್ರಿಯಾ ತೊಡರೊಳು ಬೀಳ,
ಅಡಿಯಿಡನೊಮ್ಮೆ ಅಗಣಿತ ಕಟ್ಟುವ್ರತ ಕಾವಳಿಗೆ,

ಅರಿಯನೊಮ್ಮೆ ನಿಸ್ಸೀಮ ಬರಿ ನಿಯಮಬದ್ಧ ಬಣತೆಯ,
ಹುಸಿ ಸುಡಿಯನೊಮ್ಮೆ, ಹಸನವಿಡಲರಿಯ.
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ನಾಮಸುಖಿ ಶರಣ. ॥ ೬೧೮ ॥

೬೧೯

ಕಾಮವಿಲ್ಲದ ಸುಖ ಕಾಯದಲ್ಲಿ,
ಕ್ರೋಧವಿಲ್ಲದ ಸುಖ ಮನದಲ್ಲಿ,
ಲೋಭವಿಲ್ಲದ ಸುಖ ಪ್ರಾಣದಲ್ಲಿ,
ಮೋಹವಿಲ್ಲದ ಸುಖ ವಿಷಯಂಗಳಲ್ಲಿ,
ಮದವಿಲ್ಲದ ಸುಖ ಕರಣಂಗಳಲ್ಲಿ,
ಮತ್ಸರವಿಲ್ಲದ ಸುಖ ಭಾವದಲ್ಲಿ,
ಭಿನ್ನವಿಲ್ಲದ ಸುಖ ಗುರುನಿರಂಜನ ಚನ್ನಬಸವಲಿಂಗದಲ್ಲಿ,
ಅಖಂಡದ ಅವಿರಳಸುಖಾನಂದ ಶರಣ. ॥ ೬೧೯ ॥

೬೨೦

ಸತ್ತು ಬದುಕಿ ಬಾಳಿದ ಮಿಥ್ಯಕಾಯನಲ್ಲದ
ಸತ್ತುಬದುಕಿ ಬಾಳಿದ ಚಿತ್ಕಾಯ ಕಾಣಾ.
ಗತಿಮತಿ ಗಮನವಿಡಿದು ಕ್ಷಯಪದ ಸಾಧ್ಯನಲ್ಲದ
ಗತಿಮತಿ ಗಮನವಿಡಿದು ಅಕ್ಷಯಪದ ಸಾಧ್ಯ ಕಾಣಾ.
ನಾದ ಬಿಂದು ಕಳೆಯ ಮುಳುಗಿಸಿ ಬಾಧೆಯನರಿಯದ
ನಾದ ಬಿಂದು ಕಳೆಯ ಮುಳುಗಿಸಿ ಅನಾದಿಯನರಿದ ಕಾಣಾ.
ಗುರುನಿರಂಜನ ಚನ್ನಬಸವಲಿಂಗಾ, ನಿಮ್ಮ ಶರಣ ಕಾಣಾ. ॥ ೬೨೦ ॥

೬೨೧

ಆಚಾರವಿಲ್ಲದಂಗ, ವಿಚಾರವಿಲ್ಲದ ಮನ,
ಸಂಬಂಧವರಿಯದ ಪ್ರಾಣ, ಪರಿಣಾಮವರಿಯದ ಭಾವ,
ಈ ಚತುರ್ವಿಧದಲ್ಲಿರ್ದ ಚಾಪಲ್ಯರು ಸಲ್ಲರಯ್ಯಾ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಶರಣಸ್ಥಲಕ್ಕೆ. ॥ ೬೨೧ ॥

೬೨೨

ಪೃಥ್ವಿಯಂಗದಲ್ಲಿ ಆಚಾರಲಿಂಗವೆಂಬ ಪತಿಗೆ
ಶ್ರದ್ಧೆಯುಕ್ತಸತಿಯಾಗಿ ಸುಖಿಸಬಲ್ಲರೆ ಶರಣನೆಂಬೆ.
ಅಪ್ಪು ಅಂಗದಲ್ಲಿ ಗುರುಲಿಂಗವೆಂಬ ಪತಿಗೆ
ನೈಷ್ಠೆಯುಕ್ತಸತಿಯಾಗಿ ಮೋಹಿಸಬಲ್ಲರೆ ಶರಣನೆಂಬೆ.

ಅಗ್ನಿಯಂಗದಲ್ಲಿ ಶಿವಲಿಂಗವೆಂಬ ಪತಿಗೆ
ಸಾವಧಾನಯುಕ್ತಸತಿಯಾಗಿ ರಮಿಸಬಲ್ಲರೆ ಶರಣನೆಂಬೆ.
ವಾಯುವಂಗದಲ್ಲಿ ಜಂಗಮಲಿಂಗವೆಂಬ ಪತಿಗೆ
ಅನುಭಾವಯುಕ್ತಸತಿಯಾಗಿ ಸಂಗತಿಯಬಲ್ಲರೆ ಶರಣನೆಂಬೆ.
ಆಕಾಶಾಂಗದಲ್ಲಿ ಪ್ರಸಾದಲಿಂಗವೆಂಬ ಪತಿಗೆ
ಆನಂದಯುಕ್ತಸತಿಯಾಗಿ ಪರಿಣಾಮಿಸಬಲ್ಲರೆ ಶರಣನೆಂಬೆ.
ಆತ್ಮಾಂಗದಲ್ಲಿ ಮಹಾಲಿಂಗವೆಂಬ ಪತಿಗೆ
ಸಮರಸಯುಕ್ತಸತಿಯಾಗಿ ಪರಿಣಾಮಿಸಬಲ್ಲರೆ ಶರಣನೆಂಬೆ.
ಸರ್ವಾಂಗದಲ್ಲಿ ಗುರುನಿರಂಜನ ಚನ್ನಬಸವಲಿಂಗವೆಂಬ ಪತಿಗೆ
ಅಭಿನ್ನಯುಕ್ತಸತಿಯಾಗಿ ಆನಂದಮಯನಾಗಬಲ್ಲರೆ
ಅಚ್ಚಶರಣನೆಂಬೆ ಕಾಣಾ. || ೬೨೨ ||

೬೨೩

ಇಂದ್ರಿಯಾನಂದವೆಂಬಲಿಂಗಸನ್ನಿಹಿತ ಆಯತವೆಂಬ ಶರಣ ನೋಡಾ.
ಪ್ರಾಣಾನಂದವೆಂಬಲಿಂಗಸಮೇತ ಸ್ವಾಯತನೆಂಬ ಶರಣ ನೋಡಾ.
ಜ್ಞಾನಾನಂದವೆಂಬಲಿಂಗಸಂಯುಕ್ತ ಸನ್ನಿಹಿತನೆಂಬ ಶರಣ ನೋಡಾ.
ಭಾವಾನಂದವೆಂಬಲಿಂಗಸಂಯುಕ್ತ ಕಳಾಗ್ರಾಹಕನೆಂಬ ಶರಣ ನೋಡಾ.
ತೂರ್ಯಾನಂದವೆಂಬಲಿಂಗಸಮೇತ ಮನೋಮಗ್ನತೆಯೆಂಬ ಶರಣ ನೋಡಾ.
ಮಹದಾನಂದವೆಂಬಲಿಂಗಸನ್ನಿಹಿತ ಘನಸಮರಸವೆಂಬ ಶರಣ ನೋಡಾ.
ಗುರುನಿರಂಜನ ಚನ್ನಬಸವಲಿಂಗಸನ್ನಿಹಿತ
ನಿರ್ಮಾಯನೆಂಬ ಶರಣ ನೋಡಾ. || ೬೨೩ ||

೬೨೪

ತನ್ನ ತಾನರಿದು ಅನ್ಯವ ಮರೆದು
ನಡೆಯಲ್ಲಿ ನುಡಿವೆರೆದು ನುಡಿಯಲ್ಲಿ ನಡೆವೆರೆದು,
ಕಡೆಮೊದಲನೂಂಕಿ ನಡುವೆ ಕಳೆದುಳಿಸಿ ಬಳಿವಿಡಿವಲ್ಲಿ
ಬಗೆಬಗೆಯ ಬಣ್ಣತೆಯ ಸೊಗಸಿನಿಂದ ಕೂಡಬಲ್ಲ ಮಹಾಂತನೆ
ಶರಣ ತಾನೆ ಗುರುನಿರಂಜನ ಚನ್ನಬಸವಲಿಂಗ. || ೬೨೪ ||

೬೨೫

ಲಿಂಗವೇ ತಾನಾದ ಶರಣ ತಾನೊಂದು ಕಾಯನಾಗಿ ಲಿಂಗವ ಭಿನ್ನವಿಟ್ಟು,
ಅಷ್ಟವಿಧಾರ್ಚನೆ ಷೋಡಶೋಪಚಾರವೆಂಬ
ಸಂಸಾರ ಗುಂಜಿನಲ್ಲಿ ತೊಡಕಿ ಬಳಲುವನಲ್ಲ.

ಎಂತಿರ್ದಂತೆ ಪೂಜೆ ನಿತ್ಯಪರಿಪೂರ್ಣಪರಿಣಾಮಿ
ಗುರುನಿರಂಜನ ಚನ್ನಬಸವಲಿಂಗ ತಾನೆ ಕಾಣಾ. ॥ ೬೨೫ ॥

೬೨೬

ಪಂಕ, ಶಿಲೆ, ಸ್ಪಟಿಕ, ತಾಂಬ್ರ, ಲೋಹ, ತಾರೆ, ಹೇಮಾದಿಗಳಿಂದೆ
ಮಾಡಿ ಮಾಡುವ ತೋರಿಕೆಯೆಲ್ಲ ಲಿಂಗವೇ ಅಲ್ಲ.
ಅವೇ ಲಿಂಗವೆಂದು ನಿಯಮಪಿಡಿದು
ಇದೇ ಪತ್ರಿ ಇದೇ ಪುಷ್ಪ ಇದೇ ನೀರು ಆಗಬೇಕೆಂದು
ಸಾಧಿಸುದ ಭೇದಜೀವಜಂತುಗಳಿಗೆ
ಅದೇ ಫಲದಿಂದತ್ತ ಭವ ತಪ್ಪದು ಕಾಣಾ,
ಸಾಧ್ಯಾಸಾಧ್ಯ ಅನುಪಮಲಿಂಗವ ಸಾಧಿಸಿ
ಅಂಗ ಮನ ಭಾವ ಸಂಗಸಂಯೋಗಿ ತಾನೆ
ಗುರುನಿರಂಜನ ಚನ್ನಬಸಲಿಂಗವಲ್ಲದೆ ಬೇರಿಲ್ಲ ಕಾಣಾ ಶರಣಂಗೆ. ॥ ೬೨೬ ॥

೬೨೭

ಆರಾರು ಸಕಲಸನ್ನಿಹಿತರರಿತಕ್ಕಗೋಚರ ಪರಶಿವಲಿಂಗವನು,
ಆರೈದು ಅಂಗಪ್ರಾಣಾತ್ಮಸಂಗಸಮರಸಾನಂದ ಶರಣಂಗೆ
ಒಂದೂ ಆಶ್ಚರ್ಯ ತೋರದು,
ಅದೇನು ಕಾರಣವೆಂದೊಡೆ,
ತಾನೆ ಹರಿ ವಿಧಿ ಸುರಾದಿ ಮನುಮುನಿ
ಸಕಲಕ್ಕೂ ಆಶ್ಚರ್ಯವಾದ ಕಾರಣ.
ಅಂತಪ್ಪ ಶರಣನೇ ಶಿವನಲ್ಲದೆ ಬೇರಿಲ್ಲ ಕಾಣಾ.
ಅದಲ್ಲದೆ ಮತ್ತೆ ಗಿರಿಗೋಪುರ ಗಂವರ ಶರಧಿತಾಣ ಸ್ಥಾವರಕ್ಷೇತ್ರ
ನರಕುಶಲ ಕುಟಿಲ ಭೂತಾದಿ ಕಿಂಚಿತಕ್ಕಾಶ್ಚರ್ಯವೆಂಬ
ಬಾಲಮರುಳ ಅಜ್ಞಾನಿಗಳಿಗೆ ಲಿಂಗಶರಣರೆಂಬ ನಾಮ ಬಹು ಭಾರ ಕಾಣಾ
ಗುರುನಿರಂಜನ ಚನ್ನಬಸವಲಿಂಗಕ್ಕೆ. ॥ ೬೨೭ ॥

೬೨೮

ಲಿಂಗಾಚಾರ ಭೃತ್ಯಾಚಾರ ಶಿವಾಚಾರ ಗಣಾಚಾರ
ಸದಾಚಾರ ಕ್ರಿಯಾಚಾರ ಜ್ಞಾನಾಚಾರ ಭಾವಾಚಾರ
ಸತ್ಯಾಚಾರ ನಿತ್ಯಾಚಾರ ಧರ್ಮಾಚಾರ ಸರ್ವಾಚಾರಸಂಪತ್ತೆಂಬ
ಪ್ರಸಾದಲಿಂಗಸನ್ನಿಹಿತ ಶರಣಂಗೆ
ವ್ರತ ನಿಯಮ ಫಲಾದಿ ಮಿಥ್ಯಾಚಾರವೇನೂ ಪ್ರಯೋಜನವಲ್ಲ ಕಾಣಾ.

ಇದನರಿಯದೆ ಹಾದಿ ಬೀದಿಯ ಸಾಧಕರ ಮಾತಕೇಳಿ
ಖಂಡಿತಕ್ರಿಯೆಯಿಂದ ಕಷ್ಟಬಡುತ ಅಖಂಡಮಯ ಲಿಂಗ
ತಾನೆಂಬ ಭಾವವಳಿದು
ನೀನು ನಾನೆಂದು ಜೆಂದು ಭವಗಂಡರು ಕಾಣಾ
ಗುರುನಿರಂಜನ ಚನ್ನಬಸಲಿಂಗಾ. || ೬೨೮ ||

೬೨೯

ಬೇರಿಲ್ಲದ ಲಿಂಗಸಾರಾಯಸುಖಿ ತಾನೆಂದರಿಯದೆ
ಪಂಚಭೂತ ಪ್ರಕೃತಿಕಳಾನ್ವಿತ ತಾನೆಯಾಗಿ
ಇದು ಲಿಂಗ ನಾನು ದೇಹಿ, ಇದು ನಿರ್ಮಳ ನಾನು ಮಲಿನ,
ಇದು ಬೇರೆ ನಾನು ಬೇರೆಂದು,
ಇಲ್ಲದ ಸಂಶಯ ಸಂಬಂಧಿಸಿಕೊಂಡು
ನಾ ಕೆಟ್ಟೆನು ನಾ ಮುಟ್ಟೆನು ನಾ ಬಿಟ್ಟೆನು ಎಂದು
ಕುಟಿಲಕರ್ಮ ಕಷ್ಟದಿಂದೆ ಕಾಣಲಿಲ್ಲ ಕೇಳಲಿಲ್ಲ
ಮಾಡಲಿಲ್ಲ ಕೂಡಲಿಲ್ಲದ ಮೂಢ ಮರುಳುಗಳು ಶರಣರೆಂತಪ್ಪರಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. || ೬೨೯ ||

೬೩೦

ತಾನೆಂದರಿದ ಶರಣಂಗೆ ಬೇರೇನುಯಿಲ್ಲ ನೋಡಾ
ತನಗೆ ಬೇರಾದುದು ಕಾಯ ಮನ ಕರಣ ಭಾವ ಕಾಣಾ.
ತನಗೆ ಬೇರಾದುದು ಹೊನ್ನು ಹೆಣ್ಣು ಮಣ್ಣುಗಳ ಮೇಲೆ
ಮೋಹವೆಂಬ ಅನಿತ್ಯವದು ಕಾಣಾ.
ತನಗೆ ಬೇರಾದುದು ಷಡೂರ್ಮೆ ಷಡ್ವರ್ಗ ಗುಣತ್ರಯಾದಿ
ದುಃಸಂಗದಲಿ ಕೂಟಭ್ರಾಂತಿ ಕಾಣಾ.
ತನಗೆ ಬೇರಾದುದು ಸಂಕಲ್ಪ ಸಂಶಯದಿಂದಾದ ಭವತಿಮಿರ ಕಾಣಾ.
ಇಂತು ಸಕಲ ಸಂಸ್ಕೃತಿಯೆ ನಿತ್ಯವಾಗಿ
ತನ್ನ ನಿಜವನು ಬೇರೆ ಮಾಡಿ ನಡೆವ ಭಾವ ಅದು ಬೇರೆ ಕಾಣಾ.
ಈ ಭೇದವನರಿಯದೆ ಶಿವನ ಕಾಣಬೇಕು ಕೂಡಬೇಕೆಂಬ
ಅವಿವೇಕಿಗಳಿಗೆತ್ತಣ ಶರಣಸ್ಥಲವಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. || ೬೩೦ ||

೬೩೧

ನಿತ್ಯಾನಂದ ಶರಣ ಮಿಥ್ಯಸಂಸಾರದಲ್ಲಿ ಬಳಲುವನಲ್ಲ ನೋಡಾ.
ತನುವಿರ್ದು ತನುವಿಲ್ಲ ಮನವಿರ್ದು ಮನವಿಲ್ಲ ಧನವಿರ್ದು ಧನವಿಲ್ಲ.

ತನುಮನಧನವಿಡಿದು ಶರಣಸತಿ ಲಿಂಗಪತಿಯೆಂಬ ಭಾವವನು
ತಲೆಯಲ್ಲಿ ಕಟ್ಟಿ ನಲಿನಲಿದಾಡುತಿರ್ದ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಪರಮಸುಖಿಯಾಗಿ. ‖ ೬೩೧ ‖

೬೩೨

ಕಾಯದ ಕತ್ತಲೆಯೊಳು ಬಿದ್ದು ಮಾಯದ ಮಲಿಕಿನಲ್ಲಿ ಶಿಲ್ಕಿ,
ಹೇಮದಾಸೆಯ ಹೆಚ್ಚಿ ಭೂಮಿಯ ರಚ್ಚೆಗೆ ಮಚ್ಚಿ,
ಬಾಲೆಯರ ಒಲುಮೆಗೆ ಬಿದ್ದು ಕಾಲಗತಿಯ ಕಳೆಯ ಬಂದವನಲ್ಲ ನೋಡಾ.
ತನ್ನಾದಿ ಮಧ್ಯ ಅವಸಾನಪನರಿದು
ನಾದ ಬಿಂದು ಕಳೆಯಲ್ಲಿ ಸಾಧಿಸಿ ಕಂಡ ಸತಿಪತಿಭಾವವ
ಗುರುನಿರಂಜನ ಚನ್ನಬಸವಲಿಂಗ ನಿಮ್ಮ ಶರಣ. ‖ ೬೩೨ ‖

೬೩೩

ಭೂಮಿಯ ಹಿಡಿದು ಭೂಮಿಯ ಸುಖವನರಿಯರಯ್ಯಾ
ಸತ್ಕ್ರಿಯಾ ಸಂಬಂಧವಾಗಿ.
ಹೆಣ್ಣ ಹಿಡಿದು ಹೆಣ್ಣಿನ ಸುಖವನರಿಯರಯ್ಯಾ
ಸಮ್ಯಕ್‌ಜ್ಞಾನಸನ್ನಿಹಿತವಾಗಿ.
ಹೊನ್ನ ಹಿಡಿದು ಹೊನ್ನಿನ ಸುಖವನರಿಯರಯ್ಯಾ
ಮಹಾನುಭಾವಸಮೇತವಾಗಿ.
ಈ ತ್ರಿವಿಧದ ಸುಖವ ಗುರುನಿರಂಜನ ಚನ್ನಬಸವಲಿಂಗಕ್ಕಿತ್ತು
ನಿಃಸಂಸಾರಿಗಳಯ್ಯಾ ನಿಮ್ಮ ಶರಣರು. ‖ ೬೩೩ ‖

೬೩೪

ಇಂದ್ರಿಯಂಗಳಲ್ಲಿ ಸುಳುಹಿಲ್ಲ, ಕರಣಂಗಳಲ್ಲಿ ಉಲುಹಿಲ್ಲ,
ವಿಷಯಂಗಳಲ್ಲಿ ರತಿಯಿಲ್ಲ, ಕಾಯದಲ್ಲಿ ಭಾವವಿಲ್ಲ,
ಭಾವದಲ್ಲಿ ಭ್ರಮೆಯಿಲ್ಲ, ಎಂತಿರ್ದಂತೆ ನಿಜ.
ಗುರುನಿರಂಜನ ಚನ್ನಬಸವಲಿಂಗಾ, ನಿಮ್ಮ ಶರಣ
ಗಜಭಕ್ತಕಂಪಿತದಂತೆ ಇರ್ದ ನೋಡಾ. ‖ ೬೩೪ ‖

೬೩೫

ಮೂರು ಮನೆಯೊಳು ಮ ು ನಾಮವ ಹೊತ್ತು
ಮೂರವಸ್ಥೆಯಲ್ಲಿ ಕೇರಿಕೇರಿಯ ಹೊಕ್ಕು ಸೂಟಿಗೊಂಬ ಕುಲಗೇಡಿಯ ನೋಡಾ!
ತಾಯಂಶಿಕನೊಬ್ಬ ಮಗ ಹಾರುವ ಕಾಣಾ.

ಆ ಹಾರುವನ ತಲೆಯೆತ್ತಿ ತಲೆಯ ಮಾಣಿಕವ ಮುದ್ದಾಡಬಲ್ಲರೆ
ಸಿದ್ಧಶರಣ ಸಹಜ ಕಾಣಾ ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೬೩೫ ॥

೬೩೬

ಅತ್ತೆ ಅಳಿಯನ ಹಡೆದು ಹೊದಕೆಯ ತೊಟ್ಟಿಲೊಳಗಿಟ್ಟು
ನೋಡಿ ನೋಡಿ ತೂಗಿದರೆ,
ತಾಯಿ-ಮಗಳ ದಾರಿ ಒಂದಾಗಿ ಭಾವನ ಹೆಜ್ಜೆಯ ಮೆಟ್ಟಿದರು ನೋಡಾ.
ಭಾವನ ಹೆಜ್ಜೆಯಲ್ಲಿ ಅಳಿಯನ ಸಂಗವ ಮಾಡಿದರೆ
ಪರಿಣಾಮವಾಯಿತ್ತು ಗುರುನಿರಂಜನ ಚನ್ನಬಸವಲಿಂಗಕ್ಕೆ
ಶರಣನ ಮುಖದಿಂದ. ॥ ೬೩೬ ॥

೬೩೭

ಅಯ್ಯಾ, ನಿಮ್ಮ ಶರಣ ನಡೆವಲ್ಲಿ ಜಾಣನಯ್ಯಾ, ನುಡಿವಲ್ಲಿ ಜಾಣನಯ್ಯಾ,
ಹಿಡಿವಲ್ಲಿ ಜಾಣನಯ್ಯಾ, ಕಡಿದ ಸುಖವೊಂದಾಗುವನ್ನಬರ,
ಅದೆಂತೆಂದೊಡೆ, ಮೊಸರ ಕಡೆವ ನಾರಿಯು ನವನೀತ ಬರುವನ್ನಕ್ಕರ
ಹಿಡಿವಲ್ಲಿ ಜಾಣೆ, ಕಡೆವಲ್ಲಿ ಜಾಣೆ, ತಿಳಿವಲ್ಲಿ ಜಾಣೆ,
ಕೂಡಿ ಬಂದ ಬಳಿಕ ಕಾರ್ಯವಿಲ್ಲ ಕಾಣಾ ನಿಮ್ಮ ಶರಣಂಗೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೬೩೭ ॥

೬೩೮

ಉರಿ ಕರ್ಪುರಸಂಗದಿಂದೆ ಉರಿಕರ್ಪುರ ಉಂಟೆ ?
ಭ್ರಮರ ಕಾಪುಳಸಂಗದಿಂದೆ ಭ್ರಮರಕಾಪುಳ ಉಂಟೆ?
ಪರುಷ ಲೋಹಸಂಗದಿಂದೆ ಪರುಷಲೋಹವುಂಟೆ ?
ಶರಣ ಸಂಸಾರಸಂಗದಿಂದೆ ಶರಣಸಂಸಾರವುಂಟೆ ?
ಇದು ಕಾರಣ ನಾ ಮುಟ್ಟಿ ನೀನುಂಟು ನೀ ಮುಟ್ಟಿ ನಾಮುಂಟೆ ಹೇಳಾ
ಗುರುನಿರಂಜನ ಚನ್ನಬಸವಲಿಂಗಾ? ॥ ೬೩೮ ॥

೬೩೯

ಮುನ್ನೊಂದು ಲಿಂಗವ ಪಡೆದು
ಪರಿವಿಡಿ ನೆರವಿಯ ಸಂಭ್ರಮ ಸುಖಲೋಲುಪ್ತ ಶರಣ
ತನ್ನ ಅರುವಿನಮುಖದಲ್ಲಿ ತೋರುವ ತೋರಿಕೆಯಲ್ಲ
ಪರಮೋಪಚಾರದನುಕೂಲೆಯಾಗಿ,
ಘನಕ್ಕೆ ಮನವ ನಿಲ್ಲಿಸಿದ ಚಿನುಮಯಾನಂದ
ಗುರುನಿರಂಜನ ಚನ್ನಬಸವಲಿಂಗ ನಿಮ್ಮ ಶರಣ ಅಪ್ರತಿಮ ಕಾಣಾ. ॥ ೬೩೯ ॥

೬೪೦

ಕಾಲಿಲ್ಲದ ನಡೆ ಕಂಡೆನಯ್ಯಾ, ಕಂಗಳಿಲ್ಲದ ನೋಟವ ಕಂಡೆನಯ್ಯಾ.
ತನುವಿಲ್ಲದ ಸೋಂಕ ಕಂಡೆನಯ್ಯಾ, ಮನವಿಲ್ಲದ ನೆನವ ಕಂಡೆನಯ್ಯಾ,
ಭಾವವಿಲ್ಲದ ನಿರ್ವಯಲ ಕಂಡೆನಯ್ಯಾ,
ತಾನಿಲ್ಲದೆ ನೀನಾಗಿರ್ಪ ಸುಖವ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣನಲ್ಲಿ ಕಂಡೆನಯ್ಯಾ. ॥ ೬೪೦॥

೬೪೧

ಅರಿಯಲಿಲ್ಲದ ಮರೆಯಲಿಲ್ಲದ ಕೂಡಲಿಲ್ಲದ ಶರಣನ
ನಡತೆ ಹಿಡಿತೆ ಬಿಡಿತೆಗಳನರಿಯದೆ,
ಅರಿದು ಮರೆದು ನೆರೆದ ಅಂಧಕರು
ತಾವೊಂದು ಮರೆಯಲ್ಲಿ ಬಲ್ಲಂತೆ ಆಡುವರಯ್ಯಾ.
ಅದು ಸಹಜವೇ ? ಅಲ್ಲ.
ಸೂರ್ಯ ಮೇಘದಲ್ಲಿ ಸಿಕ್ಕಿದನೆಂದಡೆ ನಿಜವೆನ್ನಲುಂಟೆ ?
ಬರಿದೆ ಕೇಡ ನುಡಿದರೆ ಸುರಿಯವೇ ಬಾಯಲ್ಲಿ ದುಷ್ಕ್ರಿಮಿಗಳು.
ಈ ದುರಾಚಾರಿಗಳನೆನಗೊಮ್ಮೆ ತೋರದಿರಾ
ಗುರುನಿರಂಜನ ಚನ್ನಬಸವಲಿಂಗ. ॥ ೬೪೧ ॥

೬೪೨

ಅಂತರಂಗದಲ್ಲಿ ಪರಿಪೂರ್ಣಜ್ಞಾನವಿರ್ದು
ಬಹಿರಂಗದಲ್ಲಿ ವಿನೋದ ಕಾರಣ ಚರಿಸಿದೊಡೆ,
ಅಂತರಂಗದಲ್ಲಿ ವಿಪರೀತ ದುಸ್ಸಾರಭರಿತವಾ
ಬಹಿರಂಗದ ವೇಷರು ಹೆಂಡದ ಭಾಂಡದಂತೆ
ತಮ್ಮ ತಾವರಿಯದೆ ಮುಂದುಗಾಣದೆ ನೋಯಿಸಿ ನುಡಿವರಯ್ಯಾ,
ಅದು ತಾಗಲಮ್ಮದು.
ಉಷ್ಣಕ್ಕೆ ನೊಂದು ಸೂರ್ಯಂಗೆ ಧೂಬಂಡು ನೆಗೆದೊಗೆದರೆ
ತನಗಲ್ಲದೆ ತಾಗಲರಿಯದು.
ಇದು ಕಾರಣ ಈ ಒಡಲಗಿಚ್ಚಿನ ತುಡುಗುಣಿಗಳ ಎನ್ನತ್ತ ತೋರದಿರಯ್ಯಾ
ಗುರುನಿರಂಜನ ಚನ್ನಬಸವಲಿಂಗಾ, ನಿಮ್ಮ ಧರ್ಮ ನಿಮ್ಮ ಧರ್ಮ. ॥ ೬೪೨ ॥

೬೪೩

ಅನಾದಿ ಪರಶಿವಲಿಂಗವನು
ತಮ್ಮ ವಶಗತವ ಮಾಡಿಕೊಂಡಾಚರಿಸುವ ಅಪ್ರತಿಮ ಶರಣರಿಗೆ

ಬಿನುಗು ಮಾತಿನಲ್ಲಿ ಜಿನುಗುತಲೊಂದೊಂದು
ಘನವ ಕಿರಿದಿಟ್ಟು, ಕಿರಿದ ಘನವಮಾಡಿ,
ಹುಸಿಹುಂಡನ ಮಾಟವನು ಥಂಬಿಗಿಕ್ಕುವ
ಭಂಡ ಮೂಕೊರೆಯರು ದಂಡಧರನಾಳಿನ ಕೈಯಲ್ಲಿ ಕೊಲ್ಲಿಸಿಕೊಳ್ಳರೆ ?
ಮುಂದೆ ಗುರುನಿರಂಜನ ಚನ್ನಬಸವಲಿಂಗವ ಮುಟ್ಟದೆ ಕೆಟ್ಟರು. || ೬೪೩ ||

೬೪೪

ಹುಟ್ಟಿಬಂದುದರಿಯದೆ ಕೆಟ್ಟುಬಾಳುವ
ಗಂಜಳದ ಗಬ್ಬಿನೊಳು ಬಿದ್ದು
ಮುಂದೆ ನರಕದ ಗತಿಯ ತಿಳಿಯದೆ
ಸತ್ಯಶರಣರ ಗೊತ್ತನರಿದು
ಉಚಿತಾಚಾರವಿಡಿದು ನಡೆವವರ ಕಂಡು
ನುಡಿಯಲ್ಲಿ ಜರಿದು ನಡೆಯಲ್ಲಿ ವಿಘ್ನದೋರಿ ನೋಯಿಸುವವರ
ಸುಳುಹನೆನ್ನ ದಾರಿಯಲ್ಲಿ ಕಾಣದಂತೆ ಮಾಡಾ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಧರ್ಮ. || ೬೪೪ ||

೬೪೫

ಕಂಡರೆ ಮನೋಹರವಯ್ಯಾ, ಮಾತನಾಡಿದರೆ ಸೊಗಸು ಕಾಣಯ್ಯಾ.
ನಮೋ ನಮೋ ಎಂದು ಕೊಂಡಾಡಿದರೆ ಕುಲಕೋಟಿ ಪಾವನವಯ್ಯಾ.
ನಿಮ್ಮ ಶಿವಶರಣರ ಸಂಗವ ಬಯಸುವ ಭಾವಜ್ಞರಾ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಅಚ್ಯೋತ್ತಿದ ಅನಘ ಗಂಭೀರ. || ೬೪೫ ||

೬೪೬

ಕಾಯವನರಿಯದೆ ಕಾಯದಲ್ಲಿರಿಸಿ ಕಾಯವ ಕಂಡರೆ ಶರಣನೆಂಬುವರು.
ಮನವರಿಯದೆ ಮನದಲ್ಲಿರಿಸಿ ಮನವ ಕಂಡರೆ ಶರಣನೆಂಬುವರು.
ಭಾವವನರಿಯದೆ ಭಾವದಲ್ಲಿರಿಸಿ ಭಾವವ ಕಂಡರೆ ಶರಣನೆಂಬುವರು.
ತನ್ನನರಿಯದೆ ತನ್ನಲ್ಲಿರಿಸಿ ತನ್ನ ಕಂಡರೆ ಶರಣನೆಂಬುವರು
ಗುರುನಿರಂಜನ ಚನ್ನಬಸವಲಿಂಗದಲ್ಲಿ ನಿಮ್ಮ ಶರಣರು. || ೬೪೬ ||

೬೪೭

ಅರಿದೆನೆಂಬ ಅರಿವಿಂಗೆ ಅರಿಯಬಾರದ ಅವಿರಳ ಲಿಂಗವ
ಕರ ಕಕ್ಷ ಉರ ಸಜ್ಜೆ ಉತ್ತಮಾಂಗ ಮುಖಪೀಠವಮಳೋಕ್ಯವೆಂಬಾರಂಗ
ಸಂಗಸಮರಸದಲ್ಲಿಪ್ಪ ಪರಮ ಶರಣಂಗೆ

ನರಸೆಂಬ ನಾಯಮನುಜರನೇನೆಂಬೆನಯ್ಯಾ.
ನಿರವಯಗಮಿತರಂತಿರಲಿ ; ಪರಶಿವಸಂಗದಲ್ಲುದಯವಾದ ಶರಣಂಗೆ
ಪರಶಿವನೆನ್ನ ಬೇಕಲ್ಲದೆ ಅಂತಿತೆನ್ನಬಾರದು ಕಾಣಾ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. || ೬೪೭ ||

೬೪೮

ಗುರುವಿನಿಂದುದಯವಾಗಿ ಬಂದವರೆಂದು ಹೇಳುವರು
ಹಲ್ಲಿಗೆ ಶಿಲ್ಕದ ನಾಲಿಗೆಯ ಸಾಕಿದವರ ಸರಸವ ನೋಡಾ !
ಗುರುವೆಂಬುದ ಕಂಡರಿಯರು, ಲಿಂಗವೆಂಬುದ ಕಂಡರಿಯರು,
ಜಂಗಮವೆಂಬುದ ಕಂಡರಿಯರು, ಪ್ರಸಾದವೆಂಬುದ ಕಂಡರಿಯರು.
ಇಂತು ಕಂಡರಿಯದೆ ಕಂಡಕಂಡಂತೆ ನುಡಿದು ತಪ್ಪಿ ಬಿದ್ದುಹೋಗುವ
ಚಂಡ ಚರ್ಮಗೇಡಿ ಹೀನಮಾನವರನೆಂತು
ಶರಣಕವಳಿಗೆ ಸರಿಯೆನ್ನಬಹುದು ಗುರುನಿರಂಜನ ಚನ್ನಬಸವಲಿಂಗಾ? || ೬೪೮ ||

೬೪೯

ಒಂದನಾಡಹೋಗಿ ಮತ್ತೊಂದನಾಡುವರು.
ಹಿಂದೆ ಹೋದುದ ಮುಂದೆ ತಂದಿಡುವರು.
ಮುಂದಿನ ಮಾತ ಹಿಂದಕ್ಕೆ ನೂಕುವರು
ಇಲ್ಲದುದನುಂಟುಮಾಡಿ ಗಂಟನಿಕ್ಕಿ ನೋಯಿಸುವರು.
ಗುರುಹಿರಿಯರ ಮತ್ತೆ ತಾವು ಶರಣರೆಂದು ನುಡಿವರು.
ಇಂತಾ ತ್ರಿವಿಧದ್ರೋಹಿಗಳನೆಂತು ಶರಣರೆನ್ನಬಹುದು ?
ಅಯ್ಯಾ ನಿಮ್ಮವರ ಕವಳಿಕೆಗೆ ಸಲ್ಲದ ಕರ್ಮಿ ಪಾಪಿಗಳನೆನ್ನತ್ತ ತೋರದಿರಾ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಧರ್ಮ ನಿಮ್ಮ ಧರ್ಮ. || ೬೪೯ ||

೬೫೦

ಕಾಯವನು ದುರಾಚಾರದಲ್ಲಿ ಮುಳುಗಿಸಿ
ಕಾಯದ ಮೇಲೆ ಲಿಂಗವಧರಿಸಿ
ಕಾಣದೆ ನಡೆವರನೆಂತು ಶರಣರೆನ್ನಬಹುದು ?
ಮನವನು ಸಂಸಾರದಲ್ಲಿ ಮುಳುಗಿಸಿ
ಮನದ ಮೇಲೆ ಲಿಂಗವಧರಿಸಿ
ನೋಡದೆ ನಡೆವರನೆಂತು ಶರಣರೆನ್ನಬಹುದು ?
ಭಾವವನು ಭ್ರಮೆಯೊಳು ಮುಳುಗಿಸಿ
ಭಾವದ ಮೇಲೆ ಲಿಂಗವನು ಧರಿಸಿ

ಅರಿಯದೆ ನಡೆವರನೆಂತು ಶರಣರೆನ್ನಬಹುದು ?
ಮತ್ತಂತೆಂದೊಡೆ :
ಕಾಯ ಮನ ಭಾವದಲ್ಲಿ ಕರತಳಾಮಳಕವಾಗಿ
ಕ್ರಿಯಾಜ್ಞಾನ ಭಾವಾಚಾರ ಸಮೇತವಾಗಿ
ಗುರುನಿರಂಜನ ಚನ್ನಬಸಲಿಂಗವೆರಸಿ ನಡೆಯಬಲ್ಲ
ಅಖಂಡಿತನೆ ಶರಣ ಕಾಣಾ. || ೬೫೦ ||

೬೫೧

ಇಂದ್ರಿಯವನರಿಯದೆ ಲಿಂಗವ ಬಲ್ಲ ಶರಣ,
ಕರಣವನರಿಯದೆ ಲಿಂಗವ ಬಲ್ಲ ಶರಣ,
ವಿಷಯಂಗಳನರಿಯದೆ ಲಿಂಗವ ಬಲ್ಲ ಶರಣ,
ತನ್ನನರಿಯದೆ ಗುರುನಿಗಂಜನ ಚನ್ನಬಸವಲಿಂಗವ ಬಲ್ಲ ಶರಣ. || ೬೫೧ ||

೬೫೨

ತನ್ನನರಿಯದೆ ನಡೆವನಯ್ಯಾ ನಿಮ್ಮ ಶರಣ,
ತನ್ನನರಿಯದೆ ನುಡಿವನಯ್ಯಾ ನಿಮ್ಮ ಶರಣ,
ತನ್ನನರಿಯದೆ ನೋಡುವನಯ್ಯಾ ನಿಮ್ಮ ಶರಣ,
ತನ್ನನರಿಯದೆ ಕೂಡುವನಯ್ಯಾ
ಗುರುನಿರಂಜನ ಚನ್ನಬಸವಲಿಂಗವನು ನಿಮ್ಮ ಶರಣ. || ೬೫೨ ||

೬೫೩

ಬೇಕೆನ್ನದ ಬೇಡೆನ್ನದ ಬಾ ಹೋಗೆಂಬ
ಆಗು ಹೋಗಿನ ಸೋಗಿನ ಸೊಮ್ಮಿನವನಲ್ಲ ಕಾಣಾ ನಿಮ್ಮ ಶರಣ.
ಮಾತಿನ ಮಲಕಿನ ನೀತಿಗೆ ಸೋತು
ಅರಿದವನಲ್ಲ ನಿಮ್ಮ ಶರಣ.
ಕಾಯದಂಡನೆ ಬಾಯಮುದ್ರೆ ಭಿನ್ನಭಾವಿಯೆಂಬ
ಮಾಯೆಯ ಭ್ರಮೆಗೆ ಮನವಿಟ್ಟವನಲ್ಲ ನಿಮ್ಮ ಶರಣ.
ಗುರುನಿರಂಜನ ಚನ್ನಬಸವಲಿಂಗಾ,
ನಿಮ್ಮ ಶರಣನ ಪರಿ ಆವಲೋಕದೊಳಗೂ ಇಲ್ಲ ಕಾಣಾ. || ೬೫೩ ||

೬೫೪

ತಂದೆಯ ಮಗನ ಕೈಹಿಡಿದು
ಮದುವೆಯ ಮಡದಿಯಾದ ಪರಿ ಹೊಸತಯ್ಯಾ.

ಮನೆಯ ಗಂಡನ ಮುಂದಿಟ್ಟು
ಮೂರುಲೋಕವನರಿದು ತನ್ನತ್ತ ವಶಗತಮಾಡಿ
ಸರ್ವಸಂಭ್ರಮದಿಂದೆ ನಡೆ ನೋಟ ತರಹರವಾಗಿರ್ದಳಯ್ಯಾ.
ಹೊರಗೊಳಗಿನ ನೆರವೆಯ ತಂದು, ತಲೆಗೂಡಿ,
ಗುರುನಿರಂಜನ ಚನ್ನಬಸವಲಿಂಗದಲ್ಲಿ ನೆರೆವ
ಪರವಶದ ನಿಷ್ಪತ್ತಿಯನೇನೆಂದುಪಮಿಸುವೆನಯ್ಯಾ. || ೬೫೪ ||

೬೫೫

ಸತಿಪತಿಗಳ ಮತಿಯಿಂದೆ ಅತಿಶಯದಾಡಂಬರದೊಳಗೆ
ಆಡಂಬರ ಹಣ್ಣೆ ಬಂದಿತ್ತು ನೋಡಾ !
ತಾ ಸತ್ತು ಪತಿಯಿಂದೆ ಹುಟ್ಟಿ ಪತಿ ಪಿತನಾದನೆಂದು
ಹಿತ ಹೆಚ್ಚಿ ನೆರೆಯಲು ನಿರತಿಶಯವಾದ ಮಗನ ಹಡೆದಳು ನೋಡಾ !
ಆ ಮಗನ ಕಣ್ಣ ಮುಂದೆ ಹೆಂಡತಿಯ ಭಾವತೋರಲು
ಒಳಹೊರಗಿನ ನೆಂಟರು ನೋಡಿ ದಾರಿಯೆರಡಾದವೆಂದು ಕೂಡಿ
ಮೇಲುಗತಿಯೊಳು ನೆರೆವ ಬರದುರವಣೆಯು
ನಮ್ಮ ಗುರುನಿರಂಜನ ಚನ್ನಬಸವಲಿಂಗಕ್ಕೆ
ಸುಖಪರಿಣಾಮವಾಯಿತ್ತು ನೋಡಾ. || ೬೫೫ ||

೬೫೬

ಅಚ್ಚಮುತ್ತೈದೆ ತಾನೊಬ್ಬ ಅಂಗವಿಲ್ಲದ ಪುರುಷನ ಸಂಗವಮಾಡಲು
ತಬ್ಬಿಬ್ಬುಗೊಂಡಿತ್ತು ಹದಿನಾಲ್ಕು ಭುವನವೆಲ್ಲ.
ಮೂರು ಮನೆಯ ನಾರಿ ನೀರಕೊಡವನೊಡೆದು
ಹಾರುತಿಯಾಗಿ ಕೈಯಲ್ಲಿ ಆರತಿ ಪಿಡಿದು,
ಮೂರಾರಿಗೆತ್ತಿ ಬೆಳಗುತ್ತಿರಲು ಸೂರೆಗೊಂಡು ನೆರೆದನು
ನಮ್ಮ ಗುರುನಿರಂಜನ ಚನ್ನಬಸವಲಿಂಗ. || ೬೫೬ ||

೬೫೭

ಕಾಮವ ತೊರೆದಾತ ಭಕ್ತನಲ್ಲ,
ಕ್ರೋಧವ ತೊರೆದಾತ ಮಾಹೇಶ್ವರನಲ್ಲ.
ಮತ್ಸರವ ತೊರೆದಾತ ಪ್ರಸಾದಿಯಲ್ಲ.
ಮದವ ಬಿಟ್ಟಾತ ಪ್ರಾಣಲಿಂಗಿಯಲ್ಲ.
ಮೋಹವ ಬಿಟ್ಟಾತ ಶರಣನಲ್ಲ.
ಲೋಭವ ಬಿಟ್ಟಾತ ಐಕ್ಯನಲ್ಲ.

ಇಂತು ಷಡುವರ್ಗಶೂನ್ಯನಾದಲ್ಲಿ
ಸ್ಥಲಶೂನ್ಯವಾದ ಕಾರಣ ಷಡ್ವರ್ಗಸನ್ನಿಹಿತನೇ ಶರಣ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೬೫೭ ||

೬೫೮

ಆಸೆಯುಳ್ಳರೆ ಭಕ್ತನೆಂಬೆ,
ರೋಷವುಳ್ಳರೆ ಮಹೇಶ್ವರನೆಂಬೆ,
ಆಲಸ್ಯವುಳ್ಳರೆ ಪ್ರಸಾದಿಯೆಂಬೆ,
ಹಿಂಸೆಯುಳ್ಳರೆ ಪ್ರಾಣಲಿಂಗಿಯೆಂಬೆ,
ಸಂಸಾರವುಳ್ಳರೆ ಶರಣನೆಂಬೆ,
ಸಂಗವುಳ್ಳರೆ ಐಕ್ಯನೆಂಬೆ.
ಇಂತಿವು ಶೂನ್ಯನಾದರೆ ಆರೂಢನೆಂಬೆ
ಗುರುನಿರಂಜನ ಚನ್ನಬಸವಲಿಂಗದ
ಸಂಗಕ್ಕೆ ಬೇಕಾದ ಕಾರಣ ಬೇಕೆಂಬ ಶರಣಂಗೆ. || ೬೫೮ ||

೬೫೯

ಅಯ್ಯಾ, ಶರಣಸ್ಥಲವ ಬಲ್ಲೆನೆಂಬರು,
ಬಲ್ಲತನ ಬರಿದಾಯಿತ್ತು.
ಕಾಯವಿಲ್ಲದವಂಗೆ ಶರಣಸ್ಥಲವೆಲ್ಲಿಹದೊ ?
ಕರಣವಿಲ್ಲದವಂಗೆ ಶರಣಸ್ಥಲವೆಲ್ಲಿಹದೊ ?
ಭಾವವಿಲ್ಲದವಂಗೆ ಶರಣಸ್ಥಲವೆಲ್ಲಿಹದೊ ?
ಈ ತ್ರಿವಿಧವುಳ್ಳವಂಗೆ ಶರಣಸ್ಥಲವುಂಟು.
ಇವು ನಾಸ್ತಿಯಾದರೆ ಶರಣಸ್ಥಲವಿಲ್ಲ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೬೫೯ ||

೬೬೦

ಹಮ್ಮಿಲ್ಲದೆ ಬಿಮ್ಮಿಲ್ಲದೆ ಸೊಮ್ಮಿಲ್ಲದೆ
ನಿರ್ಮಲದ ನಿಲುವಿಂಗೆ ಕುರುಹಿನಿಂದೆಯ್ದಿ ಬಂದ
ಸ್ತುತಿ ನಿಂದೆ ಅಪವಾದ ಬಾಧೆಗೆ ಹಿಗ್ಗದೆ ಕುಗ್ಗದೆ ನೋಯದೆ ಬೇಯದೆ
ಲಿಂಗವಿನೋದವೆಂದು ನಿತ್ಯನಿಜಾನಂದವಾಗಿರ್ದ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. || ೬೬೦ ||

೬೬೧

ಅನಿತ್ಯ ವನಿತಾದಿ ಸಕಲಸಂಸ್ಸೃತಿಯ ವಾಸನೆಯನಳಿದುಳಿದ
ನಿಜಜ್ಞಾನಾನಂದ ನಿಲುವಿಗೆ,
ಸತ್ತುಚಿತ್ತಾನಂದ ನಿತ್ಯಪರಿಪೂರ್ಣತ್ವವೇ ಗತಿ.
ಸತ್ತುಚಿತ್ತಾನಂದ ನಿತ್ಯಪರಿಪೂರ್ಣತ್ವವೇ ಮತಿ.
ಸತ್ತುಚಿತ್ತಾನಂದ ನಿತ್ಯಪರಿಪೂರ್ಣತ್ವವೇ ಸಂಗ.
ಇದನುಳಿದು ಅರಿಯದಂಗೆ ಗುರುನಿರಂಜನ ಚನ್ನಬಸವಲಿಂಗ ತಾನೆ. ॥ ೬೬೧ ॥

೬೬೨

ಊರೆಂಬುದರಿಯ ಉಲುಪೆಂಬುದರಿಯ
ಬರಿಯ ಮಾತಿನ ಬಣ್ಣವನರಿಯದ ಸಿರಿಸಂಪದದೊಳಾನಂದ ತಲೆಗೇರಿ
ಜಾತಿ ಗೋತ್ರ ಕುಲಾಶ್ರಮ ವರ್ಣ ನಾಮಂಗಳೆನುಯೇನೆಂಬ ಭಾವವ
ಮರೆದಿರ್ದನು ಗುರುನಿರಂಜನ ಚನ್ನಬಸವಲಿಂಗ ತಾನಾದ ಶರಣ. ॥ ೬೬೨ ॥

೬೬೩

ಅಚ್ಯೋತ್ತಿರ್ದ ಲಿಂಗದಿಚ್ಛೆಯಲ್ಲಿಪ್ಪ
ಇಳೆ ಜಲಾಗ್ನಿ ಮರುತಾಂಬರ ನಿರಂಜನ ಶರಣ.
ತನ್ನ ಅಖಂಡ ಗತಿಮತಿಯೊಳೊಂದು ಕಿಂಚಿತ್ತು
ಖಂಡಿತ ಕುರುಹ ಭಾವಿಸುವರ ತ್ರಿಪುಟಿಗಳಿಗಸಾಧ್ಯವಾಗಿರ್ದನು
ಗುರುನಿರಂಜನ ಚನ್ನಬಸವಲಿಂಗ ತಾನಾದ ಶರಣನು. ॥ ೬೬೩ ॥

## ಶರಣನ ಭಕ್ತಸ್ಥಲ

೬೬೪

ಕಾಯದ ಕರಸ್ಥಲದಲ್ಲಿ ಕಂಡು
ಶರಣೆಂಬುದ ಮರೆದು ಶರಣೆನುತಿರ್ದನಯ್ಯಾ.
ಮನದ ಕರಸ್ಥಲದಲ್ಲಿ ಕಂಡು
ಶರಣೆಂಬುದ ಮರೆದು ಶರಣೆನುತಿರ್ದನಯ್ಯಾ.
ಭಾವದ ಕರಸ್ಥಲದಲ್ಲಿ ಕಂಡು
ಶರಣೆಂಬುದ ಮರೆದು ಶರಣೆನುತಿರ್ದನಯ್ಯಾ.
ಕರ ಮನ ಭಾವದ ಕೊನೆಯ ಮೊನೆಯ ಮೇಲಿರ್ಪ
ಗುರುನಿರಂಜನ ಚನ್ನಬಸವಲಿಂಗವನು
ಎನ್ನ ಸರ್ವಾಂಗದಲ್ಲಿ ಕಂಡು ತೆರಹಿಲ್ಲದೆ
ಅಪ್ಪಿ ಅಗಲದೆ ಮರೆದ ಶರಣೆನುತಿರ್ದನಯ್ಯಾ. ॥ ೬೬೪ ॥

೬೬೫

ಆರಾರಂಗದ ಸಂಗಕ್ಕೆ ನಿಲುಕದ ನಿರಾಮಯ ಲಿಂಗವೆನ್ನ
ಸಾರಾಯ ಗಮನಾಗಮನಕ್ಕೆಯ್ದಿದ ಪರಿಯ ನೋಡಾ !
ಅಯ್ಯಾ, ಎನ್ನ ಪ್ರಾಣನಾಥನ ಕೂಡಿ ಮಾತನಾಡುವೆ, ಅಗಲಲಿಂಬಿಲ್ಲದೆ.
ಅಯ್ಯಾ, ಎನ್ನ ಕೇಳಿಕೆಯಲ್ಲಿ ಕೂಡೆ ಕೇಳುವೆ ಬಿಡಲೆಡೆಯಿಲ್ಲದೆ.
ಅಯ್ಯಾ, ಎನ್ನ ನೋಟದಲ್ಲಿ ಕೂಡೆ ನೋಡುವ ತಪ್ಪಲುಳುವಿಲ್ಲದೆ.
ಅಯ್ಯಾ, ಎನ್ನ ಹಿಡಿತ ಬಿಡಿತಗಳಲ್ಲಿ ಕೂಡೆ ಮಾಡುವೆ ಬೇರೆಮಾಡಲನುವಿಲ್ಲದೆ.
ಅಯ್ಯಾ, ಎನ್ನ ಸಕಲ ನಿಃಕಲ ಸದ್ಗಂಧವ ಕೂಡೆ ಸುಖಿಸುವೆ ಬೆಚ್ಚಲಿಂಬಿಲ್ಲದೆ,
ಅಯ್ಯಾ, ಎನ್ನಂತರ್ಬಾಹ್ಯದವಿರಳಾನಂದವನು ಕೂಡೆ ಪರಿಣಾಮಿಸುವೆ
ಬೇರ್ಪಡಿಸಲೆಡೆಯಿಲ್ಲದೆ, ಗುರುನಿರಂಜನ ಚನ್ನಬಸವಲಿಂಗಕ್ಕಂಗವಾಗಿ. ॥೬೬೫॥

೬೬೬

ಅಯ್ಯಾ, ಎನ್ನ ನಡೆಯಲ್ಲಿ ನಿನ್ನನುಳಿದು ನಡೆದೆನಾದರೆ
ಹುಳುಗೊಂಡ ಮುಂದೆ ನಿರುತವೆಂಬುದು.
ನಿಮ್ಮವರ ನಿನ್ನ ವಾಕ್ಯವನು ಕೇಳಿ ಅಂಜಿ ನಡೆವೆನಯ್ಯಾ.
ಅಯ್ಯಾ, ಎನ್ನ ನುಡಿಯಲ್ಲಿ ನಿನ್ನನುಳಿದು ನುಡಿದೆನಾದರೆ
ಕೊಂಡುಕೆಡಹುವರು ಮುಂದೆ ನಿರವಯದಲ್ಲೆಂಬುದು
ನಿಮ್ಮವರ ನಿನ್ನ ವಾಕ್ಯವಕೇಳಿ ಅಂಜಿ ನುಡಿವೆನಯ್ಯಾ.
ಅಯ್ಯಾ, ಎನ್ನ ಕೂಟದಲ್ಲಿ ನಿನ್ನನುಳಿದು ಕೂಡಿದೆನಾದರೆ
ಮುಂದೆ ನಾಯಕ ನರಕವೆಂಬುದು
ನಿಮ್ಮವರ ನಿನ್ನ ವಾಕ್ಯವ ಕೇಳಿ ಅಂಜಿ ಕೂಡುವೆನಯ್ಯಾ.
ಅಯ್ಯಾ, ಎನ್ನೊಳಹೊರಗೆ ನಾನರಿಯದೆ ನೀನೆಯಾಗಿರ್ದೆನು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೬೬೬ ॥

೬೬೭

ಅಯ್ಯಾ, ತಮ್ಮಲ್ಲರಿಯದೆ ನಿಮ್ಮ ನೋಡುವರಯ್ಯಾ.
ತಮ್ಮಲ್ಲರಿಯದೆ ನಿಮಗೆ ಮಾಡುವರಯ್ಯಾ.
ತಮ್ಮಲ್ಲರಿಯದೆ ನಿಮ್ಮನು ಕೂಡಬೇಕೆಂದು ಆಯಾಸಬಡುವರಯ್ಯಾ.
ಇದನರಿದು ಭಿನ್ನವಳಿದು ಅಭಿನ್ನಭಕ್ತಿಯೊಳಾನಂದಮುಖನಾಗಿರ್ದೆ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೬೬೭ ॥

೬೬೮

ಈ ಪೃಥ್ವಿಯಲ್ಲಿ ಆರೂ ಕಾಣಬಾರದುದ ಕಂಡು
ಶರಣೆಂದು ಸುಖಿಸಿ ಮೈಮರೆತಿರ್ದೆ ಕಾಣಾ.

ಈ ವನದಲ್ಲಿ ಆರೂ ಅರಿಯಬಾರದುದನರಿದು
ಶರಣೆಂದು ಸುಖಿಸಿ ಮೈಮರೆದಿರ್ದೆ ಕಾಣಾ.
ಈ ಧನಂಜದಲ್ಲಿ ಆರೂ ನೋಡಬಾರದುದ ನೋಡಿ
ಶರಣೆಂದು ಸುಖಿಸಿ ಮೈಮರೆದಿರ್ದೆ ಕಾಣಾ.
ಈ ವಾತದಲ್ಲಿ ಆರೂ ತಿಳಿಯಬಾರದುದ ತಿಳಿದು
ಶರಣೆಂದು ಸುಖಿಸಿ ಮೈಮರೆದಿರ್ದೆ ಕಾಣಾ.
ಈ ನಭದಲ್ಲಿ ಆರೂ ಕಾಣಬಾರದುದ ಕಂಡು
ಶರಣೆಂದು ಸುಖಿಸಿ ಮೈಮರೆದಿರ್ದೆ ಕಾಣಾ.
ಈ ಆತ್ಮನಲ್ಲಿ ಆರೂ ಅರಿಯಬಾರದುದನರಿದು
ಶರಣೆಂದು ಸುಖಿಸಿ ಮೈಮರೆದಿರ್ದೆ ಕಾಣಾ.
ಈ ಸಕಲದಲ್ಲಿ ಆರೂ ನೋಡಬಾರದುದ ನೋಡಿ
ಶರಣೆಂದು ಸುಖಿಸಿ ಮೈಮರೆದಿರ್ದೆ ಕಾಣಾ.
ಈ ನಿಃಕಲದಲ್ಲಿ ಆರೂ ಅರಿಯಬಾರದುದನರಿದು
ಶರಣೆಂದು ಸುಖಿಸಿ ಮೈಮರೆದಿರ್ದೆ ಕಾಣಾ.
ಈ ನಿರಾವಯದಲ್ಲಿ ಆರೂ ತಿಳಿಯಬಾರದುದ ತಿಳಿದು
ಶರಣೆಂದು ಸುಖಿಸಿ ಮೈಮರೆದಿರ್ದೆ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೬೬೮ ||

೬೬೯

ಅಷ್ಟವಿಧಾರ್ಚನೆ ಷೊಡಶೋಪಚಾರ ಮಾಡಿ ಮಾಡಿ
ಮುಂದುಗಾಣದೆ ಬಂದು ಹೋಗುವರಯ್ಯಾ.
ಅಷ್ಟಮದವಳಿಯದೆ ಅಷ್ಟವಿಧಾರ್ಚನೆಯೆಲ್ಲಿಯದೋ ?
ಅಂತರಂಗದಲ್ಲಿ ಪರಮಶಾಂತಿದೋರದೆ ಷೋಡಶೋಪಚಾರವೆಲ್ಲಿಹದೊ ?
ತ್ರಿಪುಟಿ ಮಲತ್ರಯಸನ್ನಿಹಿತವಿರಲು ಮಾನಸಪೂಜೆಯೆಲ್ಲಿಹದೊ ?
ಜ್ಞಾನ ವಿಕೃತಿಭಾವ, ವರ್ತನಾವಿಕೃತಿಭಾವ, ಮೋಹವಿಕೃತಿಭಾವವೆಂಬ
ಭಾವತ್ರಯಸಂಬಂಧಿಗೆ ನಿಜಾನುಭಾವದ ನಿಲುವು ಎಲ್ಲಿಹದೊ ?
ಇಂತು ಶರಣ ಭಕ್ತನಾಗಬೇಕಾದರೆ
ಅರಿದು ಮರೆದಾಚರಿಸಬೇಕು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೬೬೯ ||

೬೭೦

ಗುರುಲಿಂಗಜಂಗಮದ ಭಕ್ತಿಯ ಮಾಡುವರು ನಾಮಧಾರಿಗಳು.
ಗುರುವೆಂದರಿಯರು ಲಿಂಗವೆಂದರಿಯರು ಜಂಗಮವೆಂದರಿಯರು.

ಅರಿಯದೆ ಮಾಡುವಭಕ್ತಿ ಮರುಳನಯುಕ್ತಿ.
ಮಸಣದ ಬೂದಿ ಕಾರ್ಯಕಾರಣಕ್ಕೆ ಬಾರದು.
ಅರಿದು ಮಾಡಿ ಮರೆದಿರು
ಗುರುನಿರಂಜನ ಚನ್ನಬಸವಲಿಂಗವಾಗಬೇಕಾದರೆ. ॥ ೬೭೦ ॥

೬೭೧

ಗುರುವನರಿದು ಮರೆದವರೆಂದು
ಗುರುಭಕ್ತಿಯ ನಾಶಮಾಡುವರು, ಆಣವ ಮಲಮೋಹಿತರು.
ಲಿಂಗವನರಿದು ಮರೆದವರೆಂದು
ಲಿಂಗಭಕ್ತಿಯ ನಾಶಮಾಡುವರು, ಮಾಯಾಮಲಮೋಹಿತರು.
ಜಂಗಮವನರಿದು ಮರೆದವರೆಂದು
ಜಂಗಮಭಕ್ತಿಯ ನಾಶಮಾಡುವರು ಕಾರ್ಮಿಕಮಲಮೋಹಿತರು.
ಇವರನೆಂತು ಶರಣರೆನ್ನಬಹುದು ?
ಮಲತ್ರಯವನಳಿದು ಲಿಂಗತ್ರಯವನರಿದು ಮಾಡುವ ಮಾಟ
ಮಹಾಘನದ ಕೂಟ ಗುರುನಿರಂಜನ ಚನ್ನಬಸವಲಿಂಗಾ. ॥ ೬೭೧ ॥

೬೭೨

ಸ್ಥೂಲತನುವಿನಲ್ಲಿ ಅಕಾರಸ್ವರೂಪವಾದ
ದೀಕ್ಷಾಗುರುವನರಿದರ್ಚಿಸಬಲ್ಲಾತನೆ ಶಿಷ್ಯ.
ಸೂಕ್ಷ್ಮ ತನುವಿಲ್ಲಿ ಬಕಾರಸ್ವರೂಪವಾದ
ಶಿಕ್ಷಾಗುರುವನರಿದರ್ಚಿಸಬಲ್ಲಾತನೆ ಶಿಷ್ಯ.
ಕಾರಣತನುವಿಲ್ಲಿ ಹಂಕಾರಸ್ವರೂಪವಾದ
ಮೋಕ್ಷಗುರುವನರಿದರ್ಚಿಸಬಲ್ಲಾತನೆ ಶಿಷ್ಯ.
ಈ ತ್ರಿವಿಧವನರಿದರ್ಚಿಸಬಲ್ಲಾತಂಗಲ್ಲದೆ
ಶಿಷ್ಯಸ್ಥಲವಿಲ್ಲ ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ॥ ೬೭೨ ॥

೬೭೩

ಮನದಲ್ಲಿ ಉಕಾರಸ್ವರೂಪವಾದ
ಇಷ್ಟಲಿಂಗವನರಿದರ್ಚಿಸಬಲ್ಲಾತನೆ ಭಕ್ತ.
ಮನದಲ್ಲಿ ಸಕಾರಸ್ವರೂಪವಾದ
ಪ್ರಾಣಲಿಂಗವನರಿದರ್ಚಿಸಬಲ್ಲಾತನೆ ಭಕ್ತ.
ಮನನೀಯದಲ್ಲಿ ಕ್ಷಕಾರಸ್ವರೂಪವಾದ
ಭಾವಲಿಂಗವನರಿದರ್ಚಿಸಬಲ್ಲಾತನೆ ಭಕ್ತ.

ತ್ರಿವಿಧಲಿಂಗವನರಿದರ್ಚಿಸಬಲ್ಲಾತಂಗಲ್ಲದೆ
ಭಕ್ತಿಸ್ಥಲವಿಲ್ಲ ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ॥ ೬೭೩ ॥

೬೭೪

ಧನದಲ್ಲಿ ಮಕಾರಸ್ವರೂಪವಾದ
ಸ್ವಯಂ ಜಂಗಮವನರಿದರ್ಚಿಸಬಲ್ಲಾತನೆ ಶರಣ.
ಮಮಕಾರದಲ್ಲಿ ವಕಾರಸ್ವರೂಪವಾದ
ಚರಜಂಗಮವನರಿದರ್ಚಿಸಬಲ್ಲಾತನೆ ಶರಣ.
ಸಂಗ್ರಹದಲ್ಲಿ ಓಂಕಾರಸ್ವರೂಪವಾದ
ಪರಜಂಗಮವನರಿದರ್ಚಿಸಬಲ್ಲಾತನೆ ಶರಣ.
ಈ ತ್ರಿವಿಧಜಂಗಮವನರಿದರ್ಚಿಸಬಲ್ಲಾತಂಗಲ್ಲದೆ
ಶರಣಸ್ಥಲವಿಲ್ಲ ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ॥ ೬೭೪ ॥

೬೭೫

ತನುವು ಸವೆಯದು ಮನವು ಸವೆಯದು ಪ್ರಾಣಾದಿ ದ್ರವ್ಯ ಸವೆಯದು,
ಕಂಡಕಂಡಲ್ಲಿ ಕುಂಡಿಯನೆತ್ತಿ ತಲೆಯ ಚಾಚುವ
ತೂಳಮೇಳದ ಸಂತೆಯ ಭಂಡರು ಶರಣರಪ್ಪರೆ ?
ಮನೆಯ ನಚ್ಚು ಬಿಡದು, ಮಡದಿಯ ಮರುಳು ಬಿಡದು,
ಹಣದ ರತಿಯು ಬಿಡದು.
ಬಿಟ್ಟಿಯ ಭಕ್ತಿಯ ಮಾಡುವ ಕೆಟ್ಟ ನರನಿಗೆ
ಶ್ರೇಷ್ಠಶರಣ ಭಕ್ತನಾಮ ಸಲ್ಲದು ಕಾಣಾ.
ಮತ್ತೆಂತೆಂದೊಡೆ, ತನುವಿನಲ್ಲಿ ನಿರ್ವಂಚಕತ್ವ, ಮನದಲ್ಲಿ ನಿರ್ದ್ವಂದ್ವ,
ಪ್ರಾಣದಲ್ಲಿ ಪ್ರೇಮರತಿಸಂಯುಕ್ತನೇ ಶರಣ.
ಮನೆ ಮಡದಿ ಧನದಲ್ಲಿ ಇಲ್ಲದಿರ್ದಾತನೆ
ಶರಣಭಕ್ತ ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ॥ ೬೭೫ ॥

೬೭೬

ಅಯ್ಯಾ, ಎನ್ನಲ್ಲಿ ವಂಚನೆಗೊಂಬಿಡಲೆಡೆಯಿಲ್ಲ
ಮನವೆಂಬ ಸುಳುಹಿಲ್ಲ ಲಿಂಗಕ್ಕೆ ಆಲಯವಾಗಿತ್ತಾಗಿ.
ಅಯ್ಯಾ, ಎನ್ನಲ್ಲಿ ಭಿನ್ನಭಾವಕ್ಕನುವಿಲ್ಲ
ಮಹಾನುಭಾವವಾಗಿ ಮಹದಲ್ಲೆರಕವಾಯಿತ್ತಾಗಿ.
ಅಯ್ಯಾ, ಎನ್ನಲ್ಲಿ ಜ್ಞಾನವಿಹಿಮ

ನಿನ್ನ ನೋಡಿ ಆಲಿಂಗಿಸಬೇಕೆಂಬ ಅನುವಿಲ್ಲ
ಗುರುನಿರಂಜನ ಚನ್ನಬಸವಲಿಂಗವೆನ್ನನಾವರಿಸಿಕೊಂಡಿರ್ದನಾಗಿ. ॥ ೬೭೬ ॥

೬೭೭

ಕಾಯದಲ್ಲೊಬ್ಬನ ಮೆಚ್ಚಿ, ಮಾಡಿದವಳು,
ಆವಗೆ ರತಿಗೊಟ್ಟವಳು, ಆವಗೆ ಉಣಿಸಿದವಳು, ಆತನ ಮೋಹಿಸಿದವಳು,
ಇವರಂತಿರಲಿ, ಎನ್ನ ಸುಖವನರಿಯರು.
ಮನದಲ್ಲೊಬ್ಬನ ಮೆಚ್ಚಿ ಮಾಡಿದವಳು,
ಅಲ್ಲಿಯೇ ನಿಷ್ಠೆಯನಿಟ್ಟವಳು, ಅಲ್ಲಿಯೇ ಮನಮೆಚ್ಚಿ ಉಣಿಸಿದವಳು,
ಅಲ್ಲಿಯೇ ಮಾತಿನ ಮಲಕಿನೊಳು ಮರುಳಾದವಳು,
ಇವರಂತಿರಲಿ, ಎನ್ನ ಪರಿಣಾಮವನರಿಯರು.
ಭಾವದಲ್ಲೊಬ್ಬನ ಮೆಚ್ಚಿ ಮಾಡಿದವಳು,
ಆವಗೆ ಮನವಿಟ್ಟವಳು, ಅಲ್ಲಿಯೇ ಗೋಪ್ಯದಲ್ಲಿ ಉಣಿಸಿದವಳು,
ಅಲ್ಲಿಯೇ ಭಾವಭ್ರಾಂತಿಗೊಂಡವಳು,
ಇವರಂತಿರಲಿ, ಎನ್ನ ಸಂಯೋಗವನರಿಯರು.
ಗುರುನಿರಂಜನ ಚನ್ನಬಸವಲಿಂಗದ ಸುಖವ
ಅಂಗನೆಗಲ್ಲದೆ ಮತ್ತಾರು ಅರಿಯರು ಕಾಣಾ. ॥ ೬೭೭ ॥

೬೭೮

ಎನ್ನ ಮನೆಯ ರಮಣನ ಮಾಧುರ್ಯವನೇನೆಂದು ಹೇಳಲಮ್ಮ.
ನೆಲಮನೆಯಲ್ಲಿ ನೆರೆವ ಸುಖವ ಕಂಡವರರಿಯರು.
ಮನಮಂದಿರದಲ್ಲಿ ಕೂಡುವ ಸುಖವ ವಾಗದ್ವೈತರೇನಬಲ್ಲರು ?
ಶಿಖಿಮಂಟಪದಲ್ಲಿ ಸುರತದಸುಖವ ಕಣ್ಣುಗೆಟ್ಟನಾರಿಯರೇನಬಲ್ಲರು ?
ಪವನಗೃಹದಲ್ಲಿ ನೆರೆವ ಸೌಖ್ಯವ ಅವರಿವರರಿಯರು.
ಗಗನಮಂಟಪದಲ್ಲಿ ಸೊಗಸಿನಿಂದ ನೆರೆವ ಕುಶಲವ ಕೆಳಗಳವರರಿಯರು.
ಮೇಲುಮಂದಿರ ಮಧ್ಯಮಂಟಪದಲ್ಲಿ
ಲೋಲಸಂಯೋಗವ ಕಾಲಕೆಳಗಲವರರಿಯರು.
ಗುರುನಿರಂಜನ ಚನ್ನಬಸವಲಿಂಗದ ನಿಜಾಂಗನೆಯಾನಲ್ಲದೆ,
ಹೋಗಿಬರುವ ಸೋಗಿನ ನಾರಿಯವರೆತ್ತ ಬಲ್ಲರು, ಹೇಳಾಯಮ್ಮ. ॥ ೬೭೮ ॥

೬೭೯

ಘನಗಂಭೀರಲಿಂಗವೆನ್ನ ಕಾಯದನುವರಿಯಬಂದಬಳಿಕ
ಎನ್ನ ಕಾಯದ ರತಿಯು ಕಡೆಗಿಡಲೆನಗೆ ಸೊಗಸದು ಕಾಣಮ್ಮ.

ಎನ್ನ ಮನದನುವರಿಯಬಂದಬಳಿಕ
ಮನದ ಮಮಕಾರ ಸರಿದರಿಯಲೆನಗೆ ಸೊಗಸದು ಕಾಣಮ್ಮ.
ಎನ್ನ ಪ್ರಾಣದನುವರಿಯಬಂದಬಳಿಕ
ಪ್ರಾಣದ ಮೋಹಪಿತರವೆರಸಲೆನಗೆ ಸೊಗಸದು ಕಾಣಮ್ಮ.
ಎನ್ನ ಭಾವದನುವರಿಯಬಂದಬಳಿಕ
ಭಾವದ ಭ್ರಾಂತಿ ಪರಿದಾವರಿಸಲೆನಗೆ ಸೊಗಸದು ಕಾಣಮ್ಮ.
ಎನ್ನ ಕಾಯ ಮನ ಪ್ರಾಣ ಭಾವವೆಂಬ
ಚತುರ್ವಿಧಸಾರಾಯ ಸುಖಲೋಲನಾಗಿರ್ದಬಳಿಕ
ಗುರುನಿರಂಜನ ಚನ್ನಬಸವಲಿಂಗವನಗಲಲೆಡೆಗಾಣದೆ
ಪರವಶವಾಗಿರ್ದೆ ಕಾಣಮ್ಮ. ॥ ೬೭೯ ॥

೬೮೦

ಮನೆಪುರುಷ ಮಹಾಲಿಂಗದೇವಗೆ
ಲಲನೆಯರೊಲವಿನಿಂದೆನಗೆ ಘನಸುಖವ ಸಾಧಿಸಿಕೊಂಡೆ ಕೇಳಾ.
ಆದಿಯವಿಡಿದು ಮೇದಿನಿಯೊಳೊಬ್ಬಳಗೂಡಿ
ಸೇವೆಯುಪಚಾರಂಗಳನಿತ್ತು ಶರಣೆಂದು ಹೆಚ್ಚಿಸಿಕೊಂಡೆ ಕಾಣಾ.
ಮತ್ತೊಂದು ದಿನ ಸದ್ಗುಣೆಯೆಂಬವಳ ಕೂಡಿ
ಮನವೊಲಿದಾರ್ಚನೆಯನೆಸಗಿ ಮಾಡಿ ಶರಣೆಂದು ಹೆಚ್ಚಿಸಿಕೊಂಡೆ ಕಾಣಾ.
ಮತ್ತೆ ಮೇಲೊಬ್ಬಳು ಕಾಮಿನಿಯ ಕೂಡಿ
ಸತ್ಯಸ್ವೈದಾನ ಸುಪಾಕವನಿತ್ತುಕೊಂಡು ಶರಣೆಂದು ಹೆಚ್ಚಿಸಿಕೊಂಡೆ ಕಾಣಾ.
ಮತ್ತೊಬ್ಬಳು ಭಾಮಿನಿಯ ಕೂಡಿ
ಅಂತರಂಗದ ಸುವಾಕ್ಯಂಗಳಿಂದೆ ಶರಣೆಂದು ಅರಿದರಿದು ಹೆಚ್ಚಿಸಿಕೊಂಡೆ ಕಾಣಾ.
ಮತ್ತೊಬ್ಬಳು ಚಿತ್ರಾಂಗನೆಯ ಕೂಡಿ
ಅತ್ಯಂತ ಮೋಹವೆರೆದಪ್ಪಿ ಅಗಲದೆ ಶರಣೆಂದು ಪರಿಣಾಮಿಸಿಕೊಂಡೆ ಕಾಣಾ.
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಈ ಐವರ ಸಂಪರ್ಕದಿಂದೆ ಪರಮಸುಖಪರಿಣಾಮಿಯಾಗಿ
ಪರವಶದೊಳಗಿರ್ದೆನು ಕಾಣಾ. ॥ ೬೮೦ ॥

೬೮೧

ಮೊದಲೆನ್ನ ಕೈವಶವಾಗಿರ್ದ ಪುರುಷನ
ಕಣ್ಣಸನ್ನೆಯಲ್ಲಿರಿಸಿಕೊಂಡಳೆಮ್ಮಕ್ಕ ; ಇದು ನೀತಿಯೇ ?
ಕಾಮಿಸಿ ಕಲ್ಪಿಸಿ ಒಲಿಸಿಕೊಂಡವಳಕ್ಕ ; ಇದು ನೀತಿಯೇ ?

ಒಳಗೊಳಗೆ ಮಾತನಾಡಿ ಮೋಹಿಸಿಕೊಂಡವಳಕ್ಕ ; ಇದು ನೀತಿಯೇ ?
ಇದನರಿದು ಮುನಿಸನುಳಿಸಿ ಹಿರಿಯಕ್ಕನೊಲುಮೆಯೊಳು ಪರಸ್ತ್ರೀಯಾಗಿ
ಪರಿಪರಿಯಿಂದೆ ಅವರ ಮೇಲೆ ನೆರೆದರೆ ಮರುಳುಗೊಂಡೆನ್ನೊಳಗಾದರು,
ಗುರುನಿರಂಜನ ಚನ್ನಬಸವಲಿಂಗಕ್ಕೆ ಪರಿಣಾಮವಾಯಿತ್ತು. || ೬೮೧ ||

೬೮೨

ಆಪಬಂದವಳು ಅಲ್ಲಿಂದರಿಯಳು,
ನೋಡಬಂದವಳು ಮೇಲೊಂದರಿಯಳು.
ನೀಡಬಂದವಳು ಅಲ್ಲಿಂದರಿಯಳು,
ಮಾತನಾಡಬಂದವಳು ಮತ್ತೊಂದರಿಯಳು.
ಚಿತ್ತವನೊಲಿಸಿತ್ತು ಒತ್ತೆಗೊಂಬ ವನಿತೆ ತಾನೊಬ್ಬಳೆ
ಗುರುನಿರಂಜನ ಚನ್ನಬಸವಲಿಂಗಕ್ಕೆ ಅಂಗವಾದವಳು. || ೬೮೨ ||

೬೮೩

ಬೇರಿಲ್ಲದ ಗಂಡಂಗೆ ತೋರಿಮಾಡುವರಾರೂ ಇಲ್ಲ.
ಈ ಧರೆಯಿಂದಲರಿದು ಶರಣುಹೊಕ್ಕು ಸುಖಿಯಾದೆ.
ಈ ಜಲದಿಂದಲರಿದು ಶರಣುಹೊಕ್ಕು ಸುಖಿಯಾದೆ.
ಈ ತೇಜದಿಂದಲರಿದು ಶರಣುಹೊಕ್ಕು ಸುಖಿಯಾದೆ.
ಈ ಪವನದಿಂದಲರಿದು ಶರಣುಹೊಕ್ಕು ಸುಖಿಯಾದೆ.
ಈ ಅಂಬರದಿಂದಲರಿದು ಶರಣುಹೊಕ್ಕು ಸುಖಿಯಾದೆ.
ಗುರುನಿರಂಜನ ಚನ್ನಬಸವಲಿಂಗಾ
ನಿನ್ನ ಪಂಚಮುಖದಿಂದೆ ನಿನ್ನನರಿದು ಶರಣುಹೊಕ್ಕು
ಪರಮಸುಖಪರಿಣಾಮಿಯಾಗಿರ್ದೆನು ಕಾಣಾ. || ೬೮೩ ||

೬೮೪

ಅಯ್ಯಾ, ಎನ್ನ ನಡೆಯಲ್ಲಿ
ಶರಣೆಂಬ ಭಾವದ ಪರಿಮಳದೊಳಡಗಿರ್ದೆ ಕಾಣಾ.
ಅಯ್ಯಾ, ಎನ್ನ ನುಡಿಯಲ್ಲಿ
ಶರಣೆಂಬ ಭಾವದ ಪರಿಮಳದೊಳು ಮುಳುಗಿರ್ದೆ ಕಾಣಾ.
ಅಯ್ಯಾ, ಎನ್ನ ಕೊಡುಕೊಳ್ಳೆಯಲ್ಲಿ
ಶರಣೆಂಬ ಭಾವದ ಪರಿಮಳದೊಳು ಎರಕವಾಗಿರ್ದೆ ಕಾಣಾ.
ಅಯ್ಯಾ, ಎನ್ನ ಸಕಲಸುಖದುಃಖಾದಿ ಮತ್ತೆಲ್ಲಾದರೆಯೂ

ಶರಣೆಂಬ ಭಾವದ ಸುವಾಸನೆಯೊಳು ಸಮರಸವಾಗಿರ್ದ ಕಾಣಾ
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೬೮೪ ॥

೬೮೫

ನೋಡಲಿಲ್ಲದ ನುಡಿಸಲಿಲ್ಲದ ಕೂಡಲಿಲ್ಲದ ಲಿಂಗವ
ನಾ ನೋಡಿ ಶರಣೆಂದು ಸುಖಿಸಿದೆ ನೋಡಾ.
ಎನ್ನೊಡನೆ ನುಡಿಸಿ ಶರಣೆಂದು ಸುಖಮಯನಾದೆ ನೋಡಾ.
ಎನ್ನೊಡನೆ ಕೂಡಿ ಶರಣೆಂದು ಪರಿಣಾಮಿಯಾದೆ ನೋಡಾ.
ಗುರುನಿರಂಜನ ಚನ್ನಬಸವಲಿಂಗವನು
ನಾನರಿಯದೆ ಶರಣೆಂದು ಪರಮಾನಂದ ಲೋಲುಪ್ತನಾದೆ ನೋಡಾ. ॥ ೬೮೫ ॥

೬೮೬

ದಾರಿಮೂರರ ತೋರಿಕೆಗೆ ಗೋಚರವಿರಹಿತ ನಿರವಯಾನಂದ
ಪರಬ್ರಹ್ಮವನರಿದು ತೆರಹಿಲ್ಲದಿರ್ದ ಶರಣ
ತನ್ನ ವಿನೋದಕಾರಣ ನೋಡಿ ಮಾಡಿತ್ತಡೆ ಜಡನಲ್ಲ ಕಾಣಾ.
ಸಮ್ಯಕ್‌ಜ್ಞಾನಾನಂದಪರಿಪೂರ್ಣನು
ನೋಡಿ ಮಾಡೀಯದಿರ್ದಡೆ ಶೂನ್ಯನಲ್ಲ ಕಾಣಾ.
ಸತ್ಕ್ರಿಯಾಂಗಪರಿಪೂರ್ಣನು ಅಂತಿಂತೆನ್ನಲೆಡೆಯಿಲ್ಲ
ಗುರುನಿರಂಜನ ಚನ್ನಬಸವಲಿಂಗವಾಗಿರ್ದ ನಿಜರೂಪಕ್ಕೆ. ॥ ೬೮೬ ॥

೬೮೭

ಆಚಾರಂಗವಾಗಿ ಅರುಹೇ ಪ್ರಾಣವಾಗಿ
ಮಹಾಜ್ಞಾನಾನುಭಾವದಲ್ಲಿ ತರಹರವಾದ ಶರಣಂಗೆ
ಮಾಡಲಿಲ್ಲ ಮಾಡದಿರಲಿಲ್ಲ, ನೋಡಲಿಲ್ಲ ನೋಡದಿರಲಿಲ್ಲ,
ಕೂಡಲಿಲ್ಲ ಕೂಡದಿರಲಿಲ್ಲ
ಗುರುನಿರಂಜನ ಚನ್ನಬಸವಲಿಂಗ ತಾನಾಗಿರ್ದ ಕಾರಣ. ॥ ೬೮೭ ॥

೬೮೮

ಅಯ್ಯಾ, ನಿನ್ನನೊಂದುಮುಖದಲ್ಲಿ ಅರ್ಚಿಸುವೆನೆ ?
ಎನ್ನ ಶ್ರದ್ಧೆ ಆನಂದಭಕ್ತಿಯೊಳೊಡವೆರೆದುದಾಗಿ
ಭಕ್ತಸ್ಥಲವೆನಗಿಲ್ಲವಯ್ಯಾ.
ಮತ್ತೊಂದುಮುಖದಲ್ಲರ್ಚಿಸುವೆನೆ ?
ಎನ್ನ ನಿಷ್ಠೆ ಆನಂದಭಕ್ತಿಯೊಳೊಡವೆರೆದುದಾಗಿ

ಮಹೇಶ್ವರಸ್ಥಲವೆನಗಿಲ್ಲವಯ್ಯಾ.
ಮತ್ತೊಂದುಮುಖದಲ್ಲರ್ಚಿಸುವೆನೆ ?
ಎನ್ನ ಸಾವಧಾನ ಆನಂದಭಕ್ತಿಯೊಳೊಡವೆರೆದುದಾಗಿ
ಪ್ರಸಾದಿಸ್ಥಲವೆನಗಿಲ್ಲವಯ್ಯಾ.
ಮತ್ತೊಂದುಮುಖದಲ್ಲರ್ಚಿಸುವೆನೆ ?
ಎನ್ನ ಅನುಭಾವ ಆನಂದಭಕ್ತಿಯೊಳೊಡವೆರೆದುದಾಗಿ
ಪ್ರಾಣಲಿಂಗಿಸ್ಥಲವೆನಗಿಲ್ಲವಯ್ಯಾ.
ಮತ್ತೊಂದುಮುಖದಲ್ಲರ್ಚಿಸುವೆನೆ ?
ಎನ್ನ ಸಮರಸ ಆನಂದಭಕ್ತಿಯೊಳೊಡವೆರೆದುದಾಗಿ,
ಐಕ್ಯಸ್ಥಲವೆನಗಿಲ್ಲವಯ್ಯಾ.
ಗುರುನಿರಂಜನ ಚನ್ನಬಸವಲಿಂಗವನು
ಆಯಾಯಮುಖದಲ್ಲಿ ಎನ್ನ ಆನಂದದೊಳೊಡವೆರೆದು ಅರ್ಚಿಸಿ
ಪರಮಸುಖಿಯಾಗಿದ್ದೆನಯ್ಯಾ. || ೬೮೮ ||

## ಶರಣನ ಮಾಹೇಶ್ವರಸ್ಥಲ

೬೮೯

ಆರಾರ ಮೇಲಿಂದತ್ತತ್ತ ತೋರುವ ನಿರವಯ ತಾನೆಂದರಿದ ಮೇಲೆ
ತನುವಿನಲ್ಲಿ ತಾಮಸ ಅವಿದ್ಯೆ ತೋರಲು ಕಾರಣವೇನು ?
ಪರಮಲೀಲಾಸ್ಪದಕ್ಕೆ ನಿಂದುದಾಗಿ.
ಮನದಲ್ಲಿ ಸಂಕಲ್ಪ ವಿಕಲ್ಪ ಕರಣಕರ್ಕಶ ಸುಳಿಯಲು ಕಾರಣವೇನು ?
ಶಿವಲೀಲಾ ಸೂಕ್ಷ್ಮಾಸ್ಪದಕ್ಕೆ ನಿಂದುದಾಗಿ.
ಭಾವದಲ್ಲಿ ವಿಷಯಭ್ರಾಂತಿ ಸೂಸಲು ಕಾರಣವೇನು ?
ಪರಶಿವಲೀಲಾ ಕಾರಣಾಸ್ಪದಕ್ಕೆ ನಿಂದುದಾಗಿ.
ಇಂತು ತೋರಲರಿಯದ ಠಾವಿನಲ್ಲಿ ತೋರಿಕಾಣಿಸಲು
ಶರಣಲಿಂಗಸಂಬಂಧಿಗಳೆಂಬ ವಾಗದ್ವೈತಕ್ಕೆ ನಾಚಿಕೆ ಬಾರದೇಕೆ
ಗುರುನಿರಂಜನ ಚನ್ನಬಸವಲಿಂಗದಂಗವನರಿಯದ ಯೋನಿಸೂತಕರಿಗೆ ? ||೬೮೯||

೬೯೦

ತನುಮನಭಾವವನಿತ್ತು ತ್ರಿವಿಧಲಿಂಗಸನ್ನಿಹಿತನಾದ ಶರಣಂಗೆ
ತನುಲಿಂಗಭಾವವಲ್ಲದೆ ಪ್ರಕೃತಿಭಾವವುಂಟೆ ?
ಮನಲಿಂಗಭಾವವಲ್ಲದೆ ಪ್ರಕೃತಿಭಾವವುಂಟೆ ?
ಭಾವಲಿಂಗಭಾವವಲ್ಲದೆ ಪ್ರಕೃತಿಭಾವವುಂಟೆ ?

ತನುಮನಭಾವ ಪ್ರಕೃತಿಯಲ್ಲಿ ವರ್ತಿಸಿ
ಲಿಂಗಾಂಗಸಂಬಂಧಿಗಳೆಂಬ ಮಂಗ ಹೊಲೆಯ ಭಂಗರುಗಳನೇನೆಂಬೆನಯ್ಯಾ,
ಗುರುನಿರಂಜನ ಚನ್ನಬಸವಲಿಂಗಾ. ॥ ೬೯೦ ॥

೬೯೧

ತೂರ್ಯಾನಂದಮಯ ಶರಣನು ತಾನೇ ಬ್ರಹ್ಮವೆಂದು ನುಡಿದುಕೊಂಡು
ಸತ್ಕ್ರಿಯಾನುಭಾವರತಿಯನರಿಯದೆ,
ಭಾವದತ್ತ ಹೋಗುವ ಗೊಡ್ಡು ವೇದಾಂತಿಯಂತಲ್ಲ.
ಅದೇನು ಕಾರಣವೆಂದೊಡೆ, ತನ್ನ ಕಾಯವೇ ಇಷ್ಟಲಿಂಗಸ್ವರೂಪವಾದ ಕಾರಣ.
ತಾನು ದೇಹಿಯಾಗಿ ಲಿಂಗವೇ ನಿರ್ದೇಹಿಯಾಗಿ
ತಾನು ಮಲಮಾಯಾ ಪಾಶಬದ್ಧನಾಗಿ ಲಿಂಗವೇ ನಿರ್ಮಲ
ನಿರ್ಮಾಯ ಪಾಶವಿರಹಿತನೆಂದು
ಸಮ್ಯಕ್‌ಜ್ಞಾನಾನುಭಾವದನುವರಿಯದೆ ಸೂತಕಿಯಾಗಿ,
ಭಿನ್ನವಿಟ್ಟರ್ಚಿಸಿ ಫಲಪದವಪೆದು ಭೋಗಿಸಿ
ಎಡೆಯಾಡುವ ಶೈವಸಿದ್ಧಾಂತಿಯಂತಲ್ಲ.
ಅದೇನು ಕಾರಣವೆಂದೊಡೆ, ಚಿತ್ಪ್ರಾಣವಲಿಂಗ ತಾನಾದ ಕಾರಣ.
ಭಿನ್ನಾಭಿನ್ನವಳಿದು ಗುರುನಿರಂಜನ ಚನ್ನಬಸವಲಿಂಗದಲ್ಲಿ
ಪರಮಸುಖಪರಿಣಾಮಿಯಾಗಿರ್ದನು. ॥ ೬೯೧ ॥

೬೯೨

ಸಗುಣಾನಂದಸನ್ನಿಹಿತ ಶರಣಂಗೆ ಸಾಕಾರವೆಲ್ಲ ಚಿತ್ಸಾಕಾರವಾಗಿ
ಶಿವಲೀಲಾನುಕೂಲಿಯಲ್ಲಿ ತೋರುತಲಿರ್ದವು.
ನಿರ್ಗುಣಾನಂದಸನ್ನಿಹಿತ ಶರಣಂಗೆ ನಿರಾಕಾರವೆಲ್ಲ ಚಿನ್ನಿರಾಕಾರವಾಗಿ
ಶಿವಾನುಕೂಲಿಯಲ್ಲಿ ತೋರುತಲಿರ್ದವು.
ನಿರವಯಾನಂದಸನ್ನಿಹಿತ ಶರಣಂಗೆ ಶೂನ್ಯಾಕಾರವೆಲ್ಲ ನಿಃಶೂನ್ಯಾಕಾರವಾಗಿ
ಶಿವಾನುಕೂಲಿಯಲ್ಲಿ ತೋರುತಲಿರ್ದವು.
ಹೊರಗೊಳಗರಿಯದ ಪರಿಪೂರ್ಣನು
ತಾ ಮಾಡಿವಡೆ ಕರ್ಮಕಾಂಡಿಯಲ್ಲ ಮಾಡದಿರ್ದಡೆ ಜ್ಞಾನಕಾಂಡಿಯಲ್ಲ
ಉಭಯವನಳಿದು ಗುರುನಿರಂಜನ ಚನ್ನಬಸವಲಿಂಗ ತಾನಾಗಿರ್ದ ಪರಗ.॥೬೯೨॥

೬೯೩

ಅಚ್ಯೋತ್ತಿರ್ದ ಅವಿರಳಲಿಂಗದಲ್ಲಿ
ಅನಿಮಿಷನಾಗಿರ್ದಬಳಿಕ ಬೇರೊಂದನನ್ನಿಸಲಿಲ್ಲ.

ಭೇದವಾದಿಯಂತೆ ಗುಂಭಭ್ರಾಂತನಲ್ಲ ;
ಅಭೇದವಾದಿಯಂತೆ ಅಪ್ರತಿಮ ಶರಣ.
ನಡೆನುಡಿಯನರಿಯಬಾರದು ಕಾಯಪ್ರಾಣವುಳ್ಳನ್ನಕ್ಕರ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೬೯೩ ||

೬೯೪

ಒಳಹೊರಗೆ ತಂದು ಉಲಿದುರಿವ ಸಂಪತ್ತವನರಿವಡೆ
ಹಿಂದಣ ಸಿರಿಸುಖಿಗಳಿಗಳವಲ್ಲ ಕಾಣಾ.
ಹೊರಗೊಳಗೆ ತಂದು ಉಲಿದುರಿವ ಸಂಪತ್ತವನರಿವಡೆ
ಹೋಗಿ ಬಂದಿರುವ ಪರಿಸುಖಿಗಳಿಗಳವಲ್ಲ ಕಾಣಾ.
ಮತ್ತಂತೆಂದೊಡೆ, ಹಾಸಿದ ಶರಗ ಹಸದ ಭಾಷೆಬದ್ಧ ಭಾವಜ್ಞರರಿವರು ನೋಡಾ
ನಿಮ್ಮ ಶರಣರ ಘನವ ಗುರುನಿರಂಜನ ಚನ್ನಬಸವಲಿಂಗಾ. || ೬೯೪ ||

೬೯೫

ಕರ್ಮೇಂದ್ರಿಯಂಗಳೈದರ ತಿರುಳನುರುಹಿ ತನ್ನನರಿಯಬಲ್ಲಾತನೇ ಶರಣ.
ವಿಷಯಂಗಳೈದರ ತಿರುಳನುರುಹಿ ತನ್ನನರಿಯಬಲ್ಲಾತನೇ ಶರಣ.
ಜ್ಞಾನೇಂದ್ರಿಯಗಳೈದರ ತಿರುಳನುರುಹಿ ತನ್ನನರಿಯಬಲ್ಲಾತನೇ ಶರಣ.
ವಾಯುಪಂಚಕಂಗಳ ತಿರುಳನುರುಹಿ ತನ್ನನರಿಯಬಲ್ಲಾತನೇ ಶರಣ.
ಕರಣ ನಾಲ್ಕೊಂದರ ತಿರುಳನುರುಹಿ ತನ್ನನರಿಯಬಲ್ಲಾತನೇ ಶರಣ.
ಇಂತಲ್ಲದೆ ಇವರ ತಿರುಳಿನೊಳು ಮರುಳುಗೊಂಡುರುಳುವ ಮಾನವರು
ತಾವು ಶರಣರೆಂದು ನುಡಿದು ನಡೆವ ನಡಗರವ ಕಂಡು ನಾಚಿತ್ತೆನ್ನ ಮನವು
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೬೯೫ ||

೬೯೬

ಪೃಥ್ವಿಯ ಗುಣವೈದರ ಕಳೆಯನುರುಹಿ
ತನ್ನ ಸುಳುಹನರಿಯದನ್ನಕ್ಕರ ಶರಣನಲ್ಲ.
ಅಪ್ಪುವಿನ ಗುಣವೈದರ ಕಳೆಯನುರುಹಿ
ತನ್ನ ಸುಳುಹನರಿಯದನ್ನಕ್ಕರ ಶರಣನಲ್ಲ.
ಅಗ್ನಿಯ ಗುಣವೈದರ ಕಳೆಯನುರುಹಿ
ತನ್ನ ಸುಳುಹನರಿಯದನ್ನಕ್ಕರ ಶರಣನಲ್ಲ.
ವಾಯುವಿನ ಗುಣವೈದರ ಕಳೆಯನುರುಹಿ
ತನ್ನ ಸುಳುಹನರಿಯದನ್ನಕ್ಕರ ಶರಣನಲ್ಲ.
ಆಕಾಶದ ಗುಣವೈದರ ಕಳೆಯನುರುಹಿ

ತನ್ನ ಸುಳುಹನರಿಯದನ್ನಕ್ಕರ ಶರಣನಲ್ಲ.
ಇಂತೀ ಪಂಚಭೂತಾಳಿಯ ತಲೆಯಲ್ಲಿ ಹೊತ್ತು
ನಲಿನಲಿದು ನಡೆಯುತ್ತ ಶರಣರೆನಿಸಿಕೊಂಬ ಶುನಕಜಾತಿಗಳ ನೀತಿಯ ನೋಡಿ
ನಗುತ್ತ ನಡೆವರು ನಿಮ್ಮ ಶರಣರು
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮತ್ತ. || ೬೯೬ ||

೬೯೭

ಕಂಗಳ ಕರುಳನರಿಯದೆ ನೋಡುವೆನಯ್ಯಾ ನಿಮ್ಮ ಚರಣಕಮಲವನು.
ಮನದ ಮಸಕನರಿಯದೆ ಮಾಡುವೆನಯ್ಯಾ ನಿಮ್ಮ ಚರಣಕಮಲಕ್ಕೆ.
ಭಾವದ ಕಾಳಗತ್ತಲೆಯನರಿಯದೆ ಕೂಡುವನಯ್ಯಾ ನಿಮ್ಮ ಚರಣಕಮಲವನು.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣರೊಳಗೆ ನಾನೊಂದು ಸ್ಥಲಾಧಿಕಾರಿಯಂಗ ಕಾಣಾ. || ೬೯೭ ||

೬೯೮

ಭಿನ್ನವಳಿದು ತನ್ನನರಿದು ತಾನಾದ ಶರಣನು
ಸಚರಾಚರವೆಲ್ಲ ತನ್ನ ನಿರ್ಮಿತವೆಂದು ಕಾಂಬುವನಲ್ಲದೆ
ಬೇರೊಂದು ಕುರುಪಿಟ್ಟು ಹೇಳುವನಲ್ಲ ಕಾಣಾ.
ಅಕಾಯಚರಿತ್ರನಾದ ಅನುಪಮಸುಖಿ
ತನಗೊಮ್ಮೆ ಹಿರಿದುಕಿರಿದು ಉತ್ತಮ ಮಧ್ಯಮ
ಕನಿಷ್ಠವೆಂಬವೇನು ಕಾಣದಿರ್ದವು ನೋಡಾ.
ಈ ನಿಲವು ನಿಲುಕದ ಕುಲಾದಿ ಮದಯುಕ್ತರು ಶರಣಸ್ಥಲವ ತೋರಿ ನಡೆವರು.
ಇವರೆತ್ತ ಹೋಗುವರು ಎತ್ತ ಬರುವರು ಹೇಳಾ
ಗುರುನಿರಂಜನ ಚನ್ನಬಸವಲಿಂಗಾ. || ೬೯೮ ||

೬೯೯

ಹೊರಗೊಳಗೆಂಬ ಕುಳವರಿಯದ ಪರಿಪೂರ್ಣ ಶರಣಂಗೆ
ಮರಮರಳಿ ತೋರುವ ಮನ ಭಾವ ಜ್ಞಾನ ಮುಂದೆಯಿಲ್ಲ ಕಾಣಾ.
ಸಂದುಸಂಶಯ ದಂದುಗ ಬೆಂದು ನಿಂದು ನಿಜವೆರೆದ ಬಳಿಕ
ಎಂತಿರ್ದಂತೆ ತಾನೆ ನೋಡಾ.
ಈ ಅನುವನರಿಯಲರಿಯದೆ
ಅಸಾಧ್ಯ ನುಡಿಯ ಹೊತ್ತು ಮಾಯಗೂಡಿ ಹೋದರೆ,
ಕಂಗುರುಡರು ಕಾಂತಾರವಲ್ಲಿ ಕಡಿವಾಡಿ ಮಡಿದಂತಾಯಿತ್ತು
ಗುರುನಿರಂಜನ ಚನ್ನಬಸವಲಿಂಗವನರಿಯದೆ. || ೬೯೯ ||

೨೦೦

ಮಾನಸ ವಾಚಕ ಕಾಯಕದ ಗತಿಮತಿಗತೀತವಾದ ನಿರಂಜನಲಿಂಗವನು,
ಕರ ನಯನ ಮನ ಪ್ರಾಣ ಭಾವ ಜ್ಞಾನದಲ್ಲಿ ಪರಿಪೂರ್ಣವಾಗಿ
ತೆರಹಿಲ್ಲದಿರ್ಪ ಶರಣಂಗೆ
ಮುಟ್ಟಿ ನೋಡಿ ನೆನೆಯಬೇಕೆಂಬುದಿಲ್ಲ,
ಭೇದಿಸಿ ವಿಚಾರಿಸಿ ಕೂಡಬೇಕೆಂಬುದಿಲ್ಲ ನೋಡಾ.
ಜ್ಞಾತೃವಿಂಗೆ ಜ್ಞೇಯಸ್ವರೂಪವಾಗಿರ್ದ ಕಾಣಾ.
ಸ್ವರೂಪವನರಿಯದೆ ಕರಣತ್ರಯದಾವರಣದಲ್ಲಿ ವರ್ತಿಸಿ
ಓರಿದಪ್ಪ ಗಮನಾಗಮನವರಿದು ಮರೆವ ಮಹಿಮರೆಂದಡೆ
ಜಿಹ್ವೆ ಮನ ಸಂಗದಚ್ಚರಿಯೆನುತ ನಗುತಿರ್ದರು
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣರು. || ೨೦೦ ||

೨೦೧

ಗಂಭೀರ ಗುಹೆಯೊಳಗಿಪ್ಪ ನಿರವಯ ಪರಮಾತ್ಮಲಿಂಗವನು
ಅರುವಿನಮುಖದಿಂದ ಅಂಗ ಭಾವದ ಕಳೆಯೊಳು ನಿಂದು
ಕರಸ್ಥಲಕ್ಕೆಯ್ದಿಸಿ, ನಯನಸ್ಥಲವೆರಸಿ ಹೃದಯಸ್ಥಲಕ್ಕೊಯ್ದು
ಭ್ರುಕುಟಿಸ್ಥಲದಲ್ಲಿರಿಸಿ ಮಂತ್ರಸ್ಥಲ ಕೂಡಿ ಲಯಸ್ಥಲದಲ್ಲಿ
ಘನಸುಖಪರಿಣಾಮಿಯಾಗಿರ್ದ ಕಾಣಾ ನಿಮ್ಮ ಶರಣ.
ಇಂತೀ ಸಗುಣ ನಿರವಯಾನಂದ ನಿಜಸುಖವನರಿಯಲರಿಯದೆ
ಶೈವಾಗಮದ ನುಡಿಯವಿಡಿದು ಗಿರಿ ಗಹ್ವರ ನದಿಮೂಲ
ಶರಧಿ ಕಾಂತಾರ ಕಾಶಿ ಮೊದಲಾದ
ಕಂಡ ಕಂಡದುದಕ್ಕೆ ಹರಿದು ಹೋಗಿ
ಅನ್ನೋದಕವ ಸಣ್ಣಿಸಿ ಸೊಪ್ಪು ಪಾಷಾಣಪುಡಿಯ ಕೊಂಡು
ಕಷ್ಟಬಟ್ಟು ಕಾಣಲರಿಯದೆ ಕೆಟ್ಟುಹೋಗುವ ಭ್ರಷ್ಟರಿಗೆ
ಜ್ಞಾನಿಯೆಂದು ನುಡಿವ ಶುನಕರಿಗೆ ನಾಯಕ ನರಕ ತಪ್ಪದು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೨೦೧ ||

೨೦೨

ಬಲ್ಲಿದರೆಂಬ ಹರಿ ವಿಧಿಗಲ್ಲಲ್ಲಿಗರಿಸದ ಅಖಂಡ ಚಿನ್ಮಯಲಿಂಗವನು
ಸಲ್ಲಲಿತವಾಗಿ ಪಡೆದ ಸತ್ಯಶರಣನ ಮುಂದೆ
ಆಗುಹೋಗಿನ ಛಾಯೆ ಅನಂತವಾಗಿ ತೋರಿದಡೇನು
ಅಘ್ರವಂಗದ ಪರಿಯೆಂದರಿದು ಚರಿಸುವನಲ್ಲದೆ.

ಏನುಯೆಂತೆಂಬ ಭಾವ ಅವಸ್ಥಾತ್ರಯದಲ್ಲಿ ಅರಿಯನು ಕಾಣಾ.
ಪರಿಪೂರ್ಣನೇ ತಾನಾಗಿ ಸತ್ತುಚಿತ್ತಾನಂದ ನಿತ್ಯಸನ್ನಿಹಿತ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ
ಗಮನಾಗಮನಗಮ್ಯ ಕಾಣಾ. ॥ ೨೦೨ ॥

೨೦೩

ಅಯ್ಯಾ, ನಿನ್ನನು ಕಾಯವಿಡಿದು ಕಂಡು ಕೂಡೇನೆಂದರೆ ಕ್ರಿಯಾಗಮ್ಯ ಕಾಣಾ.
ಅಯ್ಯಾ, ನಿನ್ನನು ಮನವಿಡಿದು ಕಂಡು ಕೂಡೇನೆಂದರೆ ಜ್ಞಾನಗಮ್ಯ ಕಾಣಾ.
ಅಯ್ಯಾ, ನಿನ್ನನು ಭಾವವಿಡಿದು ಕಂಡು ಕೂಡೇನೆಂದರೆ ಭಾವಗಮ್ಯ ಕಾಣಾ.
ಇವು ಯಾತಕ್ಕೂ ಸಿಕ್ಕಬಾರದಿರುವ ಶ್ರುತಿಗುರುಸ್ವಾನುಭಾವದಿಂದರಿದು
ಕಾಯ ಮನ ಭಾವವನರಿಯದೆ ಕಂಡು ಕೂಡಿ ಅಗಲಿಕೆಯನರಿಯದೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಪರಮಸುಖಿಯಾಗಿರ್ದೆನು. ॥ ೨೦೩ ॥

೨೦೪

ಮಾರ್ಗಕ್ರಿಯೆಗಳನೊಳಕೊಂಡು
ಮೀರಿದಕ್ರಿಯೆಯಲ್ಲಿ ನಿಂದ ಪರಮಾನಂದ ಶರಣಂಗೆ
ಲೋಕದ ನಡೆ ಲೋಕದ ನುಡಿ ಲೋಕದ ಪ್ರಪಂಚಗಳೆಂಬ
ಖಂಡಿತಕರ್ಮಗಳೇನೂ ಇಲ್ಲ ನೋಡಾ.
ಅಖಂಡ ಅನುಪಮಸುಖಿ ಈ ಮರ್ಮವನರಿಯಲರಿಯದೆ
ಕಂಡವರ ಕಂಡು ಒಂದು ಕುರುಹವಿಡಿದು
ಮನಸಿಗೆ ಬಂದಂತೆ ವಾರ ತಿಥಿ ನಕ್ಷತ್ರ ಮಾಸ ವರುಷವಿಡಿದು
ನೇಮವಿಟ್ಟು, ಮಾಟ ನಿಯಮವಿಟ್ಟಾರ್ಚನೆ ನಿಯಮಾರ್ಪಣವೆಂದು
ಕಟ್ಟಿ, ಭಾವದಲ್ಲಾಡುವ ಸೊಟ್ಟಕರ್ಮಾಳಿಗಳ ಕಂಡು
ಎನಗೆ ಚೋದ್ಯವಾಯಿತ್ತು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೨೦೪ ॥

೨೦೫

ಜಾತಿ ಗೋತ್ರ ಕುಲ ಆಶ್ರಮ ವರ್ಣ ನಾಮ
ನಿರಂಜನಲಿಂಗಸನ್ನಿಹಿತನಾದ ಶರಣನು
ಪಂಚಸೂತಕವನರಿಯದೆ ಪಂಚಬ್ರಹ್ಮ ತಾನೆಯಾಗಿ
ಪರಮಾನಂದಸುಖಿಮುಖಿಯಾಗಿರ್ದನಲ್ಲದೆ
ಷಡ್ಭ್ರಮೆಯಲ್ಲಿ ನಿಂದು ಪಂಚಸೂತಕದ ವರ್ತನೆಯಲ್ಲಿ ಬೆಂದು

ಒಡಲಗೊಂಡು ಹೋಗುವ ಜಡಪಾತಕನಂತಲ್ಲ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. ॥ ೨೦೫ ॥

೨೦೬

ಭುವನದ್ವಯ ತತ್ವದ್ವಯ ವರ್ಣದ್ವಯ ಮಂತ್ರದ್ವಯ
ಕಲಾದ್ವಯ ಪದದ್ವಯ
ನಿರಾಮಯ ನಿರುಪಮಾನಂದ ಸುಖಮಯ ಶರಣ ತಾನು
ಸಾಧ್ಯಾಸಾಧ್ಯ ಗಮನಕ್ಕೆ ಗೋಚರನಾಗಿ,
ಗಮನಾಗಮನ ಗರ್ಭಭರಿತ ಗಂಭೀರ ಗುಣಾರ್ಣವ
ಪರಮಜ್ಯೋತಿರ್ಲಿಂಗವಾಗಿರ್ದನಲ್ಲದೆ
ಪಂಚೇಂದ್ರಿಯವಿಷಯ ಗುಣಭರಿತನಾಗಿ
ಬಲ್ಲಂತೆ ಭುಲ್ಲವಿಸಿ ಚರಿಸುತ್ತ
ಅಲ್ಲಲ್ಲಿಗೊಂದೊಂದು ವ್ರತ ನಿಯಮಂಗಳ ಗಂಟಿಕ್ಕಿಕೊಂಡು
ಬಲೆಯೊಳು ಬಿದ್ದು ಹೋಗುವ ಫಲಪಿಸುಣಿಗಳಂತಲ್ಲ ಕಾಣಾ.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣನ ಪರಿ ಆರಿಗೆಯೂ ಕಾಣಬಾರದು. ॥ ೨೦೬ ॥

೨೦೭

ಸುಚಿತ್ತ ಸುಬುದ್ಧಿಯೆಂಬ ಹಸ್ತವನು
ಸ್ಥೂಲತನುಸನ್ನಿಹಿತವಾಗಿ ಸತ್ಕಳೆಯೊಳೊಪ್ಪುತಿರ್ದನು ಕಾಣಾ.
ನಿರಹಂಕಾರ ಸುಮನವೆಂಬ ಹಸ್ತವನು
ಸೂಕ್ಷ್ಮತನುಸನ್ನಿಹಿತವಾಗಿ ಚಿತ್ಕಳೆಯೊಳೊಪ್ಪುತಿರ್ದನು ಕಾಣಾ.
ಸುಜ್ಞಾನ ಸದ್ಭಾವವೆಂಬ ಹಸ್ತವನು
ಕಾರಣತನುಸನ್ನಿಹಿತವಾಗಿ ಆನಂದಕಳೆಯೊಳೊಪ್ಪುತಿರ್ದನು ಕಾಣಾ.
ತನುತ್ರಯಸನ್ನಿಹಿತವಾದ ಷಡ್ವಿಧಹಸ್ತದೊಬ್ಬುಳಿಯೊಡವೆರೆದ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಘನಪರಿಣಾಮಿಯಾಗಿ
ಒಪ್ಪುತಿರ್ದನು ಕಾಣಾ ಶರಣನು. ॥ ೨೦೭ ॥

೨೦೮

ತನುರಹಿತವಾಗಿ ನಿಂದಾತ ಶರಣ ;
ಮನತರಹರವಾಗಿ ನಿಂದಾತ ಶರಣ ;
ಪ್ರಾಣತರಹರವಾಗಿ ನಿಂದಾತ ಶರಣ.
ಇಂತಲ್ಲದೆ ತನು ಆಣವಮಲದಲ್ಲಿ ತರಹರವಾಗಿ,

ಮನ ಮಾಯಾಮಲದಲ್ಲಿ ತರಹರವಾಗಿ,
ಪ್ರಾಣ ಕಾರ್ಮಿಕಮಲದಲ್ಲಿ ತರಹರವಾಗಿ,
ಇಂತಿರ್ದು ನಾನು ಭಕ್ತ ನಾನು ಮಾಹೇಶ್ವರ ನಾನು ಪ್ರಸಾದಿ
ನಾನು ಪ್ರಾಣಲಿಂಗಿ ನಾನು ಶರಣ ನಾನು ಐಕ್ಯನೆಂಬ
ನುಡಿಗಡಣವ ಕಂಡು ಮೃಡನ ಶರಣರು ಕೈಹೊಡೆದು ನಗುತಿರ್ದರು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೭೦೮ ||

೭೦೯

ಕಾಯದ ಕರಸ್ಥಲದಲ್ಲಿ ಲಿಂಗ, ಮನದ ಕರಸ್ಥಲದಲ್ಲಿ ಮಂತ್ರ,
ಭಾವದ ಕರಸ್ಥಲದಲ್ಲಿ ಅರಿವು, ನಿರ್ಧರವಾದುದೇ ನಿಜ ಕಾಣಾ.
ಅಂತಲ್ಲದೆ ಕಾಯದಲ್ಲಿ ಲೋಭ ಕೊಲೆ, ಮನದಲ್ಲಿ ಕ್ರೋಧ ಮೋಹ,
ಭಾವದಲ್ಲಿ ಭ್ರಾಂತಿ ತಾಮಸ, ಇಂತಿವು ಸಂಗಸಂಬಂಧವಾಗಿ
ನಾವು ಲಿಂಗಶರಣರೆಂದು ನುಡಿದುಕೊಂಬ
ಕಡೆ ನಡು ಬುಡಗಳರಿಯದ ಕರ್ಮಿಗಳನೇನೆಂಬೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. || ೭೦೯ ||

೭೧೦

ಚರಣಗತಿ ಸದ್ಗಮನ, ಹಸ್ತಗತಿ ಸದ್ಭಕ್ತಿ, ಜಿಹ್ವೆಗತಿ ಸದ್ವಾಕ್ಯ,
ನೇತ್ರಗತಿ ಅಭಿನ್ನನೋಟ, ಶ್ರೋತ್ರಗತಿ ಶಿವಾನುಶ್ರುತಿ,
ಘ್ರಾಣಗತಿ ಸದ್ವಾಸನೆ, ಮನಗತಿ ಸಮ್ಯಕ್‌ಜ್ಞಾನ, ಭಾವಗತಿ ಮಹಾನುಭಾವ.
ಇಂತೀ ಸನ್ನಿಹಿತ ಶರಣನು ಪರಮಪ್ರಸಾದಮೂರ್ತಿ ತಾನೆ ಅಲ್ಲದೆ
ಅನ್ಯವಿಲ್ಲ ಕಾಣಾ.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣನ ಪರಿ ಆವ ದೇಶದೊಳಗೂಯಿಲ್ಲ. || ೭೧೦ ||

೭೧೧

ಅಯ್ಯಾ, ಎನ್ನ ಇಂದ್ರಿಯಂಗಳೆಲ್ಲ
ನಿಮ್ಮ ಸೋಂಕಿನ ಸೊಬಗೆಂಬ ತವನಿಧಿಯಲ್ಲಿ ಮುಳುಗಿ,
ಹಿಂದಿನ ಮುಂದಿನ ಬಂಧನದ ಸಂಕೋಲೆಯ ಕಳೆದಿರ್ದವಯ್ಯಾ.
ಅಯ್ಯಾ, ಎನ್ನ ಕರಣಂಗಳೆಲ್ಲ ನಿಮ್ಮ ಮುಟ್ಟಿ
ಮುಂದನರಿಯದೆ ಹಿಂದನರಿಯದೆ ಸಂದಸುಖದಲ್ಲಿ
ಬಂದ ಪರಿಣಾಮದಲ್ಲಿ ಮುಳುಗಿ ಮತ್ತರಿಯದಿರ್ದವಯ್ಯಾ.

ಅಯ್ಯಾ, ಎನ್ನ ವಿಷಯಂಗಳೆಲ್ಲ
ನಿಮ್ಮ ಸಂಬಂಧಸಂವಿತ್ಪ್ರಭಾಸಂದದೊಳು ಮುಳುಗಿ
ಭಿನ್ನ ಸುಖವರಿಯದಿರ್ದವಯ್ಯಾ.
ಅಯ್ಯಾ, ಗುರುನಿರಂಜನ ಚನ್ನಬಸವಲಿಂಗಾ
ನಿನ್ನೊಡಲಗೊಂಡವನಾದಕಾರಣ ಕಾಣಯ್ಯಾ. || ೨೧೧ ||

೨೧೨

ಅಯ್ಯಾ, ಹಾದಿಯ ಮಾತಕೇಳಿ ಮೇದಿನಿಯಲ್ಲಿ ಉಳಿದರಯ್ಯಾ.
ಮೇಗಣ ಮಾತಕೇಳಿ ಮೂಕರಾಗಿ ಮುಂದೆಕಾಣಲಿಲ್ಲವಯ್ಯಾ.
ವಿದ್ಯಾಬುದ್ಧಿಯ ಕೇಳಿ ಆಗು ಹೋಗಿನೊಳಗಾದರಯ್ಯಾ.
ಇವನರಿದು ನಾದಬಿಂದುಕಳೆಯ ಹೊಳೆವ ಕುಳಕ್ಕಿಟ್ಟು ಮರೆದು
ಪರಿಣಾಮಿಯಾದೆ ಗುರುನಿರಂಜನ ಚನ್ನಬಸವಲಿಂಗಕ್ಕಂಗವಾಗಿ. || ೨೧೨ ||

೨೧೩

ಅತ್ತಲರಿಯದೆ ಇತ್ತಲರಿಯದೆ ಸತ್ಯವಿಡಿದು
ಸಂಗದನುವ ಸ್ಥಲಕ್ಕೆ ತಂದು ಹಿಂಗದಾಡಿದೆ ಹಿರಿಯರ ಮುಂದೆ,
ನೋಡಿಯಾಡಿದೆ ಹಿರಿಯರ ಮುಂದೆ, ಕೂಡಿಯಾಡಿದೆ ಹಿರಿಯರ ಮುಂದೆ.
ಹಿರಿಯರೆನ್ನವರಾಗಿ ಆಡಲಿಲ್ಲ ನೋಡಲಿಲ್ಲ ಕೂಡಲಿಲ್ಲ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೨೧೩ ||

## ಶರಣನ ಪ್ರಸಾದಿಸ್ಥಲ

೨೧೪

ಫಲ ವೃಕ್ಷ ತರು ಲತೆಗಳೆಲ್ಲ ತಮ್ಮ ಸಲಹಿದವರಾದಿ ಸಕಲರುಗಳಿಗೆ
ವಂಚನೆಯಿಲ್ಲದೀಯುವಂತೆ ನಿಜತನಿರಸವನು,
ಸಮ್ಯಕ್‌ಜ್ಞಾನಗುರುವಿನಿಂದೆ ಜನಿಸಿ ಬೆಳೆದ ಪರಮಸಾವಧಾನಿ ಶರಣನು
ತನ್ನ ಸತ್ತುಚಿತ್ತಾನಂದಸ್ವರೂಪವಾದ ಗುರುಲಿಂಗಜಂಗಮಕ್ಕೆ
ತನುಮನಧನದ ಚಿದ್ರಸಸ್ವಾದವನು ವಂಚನೆವಿರಹಿತನಾಗಿತ್ತು
ಪರಿಣಾಮಿಸಿಕೊಂಡು ಲೀಲಾಲೋಲನಾಗಿರ್ದ ಕಾಣಾ.
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. || ೨೧೪ ||

೨೧೫

ಅತ್ತಲಿತ್ತಲು ತಿರುಗಾಡಿ ಹೊತ್ತುಗಳೆಯದೆ
ನಿತ್ಯಶರಣನ ಮನೆಗೆ ಸುತ್ತಿ ಸುತ್ತಿ ಸುಳಿದು

ಸತ್ತುಹೋಗದ ಕರ್ತಜಂಗಮಲಿಂಗಬಂದರೆ
ಬತ್ತಲೆಬಂದಡಿಗೆರಗಿ ಸತ್ಯಸುಯಿದಾನದ ಪಾಕವ ಗಡಣಿಸಿ
ಎತ್ತಿ ಎಡೆಮಾಡಿದರೆ ತುತ್ತು ಭೋಜ್ಯಾದಿಗಳ ಬತ್ತಿಸಿದಮೇಲೆ
ನಿತ್ಯವಾಗಿ ಸುಖಿಸುವ ನಮ್ಮ ಗುರುನಿರಂಜನ ಚನ್ನಬಸವಲಿಂಗವು
ತಾನೆಯಾಗಿ. || ೨೧೫ ||

೨೧೬

ಮೂರು ಹೊಳಲಕುಳವ ನೋಡಾ !
ವಶಗತವಮಾಡಿ ಆರುಪುರದ ಕುಳವನರಿದು ಮರೆದಲ್ಲಿ
ಕೋಪದ ವರ್ಣವೇನಯ್ಯಾ? ತಾಪದಿಂದ ತೋರುವ ವರ್ಣವೇನಯ್ಯಾ?
ಮೋಹದಿಂದ ಮೂಡುವ ವರ್ಣವೇನಯ್ಯಾ?
ಬೆಳಗ ಮರೆದು ಕತ್ತಲೆಯುಲ್ಲೆಂಬ ಮಿಥ್ಯವೆಂತಯ್ಯಾ?
ಸತ್ಯವರ್ಣ ನಿತ್ಯವಾದಲ್ಲಿ ಮತ್ತೆ ಉಂಟೆ
ಗುರುನಿರಂಜನ ಚನ್ನಬಸವಲಿಂಗಾ ? || ೨೧೬ ||

೨೧೭

ಲಿಂಗನಿಷ್ಪತ್ತಿಗಳಾಚರಣೆಯ ಕಂಡು, ಸಂಗಹೇಯ ಮಾಡದೆ,
ಗುರುಮುಟ್ಟಿ ಗುರುವಾದೆವೆಂದು ಬಿಟ್ಟು, ಹಿಡಿದು ಹಿಡಿದು ಬಿಟ್ಟು,
ಹೊಟ್ಟೆಯ ಹೊರೆಯಲೋಸುಗ ನಂಟುಬಿಚ್ಚಿ ಗಂಟಿಕ್ಕುವ
ತುಂಟು ಹೊಯ್ಮಾಲಿಗಳನೆಂತು ಶರಣರೆನ್ನಬಹುದು ?
ಕಾಸಿನಾಸೆಗೆ ದೇಶವ ತಿರುಗಿ, ಬೇಸರಿಲ್ಲದೆ ಬೇಡಿ ಬೇಡಿ ಘಾಸಿಯಾಗಿ,
ಮುಂದಣ ಹೇಸಿಕೆ ಕಂಡು ಕಂಡು ಬೀಳುವ
ಖೂಳ ಕುಟಿಲ ಕಾಳಮಾನವರನೆಂತು ಶರಣರೆನ್ನಬಹುದು ?
ಬಾಳಿ ಬದುಕಲರಿಯದೆ ಕೇಳಿ ಮೇಳವ ಮಾಡಿ
ಹಾಳುಗೋಷ್ಠಿಯಕಲಿತು, ಕಲಿಯುಪಾಧಿಯೊಳು ನಿಂದು
ನಿಜಭಕ್ತಿ ಸುಜ್ಞಾನ ಪರಮವೈರಾಗ್ಯವನರಿಯದೆ ಹಿರಿಯರೆನಿಸಿಕೊಂಡು,
ಹೋಗಿ ಬಂದುಂಬ ಕುರಿಗಳನೆಂತು ಶರಣರೆನ್ನಬಹುದು ?
ನಮ್ಮ ಗುರುನಿರಂಜನ ಚನ್ನಬಸವಲಿಂಗದಂಗವೆಂಬ ಘನಪ್ರಸಾದವ
ಹಿಂಗದಿರ್ದ ತ್ರಿವಿಧಶೂನ್ಯಶರಣರಂತಲ್ಲದ ಮರುಳುಗಳನೆಂತು
ಶರಣರೆನ್ನಬಹುದು ? || ೨೧೭ ||

೨೧೮

ಪರಶಿವತತ್ವಾನುಭಾವಿ ಶರಣ ಲೋಕದ ಸಂಸಾರಿಗಳಿಗೊಮ್ಮೆ
ಬೇಡವೇಕೆಂಬುದು ಹುಸಿಯದು ತನ್ನಂತರಂಗದಲ್ಲಿ.

ಅದೇನು ಕಾರಣವೆಂದೊಡೆ, ಚತುರ್ವಿಧಪದವನೊದೆದು ನಿಂದಿರ್ದನಾಗಿ.
ಪರವಧುವನೊಮ್ಮೆ ನೋಡಿಯೆಳಸುವನಲ್ಲ ಮನಸ್ಸಿನಲ್ಲಿ ;
ಅದೇನು ಕಾರಣವೆಂದೊಡೆ,
ಮಾಯೆಯ ಸಂಬಂಧವ ಕೊಡಹಿ ಜರಿದು ಹೇಯವಮಾಡಿದನಾಗಿ.
ಪರಹಿಂಸೆಯನೊಮ್ಮೆ ಭಾವದಲ್ಲಿ ಅರಿಯನು ;
ಅದೇನು ಕಾರಣವೆಂದೊಡೆ,
ಸಕಲಭುವನ ಬ್ರಹ್ಮಾಂಡದೊಳ ಹೊರಗು ತಾನೆಯಾಗಿ ತನಗೊಂದೂ
ಇತರವಾದುದಿಲ್ಲವಾಗಿ.
ಸುಕ್ಷೇತ್ರಾದಿ ಸಕಲಸ್ಥಾವರಂಗಳನೊಮ್ಮೆ ಹಿರಿದೆಂದು ಭಾವಿಸನು.
ಅದೇನು ಕಾರಣವೆಂದೊಡೆ,
ಗುರುನಿರಂಜನ ಚನ್ನಬಸವಲಿಂಗಕ್ಕೆ ತನ್ನನರ್ಪಿಸಿ ತಾನಾಗಿರ್ದನಾಗಿ. ॥ ೨೧೮ ॥

೨೧೯

ತಾನೇ ಶಿವನೆಂದು ಅರಿದು ಸತ್ತ ಬಳಿಕ
ನಿತ್ಯಾನಂದ ನಿಜಸುಖಿಯೆಂದಿತ್ತು.
ತಾನೇ ದೇಹಿಯೆಂದು ಮರೆದು ಸತ್ತ ಬಳಿಕ
ಮಿಥ್ಯಾನಂದ ಭವದುಃಖಿಯೆಂದಿತ್ತು.
ತನ್ನ ತಾನರಿಯದೆ ತಾನೆಯೆಂದು
ತನು ಭಾವ-ಮನ-ಪ್ರಾಣಧರ್ಮದಲ್ಲಿರ್ದು ಸತ್ತ ಬಳಿಕ ತ್ರಿದೈವ ಕುಳವೆಂದಿತ್ತು.
ತನುಭಾವನಾಗಿ ಮಹಾನುಭಾವ ಶಿವನ ಘನವಾಗಿ ಪೂಜಿಸಿ ತನುವಳಿದ ಬಳಿಕ
ದೇವಾದಿ ಮನುಜಾಂತ್ಯ ಪದದೊಳೊಂದುಂಟು ಮೂಲಕ್ಕೆಂದಿತ್ತು
ಗುರುನಿರಂಜನ ಚನ್ನಬಸವಲಿಂಗದಲ್ಲಿ ಶಿವಶರಣರ ವಾಕ್ಯ. ॥ ೨೧೯ ॥

೨೨೦

ಚಿದ್ಘನಪ್ರಸಾದಕ್ಕಂಗವಾದ ಚಿನ್ಮಯ ಶರಣರ ಘನವನರಿಯದೆ,
ನಾವು ಫಲಪದಕ್ಕೆಳಸದ ಸದಮಲ ದಾಸೋಹಿಗಳೆಂದು,
ಮದನಾರಿಯ ವೇಷವ ಧರಿಸಿ,
ಇತರ ಇಂಗಿತವನರಿಯದೆ ಹದುರ ಚೆದುರಿನಿಂದೆ ಮದಮಾನವರ
ಹೃದಯಕರಗಿಸಿ,
ಸಹಜ ನಿರೂಪಾಧಿಗಳುಳಿದು ದುರ್ಪುಪಾಧಿಯೊಳು ನಿಂದು
ಭಕ್ತ ಮಹೇಶ್ವರರುಗಳಿಗೆ ಮಾಡುವೆನೆಂದು ಭೂತಜನಕಿಕ್ಕಿ
ಲೆಕ್ಕವ ಹೇಳಿ ಅಕ್ಕರೆಯಿಂದೆ ಮುಕ್ಕಣ್ಣನ ಪದವೆಮಗೆಂದು ಹೆಚ್ಚುಗೆವಡೆದು

ಒಕ್ಕಲು ಸಹಿತ ಉದರ ಹೊರೆವ
ಮುಕ್ಕ ಭಂಗಿತರಿಗಿಕ್ಕಿದ ಭಾವತೊಡರು ಸಹಜವೆಂದು
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣರು ಗಹಗಹಿಸಿ ಮಿಕ್ಕಿ ನಿಂದರು. ॥ ೭೨೦ ॥

೭೨೧

ಅಂಗ ಮನ ಪ್ರಾಣವನರಿಯದೆ ತನ್ನನಿತ್ತ
ಸತ್ಯಶರಣರ ಕಳವಳಿಕೆಗೆ ಸಮವೆಂದು ಬೀರಿಕೊಳ್ಳುವ
ಕಕ್ಕುಲಾತಿ ಡಂಭಕವೇಷಧಾರಿಗಳು ತಮ್ಮನರಿಯದೆ
ತಾವು ಗುರುಲಿಂಗಜಂಗಮಕೊಕ್ಕುಮಿಕ್ಕಿ
ಯೋಗ್ಯವೆಂಬ ಅಯೋಗ್ಯ ನುಡಿಗಳನೇನೆಂಬೆನಯ್ಯಾ ?
ಆ ಗುರುಲಿಂಗಜಂಗಮವು ಬಂದಲ್ಲಿ
ಅರ್ಥ ಪ್ರಾಣ ಅಭಿಮಾನವಿಡಿದು ವಂಚನೆಯೊಳು ನಿಂದು
ಮಾಡಿ ನೀಡಿ ಕಳುಹುವ ತ್ರಿವಿಧಗುರುದ್ರೋಹಿಗಳಿಗೆ
ಸತ್ಕ್ರಿಯಾಚಾರವೆಲ್ಲಿಹದೊ !
ಸತ್ಕ್ರಿಯಾಚಾರವಿಲ್ಲದ ತ್ರಿವಿಧಲಿಂಗದ್ರೋಹಿಗಳಿಗೆ
ಸುಜ್ಞಾನ ಆಚಾರವೆಲ್ಲಿಹದೊ !
ಸುಜ್ಞಾನ ಆಚಾರವಿಲ್ಲದ ತ್ರಿವಿಧಜಂಗಮದ್ರೋಹಿಗಳಿಗೆ
ಸಮರಸಭಾವಾಚಾರವೆಲ್ಲಿಹದೊ !
ಸಮರಸಭಾವಾಚಾರವಿಲ್ಲದ ತ್ರಿವಿಧಪ್ರಸಾದದ್ರೋಹಿಗಳಿಗೆ
ಗುರುನಿರಂಜನ ಚನ್ನಬಸವಲಿಂಗವಾದ ನಿಜಪದವೆಲ್ಲಿಹದೊ ! ॥ ೭೨೧ ॥

೭೨೨

ಉಚ್ಛಿಷ್ಟವ ಕಳೆದುಳಿದು ಪದಾರ್ಥ ಪ್ರಸಾದವಾಗಿ ನಿಂದಲ್ಲಿ
ಅಂಗವೆನ್ನೆ ಲಿಂಗವೆನ್ನೆ ಹಸ್ತವೆನ್ನೆ ಮುಖವೆನ್ನೆ ಶಕ್ತಿಯೆನ್ನೆ ಭಕ್ತಿಯೆನ್ನೆ
ಅಷ್ಟಾವಧಾನವಿಲ್ಲದೆ ಗುರುನಿರಂಜನ ಚನ್ನಬಸವಲಿಂಗಕ್ಕಂಗವಾಗಿ
ಓಂಗಿನುಡಿವ ಶಬ್ದಕ್ಕೆ ಇಂಬುಗಾಣೆ ನೋಡಾ. ॥ ೭೨೨ ॥

೭೨೩

ಕುಲಮದ ಶೂನ್ಯನೆಂಬೆ ಹುಟ್ಟುಗೆಟ್ಟಿರ್ದನಾಗಿ.
ಛಲಮದ ಶೂನ್ಯನೆಂಬೆ ದ್ವೈತಗೆಟ್ಟಿರ್ದನಾಗಿ.
ಧನಮದ ಶೂನ್ಯನೆಂಬೆ ಕರಣಪ್ರಕೃತಿ ನಷ್ಟವಾಗಿರ್ದನಾಗಿ.
ರೂಪಮದ ಶೂನ್ಯನೆಂಬೆ ದೇಹಭಾವವಳಿದಿರ್ದನಾಗಿ.

ಯವ್ವನಮದ ಶೂನ್ಯನೆಂಬೆ ಕಾಮನ ಕಳೆಯಳಿದುಳಿದಿರ್ದನಾಗಿ,
ವಿದ್ಯಾಮದ ಶೂನ್ಯನೆಂಬೆ ನಿಜಭಕ್ತಿ ಸುಜ್ಞಾನ
ಪರಮವೈರಾಗ್ಯವೇ ಸ್ವಯಮಾಗಿರ್ದನಾಗಿ,
ರಾಜಮದ ಶೂನ್ಯನೆಂಬೆ ಚಿದ್ಘನಲಿಂಗಕ್ಕೆ ಚಿತ್ತವನರ್ಪಿಸಿರ್ದನಾಗಿ,
ತಪಮದ ಶೂನ್ಯನೆಂಬೆ ತ್ರಿಪುಟಿಗತೀತ
ಗುರುನಿರಂಜನ ಚನ್ನಬಸವಲಿಂಗವಾಗಿರ್ದನಾಗಿ. || ೭೨೩ ||

೭೨೪

ಅಯ್ಯಾ, ನಿಮ್ಮ ಶರಣ ಜನನಸೂತಕವನರಿಯನಯ್ಯಾ ;
ಅದೇನು ಕಾರಣವೆಂದೊಡೆ, ಗುರುವಿನ ಕರಪದ್ಮದಲ್ಲಿ ಜನಿಸಿಬಂದವನಾಗಿ.
ಅಯ್ಯಾ, ನಿಮ್ಮ ಶರಣ ಜಾತಿಸೂತಕವನರಿಯನಯ್ಯಾ ;
ಅದೇನು ಕಾರಣವೆಂದೊಡೆ, ಅನಾದಿಸಂಸಿದ್ಧನಿರಂಜನ ಶಿವಾಂಶಿಕ ತಾನಾಗಿ.
ಅಯ್ಯಾ, ನಿಮ್ಮ ಶರಣ ರಜಸೂತಕವನರಿಯನಯ್ಯಾ ;
ಅದೇನು ಕಾರಣವೆಂದೊಡೆ, ಮಂತ್ರಮೂರುತಿ ಪರಮಪವಿತ್ರ ತಾನಾಗಿ.
ಅಯ್ಯಾ, ನಿಮ್ಮ ಶರಣ ಉಚ್ಛಿಷ್ಟ ಸೂತಕವನರಿಯನಯ್ಯಾ ;
ಅದೇನು ಕಾರಣವೆಂದೊಡೆ, ಚರಣಜಲಶೇಷಸುಖಮಯನಾಗಿ.
ಅಯ್ಯಾ, ನಿಮ್ಮ ಶರಣ ಪ್ರೇತಸೂತಕವನರಿಯನಯ್ಯಾ ;
ಅದೇನು ಕಾರಣವೆಂದೊಡೆ,
ಗುರುನಿರಂಜನ ಚನ್ನಬಸವಲಿಂಗದಲ್ಲಿ ಲೀನವಾಗಿರ್ದನಾಗಿ. || ೭೨೪ ||

೭೨೫

ಆದಿ ಮಧ್ಯ ಅವಸಾನವನರಿದು ಅಪ್ರತಿಮಲಿಂಗಸನ್ನಿಹಿತನಾದ ಶರಣ
ಒಳಗೆಂಬ ಕಳವಳವನರಿಯ.
ಪಂಚಾಚಾರಸ್ವರೂಪ ಕಂಗಳು ಹಿಂಗದಿರ್ದುದಾಗಿ
ಹೊರಗೆಂಬ ಸಟೆಭಾವ ದಿಟವಿಲ್ಲ.
ಪ್ರಾಣಲಿಂಗವೇದಿ ಪರಿಪೂರ್ಣ ತಾನಾಗಿ
ಕಂಡರ್ಪಿಸಿಕೊಂಡು ಸುಖಿಸಬೇಕೆಂಬ ಸಂಕಲ್ಪ ಸಂವಿತ್ತನಲ್ಲ.
ಗುರುನಿರಂಜನ ಚನ್ನಬಸವಲಿಂಗವೆಂಬ ಅಖಂಡಪ್ರಸಾದಕ್ಕೆ
ಅಂಗವಾಗಿರ್ದ ಅನುಪಮಪ್ರಸಾದಿ ಶರಣ. || ೭೨೫ ||

೭೨೬

ಅಯ್ಯಾ, ಗುರುಪ್ರಸಾದವ ಕೈಯೊಡ್ಡಿ ಬೇಡುವರು ಶಿಷ್ಯರು.
ಲಿಂಗಪ್ರಸಾದವ ಕೈಯೊಡ್ಡಿ ಬೇಡುವರು ಭಕ್ತರು.

ಜಂಗಮಪ್ರಸಾದವ ಕೈಯೊಡ್ಡಿ ಬೇಡುವರು ಶರಣಸ್ಥಲವುಳ್ಳವರು.
ಇದು ಕಾರಣ, ಗುರುನಿರಂಜನ ಚನ್ನಬಸವಲಿಂಗಕ್ಕಂಗವಾಗಿರ್ದ ಶರಣ
ಗುರುಲಿಂಗಜಂಗಮಕ್ಕೆ ಕೈಯೊಡ್ಡಿ ಬೇಡಲಿಲ್ಲ ಕಾಣಾ. || ೭೨೬ ||

೭೨೭

ಅಯ್ಯಾ, ನಾನು ಗುರುಭಕ್ತಿಯ ಮಾಡುವನಲ್ಲ.
ನಾನು ಲಿಂಗಭಕ್ತಿಯ ಮಾಡುವನಲ್ಲ.
ನಾನು ಜಂಗಮಭಕ್ತಿಯ ಮಾಡುವನಲ್ಲ.
ನಾನು ಪ್ರಸಾದಭಕ್ತಿಯ ಮಾಡುವನಲ್ಲ.
ನಾನು ಚತುರ್ವಿಧಸಾರಾಯ ಪ್ರಸಾದಕಾಣದ
ಗುರುನಿರಂಜನ ಚನ್ನಬಸವಲಿಂಗ
ಪ್ರಸಾದಕ್ಕಂಗವಾಗಿ ಅರಿಯದಿರ್ದೆ ಕಾಣಾ. || ೭೨೭ ||

೭೨೮

ಅಯ್ಯಾ, ಕೈಯೊಡ್ಡಿ ಬೇಡುವದು ಸ್ಥಲವಲ್ಲ : ಕೈಯೆತ್ತಿಕ್ಕುವದು ಸ್ಥಲವಲ್ಲ.
ಮತ್ತೆಂತೆಂದೊಡೆ, ಗೋದಿ ತೊಗರಿ ಬರಗು ಅಗಸೆ ಚೆನ್ನಂಗಿಬೇಳೆ ಕಡ್ಲೆ ಬೇಳೆ
ಬೆಲ್ಲ ಹುಣಸಿಹಣ್ಣು ಮಧು-ಇಂತು ಇವಂ ನಿರ್ಮಳವಾಗಿ ಪಾಕವಮಾಡಿ
ಗುರುವನರಿದಿತ್ತುಕೊಂಬುದೇ ಶುದ್ಧಪ್ರಸಾದ.
ಅಕ್ಕಿ ಕುಸುಬೆ ಬಿಳಿಯೆಳ್ಳು ಬೀಳಿಜೋಳ
ಸಾಸಿವೆ ಹಾಲು ಮೊಸರು ಲವಣ ಹೆತ್ತುಪ್ಪ ಶುಂಠಿ
ಇಂತು ಇವಂ ನಿರ್ಮಳವಾಗಿ ಪಾಕವಮಾಡಿ
ಲಿಂಗವನರಿದಿತ್ತುಕೊಂಬುದೇ ಸಿದ್ಧಪ್ರಸಾದ.
ಉದ್ದು ಸಾವೆ ವಟಾಣೆ ಸಜ್ಜೆ ಕರಿಕಡ್ಲೆ ತೈಲ ಮೆಣಸು ಲಾವಂಗ
ಇಂತು ಇವಂ ನಿರ್ಮಳವಾಗಿ ಪಾಕವಮಾಡಿ
ಜಂಗಮವನರಿದಿತ್ತುಕೊಂಬುದೇ ಪ್ರಸಿದ್ಧಪ್ರಸಾದ.
ಈ ಸೈದಾನದೊಳಗಿಪ್ಪ ಸಕಲವನರಿದು ನಿರ್ಮಲ ಪಾಕವಮಾಡಿ
ನಿಜಗುರುನಿರಂಜನ ಚನ್ನಬಸವಲಿಂಗವನರಿದಿತ್ತುಕೊಂಬ
ಮಹಾಪ್ರಸಾದಿಯೇ ಶರಣ ಕಾಣಾ. || ೭೨೮ ||

೭೨೯

ಅಯ್ಯಾ, ಎನ್ನ ಕಾಯದ ಕರಸ್ಥಲದಲ್ಲಿ ಬಸವಣ್ಣನ ಪ್ರಸಾದವ ಕಂಡೆ.
ಅಯ್ಯಾ, ಎನ್ನ ಮನದ ಕರಸ್ಥಲದಲ್ಲಿ ಚನ್ನಬಸವಣ್ಣನ ಪ್ರಸಾದವ ಕಂಡೆ.
ಅಯ್ಯಾ, ಎನ್ನ ಭಾವದ ಕರಸ್ಥಲದಲ್ಲಿ ಪ್ರಭುದೇವರ ಪ್ರಸಾದವ ಕಂಡೆ.

ಅಯ್ಯಾ, ಎನ್ನ ಸರ್ವಾಂಗದಲ್ಲಿ ಈ ತ್ರಿವಿಧ ಪ್ರಸಾದದ ಪರಿಣಾಮದಲ್ಲಿ
ಓಲಾಡುತಿರ್ದೆನು ಗುರುನಿರಂಜನ ಚನ್ನಬಸವಲಿಂಗಾ. ॥ ೭೨೯ ॥

೭೩೦

ಕಲ್ಯಾಣವೆಂಬ ಪಟ್ಟಣದಲ್ಲಿ ಅಸಖ್ಯಾಂತ
ಮಹಾಗಣಂಗಳಿಗಾಶ್ರಯಸ್ಥಾನವಾದ
ತ್ರಿಪುರಾಂತಕೇಶ್ವರನ ಆಲಯ.
ಅಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ
ಜಂಗಮಾರಾಧನೆ ನಿತ್ಯವಾಗಿ ಒಪ್ಪುತಿಪ್ಪುದು.
ಬಸವಣ್ಣನ ಮನೆಯಲ್ಲಿ ಎರಡು ಲಕ್ಷ ನಾಲ್ಕುಸಾವಿರ
ಪರಿಪೂರ್ಣಾರಾಧನೆ ನಿತ್ಯವಾಗಿಪ್ಪುದು.
ಮಡಿವಾಳಯ್ಯನ ಆಲಯದಲ್ಲಿ
ಮೂರು ಲಕ್ಷ ಒಂದು ಸಾವಿರ ಮಹಾರಾಧನೆ ನಿತ್ಯವಾಗಿಪ್ಪುದು.
ಮರುಳುಶಂಕರದೇವರಾಲಯದಲ್ಲಿ
ನಾಲ್ಕುಲಕ್ಷನೂರು ಆರಾಧನೆ ನಿತ್ಯವಾಗಿಪ್ಪುದು.
ಸಿದ್ಧರಾಮದೇವರಾಲಯದಲ್ಲಿ ಐದುಲಕ್ಷನೂರಾರಾಧನೆ ನಿತ್ಯವಾಗಿಪ್ಪುದು.
ಉರಿಲಿಂಗಪೆದ್ದಣ್ಣಗಳಾಲಯದಲ್ಲಿ ಆರುಲಕ್ಷನೂರಾರಾಧನೆ ನಿತ್ಯವಾಗಿಪ್ಪುದು.
ಘಟ್ಟಿವಾಳಯ್ಯಗಳಾಲಯದಲ್ಲಿ ಇಂತೀ ಘನದಾಸೋಹದ
ಮಹದಾನಂದಮುಳುಮೆಯಾದ ಶೇಷಪ್ರಸಾದವನುಂಡು
ಸುಖಿಸಿ ಪರಮಪರಿಣಾಮಿಯಾಗಿರ್ದೆನು
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೭೩೦

೭೩೧

ನೀಲಲೋಚನೆಯಮ್ಮನವರ ಮನೆಯಲ್ಲಿ ನಿರ್ಮಲಪ್ರಸಾದವ ಕಂಡು
ನಿತ್ಯ ಸೇವಿಸಿ ಸುಖಾನಂದಸುಗ್ಗಿಯೊಳೋಲಾಡುತಿರ್ದೆನು.
ನಾಗಲಾಂಬಿಕೆಯವರ ಮನೆಯಲ್ಲಿ ಚಿತ್ಕಲಾಪ್ರಸಾದವ ಕಂಡು
ನಿತ್ಯ ಸೇವಿಸಿ ಸುಖಾನಂದಸುಗ್ಗಿಯೊಳೋಲಾಡುತಿರ್ದೆನು.
ಅಕ್ಕಮಹಾದೇವಿಯವರ ಮನೆಯಲ್ಲಿ ನಿರಂಜನಪ್ರಸಾದವ ಕಂಡು
ನಿತ್ಯ ಸೇವಿಸಿ ಸುಖಾನಂದಸುಗ್ಗಿಯೊಳೋಲಾಡುತಿರ್ದೆನು.
ಮುಕ್ತಾಯಕ್ಕಳ ಮನೆಯಲ್ಲಿ ನಿರವಯ ಸಂವಿತ್ಪ್ರಭಾನಂದಪ್ರಸಾದವ ಕಂಡು
ನಿತ್ಯ ಸೇವಿಸಿ ಗುರುನಿರಂಜನ ಚನ್ನಬಸವಲಿಂಗದಲ್ಲಿ
ಸುಖಾನಂದಸುಗ್ಗಿಯೊಳೋಲಾಡುತಿರ್ದೆನು. ॥ ೭೩೧ ॥

೭೩೨

ಅಯ್ಯಾ, ಎನ್ನ ಮಂದಿರದಲ್ಲಿ ಬಸವಣ್ಣನ ಮಹಾನುಭಾವಪ್ರಸಾದವನು
ಕೂಡೆಸುಖಿಸಿದ ಪರಿಣಾಮವನೇನೆಂದುಪಮಿಸುವೆನಯ್ಯಾ !
ಎನ್ನ ಮಂದಿರದಲ್ಲಿ ಮಡಿವಾಳಯ್ಯನ ಚಿದ್ರಸಪ್ರಸಾದವನು
ಕೂಡೆಸುಖಿಸಿದ ಪರಿಣಾಮವನೇನೆಂದುಪಮಿಸುವೆನಯ್ಯಾ !
ಎನ್ನ ಮಂದಿರದಲ್ಲಿ ಚನ್ನಬಸವಣ್ಣನ ಚಿದ್ರೂಪಪ್ರಸಾದವನು
ಕೂಡೆಸುಖಿಸಿದ ಪರಿಣಾಮವನೇನೆಂದುಪಮಿಸುವೆನಯ್ಯಾ !
ಎನ್ನ ಮಂದಿರದಲ್ಲಿ ಸಿದ್ಧರಾಮಯ್ಯನ ಚಿತ್ಕಲಾಸೋಂಕಿನ ಶುದ್ಧಪ್ರಸಾದವನು
ಕೂಡೆಸುಖಿಸಿದ ಪರಿಣಾಮವನೇನೆಂದುಪಮಿಸುವೆನಯ್ಯಾ !
ಎನ್ನ ಮಂದಿರದಲ್ಲಿ ಪ್ರಭುದೇವರ ಚಿದಾನಂದಪ್ರಸಾದವನು
ಕೂಡೆಸುಖಿಸಿದ ಪರಿಣಾಮವನೇನೆಂದುಪಮಿಸುವೆನಯ್ಯಾ !
ಎನ್ನ ಮಂದಿರದಲ್ಲಿ ಅಜಗಣ್ಣನ ಮಹದಾನಂದಪ್ರಸಾದವನು
ಕೂಡೆಸುಖಿಸಿದ ಪರಿಣಾಮವನೇನೆಂದುಪಮಿಸುವೆನಯ್ಯಾ !
ಅಯ್ಯಾ, ಗುರುನಿರಂಜನ ಚನ್ನಬಸವಲಿಂಗಾ
ಎನ್ನ ಮಂದಿರದಲ್ಲಿ ತೆರಹಿಲ್ಲದೆ ಇಪ್ಪ
ಅಸಂಖ್ಯಾತ ಮಹಾ ಪ್ರಮಥಗಣಂಗಳ ಅನುಪಮ ಪ್ರಸಾದವನು
ಕೂಡೆಸನ್ನಿಹಿತಸುಖಿಸಿದ ಪರಿಣಾಮವನೇನೆಂದುಪಮಿಸುವೆನಯ್ಯಾ ! ॥ ೭೩೨ ॥

೭೩೩

ಗುರುಪ್ರಸಾದವನು ಪಡೆವೆನೆ ಎನಗಂಗವಿಲ್ಲ ಕಾಣಾ !
ಲಿಂಗಪ್ರಸಾದವ ಪಡೆವೆನೆ ಎನಗೆ ಮನವಿಲ್ಲ ಕಾಣಾ !
ಜಂಗಮಪ್ರಸಾದವ ಪಡೆವೆನೆ ಎನಗೆ ಪ್ರಾಣವಿಲ್ಲ ಕಾಣಾ !
ಗುರುನಿರಂಜನ ಚನ್ನಬಸವಲಿಂಗಾ
ನೀವೆನ್ನಂಗ ಮನ ಪ್ರಾಣವಾಗಿ
ತೆರಹಿಲ್ಲದಿರ್ಪ ಪರಮಸುಖಪ್ರಸಾದದೊಳೋಲಾಡುತಿರ್ದೆನು ಕಾಣಾ. ॥೭೩೩॥

೭೩೪

ಪ್ರಸಾದವ ಬಲ್ಲವರಾರು, ಪದಾರ್ಥವ ಬಲ್ಲವರಾರು,
ಪ್ರಸಾದಿಯ ಬಲ್ಲವರಾರು ಹೇಳಾ !
ಪದಾರ್ಥವನಗಲಿ ಪ್ರಸಾದಿಯಿಲ್ಲ, ಪ್ರಸಾದಿಯನಗಲಿ ಪ್ರಸಾದವಿಲ್ಲ,
ಈ ಭೇದವನರಿದಾನಂದಸುಖಮಯವಾಗಲರಿಯದೆ,
ಪದಾರ್ಥವ ರೂಪಿಸಿ ಪ್ರಸಾದವ ರೂಪಿಸಿ

ಪ್ರಸಾದಿಯೆಂದು ಭಿನ್ನವಿಟ್ಟು ಬೇರೆ ರೂಹುಳ್ಳನ್ನಕ್ಕರ
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ನಿಜಪ್ರಸಾದವನಾರು ಬಲ್ಲರು ಹೇಳಾ. ॥ ೨೩೪ ॥

೨೩೫

ಕಾಯವುಳ್ಳನ್ನಕ್ಕರ ಲಿಂಗವೆಂಬೆ,
ಪ್ರಾಣವುಳ್ಳನ್ನಕ್ಕರ ಜಂಗಮವೆಂಬೆ,
ಭಾವವುಳ್ಳನ್ನಕ್ಕರ ಪ್ರಸಾದವೆಂಬೆ,
ಕಾಯ ಪ್ರಾಣ ಭಾವ ಮನಗೂಡಿ ಮಗ್ನವಾದಲ್ಲಿ
ಮಹಾಘನ ಗುರುನಿರಂಜನ ಚನ್ನಬಸವಲಿಂಗವೆಯಾಗಿ
ಹಿಂಗಿಯರಿಯದಿರ್ದನು ಕಾಣಾ. ॥ ೨೩೫ ॥

೨೩೬

ಭೂತಪಂಚಕದ ಭಾವ, ಇಂದ್ರಿಯಪಂಚಕದ ಭಾವ,
ವಿಷಯಪಂಚಕದ ಭಾವ, ಕರಣಪಂಚಕದ ಭಾವ,
ವಾಯುಪಂಚಕದ ಭಾವವುಳ್ಳನ್ನಕ್ಕರ ಭಾವನಿರಾಮಯ ಶರಣ ತಾನೇ
ಗುರುನಿರಂಜನ ಚನ್ನಬಸವ ಲಿಂಗಾಂಗಸುಖಿ. ॥ ೨೩೬ ॥

೨೩೭

ಅಂಗದಲ್ಲಿ ಆಚಾರಲಿಂಗಪ್ರಸಾದ ತಾನೆ,
ಆತ್ಮನಲ್ಲಿ ಗುರುಲಿಂಗಪ್ರಸಾದ ತಾನೆ,
ಪ್ರಾಣನಲ್ಲಿ ಶಿವಲಿಂಗಪ್ರಸಾದ ತಾನೆ,
ಕರಣಂಗಳಲ್ಲಿ ಜಂಗಮಲಿಂಗಪ್ರಸಾದ ತಾನೆ,
ವಿಷಯಂಗಳಲ್ಲಿ ಪ್ರಸಾದಲಿಂಗಪ್ರಸಾದ ತಾನೆ,
ತೃಪ್ತಿಯಲ್ಲಿ ಮಹಾಲಿಂಗಪ್ರಸಾದ ತಾನೆ,
ಸ್ಥೂಲಾಂಗದಲ್ಲಿ ನಿಷ್ಕಲಲಿಂಗಪ್ರಸಾದ ತಾನೆ,
ಸೂಕ್ಷ್ಮಾಂಗದಲ್ಲಿ ಶೂನ್ಯಲಿಂಗಪ್ರಸಾದ ತಾನೆ,
ಕಾರಣಾಂಗದಲ್ಲಿ ನಿರಂಜನಲಿಂಗಪ್ರಸಾದ ತಾನೆ,
ಎನ್ನ ಒಳಹೊರಗೆ ತೆರಹಿಲ್ಲದೆ ಪರಿಪೂರ್ಣವಾಗಿಪ್ಪ
ಗುರುನಿರಂಜನ ಚನ್ನಬಸವಲಿಂಗಪ್ರಸಾದ ತಾನೆ. ॥ ೨೩೭ ॥

೨೩೮

ಅವ್ವಾ, ಬನ್ನಿರೆ ಚಿಕ್ಕ ಚಿಕ್ಕ ಚಿಕ್ಕ ಚಿಕ್ಕ ಮಕ್ಕಳೆಲ್ಲ
ನಮ್ಮಕ್ಕನ ಮನೆಯಲೊಕ್ಕುದನುಂಬುವ.

ಬನ್ನಿರೆ ಎಮ್ಮ ಸುಚಿತ್ತ ಕೈಯ ಪಿಡಿದು ನಿಂದ ನಲ್ಲನ
ಸುಗಂಧಭಾಜನದಲ್ಲಿ ಕೂಡಿ ಉಂಬುವ.
ಬನ್ನಿರೆ ಎಮ್ಮ ಸುಬುದ್ಧಿಯ ಕೈಯ ಪಿಡಿದು ಬಂದ ನಲ್ಲನ
ಸುರಸಭಾಜನದಲ್ಲಿ ಕೂಡಿ ಉಂಬುವ.
ಬನ್ನಿರೆ ಎಮ್ಮ ನಿರಹಂಕಾರ ಕೈಯ ಪಿಡಿದು ಬಂದ ನಲ್ಲನ
ಸುರೂಪಭಾಜನದಲ್ಲಿ ಕೂಡಿ ಉಂಬುವ.
ಬನ್ನಿರೆ ಎಮ್ಮ ಸುಮನ ಕೈಯ ಪಿಡಿದು ಬಂದ ನಲ್ಲನ
ಸುಸ್ಪರ್ಶನಭಾಜನದಲ್ಲಿ ಕೂಡಿ ಉಂಬುವ.
ಬನ್ನಿರೆ ಎಮ್ಮ ಸುಜ್ಞಾನ ಕೈಯ ಪಿಡಿದು ಬಂದ ನಲ್ಲನ
ಸುಶಬ್ದಭಾಜನದಲ್ಲಿ ಕೂಡಿ ಉಂಬುವ.
ಬನ್ನಿರೆ ಎಮ್ಮ ಸದ್ಭಾವ ಕೈಯ ಪಿಡಿದು ಬಂದ ನಲ್ಲನ
ಸುತೃಪ್ತಿಭಾಜನದಲ್ಲಿ ಕೂಡಿ ಉಂಬುವ.
ಬನ್ನಿರೆ ಎಮ್ಮ ಕೈಗಳಿಂದೆ ಗುರುನಿರಂಜನ ಚನ್ನಬಸವಲಿಂಗವ
ಬಿಡದೆ ಕೂಡಿ ಉಂಬುವ ಸುಖವ ಹೇಳುವರೆ ತೆರಹಿಲ್ಲ ಕಾಣಿರಮ್ಮಾ. ॥ ೭೩೮॥

೭೩೯

ಕೋಳಿಯಕೂಗಿನಲ್ಲಿ ಹುಟ್ಟಿದ ಬೆಕ್ಕು ಹಾಲುಕುಡಿದುದ ಕಂಡೆ.
ಇರುವೆಯ ಒಡಲೊಳಗೆ ಮೂರುಲೋಕದವರು ಮರೆದುನಿಂದರು.
ನಡುಮನೆಯ ಪಂಜರದೊಳಗಿರ್ದ ಹಕ್ಕಿಯ ಪಕ್ಕವ ಮುರಿದು
ಪಂಜರವನುಳಿದು,
ಚಂದ್ರನ ಕೂಡಿ ಇರುವೆಯ ನುಂಗಲು
ಮಂಗಲಮಯ ಮೂರುತಿ ತಾನೆ ಗುರುನಿರಂಜನ ಚನ್ನಬಸವಲಿಂಗ. ॥ ೭೩೯ ॥

೭೪೦

ಅಕ್ಕತಂಗಿಯರ ಚಕ್ಕಂದ ಹೊಕ್ಕಿತೆನ್ನ ಒಡಲೊಳಗೆ.
ಸಕ್ಕರೆ ಹಾಲು ಸಮರಸವನಿಟ್ಟು ಕಂಡವರಳವೆ ಧರೆಯೊಳಗೆ ?
ಚೆದುರ ಹದುರಿನ ಸೊಬಗು ಸದನವುಳ್ಳನ್ನಕ್ಕರ ಸವೆಯದು.
ಮುದದಿನೋಡುವೆ ಮಹಾಘನದೊಳು ನಿಂದು ಸವಿಸವಿಯ
ಗುರುನಿರಂಜನ ಚನ್ನಬಸವಲಿಂಗವನರಿಯದೆ. ॥ ೭೪೦ ॥

೭೪೧

ಸತ್ತಹೆಣನೆದ್ದು ನೆತ್ತಿಗಣ್ಣಲೆ ಸುತ್ತಲಿಕ್ಕಿನೋಡಿದರೆ
ಮತ್ತೊಬ್ಬರನು ಕಾಣಮು ನೋಡಾ.

ತಾಯಿಮಕ್ಕಳ ಬಾಳುವೆ ಉಳಿಯಿತ್ತು ಮೂವರಿಗೆ.
ನಾರಿಯರ ಕೈವಿಡಿದು ಮನೆಮನೆಯೊಳುಂಡು ಮೀರಿನಿಂದನು
ಗುರುನಿರಂಜನ ಚನ್ನಬಸವಲಿಂಗ ತಾನಾಗಿ. ॥ ೭೪೧ ॥

೭೪೨

ಹೆಳವರೈವರ ತಲೆಯಲ್ಲಿ ಹಾಲು ಸಕ್ಕರೆ ಕೂಡಿ
ಕುಡಿಯಬಲ್ಲ ಕುಲಜನೇ ಶರಣ ತಾನೇ
ಗುರುನಿರಂಜನ ಚನ್ನಬಸವಲಿಂಗವು. ॥ ೭೪೨ ॥

## ಶರಣನ ಪ್ರಾಣಲಿಂಗಿಸ್ಥಲ

೭೪೩

ಕೋಣನ ನೆರಳಲ್ಲಡಗಿರ್ದ ಕೋಳಿಯೆದ್ದು ಕೂಗಿತ್ತು.
ಸತ್ತವರೆದ್ದು ನಿತ್ಯಕ್ಕೆ ನಡೆದರೆ ಕೆರೆ ಬತ್ತಿ ಉರಿದವು ಮೂರುಲೋಕವೆಲ್ಲ.
ಕೋಳಿ ಕೋಣನ ನುಂಗಿ ಬೋಳುಕುಮ್ಮಟವ ಹೊಗಲು
ಸಾಲುಮನೆಯ ಸೌರಭದ ಬೆಳಗು ಸಮರಸವನ್ನೈದಿ
ಸಹಜವಾಗಿರ್ದ ಶರಣ ಗುರುನಿರಂಜನ ಚನ್ನಬಸವಲಿಂಗವಾಗಿ. ॥ ೭೪೩ ॥

೭೪೪

ಮೂರುಕಾಲ ಮಣೆಯನೇರಿ
ಹತ್ತಿಯನರೆವ ಹೆಂಗಳೆಯ ಚಿತ್ತ ಕಾಲವಿಡಿದು,
ಕಾಳವಿಸರ್ಜಿಸಿ ಅರಳೆಯ ತನ್ನತ್ತಲೆಳಹುವದು.
ಕ್ರಿಯಾಪಾದ ಜ್ಞಾನಪಾದ ಚರ್ಯಾಪಾದವೆಂಬ
ಪಾದತ್ರಯದಮೇಲಿರ್ದ ಶರಣನ ಚಿತ್ತ,
ಸೂಕ್ಷ್ಮಸುವಿಚಾರವಿಡಿದು ಕರಣೇಂದ್ರಿಯ
ವಿಷಯಕಾರಿಣ್ಯ ಪ್ರಕೃತಿಯ ದೂಡುತ್ತ
ಸ್ವಚ್ಛ ಸೂಕ್ಷ್ಮತರಭಾವವೇದಿ ಮಹಾಘನ ಪ್ರಕಾಶವ ನೆರೆಯಲೆಳಹುವುದು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೭೪೪ ॥

೭೪೫

ಮದುವೆಯ ಪತ್ನಿಯ ಕಿರಿಚಿನ್ನ ಬೆಳಗುಪತಿಯನಾವರಿಸಲು,
ಪತಿಯ ಪಿರಿದುನ್ನತಿಯ ಬೆಳಗು ಸತಿಯನಾವರಿಸಲು,
ಸತಿಪತಿಯ ಬೆಳಗು ಹಿತಗಲಿತ ಬಳಿಕ ದ್ವೈತಕಿಟ್ಟರಿವರಿಗಸಾಧ್ಯ
ಗುರುನಿರಂಜನ ಚನ್ನಬಸವಲಿಂಗದ್ವೈತವನು. ॥ ೭೪೫ ॥

೭೪೬

ಕಾಯವುಳ್ಳನ್ನಕ್ಕರ ಭಕ್ತಿಯ ಬೆಳಗನರಿವೆ,
ಕರಣವುಳ್ಳನಕ್ಕರ ಪೂಜೆಯ ಬೆಳಗನರಿವೆ,
ಪ್ರಾಣವುಳ್ಳನ್ನಕ್ಕರ ಸ್ವರೂಪದ ಬೆಳಗನರಿವೆ.
ಭಾವವುಳ್ಳನ್ನಕ್ಕರ ಮಹಾನುಭಾವಯೋಗದ ಬೆಳಗನರಿವೆ.
ನಾನುಳ್ಳನ್ನಕ್ಕರ ಗುರುನಿರಂಜನ ಚನ್ನಬಸವಲಿಂಗಕ್ಕೆ
ಸತಿಭಾವದಿಂದೆ ಸಂಗಬೆಳಗನರಿವೆ. ॥ ೭೪೬ ॥

೭೪೭

ಅಯ್ಯಾ, ಎನ್ನ ಕಾಯದಗತಿಯಿಂದೆ
ನಿನ್ನ ಬೆಳಗನರಿದು ಕೂಡೇನೆಂದರೆ ಕ್ರಿಯಾಗಮ್ಯ ಕಾಣಾ.
ಅಯ್ಯಾ, ಎನ್ನ ಮನದ ಗತಿಯಿಂದೆ
ನಿನ್ನ ಬೆಳಗನರಿದು ಕೂಡೇನೆಂದರೆ ಜ್ಞಾನಗಮ್ಯ ಕಾಣಾ.
ಅಯ್ಯಾ, ಎನ್ನ ಭಾವದ ಗತಿಯಿಂದೆ
ನಿನ್ನ ಬೆಳಗನರಿದು ಕೂಡೇನೆಂದರೆ ಭಾವಗಮ್ಯ ಕಾಣಾ.
ಮತ್ತಂತೆಂದೊಡೆ, ಪ್ರಾಣವ ಕರಗಿ ಭಕ್ತಿರಸವೆರೆದು
ಸ್ವಯವ ಮರೆದು ಪಟವ ಹರಿದು ನೆರೆವಲ್ಲಿ ನಿರುತವಾಗಿರ್ದ ನೀನೇ
ಗುರುನಿರಂಜನ ಚನ್ನಬಸವಲಿಂಗಾ. ॥ ೭೪೭ ॥

೭೪೮

ಕಾಲಿಲ್ಲದ ಕಾಲಲ್ಲಿ ನಡೆವ ಉನ್ನತಿಯೊಳು ಕಾಂಬುವರು.
ಕೈಯಿಲ್ಲದ ಕೈಯಲ್ಲಿ ಹಿಡಿವ ಉನ್ನತಿಯೊಳು ಕಾಂಬುವರು.
ಕಣ್ಣಿಲ್ಲದ ಕಣ್ಣಿನಲ್ಲಿ ನೋಡುವ ಉನ್ನತಿಯೊಳು ಕಾಂಬುವರು.
ಕೂಟಿಲ್ಲದ ಕೂಟದಲ್ಲಿ ಉನ್ನತಿಯೊಳು ಕಾಂಬುವರು ಶರಣರು
ಗುರುನಿರಂಜನ ಚನ್ನಬಸವಲಿಂಗ ತಾನೆಯೆಂದು. ॥ ೭೪೮ ॥

೭೪೯

ಸರ್ವ ಜ್ಞಾನತ್ವಾನುಭಾವಸನ್ನಿಹಿತ ಭಾವಸಂಗ ಪರಶಕ್ತಿ ಸಮೇತಮ
ಅಂಗೈಯೊಳಗಿರ್ದ ಪ್ರಸಾದಮೂರ್ತಿಗೆ
ದಿವಾಕರ ನಿಶಾಕರ ಪಾವಕಯುಕ್ತದಿಂ ನೆರೆಯಬಲ್ಲ
ನಿತ್ಯ ನಿರ್ಮಲ ನಿಜಾನಂದ ಶರಣ ತಾನೆ
ಸಹಜ ಗುರುನಿರಂಜನ ಚನ್ನಬಸವಲಿಂಗವಾದ ಘನವೇಗು. ॥ ೭೪೯ ॥

೭೫೦

ಪಂಚಮೂರ್ತಿಯನೊಳಕೊಂಡಿರ್ದ ಪ್ರಸಾದಮೂರ್ತಿಯ
ಪಂಚವಿಧವ ಗರ್ಭೀಕರಿಸಿಕೊಂಡಿರ್ಪ ಬಯಲಾಂಗನು
ತನ್ನಂತರಂಗದ ಅವಿರಳಬೆಳಗೆಂದರಿದು
ಮನ ಭಾವ ಕರಣದೊಳಾವರಿಸಿ ನೆರೆದು ನಿತ್ಯ ಪರಮಪರಿಣಾಮಿಯಾಗಿರ್ದ
ಗುರುನಿರಂಜನ ಚನ್ನಬಸವಲಿಂಗ ತಾನಾಗಿ. ॥ ೭೫೦ ॥

೭೫೧

ಕತ್ತೆಯ ತಾಯಿ ಕುದುರೆಯ ಹಡೆದು
ಶೃಂಗಾರದಲ್ಲಿ ಬೆಳೆದು ಭೂಮಿಯೊಳುದಯಿಸಿದ ಹುಲ್ಲ ಮೇಯುತ್ತ
ಏಳುಕೆರೆಯೊಳಗೆ ನಿಂದು, ಐದುಬಾವಿಯ ನೀರುಕುಡಿದು
ಕೆಳಮುಖದ ಮನೆಗಳಲ್ಲಿ ತಾಯಿ ಮಗನ ಹೊತ್ತು ತಿರುಗುತ್ತಿದ್ದಿತಯ್ಯಾ.
ಮನೆಯೊಳಗಣ ಬೆಂಕಿ ಕೆದರಿ ಮುಂದೆ ಬರಲುಳ್ಳ
ಬೆಂದ ಹೊಯಿಲಿಗಳು ಉರಿಯಲು
ಕುದುರೆಯ ತಾಯಿ ಸಾಯಲು ಕತ್ತೆ ಉಳಿದು ನಿತ್ಯವಾದಲ್ಲಿ
ಗುರುನಿರಂಜನ ಚನ್ನಬಸವಲಿಂಗ ತಾನೇ ಬೇರಿಲ್ಲ. ॥ ೭೫೧ ॥

೭೫೨

ಗಿಳಿಯ ಗರ್ಭದಲ್ಲಿ ಮಾರ್ಜಾಲ ಹುಟ್ಟಿ ಹಾವಿನ ತಲೆಯ ಮುಟ್ಟಲು
ಹೆಡೆಯನೆಗೆದು ಮಾಣಿಕವ ಕಚ್ಚಿ ಎರಡುದಾರಿಯ ಕಟ್ಟಿ ಆಡಲು
ಪುರದ ಜನರು ಭೀತಿಗೊಂಡು ನೋಡುವ ಸಮಯದಲ್ಲಿ
ಮಾಣಿಕ ಹಾವ ನುಂಗಿ ಜನರ ಹೊಯ್ದು ಒಯ್ಯಲು,
ಗಿಳಿ ಸತ್ತು ಗುರುನಿರಂಜನ ಚನ್ನಬಸವಲಿಂಗ ತಾನೆಯಾಯಿತು. ॥ ೭೫೨ ॥

೭೫೩

ನಾಗರಪಂಚಮಿ ನಾರಿಯರು
ನಾಗತಿಯ ಕೂಡಿ ಹಾಲ ಹೊಯ್ಯಬಂದ ಪರಿಯ ನೋಡಾ !
ಹಾಲ ಕುಡಿದ ನಾಗರ ಹಾರುವನ ಹಿಡಿದು
ಮೂರುಲೋಕದೊಳಗೆ ಗರಳಗೊಂಡು ತಿರುಗಿಸಿತ್ತು ನೋಡಾ.
ಹಾರುವನ ಹೊಕ್ಕಳದಲ್ಲಿ ನಕ್ಷತ್ರಮೂಡಿ
ಚಂದ್ರನಕೂಡಿ ಆಕಾಶಮಂಡಲದಲ್ಲಿರಲು
ಚಂದ್ರನ ಬೆಳಗ ಕಂಡ ಜಲನಿಧಿ ಮೇರೆದಪ್ಪಿ ಹರಿಯಲು

ಮೂರುಲೋಕ ಮುಳುಗಿ,
ನಾಗತಿ ಸತ್ತು ಪಂಚಮಿನಾರಿಯರು ನಾಗರನೆತ್ತಿ ಬಿಳಿಹಾಲ ಹೊಯ್ಯುತ್ತ
ಹಾರುವನಕೊಂದು ತಳಿಗೆಯೊಳಿಟ್ಟು ಆರತಿಯ ಬೆಳಗಿದರು ಜಯಜಯವೆಂದು
ಗುರುನಿರಂಜನ ಚನ್ನಬಸವಲಿಂಗದಂಗದ ಬೆಳಗಿನೊಳುಬೆರೆದು. || ೭೫೩ ||

೭೫೪

ಪರಿಪೂರ್ಣ ಪ್ರಕಾಶಲಿಂಗಸನ್ನಿಹಿತ ಮಹದಾನಂದ ಶರಣ,
ಅವಿರಳ ಜ್ಞಾನಕ್ರಿಯೆಯಿಂದರಿದಾನಂದಿಸುವನಲ್ಲದೆ
ಯೋಗಮಾರ್ಗವಿಡಿದು ಬಳಲಿ ಬಾಯಾರಿ ಬೆಂಡಾಗಿ ಬಿದ್ದು ಹೋಗುವನಲ್ಲ.
ಅದೇನು ಕಾರಣವೆಂದೊಡೆ,
ಮಾಣಿಕದ ಪರ್ವತದೊಳಗಿರ್ದು ಉಂಗುರಾಭರಣಕ್ಕೆಂದು
ಗಾಜಿನಮಣಿಯಾಗಬೇಕೆಂದು ಪಾಷಾಣಗಿರಿಯ ಶೋಧಿಸಿ ಬಳಲುವ
ನಾಶಜ್ಞಾನ ನರಮಾನವನಂತೆ,
ತನ್ನ ಕರ ಮನ ಭಾವದಲ್ಲಿ ಪ್ರಜ್ವಲಿಸುವ ಮಹಾಪ್ರಕಾಶಮಯವಾದ
ಇಷ್ಟಬ್ರಹ್ಮವನರಿಯದೆ
ಬೇರೆ ಬೆಳಗಕಂಡು ಕೂಡಬೇಕೆಂದು ದೇಹಭಾವವೆಂಬ ಗಿರಿಯ ಹಿಡಿದು
ಕಷ್ಟಬಡುವ ಸೊಟ್ಟ ಮತಿಯನೇನೆಂಬೆ ?
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ ಇಂತುಟಲ್ಲ. || ೭೫೪ ||

೭೫೫

ಕಾಲಿಲ್ಲವೆಂಬುದು ಕಾಣಬಂದಿತ್ತು, ಕಣ್ಣಿಲ್ಲವೆಂಬುದು ಕಾಣಬಂದಿತ್ತು,
ಕಿವಿಯಿಲ್ಲವೆಂಬುದು ಕಾಣಬಂದಿತ್ತು, ಜಿಹ್ವೆಯಿಲ್ಲವೆಂಬುದು ಕಾಣಬಂದಿತ್ತು,
ನಾಸಿಕವಿಲ್ಲವೆಂಬುದು ಕಾಣಬಂದಿತ್ತು, ಸರ್ವಾಂಗವಿಲ್ಲವೆಂಬುದು ಕಾಣಬಂದಿತ್ತು,
ಗುರುನಿರಂಜನ ಚನ್ನಬಸವಲಿಂಗಾ,
ನಿಮ್ಮ ಶರಣರನುಭಾವದಿಂದೆ ಶರಣಂಗೆ. || ೭೫೫ ||

೭೫೬

ಶ್ರೀಮಹಾಕಲ್ಯಾಣದೊಳಗಿರ್ದು
ನಿತ್ಯಾನುಭವದ ಬೆಳಗಿನೊಳೋಲ್ಯಾಡುತಿರ್ದೆನು.
ಅದು ಹೇಗೆಂದೊಡೆ, ಆದ್ಯರನುಭಾವವೆನ್ನ ಕಾರಣತನುವಿನಲ್ಲಿ
ಆನಂದಪ್ರಕಾಶಮಯವಾಗಿ ಕಾಣಿಸುತ್ತಿಹುದು.
ವೇದ್ಯರನುಭಾವವೆನ್ನ ಸೂಕ್ಷ್ಮತನುವಿನಲ್ಲಿ
ಚಿತ್ಪ್ರಕಾಶಮಯವಾಗಿ ಕಾಣಿಸುತ್ತಿಹುದು.

ಸಾಧ್ಯರನುಭಾವವೆನ್ನ ಸ್ಥೂಲತನುವಿನಲ್ಲಿ
ಸತ್ಪ್ರಕಾಶಮಯವಾಗಿ ಕಾಣಿಸುತ್ತಿಹುದು.
ಇದು ಕಾರಣ, ಈ ತ್ರಿವಿಧ ಮಹಿಮರನುಭಾವಕ್ಕೆ ಎನ್ನನೊತ್ತೆಯನಿತ್ತು
ಮರೆದಿರ್ದೆ ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೭೫೬ ||

೭೫೭

ಅಯ್ಯಾ, ಎನ್ನ ಚೌಪೀಠಮಂಟಪದಲ್ಲಿ
ಪ್ರಭುದೇವರನುಭಾವವ ನೋಡಿ ಪರಮಪರವಶವಾಗಿರ್ದೆನು.
ಅಯ್ಯಾ, ಎನ್ನ ಮಧ್ಯಪೀಠದಮಂಟಪದಲ್ಲಿ
ಚನ್ನಬಸವಣ್ಣನನುಭಾವವ ನೋಡಿ ನಿರುತಪರವಶವಾಗಿರ್ದೆನು.
ಅಯ್ಯಾ, ಎನ್ನ ಕಂಗಳಮುಂದಣ ಮಂಗಳಮಂಟಪದಲ್ಲಿ
ಬಸವಣ್ಣನನುಭಾವವ ನೋಡಿ ಅವಿರಳಪರವಶವಾಗಿರ್ದೆನು.
ಇಂತು ಸಕಲ ಪುರಾತನರನುಭಾವಪ್ರಕಾಶದೊಳು ಮುಳುಗಿ
ಘನಪರವಶದಿಂದೋಲ್ಯಾಡುತಿರ್ದೆನು
ಗುರುನಿರಂಜನ ಚನ್ನಬಸವಲಿಂಗ ನಿಮ್ಮೊಳಗೆ. || ೭೫೭ ||

೭೫೮

ಶ್ರುತಿಯ ನೋಡುವ ಮತಿಕುಶಲದನುವಿಂಗೆ
ನೆಗೆದುನೋಡಲೊಲ್ಲದೆನ್ನ ಭಾವ.
ಆಗಮವ ನೋಡುವ ಮತಿಕುಶಲದನುವಿಂಗೆ ವಿಕಸನವಾಗಲೊಲ್ಲದೆನ್ನ ಮನ.
ಅಭ್ಯಾಸಿಗಳರಿವ ಮತಿಕುಶಲದನುವಿಂಗೆ ಸೊಗಸನೆತ್ತಲೊಲ್ಲದೆನ್ನ ತನು.
ಅದೇನು ಕಾರಣವೆಂದೊಡೆ, ಬಸವ ಚನ್ನಬಸವ ಪ್ರಭುಗಳ
ವಚನಾನುಭಾವದ ಪರಮಪ್ರಕಾಶ
ಎನ್ನೊಳಹೊರಗೆ ಪರಿಪೂರ್ಣಾನಂದ ತಾನೆಯಾಗಿಪ್ಪುದಾಗಿ,
ಮತ್ತೊಂದನರಿಯಲರಿಯದ ಭಾವವನೇನೆಂದರಿಯದಿರ್ದೆ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. || ೭೫೮ ||

೭೫೯

ವೇದಾಗಮ ಸಾಕ್ಷಿಯ ಘನವೆಂದು ನುಡಿವರು,
ನುಡಿದ ನುಡಿಯೇನೆಂದರಿಯರು.
ಇದು ಏನು ಹೇಳಾ ಪಶುಭಾವ ?
ಐವತ್ತೆರಡಕ್ಷರವನುದಯಿಸುವುದೇ ವೇದ ? ನುಡಿಯುವುದೇ ಆಗಮ ?
ಬೇರರಸಲೇನು ಕಸಮನುಜರಿರಾ,

ನಿಮ್ಮ ಕುರುಹು ಕುರುಹನರಿಯದೆ ಕುರಿಗಳಾದವು.
ಕಳೆದುಳಿದು ಬನ್ನಿರಿ, ಗುರುನಿರಂಜನ ಚನ್ನಬಸವಲಿಂಗವಾಗಬೇಕಾದಡೆ
ಕಳೆ ನಾದ ಬಿಂದುವನರಿಯಿರಿ. ॥ ೨೫೯ ॥

೨೬೦

ಅಯ್ಯಾ, ನಿಮ್ಮ ಶರಣರನುಭಾವಕ್ಕೆ ಪ್ರತಿಸಾಕ್ಷಿಯೆಂದು
ಬೆರೆಸಿ ಹೇಳುವರು ಹಾದಿ ಹತ್ತಿಕೆಯ ನುಡಿಗಳ.
ಅದು ಎನಗೆಂದೂ ಸೊಗಸದು ಕಾಣಾ.
ಎನ್ನ ನಿಜರತ್ನಪ್ರಕಾಶ ನಿಮ್ಮ ಶರಣರ ವಚನ.
ಇವಕ್ಕೆ ಸಾಕ್ಷಿ ತಂದು ಹೇಳುವ ಭಾವವ ದಹಿಸಿ
ಭಸ್ಮವ ಮಾಡಿ ಧರಿಸಿರ್ದೆನಾಗಿ ಕಾಣಿಸದು.
ಶರಧಿಗೆ ತೊರೆಗಾವಲಿ, ಮೇರುವಿಗೆ ಪೊರಟು,
ಗಗನಕ್ಕೆ ಕೊಪ್ಪರಿಗೆ ತೋರಿದರೆ ಸರಿಯಪ್ಪುವೆ ?
ಆ ಕುರಿಗಳ ನುಡಿ ಅತ್ತಿರಲಿ, ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣರ ನುಡಿಬೆಳಗನಗಲದಿರ್ದೆನು ನಿಮ್ಮೊಳಗೆ. ॥ ೨೬೦ ॥

೨೬೧

ಅಯ್ಯಾ, ನಿಮ್ಮ ಬಸವಣ್ಣನನುಭಾವದ ಬೆಳಗೆನ್ನ ಇಷ್ಟಲಿಂಗ ಕಾಣಾ.
ಅಯ್ಯಾ, ನಿಮ್ಮ ಚನ್ನಬಸವಣ್ಣನನುಭಾವದ ಬೆಳಗೆನ್ನ ಪ್ರಾಣಲಿಂಗ ಕಾಣಾ.
ಅಯ್ಯಾ, ನಿಮ್ಮ ಪ್ರಭುದೇವರನುಭಾವದ ಬೆಳಗೆನ್ನ ಭಾವಲಿಂಗ ಕಾಣಾ.
ಅಯ್ಯಾ, ನಿಮ್ಮ ಸಕಲ ಪುರಾತನರನುಭಾವದ ಬೆಳಗೆನ್ನ ಸರ್ವಾಂಗದಲ್ಲಿ.
ಗುರುನಿರಂಜನ ಚನ್ನಬಸವಲಿಂಗಾ, ನೀನೇ ಕಾಣಾ
ಮತ್ತೊಂದ ಕರಣತ್ರಯದಲ್ಲಿ ಕಂಡೆನಾದಡೆ ನಿಮಗೆ ನಾನಂದೆ ದೂರ. ॥ ೨೬೧ ॥

೨೬೨

ಘನಮಹಿಮರನುಭಾವದ ಬೆಳಗೆನ್ನ ಕರಸ್ಥಲದಲ್ಲಿ ಇಷ್ಟಲಿಂಗವಾಗಿ
ಅನಿಷ್ಟವ ನಷ್ಟಮಾಡಿ ಥಳಥಳನೆ ಹೊಳೆಯುತ್ತಿದೆ ನೋಡಾ.
ಚಿನುಮಯ ಶರಣರನುಭಾವದ ಬೆಳಗೆನ್ನ ಮನಸ್ಥಲದಲ್ಲಿ ಪ್ರಾಣಲಿಂಗವಾಗಿ
ಪ್ರಾಣನ ಪ್ರಕೃತಿಯ ದಹಿಸಿ ಥಳಥಳನೆ ಬೆಳಗುತ್ತಿದೆ ನೋಡಾ.
ಸತ್ಪುರುಷರನುಭಾವದ ಬೆಳಗೆನ್ನ ಭಾವಸ್ಥಲದಲ್ಲಿ ಭಾವಲಿಂಗವಾಗಿ
ಸಂಸಾರ ವಿಷಯಭ್ರಾಂತಿಯನಳಿಸಿ ಥಳಥಳನೆ ಹೊಳೆಯುತ್ತಿದೆ ನೋಡಾ.
ನಿಜಪ್ರಕಾಶ ಶರಣರನುಭಾವದ ಬೆಳಗೆನ್ನ ಘ್ರಾಣದಲ್ಲಿ ಆಚಾರಲಿಂಗವಾಗಿ
ಅನಾಚಾರವನುರುಹಿ ಥಳಥಳನೆ ಹೊಳೆಯುತ್ತಿದೆ ನೋಡಾ.

ಸತ್ಯಶರಣರನುಭಾವದ ಬೆಳಗೆನ್ನ ಜಿಹ್ವೆಯ ಸ್ಥಲದಲ್ಲಿ ಗುರುಲಿಂಗವಾಗಿ
ಅನೃತವ ನಾಶಮಾಡಿ ಥಳಥಳನೆ ಹೊಳೆಯುತ್ತಿದೆ ನೋಡಾ.
ಅನುಪಮ ಶರಣರನುಭಾವದ ಬೆಳಗೆನ್ನ ನಯನ ಸ್ಥಲದಲ್ಲಿ ಶಿವಲಿಂಗವಾಗಿ
ಮಶ್ಚಲನೆಯ ದಹಿಸಿ ಥಳಥಳನೆ ಹೊಳೆಯುತ್ತಿದೆ ನೋಡಾ.
ಪರಿಪೂರ್ಣ ಶರಣರನುಭಾವದ ಬೆಳಗೆನ್ನ ತ್ವಕ್ಕಿನ ಸ್ಥಲದಲ್ಲಿ ಜಂಗಮಲಿಂಗವಾಗಿ
ಭಿನ್ನಭಾವದ ಸೋಂಕನುರುಹಿ ಥಳಥಳನೆ ಹೊಳೆಯುತ್ತಿದೆ ನೋಡಾ.
ಪರಮಾನಂದ ಶಣರನುಭಾವದ ಬೆಳಗೆನ್ನ ಶ್ರೋತ್ರಸ್ಥಲದಲ್ಲಿ
ಪ್ರಸಾದಲಿಂಗವಾಗಿ ದುಃಶಬ್ದರತಿಯ ನಷ್ಟವ ಮಾಡಿ
ಥಳಥಳನೆ ಹೊಳೆಯುತ್ತಿದೆ ನೋಡಾ.
ಪರಮಶಾಂತ ಶರಣರನುಭಾವದ ಬೆಳಗೆನ್ನ ಹೃದಯಸ್ಥಲದಲ್ಲಿ
ಮಹಾಲಿಂಗವಾಗಿ ಭಿನ್ನದರಿವನುರುಹಿ ಥಳಥಳನೆ ಹೊಳೆಯುತ್ತಿದೆ ನೋಡಾ.
ನಿರುಪಮ ಶರಣರನುಭಾವದ ಬೆಳಗೆನ್ನ ಬ್ರಹ್ಮರಂಧ್ರದಲ್ಲಿ
ನಿಃಕಲಲಿಂಗವಾಗಿ ಥಳಥಳನೆ ಹೊಳೆಯುತ್ತಿದೆ ನೋಡಾ.
ನಿರ್ಮಾಯ ಶರಣರನುಭಾವದ ಬೆಳಗೆನ್ನ ಉನ್ಮನಿಯಲ್ಲಿ
ಶೂನ್ಯಲಿಂಗವಾಗಿ ಥಳಥಳನೆ ಹೊಳೆಯುತ್ತಿದೆ ನೋಡಾ.
ನಿರವಯ ಶರಣರನುಭಾವದ ಬೆಳಗೆನ್ನ ಪಶ್ಚಿಮದಲ್ಲಿ
ನಿರಂಜನಲಿಂಗವಾಗಿ ಥಳಥಳನೆ ಹೊಳೆಯುತ್ತಿದೆ ನೋಡಾ.
ಇದು ಕಾರಣ, ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಅಖಂಡ ಶರಣರನುಭಾವದ ಬೆಳಗೆನ್ನ ಕಿಂಚಿತ್ತು ಕಾಣಿಸದೆ
ಸರ್ವಾಂಗದಲ್ಲಿ ಥಳಥಳನೆ ಹೊಳೆಯುತ್ತಿದೆ ನೋಡಾ. ॥ ೭೬೨ ॥

೭೬೩

ಅಯ್ಯಾ, ಎನ್ನ ಕೈ ಕೈಗೆ ಬಂದಮೇಲೆ ಕ್ರಿಯಾಂಗನೆಯಾದೆ,
ಜ್ಞಾನಾಂಗನೆಯಾದೆ, ಇಚ್ಛಾಂಗನೆಯಾದೆ, ಆದಿಯಂಗನೆಯಾದೆ.
ಚಿದಾಂಗನೆಯ ಶರಗವಿಡಿದು ಪರಾಂಗನೆಯಾಗಿ
ಪ್ರಸಾದಮೂರ್ತಿಯ ಅನುಭಾವಕ್ಕಂಗವಾಗಿ ಅಗಲದಿರ್ದೆನು
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೭೬೩ ॥

೭೬೪

ಎನ್ನ ಸುಚಿತ್ತದ ಕಳೆಯಲ್ಲಿ ಬೆಳಗುವ ಲಿಂಗಕ್ಕೆ
ಶ್ರದ್ಧೆವೆರೆದಂಗನೆಯಾಗಿ ಸುಖಿಸಿದೆನಯ್ಯಾ.
ಎನ್ನ ಸುಬುದ್ಧಿಯ ಕಳೆಯಲ್ಲಿ ಬೆಳಗುವಲಿಂಗಕ್ಕೆ

ನೈಷ್ಠೆವೆರೆದಂಗನೆಯಾಗಿ ಬಾಳಿದೆನಯ್ಯಾ.
ಎನ್ನ ನಿರಹಂಕಾರದ ಕಳೆಯಲ್ಲಿ ಬೆಳಗುವ ಲಿಂಗಕ್ಕೆ
ಸಾವಧಾನವೆರೆದಂಗನೆಯಾಗಿ ಸುಖಬಟ್ಟೆನಯ್ಯಾ.
ಎನ್ನ ಸುಮನದ ಕಳೆಯಲ್ಲಿ ಬೆಳಗುವ ಲಿಂಗಕ್ಕೆ
ಅನುಭಾವವೆರೆದಂಗನೆಯಾಗಿ ಶಾಂತಳಾದೆನಯ್ಯಾ.
ಎನ್ನ ಸುಜ್ಞಾನದ ಕಳೆಯಲ್ಲಿ ಬೆಳಗುವ ಲಿಂಗಕ್ಕೆ
ಆನಂದವೆರೆದಂಗನೆಯಾಗಿ ಪರಿಣಾಮಿಯಾದೆನಯ್ಯಾ.
ಎನ್ನ ಸದ್ಭಾವದ ಕಳೆಯಲ್ಲಿ ಬೆಳಗುವ ಲಿಂಗಕ್ಕೆ
ಸಮರಸವೆರೆದಂಗನೆಯಾಗಿ ಪರಿಪೂರ್ಣಪರಿಣಾಮಿಯಾದೆನಯ್ಯಾ.
ಎನ್ನ ಒಳಹೊರಗಿನ ಕಳೆಯಲ್ಲಿ ಬೆಳಗುವ ಗುರುನಿರಂಜನ ಚನ್ನಬಸವಲಿಂಗಕ್ಕೆ
ನಿಜಾಂಗನೆಯಾಗಿ ಅನುಪಮಸುಖಸುಗ್ಗಿಯೊಳೋಲಾಡುತಿರ್ದೆನಯ್ಯಾ. || ೭೬೪ ||

೭೬೫

ಬೆಳಗಿಲ್ಲದ ಬೆಳಗಿನ ಮನೆಯಲ್ಲಿ ಇಳೆಯಾಂಬರ ನಿಸ್ಸಾರದೇವ
ಬಳಿವಿಡಿಯೆ ಕರ್ಮಕ್ಕನುಗೆಯ್ದು ಸುಖರತಿಯ ಬೆಳಗ
ಹೇಳಲಾರಳವಲ್ಲ ಕೇಳಲಾರಳವಲ್ಲ ನೋಡಲಾರಳವಲ್ಲ ಕೂಡಲಾರಳವಲ್ಲ
ಗುರುನಿರಂಜನ ಚನ್ನಬಸವಲಿಂಗವ ಭಿನ್ನವಿಟ್ಟು. || ೭೬೫ ||

೭೬೬

ಕಷ್ಟಬಟ್ಟು ಕಾಣಲರಿಯದೆ ಬಿಟ್ಟು ಬಂದು ಹೋಗುವ
ಬಟ್ಟೆತಪ್ಪಕ ಬಣ್ಣಗಾರರರಿತಕ್ಕಗಣಿತ ನೋಡಾ ನಿಮ್ಮ ಶರಣ.
ಸೃಷ್ಟಿ ಜಲ ನೆಲ ನೀಲಾಂಬರ ನಿರಂಜನ ನಿಜಭರಿತ ನೋಡಾ ನಿಮ್ಮ ಶರಣ.
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣನ
ಗೂಢ ಆರೂಢ ಕಾಣಾ. || ೭೬೬ ||

೭೬೭

ಶರಣನ ಕಾಯ ಬೆಳಗು ಕಾಣಬಾರದು, ಮನದ ಬೆಳಗು ಕಾಣಬಾರದು,
ಪ್ರಾಣನ ಬೆಳಗು ಕಾಣಬಾರದು, ಭಾವದ ಬೆಳಗು ಕಾಣಬಾರದು,
ಜ್ಞಾನದ ಬೆಳಗು ಕಾಣಬಾರದು, ಅರುಹಿನ ಬೆಳಗು ಕಾಣಬಾರದು.
ಗುರುನಿರಂಜನ ಚನ್ನಬಸವಲಿಂಗವಾಗಿರ್ದ
ನಿಜಶರಣರಿಗಲ್ಲದೆ ಇತರರಿಗೆ. || ೭೬೭ ||

## ಶರಣನ ಐಕ್ಯಸ್ಥಲ

೭೬೮

ಅಯ್ಯಾ, ಎನ್ನ ಸ್ಥಲವ ಆಚಾರಲಿಂಗವಾಗಿಬಂದು ಗರ್ಭೀಕರಿಸಿಕೊಂಡೆ ನೀನು.
ಅಯ್ಯಾ, ಎನ್ನ ಸ್ಥಲವ ಗುರುಲಿಂಗವಾಗಿಬಂದು ಗರ್ಭೀಕರಿಸಿಕೊಂಡೆ ನೀನು.
ಅಯ್ಯಾ, ಎನ್ನ ಸ್ಥಲವ ಶಿವಲಿಂಗವಾಗಿಬಂದು ಗರ್ಭೀಕರಿಸಿಕೊಂಡೆ ನೀನು.
ಅಯ್ಯಾ, ಎನ್ನ ಸ್ಥಲವ ಜಂಗಮಲಿಂಗವಾಗಿಬಂದು ಗರ್ಭೀಕರಿಸಿಕೊಂಡೆ ನೀನು.
ಅಯ್ಯಾ, ಎನ್ನ ಸ್ಥಲವ ಮಹಾಲಿಂಗವಾಗಿಬಂದು ಗರ್ಭೀಕರಿಸಿಕೊಂಡೆ ನೀನು.
ಅಯ್ಯಾ, ಎನ್ನ ಷಟ್‌ಸ್ಥಲವನು ಪ್ರಸಾದಲಿಂಗವಾಗಿ ಬಂದು,
ಗರ್ಭೀಕರಿಸಿಕೊಂಡೆ ನೀನು.
ಗುರುನಿರಂಜನ ಚನ್ನಬಸವಲಿಂಗ ನೀನಂಗ ನಾನುಭಯಸಂಗ. ॥ ೭೬೮ ॥

೭೬೯

ಆಚಾರಲಿಂಗದೊಳಗಿಪ್ಪೆವೆಂಬರು ಪೃಥ್ವಿಯ ಕತ್ತಲೆಯೊಳಡಗಿಹರು.
ಗುರುಲಿಂಗದೊಳಗಿಪ್ಪೆವೆಂಬರು ಅಪ್ಪುವಿನ ಕತ್ತಲೆಯೊಳಡಗಿಹರು.
ಶಿವಲಿಂಗದೊಳಗಿಪ್ಪೆವೆಂಬರು ಅಗ್ನಿಯ ಕತ್ತಲೆಯೊಳಡಗಿಹರು.
ಜಂಗಮಲಿಂಗದೊಳಗಿಪ್ಪೆವೆಂಬರು ವಾಯುವಿನ ಕತ್ತಲೆಯೊಳಡಗಿಹರು.
ಪ್ರಸಾದಲಿಂಗದೊಳಗಿಪ್ಪೆವೆಂಬರು ಆಕಾಶದ ಕತ್ತಲೆಯೊಳಡಗಿಹರು.
ಮಹಾಲಿಂಗದೊಳಗಿಪ್ಪೆವೆಂಬರು ಆತ್ಮನ ಕತ್ತಲೆಯೊಳಡಗಿಹರು.
ಇವರನೆಂತು ಶರಣೈಕ್ಯರೆನ್ನಬಹುದು ಹುಸಿಡಂಭಕ ಹೇಸಿಮಾನವರ ?
ಗುರುನಿರಂಜನ ಚನ್ನಬಸವಲಿಂಗಾ ! ॥ ೭೬೯ ॥

೭೭೦

ಕರಸ್ಥಲದಲಿಂಗದೊಳು ಮನವ ಮುಳುಗಿಸಲರಿಯದೆ,
ಮಲತ್ರಯದ ಬೊಂಪಾಸದಲ್ಲಿ ಮುಳುಗಿ ಏಳಲಾರದೆ ಹೊರಳಾಡುವ
ದುರ್ಗತಿಗಳಿಗಿನ್ನಾವ ಸ್ಥಲಸಂಬಂಧವಪ್ಪದು ಹೇಳಾ !
ಈ ಧರ್ಮಕರ್ಮಗಳನೆನ್ನತ್ತ ತೋರದಿರಾ
ಗುರುನಿರಂಜನ ಚನ್ನಬಸವಲಿಂಗಾ. ॥ ೭೭೦ ॥

೭೭೧

ಕರ ಮನ ಭಾವದಲ್ಲೆಸೆವ ಪರಶಿವಲಿಂಗಕ್ಕೆ
ಸ್ವಯಂ ರತಿತ್ರಯವಿತ್ತು ಮರೆದಿರಲಾರದೆ,

ಪರಿಪರಿಯ ಕುಶಲಗತಿಮತಿಗಳೊಡವೆರೆದ
ದುಸ್ಸಾರಕ್ಕವೇ ರತಿಯನಿತ್ತು ಮರೆದಿರುವ
ಮರುಳಮಾನವರಿಗಿನ್ನೆತ್ತಣ ಶರಣೈಕ್ಯಸ್ಥಲ ಹೇಳಾ
ಗುರುನಿರಂಜನ ಚನ್ನಬಸವಲಿಂಗಾ ! ॥ ೭೭೦॥

೭೭೧

ಲಿಂಗದೊಳಗಾರಿಂದ್ರಿಯ ಸಾರಾಯವನರಿದು
ಮರೆದಾನಂದತ್ವವ ಕಾಣಲರಿಯದೆ,
ಈಷಣತ್ರಯದೊಳಗೆ ಆರಿಂದ್ರಿಯ ಸಾರಾಯವನರಿದು
ಮರೆದು ಆನಂದತ್ವವ ಕಂಡು ಹೋಗಿ
ಮುಳುಗುವ ಶವಮಾನವಕುಳವನೆಂತು ಶರಣರೆನ್ನಬಹುದು ಹೇಳಾ
ಗುರುನಿರಂಜನ ಚನ್ನಬಸವಲಿಂಗಾ ! ॥ ೭೭೧ ॥

೭೭೩

ಸುಜ್ಞಾನದಲ್ಲಿ ಮುಳುಗಿ ನಡೆವ ಶರಣ
ಕಾಮದಲ್ಲಿ ಮುಳುಗುವನಲ್ಲ, ಕ್ರೋಧದಲ್ಲಿ ಮುಳುಗುವನಲ್ಲ,
ಲೋಭದಲ್ಲಿ ಮುಳುಗುವನಲ್ಲ, ಮೋಹದಲ್ಲಿ ಮುಳುಗುವನಲ್ಲ,
ಮದದಲ್ಲಿ ಮುಳುಗುವನಲ್ಲ, ಮತ್ಸರದಲ್ಲಿ ಮುಳುಗುವನಲ್ಲ.
ಮತ್ತೆಂತೆಂದೊಡೆ, ಕಾಮವ ಶಿವಾನುಭಾವಿಗಳಲ್ಲಿಟ್ಟು,
ಕ್ರೋಧವ ತನುಪ್ರಕೃತಿಯ ಮೇಲಿಟ್ಟು,
ಲೋಭವ ಪಾದೋದಕ ಪ್ರಸಾದದಲ್ಲಿಟ್ಟು,
ಮೋಹವನು ಗುರುಲಿಂಗಜಂಗಮದಲ್ಲಿಟ್ಟು,
ಮದವನು ಮಾಯಾಪ್ರಕೃತಿಯ ಮೇಲಿಟ್ಟು,
ಮತ್ಸರವನು ಮಲತ್ರಯದ ಮೇಲಿಟ್ಟು,
ಗುರುನಿರಂಜನ ಚನ್ನಬಸವಲಿಂಗದಂಗದಲ್ಲಿ ಮುಳುಗಿರ್ದನು. ॥ ೭೭೩ ॥

೭೭೪

ಪ್ರಕಾಶಪ್ರವರ್ತನ ಮೋಹನವೆಂಬ ಸದ್ಭಾವತ್ರಯದಲ್ಲಿ ಮುಳುಗಿ
ಭಾವಲಿಂಗಸನ್ನಿಹಿತ ಶರಣಂಗೆ ದುರ್ಭಾವತ್ರಯಂಗಳು
ಹೊದ್ದಲಮ್ಮವು ನೋಡಾ.
ವಿದ್ಯಾತ್ರಯದಲ್ಲಿ ಶುದ್ಧಗತಿಮತಿ ಗೂಢಗಂಭೀರ
ಗುರುನಿರಂಜನ ಚನ್ನಬಸವಲಿಂಗ ತಾನಾದ ಶರಣಂಗೆ
ನೀನೆಂಬ ಕುರುಹು ನಿಶ್ಶೂನ್ಯ ಕಾಣಾ. ॥ ೭೭೪ ॥

೭೭೫

ಮುಟ್ಟು ತಟ್ಟು ಮುದ್ದು ಆಲಿಂಗನವೆಂಬ ಕಾಯರತಿಯು
ಇಷ್ಟಲಿಂಗದಲ್ಲಿ ತರಹರವಾಗಿ,
ನೆನಹು ನೀರಿಕ್ಷಣ ಮೋಹ ಕಳೆಯೆಂಬ ಮನದರತಿ
ಪ್ರಾಣಲಿಂಗದಲ್ಲಿ ತರಹರವಾಗಿ,
ಹರುಷ ಸುಖ ಸಮರಸ ಪರವಶವೆಂಬ ಭಾವದರತಿ
ಮಹಾಲಿಂಗದಲ್ಲಿ ತರಹರವಾಗಿ ಸುಳಿವ ಶರಣ
ಎಂತಿರ್ದಂತೆ ಪರಶಿವಲಿಂಗ ತಾನೇ ಕಾಣಾ.
ಈ ದ್ವಾದಶರತಿಯ ಮಲತ್ರಯದಲ್ಲಿ ಹುದುಗಿಸಿ
ನಿರ್ಮಲಶರಣರಿಂದು ನುಡಿದು ನಡೆದು ಹೋದರೆ
ಬಚ್ಚಲದಲ್ಲಿಯ ಹುಳ ಬಾಳಿ ಮಡಿದಂತೆ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೭೭೫ ||

೭೭೬

ಸಂಸಾರವ ಹೊರಗಿಟ್ಟು ಅಂಗವನೊಳಗಿಟ್ಟು
ನಡೆನುಡಿಯೊಳನುಭಾವ ಸಚ್ಚರಿತ ಶರಣ ಎಂತಿರ್ದಂತೆ ಪರಿಣಾಮಿ.
ಇಹಪರವರಿಯದನುಪಮನನಾರು ತಿಳಿವರು.
ದ್ವಂದ್ವಕರ್ಮದ ದಂದುಗವ ಹೊದ್ದದಪ್ರತಿಮನು
ಗುರುನಿರಂಜನ ಚನ್ನಬಸವಲಿಂಗದಲ್ಲಿ ಅಡಗಿರ್ದನು. || ೭೭೬ ||

೭೭೭

ಕಾಯವಿಲ್ಲದ ಶರಣಂಗೆ ಕರ್ಮವಿಲ್ಲ ;
ಕರ್ಮಶೂನ್ಯವಾದಲ್ಲಿ ಭಾವನಾಸ್ತಿ ಕಾಣಾ.
ಭಾವನಾಸ್ತಿಯಾಗಿ ನಿರ್ಭಾವ ನಿಂದು ನಿಜವಾದಲ್ಲಿ
ನೋಡಲಿಲ್ಲ ನುಡಿಯಲಿಲ್ಲ ಕೂಡಲಿಲ್ಲ ಅಗಲಲಿಲ್ಲ.
ಗುರುನಿರಂಜನ ಚನ್ನಬಸವಲಿಂಗ ತಾನು ತಾನಾಗಿರ್ದ ಸುಖವ
ತಂದು ಹೇಳುವರಾರೂ ಇಲ್ಲ ಈ ಮೂರುಲೋಕದೊಳಗೆ. || ೭೭೭ ||

೭೭೮

ಸೃಷ್ಟಿ ಸ್ಥಿತಿ ಸಂಹಾರ ತಿರೋಧಾನ ಅನುಗ್ರಹವೆಂಬ
ಪಂಚಕೃತ್ಯಂಗಳ ಪರಿಮಿತವನರಿಯದ
ಪಂಚಾಚಾರಸ್ವರೂಪವ ಸರ್ವಾಂಗ ವೇಧಿಸಿಕೊಂಡು
ಮೀರಿದ ಗತಿಯೊಳೊಪ್ಪಿ ಕಾರ್ಯಕಾರಣ ತಾನಾಗಿ,

ತನ್ನ ತಾನರಿಯದಪ್ರತಿಮ ಶರಣ
ಗುರುನಿರಂಜನ ಚನ್ನಬಸವಲಿಂಗವಾಗಿರ್ದ ನಿಲವ ನೋಡಾ. ॥ ೭೭೮ ॥

೭೭೯

ತನುಶೂನ್ಯಶರಣಂಗೆ ಕುಲವೆಂಬುದೇನು ಹೇಳಾ.
ಮನಶೂನ್ಯಶರಣಂಗೆ ಛಲವೆಂಬುದೇನು ಹೇಳಾ.
ಪ್ರಾಣಶೂನ್ಯಶರಣಂಗೆ ಧನವೆಂಬುದೇನು ಹೇಳಾ.
ಭಾವಶೂನ್ಯಶರಣಂಗೆ ತಪವೆಂಬುದೇನು ಹೇಳಾ.
ತ್ರಿಪುಟಿಶೂನ್ಯಶರಣಂಗೆ ಭಿನ್ನವೆಂಬುದೇನು ಹೇಳಾ.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣನು ಸರ್ವಶೂನ್ಯ ಲಿಂಗೈಕ್ಯ ಕಾಣಾ. ॥ ೭೭೯ ॥

೭೮೦

ಅಯ್ಯಾ, ಶರಣನೆಂದಡೆ ಸಕಲನಿಃಕಲಸನುಮತನು,
ಸತ್ತುಚಿತ್ತಾನಂದರೂಪನು, ಸರ್ವಕಳಾಭಾವಿತನು, ಷಟ್‌ಸ್ಥಲಾನುಭಾವಿ ಕಾಣಾ,
ಸತ್ಕ್ರಿಯಾ ಸಮ್ಯಕ್‌ಜ್ಞಾನಾನುಭಾವಿ,
ತ್ರಿವಿಧಲಿಂಗಾನುಭಾವಿ, ತ್ರಿವಿಧಾರ್ಪಣಾನುಭಾವಿ,
ಷಡ್ವಿಧಾರ್ಪಣಾನುಭಾವಿ,ಮಹಾಜ್ಞಾನಾನುಭಾವಿ,
ಪರಮ ಜ್ಞಾನಾನುಭಾವಿ ಜಂಗಮಲಿಂಗ ತಾನೇ ಕಾಣಾ
ಗುರುನಿರಂಜನ ಚನ್ನಬಸವಲಿಂಗ. ॥ ೭೮೦ ॥

೭೮೧

ಮೂಲಜ್ಞಾನದಿಂದುದಯವಾದ ನಿಜಾನಂದಶರಣ ಜಂಗಮಲಿಂಗಕ್ಕೆ
ಮಹಾಜ್ಞಾನಾನಂದೈಕ್ಯಪದವಲ್ಲದೆ
ನಾದಬಿಂದು ಕಲಾಯುತರುದಯೈಕ್ಯವಂತಲ್ಲ ನೋಡಾ.
ಅದೆಂತೆಂದೊಡೆ, ಸತ್ಯಗುರುವಿನಿಂದೆ ಜನಿಸಿ ನಿತ್ಯಲಿಂಗಚರಿತೆಯೊಳ್ಬೆಳೆದು
ನಿರಂಜನ ಲಿಂಗೈಕ್ಯವನರಿಯದೆ ಯೋನಿಭಾವಜನನಕ್ಕೆ ನಿಂದು
ಸಂಸಾರಭಾವಸ್ಥಿತಿಗೆ ನಿಂದು, ಮರಣಭಾವಲಯದಲ್ಲಿ ನಿಂದು,
ಕಾಟವ ಕಳೆಯದೆ ಕೋಟಲೆಗೆ ಬೀಳುವ ಮೋಟರಿಗೆ
ಜಂಗಮವೆನ್ನಲು ಅಬದ್ಧ ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ॥ ೭೮೧ ॥

೭೮೨

ಮಂಗಳವೆಸೆವಿಡಿದು ಸಂಗಸಮೇತ ಚರಿಸುವ ಜಂಗಮಲಿಂಗದೇವನು ತಾನು,
ಲಿಂಗಶರಣರಸರಸುತ್ತ ಸದ್ಭಕ್ತಿಯ ಕೊಳ್ಳುತ್ತ ನಿಜಾನುಭಾವವನುಸುರುತ್ತ

ಅಭಿನ್ನತ್ವವ ತೋರುತ್ತ ತಾನುತಾನಾಗಿ ಚರಿಸುವನಲ್ಲದೆ
ಕಾಯಪ್ರಕೃತಿವಿಡಿದು ಕಾಮಿನಿ ಕನಕಾಲಯದೊಳ್ಬಿದ್ದು ವೇಷಧಾರಿಯಾಗಿ
ಮಲರುಚಿಯನರಸುತ್ತ ಕಾರ್ಪಣ್ಯಬಟ್ಟು ಕರಕರೆಯಕೊಳ್ಳುತ್ತ
ಜನರಿಗೆ ಹೇಯವ ತೋರುತ್ತ ಉದರಾಗ್ನಿಯೊಳ್ಮುಳುಗಿ ಹೋಗುವ
ಬಿನುಗುಮಾನವರಂತಲ್ಲ ನೋಡಾ ನಿಮ್ಮ ಶರಣ
ಗುರುನಿರಂಜನ ಚನ್ನಬಸವಲಿಂಗಾ. ॥ ೭೮೨ ॥

೭೮೩

ಮಹಾಜ್ಞಾನಿ ಜಂಗಮಲಿಂಗ ತಾನು
ಲೋಕಪಾವನವಾಗಿ ನಡೆನುಡಿಗಳರಿದಾಚರಿಸುವಲ್ಲಿ,
ಜಿಹ್ವೆಯಲ್ಲಿ ಹುಸಿನುಡಿಯಿಲ್ಲದೆ ತನ್ನ ತಾ ನುಡಿಯುತಿರ್ದ ಕಾಣಾ.
ಕಂಗಳಲ್ಲಿ ಭಿನ್ನದೃಷ್ಟಿಯಿಲ್ಲದೆ ತನ್ನ ತಾ ನೋಡುತಿರ್ದ ಕಾಣಾ.
ಶ್ರೋತ್ರದಲ್ಲಿ ಭಿನ್ನಶಬ್ದವಿಲ್ಲದೆ ತನ್ನ ತಾ ಕೇಳುತಿರ್ದ ಕಾಣಾ.
ತ್ವಕ್ಕಿನಲ್ಲಿ ಭಿನ್ನ ಸೋಂಕಿಲ್ಲದೆ ತನ್ನ ತಾ ಸೋಂಕುತಿರ್ದ ಕಾಣಾ.
ಘ್ರಾಣದಲ್ಲಿ ಭಿನ್ನವಾಸನೆಯಿಲ್ಲದೆ ತನ್ನ ತಾನ್ವಾಸಿಸುತಿರ್ದ ಕಾಣಾ.
ಹೃದಯದಲ್ಲಿ ಮಾಯಾಸುಖವಿಲ್ಲದೆ ತನ್ನ ತಾ ಸುಖದಲ್ಲಿರ್ದ ಕಾಣಾ.
ಗುರುನಿರಂಜನ ಚನ್ನಬಸವಲಿಂಗಾ
ಮತ್ತೆ ಮರಣವಿಲ್ಲದೆ ನಿಮ್ಮಲ್ಲಿ ತನ್ನೊಳೈಕ್ಯ ಕಾಣಾ. ॥ ೭೮೩ ॥

೭೮೪

ಅಲ್ಲಿಯೇ ಹುಟ್ಟಿ ಅಲ್ಲಿಯೇ ಬೆಳೆದು
ಅಲ್ಲಿಯೇ ಮುಳುಗಿಹೋಗುವುದೇ ಲೋಕದಗತಿ.
ಅಲ್ಲಿಯೇ ಹುಟ್ಟಿ ಅಲ್ಲಿಯೇ ಬೆಳೆದು
ಅಲ್ಲಿಯೇ ಮುಳುಗಿಹೋಗುವುದೇ ಪಾರಮಾರ್ಥಗತಿ.
ಇದು ಕಾರಣ ನೋಡಿ ಬಾ ಗುರುನಿರಂಜನ ಚನ್ನಬಸವಲಿಂಗದೊಳಗೆ.॥ ೭೮೪ ॥

೭೮೫

ಕಾಯವನೊಳಗಿಟ್ಟ ಶರಣಂಗೆ
ಕ್ರಿಯೋಪಚಾರದ ಕುರುಹನರಿಯಬೇಕೆಂಬುದೇನೋ !
ಮನವನೊಳಗಿಟ್ಟ ಶರಣಂಗೆ
ವಿವೇಕದುಪಚಾರದ ಕುರುಹನರಿಯಬೇಕೆಂಬುದೇನೋ !
ಪ್ರಾಣವನೊಳಗಿಟ್ಟ ಶರಣಂಗೆ ನಾನು ನೀನೆಂದರಿವುದೇನೋ !

ಭಾವವನೊಳಗಿಟ್ಟ ಶರಣಂಗೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಐಕ್ಯವನರಿಯಬೇಕೆಂಬುದೇನೋ ! ॥೭೮೫॥

೭೮೬

ಇಲಿ ಬೆಕ್ಕ ನುಂಗಿ ಕರಿಯಿರುವೆಯೊಳಡಗಿ
ನೀರಸಕ್ಕರೆಯ ಸವಿವುದ ಕಂಡೆ.
ಕಲ್ಲುಹೋರಿನಲ್ಲಿ ನಿಶಾಕರನುದಯವಾಗಿ
ಬೆಳುದಿಂಗಳದೊಳಗೆ ದಿವಾಕರನುದಯವಾದುದ ಕಂಡೆ.
ಬಿಸಿಲು ಆವರಿಸಿದಲ್ಲಿ ಇಲಿ ಸತ್ತು, ಮಾರ್ಜಾಲವೆದ್ದು, ಕರಿಯಿರುವೆಯ ಕೊಡಹಿ,
ನೀರಸಕ್ಕರೆಯ ಚರಣದಲ್ಲೊದೆದು
ಕಲ್ಲುಹೋರು ಕರಗಿ ಕಸವಳಿದಲ್ಲಿ ಬಯಲಬೊಂಬೆಯ ಸಂಗವಮಾಡಿ
ನಿರ್ವಯಲರೂಪು ಸುತನ ಹಡೆದುದ ನೋಡಿ
ರತಿತ್ರಯವೇದಿ ಕುಚಗಳನೊತ್ತಿ ನೆರೆಯಲಾಗಿ
ಸತಿಪತಿ ತೋರಲೊಲ್ಲದೆ ಸ್ತ್ರೀಯಳಿದು ಪುರುಷನಾಗಿ ಸತ್ತಲ್ಲಿ
ಗುರುನಿರಂಜನ ಚನ್ನಬಸವಲಿಂಗ ತಾನೆ. ॥ ೭೮೬ ॥

೭೮೭

ಕಣ್ಣಿನಿಂದ ಕಾಲಕಳೆದವರು, ಕಣ್ಣಿನಿಂದ ಕಣ್ಣಕಳೆದವರು,
ಕಣ್ಣಿನಿಂದ ಕಿವಿಯಕಳೆದವರು,
ಕಣ್ಣಿನಿಂದ ಮೂಗಕಳೆದವರು, ಕಣ್ಣಿನಿಂದ ಜಿಹ್ವೆಯ ಕಳೆದವರು,
ಕಣ್ಣಿನಿಂದ ಸರ್ವಾಂಗವನು ಕಳೆದವರು.
ಕಣ್ಣನಿಂದ ಗುರುನಿರಂಜನ ಚನ್ನಬಸವಲಿಂಗವೆಂಬ
ನಾಮವ ಕಳೆದವರು ಶರಣರು. ॥ ೭೮೭ ॥

೭೮೮

ಶ್ರದ್ಧೆ ತೋರಿದಲ್ಲಿ ಆಚಾರಲಿಂಗವ ಕಾಣುವನು.
ನೈಷ್ಠೆದೋರಿದಲ್ಲಿ ಗುರುಲಿಂಗವ ಕಾಣುವನು.
ಸಾವಧಾನ ತೋರಿದಲ್ಲಿ ಶಿವಲಿಂಗವ ಕಾಣುವನು.
ಅನುಭಾವ ತೋರಿದಲ್ಲಿ ಜಂಗಮಲಿಂಗವ ಕಾಣುವನು.
ಆನಂದದೋರಿದಲ್ಲಿ ಪ್ರಸಾದಲಿಂಗವ ಕಾಣುವನು.
ಸಮರಸ ತೋರಿದಲ್ಲಿ ಮಹಾಲಿಂಗವ ಕಾಣುವನು.
ಇಂತು ಷಡ್ವಿಧಭಕ್ತಿ ನಿಷ್ಪತ್ತಿಯಾದಲ್ಲಿ
ಗುರುನಿರಂಜನ ಚನ್ನಬಸವಲಿಂಗವ ಕಾಣದೆ ತಾನು ತಾನಾಗಿಹನು. ॥ ೭೮೮ ॥

೭೮೯

ಎನ್ನ ಕಾಯದಕಳೆ ಬಸವಣ್ಣಂಗಾಭರಣವಾಯಿತ್ತು.
ಎನ್ನ ಮನದಕಳೆ ಚನ್ನಬಸವಣ್ಣಂಗಾಭರಣವಾಯಿತ್ತು.
ಎನ್ನ ಪ್ರಾಣದಕಳೆ ಪ್ರಭುದೇವರಿಗಾಭರಣವಾಯಿತ್ತು.
ಎನ್ನರುಹಿನಕಳೆ ಮಡಿವಾಳಯ್ಯಂಗಾಭರಣವಾಯಿತ್ತು.
ಗುರುನಿರಂಜನ ಚನ್ನಬಸವಲಿಂಗವೆಂಬ ನಾಮ ನಷ್ಟವಾಯಿತ್ತು. ॥ ೭೮೯ ॥

## ಐಕ್ಯಸ್ಥಲ

ಸೂತ್ರ : ಇಂತು ಶರಣಸ್ಥಲದಲ್ಲಿ ಆಚರಿಸಿದ ಮಹಾತ್ಮನು ತನ್ನ ಪ್ರಸಾದ ಲಿಂಗದಲ್ಲಿ ಸುಜ್ಞಾನವೆಂಬ ಹಸ್ತವ ನಡೆಸಿದಲ್ಲಿ, ಲಿಂಗವು ಈ ಶರಣನ ಸತಿಭಾವ ಮನ್ನತಿಯೋಳ್ಸುಖಪರಿಣಾಮ ತೀರಲು, ಮಹಾ ಲಿಂಗವಾಗಿ ತೋರಲಾ ಶರಣನು ಸಮರಸಭಕ್ತಿಯಿಂದಾಚರಿಸಲು ಮುಂದೆ ಐಕ್ಯಸ್ಥಲವೆಂದು ಹೇಳ ಲಾಯಿತ್ತು.

೭೯೦

ಆದಿಯ ಆಧಾರವಿಡಿದವರಿಗಸಾಧ್ಯವ ಸಾಧಿಸಿ ಕಂಡ ಶರಣ
ತನುವುಳ್ಳನ್ನಕ್ಕರ ಭಕ್ತಿಯಮಾಡಿ, ಮನವುಳ್ಳನ್ನಕ್ಕರ ಅರ್ಚನೆಯಮಾಡಿ,
ಪ್ರಾಣವುಳ್ಳನ್ನಕ್ಕರ ದಾಸೋಹವಮಾಡಿ, ಭಾವವುಳ್ಳನ್ನಕ್ಕರ ಸಮರಸಕ್ಕೆಯ್ದಬೇಕು.
ತನ್ನ ವಿನೋದ ಸೂಸಿಕೊಂಡಲ್ಲಿ ತನು ಇಷ್ಟಲಿಂಗೈಕ್ಯವು,
ಮನ ಪ್ರಾಣಲಿಂಗೈಕ್ಯವು, ಪ್ರಾಣವು ಭಾವಲಿಂಗೈಕ್ಯವು,
ಭಾವವು ಗುರುನಿರಂಜನ ಚನ್ನಬಸವಲಿಂಗೈಕ್ಯವಾದುದೇ
ಶರಣಂಗೆ ನಿಜೈಕ್ಯವು. ॥ ೭೯೦ ॥

೭೯೧

ನಿಜಲಿಂಗೈಕ್ಯ ನಿಜಲಿಂಗೈಕ್ಯರೆಂದು ನುಡಿದುಕೊಂಬ
ಕಡುಮಂದಮತಿಗಳನೇನೆಂಬೆನಯ್ಯಾ.
ಸತ್ವ-ರಜ-ತಮ ಗಿರಿಯ ಗವಿಯ ಹೊಕ್ಕು ಗಬ್ಬುಗೊಂಡು
ಗರಳಘಾತದೊಳು ಮುಳುಗಿದ ವಿಹಂಗಗತಿಗಳೆತ್ತಬಲ್ಲರಯ್ಯಾ
ನಿಮ್ಮ ಶರಣನ ಲಿಂಗೈಕ್ಯದ ಘನವ !
ಪತಂಗ ಜಲದಲ್ಲಿ ಮುಳುಗಬಾರದು,
ಅನಿಮಿಷನು ಅಗ್ನಿಯಲ್ಲಿ ಮುಳುಗಬಾರದು
ಗುರುನಿರಂಜನ ಚನ್ನಬಸವಲಿಂಗ ನಿಮ್ಮ ನೀವೇ ಬಲ್ಲಿರಿ. ॥ ೭೯೧ ॥

೭೯೨

ಕಾಯವ ಕರ್ಮದಲ್ಲಿ ಮುಳುಗಿಸಿ,
ಮನವನು ಮಾಯಾವಿಷಯದಲ್ಲಿ ಮುಳುಗಿಸಿ,
ಪ್ರಾಣವನು ಹೇಮದ ಆಮಿಷದಲ್ಲಿ ಮುಳುಗಿಸಿ,
ಭಾವವನು ಸಕಲಭ್ರಮೆಯಲ್ಲಿ ಮುಳುಗಿಸುವ ಅವಿಚಾರಿಗೆ
ಅಪ್ರತಿಮಕ್ರಿಯೆಯಲ್ಲಡಗಿ, ಅನುಪಮಜ್ಞಾನದಲ್ಲಿ ಉಡುಗಿ,
ಪರಮಜ್ಞಾನದಲ್ಲಿ ಹೊಕ್ಕು,
ಮಹಾಜ್ಞಾನದಲ್ಲಿ ಮಗ್ನತೆಯನೈದುವ ನಿಜಪದವೆಂತು ಸಾಧ್ಯವಪ್ಪುದು ಹೇಳಾ
ಗುರುನಿರಂಜನ ಚನ್ನಬಸವಲಿಂಗಾ. ॥ ೭೯೨ ॥

೭೯೩

ಕಾಯ ಲಿಂಗವ ಮಾಡಿ ಕಂಡರೆ ದಿಟವೆಂಬೆ,
ಮನ ಲಿಂಗವಮಾಡಿ ಕಂಡರೆ ದಿಟವೆಂಬೆ.
ಭಾವ ಲಿಂಗವಮಾಡಿ ಕಂಡರೆ ದಿಟವೆಂಬೆ.
ಗುರುನಿರಂಜನ ಚನ್ನಬಸವಲಿಂಗವಾಗಿ ಅರಿಯದಿರ್ದಡೆ ದಿಟವೆಂಬೆ
ಲಿಂಗೈಕ್ಯ ಶರಣಂಗೆ. ॥ ೭೯೩ ॥

೭೯೪

ತಾನು ತಾನಾಗಿ ತನ್ನನರಿಯದಿರ್ದ ಶರಣನ
ಇಂದ್ರಿಯಂಗಳು ಸತ್ತಿರ್ದವು,
ವಿಷಯಂಗಳು ಸತ್ತಿರ್ದವು,
ಕರಣಂಗಳು ಸತ್ತಿರ್ದವು
ಗುರುನಿರಂಜನ ಚನ್ನಬಸವಲಿಂಗವಾಗಿ. ॥ ೭೯೪ ॥

೭೯೫

ಲಿಂಗವಾದ ಶರಣನಂಗದಲ್ಲಿ ದುಸ್ಸಂಗ ದುರ್ಗುಣ ದುಶ್ಚೇಷ್ಟೆಗಳುಂಟೆ ?
ಕುಟಿಲ ಕುಯುಕ್ತಿ ಹಟಕರ್ಮ ಹರಕಮಾತುಗಳುಂಟೆ ?
ಹೆಣ್ಣುಭೂತ ಮಣ್ಣುಭೂತ ಹೊನ್ನು ಭೂತದಾಹುತಿಯಾಗಿ ಹೋಗಲುಂಟೆ ?
ಸತ್ತು ಬಂದು ಸುತ್ತಿಮುಳುಗುವ ನಿತ್ಯಲಿಂಗೈಕ್ಯನ ಘನವನು
ಗುರುನಿರಂಜನ ಚನ್ನಬಸವಲಿಂಗದಲ್ಲಿಯೇ ಕಾಣಲಾಯಿತ್ತು. ॥ ೭೯೫ ॥

೭೯೬

ಮಾಡಲಿಲ್ಲದ ತನುವನು ಮಾಡಿಕೆಡಹಿದರು.
ಮಾಡಲಿಲ್ಲದ ಮನವನು ಮಾಡಿಕೆಡಹಿದರು.

ಮಾಡಲಿಲ್ಲದ ಪ್ರಾಣವನು ಮಾಡಿಕೆಡಹಿದರು.
ಕೂಡಲಿಲ್ಲದ ಆತ್ಮನನು ಕೂಡಿಕೆಡಹಿದರು.
ಗುರುನಿರಂಜನ ಚನ್ನಬಸವಲಿಂಗಾ ನೀ ಸಾಕ್ಷಿಯಾಗಿ. || ೨೯೬ ||

೨೯೭

ತಾಮಸಗುಣದಲ್ಲಿ ತಲ್ಲೀಯವಾದ ನಾಮದೇಹಿಗಳ
ನಡೆ ಲಿಂಗದೊಳಡಗದು, ನುಡಿ ಲಿಂಗದೊಳಡಗದು,
ನೋಟವು ಲಿಂಗದೊಳು ನಾಟದು, ಮಾಟ ಮಾಣದು.
ಮಂಜಿನ ಮರೆಯಲ್ಲಿ ಮುಳುಗಿ, ಗಂಜಿಯ ಕಳೆದು ನಿರಂಜನದ ನಿಲುವೆಂದಡೆ
ಅಂಜಿ ಅಲಸಿದನು ಅಪ್ಪಿಕೊಳ್ಳದೆ ಗುರುನಿರಂಜನ ಚನ್ನಬಸವಲಿಂಗ. || ೨೯೭ ||

೨೯೮

ನಡೆನಡೆದು ನಡೆಗಳುಡುಗಿ ನುಡಿನುಡಿದು ನುಡಿಗಳುಡುಗಿ
ಕಡುತವಕ ಕಡೆಗಿಟ್ಟು ಕಾಣದಿರ್ದ ಶರಣನಖಂಡಿತನೆಂದು
ಕಲ್ಪನೆಗೆ ತಂದು ನುಡಿವ ನರರುಗಳಿಗೆ ನರಕವೇ ಕಡೆಗಿಂಬು ಕಾಣಾ
ಗುರುನಿರಂಜನ ಚನ್ನಬಸವಲಿಂಗಸಾಕ್ಷಿ. || ೨೯೮ ||

೨೯೯

ಅಯ್ಯಾ, ತಾನೇ ತನ್ನವಿನೋದಕ್ಕೆ ತಂದು,
ತನ್ನಿಂದೆ ತನ್ನನಾರಾಧನೆಯ ಮಾಡಿ,
ಮರೆಯಾಗಿ ಮಾಜುವ ಮಹಾಂತರ ಕಂಡು,
ಮನವೊಂದುಕಡೆಗೆ ತನುವೊಂದುಕಡೆಗೆ ನುಡಿಯೊಂದುಕಡೆಗೆ ಮಾಡಿ
ವಂದನೆ ನಿಂದನೆಗಳ ನೆರೆದು ನಡೆವ ಪಶುಪ್ರಾಣಿಗಳಿಗೆ
ಕುಂಭಿನೀ ನಾಯಕನರಕ ಕಡೆಗಿಂಬು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೨೯೯ ||

೩೦೦

ನಡೆಯಲಾರದವರು ನಡೆದರೆ ಸೈರಿಸಲಾರದವರು,
ನುಡಿಯಲಾರದವರು ನುಡಿದರೆ ಸೈರಿಸಲಾರದವರು,
ನೋಡಲಾರದವರು ನೋಡಿದರೆ ಸೈರಿಸಲಾರದವರು,
ಕೂಡಲಾರದವರು ಕೂಡಿದರೆ ಸೈರಿಸಲಾರದವರು,
ಗುರುನಿರಂಜನ ಚನ್ನಬಸವಲಿಂಗವನರಿಯದೆ ನರಕವನೈದುವರು. || ೩೦೦ ||

೮೦೧

ಕಾಯಭಾವ ಕಾಯದಲ್ಲಿಯೇ ಬೆಳೆದು ಕಾಯದಲ್ಲಿಯೇ ಅಡಗಿ,
ಮನಭಾವ ಮನದಲ್ಲಿಯೇ ಬೆಳೆದು ಮನದಲ್ಲಿಯೇ ಅಡಗಿ,
ಪ್ರಾಣನಭಾವ ಪ್ರಾಣದಲ್ಲಿಯೇ ಬೆಳೆದು ಪ್ರಾಣದಲ್ಲಿಯೇ ಅಡಗಿ,
ಅತ್ತಿತ್ತಲರಿಯದೆ ಸತ್ತುಹೋಗುವ ಮಿಥ್ಯಮಾನವರು
ಕಾಯವಕಳೆದು ಕಾಣಿಸಿ ಅಡಗಿ, ಮನವಕಳೆದು ಕಾಣಿಸಿ ಅಡಗಿ,
ಪ್ರಾಣವಕಳೆದು ಕಾಣಿಸಿ ಅಡಗಿ, ಅತ್ತಿತ್ತರಿಯದೆ ಅಡಗಿ ಹೋಗುವ
ಅಖಂಡೈಕ್ಯವನಿವರೆತ್ತ ಬಲ್ಲರು ?
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿ. ॥ ೮೦೧ ॥

೮೦೨

ನಿರಂಜನ ಲಿಂಗಸನ್ನಿಹಿತ ನಿರಾಮಯ ಶರಣಂಗೆ
ಖಂಡಿತವಿಟ್ಟು ನುಡಿವ ವರ್ಮಗೇಡಿ ಕುರಿಮನುಜರ ವಾಕ್ಪಟುತ್ವವ ನೋಡಾ !
ಆದಿ ಅನಾದಿಯಿಂದತ್ತತ್ತಲಾದ ಮೂದೇವರರಿಯದ ಮಹದಾನಂದವೇ
ಕಾರ್ಯಕಾರಣಾತೀತ ತನ್ನತನಗೆ ಸಕಲನಿಃಕಲಸೌಜನ್ಯವಾಯಿತ್ತು.
ಆ ಸಚ್ಚಿದಾನಂದ ಪರಬ್ರಹ್ಮವೇ ಶರಣಲಿಂಗಸಂಬಂಧವೆಂಬುದಾದುದು.
ಆ ಶರಣಲಿಂಗಸಂಬಂಧವೆ ತನ್ನ ವಿನೋದಕ್ಕೆ ತಾನೇ ಅಂಗವಾಗಿ, ಲಿಂಗವಾಗಿ,
ಶಕ್ತಿಯಾಗಿ, ಭಕ್ತಿಯಾಗಿ, ಹಸ್ತವಾಗಿ,
ಮುಖವಾಗಿ, ಪದಾರ್ಥವಾಗಿ, ಪ್ರಸಾದವಾಗಿ,
ಅಷ್ಟಾವರಣವಾಗಿ, ಪೂಜ್ಯನಾಗಿ, ಪೂಜಕನಾಗಿ, ಉಪಕರಣವಾಗಿ
ಇಂತು ತನ್ನ ತಾನಾನಂದಿಸಿ, ತನ್ನಲ್ಲಿ ತಾ ನಿರ್ವಯಲಾದರೆ
ಮುಂದೇನರಿಯದೆ ನಿಂದೆಯ ಮಾಡುವ ಬೆಂದ ಮೂಢರಿಗೆ
ಮುಂದೆ ವೈತರಣಿಯಿಂಬುಗೊಟ್ಟಿಹುದು ;
ಗುರುನಿರಂಜನ ಚನ್ನಬಸವಲಿಂಗ ದೂರವಾಗಿಹನು. ॥ ೮೦೨ ॥

೮೦೩

ಗುರುಸ್ಥಲವುಳ್ಳನ್ನಕ್ಕರ ಶಿಷ್ಯ, ಲಿಂಗಸ್ಥಲವುಳ್ಳನ್ನಕ್ಕರ ಭಕ್ತ,
ಜಂಗಮಸ್ಥಲವುಳ್ಳನ್ನಕ್ಕರ ಶರಣ,
ಇಂತು ಗುರುಲಿಂಗಜಂಗಮವನರಿದು ಮರೆದಲ್ಲಿ
ಲಿಂಗೈಕ್ಯ ತಾನೆ ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೮೦೩ ॥

ಲ೦೪

ಲಿಂಗದಲ್ಲೈಕ್ಯವನರಿದ ಶರಣನ ಅಂಗ ಕರ್ಮದಲ್ಲಿ ಮುಳುಗದು,
ಮನ ಮಾಯೆಯಲ್ಲಿ ಮುಳುಗದು, ಪ್ರಾಣ ದುಸ್ಸುಖದಲ್ಲಿ ಮುಳುಗದು,
ಭಾವ ಭ್ರಮೆಯಲ್ಲಿ ಮುಳುಗದು.
ಇಂತು ಚತುರ್ವಿಧಸನ್ನಿಹಿತನಾಗಿ
ಗುರುನಿರಂಜನ ಚನ್ನಬಸವಲಿಂಗೈಕ್ಯ ನೋಡಾ. || ಲ೦೪ ||

ಲ೦೫

ಲಿಂಗದಲ್ಲಿ ಅಂಗವು ಸವೆದು, ಅಂಗದಲ್ಲಿ ಲಿಂಗವು ಸವೆದು,
ಲಿಂಗಾಂಗದಲ್ಲಿ ಸಂಗಸಮನಿಸಿ ಸಮರಸವಾದ ಶರಣನೇ ಲಿಂಗೈಕ್ಯ.
ಇಂತಲ್ಲದೆ ಸಂತೆಯ ಸ್ಥಲಕ್ಕೆಡೆಯಾಡುವ ಭ್ರಾಂತುಭವಿಗಳು
ಬಂದ ಭಾವದಲ್ಲಡಗುವ ಸುಖವನರಿವರೆ
ಗುರುನಿರಂಜನ ಚನ್ನಬಸವಲಿಂಗಾ.? || ಲ೦೫ ||

ಲ೦೬

ಚಿತ್ತವನಡಗಿಸಿ ಬಂದವರು ಭಕ್ತೈಕ್ಯಪದಸ್ಥರಹರೆ ?
ಬುದ್ಧಿಯನಡಗಿಸಿಬಂದವರು ಮಹೇಶ್ವರೈಕ್ಯಪದಸ್ಥರಹರೆ ?
ಅಹಂತೆಯನಡಗಿಸಿ ಬಂದವರು ಪ್ರಸಾದಿಯೈಕ್ಯಪದಸ್ಥರಹರೆ ?
ಮನವನಡಗಿಸಿ ಬಂದವರು ಪ್ರಾಣಲಿಂಗಿಯೈಕ್ಯಪದಸ್ಥರಹರೆ ?
ಜ್ಞಾನವನಡಗಿಸಿ ಬಂದವರು ಶರಣೈಕ್ಯಪದಸ್ಥರಹರೆ ?
ಭಾವವನಡಗಿಸಿ ಬಂದವರು ನಿಜೈಕ್ಯಪದಸ್ಥರಹರೆ ?
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ಲ೦೬ ||

ಲ೦೭

ಆರೈಕ್ಯವನರಿದುಬಂದರೆ ಭಕ್ತಲಿಂಗೈಕ್ಯವೆಂಬೆ.
ಆರೈಕ್ಯವನರಿದುಬಂದರೆ ಮಹೇಶ್ವರಲಿಂಗೈಕ್ಯವೆಂಬೆ.
ಆರೈಕ್ಯವನರಿದುಬಂದರೆ ಪ್ರಸಾದಿಲಿಂಗೈಕ್ಯವೆಂಬೆ.
ಆರೈಕ್ಯವನರಿದುಬಂದರೆ ಪ್ರಾಣಲಿಂಗಿಲಿಂಗೈಕ್ಯವೆಂಬೆ.
ಆರೈಕ್ಯವನರಿದುಬಂದರೆ ಶರಣಲಿಂಗೈಕ್ಯವೆಂಬೆ.
ಆರೈಕ್ಯವನರಿದುಬಂದರೆ ನಿಜೈಕ್ಯವೆಂಬೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ಲ೦೭ ||

೮೦೮

ಗುರುವ ಕಂಡು ಶರಣೆಂದವರು, ಲಿಂಗವ ಕಂಡು ಶರಣೆಂದವರು,
ಜಂಗಮವ ಕಂಡು ಶರಣೆಂದವರು ಸ್ವಯವನರಿಯರು.
ಗುರುವ ಕಂಡು ಶರಣೆನ್ನದವರು, ಲಿಂಗವ ಕಂಡು ಶರಣೆನ್ನದವರು,
ಜಂಗಮವ ಕಂಡು ಶರಣೆನ್ನದವರು ಮರೆವಿನ ಸುಖಪರಿಣಾಮ ತಲೆಗೇರಿ
ತಲ್ಲೀಯವಾದರು ಗುರುನಿರಂಜನ ಚನ್ನಬಸವಲಿಂಗದೊಳಗೆ. ॥ ೮೦೮ ॥

೮೦೯

ಹಾರುವನ ಕೊಂದು ಹಾರುವನಾಗಿ
ಕರ್ಮಜ್ಞಾನ ಕಂಡು ಕಾಣಿಸದಿರ್ದು ಕರಗಿದರೆ
ಆತನೇ ಗುರುನಿರಂಜನ ಚನ್ನಬಸವಲಿಂಗ. ॥ ೮೦೯ ॥

೮೧೦

ಭುವನಸಾರಾಯ ಹಾರುವರು ಭವನಸಾರಾಯಸುಖವನೆತ್ತ ಬಲ್ಲರು.
ವಿಹಂಗ ಹಂಸಗಳಂತೆ ಹೇಯದಲ್ಲಿ ಉದಿಸಿದ ಕ್ರಿಮಿಗಳು
ಅಲ್ಲಿಯೇ ಲಯವಲ್ಲದೆ ಮತ್ತೆ ಉಂಟೆ ?
ಗುರುನಿರಂಜನ ಚನ್ನಬಸವಲಿಂಗಾ. ॥ ೮೧೦ ॥

೮೧೧

ಮಹದಲ್ಲಿ ಮನಮುಳುಗಿಸಿದ ಮಹಾಂತನ
ಬಗೆಗೊಳ್ಳದೆ ಬೊಗಳಲಾಗದು.
ಅದೇನು ಕಾರಣವೆಂದೊಡೆ,
ಲಿಂಗದೊಳಗಿರ್ದು ಬಲ್ಲಂತೆ ನಡೆವನು ಬಲ್ಲಂತೆ ನುಡಿವನು.
ಬಲ್ಲಂತೆ ಸಕಲ ವ್ಯವಹಾರದೊಳಗಿರ್ದರು ಎಂತಿರ್ದಂತೆ ನಿಜವು ತಾನೆ
ಗುರುನಿರಂಜನ ಚನ್ನಬಸವಲಿಂಗಾ. ॥ ೮೧೧ ॥

೮೧೨

ತನುವಿಲ್ಲದ ಘನಕ್ಕೆ ತನುಸಂಬಂಧಿಸಿದರೆ ಒಂದನೆಯ ಪಾತಕ.
ಮನವಿಲ್ಲದ ಘನಕ್ಕೆ ಮನವ ಸಂಬಂಧಿಸಿದರೆ ಎರಡನೆಯ ಪಾತಕ.
ಧನವಿಲ್ಲದ ಘನಕ್ಕೆ ಧನವ ಸಂಬಂಧಿಸಿದರೆ ಮೂರನೆಯ ಪಾತಕ.
ಭಾವವಿಲ್ಲದ ಘನಕ್ಕೆ ಭಾವ ಸಂಬಂಧಿಸಿದರೆ ನಾಲ್ಕನೆಯ ಪಾತಕ.
ತಾನಿಲ್ಲದ ಘನಕ್ಕೆ ತನ್ನ ಸಂಬಂಧಿಸಿದರೆ ಐದನೆಯ ಪಾತಕ.
ಇಂತು ಪಂಚವಿಧವನರಿಯದೆ

ಪಂಚಬ್ರಹ್ಮ ಗುರುನಿರಂಜನ ಚನ್ನಬಸವಲಿಂಗದಲ್ಲಡಗಿರ್ದ ನಿಜಕ್ಕೆ
ಗಜಬಜೆಯಗಲಸಿದರೆ ಪಂಚಮಹಾಪಾತಕದೊಳಗಾಗುವರು. ‖ ೮೧೨ ‖

೮೧೩

ಕಾಲಿಲ್ಲದ ನಡೆ, ಕೈಯಿಲ್ಲದ ಮುಟ್ಟು, ಕಣ್ಣಿಲ್ಲದ ನೋಟ,
ಕರ್ಣವಿಲ್ಲದ ಕೇಳುವಿಕೆ, ನಾಸಿಕವಿಲ್ಲದ ವಾಸನೆ,
ನಾಲಿಗೆಯಿಲ್ಲದ ನುಡಿ, ತಾನಿಲ್ಲದ ಸುಖ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣಲಿಂಗೈಕ್ಯವು. ‖ ೮೧೩ ‖

೮೧೪

ಇಹ-ಪರದ ಪರಿಮಳನಲ್ಲ, ಪುಣ್ಯ-ಪಾಪದ ಪರಿಮಳನಲ್ಲ,
ಮಾಟ-ನೋಟದ ಪರಿಮಳನಲ್ಲ, ಕೋಟಲೆ ಕೂಟದ ಪರಿಮಳನಲ್ಲ,
ಗುರುನಿರಂಜನ ಚನ್ನಬಸವಲಿಂಗಕ್ಕೆ ಸಲ್ಲಿದ ಪರಿಮಳ ಕಾಣಾ. ‖ ೮೧೪ ‖

೮೧೫

ಭಕ್ತಿಯಲ್ಲಿ ಬಂದು, ಜ್ಞಾನದಲ್ಲಿ ಬೆಳೆದು,
ವೈರಾಗ್ಯದಲ್ಲಿ ಅಡಗಿರ್ದ ಅಪ್ರತಿಮಶರಣ.
ಅರಿದು ಮಾಡುವನಲ್ಲ, ಹರಿದುಬಿಟ್ಟವನಲ್ಲ, ತೋರಿಸಿಕೊಂಬುವನಲ್ಲ.
ಲೋಕದೊಳಗಿರ್ದು ಲಿಂಗದೊಳಗಿರ್ದ ನಿಲವನಾರು ಬಲ್ಲರು ಹೇಳಾ !
ಬೇಕುಬೇಡೆನ್ನದ ಮೂಕಮಾತನಲ್ಲ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. ‖ ೮೧೫ ‖

೮೧೬

ಮಣ್ಣ ಹಿಡಿದು ಸಂಸಾರಿಯಲ್ಲ, ಮಣ್ಣ ಬಿಟ್ಟು ವೈರಾಗ್ಯನಲ್ಲ.
ಹೆಣ್ಣ ಹಿಡಿದು ವಿಕಾರಿಯಲ್ಲ, ಹೆಣ್ಣ ಬಿಟ್ಟು ನಿಷ್ಕಾಮಿಯಲ್ಲ.
ಹೊನ್ನ ಹಿಡಿದು ಲೋಭಿಯಲ್ಲ, ಹೊನ್ನ ಬಿಟ್ಟು ನಿರ್ಲೋಭಿಯಲ್ಲ.
ಹೇಗೆ ಇರ್ದಂತೆ ಗುರುನಿರಂಜನ ಚನ್ನಬಸವಲಿಂಗದೊಳಗೆ ಐಕ್ಯ ಕಾಣಾ. ‖೮೧೬‖

೮೧೭

ಮಾರ್ಗಕ್ರಿಗಳನಡಗಿಸಿಕೊಂಡು
ಮೀರಿದಕ್ರಿಯೆಯಲ್ಲಿ ನಿಂದು ಸಮರಸವಾದ ಶರಣ,
ತಾನೇನು ಭಕ್ತಿಕ್ರೀಯಲ್ಲಿರ್ದಡು ತಾನಳಿದಿಹನು ;
ತಾನೇನು ವ್ಯಾಪಾರದೊಳಿರ್ದಡು ಹುಸಿವಿರಹಿತನು ;
ತಾನೇನಸ್ವತ್ರ ಚರಿಸಿದಡೆಯು ಬೇಡ ಮರೆದಿಹನು.

ತಾನೆಂತಿರ್ದಡೆಯು ಬೇಡಿದರಿಲ್ಲೆನ್ನ ಮರೆದಿಹನು.
ಈ ಚತುರ್ವಿಧದಲ್ಲಿರ್ದು ಗುರುನಿರಂಜನ ಚನ್ನಬಸವಲಿಂಗವಾಗಿಹನು. ॥೮೧೭॥

೮೧೮

ಬಯಲಬೀಜ ಭೂಮಿಯಲ್ಲಂಕುರಿಸಿ
ಎಲೆಯೆರಡಾದುವು, ಎಸಳು ಮೂರಾದವು,
ಕುಸುಮ ಆರಾದವು, ಕಾಯಿ ಮೂವತ್ತಾರಾದವು,
ಹಣ್ಣು ಇನ್ನೂರಾಹದಿನಾರಾದವು.
ತೊಟ್ಟು ತುಂಬಿ ವಿಶ್ವಪರಿಪೂರ್ಣವಾಗಿ
ತೊಟ್ಟು ಕಳಚಿ ಇನ್ನೂರಹದಿನಾರರೊಳು ನಿಂದು
ಆ ಮೂವತ್ತಾರರಲ್ಲಿ ಅಡಗಿ ಆರರಲ್ಲಿ ಅಳಿದು
ಮೂರರಲ್ಲಿ ಮುಳುಗಿ ಎರಡರಲ್ಲಿ ನಿಂದು ಒಂದಾಗಿ ಮರೆದುಳಿದು
ಗುರುನಿರಂಜನ ಚನ್ನಬಸವಲಿಂಗದೊಳಗೆ. ॥ ೮೧೮ ॥

೮೧೯

ಘ್ರಾಣದೊಳಗೆ ಗಂಧವದೆ ಗಂಧದೊಳಗೆ ಘ್ರಾಣವದೆ.
ನಾಲಿಗೆಯೊಳಗೆ ರುಚಿಯದೆ ರುಚಿಯೊಳಗೆ ನಾಲಿಗೆಯದೆ.
ಕಂಗಳೊಳಗೆ ರೂಪವದೆ ರೂಪಿನೊಳಗೆ ಕಂಗಳಿವೆ.
ತ್ವಕ್ಕಿನೊಳಗೆ ಸ್ಪರ್ಶನವದೆ ಸ್ಪರ್ಶದೊಳಗೆ ತ್ವಕ್ಕಿದೆ.
ಕರ್ಣದೊಳಗೆ ಶಬ್ದವದೆ ಶಬ್ದದೊಳಗೆ ಕರ್ಣವದೆ.
ಹೃದಯದೊಳಗೆ ಸುಖವದೆ ಸುಖದೊಳಗೆ ಹೃದಯವದೆ.
ಇದು ಕಾರಣ ಗುರುನಿರಂಜನ ಚನ್ನಬಸವಲಿಂಗಾ
ಶರಣನೊಳಗೆ ನೀವು ನಿಮ್ಮೊಳಗೆ ಶರಣ ಕಾಣಾ. ॥ ೮೧೯ ॥

೮೨೦

ಹಡೆದ ಮಗ ತಾಯಿಯ ನುಂಗಿ
ತಾ ಬಯಲಾದುದನೇನೆಂಬೆ
ಗುರುನಿರಂಜನ ಚನ್ನಬಸವಲಿಂಗಾ ! ॥ ೮೨೦ ॥

೮೨೧

ತಾಯಿಯ ತನ್ನೆದೆಯಲ್ಲಿ ಕಂಡು ತಾಯಿಯು ಗಂಡನಾಗಿ ಬಂದರೆ
ಮೂರುಕೂಟಕ್ಕೊಬ್ಬ ಮಗ ಹುಟ್ಟಿ, ಕೈ ಬಾಯಿಯೊಳಗೆ ಬಂದಿತ್ತು ನೋಡಾ.
ಸಾಲುಮನೆಯೊಳು ಸಂಗವ ಮಾಡಿ ಮೇಲುಮನೆಯೊಳಿರ್ದ
ಗುರುನಿರಂಜನ ಚನ್ನಬಸವಲಿಂಗವ ಹೊಕ್ಕು ಬೆರಸಿದೆ ನೋಡಾ. ॥ ೮೨೧ ॥

೮೨೨

ಅರಿಯಬಾರದ ಅರಿವು ಅಂಗವಾದಲ್ಲಿ
ಆಟವೆನ್ನೆ ನೋಟವೆನ್ನೆ ಕೂಟದಸುಖ ತಲೆಗೇರಿತ್ತಾಗಿ,
ಗುರುನಿರಂಜನ ಚನ್ನಬಸವಲಿಂಗದೊಳಗಿರ್ದು ಲಿಂಗವೆನ್ನೆ. ॥ ೮೨೨ ॥

೮೨೩

ಸ್ಥೂಲತನುವಿನ ಜಾಗ್ರಾವಸ್ಥೆಯ ಸಂಸಾರಸಾಗರದಲ್ಲಿ
ಮುಳುಗಿಪ್ಪ ಪ್ರಾಣಿಗಳು ತಾವು
ಇಷ್ಟಲಿಂಗೈಕ್ಯವನೆತ್ತ ಬಲ್ಲರು ಹೇಳಾ !
ಸೂಕ್ಷ್ಮ ತನುವಿನ ಸ್ವಪ್ನಾವಸ್ಥೆಯ ಮಾಯಾಮೋಹದಲ್ಲಿ
ಮುಳುಗಿಪ್ಪ ಮನುಜರು ತಾವು
ಪ್ರಾಣಲಿಂಗೈಕ್ಯವನೆತಕ್ತ ಬಲ್ಲರು ಹೇಳಾ !
ಕಾರಣತನುವಿನ ಸುಷುಪ್ತಾವಸ್ಥೆ ತಾಮಸ ಭ್ರಾಂತಿಯಲ್ಲಿ
ಮುಳುಗಿಪ್ಪ ಆತ್ಮರು ತಾವು
ಭಾವಲಿಂಗೈಕ್ಯವನೆತ್ತ ಬಲ್ಲರು ಹೇಳಾ !
ಅವಸ್ಥಾತ್ರಯದಲ್ಲಿ ಜೀವನತ್ರಯದಿಂದೆ ವರ್ತಿಸುವ ಲೌಕಿಕರಿಗೆ
ಏಕೈಕ್ಯದ ಹೊಲಬು ಎಂದಿಗೂ
ಇಲ್ಲ ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ॥ ೮೨೩ ॥

೮೨೪

ಅಂಗವಿಲ್ಲದ ನಿಲುವಿಂಗೆ ಆಚಾರವಿಲ್ಲ.
ಆಚಾರವಿಲ್ಲದ ನಿಲುವಿಂಗೆ ನೆನಹಿಲ್ಲ.
ನೆನಹು ಇಲ್ಲದ ನಿಲುವಿಂಗೆ ಅರುಹಿಲ್ಲ.
ಅರುಹು ಇಲ್ಲದ ನಿಲುವಿಂಗೆ ಗುರುನಿರಂಜನ
ಚನ್ನಬಸವಲಿಂಗವಿಲ್ಲದ ನಿಜೈಕ್ಯ ತಾನೆ ನೋಡಾ. ॥ ೮೨೪ ॥

೮೨೫

ಏನೂ ಇಲ್ಲದ ಠಾವಿನಲ್ಲಿ ನಿಂದು ಭೂಮಿಯ ನೋಡಲು
ಶ್ರದ್ಧೆಯ ಕಳೆ ಕಾಣಬಂದಿತ್ತು.
ನಿಂದು ಜಲವ ನೋಡಲು ನೈಷ್ಠೆಯ ಕಳೆ ಕಾಣಬಂದಿತ್ತು.
ಬೆಂಕಿಯ ನೋಡಲು ಸಾವಧಾನಕಳೆ ಕಾಣಬಂದಿತ್ತು,
ಗಾಳಿಯ ನೋಡಲು ಅನುಭಾವಕಳೆ ಕಾಣಬಂದಿತ್ತು

ಆಕಾಶವ ನೋಡಲು ಆನಂದಕಳೆ ಕಾಣಬಂದಿತ್ತು
ಆತ್ಮನ ನೋಡಲು ಸಮರಸದಕಳೆ ಕಾಣಬಂದಿತ್ತು.
ಇದು ಕಾರಣ ತನ್ನ ತಾ ನೋಡಲು
ಗುರುನಿರಂಜನ ಚನ್ನಬಸವಲಿಂಗವಾಗಿ
ಕಣ್ಣುಗೆಟ್ಟು ನಿಜಲಿಂಗೈಕ್ಯವಾಯಿತ್ತು. ॥ ೮೨೫ ॥

೮೨೬

ನೀರುಕಲೆತ ಭೂಮಿಯ ಆಸೆಯ ಮರೆದಲ್ಲಿ ಪುಷ್ಪವರಳಿತ್ತು,
ಪೂರ್ಣಿಮೆಯ ಚಂದ್ರ ಮೂಡಿಬರಲು
ಸಣ್ಣಬಾವಿಯ ಶಿಲೆಯ ಜಲವುಕ್ಕಿ ಹಾದಿಯಮೇಲೆ ಸುರಿಯೆ
ಎಡೆಯಾಡುವ ಸಕಲ ತಿಂಥಿಣಿ ಪ್ರಮಥಗಣವಾದುದು ಕಂಡು
ಗುರುನಿರಂಜನ ಚನ್ನಬಸವಲಿಂಗವಾಗಿ ಮರೆದಿರ್ದನು. ॥ ೮೨೬ ॥

೮೨೭

ಗತಿಮತಿಯೊಳೊಡವೆರೆದ ಪರಮಾನಂದ ಶರಣ
ಪುತ್ರ ಮಿತ್ರ ಕಳತ್ರಾದಿಗಳನರಿಯ ನೋಡಾ.
ಜಾತಿ ಗೋತ್ರ ಕುಲ ಆಶ್ರಮ ನಾಮ ವರ್ಣಂಗಳಿಲ್ಲದೆ
ಭಕ್ತಾಂಗನೆ ಮುಕ್ತಾಂಗನೆಯ ನೆರೆದು ಯುಕ್ತಿಯನಳಿದುಳಿದು
ಗುರುನಿರಂಜನ ಚನ್ನಬಸವಲಿಂಗದಲ್ಲಿ
ತಾನು ತಾನಾದ ಭಾವಶೂನ್ಯನ ಏನೆಂದುಪಮಿಸಬಹುದು ಹೇಳಾ ! ॥ ೮೨೭ ॥

೮೨೮

ಶರಧಿಯ ಜಲವು ಒಂದಾಣತಿಯಿಂದ ಆಕಾಶದಲ್ಲಿ ಮೇಘವಾಗಿ
ಸುರಿದಜಲ ಭೂಮಿವಿಡಿದು, ನದಿಗೂಡಿ ಹರಿದು ಸಮುದ್ರವನೊಡವೆರೆದಂತೆ
ಮಹಾಘನ ಸಮುದ್ರದಿಂದಾದ ಚಿದಾನಂದ ಶರಣ
ತನ್ನ ವಿನೋದಕಾರಣ ತನುವಿಡಿದು ಸರ್ವಾಚಾರಸಂಪತ್ತಿನೊಳುಬೆರೆದು
ಮೀರಿದಕ್ರಿಯೆಯಿಂದೆ ಗುರುನಿರಂಜನ ಚನ್ನಬಸವಲಿಂಗದಲ್ಲಿ
ಸಮರಸಾನಂದವ ಏನೆಂದುಪಮಿಸಬಹುದು. ॥ ೮೨೮ ॥

೮೨೯

ಗುರುವುಳ್ಳನ್ನಕ್ಕರ ಶಿಷ್ಯನೆಂಬೆ, ಲಿಂಗವುಳ್ಳನ್ನಕ್ಕರ ಭಕ್ತನೆಂಬೆ,
ಜಂಗಮವುಳ್ಳನ್ನಕ್ಕರ ಶರಣನೆಂಬೆ,
ಈ ತ್ರಿವಿಧವು ಕಾಣದಿರ್ದಡೆ ಗುರುನಿರಂಜನ ಚನ್ನಬಸವಲಿಂಗವೆಂಬೆ. ॥ ೮೨೯॥

೮೩೦

ಗುರುವ ಕಂಡಾತ ಶಿಷ್ಯನಲ್ಲ, ಲಿಂಗವ ಕಂಡಾತ ಭಕ್ತನಲ್ಲ,
ಜಂಗಮವ ಕಂಡಾತ ಶರಣನಲ್ಲ.
ಇದು ಕಾರಣ ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ನಿಜೈಕ್ಯಂಗೆ ಕಾಣಲಿಲ್ಲ ಕಟ್ಟಲಿಲ್ಲ ಮಾಡಲಿಲ್ಲ [ಮಟ್ಟ]ಲಿಲ್ಲ. ‖ ೮೩೦ ‖

೮೩೧

ಸುಚಿತ್ತವನೊಳಕೊಂಡ ಲಿಂಗದ ಕಳೆಯ ನೋಡಾ,
ಸುಬುದ್ಧಿಯನೊಳಕೊಂಡ ಲಿಂಗದ ಕಳೆಯ ನೋಡಾ,
ನಿರಹಂಕಾರವನೊಳಕೊಂಡ ಲಿಂಗದ ಕಳೆಯ ನೋಡಾ,
ಸುಮನವನೊಳಕೊಂಡ ಲಿಂಗದ ಕಳೆಯ ನೋಡಾ,
ಸುಜ್ಞಾನವನೊಳಕೊಂಡ ಲಿಂಗದ ಕಳೆಯ ನೋಡಾ,
ಸದ್ಭಾವವನೊಳಕೊಂಡ ಲಿಂಗದ ಕಳೆಯ ನೋಡಾ,
ಇದು ಕಾರಣ ಎನ್ನ ಸರ್ವಾಂಗವನೊಳಕೊಂಡು
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಕಳೆಯ ನೋಡಾ. ‖ ೮೩೧ ‖

೮೩೨

ಶರಣನ ಬರವದು ಸಕಲಸನ್ನಿಹಿತ,
ಶರಣ ನಿಂದುದು ಸಕಲನಿಃಕಳ,
ಶರಣು ಶರಣಸಂಬಂಧವಾದುದು
ಗುರುನಿರಂಜನ ಚನ್ನಬಸವಲಿಂಗೈಕ್ಯ. ‖ ೮೩೨ ‖

೮೩೩

ದೇಹಭಾವಶೂನ್ಯ ಶರಣಲಿಂಗ, ಮನಭಾವಶೂನ್ಯ ಶರಣಲಿಂಗ,
ಪ್ರಾಣಭಾವಶೂನ್ಯ ಶರಣಲಿಂಗ, ಸರ್ವಶೂನ್ಯ ಶರಣ ಮಹಾಲಿಂಗ.
ಈ ಲಿಂಗೈಕ್ಯನಂತಸ್ಥವನಜಗಣ್ಣ ಬಲ್ಲನಲ್ಲದೆ
ನಾಮರೂಪಕ್ರಿಯಾಸಂಭೋಗಿಗಳೆತ್ತ ಬಲ್ಲರಯ್ಯಾ
ಗುರುನಿರಂಜನ ಚನ್ನಬಸವಲಿಂಗಾ. ‖ ೮೩೩ ‖

೮೩೪

ಅಳಿಯನಂತೆ ಬಂದಪ್ಪನ ಕೈಯಿಂದ ತಲೆಗೆ,
ಗೆಳೆಯನಂತೆ ಬಂದಪ್ಪನ ಮಾತಿನಿಂದೆ ಕಿವಿಗೆ,
ಗಂಡನಂತೆ ಬಂದ ಅಪ್ಪ ಮನೆಯಿಂದ ಕೈಹಿಡಿಯ,

ಇನ್ನೇನು ಮುಟ್ಟಲಪ್ಪಾ, ಇನ್ನೇನು ಕೇಳಲಪ್ಪಾ ಇನ್ನೇನು ಹಿಡಿಯಲಪ್ಪಾ.
ಮುಟ್ಟುವರೆ ಭಾವವಿಲ್ಲ, ಕೇಳುವರೆ ಮನವಿಲ್ಲ, ಹಿಡಿವರೆ ಕೈಯಿಲ್ಲ.
ತಂದೆಯ ಮಗನ ಸಂಗದಿಂದೆ ಸಂಸಾರವ ಮಾಡಿ
ಗಂಡನಕೊಂದು ಸತ್ತುದು ನಮ್ಮ
ಗುರುನಿರಂಜನ ಚನ್ನಬಸವಲಿಂಗಕ್ಕೆ ಸುಖವಾಯಿತ್ತು. ॥ ೮೩೪ ॥

೮೩೫

ಅರಸಿಕೊಂಡು ಬಂದ ಗಂಡನ ಸುಖ ಹೆಂಡತಿಯ ಮುಂದೆ,
ಹೆಂಡತಿಯ ಸುಖ ಗಂಡನೊಳಗೆ,
ಕಾಣಬಾರದ ಸೌಖ್ಯ ಕಾಣಲಾಯಿತ್ತು ಸತಿಯಿಂದೆ ಪತಿಗೆ ;
ಕೊಳ್ಳಬಾರದ ಸೌಖ್ಯ ಕೊಳ್ಳಲಾಯಿತ್ತು ಪತಿಯಿಂದೆ ಸತಿಗೆ.
ಸತಿಪತಿಸಂಯೋಗದಲ್ಲಿ ಪತಿಯ ಸತಿನುಂಗಿ,
ಸತಿಯು ಪತಿಯಾಗಿ ಪತಿ ಅಳಿದು
ಗುರುನಿರಂಜನ ಚನ್ನಬಸವಲಿಂಗವೆಂಬ ನಾಮನಿರ್ನಾಮವಾಯಿತ್ತು. ॥ ೮೩೫ ॥

೮೩೬

ಗುರುವಿಲ್ಲದ ಶಿಷ್ಯ ಕರವಿಲ್ಲದ ಲಿಂಗವಹಿಡಿದು
ಕಂಗಳಿಲ್ಲದೆ ನೋಡಿ ಕರುಳಿಲ್ಲದೆ ಪೂಜಿಸಿ,
ಭಾವವಿಲ್ಲದೆ ಬೆರೆಸಿದ ಬಳಿಕ
ಮಾಡಬಾರದ ಮಾಟ ನೋಡಬಾರ್ಧದ ನೋಟ ಕೂಡಬಾರದ ಕೂಟ
ನಿಮ್ಮೊಳಗಾಯಿತ್ತು,
ಗುರುನಿರಂಜನ ಚನ್ನಬಸವಲಿಂಗಾ. ॥ ೮೩೬ ॥

೮೩೭

ಅವಿರಳ ಪರಬ್ರಹ್ಮ ಪ್ರಸಾದಮೂರ್ತಿಯು
ತನ್ನ ತಾನೆ ಬೆಳಗಾಗಿ ತೋರುವ ನಿರಂತರ,
ತನುತ್ರಯ ಮನತ್ರಯ ಭಾವತ್ರಯ ಕರಣತ್ರಯಾದಿ
ಸಕಲರಲ್ಲಿಯು ಕೂಡಿ ಗುರುನಿರಂಜನ ಚನ್ನಬಸವಲಿಂಗದ
ಶರಣನು ತನ್ನೊಳಗೆ ಪರಿಣಾಮಿ. ॥ ೮೩೭ ॥

೮೩೮

ತಂದೆ ತಾಯಿಯ ಮಾತ ನೋಡಿಕೊಂಡು ಬಂದೆ ನೋಡಯ್ಯಾ.
ಮಾತಿನ ಮರುಳರ ಕೂಡಿನಿಂದೆ ನೋಡಯ್ಯಾ.

ನೋಡಿನಿಂದಲ್ಲಿ ಮರುಳಗಳಲ್ಲಿಟ್ಟು ಹೋದರು ನೋಡಯ್ಯಾ.
ಸಂಗದಿಂದೆ ಸಂಗವನಳಿದು ನಿಸ್ಸಂಗಿಯಾದೆ ನೋಡಯ್ಯಾ.
ಗುರುನಿರಂಜನ ಚನ್ನಬಸವಲಿಂಗದ ಗರ್ಭದೊಳಡಗಿದೆ ನೋಡಯ್ಯಾ. ||೮೩೮||

೮೩೯

ನನ್ನ ನಾನರಿಯದ ಮುನ್ನ ನಿನ್ನನಾರುಬಲ್ಲರು ಹೇಳಾ,
ನಿನ್ನಿಂದ ನಿನ್ನ ಕಂಡು, ಮುಟ್ಟಿ, ಕೇಳಿಕೊಂಡ ಬಳಿಕ
ನಿನ್ನ ಕಣ್ಣಿಂದೆ ನಿನ್ನ ಕಂಡು, ನಿನ್ನೊಳಗೆ ನೀನಾದಮೇಲೆ
ಗುರುನಿರಂಜನ ಚನ್ನಬಸವಲಿಂಗ ವೇಧಿಸಿಕೊಳ್ಳಲು ತೆರಹಿಲ್ಲ ನೋಡಾ. ||೮೩೯||

೮೪೦

ಗುರುಪಾದೋದಕದೊಳಗಿರ್ದೆವೆಂಬರು :
ಗುರುಪಾದೋದಕದ ನೆಲೆಯನರಿಯದ ಸಂಚಿತದೊಳಗಿಪ್ಪ ವಂಚಕರು.
ಲಿಂಗಪಾದೊವಕದೊಳಗಿರ್ದೆವೆಂಬರು :
ಲಿಂಗಪಾದೋದಕದ ನೆಲೆಯನರಿಯದ ಪ್ರಾರಬ್ಧದೊಳಗಿಪ್ಪ ಮಂದಾತ್ಮರು.
ಜಂಗಮಪಾದೋದಕದೊಳಗಿರ್ದೆವೆಂಬರು ;
ಜಂಗಮಪಾದೋದಕದ ನೆಲೆಯನರಿಯದ ಆಗಾಮಿಯೊಳಗಿಪ್ಪ ಅನಿಷ್ಟರು.
ತ್ರಿವಿಧೋದಕವನರಿಯದೆ ತ್ರಿವಿಧಕರ್ಮದೊಳು ಮುಳುಗಿರ್ದ
ನವಖಿಂಡ ಪಾದೋದಕೈಕ್ಯರೆಂಬ
ಸುಲಭನುಡಿಗೆ ಮೆಚ್ಚರಯ್ಯಾ ನಿಮ್ಮ ಶರಣರು
ಗುರುನಿರಂಜನ ಚನ್ನಬಸವಲಿಂಗಾ. || ೮೪೦ ||

೮೪೧

ಕ್ರಿಯಾ ಗುರುವಿನಿಂದೊದಗಿ ಬಂದ ಮಹಾಂತಪದದಿಂದೆ
ಎನ್ನಂಗವ ಕಂಡೆ ಲಿಂಗದೊಳಗೆ.
ಜ್ಞಾನಗುರುವಿನಿಂದೊದಗಿ ಬಂದ ಮಹಾಂತಪದದಿಂದೆ
ಎನ್ನ ಪ್ರಾಣವಕಂಡೆ ಲಿಂಗದೊಳಗೆ.
ಮಹಾಜ್ಞಾನ ಗುರುವಿನಿಂದೊದಗಿ ಬಂದ ಮಹಾಂತಪದದಿಂದೆ
ಎನ್ನಾತ್ಮವಕಂಡೆ ಲಿಂಗದೊಳಗೆ.
ಅಂಗ ಪ್ರಾಣಾತ್ಮಲಿಂಗದೊಳಗಡಗಿ ತಾನಿಲ್ಲದ ಬಳಿಕ
ಪಾದೋದಕವನಾಹ್ವಾನಿಸಿ ವಿಸರ್ಜಿಸುವ ಭಾವ ತರಹರವಾಗಿ ಮರೆಯಿತ್ತು
ಗುರುನಿರಂಜನ ಚನ್ನಬಸವಲಿಂಗದೊಳಗೆ. || ೮೪೧ ||

೮೪೨

ಮನವ ಮುಳುಗಿಸಿದ ಮಹಾಂತ ಶರಣ
ತಾನೆತ್ತೆತ್ತನೋಡಿದರತ್ತತ್ತ ತಾನೇ ನೋಡಾ.
ಭಿನ್ನಮಾಟ ಜಾಗ್ರಾವಸ್ಥೆಯೊಳು ಅಣುಮಾತ್ರವರಿಯಬಾರದು ಕಾಣಾ.
ಭಿನ್ನನೋಟ ಸ್ವಪ್ನಾವಸ್ಥೆಯೊಳಣುಮಾತ್ರವರಿಯಬಾರದು ನೋಡಾ.
ಭಿನ್ನಕೂಟ ಸುಷುಪ್ತಾವಸ್ಥೆಯೊಳಣುಮಾತ್ರವರಿಯಬಾರದು ಕೇಳಾ
ಗುರುನಿರಂಜನ ಚನ್ನಬಸವಲಿಂಗ ಬೇರಿಲ್ಲ ಕಾಣಾ. || ೮೪೨ ||

೮೪೩

ನಿಮಿಷವಳಿದು ಅನಿಮಿಷನಾಗಿ ಅರಿದು ಮರೆದ ಅಪ್ರತಿಮ ಶರಣ ತಾನೆಂದು
ಕಾರ್ಯ ಕಾರಣಕ್ಕನುಕೂಲಿಯಾದಡು ತಾ ಮಾಡಿದಡು, ತಾ ಸುಖಿಸಿದಡು,
ತನ್ನ ವಿನೋದದಾನಂದದೊಳಗೆಯಲ್ಲದೆ ಅಣುಮಾತ್ರವಿಲ್ಲ ಕಾಣಾ,
ತಾನೆಂತಿರ್ದಂತೆ ಗುರುನಿರಂಜನ ಚನ್ನಬಸವಲಿಂಗ ಕಾಣಾ. || ೮೪೩ ||

೮೪೪

ಅಖಂಡ ಜ್ಞಾನದೊಳಡಗಿರ್ದ ಸರ್ವಶೂನ್ಯಂಗೆ
ಭೇದವಮಾಡಿ ನುಡಿವ ಮಾಯೆಯೊಳಗಿಪ್ಪ ಮನುಜರ ವಾಕ್ಪಟುತ್ವವಂತಿರಲಿ,
ಪ್ರಯೋಜನವಿಲ್ಲದ ಪ್ರಯೋಜನ ಯಾತಕ್ಕೆ ಪ್ರಯೋಜನ ?
ಶೋಭನಮುಂದೆ ಬೊಗಳುವ ಶುನಕನ ಶಬ್ದವನರಿವರಾರು ?
ಆ ಶರಣನೆಂದಿರ್ದಡು ಅಂತಿಲ್ಲ,
ರಸವಿಲ್ಲದ ನಾಲಿಗೆಯಂತೆ ರೂಪಿಲ್ಲದ ನೇತ್ರದಂತೆ
ಗಂಧವಿಲ್ಲದ ಘ್ರಾಣದಂತೆ ಇರ್ದ ಕಾಣಾ ಸಕಲರಲ್ಲಿಯೂ
ಗುರುನಿರಂಜನ ಚನ್ನಬಸವಲಿಂಗ ನಿಮ್ಮ ಶರಣ. || ೮೪೪ ||

೮೪೫

ಕಾಮದಲ್ಲಿ ಮುಳುಗಿ ನುಡಿವರು ಶರಣಂಗೆ ಕಾಮಿಯೆಂದು,
ಕ್ರೋಧದಲ್ಲಿ ಮುಳುಗಿ ನುಡಿವರು ಶರಣಂಗೆ ಕ್ರೋಧಿಯೆಂದು,
ಲೋಭದಲ್ಲಿ ಮುಳುಗಿ ನುಡಿವರು ಶರಣಂಗೆ ಲೋಭಿಯೆಂದು,
ಮೋಹದಲ್ಲಿ ಮುಳುಗಿ ನುಡಿವರು ಶರಣಂಗೆ ಮೋಹಿಯೆಂದು,
ಮದದಲ್ಲಿ ಮುಳುಗಿ ನುಡಿವರು ಶರಣಂಗೆ ಮದಭರಿತನೆಂದು,
ಮತ್ಸರದಲ್ಲಿ ಮುಳುಗಿ ನುಡಿವರು ಶರಣಂಗೆ ಮತ್ಸರಭರಿತನೆಂದು,
ಅರಿಷಡ್ವರ್ಗದಲ್ಲಿರ್ದು ಒಂದೊಂದು ನುಡಿವರೆ ಸಂದೇಹವಿಲ್ಲ ಶರಣಂಗೆ.

ನಿಂದೆಯನಾಡುವ ನರನಿಗೆ ಸೂಕರಜನ್ಮವು ಇದು ಸತ್ಯ
ಗುರುನಿರಂಜನ ಚನ್ನಬಸವಲಿಂಗದ ವಚನ. ॥ ೮೪೫ ॥

೮೪೬

ಭಕ್ತನ ಸಮರಸ ಆಚಾರಲಿಂಗದಲ್ಲಿ,
ಮಹೇಶ್ವರನ ಸಮರಸ ಗುರುಲಿಂಗದಲ್ಲಿ,
ಪ್ರಸಾದಿಯ ಸಮರಸ ಶಿವಲಿಂಗದಲ್ಲಿ,
ಪ್ರಾಣಲಿಂಗಿಯ ಸಮರಸ ಜಂಗಮಲಿಂಗದಲ್ಲಿ.
ಶರಣನ ಸಮರಸ ಪ್ರಸಾದಲಿಂಗದಲ್ಲಿ,
ಐಕ್ಯನ ಸಮರಸ ಮಹಾಲಿಂಗದಲ್ಲಿ,
ಎನ್ನ ಸಮರಸ ಗುರುನಿರಜನ ಚನ್ನಬಸವಲಿಂಗದಲ್ಲಿ. ॥ ೮೪೬ ॥

೮೪೭

ಆಚಾರಲಿಂಗದೊಳಗಿರ್ದು ಗಂಧವನರಿಯೆ,
ಗುರುಲಿಂಗದೊಳಗಿರ್ದು ರುಚಿಯನರಿಯೆ,
ಶಿವಲಿಂಗದೊಳಗಿರ್ದು ರೂಪವನರಿಯೆ,
ಜಂಗಮಲಿಂಗದೊಳಗಿರ್ದು ಸೋಂಕವನರಿಯೆ,
ಪ್ರಸಾದಲಿಂಗದೊಳಗಿರ್ದು ಶಬ್ದವನರಿಯೆ,
ಮಹಾಲಿಂಗದೊಳಗಿರ್ದು ಪರಿಣಾಮವನರಿಯೆ,
ಅದೇನುಕಾರಣವೆಂದೊಡೆ
ಗುರುನಿರಂಜನ ಚನ್ನಬಸವಲಿಂಗ ತಾನಾದ ಕಾರಣ. ॥ ೮೪೭ ॥

೮೪೮

ಅನಂತಜನ್ಮ ತಿರುಗಿ ಬಂದ ಮನವು ತನ್ನ ವಾಸವಾಗಿರ್ಪುದು.
ಆ ಮನವ ಮಹದಲ್ಲಿರಿಸಿ ಮರೆದುದೇ ನಿಜೈಕ್ಯ.
ಆ ಮನವ ಸಂಸಾರದಲ್ಲಿರಿಸಿ ಮರೆದುದೇ ನರಕ.
ನೀರು ತುಹಿಲ ನೆರೆದರೆ ಬಿಳ್ಪಾಗುವುದು.
ನೀರು ಮಸಿಯ ನೆರೆದರೆ ಕಪ್ಪಾಗುವುದು.
ಇದನರಿದು ಎನಗುಳ್ಳುದೊಂದು ಮನ, ಆ ಮನವನಪ್ಪಿ
ಗುರುನಿರಂಜನ ಚನ್ನಬಸವಲಿಂಗದೊಳಗೆ ಪರಿಣಾಮಿಯಾಗಿರ್ದೆನು. ॥ ೮೪೮ ॥

೮೪೯

ಮಹಾಜ್ಞಾನಗುರುವಿನಿಂದುಪದೇಶವಾದವರೆಂದು ತಿಳಿದ ಬಳಿಕ
ತನ್ನ ಮನವ ಕರ್ಮೇಂದ್ರಿಯಪ್ರಕೃತಿಯಲ್ಲಿ ಮುಳುಗಿಸಲಾಗದು,

ವಿಷಯಪ್ರಕೃತಿಯಲ್ಲಿ ಮುಳುಗಿಸಲಾಗದು,
ಬುದ್ಧೀಂದ್ರಿಯ ಪ್ರಕೃತಿಯಲ್ಲಿ ಮುಳುಗಿಸಲಾಗದು,
ವಾಯುಪ್ರಕೃತಿಯಲ್ಲಿ ಮುಳುಗಿಸಲಾಗದು,
ಕರಣಪ್ರಕೃತಿಯಲ್ಲಿ ಮುಳುಗಿಸಲಾಗದು,
ಇಂತು ಪಂಚಪ್ರಕೃತಿಯಲ್ಲಿ ಮುಳುಗಿಸಲಾಗದು,
ಅದೇನು ಕಾರಣ, ಪಂಚಬ್ರಹ್ಮ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಐಕ್ಯಪದಕ್ಕೆ ಬಾರದುದಾಗಿ. || ೬೪೯ ||

೬೫೦

ತನು ಕ್ರಿಯೆಯಲ್ಲಿ, ಮನ ಜ್ಞಾನದಲ್ಲಿ, ಪ್ರಾಣ ಘನದಲ್ಲಿ,
ಭಾವ ಮಹದಲ್ಲಿ ತರಹರವಾಗಿ,
ತನ್ನ ತಾನರಿದಿರ್ದ ಶರಣನ ಸಮರಸಕ್ಕೆ ಮೆಚ್ಚಿ ಇದ್ದೆನು
ಗುರುನಿರಂಜನ ಚನ್ನಬಸವಲಿಂಗದೊಳಗೆ. || ೬೫೦ ||

## ಐಕ್ಯನ ಭಕ್ತಸ್ಥಲ

೬೫೧

ಆಚಾರಂಗವಾಗಿ ಶ್ರದ್ಧಾಭಕ್ತಿಯನರಿಯೆ.
ಗೌರವಾಂಗವಾಗಿ ನಿಷ್ಠಾಭಕ್ತಿಯನರಿಯೆ.
ಶಿವಾಂಗವಾಗಿ ಸಾವಧಾನಭಕ್ತಿಯನರಿಯೆ.
ಚರಾಂಗವಾಗಿ ಅನುಭಾವಭಕ್ತಿಯನರಿಯೆ.
ಶೇಷಾಂಗವಾಗಿ ಆನಂದಭಕ್ತಿಯನರಿಯೆ.
ಪರಿಣಾಮಂಗವಾಗಿ ಸಮರಸಭಕ್ತಿಯನರಿಯೆ.
ಗುರುನಿರಂಜನ ಚನ್ನಬಸವಲಿಂಗವಾಗಿ ಮಾಡಲರಿಯೆ. || ೬೫೧ ||

೬೫೨

ಮಾಡಲರಿಯೆ ಮನವಿಲ್ಲವಾಗಿ,
ನೋಡಲರಿಯೆ ಭಾವವಿಲ್ಲವಾಗಿ,
ಕೂಡಲರಿಯೆ ಗುರುನಿರಂಜನ ಚನ್ನಬಸವಲಿಂಗ ಬೇರಿಲ್ಲವಾಗಿ. || ೬೫೨ ||

೬೫೩

ಬೇರಿಲ್ಲದ ಲಿಂಗವ ಬೇರೆಮಾಡಿ ಪೂಜಿಸುವ
ತನುಸಂಬಂಧಿಗಳನೇನೆಂಬೆನಯ್ಯಾ !
ತನುಸಂಬಂಧವಾದಲ್ಲಿ ಮನವುಳಿವುದು.

ಭಾವ ಬೆರೆಸುವದು, ಬೆಸಿಗೆ ಬಿಚ್ಚುವದು,
ಗುರುನಿರಂಜನ ಚನ್ನಬಸವಲಿಂಗ ವೇಧಿಸದೆ ಭಕ್ತಿ ಇತ್ತರವಾಗಿಪ್ಪುದು. ॥ ೮೫೩॥

೮೫೪

ಲಿಂಗದ ನಿಜವರಿದು ಮರೆದು ಮಾಡುವ ಭಕ್ತನಿಂಗಿತವನೇನೆಂಬೆನಯ್ಯಾ !
ಕರ್ಮವಿಲ್ಲದ ಕಾಯ, ಕಲ್ಪನೆಯಿಲ್ಲದ ಮನ,
ಮನವಿಲ್ಲದ ನೋಟ, ನೋಟವಿಲ್ಲದ ರುಚಿ, ರುಚಿಯಿಲ್ಲದ ಸೋಂಕು,
ಸೋಂಕಿಲ್ಲದ ಸೊಮ್ಮು, ಸೊಮ್ಮುಯಿಲ್ಲದ ಸುಖ, ಸುಖವಿಲ್ಲದ ಶಬ್ದ,
ಶಬ್ದವಿಲ್ಲದ ಗಂಧ, ಗಂಧವಿಲ್ಲದ ವಾಸನೆ, ವಾಸನೆಯಿಲ್ಲದ ಮಾಟ
ಗುರುನಿರಂಜನ ಚನ್ನಬಸವಲಿಂಗದೊಳಗೆ ಕೂಟ. ॥ ೮೫೪ ॥

೮೫೫

ಊರು ಕೆಟ್ಟುಹೋಗಿ ಕಲ್ಯಾಣ ಕೌಲು ನಿಂದಲ್ಲಿ,
ಕೂಡಿದ ಸಂಪತ್ತು ಸಲ್ಲಲಿತದೊಳಿರ್ದೆನಯ್ಯಾ.
ಎನ್ನ ಮಠಕ್ಕೆ ಬಂದ ಬಸವಣ್ಣನೊಂದುಕೊಂಡ,
ಮಡಿವಾಳಯ್ಯನೊಂದುಕೊಂಡ,
ಚನ್ನಬಸವಣ್ಣನೊಂದುಕೊಂಡ, ಸಿದ್ಧರಾಮಯ್ಯ ನೊಂದುಕೊಂಡ,
ಉರಿಲಿಂಗಪೆದ್ದಣ್ಣನೊಂದುಕೊಂಡ, ಅಜಗಣ್ಣನೊಂದುಕೊಂಡ
ಇಂತಾದಬಳಿಕ ಮುಂದೆ ಮುಕ್ತಾಯಿ ಇಲ್ಲ,
ಮಹಾದೇವಿಯಕ್ಕನೊಳಗಡಗಿರ್ದೆನು
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ. ॥ ೮೫೫ ॥

೮೫೬

ಬಸವಣ್ಣನ ರೂಪವ ನಾನು ಕಾಣಲಿಲ್ಲ,
ಮಡಿವಾಳಯ್ಯನ ರೂಪವ ನಾನು ಕಾಣಲಿಲ್ಲ,
ಮರುಳಶಂಕರದೇವರ ರೂಪವ ನಾನು ಕಾಣಲಿಲ್ಲ,
ಸಿದ್ಧರಾಮಯ್ಯನ ರೂಪವ ನಾನು ಕಾಣಲಿಲ್ಲ,
ಪ್ರಭುವಿನ ರೂಪವ ನಾನು ಕಾಣಲಿಲ್ಲ,
ಘಟ್ಟಿವಾಳಯ್ಯನ ರೂಪವ ನಾನು ಕಾಣಲಿಲ್ಲ.
ಕಂಡು ಮಹಾದೇವಿಯಕ್ಕನ ಪದಕಮಲಕ್ಕೆ ಮರುಳುಗೊಂಡ ಮರಿದುಂಬಿಯಯ್ಯಾ
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ. ॥ ೮೫೬ ॥

೬೫೭

ಬಸವಣ್ಣ ಎನ್ನ ತಂದೆಯಾಗಿ ಬಂದನಯ್ಯಾ,
ಚನ್ನಬಸವಣ್ಣ ಎನ್ನಜ್ಜನಾಗಿ ಬಂದನಯ್ಯಾ,
ಪ್ರಭುದೇವರು ಎನ್ನ ಮುತ್ತಯ್ಯನಾಗಿ ಬಂದನಯ್ಯಾ,
ಈ ಮೂವರ ಮುಂದಣಾಭರಣ ಹೊದಿದುಕೊಂಡು
ಗುರುನಿರಂಜನ ಚನ್ನಬಸವಲಿಂಗದೊಳಡಗಿರ್ದೆನಯ್ಯಾ. || ೬೫೭ ||

೬೫೮

ಬಸವಣ್ಣನ ಮುಖದಿಂದೆ ಅಸಂಖ್ಯಾತ ಪ್ರಮಥರ ಕಂಡೆನಯ್ಯಾ,
ಚನ್ನ ಬಸವಣ್ಣನ ಮುಖದಿಂದೆ ಗಣಸನ್ನಿಹಿತ ಮಹಾನುಭಾವಸುಖಿಯಾದೆನಯ್ಯಾ.
ಪ್ರಭುವಿನ ಮುಖದಿಂದೆ ಮಹದಾನಂದಪರಿಣಾಮಿಯಾಗಿರ್ದೆನಯ್ಯಾ.
ಈ ತ್ರಿವಿಧವನೊಡಗೂಡಿ ಗುರುನಿರಂಜನ ಚನ್ನಬಸವಲಿಂಗ
ಶರಣೆಂದು ನಿಮ್ಮೊಳಗಾದೆನಯ್ಯಾ. || ೬೫೮ ||

೬೫೯

ಬಸವಣ್ಣನ ಮಗನಹುದೆಂಬುದು ಕಾಣಬಂದಿತ್ತು ನೋಡಾ;
ಚನ್ನಬಸವಣ್ಣನ ಮಗನಮಗನೆಂಬುದು ಕಾಣಬಂದಿತ್ತು ನೋಡಾ;
ಪ್ರಭುವಿನ ಮಗನಮಗನಮಗನೆಂಬುದು ಕಾಣ ಬಂದಿತ್ತು ನೋಡಾ;
ಅವಸ್ಥಾತ್ರಯದಲ್ಲಿ ಗುರುನಿರಂಜನ ಚನ್ನಬಸವಲಿಂಗ
ತಾನೆಂಬುದು ಕಂಡು ಮರೆಯಿತ್ತು ನೋಡಾ. || ೬೫೯ ||

೬೬೦

ಕಲ್ಯಾಣದೊಳಗುಳ್ಳ ಎಲ್ಲ ಪುರಾತನರು ಕೂಡಿ
ಬಸವಣ್ಣನ ಮನೆಗೆ ಹೋಗಿ ಶರಣು ಶರಣೆನ್ನ ಮರೆದೆ.
ಚನ್ನಬಸವಣ್ಣನ ಮನೆಗೆ ಹೋಗಿ ಶರಣು ಶರಣೆನ್ನ ಮರೆದೆ.
ಪ್ರಭುದೇವರ ಮನೆಗೆ ಹೋಗಿ ಶರಣು ಶರಣೆನ್ನ ಮರೆದೆ
ಇದು ಕಾರಣ ಗುರುನಿರಂಜನ ಚನ್ನಬಸವಲಿಂಗದಲ್ಲಿ ನಿಂದು
ಕೋಟಿ ಶರಣು ಶರಣೆನ್ನ ಮರೆದು ಪರವಶದೊಳು ಮುಳುಗಿರ್ದೆನು. || ೬೬೦ ||

೬೬೧

ಅಯ್ಯಾ, ನಾನು ಆಚಾರಲಿಂಗಜಂಗಮಕ್ಕೆ
ಅಷ್ಟವಿಧಾರ್ಚನೆಯಿಂದ ಅರ್ಚಿಸುವೆನೆ ?
ಭಕ್ತಸ್ಥಲ ಎನಗಿಲ್ಲವಯ್ಯಾ.

ಗುರುಲಿಂಗಜಂಗಮಕ್ಕೆ ಅಷ್ಟವಿಧಾರ್ಚನೆಯಿಂದ ಅರ್ಚಿಸುವೆನೆ ?
ಮಹೇಶ್ವರಸ್ಥಲವೆನಗಿಲ್ಲವಯ್ಯಾ.
ಶಿವಲಿಂಗಜಂಗಮಕ್ಕೆ ಅಷ್ಟವಿಧಾರ್ಚನೆಯಿಂದ ಅರ್ಚಿಸುವೆನೆ ?
ಪ್ರಸಾದಿಸ್ಥಲವೆನಗಿಲ್ಲವಯ್ಯಾ.
ಜಂಗಮಲಿಂಗಜಂಗಮಕ್ಕೆ ಅಷ್ಟವಿಧಾರ್ಚನೆಯಿಂದ ಅರ್ಚಿಸುವೆನೆ ?
ಪ್ರಾಣಲಿಂಗಿಸ್ಥಲವೆನಗಿಲ್ಲವಯ್ಯಾ.
ಪ್ರಸಾದಲಿಂಗಜಂಗಮಕ್ಕೆ ಅಷ್ಟವಿಧಾರ್ಚನೆಯಿಂದ ಅರ್ಚಿಸುವೆನೆ ?
ಶರಣಸ್ಥಲವೆನಗಿಲ್ಲವಯ್ಯಾ.
ಇಂತು ಪಂಚಸ್ಥಲವನೊಳಗೊಂಡಿಪ್ಪ ಐಕ್ಯಸ್ಥಲದಲ್ಲಿ ನಿಂದು
ಪಂಚಲಿಂಗವನೊಳಗೊಂಡಿಪ್ಪ ಮಹಾಲಿಂಗಜಂಗಮಕ್ಕೆ
ಅಷ್ಟವಿಧಾರ್ಚನೆಯೊಳ್ಪೆರೆದು ಮಾಡದ ಮುನ್ನವೇ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮೊಳೈಕ್ಯ. ॥ ೮೬೧ ॥

೮೬೨

ಮಾಡಲರಿಯೆನಯ್ಯಾ ಮಾಟದ ಸುಖವೆನಗೆ ಮುಂದಿಲ್ಲವಾಗಿ.
ನೋಡಲರಿಯೆನಯ್ಯಾ ನೋಟದಸುಖವೆನಗೆ ಮುಂದಿಲ್ಲವಾಗಿ.
ಕೂಡಲರಿಯೆನಯ್ಯಾ ಕೂಟದ ಸುಖವೆನಗೆ ಮುಂದಿಲ್ಲವಾಗಿ.
ಇದು ಕಾರಣ, ಅಚ್ಯೊತ್ತಿರ್ದ ಲಿಂಗವನಗಲಿ ಮಾಟಕೂಟಕಿಂಬುಗಾಣದೆ
ಎಂತಿರ್ದಂತೆ, ಗುರುನಿರಂಜನ ಚನ್ನಬಸವಲಿಂಗ ನಿಮ್ಮೊಳೈಕ್ಯ ಕಾಣಾ. ॥ ೮೬೨ ॥

೮೬೩

ನಡೆಯೆನಗೆ ಬಾರದಯ್ಯಾ ಕ್ರಿಯಾತೊಡರುಗೊಂಡು.
ನುಡಿಯೆನಗೆ ಬಾರದಯ್ಯಾ ಮನದ ತಿರುಳ ಬಿಚ್ಚಿ.
ನೋಟವೆನಗೆ ಬಾರದಯ್ಯಾ ಮನನದ ತಿರುಳ ತೆಗೆದು.
ಕೂಟವೆನಗೆ ಸೊಗಸದಯ್ಯಾ ಮನನೀಯದ ತಿರುಳ ತೆಗೆದಿಟ್ಟು.
ಇದು ಕಾರಣ ಗುರುನಿರಂಜನ ಚನ್ನಬಸವಲಿಂಗಾ,
ನಿಮ್ಮೊಳಗಿರ್ದ ಶರಣಂಗೆ ನೀವೆಯಾದಿರಾಗಿ,
ನಾನು ನೀನೆಂಬ ಕುರುಹಿಲ್ಲವಯ್ಯಾ. ॥ ೮೬೩ ॥

೮೬೪

ಒಳಗಿಲ್ಲದ ಹೊರಗಿಲ್ಲದ ತೆರಹಿಲ್ಲದ ಪರಿಪೂರ್ಣಲಿಂಗಕ್ಕೆ
ಮಾಡಿ ಕೆಟ್ಟರು ಮನಮುಖಿಹಿರಿಯರು,
ನೀಡಿ ಕೆಟ್ಟರು ತನುಮುಖಿಹಿರಿಯರು,

ಕೂಡಿ ಕೆಟ್ಟರು ಭಾವಮುಖಿಹಿರಿಯರು,
ಇದನರಿದು ನಾನು ಮಾಡದೆ ನೀಡದೆ ಕೂಡದೆ
ಮಾಡಿ ಭವಗೆಟ್ಟೆ, ನೀಡಿ ನಿರ್ಮಲವಾದೆ, ಕೂಡಿ ನಾನು ಕೆಟ್ಟೆ,
ನಿನ್ನನರಿಯದಿರ್ದೆ ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ॥ ೮೬೪ ॥

೮೬೫

ಅಯ್ಯಾ, ನಿಮಗೆ ಶರಣುಮಾಡುವೆನೆಂದರೆ ಬಿಂದುವಿನ ಸುಳುಹಿಲ್ಲ ಕಾಣಾ.
ಅಯ್ಯಾ, ನಿಮಗೆ ಶರಣುಮಾಡುವೆನೆಂದರೆ ನಾದದ ಸುಳುಹಿಲ್ಲ ಕಾಣಾ.
ಅಯ್ಯಾ, ನಿಮಗೆ ಶರಣುಮಾಡುವೆನೆಂದರೆ ಕಳೆಯ ಸುಳುಹಿಲ್ಲ ಕಾಣಾ.
ಅದೇನು ಕಾರಣವೆಂದಡೆ, ನಾದ ಬಿಂದು ಕಳೆ ಶಿವಕಳೆಯೊಳು ಬೆರೆದಿರ್ದವಾಗಿ.
ಎನ್ನ ನಡೆ ನುಡಿ ನಿಮ್ಮೊಳಗೆ ಅಡಗಿರ್ದವು ಕಾಣಾ
ಗುರುನಿರಂಜನ ಚನ್ನ ಬಸವಲಿಂಗಾ. ॥ ೮೬೫ ॥

೮೬೬

ಮಹಾಘನ ಪರಮಜ್ಯೋತಿರ್ಲಿಂಗವೆನ್ನಲ್ಲಿಗೆ ಬಂದು
ಬಂದುದ ಬೇರ್ಪಡಿಸಿದೆ ನೋಡಾ !
ಬಂದು ಚಿಂತೆಯಕೆಡಿಸಿ ನಿಶ್ಚಿಂತನ ಮಾಡಿದೆ ನೋಡಾ !
ಬಂದು ನಿಂದು ಎನ್ನ ಒಳಹೊರಗೆ ತಾನೆಯಾಗಿ
ಸಂದು ಭೇದವಿಲ್ಲದ ಗತಿಮತಿಯೊಳೊಪ್ಪಿ
ಅತಿಶಯದ ಭೋಗಸಮರಸದೊಳಿರ್ದಿತು ನೋಡಾ.
ಮತ್ತೆ ನಾನೆಂದರೆ ನಾಚಿಕೊಂಡಿತ್ತೆನ್ನ ಲಿಂಗಕಾಯ,
ಅಭಿಮಾನಿಸಿಕೊಂಡಿತ್ತೆನ್ನ ಲಿಂಗಮನ,
ಅಚಲಾನಂದಸುಖಿಯಾಗಿತ್ತೆನ್ನ ಲಿಂಗಭಾವ.
ಈ ತ್ರಿವಿಧವೊಂದಾಗಿ ಗುರುನಿರಂಜನ ಚನ್ನಬಸವಲಿಂಗಾ
ನಾ ನಿನ್ನನರಿಯದಿರ್ದೆ ಭಕ್ತನಾಗಿ ನಿಮ್ಮೊಳಗೆ. ॥ ೮೬೬ ॥

## ಐಕ್ಯನ ಮಾಹೇಶ್ವರಸ್ಥಲ

೮೬೭

ಅಯ್ಯಾ, ನಿಮ್ಮ ಶರಣರ ವೇಷವ ಹೊತ್ತು ನಡೆವರಯ್ಯಾ ಈ ಧರೆಯೊಳಗೆ.
ನಾವು ನಿಜೈಕ್ಯರೆಂದು ನುಡಿದುಕೊಂಬುವರಯ್ಯಾ ವಾಕ್ಪಟುತ್ವವನೆತ್ತಿ.
ಅಗಮ್ಯಜ್ಞಾನಿಗಳೆಂದು ಮೌನಗೊಂಡಿಪ್ಪರಯ್ಯಾ
ಮಲತ್ರಯದಲ್ಲಿ ಮನವ ಹುದುಗಿಸಿ.

ಇಂಥಾ ಗುಪ್ತಪಾತಕ ಅಜ್ಞಾನಿಗಳಿಗೆ ಕುಂಭಿನಿ ನಾಯಕನರಕ ತಪ್ಪದು ಕಾಣಾ,
ಗುರುನಿರಂಜನ ಚನ್ನಬಸವಲಿಂಗಾ. || ೮೬೭ ||

೮೬೮

ಕಾಯಕರ್ಮಕೂಟಗಳಿಗೆ
ಕರ್ತುಗಳರಿವ ನಿಷ್ಠೆಯ ನಿರ್ಮಲಸುಖವೆಲ್ಲಿಹದೊ ?
ಮನದ ಮಾಯಾಕೂಟಗಳಿಗೆ
ಮನದೊಡೆಯರನರಿವ ನಿಷ್ಠೆಯ ನಿಲುವಿನ ಸೊಬಗೆಲ್ಲಿಹದೊ ?
ಪ್ರಾಣನ ಸಂಚಲಸಂಯೋಗಿಗಳಿಗೆ
ಪ್ರಾಣಲಿಂಗಸಂಬಂಧವನರಿವ ನಿಷ್ಠೆಯ ನಿಜಸುಖವೆಲ್ಲಿಹದೊ ?
ಭಾವದ ಭ್ರಾಂತಿಯೊಳ್ಮುಳುಗಿರ್ದ ತಾಮಸಪ್ರಾಣಿಗಳಿಗೆ
ಗುರುನಿರಂಜನ ಚನ್ನಬಸವಲಿಂಗ ನಿಜೈಕ್ಯದ ನಿಸ್ಸೀಮ ಸುಖವೆಲ್ಲಿಹದೊ? ||೮೬೮||

೮೬೯

ನಾದ ಬಿಂದು ಕಲಾತೀತ ನಿರವಯಾನಂದ ನಿಜಬ್ರಹ್ಮವೇ
ತಾವೆಂದು ನುಡಿದುಕೊಂಡು
ಪರಧನಕ್ಕೆ ಆಶೆಯನಿಕ್ಕಿ, ಪರವಧುವಿಗೆ ಮನವನಿಕ್ಕಿ, ಪರದೈವಕ್ಕೆ ಶಿರವ ಚಾಚುವ
ನಿರವಯಕ್ಕೆ ನಿರಂತರವಾದ ಮಾಯಾ ನಿರ್ಮಾಲ್ಯರಿಗೆ
ನಿಜಗುರುನಿರಂಜನ ಚನ್ನಬಸವಲಿಂಗದಲ್ಲಿ
ನಿರ್ವಯಲ ನಿಜಸಮಾಧಿಯು ಎಂದೆಂದಿಗೆ ಎತ್ತಲೂ ಹೇಳಾ. || ೮೬೯ ||

೮೭೦

ಪರಧನಕ್ಕೆ ಹರಿವ ಮನವಿರ್ದಂತೆ
ಜಂಗಮಲಿಂಗೈಕ್ಯವೆಂಬ ನುಡಿ ನಿನಗಿಂಪು ತೋರುವುದೆ ?
ಪರಸ್ತ್ರೀಯರಿಗೆ ಹರಿವ ಮನವಿರ್ದಂತೆ
ಲಿಂಗಜಂಗಮೈಕ್ಯವೆಂಬ ನುಡಿ ನಿನಗೆ ಸಂಪು ತೋರುವುದೆ ?
ಪರದೈವಕ್ಕೆ ಹರಿವ ಮನವಿರ್ದಂತೆ
ಗುರುಲಿಂಗೈಕ್ಯವೆಂಬ ನುಡಿ ನಿನಗೆ ತಂಪು ತೋರುವುದೆ ?
ಇದುಕಾರಣ, ಗುರುನಿರಂಜನ ಚನ್ನಬಸವಲಿಂಗಾ
ನಿನಗೆ ಇಂಪು ಸಂಪು ತಂಪು ತೋರದ ನಡೆನುಡಿ ಕೂಟವೆಲ್ಲ
ನಿರಿಯಕೂಟ ನಿಜವಾಯಿತ್ತು ಕಾಣಾ. || ೮೭೦ ||

೮೭೧

ಕೂಟವನರಿಯದೆ ಕೋಟಲೆಗೊಂಡಿತ್ತು ಲೋಕವೆಲ್ಲ.
ಹಾದಿಯೆರಡರಲ್ಲಿ ನಡೆವ ಕುಂಟ ಕುರುಡರು ತಂಟಕರಾಗಿ ಹೋಗಿಬರುವರು.
ಸಾಧಕ ಸಂದಣಿಗಳೆಲ್ಲ ಮೇದಿನಿಯೊಳುಳಿದರು.
ಹಿರಿಯ ಕಿರಿಯರೆನಿಸುವರೆಲ್ಲ ಬಲೆಯೊಳು ಸಿಲುಕಿದರು.
ಉಳಿದವರಂತಿರಲಿ, ಇದನರಿದು ನಾನು ಮಾಟವ ಮರೆದು ಕೂಟವ ಕಂಡು
ಕಾಣದೆ ಸಮರಸಾನಂದದೊಳಿರ್ದೆನು
ಗುರುನಿರಂಜನ ಚನ್ನಬಸವಲಿಂಗದೊಳಗೆ. ॥ ೮೭೧ ॥

೮೭೨

ಲಿಂಗದಲ್ಲಿ ನಿಷ್ಠೆ ನಿಬ್ಬೆರಸಿದ ನಿಜೈಕ್ಯಂಗೆ ತೋರುವವೇ ಅರಿಷಡ್ವರ್ಗಂಗಳು ?
ತೋರುವವೇ ಷಡೂರ್ಮಿಗಳು ? ತೋರುವವೇ ಕುಲಾದಿ ಮದಂಗಳು ?
ಸಾರಿಪ್ಪವೇ ಇಂದ್ರಿಯ ವಿಷಯ ರಚನೆಗಳು ?
ಮೀರಿಪ್ಪವೇ ಮನಾದಿ ಕರಣವೃಂದಕಲೆತು ?
ಗುರುನಿರಂಜನ ಚನ್ನಬಸವಲಿಂಗದಲ್ಲಿ ಅರತು ನಿಜವಾಗಿರ್ದುವು ಕಾಣಾ. ॥೮೭೨॥

೮೭೩

ಗುಣಯುಕ್ತನಾಗಿ ಗಣಸಮ್ಮೇಳ ಸಂಯೋಗಿಯೆಂದಡೆ
ಅಣಕವಾಯಿತ್ತು ನಿನ್ನ ಜನ್ಮ ಅವನಿಯೊಳಗೆ.
ಬಿಡು ಹಿಡಿದುನಡೆ ಎಡಬಲನುರುಹಿ ಹೆಜ್ಜೆದಪ್ಪಿ ಹೆಜ್ಜೆಹಿಡಿದು ಮಡಿದರೆ
ಅದೇ ಮಹಾಲಿಂಗೈಕ್ಯ ಗುರುನಿರಂಜನ ಚನ್ನಬಸವಲಿಂಗ ಶರಣರಲ್ಲಿ. ॥ ೮೭೩ ॥

೮೭೪

ಕಾಮವನುರುಹಿ ಕಾಮಿಯಾಗಿ ಕಾಮತರಹರವಾದ.
ಕ್ರೋಧವನುರುಹಿ ಕ್ರೋಧಿಯಾಗಿ ಕ್ರೋಧತರಹರವಾದ.
ಲೋಭವನುರುಹಿ ಲೋಭಿಯಾಗಿ ಲೋಭತರಹರವಾದ.
ಮೋಹವನುರುಹಿ ಮೋಹಿಯಾಗಿ ಮೋಹತರಹರವಾದ.
ಮದವನುರುಹಿ ಮದಯುಕ್ತನಾಗಿ ಮದತರಹರವಾದ.
ಮತ್ಸರವನುರುಹಿ ಮತ್ಸರನಾಗಿ ಮತ್ಸರತರಹರವಾದ.
ನಿಜೈಕ್ಯಂಗೆ ಅರಿಷಡ್ವರ್ಗಂಗಳ ಸ್ಥಾಪಿಸಿ ನುಡಿವ ಮಿಥ್ಯ ಭಂಡರಿಗೆ
ಅತ್ತ ವೈತರಣಿಯಿಂಬುಗೊಟ್ಟಿಹುದು ಗುರುನಿರಂಜನ ಚನ್ನಬಸವಲಿಂಗಾ. ॥೮೭೪॥

೮೭೫

ಮದ ಮೋಹ ರಾಗ ವಿಷಾದ ತಾಪ
ಶೋಕ ವೈಚಿಂತೆಯೆಂಬ ಸಪ್ತ ಮಲವನು,
ಸಮತಾಜಲದಿಂದೆ ತೊಳೆದು ಭಾವನಿರ್ಮಲವ ಮಾಡಿ
ಪರಶಿವಾನಂದಸ್ವರೂಪವು ಸಂಬಂಧವಾದ ಬಳಿಕ ಭಾವಲಿಂಗೈಕ್ಯ ತಾನೆ ನೋಡಾ.
ತನುವ್ಯಸನ ಮನವ್ಯಸನ ಧನವ್ಯಸನ ಉತ್ಸಾಹವ್ಯಸನ
ರಾಜ್ಯವ್ಯಸನ ವಿಶ್ವಾಸವ್ಯಸನ ಸೇವಕವ್ಯಸನವೆಂಬ ಸಪ್ತವ್ಯಸನವನು
ವಿನಯಜಲದಿಂದೆ ತೊಳೆದು ಮನ ನಿರ್ಮಲ ಮಾಡಿ
ಪರಶಿವನ ಚಿತ್ಸ್ವರೂಪ ಸಂಯೋಗವಾದ ಬಳಿಕ ಪ್ರಾಣಲಿಂಗೈಕ್ಯ ತಾನೇ ನೋಡಾ.
ರಸ ರುಧಿರ ಮಾಂಸ ಮೇದಸ್ಸು ಅಸ್ಥಿ ಮಜ್ಜೆ ಶುಕ್ಲವೆಂಬ
ಸಪ್ತಧಾತುವಿನ ಕಳಂಕವ ಕರುಣಾಜಲದಿಂದೆ ತೊಳೆದು ತನು ನಿರ್ಮಲ ಮಾಡಿ
ಪರಶಿವನ ಸತ್ತುರೂಪ ಸಮರಸವಾದ ಬಳಿಕ ಇಷ್ಟಲಿಂಗೈಕ್ಯ ತಾನೆ ನೋಡಾ.
ಇದು ಕಾರಣ ಗುರುವಿನಿಂದುದಿಸಿ ಅಷ್ಟಾವರಣದಲ್ಲಿ ಬೆಳೆದು
ಮಹಾಲಿಂಗೈಕ್ಯ ಮಹಾತ್ಮನಿಗೆ
ಸಕಲ ಪ್ರಕೃತಿಯೊಂದುವೇಳೆ ಬೆರಸಲುಂಟೆ ?
ಭೂಮಲದೊಳೆದ ಜಲ ಶರಧಿಯೋಳ್ಬೆರಸಿ ಶರಧಿಯಾದಂತೆ
ಶರಣ ಜ್ಞಾನಶರಧಿಯೊಳ್ಬೆರೆದ ಕರಣವೆಲ್ಲ ಕಿರಣಮಯವಾಗಿ ಕೂಡೆ
ಗುರುನಿರಂಜನ ಚನ್ನಬಸವಲಿಂಗವ ಬೆರಸಿ ಬೇರಿಲ್ಲದಿರ್ದವು. ॥ ೮೭೫ ॥

೮೭೬

ಲಿಂಗವಲ್ಲಿ ಬೆರಸಲನುಗೈದ ನಿಜಾನಂದ ಶರಣನ ಮುಂದೆ ಸುಳಿದಾಡುವ
ಕರಣೇಂದ್ರಿಯ ವಿಷಯಾದಿ ಸಕಲಗುಣಂಗಳೆಲ್ಲ
ಲಿಂಗಸಮರಸಾನುಭಾವವ ಹೊತ್ತು,
ಹೊರಗೊಳಗೆ, ಹಿಂದೆ ಮುಂದೆ, ಮೇಲೆ ಕೆಳಗೆ
ರೋಮರೋಮಂಗಳಲ್ಲಿ ಬಿರಿಮುಗುಳು ಬಿಚ್ಚಿ
ಸೌರಭ ಅನಿಲ ನೆರೆದು ಸೂಸಿ ಆವರಿಸುವಂತೆ,
ತಮ್ಮ ಸಮರಸದ ಸಮರತಿಯೊಳೊಡವೆರೆದು
ಲಿಂಗ ಶರಣೈಕ್ಯಸುಖಮುಖಿಗಳಾಗಿ
ಒಪ್ಪುತಿರ್ದವು ಗುರುನಿರಂಜನ ಚನ್ನಬಸವಲಿಂಗಸನ್ನಿಹಿತ ॥ ೮೭೬ ॥

೮೭೭

ಅದ್ವೈತನಾಗಿ ಜೀವಭಾವಿಯಲ್ಲ ಶರಣ.
ದ್ವೈತಿಯಾಗಿ ದೇಹಭಾವಿಯಲ್ಲ ಶರಣ.
ಯೋಗಗತಿಯೆಂದು ಕಷ್ಟಕರ್ಮಿಯಲ್ಲ ಶರಣ.
ಮತ್ತೆಂತೆಂದೊಡೆ, ಸತ್ಕ್ರಿಯಾನಂದಸುಖಿ ಶರಣ.
ಸಮಕ್ಜ್ಞಾನಾನಂದಸುಖಿ ಶರಣ.
ಗುರುನಿರಂಜನ ಚನ್ನಬಸವಲಿಂಗಾ ಸಮರಸಾನಂದಸುಖಿ ಶರಣ. ॥ ೮೭೭ ॥

೮೭೮

ಕಾಲುಕಾಣಿಸಿಕೊಳ್ಳದೆ ನಡೆದು ನಿಂದನಯ್ಯಾ.
ಕೈಯಕಾಣಿಸಿಕೊಳ್ಳದೆ ಮುಟ್ಟಿ ನಿಂದನಯ್ಯಾ.
ಕಣ್ಣುಕಾಣಿಸಿಕೊಳ್ಳದೆ ನೋಡಿ ನಿಂದನಯ್ಯಾ.
ಎಡಬಲದ ಗುಂಜುಗಂಜಳಕ್ಕಡಿಯಿಡದೆ
ಮಂಜುಳಮಯ ಗುರುನಿರಂಜನ ಚನ್ನಬಸವಲಿಂಗದಲ್ಲಿ ಸಮರಸವಾಗಿ. ॥ ೮೭೮॥

೮೭೯

ಚಿದಾತ್ಮನೇ ಅಂಗವಾದ ಶರಣ ಚಿತ್ಪೃಥ್ವಿಯೇ ತನ್ನಂಗವಾಗಿ
ಆಚಾರಲಿಂಗೈಕ್ಯವನರಿದು ಬಂದನಯ್ಯಾ.
ಚಿದಪ್ಪುವೇ ತನ್ನಂಗವಾಗಿ ಚಿದ್ಗುರುಲಿಂಗೈಕ್ಯವನರಿದು ಬಂದನಯ್ಯಾ.
ಚಿದಗ್ನಿಯೇ ತನ್ನಂಗವಾಗಿ ಚಿಚ್ಛಿವಲಿಂಗೈಕ್ಯವನರಿದು ಬಂದನಯ್ಯಾ.
ಚಿದ್ವಾಯುವೇ ತನ್ನಂಗವಾಗಿ ಚಿಜ್ಜಂಗಮಲಿಂಗೈಕ್ಯವನರಿದು ಬಂದನಯ್ಯಾ.
ಚಿದಾಕಾಶವೇ ತನ್ನಂಗವಾಗಿ ಚಿತ್ಪ್ರಸಾದಲಿಂಗೈಕ್ಯವನರಿದು ಬಂದನಯ್ಯಾ.
ಗುರುನಿರಂಜನ ಚನ್ನಬಸವಲಿಂಗಾ,
ನಿಮ್ಮ ಶರಣ ಚಿನ್ಮಹಾಲಿಂಗೈಕ್ಯವನರಿದು ಚಿದ್ರೂಪವಾಗಿರ್ದ ಕಾಣಾ. ॥ ೮೭೯ ॥

೮೮೦

ನಿಮಗಂದಾದ ಕಾಯದ ರತಿಯ ಕದ್ದು ಸುಖಿಸುವನಲ್ಲ ಕೇಳಾ.
ನಿಮಗಂದಾದ ಮನದ ರತಿಯ ಕದ್ದು ಸುಖಿಸುವನಲ್ಲ ಕೇಳಾ.
ನಿಮಗಂದಾದ ಪ್ರಾಣದ ರತಿಯ ಕದ್ದು ಸುಖಿಸುವನಲ್ಲ ಕೇಳಾ.
ನಿಮಗಂದಾದ ಭಾವದೊಳು ಸಕಲವನಿರಿಸಿ
ನಿಃಕಲ ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ರತಿಯೊಳು ರತಿವೆರಸಿ
ನಿರುತ ಪರಿಣಾಮ ಪರವಶದೊಳೋಲಾಡುತಿರ್ದೆನು ಕಾಣಾ. ॥ ೮೮೦ ॥

೮೮೧

ಕಾಯದ ಸುಖವ ಕಡೆಗಿಟ್ಟು ಬಂದು ಶರಣೆಂದರೆ
ಕರ್ಮದಲ್ಲಿ ಮುಳುಗಿ ಹೋಗುವುದೇ ಸಹಜ.
ಕರಣದ ಸುಖವ ಕಡೆಗಿಟ್ಟು ಬಂದು ಶರಣೆಂದರೆ
ಸಂಸಾರ ಸಂಕಲ್ಪದಲ್ಲಿ ಮುಳುಗಿ ಹೋಗುವುದೇ ಸಹಜ.
ಪ್ರಾಣದ ಸುಖವ ಕಡೆಗಿಟ್ಟು ಬಂದು ಶರಣೆಂದರೆ
ವಾಯುಪ್ರಕೃತಿಯಲ್ಲಿ ಮುಳುಗಿ ಹೊಗುವುದೇ ಸಹಜ.
ಭಾವದ ಸುಖವ ಕಡೆಗಿಟ್ಟು ಬಂದು ಶರಣೆಂದರೆ
ಅನಿಷ್ಟಭ್ರಾಂತಿಯಲ್ಲಿ ಮುಳುಗಿ ಹೊಗುವುದೇ ಸಹಜ.
ಇಂತು ಜಡಸಂಬಂಧಸುಖಿಮುಖಿಗಳಿಗೆ
ಘನಮಹಾಲಿಂಗೈಕ್ಯವನರಿದು ಬೆರೆಯಬಾರದು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೮೮೧ ॥

೮೮೨

ಅಯ್ಯಾ, ನಿಮ್ಮಂಗ ನಾನಾಗಿ ನಿನ್ನಿಂದೆ ಕಡೆಗಿಟ್ಟು
ಮಾಯೆಯ ಕಾವಲವ ಹೊಗಲೆನಗೆ ವಿಧಿಯೆ ?
ಅವಳ ಕಲ್ಪನೆಯೊಳೊಂದಿ ನಡೆಯಲೆನಗೆ ಅಭಾಗ್ಯವೆ ಹೇಳಾ !
ಅವಳ ಸಂಸಾರಸುಖವನರಿಯಲೆನಗೆ ದುರ್ಮರುಳವೆ ನೋಡಾ.
ಗುರುನಿರಂಜನ ಚನ್ನಬಸವಲಿಂಗಾ
ನೀವಿರ್ದಂತೆ ನಾನಿಪ್ಪೆ ನಿಮ್ಮೊಳಗೆನ್ನ ಮರೆದು. ॥ ೮೮೨ ॥

೮೮೩

ಅಯ್ಯಾ, ನಿಮ್ಮೊಳಗಿರ್ದು ನಿಮ್ಮ ಮರೆದು
ಇತರವಾದಖಿಳವನೇನೆಂದರಿಯೆ ನೋಡಾ !
ಅಯ್ಯಾ, ನಿಮ್ಮೊಳಗಿರ್ದು ನಿಮಗೊಂದುವೇಳೆ
ವಿಶ್ವಾಸವನರಿಯೆ, ನಿಷ್ಠೆಯನರಿಯೆ,
ಸಾವಧಾನವನರಿಯೆ, ಅನುಭಾವವನರಿಯೆ,
ಆನಂದವನರಿಯೆ ಸಮರಸಸುಖಿಲೋಲುಪ್ತ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೮೮೩ ॥

## ಐಕ್ಯನ ಪ್ರಸಾದಿಸ್ಥಲ

೮೮೪

ಕೊಂಡು ಕೊಟ್ಟವರೊಡವೆಯ ಬಂಡಿಗಿಟ್ಟು, ಪ್ರಕೃತಿಸಂಯುಕ್ತನಾಗಿ
ಮಾಯಾಮೋಹ ವಿಷಯಸುಖ ತಲೆಗೇರಿ,
ತಾ ನಿತ್ಯನೆಂದರಿಯದೆ ಅನಿತ್ಯವನುಂಡು,
ಅತ್ತಿತ್ತ ಬೀಳುವ ಅನುಚಿತವಾದ ಮನುಜರು
ನಿಮ್ಮ ನಂಟುಗಂಟಿನ ಕೂಟವನವರೆತ್ತಬಲ್ಲರು
ಗುರುನಿರಂಜನ ಚನ್ನಬಸವಲಿಂಗದಲ್ಲಿ ಸಮರಸಾನಂದಸುಖಿಬಲ್ಲನಲ್ಲದೆ. ||೮೮೪||

೮೮೫

ನೀರಗೋಳಿಯು ನೆತ್ತರವ ಕುಡಿದವನು,
ಹಂಸನ ಪಾಕವನೆತ್ತ ಸೇವಿಸಬಲ್ಲ ಹೇಳಾ !
ಮಿಥ್ಯಸಂಸಾರದೊಳ್ಮುಳುಗಿ ತೇಕ್ಯಾಡುವ ಅನಿತ್ಯ ಮೂಢಪ್ರಾಣಿ
ತಾನೆತ್ತಬಲ್ಲುದು ಹೇಳಾ ಗುರುನಿರಂಜನ ಚನ್ನಬಸವಲಿಂಗೈಕ್ಯ
ನಿಜಗಡಲಸುಖವನು ? || ೮೮೫ ||

೮೮೬

ಗಂಡನ ಸುಖದುಃಖವನರಿಯದ ದಿಂಡೆಯದೊತ್ತು,
ಅವಳ ಉಪಚಾರ ಕಂಡಿತ್ತು ; ಅವಳ ಮೋಹ ಕಂಡಿತ್ತು.
ಅವಳನು ಪುರುಷಸಹಗಮನಿಯರ ಸರಿಯೆನಲುಂಟೆ ?
ಮತ್ತೆ ಅಂಗದಮೇಲೆ ಲಿಂಗವ ಧರಿಸಿ ಸಂಗಸಂಯೋಗ ಸಮರಸವನರಿಯದ
ಭಂಗಗೇಡಿ ಮನುಜನ ಕ್ರಿಯಾ ಕಂಡಿತ್ತು, ಅವನ ಜ್ಞಾನ ಕಂಡಿತ್ತು,
ಆ ಪ್ರಾಣಿಯನು ಲಿಂಗಸಹಭೋಜನ ಸಮಸುಖಿ
ಸಮರಸಾನಂದರುಗಳಿಗೆ ಸರಿಯೆನಲುಂಟೆ ?
ಗುರುನಿರಂಜನ ಚನ್ನಬಸವಲಿಂಗಾ, ನಿಮ್ಮೈಕ್ಯ ಪ್ರಸಾದಿಗೆ
ನಮೋ ನಮೋ ಎನುತಿರ್ದೆನು. || ೮೮೬ ||

೮೮೭

ಸದ್ಗುರುವಿನ ಕರಕಮಲದಲ್ಲಿ ಜನಿಸಿ
ಆ ಗುರುಭಾವದಿಂದೊಗೆದ ಚಿಲ್ಲಿಂಗವ ಕರಕಂಜದಲ್ಲಿ ಪಿಡಿದು,
ಆ ಗುರುಲಿಂಗ ಕಳಾಚೈತನ್ಯವಪ್ಪ ಚರಲಿಂಗಕ್ಕೆ ದಾಸೋಹವ ಮರೆದಿರಲಾಗದು.
ಅದೇನು ಕಾರಣವೆಂದೊಡೆ, ತನ್ನ ತನುಮನಧನವೆಲ್ಲ

ಗುರುಲಿಂಗಜಂಗಮದ ಸೊಮ್ಮಾಗಿ,
ಅವರೊಡವೆಯ ಅವರಿಗೆ ತಾ ನಿಲ್ಲದಿತ್ತು ತಲ್ಲೀಯವಾದ
ತತ್ಪ್ರಸಾದವನು ಸೇವಿಸುವ ಸುಖಾನಂದದೊಳೈಕ್ಯ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. || ೮೮೭ ||

೮೮೮

ಸುಖಮುಖಸನ್ನಿಹಿತ ಶರಣಂಗೆ ಸಕಳವನರಿದಾಗಳೆ ಅರ್ಪಿತವಹುದು.
ಮಿಥ್ಯ ಸಂಭ್ರಮ ಸಂಪನ್ನತೆವಡೆದ ಸುತ್ತುಮೋಹಿಗೆತ್ತಣರ್ಪಿತವಯ್ಯಾ ?
ಚಿತ್ತ ಮಲ ಮುಸುಕರಿಗೆ ಸತ್ಯ ಗುರುನಿರಂಜನ ಚನ್ನಬಸವಲಿಂಗೈಕ್ಯದ
ಗೊತ್ತನರಿಯಬಾರದು ಕಾಣಾ. || ೮೮೮ ||

೮೮೯

ಸುಖದುಃಖವನರಿದು ಕೊಡುವರು ಸಕಲಸಂಪನ್ನರು,
ಸುಖದುಃಖವ ಕೊಟ್ಟು ಕೊಂಬುವರು ಸಕಲನಿಃಕಲರು.
ಸುಖದುಃಖ ಸಹಿತ ಸುಖಿಸುವರು ನಿಮ್ಮೊಳಗೆ ಪ್ರಸಾದಿಗಳು
ಗುರುನಿರಂಜನ ಚನ್ನಬಸವಲಿಂಗಾ. || ೮೮೯ ||

೮೯೦

ಮೂರು ತನುವಿನ ಮೇಲೆ ತೋರುವ ಆಲಿಕಲ್ಲಿನಂತದಲ್ಲಿರ್ದು
ಪಂಚಸಾರಾಯ ಸುಖವರಿದು ತೋರುವ
ಸುಪ್ರಮಾಣ ಸೂಕ್ಷ್ಮ ವಿಚಾರವರಿದರ್ಪಿತವಾದ ಅಗಮ್ಯ ತಾನೆ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮೈಕ್ಯಪ್ರಸಾದಿ. || ೮೯೦ ||

೮೯೧

ಗುರುಲಿಂಗ ಜಂಗಮಕ್ಕೊಕ್ಕುಮಿಕ್ಕುದುದಕ್ಕೆ ಯೋಗ್ಯವೆಂದು
ಬೀರಿಕೊಳ್ಳುವ ಕಕ್ಕುಲಾತಿ ಡಂಭಕ ವೇಷಧಾರಿಗಳನೇನೆಂಬೆನಯ್ಯಾ !
ಆ ಗುರುಲಿಂಗಜಂಗಮ ಬಂದಲ್ಲಿ,
ಅರ್ಥ ಪ್ರಾಣ ಅಭಿಮಾನವಿಡಿದು ವಂಚನೆಯೊಳ್ನಿಂದು
ಮಾಡಿ ನೀಡಿ ಕೊಂಡು ಕಳುಹಿಸುವ ತ್ರಿವಿಧಗುರುದ್ರೋಹಿಗಳಿಗೆ
ಸತ್ಕ್ರಿಯಾಚಾರವೆಲ್ಲಿಹದೊ !
ಸತ್ಕ್ರಿಯಾಚಾರವಿಲ್ಲದ ತ್ರಿವಿಧಲಿಂಗದ್ರೋಹಿಗಳಿಗೆ
ಸುಜ್ಞಾನಾಚಾರವೆಲ್ಲಿಹದೊ !
ಸುಜ್ಞಾನಾಚಾರವಿಲ್ಲದ ತ್ರಿವಿಧ ಜಂಗಮದ್ರೋಹಿಗಳಿಗೆ

ಸಮರಸಭಾವಾಚಾರವೆಲ್ಲಿಹದೊ !
ಗುರುನಿರಂಜನ ಚನ್ನಬಸವಲಿಂಗದಲ್ಲಿ ಐಕ್ಯಪದವೆಲ್ಲಿಹದೊ ! ॥ ೬೯೧ ॥

೬೯೨

ಉಚ್ಛಿಷ್ಟವ ಕಳೆದುಳಿದ ಪದಾರ್ಥ ಪ್ರಸಾದವಾಗಿ ನಿಂದಲ್ಲಿ
ಅಂಗವೆನ್ನೆ ಲಿಂಗವೆನ್ನೆ ಹಸ್ತವೆನ್ನೆ ಮುಖವೆನ್ನೆ ಶಕ್ತಿಯೆನ್ನೆ ಭಕ್ತಿಯೆನ್ನೆ
ಅಷ್ಟಾವಧಾನವಿಲ್ಲದೆ ನೆಟ್ಟನೆ ಗುರುನಿರಂಜನ ಚನ್ನಬಸವಲಿಂಗವಾಗಿ
ಹಿಂಗಿನುಡಿವ ಶಬ್ದಕ್ಕೆ ಇಂಬುಗಾಣೆ. ॥ ೬೯೨ ॥

೬೯೩

ಅಂಗವೆಂಬುವುದಿಲ್ಲ ಲಿಂಗವೇದಿ ಶರಣಂಗೆ,
ಲಿಂಗವೆಂಬುವುದಿಲ್ಲ ಅಂಗಸಂಗಸನ್ನಿಹಿತ ಶರಣಂಗೆ,
ಹಸ್ತವೆಂಬುವುದಿಲ್ಲ ಲಿಂಗನಿವಾಸ ಶರಣಂಗೆ,
ಮುಖವೆಂಬುವುದಿಲ್ಲ ಸುಖಭರಿತ ಶರಣಂಗೆ,
ಶಕ್ತಿಯೆಂಬುವುದಿಲ್ಲ ಮುಕ್ತಾಂಗ ಶರಣಂಗೆ,
ಭಕ್ತಿಯೆಂಬುವುದಿಲ್ಲ ನಾದಬಿಂದು ಕಲಾಶೂನ್ಯ ಶರಣಂಗೆ.
ಪದಾರ್ಥವೆಂಬುವುದಿಲ್ಲ ಗುರುಭಾವವಿರಹಿತ ಶರಣಂಗೆ,
ಪ್ರಸಾದವೆಂಬುವುದಿಲ್ಲ ಗುರುನಿರಂಜನ ಚನ್ನಬಸವಲಿಂಗ
ತಾನು ತಾನಾದ ಶರಣಂಗೆ. ॥ ೬೯೩ ॥

೬೯೪

ಮಾಡೆನೆಂಬುವರೆ ಕಾಯವಿಲ್ಲ, ನೋಡೆನೆಂಬುವರೆ ಕಂಗಳಿಲ್ಲ,
ನೆನೆದೆನೆಂಬುವರೆ ಮನವಿಲ್ಲ, ಕೂಡೆನೆಂಬುವರೆ ಭಾವವಿಲ್ಲ,
ಕೊಡಲಿಲ್ಲ ಕೊಳಲಿಲ್ಲ, ಕಾಯಕಂಗಳು ಮನ ಭಾವ ನೀವೆಯಾಗಿ
ಗುರುನಿರಂಜನ ಚನ್ನಬಸವಲಿಂಗವೆಂಬುವರೆ ತೆರಹಿಲ್ಲ. ॥ ೬೯೪ ॥

೬೯೫

ಇಕ್ಷುವಿನ ಭಾವ ತಪ್ಪಿ ಗುರುವಿನೊಳೈಕ್ಯವೆಂಬುದೊಂದು ಹುಸಿ,
ಚಂದನದ ಭಾವ ತಪ್ಪಿ ಲಿಂಗದೊಳೈಕ್ಯವೆಂಬುದೊಂದು ಹುಸಿ,
ಹೇಮದ ಭಾವ ತಪ್ಪಿ ಜಂಗಮದೊಳೈಕ್ಯವೆಂಬುದೊಂದು ಹುಸಿ,
ಅದೆಂತೆಂದೊಡೆ, ಶುದ್ಧ ಸಿದ್ಧ ಪ್ರಸಿದ್ಧ ಸಂಬಂಧವಿಲ್ಲವಾಗಿ
ಗುರುನಿರಂಜನ ಚನ್ನಬಸವಲಿಂಗವೆಂಬ ಮಹಾಘನ
ಪ್ರಸಾದದೊಳೈಕ್ಯವೆಂದಿಗೂ ಇಲ್ಲ ನೋಡಾ. ॥ ೬೯೫ ॥

೪೯೬

ಆಡು ಕುರಿಯ ನುಂಗಿ ಬೆಕ್ಕಿನ ಹೊಟ್ಟೆಯ ಹೊಕ್ಕಿತ್ತು,
ಬೆಕ್ಕು ಕಪ್ಪೆಯ ನೆರೆದು ಬಾವಿಯ ಹಾಲು ಕುಡಿಯುತ್ತಿರಲು
ಕಟವಾಯಿಂದೆ ಕ್ಷೀರ ಸುರಿದು ಭೂಮಿಯಸೋಂಕಿ ಕಾಂತಾರ
ಉರಿದು ವ್ಯಾಘ್ರನಳಿಯಿತ್ತು.
ಮೃಗಾದಿ ಸಕಲ ಜನಿತ ತಮ್ಮ ಸ್ಥಲವ ಬಿಟ್ಟು ನೋಡುತ್ತ ನೋಡುತ್ತ ಅಡಗಿ
ಒಂದೂ ಕಾಣದ ಬಯಲ ಬೆಡಗನೇನೆಂದುಪಮಿಸುವೆನಯ್ಯಾ
ಗುರುನಿರಂಜನ ಚನ್ನಬಸವಲಿಂಗಾ ? || ೪೯೬ ||

೪೯೭

ಬಸವಣ್ಣನ ಕೃಪೆ ಎನ್ನ ಶ್ರದ್ಧೆ ಕೂಡಿದಲ್ಲಿ ಎನ್ನಂಗವೆಲ್ಲ ಶುದ್ಧಪ್ರಸಾದ.
ಮಡಿವಾಳಯ್ಯನ ಕೃಪೆ ಎನ್ನ ನಿಷ್ಠೆ ಕೂಡಿದಲ್ಲಿ ಎನ್ನಾತ್ಮವೆಲ್ಲ ಅಮಲಪ್ರಸಾದ.
ಚನ್ನಬಸವಣ್ಣನ ಕೃಪೆ ಎನ್ನ ಸಾವಧಾನ ಕೂಡಿದಲ್ಲಿ ಪ್ರಾಣವೆಲ್ಲ ಸಿದ್ಧಪ್ರಸಾದ.
ಸಿದ್ಧರಾಮಯ್ಯನ ಕೃಪೆ ಎನ್ನ ಅನುಭಾವ ಕೂಡಿದಲ್ಲಿ ಕರಣವೆಲ್ಲ ನಿಜಪ್ರಸಾದ.
ಉರಿಲಿಂಗಪೆದ್ದಣ್ಣಗಳ ದಯೆ ಎನ್ನಾನಂದ ಕೂಡಿ[ದಲ್ಲಿ]
ವಿಷಯಂಗಳೆಲ್ಲ ಪ್ರಸಿದ್ಧಪ್ರಸಾದ.
ಅಜಗಣ್ಣನ ಕೃಪೆ ಎನ್ನ ಸಮರಸ ಕೂಡಿ[ದಲ್ಲಿ] ತೃಪ್ತಿಯೆಲ್ಲ
ಮಹಾಪ್ರಸಿದ್ಧಪ್ರಸಾದ.
ಇಂತು ಎನ್ನೊಡೆಯರ ಪ್ರಸಾದವನು ಮಂಡೆಯೊಳಿಟ್ಟು ಮುಳುಗಿ
ಪ್ರಸಾದವೆಂಬ ಭಾವದೋರದೆ ಗುರುನಿರಂಜನ
ಚನ್ನಬಸವಲಿಂಗದೊಳಡಗಿರ್ದೆನು || ೪೯೭ ||

೪೯೮

ಚಂಗಳೆಯಮ್ಮನ ಭಾವದೊಳ್ಮುಳುಗಿ ಪಂಚಾಚಾರಸ್ವರೂಪನಾಗಿರ್ದೆ ಕಾಣಾ.
ನಂಬಿಯಕ್ಕನ ಭಾವದೊಳ್ಮುಳುಗಿ ಮಂತ್ರಾತ್ಮಸ್ವರೂಪನಾಗಿರ್ದೆ ಕಾಣಾ.
ಚೋಳಿಯಕ್ಕನ ಭಾವದೊಳ್ಮುಳುಗಿ ನಿರೀಕ್ಷಣಾಸ್ವರೂಪನಾಗಿರ್ದೆ ಕಾಣಾ.
ನೀಲಲೋಚನೆಯಮ್ಮನ ಭಾವದೊಳ್ಮುಳುಗಿ ಯಜನಸ್ವರೂಪನಾಗಿರ್ದೆ ಕಾಣಾ.
ಅಮ್ಮವ್ವೆಯರ ಭಾವದೊಳ್ಮುಳುಗಿ ಸ್ತೌತ್ರ್ಯಸ್ವರೂಪನಾಗಿರ್ದೆ ಕಾಣಾ.
ಮಹಾದೇವಿಯರ ಭಾವದೊಳ್ಮುಳುಗಿ ವೇದಿಸ್ವರೂಪನಾಗಿರ್ದೆ ಕಾಣಾ.
ಇಂತು ಎನ್ನ ಮಾತೆಯರ ಭಾವದೊಳು ಸಮರಸವಾಗಿ
ಮುಕ್ತಾಯಕ್ಕನ ಗರ್ಭದೊಳು ನಿತ್ಯಪ್ರಸಾದಿಯಾಗಿರ್ದೆನು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ ನೀ ಸನ್ನಿಹಿತ. || ೪೯೮ ||

## ಐಕ್ಯನ ಪ್ರಾಣಲಿಂಗಿಸ್ಥಲ

೫೯೯

ಆಚಾರಲಿಂಗಾನುಭಾವದಲ್ಲಿ ಅನಿಮಿಷನಾಗಿರ್ದೆನು.
ಗುರುಲಿಂಗಾನುಭಾವದಲ್ಲಿ ಅನಿಮಿಷನಾಗಿರ್ದೆನು.
ಶಿವಲಿಂಗಾನುಭಾವದಲ್ಲಿ ಅನಿಮಿಷನಾಗಿರ್ದೆನು.
ಜಂಗಮಲಿಂಗಾನುಭಾವದಲ್ಲಿ ಅನಿಮಿಷನಾಗಿರ್ದೆನು.
ಇಂತು ಷಡುಲಿಂಗಾನುಭಾವದಲ್ಲಿ ಅನಿಮಿಷನಾಗಿ
ಅಖಂಡ ಗುರುನಿರಂಜನ ಚನ್ನಬಸವಲಿಂಗೈಕ್ಯ ಪದಪ್ರಕಾಶದೊಳ್ಮುಳುಗಿ
ಬೆಳಗುತಿರ್ದೆನು. ॥ ೫೯೯ ॥

೬೦೦

ನಿಜಲಿಂಗೈಕ್ಯ ನಿರ್ವಾಣಪದದನುಭಾವದ ಸೌಖ್ಯ ವಚನವನು
ಹೇಳುವ ಹಿರಿಯರೆಲ್ಲ
ತಮ್ಮ ಕತ್ತಲೆಯನುಳಿಸಿ ಇತರರಲ್ಲರಸಿ ವಾಕ್ಪಟುತ್ವವನೆತ್ತಿಹರು.
ಸಮುಖ ಕಿಂಕರತ್ವವನಿದಿರಿಟ್ಟು ಅರಸುವರಂತೆ
ಜಲದಲ್ಲೊರ್ಣಿಸಿದ ಭಕ್ತಿಜ್ಞಾನ ವೈರಾಗ್ಯಪತಾಕಿಯನ್ನು
ಉಲಿಸುತ್ತ ಕೇಳುತ್ತಿಹರು.
ಇವರರಿಪು ಎಂತೆನಲು ಎಲುಪಾಲದ ಮರದ ಫಲದಂತೆ,
ಮರೀಚಿಕೆಯ ಜಲದಂತೆ, ಹೆಣನ ಸೊಬಗು ಪ್ರಲಾಪವಂತೆ,
ಗುರುನಿರಂಜನ ಚನ್ನಬಸವಲಿಂಗಕ್ಕವರು
ಅವರಂತೆ, ತಾನು ತನ್ನಂತೆ. ॥ ೬೦೦ ॥

೬೦೧

ಅನುಭಾವವನಾವರಿಸಿ ಹೇಳುವರಂಗ ಬಾಳೆಯ ಸ್ತಂಭದಂತೆ
ಮುಟ್ಟಿನೋಡುವರ ಕರ ಮನ ಕಂಗಳಿಗೆ ನಯವಾಗಿರಬೇಕು.
ಕೇಳುವರ ಚಿತ್ತ ಅಚ್ಯೊತ್ತಿ ತನುಮನಾತ್ಮಾಹುತಿಯಾಗಿರ್ದ
ಭಾವ ಬೆಳಗುತ್ತಿರಬೇಕು.
ಶರಣತತಿದೃಷ್ಟಕ್ಕೆ ಇದೇ ನಿಜೈಕ್ಯದ ನಿಲುವು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೬೦೧ ॥

೬೦೨

ಗಾರುಡಿಗನ ಸಂಗವನರಿದ ಜಾಣ,
ಹಾವನಾಡಿಸಬಲ್ಲ, ಹದ್ದನಾಡಿಸಬಲ್ಲ, ಕಪಿಯನಾಡಿಸಬಲ್ಲ.
ಮತ್ತೆ ತಾನೆ ಗುರುನಿರಂಜನ ಚನ್ನಬಸವಲಿಂಗದೊಳಡಗಬಲ್ಲ. ॥ ೬೦೨ ॥

೯೦೩

ಜೀವಪರಮನೊಂದು ಮಾಡಬೇಕೆಂಬುದೊಂದು ಕುರುಹು.
ಜ್ಞಾನ ಕ್ರಿಯೆಯಿಂದೆ ಕೂಡಬೇಕೆಂಬುದೊಂದು ಕುರುಹು
ನಾನೇನಾಗಬೇಕೆಂಬುದೊಂದು ಕುರುಹು.
ಇದು ಕಾರಣ ಕುರುಹಳಿದಲ್ಲದೆ ಇರವಾಗಬಾರದು.
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮೈಕ್ಯಂಗೆ
ಜೀವನಿಲ್ಲ, ಪರಮನಿಲ್ಲ, ಜ್ಞಾನವಿಲ್ಲ, ಕ್ರಿಯೆಯಿಲ್ಲ,
ನಾನು ಇಲ್ಲ ನೀನು ಇಲ್ಲ ತಾನು ತಾನಾಗಿರ್ಪನು ಕಾಣಾ. || ೯೦೩ ||

೯೦೪

ಅಲುಪ್ತ ಶಕ್ತಿತ್ವಾನುಭಾವಪ್ರಕಾಶದೊಳ್ಮುಳುಗಿ
ಆಚಾರಲಿಂಗಭಕ್ತನೆಂಬ ನಾಮನಷ್ಟವಾಯಿತ್ತು ನೋಡಾ !
ಸ್ವತಂತ್ರತ್ವಾನುಭಾವಪ್ರಕಾಶದೊಳ್ಮುಳುಗಿ
ಗುರುಲಿಂಗಮಹೇಶನೆಂಬ ನಾಮನಷ್ಟವಾಯಿತ್ತು ನೋಡಾ.
ನಿತ್ಯತ್ವಾನುಭಾವಪ್ರಕಾಶದೊಳ್ಮುಳುಗಿ
ಶಿವಲಿಂಗಪ್ರಸಾದಿಯೆಂಬ ನಾಮನಷ್ಟವಾಯಿತ್ತು ನೋಡಾ.
ಅನಾದಿ ಭೇದತ್ವಾನುಭಾವಪ್ರಕಾಶದೊಳ್ಮುಳುಗಿ
ಜಂಗಮಲಿಂಗ ಪ್ರಾಣಲಿಂಗಿಯೆಂಬ ನಾಮನಷ್ಟವಾಯಿತ್ತು ನೋಡಾ.
ಸರ್ವಜ್ಞತ್ವಾನುಭಾವಪ್ರಕಾಶದೊಳ್ಮುಳುಗಿ
ಪ್ರಸಾದಲಿಂಗಶರಣನೆಂಬ ನಾಮನಷ್ಟವಾಯಿತ್ತು ನೋಡಾ.
ತೃಪ್ತತ್ವಾನುಭಾವಪ್ರಕಾಶದೊಳ್ಮುಳುಗಿ
ಮಹಾಲಿಂಗೈಕ್ಯನೆಂಬ ನಾಮವನುಡುಗಿ
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮೊಳಗೆ ನಿಜೈಕ್ಯನಾದೆನು ಕಾಣಾ. || ೯೦೪ ||

೯೦೫

ಅಯ್ಯಾ, ಎನ್ನ ಭಕ್ತಿಪ್ರಕಾಶ ನಿಮ್ಮನಾವರಿಸಿರ್ದು
ಮರಳಿಮಾಡುವ ಕುರುಹಿಂಗೆ ಇಂಬುಗಾಣೆನಯ್ಯಾ.
ಎನ್ನ ಯುಕ್ತಿಪ್ರಕಾಶ ನಿಮ್ಮನಾವರಿಸಿರ್ದು
ಮರಳಿ ಯುಕ್ತಿಯ ಕುರುಹಿಂಗೆ ಇಂಬುಗಾಣೆನಯ್ಯಾ.
ಅಯ್ಯಾ, ಎನ್ನ ಜ್ಞಾನತ್ರಿಪುಟಿಗಳ ಪ್ರಕಾಶ ನಿಮ್ಮನಾವರಿಸಿರ್ದು
ಮರಳಿ ಜ್ಞಾತೃ, ಜ್ಞಾನ, ಜ್ಞೇಯವೆಂಬ ಕುರುಹಿಂಗೆ ಇಂಬುಗಾಣೆನಯ್ಯಾ.

ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣಲಿಂಗೈಕ್ಯದಾನಂದ ಬೆಳಗನೇನೆಂದುಪಮಿಸಬಹುದು ? ॥ ೯೦೫ ॥

೯೦೬

ಅಯ್ಯಾ, ನಿಮ್ಮ ಸಮರಸದೊಳಗಣ
ಶ್ರದ್ಧೆಯಬೆಳಗಿನ ಸೊಬಗನಾರು ಬಲ್ಲರು ಹೇಳಾ !
ನಿಮ್ಮ ಸಮರಸದೊಳಗಣ ನೈಷ್ಠೆಬೆಳಗಿನ ಸೊಬಗನಾರು ಬಲ್ಲರು ಹೇಳಾ !
ನಿಮ್ಮ ಸಮರಸದೊಳಗಣ ಸಾವಧಾನಬೆಳಗಿನ ಸೊಬಗನಾರು ಬಲ್ಲರು ಹೇಳಾ !
ನಿಮ್ಮ ಸಮರಸದೊಳಗಣ ಅನುಭಾವಬೆಳಗಿನ ಸೊಬಗನಾರು ಬಲ್ಲರು ಹೇಳಾ !
ನಿಮ್ಮ ಸಮರಸದೊಳಗಣ ಆನಂದಬೆಳಗಿನ ಸೊಬಗನಾರು ಬಲ್ಲರು ಹೇಳಾ !
ನಿಮ್ಮ ಸಮರಸದೊಳಗಣ ಸಮಬೆಳಗಿನ ಸೊಬಗನಾರು ಬಲ್ಲರು ಹೇಳಾ !
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ನಿಜದೊಳಗಿಪ್ಪ ನಿಜೈಕ್ಯಂಗಲ್ಲದೆ ಅರಿಯಬಾರದು ಕಾಣಾ. ॥ ೯೦೬ ॥

೯೦೭

ಅರಿಯಬಾರದ ಘನವನರಿವ ಪರಿಯೆಂತು ಹೇಳಾ !
ಕುರುಹಿಟ್ಟು ಕೊಡುವರ ಕಾಣೆ ಮೂರುಲೋಕದೊಳಗೆ.
ಅರಿಯಬಾರದುದನರಿದು, ಹರಿಯಬಾರದುದ ಹರಿದು,
ಮರೆಯಬಾರದುದ ಮರೆದು ನೆರೆಯಬಾರದುದ ನೆರೆದು
ನಿಜವಾದರು ನಿಮ್ಮ ಶರಣರು
ಗುರುನಿರಂಜನ ಚನ್ನಬಸವಲಿಂಗಾ. ॥ ೯೦೭ ॥

೯೦೮

ಕಾಲಿಲ್ಲದ ಗಮನದವರು ನಡೆಯಲನುವಿಲ್ಲ.
ಕಣ್ಣಿಲ್ಲದ ನೋಟದವರು ನೋಡಲನುವಿಲ್ಲ.
ಕೈಯಿಲ್ಲದ ಮುಟ್ಟುವರು ಮುಟ್ಟಲನುವಿಲ್ಲ.
ಬಾಯಿಲ್ಲದ ನುಡಿವರು ನುಡಿಯಲನುವಿಲ್ಲ.
ಕಿವಿಯಿಲ್ಲದ ಕೇಳುವರು ಕೇಳಲನುವಿಲ್ಲ.
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಐಕ್ಯವನರಿಯದವರು ಐಕ್ಯವಾಗಲನುವಿಲ್ಲ. ॥ ೯೦೮ ॥

೯೦೯

ನೀರೊಳಗಿನ ಕಿಚ್ಚೆದ್ದು ಊರೆಲ್ಲ ಸುಟ್ಟಿತ್ತು.
ಕೇರಿಯೊಳಗಣ ಸೂಳೆಯರು ಗರತಿಯಾದುದನೇನೆಂಬೆನಯ್ಯಾ.

ಹಾರುವನ ಕುತ್ತಿಗೆಯ ಕೊಯ್ದು ಮೇಲಣೊರತೆಯ ಉದಕವ ಹೊಯ್ವರೆ
ಹಾರುವನ ಕುಲಕೋಟಿ ಸತ್ತು ಕುಣಿಕುಣಿದು ಕೂಡಿದರು
ಗುರುನಿರಂಜನ ಚನ್ನಬಸವಲಿಂಗ ಶರಣ ಬೆಂಬಳಿವಿಡಿದು. ॥ ೬೦೯ ॥

೬೧೦

ಹಾಳೂರೊಳಗೊಂದು ಕೋಳಿದ್ದು ಕೂಗಿತ್ತು.
ನೋಡಬಂದವರ ಬೆಕ್ಕು ಮುರಿಯಿತ್ತು.
ನೀರೊಳಗೆ ಚಂದ್ರಮೂಡಿತ್ತು, ಮೇರುಗಿರಿಪರ್ವತಕ್ಕೆ
ಬೆಳಗು ಹಬ್ಬಿದಲ್ಲಿ ನೂರೊಂದು ಕುಲ :
ಷಡುದರ್ಶನವಾಗಿ ಮೂರು ಸಿಂಹಾಸನದೊಳುನಿಂದು
ಮುತ್ತಿನ ಮೇಲುಪ್ಪರಿಗೆಯೊಳಗಿಪ್ಪ
ಗುರುನಿರಂಜನ ಚನ್ನಬಸವಲಿಂಗ ಪ್ರಭೆಯೊಳಗಡಗಿ
ಕುರುಹಳಿದುದನೇನೆಂಬೆ. ॥ ೬೧೦ ॥

೬೧೧

ನಿರ್ಮಲಜಾಗ್ರದ ಬೆಳಗನರಿಯದ ವೇದಾಂತಿಯ ಸಂಗಭಂಗವನರಿಯದೆ,
ನಿರುಪಮಸ್ವಪ್ನದ ಕಳೆಯನರಿಯದ ಸಿದ್ಧಾಂತಿಯ ಕೂಟಭಂಗವನರಿಯದೆ,
ನಿರಂಜನಸುಷುಪ್ತಿಯ ಪ್ರಕಾಶವನರಿಯದ
ಯೋಗಮಾರ್ಗಿಯ ಸಂಯೋಗ ಭಂಗವನರಿಯದೆ
ಜಾಗ್ರದ ಬೆಳಗ ಸ್ವಪ್ನದಲ್ಲಿ ಕಂಡು, ಸ್ವಪ್ನದ ಕಳೆಯ ಸುಷುಪ್ತಿಯೊಳ್ಬೆರೆದು
ಸುಮ್ಮನಿರ್ದ ಗುರುನಿರಂಜನ ಚನ್ನಬಸವಲಿಂಗಾ, ನಿಮ್ಮೊಳಗೆ ಶರಣ. ॥ ೬೧೧॥

೬೧೨

ಚಿತ್ಕಾಯದ ತಿರುಳ ಲಿಂಗದಲ್ಲಿ ಅರಿದು ಸಂಗಸಂಯೋಗಿ ನೋಡಾ,
ಚಿನ್ಮಾನಸದ ತಿರುಳ ಲಿಂಗದಲ್ಲರಿದು ಕೂಟಸಂಯೋಗಿ ನೋಡಾ,
ಚಿದ್ಭಾವದ ತಿರುಳ ಲಿಂಗದಲ್ಲರಿದು ಸಮರಸಸಂಯೋಗಿ ನೋಡಾ,
ಗುರುನಿರಂಜನ ಚನ್ನಬಸವಲಿಂಗಾ, ನಿಮ್ಮ ಲಿಂಗಪ್ರಾಣೈಕ್ಯನ ನೋಡಾ. ॥ ೬೧೨॥

೬೧೩

ಬಯಲಭೂಮಿಯ ಕಲಾಪರ್ಯಾಯನಾರಿಯ ಸಂಗದ ಸುಖವೆನ್ನ
ಸುಬುದ್ಧಿಯೊಳಗಾಯಿತ್ತು.
ಬಯಲ ಅಪ್ಪುವಿನ ಕಲಾಪರ್ಯಾಯಸುಗುಣೆಯ ಸಂಗದ ಸುಖವೆನ್ನ
ನಿರಹಂಕಾರದೊಳಗಾಯಿತ್ತು,
ಬಯಲಾನಲ ಕಲಾಪರ್ಯಾಯಕಾಮಿನಿಯ ಸಂಗದ ಸುಖವೆನ್ನ

ಸುಮನದೊಳಗಾಯಿತ್ತು.
ಬಯಲಾನಿಲ ಕಲಾಪರ್ಯಾಯಕೂಟ ಸ್ತ್ರೀಸಂಗದ ಸುಖವೆನ್ನ
ಸುಜ್ಞಾನದೊಳಗಾಯಿತ್ತು.
ಬಯಲಾಂಬರ ಕಲಾಪರ್ಯಾಯ ಪರಲಲನೆಯ ಸಂಗದ ಸುಖವೆನ್ನ
ಸದ್ಭಾವದೊಳಗಾಯಿತ್ತು.
ಬಯಲಾತ್ಮ ಕಲಾಪರ್ಯಾಯ ಚಿತ್ರಾಂಗನೆಯ ಸಂಗದ ಸುಖವೆನ್ನ
ಅನುಪಮಪ್ರಕಾಶ ಗುರುನಿರಂಜನ ಚನ್ನಬಸವಲಿಂಗದೊಳಗಾಯಿತ್ತು. ॥ ೯೧೩ ॥

೯೧೪

ಮಹೇಶ್ವರತತ್ವವನರಿದ ಶರಣ ಗುರುಪ್ರಕಾಶವಲ್ಲದರತು
ಇಷ್ಟಲಿಂಗೈಕ್ಯ ತಾನೇ ನೋಡಾ.
ಸದಾಶಿವತತ್ವವನರಿದ ಶರಣ ಲಿಂಗಪ್ರಕಾಶದೊಳರತು
ಪ್ರಾಣಲಿಂಗೈಕ್ಯ ತಾನೇ ನೋಡಾ.
ಶಿವತತ್ವವನರಿದ ಶರಣ ಜಂಗಮಪ್ರಕಾಶವಲ್ಲರತು
ಭಾವಲಿಂಗೈಕ್ಯ ತಾನೇ ನೋಡಾ.
ಇದು ಕಾರಣ, ನಿಜತತ್ವನರಿದ ಶರಣ ಗುರುನಿರಂಜನ ಚನ್ನಬಸವಲಿಂಗದಲ್ಲಿ
ಲಿಂಗಾಂಗವನರಿಯದ ಪ್ರಾಣಲಿಂಗೈಕ್ಯನನೇನೆಂದುಪಮಿಸುವೆನಯ್ಯಾ. ॥ ೯೧೪ ॥

೯೧೫

ಪ್ರಾಣ ಲಿಂಗದಲ್ಲರತು, ಲಿಂಗ ಪ್ರಾಣದಲ್ಲರತು,
ಪ್ರಾಣ ಲಿಂಗ ಸಂಗದಲ್ಲರತು, ಸಂಗ ಸುಖದಲ್ಲರತು,
ಸುಖ ಪರಿಣಾಮದಲ್ಲರತು, ಪರಿಣಾಮ ಪರವಶದಲ್ಲರತು
ಪರವಶ ಪರಿಪೂರ್ಣಾನಂದ ಗುರುನಿರಂಜನ ಚನ್ನಬಸವಲಿಂಗ
ತಾನೇ ಬೇರಿಲ್ಲದ ಬೆಡಗು. ॥ ೯೧೫ ॥

## ಐಕ್ಯನ ಶರಣಸ್ಥಲ

೯೧೬

ಮದುವೆಯ ಗಂಡನ ಮುಖದಿಂದೆ ಮಂಗಲಪುರುಷರ ಸಂಗವನರಿದೆ.
ನಟನೆಗಳಿಂದೆ ಮೂವರಿಗೆ ರತಿರಮ್ಯವಾಗಿ ಮೆಚ್ಚಿಸಿ ಆ ಮೆಚ್ಚಿನೊಳಗಾದೆನು.
ಸವಿನುಡಿಯ ಸಾರದೊಳು ಮೂವರಿಗೆ ಮರುಳುಮಾಡಿ ಆ ಮರುಳಿನೊಳಗಾದೆನು.
ಮೆಚ್ಚು ಮರುಳ ನುಂಗಿ ಚಿಣ್ಣ ಮನೆಯ ಚೆಮರ
ನಮ್ಮ ಗುರುನಿರಂಜನ ಚನ್ನಬಸವಲಿಂಗವನಪ್ಪಿ ಅರಿಯದಾದೆನು. ॥ ೯೧೬ ॥

೯೧೭

ಗಂಡನ ಸುಖಬಲ್ಲ ಮಿಂಡೆಯರೆಲ್ಲ ಬನ್ನಿರೆ.
ತಂಡ ತಂಡದ ಭೋಗವನಾ ಮಂಡಲದ ಮಾನಿನಿಯರೇನು ಬಲ್ಲರು ಕಾಣಿರೆ !
ಸುಚಿತ್ತಾಲಯದಲ್ಲಿ ಬಹಿರಚತುಷ್ಷಿಕಳಾಯುಕ್ತದಿಂ ನೆರೆವ
ಪತ್ತರ ಒಲುಮೆಯ ರತಿಯೊಳ್ಮುಳುಗಿದ ಸೊಬಗಿನ ಸೊನ್ನೆಯನೇನೆಂಬೆನವ್ವ !
ಸುಬುದ್ಧಿ ನಿಲಯದಲ್ಲಿ ಮಧ್ಯಚತುಷ್ಷಿಕಳಾಯುಕ್ತದಿಂ ಕೂಡುವ
ಬಣ್ಣಿತೆ ಭಾವರಮ್ಯ ನಯವಪ್ಪುಗೆಯಸುಖದೊಳ್ಮುಳುಗಿದ
ಪರಿಣಾಮದ ಕುಶಲವನೇನೆಂಬೆನವ್ವ !
ನಿರಹಂಕಾರ ಗೃಹದಲ್ಲಿ ಅಂತಃಚತುಷ್ಷಿಕಳಾಯುಕ್ತದಿಂ ಸಂಯೋಗಿಸುವ
ಎಳೆಮೋಹ ಸಮತೆಯ ಸುಖದೊಳ್ಮುಳುಗಿದ
ಪರಮಪರಿಣಾಮವನೇನೆಂಬೆನವ್ವ !
ಸುಮನಮಂಟಪದಲ್ಲಿ ಮಹಾನುಭಾವ ಚತುಷ್ಷಿಕಳಾಯುಕ್ತದಿಂ ಸಂಯೋಗಿಸುವ
ಕಲೆ ಸೋಂಕು ರತಿರಮ್ಯದೊಳ್ಮುಳುಗಿದ ಅತಿಶಯದುನ್ನತಿಯನೇನೆಂಬೆನವ್ವ !
ಸುಜ್ಞಾನಮಂದಿರದಲ್ಲಿ ಆನಂದಚತುಷ್ಷಿಕಳಾಯುಕ್ತದಿಂ ನೆರೆವ
ಮೆಚ್ಚು ಅಚ್ಚೊತ್ತಿರ್ದವಿರಳ ಪರಿ ಸುಖವನೇನೆಂಬೆನವ್ವ !
ಸದ್ಭಾವಾಲಯದಲ್ಲಿ ಸಮರಸಚತುಷ್ಷಿಕಳಾಯುಕ್ತದಿಂ ಸತ್ಕೂಟ ಸನುಮತವೆನಿಸುವ
ಅನುಪಮ ಸುಖರತಿಯೊಳ್ಮುಳುಗಿದ ಅಗಣಿತದುನ್ನತಿಯನೇನೆಂಬೆನವ್ವ !
ನಿಜಾಲಯದಲ್ಲಿ ನಿತ್ಯನಿಚ್ಚೆರಗು ಪರವಶ ಪರಿಪೂರ್ಣವೆಂಬ
ಅಖಂಡ ಚತುಷ್ಷಿಕಳಾಯುಕ್ತದಿಂ
ಅಭಿನ್ನಸಂಯೋಗದತಿಶಯದಾನಂದದೊಳ್ಮುಳುಗಿದ
ಘನಸುಖದುನ್ನತಿಯ
ಗುರುನಿರಂಜನ ಚನ್ನಬಸವಲಿಂಗದೊಳಗೆ ಏನೆಂಬೆನವ್ವ ! || ೯೧೭ ||

೯೧೮

ಕ್ಷುತ್ತುಪರತಲ್ಲಿ ಪ್ರಸಾದದ ಭಾವನಾಸ್ತಿ.
ಪಿಪಾಸುಪರತಲ್ಲಿ ಪಾದೋದಕದ ಭಾವನಾಸ್ತಿ.
ಶೋಕಪರತಲ್ಲಿ ತಪ ಮೌನ ಜಪ ನಾಸ್ತಿ.
ಮೋಹಪರತಲ್ಲಿ ಮಾಟಕೂಟದ ಬೇಟನಾಸ್ತಿ.
ಜನನಪರತಲ್ಲಿ ಶಿಷ್ಯತನನಾಸ್ತಿ.
ಮರಣಪರತಲ್ಲಿ ಗುರುನಿರಂಜನ ಚನ್ನಬಸವಲಿಂಗವಾಗಿ ಲಿಂಗೈಕ್ಯನಾಸ್ತಿ. || ೯೧೮||

೬೧೯

ಕಾಮನಾಸ್ತಿಯಾದಲ್ಲಿ ಅಷ್ಟವಿಧಾರ್ಚನೆಯ ಭಾವನಾಸ್ತಿ.
ಕ್ರೋಧನಾಸ್ತಿಯಾದಲ್ಲಿ ಸುವಿಚಾರ ಭಾವನಾಸ್ತಿ.
ಲೋಭನಾಸ್ತಿಯಾದಲ್ಲಿ ತನುಮನಪ್ರಾಣಭಾವನಾಸ್ತಿ.
ಮೋಹನಾಸ್ತಿಯಾದಲ್ಲಿ ಈಷಣತ್ರಯ ಭಾವನಾಸ್ತಿ.
ಮದನಾಸ್ತಿಯಾದಲ್ಲಿ ತ್ರಿಪುಟಿಭಾವನಾಸ್ತಿ.
ಮತ್ಸರನಾಸ್ತಿಯಾದಲ್ಲಿ ಕೂಟದ ಭಾವನಾಸ್ತಿ.
ಗುರುನಿರಂಜನ ಚನ್ನಬಸವಲಿಂಗನಾಸ್ತಿಯಾದಲ್ಲಿ ತಾನೆಂಬ ಭಾವನಾಸ್ತಿ. ॥೬೧೯॥

೬೨೦

ಅರಿಯಬಾರದ ಸ್ನೇಹವ ಹೂಡಿ ಅಗಲಬಾರದ ಆಟದೊಳಗೆ
ಅತಿಶಯವರಿದು ಮರೆದು ನಿಂದ ನಿವಾತಜ್ಯೋತಿಯಂತೆ
ಗುರುನಿರಂಜನ ಚನ್ನಬಸವಲಿಂಗದೊಳಗೊಪ್ಪುತ
ಲಿಂಗೈಕ್ಯವನರಿಯದಿರ್ದನು. ॥ ೬೨೦ ॥

೬೨೧

ಕಣ್ಣು ನಾಸ್ತಿಯಾದಲ್ಲಿ ಕಾಯದ ರೂಪುನಾಸ್ತಿ.
ಮನನಾಸ್ತಿಯಾದಲ್ಲಿ ನೋಟದ ಬಗೆನಾಸ್ತಿ.
ಪ್ರಾಣನಾಸ್ತಿಯಾದಲ್ಲಿ ಸಂಚಲ ಮಾಟನಾಸ್ತಿ.
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಭಾವನಾಸ್ತಿಯಾದಲ್ಲಿ ಮಹಾಲಿಂಗೈಕ್ಯ ತಾನೆ ನೋಡಾ. ॥ ೬೨೧ ॥

೬೨೨

ಸಮರಸ ಪಾದೋದಕದಲ್ಲಿ ಲೀಯವಾದ ಶರಣಂಗೆ
ಭಿನ್ನವಿಟ್ಟರಿವ ಪಾದೋದಕದ ಕಟ್ಟಳೆ ಭಾವಿಸ, ಕಾರ್ಯಕಾರಣ ನಷ್ಟವಾದುದಾಗಿ.
ದಶವಿಧಪಾದೋದಕವನರಿಯದಿರ್ದ ಪಾದೋದಕ ತಾನೆಯಾಗಿ,
ಗುರುನಿರಂಜನ ಚನ್ನಬಸವಲಿಂಗಕ್ಕಾವರಿಸಿ ಅಡಗಿರ್ದನು. ॥ ೬೨೨ ॥

೬೨೩

ಕರುಣೋದಕವ ಬಲ್ಲರೆ ಕಾಯಭಾವನಾಸ್ತಿಯಾಗಿರಬೇಕು.
ವಿನಯೋದಕವ ಬಲ್ಲರೆ ಪ್ರಾಣನ ಪ್ರಕೃತಿನಾಸ್ತಿಯಾಗಿರಬೇಕು.
ಸಮತೋದಕವ ಬಲ್ಲರೆ ಆತ್ಮಗುಣವಡಗಿರಬೇಕು.
ಸ್ಪರ್ಶನೋದಕವ ಬಲ್ಲರೆ ಕಾಮವಿಕಾರದ ಸೋಂಕನಳಿದಿರಬೇಕು.

ಅವಧಾರೋದಕವ ಬಲ್ಲರೆ ಅರಿಷಡ್ವರ್ಗ ಶೂನ್ಯವಾಗಿರಬೇಕು.
ಆಪ್ಯಾಯನೋದಕವ ಬಲ್ಲರೆ ಷಡೂರ್ಮಿನಾಸ್ತಿಯಾಗಿರಬೇಕು.
ಹಸ್ತೋದಕವ ಬಲ್ಲರೆ ಅನ್ಯರಿಗೆ ಕೈಯಾಂತು ಬೇಡದಿರಬೇಕು.
ಪರಿಣಾಮೋದಕವ ಬಲ್ಲರೆ ಹುಸಿ ಕಳವು ಪರದಾರಗತಿನಾಸ್ತಿಯಾಗಿರಬೇಕು.
ನಿರ್ನಾಮೋದಕವ ಬಲ್ಲರೆ ಷಡುವರ್ಣರಹಿತನಾಗಿಬೇಕು.
ಸತ್ಯೋದಕವ ಬಲ್ಲರೆ ಮಿಥ್ಯಭಾವನಾಸ್ತಿಯಾಗಿರಬೇಕು.
ಈ ಭೇದವನರಿಯದೆ ದಶವಿಧ ಪಾದೋದಕದಾಚರಣೆಯೊಳಿರ್ದವರೆಂದೊಡೆ
ಕರ್ಮಕತ್ತಲೆಯುಳಿದುಬಾರರು ಗುರುನಿರಂಜನ ಚನ್ನಬಸವಲಿಂಗೈಕ್ಯವೆಂಬ
ಅಖಂಡ ಪಾದೋದಕದಾಲಯಕ್ಕೆ. ॥ ೬೨೩ ॥

೬೨೪

ಬಸವಣ್ಣನ ಕುರಣಜಲದಲ್ಲಿ ಮುಳುಗಿ ಕಾಯಮುಕ್ತನೆನಿಸಿದೆ.
ಚನ್ನಬಸವಣ್ಣನ ವಿನಯಜಲದಲ್ಲಿ ಮುಳುಗಿ ಮನೋಮುಕ್ತನೆನಿಸಿದೆ.
ಪ್ರಭುವಿನ ಸಮತಾಜಲದಲ್ಲಿ ಮುಳುಗಿ ಪ್ರಾಣಮುಕ್ತನೆನಿಸಿದೆ.
ತ್ರಿವಿಧೋದಕವೊಂದಾದ ಗುರುನಿರಂಜನ ಚನ್ನಬಸವಲಿಂಗಾ
ಸಂಗಪರಮಾನಂದ ಪಾದೋದಕದಲ್ಲಿ ಮುಳುಗಿ
ಅರಿಯದಿರ್ದನುಪಮನೆನಿಸಿದೆನು. ॥ ೬೨೪ ॥

೬೨೫

ಚಿತ್ಕಲೆ ನೀಲಮ್ಮನವರ ಪದಸ್ಪರ್ಶನದಿಂದೆ ಕಾಯಶೂನ್ಯನಾದೆ.
ಅಕ್ಕಮಹಾದೇವಿಗಳ ಪದಸ್ಪರ್ಶನದಿಂದೆ ಕರಣಶೂನ್ಯನಾದೆ.
ನಾಗಲಾಂಬಿಕೆಯರ ಪದಸ್ಪರ್ಶನದಿಂದೆ ಪ್ರಾಣಶೂನ್ಯನಾದೆ.
ಮುಕ್ತಾಯಕ್ಕಗಳ ಪದಸ್ಪರ್ಶನದಿಂದೆ ಭಾವಶೂನ್ಯನಾದೆ
ಗುರುನಿರಂಜನ ಚನ್ನಬಸವಲಿಂಗದೊಳಗೆ. ॥ ೬೨೫ ॥

## ನಿರವಯಸ್ಥಲ

ಸೂತ್ರ : ಇಂತು ವಿನೋದಕಾರಣ ಶರಣ ತನಗೆ ತಾ ಭಕ್ತನಾಗಿ ತನ್ನೊಳಡಗಿ, ತನಗೆ ತಾ ಮಹೇಶ್ವರನಾಗಿ ತನ್ನೊಳಡಗಿ, ತನಗೆ ತಾ ಪ್ರಸಾದಿಯಾಗಿ ತನ್ನೊಳಡ ತನಗೆ ತಾ ಪ್ರಾಣಲಿಂಗಿಯಾಗಿ ತನ್ನೊಳಡಗಿ, ತನಗೆ ತಾ ಶರಣನಾಗಿ ತನ್ನೊಳಡಗಿ, ತನಗೆ ತಾ ಐಕ್ಯನಾಗಿ ತನ್ನೊಳಡಗಿ, ತಾ ನಿರ್ವಯಲಾದುದೇ ನಿರವಯಸ್ಥಲ ವೆಂದು ಹೇಳಲಾಯಿತು.

೬೨೬

ಪರಿಪೂರ್ಣಮಯವಪ್ಪ ಪರಮಸುಜ್ಞಾನದಿಂದೆ
ಪರುಷ ಲೋಪವ ತೆರನಾದೆ.

ಕ್ರಿಯಾಘನ ಗುರುವಿನಿಂದೆ ಭ್ರಮರ ಕೀಟನ್ಯಾಯದಂತಾದೆ.
ಘನಲಿಂಗಸಂಗದಿಂದೆ ಕ್ಷೀರ ನೀರಸಂಗದಂತಾದೆ.
ಅಭಿನ್ನ ಗುರುನಿರಂಜನ ಚನ್ನಬಸವಲಿಂಗದಲ್ಲಡಗಿ
ಅಳಿದು ಉರಿ ಕರ್ಪೂರ ಸಮರಸದಂತಾದೆ. || ೬೨೬ ||

೬೨೭

ಮಾಟವನರಿಯೆ ಕಾಯವಿಲ್ಲವಾಗಿ,
ನೋಟವನರಿಯೆ ಕಂಗಳಿಲ್ಲವಾಗಿ,
ಕೂಟವನರಿಯೆ ಮನವಿಲ್ಲವಾಗಿ,
ಮಾಟ ನೋಟವನ್ನೆಯ್ದಿ, ನೋಟ ಕೂಟವಕೂಡಿ,
ಕೂಟ ಭಾವವನ್ನೆಯ್ದಿ, ಭಾವ ನಿರ್ಭಾವವನ್ನೆಯ್ದಿ ನಿರ್ವಯಲಾದ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. || ೬೨೭ ||

೬೨೮

ನಡೆನಡೆದು ನಡೆಗಳುಡುಗಿ ನಡೆಯನರಿಯದಿರ್ದುದು.
ನುಡಿನುಡಿದು ನುಡಿಗಳುಡುಗಿ ನುಡಿಯಲರಿಯದಿರ್ದುದು.
ನೆನೆನೆನೆದು ನೆನಹು ನಿರ್ಧರವಾಗಿ ನೆನೆಯಲರಿಯದಿರ್ದುದು.
ಗುರುನಿರಂಜನ ಚನ್ನಬಸವಲಿಂಗವ ಭಾವಿಸಿ ಭಾವಿಸಿ,
ಭಾವ ನಿರ್ಭಾವವಾಗಿ ನಿರ್ವಯಲಾದುದು ಶರಣನ ಭಾವ. || ೬೨೮ ||

೬೨೯

ಸುಳುಹಿಲ್ಲದ ಕೇರಿಯೊಳಗೆ ಸುಳಿದಾಡುವ ಕುಲಗೇಡಿಗಳ ನೋಡಾ !
ಕುಲಗೇಡಿಗಳ ಕೂಡಿ ನೆಲೆಗಂಡು ಲಲನೆಯರ ಮೆಚ್ಚಿಗೆಯೊಳು ನಿಂದು
ಗುರುನಿರಂಜನ ಚನ್ನಬಸವಲಿಂಗವ ಕೂಡಿ
ಸಂಗವಳಿದು ಸಹಜವಾದುದು ಸ್ವಯಮೆಂಬೆ. || ೬೨೯ ||

೬೩೦

ಬಯಲು ನಲುಗಿ ಬಯಲು ನಿಂದು ಬಯಲರುಹಿಸಿ,
ಬಯಲಿಂಗೆ ಬಯಲು ಬಲಿದು,
ಬಯಲಿಂದೆ ಬಯಲಳಿದು, ಬಯಲು ಬಯಲ ಕೂಡಿ
ನಿರ್ವಯಲು ಹುಟ್ಟಿ, ಬಯಲಸಮರಸದಲ್ಲಿ
ಬಯಲು ನಿರ್ವಯಲಾಗಿ ನಿರವಯವಾಯಿತ್ತು
ಗುರುನಿರಂಜನ ಚನ್ನಬಸವಲಿಂಗಾ. || ೬೩೦ ||

೯೩೧

ಆಟವಳಿದು ಆರೂಢವಾಯಿತ್ತು,
ನೋಟಕರು ಸತ್ತರು ಮಾಟಕರು ಮಡಿದರು.
ಕೂಟಕರು ಕುರುಹಳಿದರು, ನೋಡಲಿಲ್ಲ ನುಡಿಸಲಿಲ್ಲ ಕೇಳಲಿಲ್ಲ.
ಗುರುನಿರಂಜನ ಚನ್ನಬಸವಲಿಂಗವಾಗಿ ನಿರ್ವಯಲಾದುದನೇನೆಂಬೆನಯ್ಯಾ.
|| ೯೩೧ ||

೯೩೨

ಕಸವಿಲ್ಲದ ಭೂಮಿಯ ಮೇಲೆ ಶಶಿಕಳೆಯಾವರಿಸಿತ್ತು ನೋಡಾ !
ರಸದ ಬಾವಿಯ ಸ್ವಾದೋದಕವ ಕುಡಿದು
ಭೇದವಳಿದುಳಿದು ಬಯಲಾದುದು
ಗುರುನಿರಂಜನ ಚನ್ನಬಸವಲಿಂಗವು. || ೯೩೨ ||

೯೩೩

ತನ್ನ ನೆವದಿಂದೆ ತಾ ಬಂದು ತಾನು ತಾನಾಗಿ
ಆಡಬಾರದುದನಾಡಿ ಉಣಬಾರದುದನುಂಡು,
ಕೂಡಬಾರದುದ ಕೂಡಿ ಕುರುಹಳಿದ
ಗುರುನಿರಂಜನ ಚನ್ನಬಸವಲಿಂಗ ತಾನೆ. || ೯೩೩ ||

೯೩೪

ಅದ್ವೈತವನಳಿದುಳಿದ ಕುರುಹು ನಾಶವಾಯಿತ್ತು.
ದ್ವೈತವನಳಿದುಳಿದ ಕುರುಹು ನಷ್ಟವಾಯಿತ್ತು.
ಯೋಗಗತಿಯನಳಿದುಳಿದ ಕುರುಹು ಲಯವಾಯಿತ್ತು.
ಗುರುನಿರಂಜನ ಚನ್ನಬಸವಲಿಂಗ ತಾನೆಯಾಗಿ ಬಯಲಗೊಂಡಿತ್ತು. || ೯೩೪ ||

೯೩೫

ತಾನೇ ತನ್ನ ಲೀಲೆಯಿಂದೆ ಒಂದು ಎರಡಾಗಿ,
ಮೂರು ಮೂರಾಗಿ, ಆರು ಆರಾಗಿ,
ಮೂವತ್ತಾರು ಮೂವತ್ತಾರಾಗಿ,
ಇನ್ನೂರ ಹದಿನಾರು ಇನ್ನೂರ ಹದಿನಾರಾಗಿ,
ವಿಶ್ವಪರಿಪೂರ್ಣವಾಗಿ
ತನ್ನ ತಾನೇ ಇನ್ನೂರಹದಿನಾರು ಇನ್ನೂರಹದಿನಾರಾಗಿ
ಮತ್ತೆ ಮೂವತ್ತಾರು ಮೂವತ್ತಾರಾಗಿ,

ಮತ್ತೆ ಆರು ಆರಾಗಿ, ಮತ್ತೆ ಮೂರು ಮೂರಾಗಿ,
ಮತ್ತೆ ಒಂದೊಂದಾಗಿ, ಮತ್ತೆ ಗುರುನಿರಂಜನ ಚನ್ನಬಸವಲಿಂಗವಾಗಿ
ನಿರ್ವಯಲಾದುದು, ಇದೇ ಒಂದಾಶ್ಚರ್ಯ.
ಇದನುಳಿದು ಆಶ್ಚರ್ಯವೆಂಬುದು ಅಶುದ್ಧವಾಕು ಕಾಣಾ. || ೬೩೫ ||

೬೩೬

ಅಂಕೋಲೆಯ ಬಿತ್ತು ಪೃಥ್ವಿಯ ಮೇಲೆ ಬಿದ್ದು,
ಆ ಕಾಲಕ್ಕೆ ಬಂದು ನೈಯ್ದುವಂತೆ,
ತನ್ನ ನಿಮಿತ್ತ ತಾನು ತನುವಿಡಿದಿರ್ದು
ಸರ್ವಾಚಾರಸಂಪತ್ತೆಂಬ ಸೌಖ್ಯದಿಂ ವಿನೋದಿಸಿ
ಲೀಲೆ ನಿಂದಲ್ಲಿ ಗುರುನಿರಂಜನ ಚನ್ನಬಸವಲಿಂಗ ತಾನೆಯಾಗಿ
ನಿರ್ವಯಲಾದುದೇ ಒಂದಾಶ್ಚರ್ಯವು. || ೬೩೬ ||

೬೩೭

ಅಯ್ಯಾ, ಸೂರ್ಯನು ನಿತ್ಯ ಭೂಪ್ರದಕ್ಷಿಣೆಯಾದರೆ ಅದು ಚೋದ್ಯವಲ್ಲ.
ಚಂದ್ರನು ತಾರೆಗಳೊಡವೆರೆದು ತಿಥಿ ವತ್ಸರಾದಿ ಸಕಲವ ನಡಸಿ
ಕ್ಷೀಣ ಘನವಾಗಿ ತೋರಿದಡೆಯು ಅದು ಚೋದ್ಯವಲ್ಲ.
ಪೃಥ್ವಿ ಅಪ್ಪು ಅಗ್ನಿ ವಾಯು ಆಕಾಶದೊಳಗೆ
ತಮ್ಮ ತಮ್ಮ ಪರುಷಪಂಚಕವ ನಿರ್ಮಿಸಿದಡೆಯು ಅದು ಆಶ್ಚರ್ಯವಲ್ಲ.
ಮತ್ತಾವುದು ಆಶ್ಚರ್ಯವೆಂದೊಡೆ
ಗುರುನಿರಂಜನ ಚನ್ನಬಸವಲಿಂಗಾ ನೀವು ನಾಮ ಸೀಮೆಗೆ ತೋರಿ
ನಾಮ ನಿರ್ನಾಮ ನಿಸ್ಸೀಮ ನಿರ್ವಯಲಾದುದೇ ಘನಚೋದ್ಯ ಕಾಣಾ.|| ೬೩೭ ||

೬೩೮

ಅಯ್ಯಾ, ನೀ ಮಾಡಲಾಯಿತ್ತು ನಾನು ನೀನು.
ನೀ ಮಾಡಲಾಯಿತ್ತು ಶಿಷ್ಯ ಗುರು.
ನೀ ಮಾಡಲಾಯಿತ್ತು ಭಕ್ತ ಲಿಂಗ.
ನೀ ಮಾಡಲಾಯಿತ್ತು ಜಂಗಮ ಶರಣ.
ನೀ ಮಾಡಲಾಯಿತ್ತು ಷಟ್‌ಸ್ಥಲ ತ್ರಿವಿಧಸ್ಥಲ ಏಕೋತ್ತರಸ್ಥಲ.
ನೀ ಮಾಡಲಾಯಿತ್ತು ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರಸ್ಥಲ.
ನಿನ್ನ ಮಾಟ ನಿಂದಲ್ಲಿ ಸಕಲ ನಿಃಕಲದೊಳಡಗಿ
ನಿಃಕಲ ನಿರ್ವಯಲಾದ ನಿರುಪಮ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ ನಾಮಶೂನ್ಯ. || ೬೩೮ ||

೯೩೯

ಕಾಯ ಮನ ಪ್ರಾಣ ಭಾವ ಜ್ಞಾನ ನಾಮ ಸೀಮೆ ನಿರಂಜನ ಶರಣನು
ಮಾಡಲಿಲ್ಲ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆಯ.
ನೋಡಲಿಲ್ಲ ಸ್ತೋತ್ರ ಜಪ ಮಂತ್ರ ಧ್ಯಾನವಿಟ್ಟು ಪ್ರಾಣಲಿಂಗವ.
ಕೂಡಲಿಲ್ಲ ನಿರಂಜನ ಪೂಜೆ ಮನೋರ್ಲಯವಿಟ್ಟು ಭಾವಲಿಂಗವ.
ಎಂತಿರ್ದಂತೆ ಗುರುನಿರಂಜನ ಚನ್ನಬಸವಲಿಂಗವ
ತಾನಾಗಿ ಬಯಲಾದುದನೇನೆಂಬೆ. || ೯೩೯ ||

೯೪೦

ನಡೆಯಿಲ್ಲದ ನಡೆ ನಷ್ಟವಾಯಿತ್ತು.
ನುಡಿಯಿಲ್ಲದ ನುಡಿ ಲಯವಾಯಿತ್ತು.
ನೋಟವಿಲ್ಲದ ನೋಟ ಲೀಯವಾಯಿತ್ತು.
ಕೂಟವಿಲ್ಲದ ಕೂಟ ಕುರುಹಳಿಯಿತ್ತು.
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣನ. || ೯೪೦ ||

೯೪೧

ನಡೆಗತೀತವಾದ ಘನವು ನಡೆಗಲಿತು ಬಂದುದೆನಗರಿದಾಯಿತ್ತು.
ಅನುಪಮದ ನಿಲುವು ಉಪಮೆಗೆ ಬಂದುದೆನಗರಿದಾಯಿತ್ತು.
ಅಪ್ರತಿಮದಾನಂದದ ಘನವು ಪ್ರತಿಕರಿಸಿಬಂದುದೆನಗರಿದಾಯಿತ್ತು.
ಬೇರಾಗಿರ್ದ ಬ್ರಹ್ಮ ಘೋರನೆ ಅಂಗವಿಸಿದುದೆನಗೆ ಅರಿದಾಯಿತ್ತು.
ಅಂಗಲಿಂಗವಾಗಿ ಸಂಗಸಮರಸವಾಗಿ ಬಯಲಾದುದೆನಗೆ ಅರಿದಾಯಿತ್ತು.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮೊಳಗೆ ಮತ್ತೆ ಅರಿದೆನೆಂಬುದೇನು ಹೇಳಾ ! || ೯೪೧ ||

೯೪೨

ಘನ ಮನವನೊಳಕೊಂಡು, ಮನ ಘನವನೊಳಕೊಂಡು,
ಆ ಘನಮನವ ನಿಜವೊಳಕೊಂಡು, ಆ ನಿಜವು ನಿರ್ವಯಲಾದುದು
ನೀನು ನಾನೆಂಬ ನಿಲುವಿಗೆ ಸಾಧ್ಯವಾಗಿಹುದು
ಗುರುನಿರಂಜನ ಚನ್ನಬಸವಲಿಂಗದೊಳಗೆ. || ೯೪೨ ||

೯೪೩

ಕರ್ಪುರದ ಸುಖವನು ಅಗ್ನಿ ಅರಿವುದೊ ?
ಅಗ್ನಿಯ ಸುಖವನು ಕರ್ಪುರ ಅರಿವುದೊ ?

ಕೂಟದ ಕುರುಹಸರಸುವರಾರು ?
ಕೂಟ ಕುರುಹ ನುಂಗಿ ಬಯಲಾದುದು,
ಶರಣ ಲಿಂಗಸಂಬಂಧವಿಂತುಟು
ಗುರುನಿರಂಜನ ಚನ್ನಬಸವಲಿಂಗಾ. || ೯೪೩ ||

೯೪೪

ತಥ್ಯಮಿಥ್ಯ ನಿರಂಜನ ಶರಣನ ಭಾವ
ಕರ್ತುರ್ ಭೃತ್ಯತ್ವವ ನುಂಗಿ ಕಡೆಗಾಯಿತ್ತು.
ಮರಳಿ ಬರಲೆಡೆಯಿಲ್ಲದೆ ಬಯಲಾದುದನು
ಬಸವ ಚನ್ನಬಸವ ಪ್ರಭು ಸಮರಸಾನುಭಾವ
ಗುರುನಿರಂಜನ ಚನ್ನಬಸವಲಿಂಗ ತಾನೆ ಬಲ್ಲ. || ೯೪೪ ||

೯೪೫

ನಕಾರ ಮಕಾರವನೆಯ್ದು, ಮಕಾರ ಶಿಕಾರವನೆಯ್ದು,
ಶಿಕಾರ ವಕಾರವನೆಯ್ದು, ವಕಾರ ಯಕಾರವನೆಯ್ದು,
ಯಕಾರ ಓಂಕಾರವನೆಯ್ದು, ಓಂಕಾರ ನಿರಂಜನವನೆಯ್ದು,
ನಿರಾಮಯವಾಗಿ ನಿಸ್ಥಲ ನಿಜವಾದುದ
ಗುರುನಿರಂಜನ ಚನ್ನಬಸವಲಿಂಗ ತಾನೆ ಬಲ್ಲ. || ೯೪೫ ||

೯೪೬

ಭೂತ ಚಿದ್ಭೂತವಾಗಿ ಚಿಲ್ಲಿಂಗದಲ್ಲಡಗಿತ್ತು ಚಿದ್ಬಯಲಾಗಿ.
ಇಂದ್ರಿಯ ಚಿದೇಂದ್ರಿಯವಾಗಿ ಚಿಲ್ಲಿಂಗದಲ್ಲಡಗಿತ್ತು ಚಿದ್ಬಯಲಾಗಿ.
ಕರಣ ಚಿತ್ಕರಣವಾಗಿ ಚಿಲ್ಲಿಂಗದಲ್ಲಡಗಿತ್ತು ಚಿದ್ಬಯಲಾಗಿ.
ವಿಷಯ ಚಿದ್ವಿಷಯವಾಗಿ ಚಿಲ್ಲಿಂಗದಲ್ಲಡಗಿತ್ತು ಚಿದ್ಬಯಲಾಗಿ.
ವಾಯು ಚಿದ್ವಾಯುವಾಗಿ ಚಿಲ್ಲಿಂಗದಲ್ಲಡಗಿತ್ತು ಚಿದ್ಬಯಲಾಗಿ.
ಸಕಲವೆಲ್ಲ ನಿಃಕಲವಾಗಿ ನಿರಂಜನದಲ್ಲಡಗಿತ್ತು ನಿರವಯವಾಗಿ,
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ನಾಮ ನಿರ್ನಾಮವಾಗಿ ನಿರ್ಬಯಲಾದುದು. || ೯೪೬ ||

೯೪೭

ಅಯ್ಯಾ, ಈ ಜಾಗ್ರಾವಸ್ಥೆ ಸಕಲವ ನುಂಗಿ ಕರಸ್ಥಲದೊಳಗಡಗಿತ್ತು.
ಈ ಸ್ವಪ್ನಾವಸ್ಥೆ ನಿಃಕಲವ ನುಂಗಿ ಮನಸ್ಥಲದೊಳಗಡಗಿತ್ತು.
ಅಯ್ಯಾ, ಈ ಸುಷುಪ್ತಾವಸ್ಥೆ ನಿರಂಜನವ ನುಂಗಿ ಭಾವಸ್ಥಲದೊಳಡಗಿತ್ತು.

ಸ್ಥಲ ಸ್ಥಲವ ನುಂಗಿ ನಿಃಸ್ಥಲದ ನಿಲವು
ಗುರುನಿರಂಜನ ಚನ್ನಬಸವಲಿಂಗದಲ್ಲರತಿತ್ತು. || ೯೪೭ ||

೯೪೮

ಸತ್ತುವೆರೆವ ಸುಖವನರಿದು ಮರೆದುದು,
ಚಿತ್ತುವೆರೆವ ಸುಖವನರಿದು ಮರೆದುದು,
ಆನಂದವೆರೆವ ಸುಖವನರಿದು ಮರೆದುದು,
ಗುರುನಿರಂಜನ ಚನ್ನಬಸವನೊಳಗೆ ಶರಣನ ನಿಲವು. || ೯೪೮ ||

೯೪೯

ಬಂದುದು ನಿಂದುದು ಬೆಂದುದು ಬಂದು ಬೆರಸಿದುದು.
ತಂದು ಕಂಡು ತರತರದ ಸುಖವಾದುದು.
ಸುಖದಿಂದ ಸುಯಿಧಾನ ಸ್ವಯವಾದುದು.
ಇದು ಸಕಲ ಇದು ನಿಃಕಲವಾಗಿ
ಗುರುನಿರಂಜನ ಚನ್ನಬಸವಲಿಂಗದೊಳಗರಿವು ಮರವಾದುದು. || ೯೪೯ ||

೯೫೦

ಅಂಗಲಿಂಗವನರಿಯದು, ಲಿಂಗವಂಗವನರಿಯದು,
ಲಿಂಗಾಂಗಸಂಗವನರಿಯದು.
ಸಂಗಲಿಂಗಾಂಗವನರಿಯದು,
ಅಂಗಲಿಂಗಸಂಗವ ಸಮರಸ ನುಂಗಿ
ನಿರವಯ ನಿತ್ಯ ಗುರುನಿರಂಜನ ಚನ್ನಬಸವಲಿಂಗ
ನಾಮ ನಿರ್ನಾಮ ನಿರ್ವಯಲಾಯಿತ್ತು. || ೯೫೦ ||

**ಪರಿಶಿಷ್ಟ**

**ಭಕ್ತಸ್ಥಲದ ಉಳಿದ ವಚನಗಳು**

೯೫೧

ಪೃಥ್ವಿಯಂಗವಾದ ಭಕ್ತನಲ್ಲಿ ಪಂಚಾಚಾರ ಸ್ವರೂಪವಾದ ಆಚಾರಲಿಂಗವು,
ತಾನು ಷಡ್ವಿಧಲಿಂಗವಾಗಿ ಆ ಭಕ್ತನೊಳಗಣ ಷಡ್ವಿಧಲಿಂಗವೆರೆವ
ಷಡ್ವಿಧಭಕ್ತಿಯಿಂದ ಷಡ್ವಿಧ ಶಕ್ತಿಸಮೇತ ಷಡ್ವಿಧ ಹಸ್ತಗೂಡಿ
ಷಡ್ವಿಧಮುಖಮುಟ್ಟಿ ಕೈಕೊಳ್ಳುತಿರ್ದ ಸಾರಾಯದ ಸೌಖ್ಯವನು
ಆ ಲಿಂಗವನು ಅಂಗ ಮನ ಪ್ರಾಣದಲ್ಲಿರಿಸಿ ಹಿಂಗದೆ
ಅಭಿನ್ನ ಭಕ್ತಿಯೊಳಿರ್ಪಾತನೆ ಅಚ್ಚಭಕ್ತ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೯೫೧ ||

೯೫೨

ಆಸೆಗೆ ವೇಷವಹೊತ್ತು ಅಷ್ಟಮದವೇ ಅಂಗವಾಗಿ,
ಪಂಚಸೂತಕವೆ ಪ್ರಾಣವಾಗಿ, ವಂಚನೆಯೇ ಮುಖವಾಗಿ,
ತಾನೊಂದು ಕಾಯನಾಗಿ ಮಾಡುವ ಮಾಟ ಭವದ ಬೇಟ.
ಈ ಗತಿ ದುರ್ಗತಿ, ಸ್ಥಲನಾಮ ಸಲ್ಲದು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೯೫೨ ||

೯೫೩

ಆಸೆಯ ವೇಷವತೊಟ್ಟು ಶ್ವಾನನಗತಿಯಲ್ಲಿ ಗಮನಿಸುವ
ಗಾವಿಲಮಾನವರಿಗೆ ಅವಿರಳ ಭಕ್ತಿ ಅಳವಡುವುದೆ ?
ನಡೆಯೊಂದುಪರಿ ನುಡಿಯೊಂದುಪರಿ ಹಿರಿಯರಡಿಗೆ
ಶರಣೆಂದು ನಡೆಯದೆ ಪರಯೋನಿಮುಖಜನಿತರಾದ ಪ್ರಾಣಿಗಳೆತ್ತ ಬಲ್ಲರಯ್ಯಾ
ಅನಾದಿಯ ಸ್ಥಲಗತಿಯ ಗುರುನಿರಂಜನ ಚನ್ನಬಸವಲಿಂಗಾ. || ೯೫೩ ||

೯೫೪

ಮಾಡುವ ಕೈ ಉಚ್ಛಿಷ್ಟ, ನೋಡುವ ಕಣ್ಣು ಉಚ್ಛಿಷ್ಟ,
ಕೊಡುವ ಭಾವ ಉಚ್ಛಿಷ್ಟವಾಗಿರ್ದು,
ಮಾಡಿದರೇನು ನೋಡಿದರೇನು ಕೊಟ್ಟರೇನು
ಕಳ್ಳನ ಉದ್ಯೋಗಕೆ ಜನ ಮೆಚ್ಚದು ಗುರುನಿರಂಜನ ಚನ್ನಬಸವಲಿಂಗಾ. ||೯೫೪||

೯೫೫

ಹೊರಗೆ ಮೆಚ್ಚದ ಭಕ್ತಿ ಒಳಗೆ ಮೆಚ್ಚದ ಯುಕ್ತಿ ಕೂಡಿದಗತಿ,
ಕುಲಹೀನನ ನಂಟು ಕುಲಜರ ತಂಟು,
ಭವದಗಂಟು ಬಿಚ್ಚಬಾರದ ಗುರುನಿರಂಜನ ಚನ್ನಬಸವಲಿಂಗವಿಡಿದು
ಆದಿಯ ಸ್ಥಲಕ್ಕೆ ತಂದು ನುಡಿಯಲಾಗದು. || ೯೫೫ ||

೯೫೬

ಕೂಸುಳ್ಳ ವೇಶ್ಯೆ ಕಾಸಿನಾಸೆಗೆ ಕಾವನಕೇಳಿಗೆ ವಿಟನಿಗೆ ನಿಂದಲ್ಲಿ
ಸಕಲ ವಿಭ್ರಮದ ಬೆಡಗು ಮೂರುಭಾಗವಾಗಿಪ್ಪುದು.
ಭುಜಂಗನ ರತಿಗೆ ರತಿತಪ್ಪಿದ ರತಿಗೆ ಹಿತವಪ್ಪಲರಿಯದು.
ವ್ರತಗೇಡಿಗೆ ಸತ್ಯವಹುದೆ ? ಈ ಪರಿವಿಡಿದಾಡುವ ಮಾಟ
ಕೋಟಲೆಗೆ ನೀಟು ಮನದೊಡೆಯ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿ ತಮ್ಮ ತಮ್ಮ ಭಕ್ತಿಬೇಟಕ್ಕೆ. || ೯೫೬ ||

೯೫೭

ಸಕಲ ಭವಿಯ ಕಳೆಯದೆ, ಸಕಲನಿಃಕಲ ಸನುಮತ ಜಂಗಮಕ್ಕೆ
ತುಡುಕಿ ಮಾಡುವ ಭಕ್ತಿ ಹಡಕಿಂಗೆಳಸಿತ್ತು.
ಬಿಡು ತನುವ ಹಿಡಿ ಪದವ ನಡೆ ನಮ್ಮ ಶರಣರಗತಿವಿಡಿದು
ಗುರುನಿರಂಜನ ಚನ್ನಬಸವಲಿಂಗಕ್ಕೆ ನಿಜಭಕ್ತನ ಹಡೆ. || ೯೫೭ ||

೯೫೮

ಸ್ಥೂಲ ಸೂಕ್ಷ್ಮದಲ್ಲಿ ಭವಿತ್ವವಿರ್ದು ನೆಟ್ಟನೆ ಹೊರಗೊಳಗೆ
ನಾ ಭಕ್ತನೆಂದರೆ ಹೇಗಾಗುವದು ಭಕ್ತಿ ಕಾಣಬಾರದು.
ಹೇಗಾಗುವದು ಯುಕ್ತಿ ಕಾಣಬಾರದು.
ಕಾಣಬಾರದ ಠಾವಿನಲ್ಲಿ ಹೂಣಿರ್ದ ಒಡವೆಯನರಸುವರಳವೆ ?
ಗುರುನಿರಂಜನ ಚನ್ನಬಸವಲಿಂಗಕ್ಕೆ
ಮಾಟವಿಡಿದು ಮಾಡಿದರೆ ತೊರೆದಟ್ಟಿಸುವರು. || ೯೫೮ ||

೯೫೯

ಮೂರು ಬಾವಿಯ ಮೇಲೆ ಇಷ್ಟಲಿಂಗವ ಧರಿಸಿ,
ಮೂರು ಬಾವಿಯ ಮೇಲೆ ಪ್ರಾಣಲಿಂಗವ ಧರಿಸಿ,
ಮೂರು ಬಾವಿಯ ಮೇಲೆ ಭಾವಲಿಂಗವ ಧರಿಸಿ,
ತ್ರಿವಿಧಮುಕ್ತನೆಂದು ಬೆರಸಿ ಮಾಡಿದರೆ
ಯುಕ್ತಿಶಕ್ತಿಯೊಳ್ಬೆರೆದು ಅವ್ಯಕ್ತವಾಗಿ ಹೋಯಿತ್ತು.
ಆ ಭಕ್ತಿ ಅಭಕ್ತಿ ಕಾಣಾ, ಗುರುನಿರಂಜನ ಚನ್ನಬಸವಲಿಂಗ ನೀವೆ ಸಾಕ್ಷಿ. ||೯೫೯||

೯೬೦

ಪೂರ್ವದಂದುಗವನಳಿದು ಪುನರ್ಜಾತನಾದ ಶರಣನು
ತನ್ನ ತ್ರಿವಿಧಮುಖಭಕ್ತಿಯ ಮಾಡುವಲ್ಲಿ
ಪೂರ್ವದಂದುಗ ಬೆರಸಿದರೆ ತಿರುಗ ಬಟ್ಟೆ ಸವೆಯದು.
ಮೇಲುಗತಿಮತಿಗಳಸುಖ ದೊರೆಯದು.
ಬಿಟ್ಟುದ ಬೆರೆಸಿದರೆ, ಹಿಡಿದು ಹರಿಸದೆ ವಾರಿಕಾರರ ಹೆಜ್ಜೆಗೆ ಶಿರಬಾಗದೆ
ತಾನಿಲ್ಲದೆ ಮಾಡುವ ಮಾಟ ಸಕಲರ ಸಂಬೇಟ ನಿಜತತ್ವದ ಕೂಟ
ಗುರುನಿರಂಜನ ಚನ್ನಬಸವಲಿಂಗ ನಿಮ್ಮಲ್ಲಿ. || ೯೬೦ ||

೯೬೧

ಮಾಡದಿರು ಅನಿತ್ಯಕ್ಕೆ, ಆಹುತಿಯಾಗಿ ಕುರುಹಳಿಯದು.
ಮಾಡದಿರು ಅನಿತ್ಯಕ್ಕೆ, ಮನವೇದಿ ಕುರುಹಳಿಯದು.

ಮಾಡದಿರು ಅನಿತ್ಯಕ್ಕೆ, ತಲೆಯಿಟ್ಟು ಕುರುಹಳಿಯದು.
ಮಾಡದಿರು ನೀನಿಂದು
ಗುರುನಿರಂಜನ ಚನ್ನಬಸವಲಿಂಗಕ್ಕೆ ಭಕ್ತಿಯ, ನೀನಾಗಬೇಕಾದರೆ. ॥ ೯೬೧ ॥

೯೬೨

ಭಕ್ತಿಯ ಮಾಡುವವರ ಮನವೇ ಗುರುಚರಲಿಂಗಕ್ಕೆ ಪೀಠವಾಗಿಹುದು.
ಆ ಪೀಠವ ಸೆಳೆದು ತನುವಿಷಯ ಮೋಹಕ್ಕೆ ಚಾಚಿದರೆ
ಕೆಡುವುದು ತ್ರಿವಿಧದ ನಿಲುವು, ಹಿಡಿವುದು ರಾಹು ಚಂದ್ರನ ಲೋಕಕ್ಕೆ ರಾವಳ.
ಕಾಣಬಾರದು ಗುರುನಿರಂಜನ ಚನ್ನಬಸವಲಿಂಗವನು ನಿಮಿಷವಾದರು. ॥ ೯೬೨॥

೯೬೩

ಎರಡು ಕಾಲಿನಿಂದೆ ನಡೆವಾತ ಭಕ್ತನಲ್ಲ
ಎರಡು ಕಣ್ಣಿನಿಂದೆ ನೋಡುವಾತ ಭಕ್ತನಲ್ಲ.
ಎರಡು ಕೈಯಿಂದೆ ಹಿಡಿವಾತ ಭಕ್ತನಲ್ಲ
ಜಿಹ್ವೆ ರಸನೆಯಿಂದೆ ನುಡಿವಾತ ಭಕ್ತನಲ್ಲ.
ಎರಡು ಕಿವಿಯಿಂದೆ ಕೇಳುವಾತ ಭಕ್ತನಲ್ಲ
ಹೊರಗೊಳಗೆ ಗುರುನಿರಂಜನ ಚನ್ನಬಸವಲಿಂಗ ಸಮ್ಮುಖವಾಗಿ
ಮಾಡುವಾತ ಭಕ್ತನಲ್ಲ. ॥ ೯೬೩ ॥

೯೬೪

ಹಿಡಿದು ನಡೆಯುತ ಮಾಡಿದರೆ ಬ್ರಹ್ಮಪದ ತಪ್ಪದು,
ಹಿಡಿದು ನೋಡುತ ಮಾಡಿದರೆ ವಿಷ್ಣುಪದ ತಪ್ಪದು,
ಹಿಡಿದು ನುಡಿಯುತ ಮಾಡಿದರೆ ರುದ್ರಪದ ತಪ್ಪದು,
ಈ ತ್ರಿವಿಧ ಪದಗತಿಯುಳ್ಳಾತಗೆ
ಗುರುನಿರಂಜನ ಚನ್ನಬಸವಲಿಂಗವು ನಿತ್ಯಸಮ್ಮುಖ ಸಾಕ್ಷಿ. ॥ ೯೬೪ ॥

೯೬೫

ಇಡಹೇಳಿದೊಡವೆಯ ಕೊಡುವಾತನ ಭಾವ ಹೋಲಲರಿಯರು.
ಕಡಬಡ್ಡಿಯ ಕೊಡುವನ ಹೃದಯದಂತೆ
ಲೋಕ ಲೌಕಿಕ ಪ್ರಾಣಿಗೆ ಯಾಕೆ ಸ್ಥಲ ?
ಏನು ಕಾರಣ ಹೇಳಾ ಗುರುನಿರಂಜನ ಚನ್ನಬಸವಲಿಂಗಾ ! ॥ ೯೬೫ ॥

೯೬೬

ಸರ್ಪನ ಗಮನದಂತೆ ಗಮನವುಳ್ಳರೆ ಭಕ್ತನೆಂಬೆ.
ನವಿಲಿನ ಕಣ್ಣಿನಂತೆ ಕಣ್ಣುಳ್ಳರೆ ಭಕ್ತನೆಂಬೆ.

ಬೆಕ್ಕಿನ ಹೃದಯದಂತೆ ಹೃದಯವುಳ್ಳರೆ ಭಕ್ತನೆಂಬೆ.
ಕಾಕನ ಪಿಕನ ಸ್ನೇಹವ ಹಿಂದಿಟ್ಟು, ಸೂರ್ಯಂಗೆ ಕಮಲದ ರೂಪವ ಮುಂದಿಟ್ಟು
ಮಾಟವರಿದು ಮಾಡುವಾತನಲ್ಲದೆ ಭಕ್ತನಲ್ಲ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೯೬೬ ॥

೯೬೭

ಆದಿಯಿಂದ ಹುಟ್ಟಿ ಅನಾದಿಯ ಹಿಡಿದು
ನಡೆಯಬಲ್ಲೆವೆಂಬ ಹಿರಿಯರು ಕೇಳಿಭೋ.
ತನುತ್ರಯ ಮನತ್ರಯ ಭಾವತ್ರಯ ಸ್ವಧರ್ಮದ್ರವ್ಯವ ಬಳಸದೆ
ನವವಿಧಭಕ್ತಿಯಿಂದೆ ಸೇವಿಸಿ ಸುಖಿಭರಿತನಾಗಲರಿಯದೆ,
ದಾಸೋಹಭಕ್ತಿಯ ಮಾಡುವೆನೆಂದು ಹೇಸದೆ
ಅಧರ್ಮ ಅವಿಚಾರಾದಿಗಳ ಬಗೆಬಗೆಯಿಂದೆ ಬಣ್ಣಿಸಿ,
ಕಾಸುಕಳಚಿಸಿ ಕೈಯಾಂತುಕೊಂಡು ಧೂಳಮೇಳ ಸಮೇತ
ಭಕ್ತಿಯೆಂದು ಮಾಡುವದು ಶಿವ ನುಡಿದಿಲ್ಲ ಗುರುವಾಕ್ಯವಿಲ್ಲ.
ಗುರುಲಿಂಗವರಿಯದ ಸಂತಸುಖಿಗಳ ಭಕ್ತಿ.
ಆ ಭಕ್ತಿ ಅಯೋಗ್ಯ ಕಾಣಾ ನಿಮ್ಮ ನಿಲುವಿಗೆ
ಗುರುನಿರಂಜನ ಚನ್ನಬಸವಲಿಂಗಾ. ॥ ೯೬೭ ॥

೯೬೮

ಒಳಗಿನ ಮಾಟ ಸಿಕ್ಕಲರಿಯದಿರ್ದಡೆ ಹೊರಗೆ ಕಾಣಿಸುವ ತನು,
ತನುವಿಡಿದ ಮನ, ಮನವಿಡಿದ ಭಾವ,
ಈ ತ್ರಿವಿಧದಿಂದೆ ನಿರ್ವಂಚಕನಾಗಿ ಷಟ್ಕ್ರಿಯಾವ್ಯಾಪಾರವನ್ನೆಯ್ದಿ
ಷಟ್‌ಸ್ಥಲಗತಿಮತಿಯಿಂದೆ ಗುರುಲಿಂಗಾಚಾರಭಕ್ತಿಯ ಮಾಡಿ
ಸುಖಿಸಿ ಸುಖಮಯನಾದ ಸತ್ಯಭಕ್ತನೇ ಭಕ್ತನಲ್ಲದೆ ಉಳಿದವೆಲ್ಲ ಒಡಲುಪಾಧಿ.
ಈ ನಿಲುವಿಗೆ ನಡೆಗಡಿಯದು ಬಂಧನವಗಲದು ಬಯಲಗಾಣದು
ತ್ರಿವಿಧ ವಾಕ್ಯದಲ್ಲರಿದು ನೋಡು ನೀನಾಗಬಲ್ಲರೆ
ಗುರುನಿರಂಜನ ಚನ್ನಬಸವಲಿಂಗವು. ॥ ೯೬೮ ॥

ಭಕ್ತತಾಮಸ ನಿರಸನಸ್ಥಲದ ಉಳಿದ ವಚನಗಳು :

೯೬೯

ಗುರುವಿನಿಂದುದಯವಾಗಿ ಲಿಂಗನಡೆಸಂಪನ್ನರೆನಿಸಿಕೊಂಡ ಹಿರಿಯರು
ಗುರುದಯದೊಳೈಕ್ಯತೆಯನೈದಬೇಕಲ್ಲದೆ,

ಗುರುದಯವಿಲ್ಲದೆ ಬರಿದೆ ಬಳಲುವ ಭಾವಗೇಡಿ ಭ್ರಷ್ಟಭವಿಗಳ ಸಂಗ
ಹೀನ ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ॥ ೯೬೯ ॥

೯೭೦

ಅರಸಿಕೊಂಡಾಗಿ ಬಂದಲ್ಲಿ ಅರಿದರಿದು ಮಾಡಬೇಕು ಕಾಯದ ಕ್ರಿಯೆಯಿಂದ
ಅರಿದರಿದು ಮಾಡಬೇಕು ಮನದ ಕ್ರಿಯೆಯಿಂದ,
ಅರಿದರಿದು ಮಾಡಬೇಕು ಭಾವದ ಕ್ರಿಯೆಯಿಂದ.
ಗುಣ ತ್ರಿವಿಧ ಈ ಭೇದವನರಿಯದೆ
ಬಂದು ಕುರುಹಿಂದೆ ಜರಿದು ಲಿಂಗದಲ್ಲುಂಟೆಂದು
ಗುರುವನುಳಿದು ಪರಿಪರಿಯ ಸೊಬಗನೋಲೈಸಿದರೇನು ?
ಬೇರುಕಿತ್ತೊಗೆದ ಮರದಂತೆ ಮುಂದೆಯಿಲ್ಲದೆ ವ್ಯರ್ಥವಾಗುವದು.
ಕೆಟ್ಟುಬೀಳುವ ಸಂಗವನು ಬಿಟ್ಟುಕಳೆಯುವುದೇ ಸ್ಥಲ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೯೭೦ ॥

೯೭೧

'ನ ಗುರೋರಧಿಕಂ ನ ಗುರೋರಧಿಕಂ ನ ಗುರೋರಧಿಕಂ'
ಎಂಬ ಹರವಾಕ್ಯವನರಿದು,
ಲಿಂಗಾಚಾರಾದಿ ಪ್ರಾಣವಾಗಿ ಜಂಗಮನುಭಾವಪ್ರಸಿದ್ಧ
ಪ್ರಮಾಣಚರಿತೆಯನರಿಯದೆ
ಗೊಪ್ಪುಮಾತನೊಡ್ಡಿಕೊಂಡು ಎಡ್ಡೆಡ್ಡಿಂದೆ ವರ್ತಿಸುವ
ಧಡ್ಡ ಕೋಟಲೆಯ ನೋಡಾ !
ಗುರುವೆನ್ನ ಕರಸ್ಥಲದಲುಂಟೆಂದು ಇರವ ಶೋಧಿಸಿ
ಜರಿದು ಹರಿದು ಹಿರಿಯರೆನಿಸಿ ಮೆರೆವ
ಗುರುದ್ರೋಹಿಗಳ ನೆರೆಯಲಾಗದು ನಡೆನುಡಿಸಂಪನ್ನರು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೯೭೧ ॥

೯೭೨

ಜ್ಞಾನವನಂತರಂಗಕಿತ್ತು, ಕ್ರೀಯುವ ಬಹಿರಂಗಕಿತ್ತು,
ಸರ್ವಾಚಾರಸಂಪತ್ತಿನೊಳಗಿರಿಸಿದ ಕ್ರಿಯಾಘನಗುರುವಿನ ತೆಗೆದುಹಾಕಿ
ನಾವು ಲಿಂಗಜಂಗಮಸನ್ನಿಹಿತರೆಂದಡೆ
ಆ ನಾಲಿಗೆ ಕೀಳದಿಹರೆ ಕಾಲನವರು ?
ಆ ಮಹಾಗುರುವಿನ ಸದ್ಭಾವಲಿಂಗವನರ್ಚಿಸುವಲ್ಲಿ ಖಂಡಿಸದಿಹರೆಯಮನವರು?
ಆ ಗುರುಜ್ಞಾನ ಭಸಿತವನು ಧರಿಸಿದಲ್ಲಿ ಚರ್ಮವ ಹೆರಿವ ಪಿಸಾಚರೆ

ಅಂತಕನವರು?
ಆ ಗುರುಕಟಾಕ್ಷಮಣಿಯ ಧರಿಸಿದಲ್ಲಿ ಕಡಿಕಡಿದು ಕಡೆಗಿಡರೆ ಯಮನವರು ?
ಆ ಆದಿಯ ಗುರುನಾಮಾಮೃತವ ಸೇವಿಸುವರ ಹೃದಯವನಿರಿದು
ಕೆಡಹದಿಹರೆ ದಂಡಧರನವರು ?
ಆ ಅವಿರಳ ಗುರುವಿನ ಪರಮಾನಂದ ಪಾದೋದಕವ ಕೊಂಬ
ಮಾನವರ ಬಾಧಿಸರೆ ಕೀನಾಶನವರು ?
ಆ ಮಹಾಜ್ಞಾನಿ ಗುರುವಿನ ಮಹದಾನಂದಪ್ರಸಾದವ ಸೇವಿಸುವ ಭಾವವನು
ಶೋಕಾಗ್ನಿಯಿಂದೆ ನೋಯಿಸದಿಹರೆ ನಿರಯಪತಿಯವರು ?
ಇದು ಕಾರಣ ಗುರುವ ಜರಿದು ನೆರೆದು ಮಾಡುವ ಮಾಟವೆಲ್ಲ ವೈತರಣಿಯಕೂಟ
ಇದಕ್ಕೆ ನೀವೇ ಸಾಕ್ಷಿ ಗುರುನಿರಂಜನ ಚನ್ನಬಸವಲಿಂಗಾ. ॥ ೯೭೨ ॥

೯೭೩

ಹರಮುನಿದರೆ ಗುರುಕಾಯುವ ಗುರುಮುನಿದರೆ ಹರಕಾಯನೆಂಬ
ಮಹಾವಾಕ್ಯವನು ಕೇಳಿ ಕಂಡರಿದ ಹೃದಯವು ದುರಾಗ್ನಿಯಿಂದೆ ನಾಶವಾಯಿತ್ತೆ ?
ಛೀ ಅದೇತರ ಬಾಳುವೆ.
ಗುರುವ ಮರೆದು ಲಿಂಗವನೊಲಿಸುವೆನೆಂದರೆ ಎಂದಿಗೂ ಆಗಬಾರದು.
ಛೀ ಗುರುಮಾರ್ಗವೇ ಮಾರ್ಗ, ಛೀ ಗುರುಜ್ಞಾನವೇ ಜ್ಞಾನ,
ಛೀ ಗುರು ಪರಿಣಾಮವೇ ಪರಿಣಾಮ.
ಅದು ಕಾರಣ ಜಡಮೂಢ ಪ್ರಾಣಿಗಳಿರಾ,
ಕರ್ಕಸಮಥನ ಕಡಲೊಳು ಮುಳುಗಿ ಹೋಗುವದಕಿಂತವೆ
ಗುರುಕೃಪಾಂಬುಧಿಯೊಳ್ಮುಳುಗಿ ನಿಜ ನಿವಾಸಿಗಳಾಗಿರಿ
ನಮ್ಮ ಗುರುನಿರಂಜನ ಚನ್ನಬಸವಲಿಂಗ ಮೆಚ್ಚುವಂತೆ. ॥ ೯೭೩ ॥

೯೭೪

ಕ್ರಿಯಾಘನಗುರುವಿರ್ದಂತೆ ದರ್ಶನ ಸ್ಪರ್ಶನ
ಸಂಭಾಷಣೆಯೆಂಬ ಸತ್ಪ್ರೇಮ ಪ್ರಸಾದವ
ಸಮವೇಧಿಸಿಕೊಂಡಾಚರಿಸುವುದೇ ಸರ್ವಜ್ಞತ್ವ.
ನಿಜಾನಂದಪರಿಪೂರ್ಣತ್ವ ನಿತ್ಯತೃಪ್ತತ್ವ
ಮತ್ತಂತೆಂದೊಡೆ, ಗ್ರಾಮೊಂದರಲ್ಲಿರ್ದಡೆ ತ್ರಿಕಾಲದಲ್ಲಿ ಕಂಡು ಬದುಕುವುದು.
ಗಾವುದದಾರಿಯ ಗ್ರಾಮದಲ್ಲಿರ್ದಡೆ
ಎಂಟುದಿವಸಕೊಂದುವೇಳೆ ಕಂಡು ಬದುಕುವುದು.
ಮೂಗಾವುದ ದೂರದಲ್ಲಿರ್ದಡೆ ಮಾಸಕ್ಕೊಮ್ಮೆ ಕಂಡು ಬದುಕುವುದು.

ಹನ್ನೆರಡುಗಾವುದ ಮೇಲೆಯಿರ್ದಡೆ ಆರುಮಾಸಕ್ಕೊಮ್ಮೆ ಕಂಡು ಬದುಕುವುದು.
ಎತ್ತಣಾಗಿ ದೂರದಿಂದಿರ್ದಡೆ ವರುಷಕ್ಕೊಂದುವೇಳೆ ಕಂಡು ಬದುಕುವುದು.
ತಪ್ಪಲಾಗದು,ಮತ್ತೆ ತಪ್ಪಿದರೆ ಗುರುದ್ರೋಹ.
ಗುರುದ್ರೋಹಿಯಾದಲ್ಲಿ ಲಿಂಗ ಜಂಗಮ ಪಾದೋದಕ ಪ್ರಸಾದ
ವಿಭೂತಿ ರುದ್ರಾಕ್ಷಿ ಪಂಚಾಕ್ಷರಿದ್ರೋಹವೆಡೆಗೊಂಬುವುದು.
ಇಂತು ಅಷ್ಟಾವರಣದ್ರೋಹಿಗೆ ನಿರಂತರ ಹಿರಿಯ ನರಕ ತಪ್ಪದು.
ಇದಕ್ಕೆ ನೀವೇ ಸಾಕ್ಷಿ ಗುರುನಿರಂಜನ ಚನ್ನಬಸವಲಿಂಗಾ. ॥ ೯೭೪ ॥

೯೭೫

ಊರನೆಲ್ಲ ಸುಟ್ಟು ಬೆಂಕಿಯಲ್ಲಿ ಕಾಯವನರಸಲತಿ ಚೋದ್ಯ ಕಾಣಾ.
ಭೂತಾದಿ ಸಕಲಗುಣನಿಕರವನುರುಹಿ ಭಸ್ಮೀಕೃತವ ಮಾಡಿದ
ಚಿದಾರ್ಯನ ಅಪೂರ್ವಪ್ರಕೃತಿಯನರಸಲದು ಅತಿಚೋದ್ಯ ನೋಡಾ.
ತನ್ನ ಶೋಧನಮಾಡಿದ ಠಾವಿನಲ್ಲಿ ಅಶುದ್ಧವನರಸಿದರೆ ಭವಬಂಧನ ತಪ್ಪದು
ಗುರುನಿರಂಜನ ಚನ್ನಬಸವಲಿಂಗ ಸೂತ್ರವನರಿಯದ ಭ್ರಾಂತರಿಗೆ. ॥ ೯೭೫ ॥

೯೭೬

ಗುರುವು ಲಿಂಗವಹನ್ನಬರ ಕಾಯಕದಲ್ಲಿ ವಂಚನೆಯನುಳುಹಿದರೆ
ಆ ಕಾಯ ಕಿಲ್ಬಿಷಕೂಪಕ್ಕಾಹುತಿಯೆಂಬುದು ಶಿವನ ವಾಕ್ಯ.
ವಾಚಕದಲ್ಲಿ ವಂಚನೆಯನುಳುಹಿದರೆ
ಆ ವಾಚಕ ನಿರಯಬಾಧೆಯಧ್ವನಿಯೆಂಬುದು ಶಿವನ ವಾಕ್ಯ.
ಮಾನಸದಲ್ಲಿ ವಂಚನೆಯನುಳುಹಿದರೆ
ಆ ಮಾನಸ ಯಮದೂತರ ಕೋಪಾಹುತಿಯ
ಅನಾನಂದವಾಲಯವೆಂಬುದು ಶಿವನ ವಾಕ್ಯ.
ಅದುಕಾರಣ, ಆ ಕರಣತ್ರಯವು ದುರ್ವೋಜ್ಝಿಷ್ಟವಾಗಿ ಬಿದ್ದು ಹೋದ
ಪ್ರಾಣಿಗಳನು
ನೋಡಲಾಗದು ಮಾತಾಡಲಾಗದು ಸುಜ್ಞಾನಿ ಕ್ರಿಯಾಸಂಬಂಧಿಗಳು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೯೭೬ ॥

೯೭೭

ಆಚಾರವೇ ಗುರು ವಿಚಾರವೇ ಶಿಷ್ಯನೆಂಬುದು ಸಹಜ.
ಆಚಾರವೇ ಜ್ಞಾನ ವಿಚಾರವೇ ಭಕ್ತಿ, ಎರಡರ ಸಂಬಂಧವೇ ಘನ ಸಂಬಂಧವು.
ಈ ಸುಖಾನಂದ ಸುಧೆಯೊಳು ಚರಿಸಲರಿಯದೆ,
ಆಚಾರವ ಜರಿದು ಅವಿಚಾರಮುಖಿನಾದರೆ

ಸಚರಾಚರದೊಳು ನಿಂದು ಸವೆಯದಾಯಾಸವೇ ಸಹಜ ಕಾಣಾ ಮುಂದೆ
ಗುರುನಿರಂಜನ ಚನ್ನಬಸವಲಿಂಗಾ. || ೯೨೭ ||

೯೨೮

ಕೋಪ ಮರವೆಗಳಿಂದೊಗೆದ ಕುರುಹಿಂಗೆ
ಬಾಹ್ಯಬಾಧೆಯನು ತೊಡೆದವರುಂಟು.
ಲೋಕದೊಳಗೆ ಜನನಸಂಗಬಾಧೆಯನು ತೊಡೆದವರಾರು ಹೇಳಾ?
ಮೋಹ ಮರವೆಗಳಿಂದೊಗೆದ ಕುರುಹಿಂಗೆ ಬಾಹ್ಯಬಾಧೆಯನು ತೊಡೆದವರುಂಟು;
ಇಳೆಯೊಳಗೆ ತಾಪಸ್ಥಿತಿಸಂಗಬಾಧೆಯನು ತೊಡೆದವರಾರು ಹೇಳಾ?
ಮರವೆಗಳಿಂದೊಗೆದ ಕುರುಹಿಂಗೆ
ಬಾಹ್ಯಬಾಧೆಯನು ತೊಡೆದವರುಂಟು;
ಜಗದೊಳಗೆ ಮರಣಸಂಗಬಾಧೆಯನು ತೊಡೆದವರಾರು ಹೇಳಾ?
ಅಶನವ್ಯಸನವಿತ್ತುಗಳಿಂದೆ ಹಿರಿಯರೆನಿಸಬಹುದು,
ಲೋಕದೊಳಗೆ ಕ್ರಿಯಾಜ್ಞಾನೈಶ್ವರ್ಯಗಳಿಂದೆ ಹಿರಿಯರೆನಿಸುವರಾರು ಹೇಳಾ,
ಗುರುನಿರಂಜನ ಚನ್ನಬಸವಲಿಂಗವೆಂಬ ಸದ್ಗುರುನಾಥನಲ್ಲದೆ. || ೯೨೮||

೯೨೯

ಹೊರಗೊಳಗೆ ಹಿತವೆನಿಸುವ ತಾಯಿ ತಂದೆಗಳು
ನೀರುಕೂಳನಿಕ್ಕಿ ಸಂಸಾರವಿಷಯ ತೋರಿ ಭವಕ್ಕೀಡುಮಾಡುವರು.
ಇಂತಲ್ಲ ನೋಡಾ ಎನ್ನ ಗುರುವರನು.
ಕ್ರಿಯಾಜ್ಞಾನವಾಗಿ ಹೊರಗೊಳಗೆ ಹಿತವೆನಿಸಿ,
ಪಾದೋದಕ ಪ್ರಸಾದವನಿಕ್ಕಿ ಸಂಪತ್ತಿನ ಸಾರಾಯಾನುಭಾವವ ತೋರಿ,
ಗುರುನಿರಂಜನ ಚನ್ನಬಸವಲಿಂಗಕ್ಕೀಡುಮಾಡಿ
ಎತ್ತಿಕೊಂಬುವನು ಕಾಣಾ. || ೯೨೯ ||

೯೩೦

ಅರಿದು ಒಂದಾದ ಶರಣಂಗೆ ಹಿರಿದು ಕಿರಿದೆಂದು
ಹರಿದು ಹಾಕಿದರೆ ಒಂದನೆಯ ಪಾತಕ.
ತನುಮನ ಧನವೆಲ್ಲವನೊಪ್ಪಿಸಿ ಅನುವಿಡಿದಾಚರಿಸುವ
ಸನುಮತಕ್ಕೆ ವಿಮುಖರಾದರೆ ಎರಡನೆಯ ಪಾತಕ.
ಆ ಗುರುವರನ ಕರಮನಭಾವದಲ್ಲಿರಿಸಿ ಮೆರೆವ ಮಹಾಂತಗತಿಯುಳ್ಳ ಮಹಿಮಂಗೆ
ಉದರಾಗ್ನಿವೆರೆದು ಒಂದು ವಿಷಯಕೆ ಜರಿದರೆ ಮೂರನೆಯ ಪಾತಕ.
ನಿಜಗುರುವಾಗ್ನೆ ನೆಲೆಗೊಂಡು ಹುಸಿಮಾತುಮಥನವ ಮರೆದಿರುವ ಘನತೆಯನು

ಬಿನುಗುಕೋಟಲೆಗೆಳಸಿ ಕಾಡುವುದು ನಾಲ್ಕನೆಯ ಪಾತಕ.
ತಾನಿಲ್ಲದೆ ಮಾಡುವ ಕುರುಹಿನ ತನುಮನಪ್ರಾಣವ ಘಾಸಿಮಾಡಿ
ಧನದಾಸೆಯಲ್ಲಿ ಮುಳುಗಿ ಸೆಳೆಸೆಳೆದು ನೋಯಿಸುವುದು ಐದನೆಯ ಪಾತಕ.
ಇಂತೀ ಪಂಚಮಹಾಪಾತಕ ಪ್ರಾಣಿಗೆ ದೊರೆನರಕವಲ್ಲದೆ,
ಗುರುತನ ಸಲ್ಲದು ಕಾಣಾ ಗುರುನಿರಂಜನ ಚನ್ನಬಸವಲಿಂಗಾ. || ೯೮೦ ||

೯೮೧

ತನುರುಚಿಯ ಮನದಲ್ಲರಿದು, ಮನರುಚಿಯ ತನುವಿನಲ್ಲರಿದು,
ತನುಮನರುಚಿಯ ಆತ್ಮನಲ್ಲರಿದು ಅವಧರಿಸಿಕೊಂಡ ಬಳಿಕ
ಅಂತಿಂತೆಂಬುದು ಅಧಮನುಡಿ ಕಾಣಾ.
ಅರಿಯದಿರ್ದಡೆ ಬಾರದು ಮಾಣಾ.
ದ್ವಂದ್ವಭಾವದ ಸಂದಿನ ಬೇನೆಯ ಕಂಡು ಹಿಂದುಮುಂದಾಗಿ ನಾಚಿತೆನ್ನ ಮನ.
ಬೆಂದೊಡಲ ಬಾಧೆಯ ಮುಂದಿರಿಸದಿರು
ನಮ್ಮ ಗುರುನಿರಂಜನ ಚನ್ನಬಸವಲಿಂಗ ಶರಣಚರಿತೆಯ. || ೯೮೧ ||

೯೮೨

ನಿಜವಕೊಟ್ಟು ಗಜಬಜೆಯನೆಸಗಲುಂಟೆ ?
ಒಡಲಕಿಚ್ಚಿನ ತುಡುಗು ಬೆಡಗಿನೊಳಗಿಲ್ಲ ಉಪದೇಶ.
ನಿನ್ನ ಸಂಸಾರ ನಿನ್ನುದ್ದ, ನಿಃಸಂಸಾರಿಗಳ ತಗುಲಿಕೊಳ್ಳದಿರು.
ಕೊಟ್ಟವರಾರು ಕೊಂಡವರಾರು ?
ಹಮ್ಮು ಬಿಮ್ಮು ಹವಣಿಸಿಕೊ
ಗುರುನಿರಂಜನ ಚನ್ನಬಸವಲಿಂಗಸಹಿತ ಗುರುವೆನಿಸುವರೆ. || ೯೮೨ ||

೯೮೩

ಸಂದ ಸಂಸಾರ ದಂದುಗವಳಿಯದೆ ಬಂದನೆಂತು, ಸ್ಥಲಕೆ ಸಂದನೆಂತು ಹೇಳಾ!
ಉದರಾಗ್ನಿ ಬಲಿತರೆ ಕಳೆಯಲಿಲ್ಲವೆ ಮಾನಸಚತುಷ್ಟೆಯ ?
ನಿಲ್ಲಿಸಲಿಲ್ಲವೆ ವಾಚಕಚತುಷ್ಟೆಯ ? ಖಂಡಿಸಲಿಲ್ಲವೆ ಕಾಯಚತುಷ್ಟೆಯ ?
ಕಾಮಾಗ್ನಿಮುಖರೆ ಬೇಕಾಗಿ ಮಾಡಿಕೊಂಡ ಬಳಿಕ
ಮತ್ತೆ ನೋಡಿ ನೋಡಿ ಮರುಗುವ ಕಟು ಪಶುಪ್ರಾಣಿಗಳು
ನಿಮ್ಮಾಣತೆ ಕಾಣಬಂದಿತು ಕಡೆಗಾಗಿ ಬನ್ನಿ
ನಮ್ಮ ಗುರುನಿರಂಜನ ಚನ್ನಬಸವಲಿಂಗ ಸತ್ತರೂಪವಹಡೆ. || ೯೮೩ ||

೯೮೪

ಲೋಹದ ಕುಲವ ಕೆಡಿಸುವಂದು, ಕೀಟನ ರೂಪವನಳಿಸುವಂದು,
ಕರ್ಪುರದ ಕುರುಹ ಖಂಡಿಸುವಂದು, ಅಲ್ಲಿಗಲ್ಲಿಗೆ ತಂದು ಸ್ಥಾಪಿಸುವಂದು,
ನಾಮಧಾರಕರು ನೀವು ಅರಿಯಲಿಲ್ಲವೆ ?
ಆದಿ ಮಧ್ಯಾವಸಾನದೆಚ್ಚರಿಕಿಲ್ಲವೆ ? ನೀ ನಿಜಗುರುವಲ್ಲವೆ ?
ನೋಡಿ ಅವಧಾನಿಸಿಕೊ, ಕೂಡಿ ಕಾಡಿದರೆ ಕುರುಹಿಂಗೆ ಹಾನಿ.
ಬಂದಂತೆ ಪರಿಣಾಮಿಸಿಕೋ.
ಗುರುತನದ ತೇಜ ಭೂಷಣದಿಂದೆ ಮರೆಯಬೇಕಾದರೆ
ಗುರುನಿರಂಜನ ಚನ್ನಬಸವಲಿಂಗ ಸೂತ್ರದಿಂದೆ. ॥ ೯೮೪ ॥

೯೮೫

ಭಕ್ತಿ ಜ್ಞಾನ ವೈರಾಗ್ಯ ಕ್ರಿಯಾಪೀಠಕರ್ತುಮೂರ್ತಿಯ
ವರ್ತನೆಯ ಹೊತ್ತು ನಿಂದಲ್ಲಿ ಸತ್ಯಾಸತ್ಯ ವಿವೇಕಮುಖನಾಗಿರಬೇಕು.
ಬಂದ ನಿಜಜ್ಞಪ್ತಿನಿಲುವನರಿವಡೆ ಸುಜ್ಞಪ್ತಿ ಮುಕುರವೆಂಬ ಹೃದಯವೊಳಗುಂಟು.
ಮತ್ತೆ ನಾದವನೊರೆದು ನೋಡುವರೆ ಜ್ಞಾನಪದವುಂಟು.
ಬಿಂದುವನೊರೆದು ನೋಡುವರೆ ಕ್ರಿಯಾಪದವುಂಟು.
ಕಳೆಯನೊರೆದು ನೋಡುವರೆ ಚರ್ಯಾಪದವುಂಟು.
ಆತ್ಮನನೊರೆದು ನೋಡುವರೆ ಅನಾದಿರೂಪುಂಟು.
ಮತ್ತೆ ಹೀಗಿರ್ದು ಇದರ ರುಚಿಯನುಳಿದು
ರೂಪವ ಹೊತ್ತುವಂದು ವಿಷಯಕೆ ಸಂದಿಸಿಕೊಂಡು
ಮಾಡಿ ತೋರಿ ನಿಲಿಸಿದೆವೆನುತ ಬೇಡಿ ಕಾಡಿ ಬೇರೆ ಕೂಡೆಂದು
ಸೆಳೆಸೆಳೆದು ಒಡಲ ಹೊರವ ತುಡುಗುಣಿಗಳು ಗುರುತ್ವಕ್ಕೆ ಸಲ್ಲ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮಲ್ಲಿ. ॥ ೯೮೫ ॥

೯೮೬

ನವಭಕ್ತಿರಸವಕೊಂಡು ಶಿವಪ್ರಸಾದವನಿತ್ತ ಬಳಿಕ
ಆ ಪ್ರಸಾದವನೊಂದೆರಡು ಮೂರಾರು ಮತ್ತೆ
ಮುಖಮುಖವರಿದು ವೇಧಿಸಿದಲ್ಲಿ ಕಿರಿಕುಳವಲ್ಲುಂಟೆ ?
ಬರಿಕುಳವಿಲ್ಲುಂಟೆ ? ಕುಳಂಗಳ ನಿಲಿಸಿ ಕೂರ್ಪರೊಳು ಬೆರೆದು ಕೂಡಬಾರದು.
ಅದು ಕಾರಣ ಸೂತ್ರದ ಸುಳುಹು ಕಳಚಲಾಗದು ಕನಸಿನಲ್ಲಿ.
ಕಾರಣಮೂರ್ತಿಯ ಕಲ್ಪಿತಕ್ಕೆ ಇದೇ ಕುರುಹು
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೯೮೬ ॥

೯೮೭

ಇರ್ದ ಸಂಸಾರವನೊದ್ದು ಕಳೆಯದೆ
ಇಲ್ಲದ ಶುದ್ಧನ ಮಾಡಿದೆನೆಂಬ ನುಡಿ ಅಶುದ್ಧ ಕಾಣಾ.
ಅದೆಂತೆಂದೊಡೆ, ಕಾಯಕ್ಕುಪದೇಶವ ಮಾಡಿದಡೆ
ಆ ಕಾಯವು ಗುರುಲಿಂಗ ಚರಭಕ್ತಿ ಸಾಕಾರ ನಿರಾಕಾರಸನ್ನಿಹಿತ ನೋಡಾ.
ಭಾವಕ್ಕುಪದೇಶವ ಮಾಡಿದಡೆ
ಆ ಭಾವ ಚರಗುರು ಲಿಂಗಭಕ್ತಿ ಸಾಕಾರ ನಿರಾಕಾರಸನ್ನಿಹಿತ ನೋಡಾ.
ಬೆಂಕಿಯಿಲ್ಲದೆ ಸದೆಯ ದಹಿಸಿದವರುಂಟೆ ?
ನಿನ್ನ ನಿಷ್ಠೆ ಆತನ ಸ್ಪಷ್ಟ, ನೀನು ನಿನ್ನಂತೆ ಆತ ತನ್ನಂತೆ.
ನಮ್ಮ ಗುರುನಿರಂಜನ ಚನ್ನಬಸವಲಿಂಗ ಸಹಜಸಂತೆ. ॥ ೯೮೭ ॥

೯೮೮

ಒಂದು ವಿಷಯಕೆ ಮನೆಯ ನೋಡಿ ಮಾಡುವರು
ತನುಗುಣವ ತಪ್ಪಿಸಿ ತರಲರಿಯದವರು.
ಒಂದು ವಿಷಯಕೆ ಧನವ ನೋಡಿ ಮಾಡುವರು
ಪ್ರಾಣನಗುಣವ ತಪ್ಪಿಸಿ ತರಲರಿಯದವರು.
ಒಂದು ವಿಷಯಕೆ ನೆರವಿಯ ನೋಡಿ ಮಾಡುವರು
ಭಾವದಗುಂಜ ತಪ್ಪಿಸಿ ತರಲರಿಯದವರು.
ಈ ಸಂಬೋಧೆಯ ಆಸೆಗಿಕ್ಕಿ ಹೇಸದೆ ಘಾಸಿಯಾಗುವ ಪ್ರಾಣಿಗಳು
ತಮಗೆ ಗುರುತ್ವ ಸಹಜವೆ ಅಲ್ಲ.
ಮತ್ತೆಂತೆಂದೊಡೆ : ಭೂಷಣವಿಲ್ಲದ ಶಿಷ್ಯಂಗೆ ಗುಣವಿಲ್ಲದ ಗುರುವು
ಅಣಕದನುಗ್ರಹ ಎಣಿಕೆಗೆಬಾರದು
ನಮ್ಮ ಗುರುನಿರಂಜನ ಚನ್ನಬಸವಲಿಂಗದ ಶರಣಚಾರಿತ್ರದೊಳಗೆ. ॥ ೯೮೮ ॥

೯೮೯

ಒಪ್ಪಿಮಾಡಿದ ಮಾಟದೊಳಗೆ ಒತ್ತೊತ್ತಿ ತಪ್ಪನರಸಲುಂಟೆ ?
ತಪ್ಪನರಸಿ ತಂದುತೋರಿದರೆ ಹಾನಿಯೆತ್ತಣಕೆ ನೋಡಾ !
ಒಮ್ಮೆ ಶಾಂತಿ ಧರಿಸಿ ಅಹುದೆಂದು, ಒಮ್ಮೆ ಅಶಾಂತಿ ಧರಿಸಿ ಅಲ್ಲವೆಂದೊಡೆ,
ಬಂಧನದ ಬರವು ಸಂದೇಹವಿಲ್ಲದ ಮುಖ್ಯರ ಸಂಬಂಧಿಸಿಕೊಂಡರಿ
ನಮ್ಮ ಗುರುನಿರಂಜನ ಚನ್ನಬಸವಲಿಂಗದ
ಸ್ಥೂಲ ತತ್ವವಿಲಾಸ ನೀನಾಗಬೇಕಾದಡೆ. ॥ ೯೮೯ ॥

೯೯೦

ತಾಮಸವಿಲ್ಲದ ಪ್ರಾಣಕ್ಕೆ ಭಂಗವಿಲ್ಲದ ಸಸಿನವಾಗಿಪ್ಪುದು.
ತಾಮಸಭಂಗವಿಲ್ಲದ ನಿಲವು ಸಚರಾಚರ ಸಂತೃಪ್ತಿ.
ಗುರುನಿರಂಜನ ಚನ್ನಬಸವಲಿಂಗಸನ್ನಿಹಿತ ಪ್ರಾಣಗುರು ಅಂಗಶಿಷ್ಯ. ॥ ೯೯೦ ॥

೯೯೧

ಭವಿಯ ಸಂಪರ್ಕವನರಿಯದ ಕಾಯ, ಪರಸ್ತ್ರೀಯ ಸಂಗಕ್ಕೆಳಸದ ಮನ,
ಅನ್ಯಧನಮೋಹವನರಿಯದ ಪ್ರಾಣ, ಪರದೈವವನರಿಯದ ಭಾವ,
ಅನ್ಯಹಿಂಸೆಯನರಿಯದ ಆತ್ಮಸಯವಾದ ನಿಲುವಿಗೆ ಭಕ್ತಿಬೆರಸಿಪ್ಪುದು.
ಅಂಗಲಿಂಗವ ಹಿಂಗದೆ ಮರೆದು ಸಂಗಸುಯಿಧಾನಿ
ಗುರುನಿರಂಜನ ಚನ್ನಬಸವಲಿಂಗವಿಡಿದು. ॥ ೯೯೧ ॥

೯೯೨

ಎಂಟರೊಳಗೆ ಬಂದವರು ಸುಂಟುಮಾಡಿ ಬದುಕಿಹೋದವರೊಳರೆ ?
ಅವರೊಳಗಿನ ಸಕಲಸಂಜನಿತರು ಎಂಟರೊಳಬಂದವರು
ಸುಂಟುಮಾಡಿ ಬದುಕಿಹೋದವರೊಳರೆ ?
ಇವರೊಳಗಿನ ಸಕಲಸಂಜನಿತರು ಮತ್ತೆ
ಅವರಂತು ಇವರಿಂತು ಸಮಗಂಡ ನಿಲುವೇ ಆಚಾರಂಗ
ಗುರುನಿರಂಜನ ಚನ್ನಬಸವಲಿಂಗ. ॥ ೯೯೨ ॥

೯೯೩

ದಿನವ ಬಲ್ಲವರು ತಿಥಿಯ ಬಲ್ಲವರು ವತ್ಸರವ ಬಲ್ಲವರು
ಅವರು ಬಲ್ಲವರೆಂಬೆ ನಾಲ್ಕುಯುಗದಲ್ಲಿ.
ದಿನವ ಬಲ್ಲವರು ತಿಥಿಯ ಬಲ್ಲವರು ವತ್ಸರವ ಬಲ್ಲವರು
ಇವರು ಬಲ್ಲವರು ಎಂಬೆ ನಾಲ್ಕುಯುಗದಲ್ಲಿ.
ಅಂಗವೊಂದೆ ಅನುಭಾವವೊಂದೆ ಸಂಗವೊಂದೆ
ದ್ವಂದ್ವಕೆ ಅರಿದರಾಗುವೆ ಆಚಾರಂಗ ಗುರುನಿರಂಜನ ಚನ್ನಬಸವಲಿಂಗ. ॥೯೯೩॥

೯೯೪

ಭಾವವುಳ್ಳರೆ ಭಕ್ತನಾಗಲಿ, ಭಾವವುಳ್ಳರೆ ವಿರಕ್ತನಾಗಲಿ,
ಭಾವವುಳ್ಳರೆ ಮತ್ತೇನೇನಾದರು ಆಗಲಿ.
ಭಾವವೊಂದನುಳಿದು ಬಂದರೇನು ನಿಂದರೇನು ಹೋದರೇನು
ಮಾರುತ ಮಾರುತ ಗುರುನಿರಂಜನ ಚನ್ನಬಸವಲಿಂಗ. ॥ ೯೯೪ ॥

೯೯೫

ಆಚೆಯಲ್ಲಿ ಸ್ಥಾವರಭಕ್ತಿ ಈಚೆಯಲ್ಲಿ ಜಂಗಮಭಕ್ತಿ ಮನವೆರಡಿಲ್ಲವಯ್ಯಾ.
ಮತ್ತೆಯಿತ್ತ ಕೇಳು ಸ್ಥಾವರ ಜಂಗಮಕ್ಕೆ
ಸೈದಾನ ಪಾಕ ಸುಯಿದಾನ ಭಾವರುಚಿ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೯೯೫ ||

೯೯೬

ನಾಲ್ಕುಯುಗದ ಸಂಸಾರ ಸಂಬಂಧಿಸಿ
ಬ್ರಹ್ಮಲೋಕವ ಕಂಡೆ, ವಿಷ್ಣುಲೋಕವ ಕಂಡೆ, ರುದ್ರಲೋಕವ ಕಂಡೆ,
ಈಶ್ವರಲೋಕವ ಕಂಡೆ, ಸದಾಶಿವಲೋಕವ ಕಂಡೆ,
ಪರಮೇಶ್ವರ ಲೋಕವ ಕಂಡೆ.
ಈ ಆದಿದೈವದೊಡೆತನ ಒಬ್ಬನೊಡಲೊಳಗೆಂದು ನಾನಿರಲು
ಅಪ್ಪುಗೆಯ ಕುರುಹು ಮರೆದ ಮೇಲಿನ ಭೋಗ
ಗುರುನಿರಂಜನ ಚನ್ನಬಸವಲಿಂಗ. || ೯೯೬ ||

೯೯೭

ಬಯಲ ರಥ ಬಯಲ ಸ್ಥಾವರ ಬಯಲ ಬೊಂಬೆಯ
ಸಡಗರ ಜಾಣತನವ ಮಾಣಬಾರದು.
ರುದ್ರನ ಕಟ್ಟಳೆಯ ಕಾಣದ ಮುನ್ನ
ಭದ್ರ ಗುರುನಿರಂಜನ ಚನ್ನಬಸವಲಿಂಗ. || ೯೯೭ ||

೯೯೮

ಆಕಾಶದ ಬಣ್ಣವನೋಕರಿಸಿ ತೋರಲು
ತಾಕಲಾರದು ತಾರೇಂದು ರವಿ ಮೇಘ ಗಡಣವನುಳಿದು.
ತನುಮನಪ್ರಾಣಭಾವಶೂನ್ಯ ಗುರುನಿರಂಜನ ಚನ್ನಬಸವಲಿಂಗ. || ೯೯೮ ||

೯೯೯

ಭಕ್ತಿಯೇ ವಿಗ್ರಹ, ಜ್ಞಾನವೇ ಪ್ರಾಣ, ವೈರಾಗ್ಯವೇ ಗಮನ.
ಇಂಬಿಲ್ಲ ಇಂಬಿಲ್ಲ ನೋಡುವರೆ ನುಡಿಸುವರೆ.
ಎಲೆದೋರದ ವೃಕ್ಷ ಫಲವಾಗಿ ಕಾಣಿಸಿಕೊಳ್ಳದು.
ಬಂದರೇನು ನಿಂದರೇನು ಭೋಗಿಸಿದರೇನು ಅಂದಂದಿಗೆ ಆರೂಢ ತಾನೆ
ಗುರುನಿರಂಜನ ಚನ್ನಬಸವಲಿಂಗ. || ೯೯೯ ||

೧೦೦೦

ಅರಣ್ಯದೊಳಗಾದ ತಾವರೆಯಗಡ್ಡೆಯ ನೋಡಿ
ನೀರ ಹೊಯ್ಯಿರೊ ಚಿಕ್ಕಮಕ್ಕಳತಂದೆಗಳೆನಿಸುವರು.
ಎತ್ತಿದ ಕುಸುಮಗಳತ್ತ ಒಯ್ಯಲಿಬೇಡಿರಿ.
ತಲೆಯಲ್ಲಿ ಸೂಡಿದ ಗಂಧ ನಲಿನಲಿದು ಮೂಸಿದರೆ
ಬೆಚ್ಚಿಲ್ಲದ ಬೆಚ್ಚು ಅಚ್ಚೊತ್ತಿತ್ತಾಗಳೆ
ಗುರುನಿರಂಜನ ಚನ್ನಬಸವಲಿಂಗಾ. ॥ ೧೦೦೦ ॥

೧೦೦೧

ಕಚ್ಚಕಳೆದಕ್ಕಿಯ ಬೋನವ ಹುಚ್ಚಿ ತನ್ನ ಕೈಯಲ್ಲಿ ಕಲಿಸಿದರೆ
ದಾಸತ್ವವಾಯಿತಲ್ಲ ಲೋಕದೊಳಗೆ.
ಕಂಡವರು ಬಾರರು, ಬಂದವರು ಹೊಂದರು, ಅಲ್ಲೇ ನಿಂದವರು ಬೆಂದರು.
ಒಬ್ಬಿಬ್ಬರರಿಯದ ಒಡಲೊಳಗೆ ಸುಖಿಸಿದ
ಗುರುನಿರಂಜನ ಚನ್ನಬಸವಲಿಂಗ. ॥ ೧೦೦೧ ॥

೧೦೦೨

ಸಾಗರದೊಳಗೊಂದು ಉಲುಹಿಲ್ಲದ ವೃಕ್ಷವು
ಬೇರಿಲ್ಲದ ಕುಸುಮ ಕಾತು ವಾಸನೆಯಿಲ್ಲದ ಗಂಧ ಸೂಸದಿಪ್ಪದು ನೋಡಾ.
ಐವತ್ತಾರುದೇಶದೊಳಗೆ ಆ ಸುದ್ದಿಯ ನರರು ಸುರರು
ಮುನಿಗಳೆಲ್ಲ ಕೇಳಿ ಕಂಡವರಾದಲ್ಲಿ
ಇವರು ಅಜನಕೊಂದವರಹುದು ? ಅಲ್ಲ.
ಇವರು ಹರಿಯಕೊಂದವರಹುದು ? ಅಲ್ಲ.
ಇವರು ರುದ್ರನ ಕೊಂದವರಹುದು ? ಅಲ್ಲ.
ಮತ್ತೆ ಇವರೊಂದಾಗಿ ವೃಕ್ಷದೊಳಹೊರಗೆ
ಗುರುನಿರಂಜನ ಚನ್ನಬಸವಲಿಂಗವನಾರಾಧಿಸುತಿರ್ದರು. ॥ ೧೦೦೨ ॥

೧೦೦೩

ರಾಜ್ಯವಿರಹಿತ ರಾಜ, ರಾಜವಿರಹಿತ ರಾಜ್ಯ, ರಾಜತ್ವವಿದೇನೋ?
ಊರುಗಳ ಸಂದೋಹ ಬೇರೆ ಸೀಮೆ ನಾಮಗಳು ಬೇರೆದೋರಿ,
ಹಸಿಯುರಿಯೊಳಗೆ ಬೆಸಿಗೆಗೊಂಡ
ಮಸಿಮನದಾಸೆಗಳ ದೆಸೆದೆಸೆಭಾವದ ಯುದ್ಧವ ನೋಡಾ.
ಸೋಲು ಗೆಲುವೆಂಬ ರಣಭೂಮಿಯಲ್ಲಿ ಕಣ್ಣಿಲಿ ನೋಡಿ ಕಾಲಗೆಡುವಲ್ಲಿ

ಸಕಲಾಯುಧವು ನಗುತಿರ್ದವು ನೋಡಾ.
ಬದುಕು ಬದುಕುರಿ ಕಾಲಕಾಲ ಬಂದು ನಿಂದು ಹೊಂದುವ ಭಾವ ಬೆರೆಯದೆ
ಸಂದೇಹದೊಳಗೆ ಸಮಾಪ್ತಿ ನೋಡಿ ನೋಡಿ ನೋಡಿ
ಗುರುನಿರಂಜನ ಚನ್ನಬಸವಲಿಂಗವಾದಡೆ. ॥ ೧೦೦೩ ॥

೧೦೦೪

ಗೆಲ್ಲಸೋಲೆಂಬ ಕಲಿಧರ್ಮದಲ್ಲಿ ಗೆಲಬೇಕೆಂಬ
ನರ ಸುರ ಖಗ ಮೃಗ ಕೀಟ ಕ್ರಿಮಿಗಳೆಲ್ಲ ಹೆಣಗುತಿಪ್ಪವಲ್ಲದೆ
ಸೋಲಬೇಕೆಂಬ ಕುರುಹುಗಾಣದು ನೋಡಾ.
ಸೋಲದಲ್ಲಿ ಭವಮಾಲೆ ಬಲಿಯಿತ್ತು ಕಲಿಯುಗ ಕಳೆವೊಡೆಯಿತ್ತು.
ಅಂತಂತೆ ಶರಣಶಿವಾನುಕೂಲ.
ಸೋಲಬಾರದ ಕರ್ತು ಸೋತುಬಂದಲ್ಲಿ ಸೋತುಗೆಲ್ಲುಪುದಪೂರ್ವ.
ಸೋತುಗೆಲ್ಲುವ ಸುಲಭವಳಿದು ಖ್ಯಾತಿವಡೆದು ಹೋಗಿ ಬಂದು ಹೋದರು
ಗುರುನಿರಂಜನ ಚನ್ನಬಸವಲಿಂಗಕೀತೆರವಾಗಿ. ॥ ೧೦೦೪ ॥

೧೦೦೫

ಮೂಲಾನಕ್ಷತ್ರದಲ್ಲಿ ಮನೆಯ ಸಾರಣೆಯ ಮಾಡಿ,
ಜೇಷ್ಠಾನಕ್ಷತ್ರದ ಬರವ ಹಾರೈಸಿ ಬಂದಲ್ಲಿ
ಶ್ರವಣಾನಕ್ಷತ್ರಗೂಡಿ ಗಾಳಿಯನ್ನೈದಿತ್ತು.
ಪೂರ್ವದಿಕ್ಕಿಲಿ ಹಸ್ತಾನಕ್ಷತ್ರವೊಡ್ಡಿಬಂದುದ ಮೇಲೆ ನಕ್ಷತ್ರದಿಂ ನೋಡಿ ಬಂದು,
ಶತತಾರೆ ಆರಿದ್ರಿ ಬೆದೆಯನರಿದು ಮೂರು ತಾಳಿನ ಕೂರಿಗೆಯಲ್ಲಿ ಬಿತ್ತಲು
ಪುನರ್ವಸುನಕ್ಷತ್ರ ವೃಷ್ಟಿಗರೆಯಿತ್ತು.
ಭೂಮ್ಯಾದಿ ಸಕಲ ಸಂಪು ತಂಪುಗೊಂಡಿತ್ತು.
ಪೈರು ವಿಚಿತ್ರ ಬೆಳೆ ನಿಂದಿತ್ತು ಹುಬ್ಬಿನಕ್ಷತ್ರದಲ್ಲಿ.
ಉತ್ರಿ ಚಿತ್ತಿ ಸ್ವಾತಿಯಾದರೆ
ಗುರುನಿರಂಜನ ಚನ್ನಬಸವಲಿಂಗಕ್ಕೆ ದಾಸೋಹ ಸಮನಿಸಿತ್ತು. ॥ ೧೦೦೫ ॥

೧೦೦೬

ಭಕ್ತನೆಂದು ಯುಕ್ತನೆಂದು ವ್ಯಕ್ತನೆಂದು ಮುಕ್ತನೆಂದು
ಹೇಳುವರಲ್ಲದೆ ಬಾಳುವರಿಲ್ಲ ನೋಡಾ.
ಬಾಳುವೆ ಬರಿದಾಯಿತ್ತು ಮೂರು ಘಳಿಗೆಯೊಳಗೆ ಶರಣೆಂದು ನಿಂದಲ್ಲಿ.
ಶರಣನು ಶರಣೆನ್ನಬಲ್ಲರೆ ಭಕ್ತ, ತಾರದಿರ್ದಡೆ ಯುಕ್ತ,

ನೋಡದಿರ್ದಡೆ ವ್ಯಕ್ತ, ಹೀಗೆಂಬುದ ಮರೆದಡೆ ಮುಕ್ತ ನೋಡಾ
ಗುರುನಿರಂಜನ ಚನ್ನಬಸವಲಿಂಗಾ. ॥ ೧೦೦೬ ॥

೧೦೦೭

ಆದ್ಯರ ವಚನ ಎರಡೆಂಬತ್ತೆಂಟು ಕೋಟಿ
ನೋಡಿ ನೋಡಿ ದಣಿಯನೇಕೆ ? ಹಾಡಿ ಹಾಡಿ ದಣಿಯನೇಕೆ ?
ನೋಡಬಾರದು ಹಾಡಬಾರದು, ನಿಮ್ಮ ಶರಣರಿಗೆ ನೀವೊಲಿದುಕೊಂಡೆ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಧರ್ಮ ನಿಮ್ಮ ಧರ್ಮ. ॥ ೧೦೦೭ ॥

೧೦೦೮

ಹಾರುವನ ಕೈಯಿಂದ ಪಂಚಾಂಗವನರಿದು ವರ್ತಿಸಬಾರದು
ಸವಮಲಲಿಂಗಸಮೇತರು.
ಜಂಗಮದಮುಖದಿಂದ ಪಂಚಾಂಗವನರಿದು ವರ್ತಿಸುವುದು
ಗುರುಕರಸಂಜಾತರು.
ಇದು ಕಾರಣ, ಎನಗೆ ಮದುವೆಯ ಉತ್ಸಾಹಕಾರ್ಯ ಮುಂದಿಲ್ಲ;
ನಾನು ಹೋಗಿ ಹಾರುವನ ಕಂಡು ಬರಲಿಲ್ಲ.
ಮತ್ತೆ ಬರುವವರೆಲ್ಲ ಜಂಗಮದ ನುಡಿಯನರಿದು ಬನ್ನಿ,
ಎನಗೆ ಜಂಗಮವ ಕೇಳಲು ಮನವಿಲ್ಲ.
ಗುರುನಿರಂಜನ ಚನ್ನಬಸವಲಿಂಗವ ಬಿಡಲುಬಾರದು ಕಾಣಾ. ॥ ೧೦೦೮ ॥

೧೦೦೯

ಭಕ್ತನಾಚಾರ ಜಂಗಮಲಿಂಗಸನ್ನಿಹಿತ,
ಜಂಗಮದಾಚಾರ ಲಿಂಗಜಂಗಮಸನ್ನಿಹಿತ,
ಷಟ್ಕೃಷಿ ಸತ್ಕಾಯಕವೇ ಮುಕ್ತಿಯ ಬೀಡು,
ಭಕ್ತಂಗಾದರು ಸತ್ಕಾಯಕವೇಬೇಕು, ಜಂಗಮಕ್ಕಾದರೂ ಸತ್ಕಾಯಕವೇಬೇಕು.
ಭಕ್ತಂಗಾಚರಣೆ, ಜಂಗಮಕ್ಕೆ ಸಂಬಂಧ.
ಅದೆಂತೆಂದೊಡೆ, ಜ್ಞಾನೋದಯವಾದ ಮಹಾತ್ಮನು
ಮಾಯಾನಿವೃತ್ತಿಯ ಮಾಡಿ
ತನುಸಂಬಂಧ ಸದ್ಗುರು ಸಮ್ಮುಖೋಪಾವಸ್ಥೆಯನೆಯಿದು ಕಂಡು,
ತನುತ್ರಯವನಿತ್ತು ದೀಕ್ಷಾತ್ರಯಾನ್ವಿತನಾಗಿ ಬಂದು
ಸರ್ವಾಚಾರಸಂಪತ್ತು ಶೋಭನಲೀಲೆಯ ನಟಿಸುವಲ್ಲಿ
ಸ್ಥಲಸ್ಥಲಂಗಳ ತಾಮಸಸುಳುಹಿಂಗೆ ಸುಜ್ಞಾನಶಾಸ್ತ್ರವನು ಸುಚಿತ್ತದಲ್ಲಿ ಧರಿಸಿ
ಸಾಕಾರ ಸುದ್ರವ್ಯಂಗಳನು ನಿರ್ವಂಚಕತ್ವ ತ್ರಿಕರಣ ಶುದ್ಧಾತ್ಮಕದಿಂದೆ

ಸಗುಣಜಂಗಮಲಿಂಗಸನ್ನಿಹಿತ ಭೋಗೋಪಭೋಗಿಯಾಗಿಹುದೇ
ಶ್ರದ್ಧಾ ಭಕ್ತನಾಚಾರವಯ್ಯಾ.
ಆ ತದ್ಭಾವಸಮೇತ ನಿಜಲಿಂಗಜಂಗಮಸನ್ನಿಹಿತ
ಭೋಗೋಪಭೋಗಿಯಾಗಿಹುದೇ ಆಚಾರಲಿಂಗ ಜಂಗಮದ ಸ್ಥಲ.
ಇದು ಅಸಿಯೆಂಬ ವ್ಯಾಪಾರವಯ್ಯ.
ಆಚಾರಂಗ, ವಿಚಾರ ಮನ, ಸಮಯಾಚಾರ ಭಾವವೆಂಬ ನಿರ್ಮಲಸುಕ್ಷೇತ್ರಾಂಕನಾಗಿ
ಸಾವಧಾನಮುಖಸುಖಭಕ್ತಿಯಿಂದೆ
ಸಾಕಾರಜಂಗಮಲಿಂಗಸನ್ನಿಹಿತ ಭೋಗೋಪಭೋಗಿಯಾಗಿಹುದೇ
ಸಾವಧಾನ ಪ್ರಸಾದಿಭಕ್ತನಾಚಾರವಯ್ಯಾ.
ತದ್ಭಾವಭರಿತನಾಗಿ ಸ್ವಯಂ ಲಿಂಗಜಂಗಮಸನ್ನಿಹಿತನಾಗಿಹುದೇ
ಶಿವಲಿಂಗಜಂಗಮಸ್ಥಲ.
ಇದು ಕೃಷಿಯೆಂಬ ವ್ಯಾಪಾರವಯ್ಯಾ.
ಮತ್ತೆ ಸ್ಥಲಸ್ಥಲಂಗಳಲ್ಲಿ ಭೇದಾಭೇದ ಸದ್ವಿವೇಕಮುಖ ಲೇಖಸ ಸ್ವಾಪ್ಯ
ನಿರ್ಮಲನಿಷ್ಕಾಂಗನಾಗಿ ವೀರಜಂಗಮಲಿಂಗಸನ್ನಿಹಿತ
ಭೋಗೋಪಭೋಗಿಯಾಗಿಹುದೇ ನಿಷ್ಕಾಮಹೇಶ್ವರ ಭಕ್ತನಸ್ಥಲ.
ಅಂತಪ್ಪ ನಿಷ್ಕಾಂಗಮಂತ್ರಮೂರ್ತಿಯಾಗಿ
ನಿಜಲಿಂಗಜಂಗಮಭೋಗೋಪಭೋಗಿಯಾಗಿಹುದೇ ಗುರುಲಿಂಗಜಂಗಮಸ್ಥಲ.
ಇದು ಮಸಿಯೆಂಬ ವ್ಯಾಪಾರವಯ್ಯಾ.
ಮತ್ತೆ ಸ್ಥಲಸ್ಥಲಂಗಳಲ್ಲಿ ದಶವಾಯುವಿನ ದಂದುಗವನು
ಸುಜ್ಞಾನಕ್ರಿಯಾಸಂಭಾಷಣೆಯಲ್ಲಡಗಿಸಿ
ಅಷ್ಟ ಕುಶಬ್ದ ಬಾಹ್ಯಪ್ರಣವ ಪರಿಪೂರ್ಣನಾಗಿ
ಅನುಭಾವಭಕ್ತಿಯಿಂದೆ, ಸತ್ಯಜಂಗಮಲಿಂಗಸನ್ನಿಹಿತ
ಭೋಗೋಪಭೋಗಿಯಾಗಿಹುದೇ ಪ್ರಾಣಲಿಂಗಿಭಕ್ತನಸ್ಥಲ.
ತದ್ಭಾವ ಪರಿಪೂರ್ಣನಾಗಿ ಅನುಭಾವ ಲಿಂಗಜಂಗಮ
ಭೋಗೋಪಭೋಗಿಯಾಗಿಹುದೇ ಚರಲಿಂಗ ಜಂಗಮಸ್ಥಲ.
ಇದು ವಾಣಿಜ್ಯತ್ವವೆಂಬ ವ್ಯಾಪಾರವಯ್ಯಾ.
ಮತ್ತೆ ಸ್ಥಲಸ್ಥಲಂಗಳಲ್ಲಿ ಅವಿರಳತ್ವದಿಂದೆ ಏಕೋತ್ತರಶತ ಸಕೀಲ
ಸರ್ವಕಲಾಭಿಜ್ಞತೆಯಾತ್ಮಕನಾಗಿ,
ಚಿದೇಂದ್ರಿ ಚಿತ್ಕರಣ ಚಿದ್ವಿಷಯಾನಂದಪ್ರಸಾದಕ್ಕೆ
ಸುಜ್ಞಾನದಿಂ ಕಾಮ್ಯಾಂಗನಾಗಿ ಜಂಗಮಲಿಂಗ ಭೋಗೋಪಭೋಗಿಯಾಗಿಹುದೇ
ಶರಣ ಭಕ್ತನಾಚಾರವಯ್ಯ.

ತದ್ಭಾವಾತ್ಮಕನಾಗಿ ಆ ವೀರ ಲಿಂಗಜಂಗಮ ಭೋಗೋಪಭೋಗಿಯಾಗಿಹುದೇ
ಪ್ರಸಾದಲಿಂಗ ಜಂಗಮಸ್ಥಲ.
ಇದು ಯಾಚಕತ್ವವೆಂಬ ವ್ಯಾಪಾರವಯ್ಯಾ.
ಸ್ಥಲಸ್ಥಲಂಗಳಲ್ಲಿ ಅಹಂಭಾವವಳಿದು ಸೋಹಂಭಾವವನುಳಿದು,
ದಾಸೋಹಂಭಾವಭರಿತನಾಗಿ ತನುಮನಧನದ
ಮಾಟ ನೋಟ ಕೂಟ ಶೂನ್ಯನಾಗಿ
ಘನಜಂಗಮಲಿಂಗಸನ್ನಿಹಿತ ಭೋಗೋಪಭೋಗಿಯಾಗಿಹುದೇ
ಐಕ್ಯಸ್ಥಲದಾಚಾರವಯ್ಯಾ.
ತದ್ಭಾವಪೂರ್ಣನಾಗಿ ಸರ್ವಶೂನ್ಯತ್ವದಿಂದೆ
ನಿರಾಮಯಲಿಂಗಜಂಗಮ ಭೋಗೋಪಭೋಗಿಯಾಗಿಹುದೇ
ಮಹಾಲಿಂಗಜಂಗಮಸ್ಥಲ.
ಇದು ಗೋಪಾಲತ್ವವೆಂಬ ವ್ಯಾಪಾರವಯ್ಯಾ.
ಈ ಭೇದವನರಿಯದೆ ಭಕ್ತನೆನಿಸಿ ವರ್ತಿಸುವ ಪ್ರಾಣಿ ಅನಾಚಾರಿ.
ಈ ಭೇದವನರಿಯದೆ ಕಾಯ ಕಂದಿಸಿ ಮನವ ಸಂಸಾರಕ್ಕಿಕ್ಕಿ
ಭಾವ ಭ್ರಾಂತಿಗೊಂಡು ಮಾಟಕೂಟವ ಹೊತ್ತು ತಿರುಗುವ ಪ್ರಾಣಿ ಅಜ್ಞಾನಿ.
ಈ ಉಭಯವನರಿಯದೆ ಸಂಬಂಧವನು ಅಸಂಬಂಧವ ಮಾಡಿ,
ಅಸಂಬಂಧವನು ಸಂಬಂಧವ ಮಾಡಿಕೊಟ್ಟು ಹಿರಿಯನೆನಿಸುವವ ಮೂಢಪ್ರಾಣಿ.
ಇದು ಕಾರಣ ಈ ಅನಾಚಾರಿ ಅಜ್ಞಾನಿ
ಮೂಢ ಪ್ರಾಣಿಗಳ ನೋಡಿ ನಗುತಿರ್ದರು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣರು. ॥ ೧೦೦೯ ॥

**ಮಹೇಶ್ವರಸ್ಥಲದ ಉಳಿದ ವಚನಗಳು**

೧೦೧೦

ಪರಧನಕ್ಕೆ ಇಚ್ಛೈಸುವನ್ನಕ್ಕರ, ಪರಸ್ತ್ರೀಗೆ ಮೋಹಿಸುವನ್ನಕ್ಕರ,
ಪರದೈವವ ಭಜಿಸುವನ್ನಕ್ಕರ, ಪರಪಾಕವ ಕೊಂಬನ್ನಕ್ಕರ,
ಪರಹಿಂಸೆಗೆಡದನ್ನಕ್ಕರ ಮಹೇಶ್ವರನೆನಲಾಗದು.
ಹುಸಿ ನಾಶವಾಗದನ್ನಕ್ಕರ, ಕಳವು ಕುಚೇಷ್ಟೆಯ ನೀಗದನ್ನಕ್ಕರ,
ಉಪಾಧಿಯನುಸರಣೆಯ ದಾಟದನ್ನಕ್ಕರ ಮಹೇಶ್ವರನೆನಲಾಗದು.
ಭವಿಯಸಂಪರ್ಕ ಬಿಚ್ಚದನ್ನಕ್ಕರ, ವೇಷಗಳ್ಳರ ಜರಿದು ನೂಕದನ್ನಕ್ಕರ,
ಲೋಕಲೌಕಿಕಚರಿಯ ಹರಿಯದನ್ನಕ್ಕರ,
ಸ್ವತಂತ್ರತ್ವಾನುಭಾವಿಯಾಗದನ್ನಕ್ಕರ ಮಹೇಶ್ವರನೆನಲಾಗದು.

ಗುರುನಿರಂಜನ ಚನ್ನಬಸವಲಿಂಗಕ್ಕೆ ಅಂಗವೆಂದು
ನಷ್ಟಬದ್ಧರಿಗೆರಗುವ ಭ್ರಷ್ಟಭವಿಗಳಿಗೊಮ್ಮೆ
ಮಹೇಶ್ವರನೆಂದರೆ ಅಘೋರನರಕ ತಪ್ಪದು. ॥ ೧೦೧೦ ॥

೧೦೧೧

ತ್ರೈಮಲದಾಸೆಯ ಮನಗೊಂಡು ಮಹಾಘನ ಮಹಿಮರಾಚರಣೆಯ ಹೊತ್ತು
ನಡೆಬದ್ಧ ಹಿರಿಯರೆಂದು ಬರುವರು.
ಮಾರ್ಗಕ್ರಿಯೆಯೆನುತ ಸಾರವಿಹೀನ ಜಡಕ್ರಿಯೆ ಕೋಟಲೆಯಗೊಂಡು
ಕಾಂತಾರ ಬಿದ್ದು ಕಳವಳಕ್ಕೊಳಗಾದರು.
ತಾವು ತಮ್ಮ ಹೂಳಿ ಇತರರನೆತ್ತಿ ತಂದು ಹಳಿದಾಡುವ
ಮಲಭಾಂಡರನೆನ್ನತ್ತ ತೋರದಿರಾ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಧರ್ಮ. ॥ ೧೦೧೧ ॥

೧೦೧೨

ತನ್ನ ಕಾಲು ಹೇಸಿಕೆ, ಇತರರ ಕಾಲನರಸಿ ಜರಿವ.
ತನ್ನ ಕೈ ಹಡಿಕೆ, ಇತರರ ಕೈಯನರಸಿ ಹಳಿವ.
ತನ್ನ ಕಣ್ಣು ಕುರುಡು, ಇತರರ ಕಣ್ಣನರಸಿ ತೆಗೆವ.
ತನ್ನ ಬಾಯಿ ಹೊಲಸು, ಇತರರ ಬಾಯಿಯನರಸಿ ಬೊಗಳುವ.
ತನ್ನ ನಿಲುಃವೆಲ್ಲ ದುರ್ವಾಸನೆ, ಇತರರ ವಾಸನೆಯ ಭಾವಿಸುವ.
ಇಂಥ ನರಕಪ್ರಾಣಿಯ ನೆರಮನೆಯಲ್ಲಿರ್ದಡೆ ಪಾತಕ ಸೋಂಕುವುದು.
ಆ ಪಾಪಿ ಕರ್ಮಿಯನು ನಡೆನುಡಿಯೊಳು ಸುಳುಹಿಸಲಾಗದು ಸಧರ್ಮಿಗಳು
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮಾಣೆ. ॥ ೧೦೧೨ ॥

೧೦೧೩

ತಾಯಿಯೆಂದರಿಯ, ತಂಗಿಯೆಂದರಿಯ, ಅತ್ತೆ ಅತ್ತಿಗೆಯೆಂದರಿಯ,
ಸೊಸೆ ನಾದುನಿ ಮಗಳೆಂದರಿಯದೆ ಕಾಮುಕಗೊಂಡು
ಬಂದಯೋನಿ ನಿಂದಹೊಟ್ಟೆ ತಿಂದಮೊಲೆಯೆಂಬುದನರಿಯದೆ
ಬೀಳುವ ಶುನಿ ಸೂಕರ ಮಾನವಗೆ
ಮಹೇಶ್ವರನೆಂದು ಶರಣ ಸಂಬಂಧಿಸಿದರೆ ನಾಯಕ ನರಕ ತಪ್ಪದು.
ಅದು ಕಾರಣ ಬಿಟ್ಟು ಕಳೆವುದು
ಗುರುನಿರಂಜನ ಚನ್ನಬಸವಲಿಂಗಸನ್ನಿಹಿತ ಶರಣರು. ॥ ೧೦೧೩ ॥

೧೦೧೪

ನಡೆವವರ ನುಡಿಯ ಕಲಿತು ತುಡುಗುಣಿ ತಾನೊಂದು ಲಿಂಗವಹಿಡಿದು
ನಡೆವ ಮನಬಂದಂತೆ, ನುಡಿವ ಜಿಹ್ವೆ ಶುಷ್ಕವಹನ್ನಕ್ಕರ,
ಹಿಡಿವ ಕರಣೇಂದ್ರಿಯ ವಿಷಯದಿಚ್ಛೆಗೆ ಸೋಲ್ತು.
ಮತ್ತೆ ಗುರುಲಿಂಗಜಂಗಮವನಿದಿರಿಡವ ಪರಿಣಾಮಿಯೆಂದರೆ
ಆ ಬಾಯಲ್ಲಿ ಸುರಿಯವೆ ಬಾಲ್ಹುಳಗಳು ?
ಈ ವಾಕ್ಪಟುಪ್ರಾಣಿಯನು ಬಿಟ್ಟು ಕಳೆವುದು
ಗುರುನಿರಂಜನ ಚನ್ನಬಸವಲಿಂಗದ ನವೀನ ಚರಿತೆಯ ತೋರದೆ. ॥ ೧೦೧೪॥

೧೦೧೫

ಸಂಸಾರಸಂಬಂಧಿಗೆ ಇಷ್ಟಲಿಂಗವೆಲ್ಲಿಹದೊ !
ಪರಸ್ತ್ರೀಕಾಂಕ್ಷೆಭರಿತಗೆ ಪ್ರಾಣಲಿಂಗವೆಲ್ಲಿಹದೊ !
ಅನ್ಯಸ್ಥಾವರಭಾವಸಂಬಂಧಿಗೆ ಭಾವಲಿಂಗವೆಲ್ಲಿಹದೊ !
ಈಸುವನರಿದು ಮೋಸದೊಳಗಿರ್ದು ಮಹೇಶನಾಮವ ಕಾಣಿಸಿಕೊಂಡರೆ
ಈಸುವನೇ ಕಡೆಮೊದಲರಿಯದೆ ಭವಸಾಗರವನು
ಗುರುನಿರಂಜನ ಚನ್ನಬಸವಲಿಂಗ ನೀ ಸಾಕ್ಷಿಯಾಗಿ. ॥ ೧೦೧೫ ॥

೧೦೧೬

ಅಂಗನೆಯ ಸಂಗಮೋಹಿಗೆ ಗುರುನಿಷ್ಠೆಯಿಲ್ಲ, ಲಿಂಗನಿಷ್ಠೆಯಿಲ್ಲ,
ಜಂಗಮನಿಷ್ಠೆಯಿಲ್ಲ, ಪಾದೋದಕಪ್ರಸಾದನಿಷ್ಠೆಯಿಲ್ಲ,
ಈ ಪಂಚವಿಧ ಪ್ರಸನ್ನಸುಖವರಿಯದ ಮಲಸುಖಿಯು
ತಾನೊಂದು ಕಾರ್ಯವರಿದುಬಂದು ಕಾರಣಿಕಪುರುಷನೆಂದರೆ
ಈ ಹುಸಿ ಬಾಯಿಗೆ ಮುಂದೆ ಕಸಮಲ ಹುಡಿಯ ತುಂಬುವುದೇ ಸಾಕ್ಷಿ.
ಇದು ಕಾರಣ, ಈ ಹುಸಿನಾಲಿಗೆಯನು ಇದರ ಚೇತನವನು ಅದರಾಸ್ವಾದವನು
ಸುಟ್ಟು ಬಟ್ಟೆಟ್ಟಲ್ಲದೆ ಭಕ್ತಾದಿಕುಳವೆಂದರೆ ಅಘೋರನರಕ ತಪ್ಪದು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೧೦೧೬ ॥

೧೦೧೭

ಅನೃತ ಅಸ್ಥಿರವಾಕ್ಯವನುಳ್ಳ ನಾಲಿಗೆ, ವಂಚನೆ ಪಂಕ್ತಿಭೇದವನುಳ್ಳ ಮನ,
ಉದಾಸೀನ ನಿರ್ದಯವುಳ್ಳ ತನುವು – ಈ ನುಡಿ ಮನವಂಗ ಸ್ವಯವಾಗಿ,
ನಾನು ಸತ್ಯವ್ರತಸಂಬಂಧಿಯೆಂದು ನುಟ್ಟನಾಲಿಗೆಯಲ್ಲುಸುರುವ
ಭ್ರಷ್ಟ ಭವಿಗೆ ಕಷ್ಟಕಡೆಗಾಣಬಾರದು ನಿರವಯುದಲ್ಲಿ.
ಅದು ಕಾರಣ, ನಿಷ್ಠೆನಿರ್ಮಲರು ತರಲಾಗದು

ತಮ್ಮ ಸುಡಿಯೊಳಗಿಕ್ಕಿ ಆ ಪಾತಕರ
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ‖ ೧೦೧೭ ‖

೧೦೧೮

ಈ ತನುವುಳ್ಳವರನಾ ತನುವುಳ್ಳವರು ಹೋಲಬಲ್ಲರೆ ?
ಈ ಮನವುಳ್ಳವರನಾ ಮನವುಳ್ಳವರು ಹೋಲಬಲ್ಲರೆ ?
ಈ ಪ್ರಾಣವುಳ್ಳವರನಾ ಪ್ರಾಣವುಳ್ಳವರು ಹೋಲಬಲ್ಲರೆ ?
ಈ ಭಾವವುಳ್ಳವರನಾ ಭಾವವುಳ್ಳವರು ಹೋಲಬಲ್ಲರೆ ?
ಇದು ಕಾರಣ, ಈ ಸಿಂಹ ಗಜವನಾ ಶುನಕ ಸೂಕರ ಹೋಲಬಲ್ಲವೇನು ?
ಗುರುನಿರಂಜನ ಚನ್ನಬಸವಲಿಂಗಾ ಈ ಶರಣನಾನರನು ಹೋಲಬಲ್ಲನೆ ?
‖ ೧೦೧೮ ‖

೧೦೧೯

ಕುಲಮದದಲ್ಲಿ ನಿಷ್ಠೆಯಿಲ್ಲ, ಛಲಮದದಲ್ಲಿ ನಿಷ್ಠೆಯಿಲ್ಲ,
ಧನಮದದಲ್ಲಿ ನಿಷ್ಠೆಯಿಲ್ಲ, ರೂಪುಮದದಲ್ಲಿ ನಿಷ್ಠೆಯಿಲ್ಲ,
ಯೌವನಮದದಲ್ಲಿ ನಿಷ್ಠೆಯಿಲ್ಲ, ವಿದ್ಯಾಮದದಲ್ಲಿ ನಿಷ್ಠೆಯಿಲ್ಲ,
ರಾಜಮದದಲ್ಲಿ ನಿಷ್ಠೆಯಿಲ್ಲ, ತಪಮದದಲ್ಲಿ ನಿಷ್ಠೆಯಿಲ್ಲ.
ಮತ್ತೆ ಹಿಡಿತ ಬಿಡಿತಗಳಲ್ಲಿ ನಿಷ್ಠೆಯಿಲ್ಲದೆ ಪಡೆದು ಹಿಡಿದು
ಬಂದ ನಿಷ್ಠೆ ನಿಜಮಹೇಶ್ವರನೆಂದರೆ ಅಪಹಾಸ್ಯ ಕುರುಹಿನೊಳಗೆ ಇಂತಲ್ಲ ಶರಣ
ಅಷ್ಟಮದ ನಿಷ್ಠೆ ನಿಜೇಷ್ಟಲಿಂಗಸನ್ನಿಹಿತ
ಗುರುನಿರಂಜನ ಚನ್ನಬಸವಲಿಂಗದಲ್ಲಿ. ‖ ೧೦೧೯ ‖

೧೦೨೦

ಆಚಾರವೇ ಪ್ರಾಣವಾದ ಅನಿಮಿಷಲಿಂಗ ಕರಸ್ಥಲವಾದ ಅಪ್ರತಿಮ ಶರಣಂಗೆ
ಮಾಯಾಮೋಹ ವಿಷಯಗತಿ ಸುಖಪ್ರಾಣವಾದ,
ಜೀವಭಾವಸ್ವರೂಪ ನಿಲವಾದ ಭ್ರಮಿತ ನರ ಸರಿಯಪ್ಪನೆ ?
ಮತ್ತೆ ಸರಿಯೆಂದರೆ ದೊರೆನರಕ ತಪ್ಪದು
ಗುರುನಿರಂಜನ ಚನ್ನಬಸವಲಿಂಗಾ. ‖ ೧೦೨೦ ‖

೧೦೨೧

ಅಂತರಂಗವನರಿಯದ ಬಹಿರಂಗ, ಬಹಿರಂಗವನರಿಯದ ಅಂತರಂಗ,
ಈ ನಡೆ ನಿಲುವುಗಳನು ಜರಿದು ನಿಂದ ಅಂತರಬಾಹ್ಯ
ಬಾಹ್ಯಾಂತರಸಂಧಾನಸಂಪನ್ನಶರಣಂಗೆ ಸರಿಯೆನ್ನಬಹುದೇ ನರರುಗಳ ?

ಒಳಗೆಂಬುದನರಿಯರು, ಹೊರಗೆಂಬುದನರಿಯರು,
ಏನು ಏನು ಏನುವನರಿಯದ ಹೀನ ಹೀನ ಹೀನ ಪಾತಕರ
ತರಲಾಗದು ಗುರುಲಿಂಗಸಂಬಂಧೈಶ್ವರ್ಯದ ಮುಂದೆ ಶಿವಜ್ಞಾನಿಗಳು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೧೦೨೧ ॥

೧೦೨೨

ಲಿಂಗಸಾಕ್ಷಿ ಲಿಂಗಸ್ವಾಯತ ಲಿಂಗಾನಂದ ಶರಣಂಗೆ
ಭಂಗಭರಿತ ಸಂಕಲ್ಪನಿರುತ ಸದ್ಭಾವರಹಿತ ಪರಾವಲಂಬ
ಪೂರ್ಣಹುಸಿ ಲಾಂಛನಪ್ರಾಣಿ ಸರಿಯಪ್ಪನೆ ?
ಮತ್ತೆಂತೆಂದೊಡೆ, ಮನೆಗೆಪ್ಪ ಮಂಡಲಿಕರಗೆಪ್ಪ
ಹೆಚ್ಚೆತಪ್ಪುಕರಸೊದ್ದು ನೂಕಿದನತ್ತ
ಗುರುನಿರಂಜನ ಚನ್ನಬಸವಲಿಂಗಕ್ಕಿತ್ತ ನಿಜಮಹೇಶ್ವರ ತಾನಾಗಿ. ॥ ೧೦೨೨ ॥

೧೦೨೩

ತನುವಿನಂತೆ ತನು, ಮನದಂತೆ ಮನ, ಪ್ರಾಣದಂತೆ ಪ್ರಾಣ,
ಭಾವದಂತೆ ಭಾವ, ನಡೆಯಂತೆ ನಡೆ, ನುಡಿಯಂತೆ ನುಡಿ,
ಹೇಗೆ ಇರ್ದಂತೆ ಹಾಗೆ ಇರ್ದು ನಾವು ಆದಿಯಿಂದೆ ಅನಾದಿಯ ಕಂಡೆವು.
ಅನುಪಮ ಗತಿಮತಿಗಳೆಂಬ ನುಡಿ ನಿಮ್ಮನು ತೊರೆಯದಿಹವೆ ?
ಕಿಚ್ಚಿನೊಳಗಿಕ್ಕದಿಹವೆ ? ಪಿಶಾಚಿಯ ಮಾಡದಿಹವೆ ?
ಭ್ರಮಣಗೊಳಿಸದಿಹವೆ ? ದುರ್ಗತಿಗಿಕ್ಕದಿಹವೆ ? ನಾಲಿಗೆಯ ಸೀಳದಿಹವೆ ?
ನುಡಿದಂತೆ ಹಿಡಿದು ನಡೆವರೆ ಶರಣರೆಂಬೆ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೧೦೨೩ ॥

**ಶರಣಸ್ಥಲದ ಉಳಿದ ವಚನಗಳು**

೧೦೨೪

ತಾಮಸಗೊಂಡು ತಾಪತ್ರಯದಲ್ಲಿ ಬೆಂದು
ಹುಸಿರೂಹಿನಲ್ಲಿ ಹೊಡೆದಾಡುತಿರ್ದ ಪ್ರಾಣಿಗಳು
ಮೃಡಸಂಗಗೊಂಡಮಹಿಮರ ಘನತೆಯ ನೋಡಿ ಕೇಳಿ
ತಾವಾದೆವೆಂಬ ತರಳನುಡಿ ಮನಗೊಂಡು
ಗುರುವೆಂದು ಲಿಂಗವೆಂದು ಜಂಗಮವೆಂದು ಪಾದೋದಕಪ್ರಸಾದವೆಂದು
ಪಂಚಾಚಾರ ಪ್ರಮಾಣವಿಡಿದು ವಂಚನೆಪ್ಪೆದಿ ಸಂಚಿತಪ್ರಾಪ್ತಿಯನರಿಮು
ಆಗಾಮಿಯಿಂದೆ ಅಂತಕನಾಳಿನ ಕೈವಶ ಕಡೆಗಾಣದಿಪ್ಪರಿಗೆ ಜಾಣಪದವೆಲ್ಲಿಹದೊ
ಗುರುನಿರಂಜನ ಚನ್ನಬಸವಲಿಂಗಾ ! ॥ ೧೦೨೪ ॥

೧೦೨೫

ಹೊಡೆಗೆಡದಧೋಗತಿಗೊಂಡು ಅಸ್ವತವಸರಕ್ಕಾಯತವಾದ
ವೃಷೀಕಂಗಳ ಸ್ವಾಯತವಾಗಿ,
ನಿಜನಿಯತ ಚರಿತೆಯ ಸಾರಾಯವ ನೋಡಲಗಣಿತ ಕಾಣಾ,
ಮಾಡಲಮ್ಮೆ ನೋಡಾ.
ಹಿಡಿತಿಗೆ ಬಿಡಿತ ಮುಂದುಗೊಂಡಿಪ್ಪುದು,
ಬಿಡಿತಿಗೆ ಬಂಧನ ಮುಂದುಗೊಂಡಿಪ್ಪುದು,
ಬಂಧನಕ್ಕೆ ಭವರಾಟಣ ನಿಜವಾಗಿಪ್ಪುದು,
ಗುರುನಿರಂಜನ ಚನ್ನಬಸವಲಿಂಗಾ ನೀವು ಸಾಕ್ಷಿಯಾಗಿಪ್ಪಿರಿ. ॥ ೧೦೨೫ ॥

೧೦೨೬

ನೋಟಕ್ಕೆ ನಿಲುಕದ ಮಾಟಕ್ಕೆ ಸಮನಿಸದ ಕೂಟಕ್ಕೆ ಕಾಣಿಸದ
ಸಾಕ್ಷಿಸಭೆಗಳರಿಯದ ನಿರವಯ ಬ್ರಹ್ಮವನು
ಕರ ಮನ ಭಾವದಲ್ಲಿ ತರಹರಮಾಡಲಾರಳವಲ್ಲ ನೋಡಾ,
ಮಹಾಘನ ಮಹಾಮಹಿಮರಿಗಲ್ಲದೆ.
ಭಾವ ಬತ್ತಲೆಯಾಗಿ ಪ್ರಾಣನ ಗೊತ್ತುತಪ್ಪಿ,
ಮನದ ಕತ್ತಲೆ ಹರಿದು ತನು ನಿರ್ಮಲವಾಗಿ
ನಡೆ ನುಡಿ ಶುದ್ಧವಾದ ಸುಪ್ರಭಾನಿಲವಿಂಗೆ
ಸ್ವಯವಾಗಿಪ್ಪ ನೋಡಾ ನಮ್ಮ ಗುರುನಿರಂಜನ ಚನ್ನಬಸವಲಿಂಗವು. ॥೧೦೨೬॥

೧೦೨೭

ಅವರ್ಣದಾಗಿಂಗೆ ವರ್ಣದಪರಿವಿಡಿಯಿಂದೆ ಅರಿಯಲುಂಟೆ ?
ರೂಪಿಂಗೆ ರೂಪಲ್ಲದೆ ಸಯವಲ್ಲ, ನಿರೂಪಿಂಗೆ ನಿರೂಪವೇ ಸಯವಯ್ಯಾ.
ಕಾಣಬಾರದುದ ಕಂಡುಹಿಡಿವರಾರು ನೋಡಾ ಮೂರುಲೋಕದೊಳಗೆ ?
ಮಾರಾರಿ ಮಹಿಮರು ನಿಮ್ಮ ಶರಣರಿಗಲ್ಲದೆ ಅರಿಯಬಾರದು,
ಗುರುನಿರಂಜನ ಚನ್ನಬಸವಲಿಂಗವನು, ಕುರುಹಳಿದು ಕಾಣಾ. ॥ ೧೦೨೭ ॥

೧೦೨೮

ಶ್ವಾನ ಬೊಗಳುವುದೇ ಸುಳುಹುಕಾಣದೆ ?
ಅಳಿದುಳಿದು ಗುರುವಿನಿಂದುದಿಸಿಬಂದೆವೆಂದು ನುಡಿದು
ಬಂದ ಬಳಿಕ ನುಡಿನಡೆಯೊಳೊಪ್ಪಿ ಕಾಣಿಸಿಕೊಳ್ಳಬೇಕಲ್ಲದೆ
ತಮದ ಮರೆಯಲ್ಲಿ ಮಡುಗಿ ಇತರರ ಗುಣವನರಸಿ ತಂದು ಆಡುವರು.

ಅದಲ್ಲದೆ ಕಾಣದೆ ಕಂಡೆವೆಂದು ಹುಸಿ ನೇವರಿಸಿ ನುಡಿವ ಕಸಮೂಳರ ಕೆಡಹಿ
ಬಸುರಲ್ಲಿ ಮಲವ ತುಂಬುವರು ಕಾಲನವರು.
ಈ ಶ್ವಾನನ ಬೊಗಳಿಕೆಗೆ ಕಡೆಯಾದ ಕರ್ಮಿಗಳ ನೆನೆಯಲಾಗದು
ಕಾಲತ್ರಯದಲ್ಲಿ ಕಂಡ ಮಹಿಮರು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. ॥ ೧೦೨೮ ॥

೧೦೨೯

ಬಚ್ಚಲದ ತಂಪಿನಲ್ಲಿ ಬಿದ್ದು ಸುಖಿಸುವ ಸೂಕರ
ಸುಗಂಧಪಂಕದ ಸುಸೌಖ್ಯವ ಸುಖಿಸಲೇನು ಬಲ್ಲುದು ಹೇಳಾ.
ಮಲತ್ರಯದ ಗೊಜ್ಜಿನ ತಂಪುಗೊಂಡ ಮಾನವ
ಲಿಂಗತ್ರಯವೆರೆದ ಸುಖಾನುಭಾವದ್ವಾಸನೆಯೆಂಬ ಪರಮಶಾಂತ
ಪರಿಣಾಮವನವನೆತ್ತ ಬಲ್ಲ ಹೇಳಾ.
ಅರಿದವರರಿಯಬಾರದು ಗುರುನಿರಂಜನ ಚನ್ನಬಸವಲಿಂಗ ನಿಮ್ಮನು. ॥೧೦೨೯॥

೧೦೩೦

ದುರ್ಜನ ರಾಜ ತನ್ನ ದೋಷವನೊಳಕೊಂಡು ತಾನೇ ತೋರುವಂತೆ,
ಜೀವನಿಗುಪದೇಶವನಿತ್ತಡೆ ಚರಿತೆಯೊಳು ಸಮಯಕ್ಕೆ
ನೀಚಾಶ್ರಯವೆ ತೋರುತ್ತಿಹುದು.
ಅದು ಕಾರಣ, ಪ್ರಕೃತಿಭಾವಿಗೆ ಅನುಗ್ರಹ ಸಲ್ಲದು
ಗುರುನಿರಂಜನ ಚನ್ನಬಸವಲಿಂಗಾ. ॥ ೧೦೩೦ ॥

೧೦೩೧

ಜ್ಞಾನವಿಕೃತಭಾವವುಳ್ಳರೆ ಪ್ರಕಾಶತ್ವ ಶೂನ್ಯವಾಗಿಹುದು;
ಅಲ್ಲಿ ಸ್ವಯಜಂಗಮವೆನಲಿಲ್ಲ.
ವರ್ತನವಿಕೃತಭಾವವುಳ್ಳರೆ ಪ್ರಮೋದತ್ವ ಪ್ರವರ್ತನತ್ವ ನಾಸ್ತಿಯಾಗಿಹುದು;
ಅಲ್ಲಿ ಚರಜಂಗಮವೆನಲಿಲ್ಲ.
ಮೋಹನವಿಕೃತಭಾವವುಳ್ಳರೆ ಪ್ರಮೋದತ್ವ ವಿರಹಿತವಾಗಿಹುದು;
ಅಲ್ಲಿ ಪರಜಂಗಮವೆನಲಿಲ್ಲ.
ಇದು ಕಾರಣ ತ್ರಿವಿಧವಿರ್ಮ ತ್ರಿವಿಧನಾಸ್ತಿಯಾದಲ್ಲಿ
ತ್ರಿವಿಧನುಗ್ರಹ ಮಾಡಿದರೆ ತ್ರಿವಿಧ ದ್ರೋಹತಪ್ಪದು,
ಗುರುನಿರಂಜನ ಚನ್ನಬಸವಲಿಂಗಕ್ಕೆ ನೀಡಬೇಕಾದರೆ
ಅರಸಿ ಕಂಡು ಮಾಡಬೇಕು, ಸ್ಥಲಕ್ಕೆ ಸನುಮತ. ॥ ೧೦೩೧ ॥

೧೦೩೨

ಬರಿಕೋಟಲೆ ಓರಿದುಳ್ಳ ಹೆಸರುವಂತರಿಗೆ
ಪರಿದುಮಾಡುವ ಉಪದೇಶವು ಪರಿವಿಡಿಯಲೆಳತಟಕ್ಕೆಳಸುವುದು,
ಮಾಡಲಾಗದು ಜ್ಞಾನಿಗಳು. ನೋಡಿಕೊಳ್ಳಲಾಗದು ತನುಮನಧನವ.
ಅದೇನುಕಾರಣವೆಂದೊಡೆ,
ಹಾಲನೆರೆದು ಹಾವಿನ ಬಾಲವ ಪಿಡಿದಾಡುವ ಮರುಳನಂತೆ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೧೦೩೨ ॥

೧೦೩೩

ಕೊಳ್ಳುವಲ್ಲಿ ಒಂದು ಭಾವ, ಹಿಡಿದು ಬಂದಲ್ಲಿ ಒಂದು ಭಾವ,
ನಡೆವಲ್ಲಿ ಒಂದು ಭಾವ, ಹೂಸರೊಳ್ಳೆಯ ತೆರನಿಪ್ಪ ಬಗೆಯನರಿಯದೆ
ಆಸೆವಿಡಿದಾಡಿದರೆ ದ್ವಂದ್ವಪಾಶ ಹಿಂಗದು.
ಅದೆಂತೆಂದೊಡೆ, ಕಾಣದೆ ಕಂಡು ಮಾಡುವುದು
ಗುರುನಿರಂಜನ ಚನ್ನಬಸವಲಿಂಗದಲ್ಲಿ
ಕಾಯಗಾಣದ ಗುರುವಾಗಬೇಕಾದಡೆ. ॥ ೧೦೩೩ ॥

೧೦೩೪

ಮುನ್ನೂರು ಮುನ್ನೂರು ಮುನ್ನೂರು ವಾಸನೆಯನಳಿದುಳಿದ
ವಾಸನೆಯ ಲತೆಗಳೊಳ್ಬೆಳೆದ
ಅತಿಶಯಾನಂದರೂಪವನರಿಯಲಾರಳವಲ್ಲ ನೋಡಾ.
ಭೂಚರರರಿಯರು ಖೇಚರರರಿಯರು ಪೆರ್ಚಲದಾಶ್ರಯವಗೊಂಡಾಯಸವನುಂಬ
ಅರೆಮರುಳರಂತಿರಲಿ ಧರೆಯೊಳಿಪ್ಪ ನರರೆತ್ತ ಬಲ್ಲರು ಹೇಳಾ !
ನಿಮ್ಮ ಶರಣರ ಘನವ ಗುರುನಿರಂಜನ ಚನ್ನಬಸವಲಿಂಗಾ. ॥ ೧೦೩೪ ॥

೧೦೩೫

ಪೈರವಿಲ್ಲದ ಭೂಮಿಯ ಕಂಡು ಕೌಲವಿಡಿದನೊಬ್ಬ ಹಲಾಯುಧನು.
ಮೂರುತಾಳಿನ ಕೂರಿಗೆಯ ಹೂಡಿ ಬಿತ್ತಲು ಫಲವಂದಂಕುರಿಸಿ ಫಲವಾಗಲು,
ನೋಡಿ ಆಡಿ ಪರಿಣಾಮಿಸಿದ ಲೀಲೆಯ ಕುರುಹಿಂಗೆ ಮತ್ತೆ ಕುರುಹು ಕಾಣಬಾರದು.
ಸುತ್ತಿದ ಸುಯಿಧಾನವಲತೆ ತೋರದು ಸುಪ್ರಭಾಮಯ
ಗುರುನಿರಂಜನ ಚನ್ನಬಸವಲಿಂಗ ತಾನೆ ಆದಿ ಅನಾದಿ. ॥ ೧೦೩೫ ॥

೧೦೩೬

ಸಪತಿಮತ್ಸರ ಸಗುಣದತಿಶಯದ ಗಮನ ನಿರ್ಗಮನದ ನಿಲುವಿನೊಳು ನಿಂದು
ಪರಾಪರಾನಂದದೊಬ್ಬುಳಿಯೊಳೊಡವೆರೆದಾಡುತ್ತ
ಗಮನಾಗಮನಗತಿಗಳಿಗತೀತವಾದಪ್ರತಿಮ
ಶರಣರಸಂತಿಂತೆಂದುಪಮಿಸಲಾರು ಬಲ್ಲರು ಹೇಳಾ !
ಧರೆ ಜಲಾಗ್ನಿ ಮರುತಾಂಬರುಳ್ಳನ್ನಕ್ಕರ
ಗುರುನಿರಂಜನ ಚನ್ನಬಸವಲಿಂಗಾ. || ೧೦೩೬ ||

೧೦೩೭

ಅವನಿ ಮಡದಿಯಾದಂದು, ಅವ ಎನ್ನ ಕೈಗೆ ಬಂದಂದು,
ಆ ಸಡಗರದಿಂದಡಗಿದ ಸುಖವ ಹೇಳಲಾರೆ ಕಾಣಮ್ಮ.
ಅಪ್ಪು ಸತಿಯಾದಂದು, ಅವ ಎನ್ನ ಕೈಗೆ ಬಂದಂದು,
ಆ ಸೌಖ್ಯದೊಳೊಂದಿದ ಸುಖವ ಹೇಳಲಾರೆ ಕಾಣಮ್ಮ.
ಪಾವಕ ನಾರಿಯಾದಂದು, ಅವ ಎನ್ನ ಕೈಗೆ ಬಂದಂದು,
ಆ ಅವಧಾನವೆರೆದ ಸರಸವನು ಹೇಳಲಾರೆ ಕಾಣಮ್ಮ.
ಮರುತ ಸ್ತ್ರೀಯಾದಂದು, ಅವ ಎನ್ನ ಕೈಗೆ ಬಂದಂದು,
ಆ ಸೊಂಪಿನೊಳಗಿರ್ದ ಸುಖವ ಹೇಳಲಾರೆ ಕಾಣಮ್ಮ.
ಗಗನವೆಣ್ಣಾದಂದು, ಅವ ಎನ್ನ ಕೈಗೆ ಬಂದಂದು,
ನಿನ್ನಿಂದ ನಿರ್ಮಲಾನಂದ ಸಮರಸದೊಳಗಿರ್ದ
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ ಕಾಣಮ್ಮ. || ೧೦೩೭ ||

೧೦೩೮

ಊರೊಳಗಿನ ಬೆಂಕಿ ಅಬ್ಬರಿಸಿ ಆವರಿಸಿದಲ್ಲಿ
ಒಬ್ಬರೂ ಮುಖವಂತರಿಲ್ಲ ನೋಡಾ.
ಊರಡವಿವೊಂದಾಗಿ ಉರಿಯುತ್ತಿರಲು ವ್ಯಾಘ್ರನ ಪ್ರಾಯವಳಿಯದು ನೋಡಾ.
ಮೂರು ದೊರೆಗಳು ಮುಂತಾದ ಸಕಲರ ಸಂಬಂಧವ ನೋಡಾ.
ಇದನೊಂದು ಮುಖದಲ್ಲಿ ನೋಡಲು ಹೊರಗಣ ಬೆಂಕಿ ಒಳಗೆದ್ದು ಉರಿವಲ್ಲಿ
ಹೊಳಪಗೆಡಿಸಿ ಒಳಹೊರಗೆ ತಾನಲ್ಲದೆ ನೆಳಲಿಲ್ಲದ ಸುಖರೂಪ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. || ೧೦೩೮ ||

೧೦೩೯

ಸುಖವೆಂದಲ್ಲಿ ದುಃಖದೊಳಗಿನಿರವು, ದುಃಖವೆಂದಲ್ಲಿ ಸುಖದೊಳಗಿನಿರವು,
ಸುಖದುಃಖವೆಂದಲ್ಲಿ ಸವೆಯದ ಸಾಗರದ ಗುಂಪು.

ಸುಖದುಃಖವನರಿಯದಿರವು
ಗುರುನಿರಂಜನ ಚನ್ನಬಸವಲಿಂಗ ತಾನಾದ ಶರಣ. ॥ ೧೦೩೯ ॥

೧೦೪೦

ವಿಶ್ವನ ಕಾರ್ಯವ ಕೆಡಿಸಿ ಕಂಡಲ್ಲಿ ತೈಜಸನ ಕಾರ್ಯಕಳವಳ ಕಡೆಗಾಯಿತ್ತು.
ಪ್ರಾಜ್ಞನ ಪರಿಣಾಮ ನಿಜ ಪರಿಣಾಮದ ನಿಲವು ನಿಜವಾದಲ್ಲಿ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. ॥ ೧೦೪೦ ॥

೧೦೪೧

ಅಭ್ರ ಜಂಜಡವಳಿದುಳಿದ ಆಕಾಶದಲ್ಲಿಪ್ಪ
ಸೂರ್ಯನ ಪ್ರಕಾಶ ಪರಿಪೂರ್ಣವಾಗಿಪ್ಪುದು.
ಮಿಥ್ಯ ಸಂಸಾರದ ಮೊತ್ತವನಳಿದುಳಿದನಂತಪ್ರಕಾಶ
ಸರ್ವತೋಃ ಪರಿಪೂರ್ಣವಾಗಿ ಕಾಣಿಸಿಕೊಳ್ಳುತಿಪ್ಪುದು
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೧೦೪೧ ॥

೧೦೪೨

ಅರೆಮರುಳಿನಿಂದಾದ ಕುರುಹಿಂಗೆ ನೆರೆಮರುಳಾಗಿ ನರಳಿತ್ತು
ಮೂರುಲೋಕವೆಲ್ಲ.
ಸಿರಿವಲ್ಲಭ ಶಿರಹೀನ ಕರಶೂಲರಾದಿ ಸರ್ವರು ಕರ್ಮಕ್ಕೊಳಗಾದರು.
ಪರಿಪರಿಯ ಪರಿಗಳನರಿಯದೆ ಹಿರಿದೆಂದರಿದಲ್ಲಿ
ಪರಮ ಗುರುನಿರಂಜನ ಚನ್ನಬಸವಲಿಂಗವ
ನೆರೆದುನೆರೆಯದಂತಿರ್ದ ಶರಣ. ॥ ೧೦೪೨ ॥

೧೦೪೩

ದಂಡೆ ತೊಂಡಲವ ಕಟ್ಟಿ, ಮೆರೆವ ಮುತ್ತೈದೆಯಾಗಿ,
ಹಸೆಯಮೇಲಣ ಮಾತ ಹುಸಿಯದೆ,
ಕಸ ಮೂರರ ಹಸಿಗೆಯ ಬಸಿಗೆ ಸಿಲ್ಕದೆ,
ಭಾವಾಭಾವವಳಿದುಳಿದ ಭಾವಭರಿತನಾಗಿರ್ದುದೆ,
ಪರಮ ನಿರ್ವಾಣಪದಾಸ್ಪದ ಶರಣ ತಾನೆ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೧೦೪೩ ॥

೧೦೪೪

ತನ್ನನರಿದು ಹಿಡಿದು ಬಂದ ಶರಣ
ಎಂಟರಲ್ಲಿ ನಿಂದು, ಏಳರಲ್ಲಿ ನಡೆದು,

ಒಂದರಲ್ಲಿ ನಿಂದು, ಎಂಟರಲ್ಲಿ ನಡೆದು,
ಒಂದರಲ್ಲಿ ನಿಂದು, ಆರರಲ್ಲಿ ನಡೆದು,
ಒಂದರಲ್ಲಿ ನಿಂದು, ನಾಲ್ಕರಲ್ಲಿ ನಡೆದು,
ಒಂದರಲ್ಲಿ ನಿಂದು ಮೂರರಲ್ಲಿ ನಡೆದು
ಒಂದರಲ್ಲಿ ನಿಂದು, ಮೂರರಲ್ಲಿ ನಡೆದುಡುಗಿದ ಮತ್ತೆ
ಒಂಬತ್ತರಲ್ಲಿ ತನುಮನಭಾವವೆರೆದು ಬಂದು,
ಮತ್ತೊಂಬತ್ತರಲ್ಲಿ ತನುಮನಭಾವವೆರೆದು ಬಂದು,
ಮತ್ತೊಂಬತ್ತರಲ್ಲಿ ತನುಮನಭಾವವೆರೆದು ಬಂದು,
ಮತ್ತೊಂಬತ್ತರಲ್ಲಿ ತನುಮನಭಾವವೆರೆದು ಬಂದು,
ಮತ್ತೊಂಬತ್ತರಲ್ಲಿ ತನುಮನಭಾವವೆರೆದು ಬಂದು,
ಮತ್ತೊಂಬತ್ತರಲ್ಲಿ ತನುಮನಭಾವವೆರೆದು ಬಂದು,
ಮತ್ತೊಂಬತ್ತರಲ್ಲಿ ತನುಮನಭಾವವೆರೆದು ಬಂದು,
ಮತ್ತೆ ಮೂರರಲ್ಲಿ ತನುಮನಭಾವವೆರೆದು ನಿಂದ ಮಹಿಮಂಗೆ
ಗುರುನಿರಂಜನ ಚನ್ನಬಸವಲಿಂಗ ಕರತಳಾಮಳಕ ಕಡೆಗಿಲ್ಲ. ॥ ೧೦೪೪ ॥

೧೦೪೫

ಕದಳಿಯ ಫಲದಂತೆ ಪ್ರಣವವೃಕ್ಷಾಂಕಜಿಹ್ವೆಯಿಂದುಲಿವುದೊಂದೆ ಶಿವನುಡಿ.
ಇದರಿಂದ ವಿಹೀನ ಫಲವು ಮಾತೇನ ಬಾತೆ ?
ತಥ್ಯವಿರಹಿತ ಬಾಳಲಿಲ್ಲ ಶರಣ
ಗುರುನಿರಂಜನ ಚನ್ನಬಸವಲಿಂಗವಿಡಿದು. ॥ ೧೦೪೫ ॥

೧೦೪೬

ಶರಣ ತನ್ನ ಮುಂದಣಾಚಾರಕ್ಕೆ ಹಿಂದಣ ಸಂದಣೆಯ ನೇವರಿಸಿ ತಂದು,
ಗಂಭೀರಗತಿಮತಿಯೊಳ್ವೆರಸಿ, ಅತಿ ರಹಸ್ಯದನುವಿನೊಳೆರಕವಾದ,
ನಿರುಪಮ ನಿಜಾನಂದದ ನಿಲುವಿಗೆ
ಆನು ಆನಂದದನುಕೂಲದವಸರಕ್ಕಡಿಯಿಡಲೆಡೆಯುಂಟೆ ?
ಮಡದಿ ಪುರುಷರ ಮಾತು ಮಥನ ಘಾತದೊಳಗಿಲ್ಲದಿರ್ದನು,
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣ ಅನುಪಮ ಚಾರಿತ್ರನು. ॥ ೧೦೪೬ ॥

೧೦೪೭

ಮೂರು ಸುತ್ತಿನಕೋಟೆಯ ನಟ್ಟನಡುಮಧ್ಯ
ಸಡಗರದ ಮನೆಯೊಳಗಿಪ್ಪನೊಬ್ಬ ಶಿವಯೋಗಿ.

ಆ ಶಿವಯೋಗಿ ಮೊದಲ ಗಂಡನ ಸಂಭೋಗಸವಿಯಲ್ಲಿ
ಬಂದಸೆನ್ನ ಕಣ್ಣ ಮುಂದೆ.
ಮೊದಲ ಗಂಡನಕೊಂದು ಅವಗೆ ಮಡದಿಯಾದುದು
ಮೂರುಲೋಕವೆಲ್ಲ ಬಲ್ಲುದು ನೋಡಾ.
ಹಲವು ಬಗೆಯಿಂದೆ ಹಲವು ಗಂಡರ ಸಂಗವ
ಸಲಿಸಲಿದು ಮಾಡಿದರೆ ಗೆಲುವಾಯಿತ್ತು ಎನ್ನ ಗಂಡಂಗೆ.
ನಿತ್ಯ ಮುತ್ತೈದೆ ನಿಜವಾದೆ ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೧೦೪೭॥

೧೦೪೮

ಕಲ್ಲೊಳಗಣ ಬೆಂಕಿ ಕಾರ್ಯವನುಳಿದು ಕಾಣದು,
ಕಾಷ್ಠದೊಳಗಿನ ಬೆಂಕಿ ಸೋಂಕದರಿಯದು,
ಬೀಜದೊಳಗಣ ಕುರುಹು ಜಲ ಮೃತ್ತಿಕೆಯನುಳಿದು ತೋರದು.
ಅದು ಕಾರಣ, ಶರಣನೊಳಗಣ ನುಡಿ ತನ್ನ ಅನುನುಡಿಗಳನುಳಿದು ತೋರದು.
ಗುರುನಿರಂಜನ ಚನ್ನಬಸವಲಿಂಗದಲ್ಲಿ ಶಬ್ದಸೂತಕಿಯಲ್ಲದ ಕಾರಣ. ॥೧೦೪೮॥

೧೦೪೯

ನುಡಿವನಯ್ಯಾ ಶರಣನು ತನ್ನಡಿಗೆರಗಿ ನಿಂದ ನಿರ್ಮಲರಿಗೊಲಿದು.
ನುಡಿವನಯ್ಯಾ ಶರಣನು ಭಕ್ತಿತ್ರಯದ ಯುಕ್ತರ ಕೂಡಿ.
ನುಡಿವನಯ್ಯಾ ಶರಣನು ಮಹಾನುಭಾವರ ಪ್ರಸಂಗಕ್ಕೆ ಅಭಿನ್ನಮುಖದಿಂದೆ.
ನುಡಿವನಯ್ಯಾ ಶರಣನು ಗುರುನಿರಂಜನ ಚನ್ನಬಸವಲಿಂಗ ತಾನಾಗಿ. ॥೧೦೪೯॥

೧೦೫೦

ನುಡಿಯಲಮ್ಮೆನಯ್ಯಾ ಹುಸಿಗಲತ ಕುಶಲಗಳ
ಗುರುಪ್ರಸಾದವಾವರಿಸಿದ ಜಿಹ್ವೆಯಾದ ಕಾರಣ.
ನುಡಿಯಲಮ್ಮೆನಯ್ಯಾ ದ್ವೈತಾದ್ವೈತ ಸಂವಾದ ಸರವನು
ಸಮರಸಾನುಭಾವವಾವರಿಸಿದ ಜಿಹ್ವೆಯಾದ ಕಾರಣ.
ನುಡಿಯಲಮ್ಮೆನಯ್ಯಾ ನಾನು ನೀನೆಂಬ ನಾಣನುಡಿಯನು
ಗುರುನಿರಂಜನ ಚನ್ನಬಸವಲಿಂಗವೇ ತಾನೆಂಬ ನುಡಿಯ ನುಂಗಿ ನಿಂದ
ನಿರಾವಲಂಬ ಜಿಹ್ವೆಯಾದ ಕಾರಣ. ॥ ೧೦೫೦ ॥

೧೦೫೧

ಲೀಲೆಯ ನೇಮಕ್ಕೆ ಹುಟ್ಟಿ ಬೆಳೆದು ಅಳಿಯ ಬಂದಾಣತಿಗೆ
ಕಟ್ಟಳೆಯ ಕಡೆಗಿಡದೆ ಕಾಣಬೇಕು.

ಹುಟ್ಟಿದೆನೆನಬಾರದು ಬೆಳೆದೆನೆನಬಾರದು
ಅಳಿದೆನೆನಬಾರದು, ಅದೇ ಕೊರತೆ ನೋಡಾ.
ಅನುಪಮ ನಾಮಕ್ಕೆ ಗುರುನಿರಂಜನ ಚನ್ನಬಸವಲಿಂಗ
ತಾನಾದ ಶರಣ ಅರಿದರಿದಾಡುತಿರ್ದ. || ೧೦೫೧ ||

೧೦೫೨

ನಿರಂಜನ ನಿತ್ಯಾನಂದ ಶರಣ ತಾನು ರಂಜನೆಯ ರಮ್ಯಭಾವಿಯಲ್ಲ.
ಅದೇಕೆಂದಡೆ, ಮುತ್ತಿನ ರಾಶಿಯ ಮೇಲಿರ್ದು
ಮೃತ್ತಿಕೆಯ ಮಣಿಗೊಳಿಸಿ ಮಾರುವ ಮರುಳನಂತೆ,
ತಥ್ಯ ಮಿಥ್ಯ ರೂಪನಲ್ಲ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಭಾಷೆ ಬಲವಂತ. || ೧೦೫೨ ||

೧೦೫೩

ಅಗಮ್ಯ ಗತಿಭಾವಿ, ಅನುಪಮ ಮತಿಯುಕ್ತ,
ತನುಪ್ರಾಣಸಂಬಂಧಿ ತಾನಾದ ಶರಣಂಗೆ,
ತನುವಿನ ತರಹರವ ತರಲಿಲ್ಲ, ಮನದ ಮಗ್ನತೆಯನರಿಯಲಿಲ್ಲ,
ಪ್ರಾಣದ ಹೊಲೆಯ ಕಾಣಲಿಲ್ಲ.
ಭಾವ ನಿರ್ಭಾವ ನಿರಾವಲಂಬಿ
ಗುರುನಿರಂಜನ ಚನ್ನಬಸವಲಿಂಗಕ್ಕಂಗವೆಂಬಲ್ಲಿ. || ೧೦೫೩ ||

೧೦೫೪

ಹುಟ್ಟಿದ ಮನೆಯ ನೆಟ್ಟನೆ ಹಿಡಿದೆಯ್ದಬಲ್ಲರೆ ಶರಣ.
ಬಾಳಿ ಬದುಕುವ ಸ್ಥಲವ ಬಿಟ್ಟಳಿಸಿರದಿರಬಲ್ಲರೆ ಶರಣ.
ಹೊಂದಿಹೋಗುವ ಬಯಲವಾಸವ ಸಂದಿಸಿ ಸ್ವಯಮಾಡಿಕೊಳಬಲ್ಲರೆ ಶರಣ.
ಹುಟ್ಟಿದ ಮನೆಯ ಬಳಸದೆ ನಡೆವ ನಡೆಯ ತುಳಿಯದೆ
ಅಳಿವ ಅಳುಕಿಂಗಾಗದಿರ್ದಡಾತ ಸತ್ಯಶರಣ ಸಹಜ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೧೦೫೪ ||

೧೦೫೫

ಕಂಡ ಕುರುಹು ಕಾಣಿಕೆ ಮಾತ್ರಕ್ಕೆ ಅತಿರಮ್ಯವಲ್ಲದೆ ಆಗಬಾರದು.
ಪೂಜಕಂಗೆ ಪುಣ್ಯದ ನೆರವಿಯಲ್ಲದೆ ಆಗಬಾರದು.
ಅದು ಕಾರಣ ಕಾಣಲಿಲ್ಲ ಮಾಡಲಿಲ್ಲ ಕಲ್ಪಿತ,
ಕಲ್ಪಿತ ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. || ೧೦೫೫ ||

೧೦೫೬

ಓಡಿದು ಬಳಸುವನಲ್ಲ ಬಿಟ್ಟು ನಡೆವನಲ್ಲ.
ಕುಂಟಕುರುಡರ ಸಂಟುತನದವನಲ್ಲ.
ಎಂಟರಲ್ಲಿ ನಿಂದು ಎಂಟೆಂಬ ತುಂಟನಲ್ಲ.
ಪಂಚರತಿ ಪ್ರಾಣವೇದಿ ಪಂಚಾರತಿ ಬೆಳಗ ಕಳೆದವನಲ್ಲ.
ಪಂಚಗತಿಯ ಮತಿಯಿಂದೆ ಕೈಯಲ್ಲಿ ಪಿಡಿದು
ಅತಿಶಯದ ಭಾವದಿಂದೆ ಅತಿಶಯದೊಳಾನಂದಮಯ ನಿಮ್ಮ ಶರಣ
ಗುರುನಿರಂಜನ ಚನ್ನಬಸವಲಿಂಗಾ. || ೧೦೫೬ ||

೧೦೫೭

ಕೈಯಲ್ಲಿ ಕುರುಹು ಮೈಯಲ್ಲಿ ಬೂದಿ ಬಾಯಲ್ಲಿ ದೀಪ
ಸತ್ಯನಡೆವ ಸೌಭಾಗ್ಯಕ್ಕೆ ಮತ್ತೆ ಮತ್ತೆ ಶರಣೆಂದು ಬದುಕಿದೆ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೧೦೫೭ ||

೧೦೫೮

ಒಳಗಣ ಗಂಟಬಿಚ್ಚಿತಂದ ಹೊರಗಣ ವ್ಯವಹಾರಿಗಳನೇಕರುಂಟು.
ಹೊರಗಣ ಗಂಟಬಿಚ್ಚಿ ಒಳಗೊಯ್ಯು ವ್ಯವಹಾರಗೊಂಬ ಜಾಣರಾರು ಹೇಳಾ ?
ಇದು ಕಾರಣ, ನಿಮ್ಮ ಶರಣ ಒಳಹೊರಗರಿಯದೆ
ವ್ಯವಹಾರದಲ್ಲಿ ಪರವಶನಾಗಿ ಮರೆದಿರ್ದ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮೊಳಗೆ. || ೧೦೫೮ ||

೧೦೫೯

ಲೋಕಸಾಕ್ಷಿಯಾಗಿ ಮದುವೆಯಾದ ಸತಿಯು
ಲೋಕವರಿಯದಂತೆ ಪುರುಷನ ನೆರೆವಳಲ್ಲದೆ ಕಾಣಿಸಿಕೊಂಡರೆ ಮನಭಂಗ ನೋಡಾ.
ಆರಾರರಿಯದಂತೆ ಅನುಗ್ರಹ ಪಡೆದುಕೊಂಡು ಬಂದು
ಆರಾರರಿಯದಂತೆ ಅರ್ಚನೆ ಭೋಗವ ಸಲ್ಲಿಸಿಕೊಳ್ಳಬೇಕಲ್ಲದೆ
ಇತರರ್ಗಿತರ ಪೂಜಾಭೋಗವ ಕಾಣಿಸಿಕೊಂಡರೆ ಅದು ಭಂಗವಲ್ಲವೆ ನೋಡಾ !
ಆ ಭಂಗವ ಹಿಂಗಿ ಬಯಲಗೊಂಡಾತನಲ್ಲದೆ ಶರಣನಲ್ಲ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೧೦೫೯ ||

೧೦೬೦

ಕಾಣಿಸಿಕೊಳ್ಳದ ಶರಣ ಕಾಣಿಸಿಕೊಂಡಾಚರಿಸುವನೆ ?
ಕಾಣಬಾರದು ಕರ್ಮಿಗಳು, ತೋರಬಾರದು ಧರ್ಮಿಗಳು.

ಇದರಂದವನರಿದಿರ್ದಡಾತ ಸುಜ್ಞಾನಿ ಶರಣ
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೧೦೬೦ ॥

೧೦೬೧

ಬಾಲಯವ್ವನವೃದ್ಧಶೂನ್ಯ ಶರಣಂಗೆ
ಜನನ ಸ್ಥಿತಿ ಲಯವೆಂಬುದೇನು ಹೇಳಾ !
ಗಳಿಸಲಿಲ್ಲದ ಹಾಕದ ಕಳೆಯಲಿಲ್ಲದ ಅಸಲುಮುಳುಗಿದ
ಮತ್ತೆ ಬಡ್ಡಿಯ ಬರೆಯಲುಂಟೆ.
ಲೀಲೆಯಾದರೆ ಲೋಲ ಗುರುನಿರಂಜನ ಚನ್ನಬಸವಲಿಂಗಾ. ॥ ೧೦೬೧ ॥

೧೦೬೨

ಅಯ್ಯಾ, ನಿಮ್ಮ ಶರಣಂಗೆ ಜ್ಞಾನಿಯೆಂಬರೆ ತಾಮಸವಿಲ್ಲ,
ತಾಮಸಿಯೆಂಬರೆ ಜ್ಞಾನವಿಲ್ಲ.
ಜ್ಞಾನಾಜ್ಞಾನದ ಕುರುಹರಿಯದ ನಿರಂಜನನ ನಿಲುವು ಅರಿಯಬೇಕೆಂಬರಿಗಸಾಧ್ಯ ;
ಅರಿಸಿಕೊಂಬರಿಗೆ ಅನುಮಾನ, ಅರಿದೆನೆಂಬರಿಗೆ ಅತ್ತತ್ತಲಾ
ಗುರುನಿರಂಜನ ಚನ್ನಬಸವಲಿಂಗದಂಗವಾಗಿರ್ದು ನಿಜಾನಂದ. ॥ ೧೦೬೨ ॥

೧೦೬೩

ಸಂಸಾರಿಯ ಮುಂದಣ ವಿರಕ್ತಂಗೆ ಮಟವಿಲ್ಲ ಮಾನಿನಿಯಿಲ್ಲ ಕನಕದ
ಕಳೆಯಿಲ್ಲ.
ಮತ್ತೆನಲು ಮಠವುಂಟು ಮಾನಿನಿಯುಂಟು ಕನಕದ ಕಳೆಯುಂಟು
ನಮ್ಮ ಗುರುನಿರಂಜನ ಚನ್ನಬಸವಲಿಂಗಕ್ಕೆ. ॥ ೧೦೬೩ ॥

೧೦೬೪

ಸಂಸಾರವನೊಪ್ಪಿಸಿದ ನಿರ್ವಾಣಿಗೊಮ್ಮೆ ಮಠವೆಂದಲ್ಲಿ ಗುರುದ್ರೋಹ.
ಮಾನಿನಿಯೆಂದಲ್ಲಿ ಲಿಂಗದ್ರೋಹ, ಬಂಗಾರವೆಂದಲ್ಲಿ ಜಂಗಮದ್ರೋಹ.
ಎನಲಿಲ್ಲದಿರ್ದಲ್ಲಿ ಅನಿಮಿಷನಾದ ಅನುಪಮಶರಣನೆಂದರಿವುದು
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೧೦೬೪ ॥

೧೦೬೫

ಸ್ಫಟಿಕದ ಘಟದೊಳಗಿರ್ದ ಜ್ಯೋತಿಯ ಪ್ರಕಾಶವು
ಆ ಘಟವನಾವರಿಸಿ ಪರೋಪಕಾರಕ್ಕೆ ಪ್ರವರ್ತಿಸುವಂತೆ,
ಮಹಾಘನ ಗಂಭೀರ ಶರಣನ ಧವಲಾಂಗದಲ್ಲಿರ್ಪ ಜ್ಯೋತಿರ್ಮಯಲಿಂಗವು
ಅಂಗವನಾವರಿಸಿ ಮಹಾಜ್ಞಾನವನೈದಿ ದಿವ್ಯಾನುಭಾವಪ್ರಕಾಶವನು

ಸಹಜೋಪಕಾರಕ್ಕೆ ಪ್ರಭಾಮಯವಾಗಿ ಪ್ರವರ್ತಿಸುತ್ತಿಹನು
ಗುರುನಿರಂಜನ ಚನ್ನಬಸವಲಿಂಗವು. ॥ ೧೦೬೫ ॥

೧೦೬೬

ನವರತ್ನಕ್ಕೆ ಬಂಗಾರವ ತೆತ್ತಿಸಿ ಕಳಂಕರಹಿತತ್ವಚರಿತೆಯಿಂದೆ
ವ್ಯವಹಾರವ ಮಾಡಿಕೊಳ್ಳಬಲ್ಲಾತನೆ ಶರಣ.
ಕುಲಾಲ ಕೀಟಕನಂತೆ ಸಕಲಸಂಭ್ರಮದಲ್ಲಿ ತೋರಬಲ್ಲಾತನೆ ಶರಣ,
ಘನಸಾರ ಜ್ವಾಲೆ ಸಂಪರ್ಕ ಸ್ವಯವಾಗಿರಬಲ್ಲಾತನೇ ಶರಣ.
ಈ ತ್ರಿವಿಧದ ಭೇದವನರಿದು ಮರೆದಿಪ್ಪ ಮಹಾಘನವ
ಗುರುನಿರಂಜನ ಚನ್ನಬಸವಲಿಂಗದಲ್ಲಿಯೇ ಕಾಣಲಾಯಿತ್ತು. ॥ ೧೦೬೬ ॥

೧೦೬೭

ಆದಿಯ ಕುಳವನು ಆದಿ ಅನಾದಿಯಿಂದರಿದು,
ನಾದಸ್ವರೂಪವಾಗಿ ತೋರಬಲ್ಲರೆ ಶರಣ ಕಾಣಾ.
ಅನಾದಿಯ ಕುಳವನು ಆದಿ ಅನಾದಿಯಿಂದರಿದು,
ಬಿಂದುಸ್ವರೂಪವಾಗಿ ತೋರಬಲ್ಲರೆ ಶರಣ ಕಾಣಾ.
ಅತೀತ ಕುಳವನು ಆದಿ ಅನಾದಿಯಿಂದರಿದು,
ಕಳಾಸ್ವರೂಪವಾಗಿ ತೋರಬಲ್ಲರೆ ಶರಣ ಕಾಣಾ.
ಇಂತು ಆದಿ ಅನಾದಿಯಿಂದೆ ಆದಿಯನರಿದು
ಅನಾದಿ ಗುರುನಿರಂಜನ ಚನ್ನಬಸವಲಿಂಗವಾದಾತನೇ ಶರಣ ಕಾಣಾ. ॥ ೧೦೬೭॥

೧೦೬೮

ಇಕ್ಷುವಿನೊಳಗೆ ಶರ್ಕರವ ಕಾಣಬಹುದಲ್ಲದೆ,
ಶರ್ಕರದೊಳಗೆ ಇಕ್ಷುವಿನ ಕಂಡವರುಂಟೆ ?
ಕ್ಷೀರದೊಳಗೆ ಘೃತವ ಕಾಣಬಹುದಲ್ಲದೆ,
ಘೃತದೊಳಗೆ ಕ್ಷೀರವ ಕಂಡವರುಂಟೆ ?
ಶುಕ್ತಿಯೊಳಗೆ ಮೌಕ್ತಿಕವ ಕಾಣಬಹುದಲ್ಲದೆ,
ಮೌಕ್ತಿಕದೊಳಗೆ ಶುಕ್ತಿಯ ಕಂಡವರುಂಟೆ ?
ಸಂಸಾರದೊಳಗೆ ಶರಣನ ಕಾಣಬಹುದಲ್ಲದೆ,
ಶರಣನೊಳಗೆ ಸಂಸಾರವ ಕಂಡವರುಂಟೆ?
ಮೂರು ಲೋಕದೊಳಗೆ ಇಲ್ಲ ಇಲ್ಲ ಕಾಣಾ
ಗುರುನಿರಂಜನ ಚನ್ನಬಸವಲಿಂಗ ಸಂಸಾರ ಶರಣ. ॥ ೧೦೬೮ ॥

೧೦೭೯

ಕಾಷ್ಠದಿಂದುದಿಸಿದ ಪಾವಕ ತನ್ನೊಳಗೆ
ಕಾಷ್ಠದ ಕುರುಹ ತೋರಿಸಿಕೊಳ್ಳದು ನೋಡಾ.
ಜಲದಿಂದೆ ಜನಿಸಿದ ತಾವರೆಯು ತನ್ನ ಮೇಲೆ
ಪೂರ್ವವ ಕಾಣಿಸಿಕೊಳ್ಳದು ನೋಡಾ.
ಪ್ರಾಣಾಂಗದಿಂದೆ ತೋರಿದ ಲಿಂಗಶರಣನು
ಹಿಂದಣ ಪ್ರಾಣಪ್ರಕೃತಿಯ ಒಡಲೊಳಗರಸ,
ತನುಪ್ರಕೃತಿಯ ತಲೆಯಲ್ಲಿ ತೋರ, ತೋರಿದರೆ ಸ್ಥಲಕ್ಕೆ ಅಸಂಬಂಧ.
ಅರಿವುದು ತ್ರಿವಿಧದಲ್ಲಿ ಗುರುನಿರಂಜನ ಚನ್ನಬಸವಲಿಂಗಕ್ಕೆ
ಅಂಗವಾದೆವೆಂಬ ಅರುಹಿರಿಯರು. ॥ ೧೦೭೯ ॥

೧೦೮೦

ಅಂಗವಲ್ಲದ ಅಂಗಸಂಗವಾದ ಸರ್ವಜ್ಞ ಮಹಿಮಂಗೆ ನಿರ್ವಿಕಲ್ಪ ನಿಜವಾಗಿ
ಭಾವ್ಯ ಭಾವ ಭಾವಕವೆಂಬುವೇನುಯಿಲ್ಲದ ನಿರ್ಭಾವದ ನಿಲುವೇ ನಿಂದು
ನೆರೆಯರಿಯದಿರ್ದುದು ಗುರುನಿರಂಜನ ಚನ್ನಬಸವಲಿಂಗ ತಾನೆಂಬ. ॥ ೧೦೮೦ ॥

೧೦೮೧

ತಾನೆಂಬುದ ತೋರಲಿಲ್ಲ ನೀನೆಂಬುದ ಬೀರಲಿಲ್ಲ,
ತೋರುವುದನೆಲ್ಲ ತೂರಿ ನಡೆವಲ್ಲಿ ಹಾರವಾಗದಂಗ ನಿನ್ನಂಗ ನಿಜವೆಂಬೆ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೧೦೮೧ ॥

೧೦೮೨

ಬಂದುದ ಹಿಂದಕ್ಕೆಂದು ಸಂದು ಸರ್ವಜ್ಞತ್ವನಾಗಿ
ಕಂದನ ಕೈಬಂಧನ ಬಂಧನವಾದ ಮಹಿಮಂಗೆ,
ಹಿಂದಣ ಚಂದದಂದಕ್ಕೆ ಸಂದು ವಿರಹಿತ ಸ್ವಯವಾದುದು
ಗುರುನಿರಂಜನ ಚನ್ನಬಸವಲಿಂಗಾ. ॥ ೧೦೮೨ ॥

೧೦೮೩

ಕಾಲತ್ರಯದ ಕೀಲಸರಿದು ಖಂಡಿಸಿ
ಕಾಲತ್ರಯ ಲೋಲಮಯನಾದ ಮಹಿಮನು ಕಾಲಕಲ್ಪಿತಭಾವಿಯಲ್ಲ.
ಮತ್ತೆ ಕಾಲತ್ರಯದ ಕರ್ಮವನುಳಿದು ಕಾಲತ್ರಯರೂಪ ಕಂಡಯ್ಯಾ.
ಇಹಪರವರಿಯದ ಇಹಪರ ಭೋಗಿ ತಾನೇ ಕಂಡಯ್ಯಾ.
ನಿರಂತರ ಗುರುನಿರಂಜನ ಚನ್ನಬಸವಲಿಂಗವಾಗಿ
ಸತಿಪತಿಭಾವ ಸವೆಯದನ್ನಕ್ಕರ. ॥ ೧೦೮೩ ॥

೧೦೭೪

ಧನಗಂಡನ ಬೆಲೆವೆಣ್ಣಿನ ಗಲಭೆಯ ಸೌಖ್ಯದಂತೆ
ನಲಿನಲಿದಾಡುವ ಸುಳುಹಿಂಗೆ ಸುಳುಹಿನ ಸುಖದ ಮುಖವಿಲ್ಲ ಕಾಣಾ.
ಅದು ಕಾರಣ, ನಿಮಿಷ ಬೇಟದೊತ್ತಿಂಗೆ ಲಾಭವನರಿಯದೆ
ಅನಿಮಿಷ ಬೇಟದೊತ್ತೇ ಅನುಪಮವಾದಲ್ಲಿ ಆತನೇ ಅಚ್ಚ ಶರಣ
ಗುರುನಿರಂಜನ ಚನ್ನಬಸವಲಿಂಗಾ. || ೧೦೭೪ ||

೧೦೭೫

ಬಹಿರಂಗದ ಬಳಕೆಯನು ಇಂದ್ರಿಯಂಗಳಿಗಿಕ್ಕದಿರ್ದಡಾತ ಶ್ರುತಿಜ್ಞಾನಿ.
ಅಂತರಂಗದನುವ ಕರಣಚತುಷ್ಟಿಗಿಕ್ಕದಿರ್ದಡಾತ ಸುಜ್ಞಾನಿ.
ಆತ್ಮನ ಮುಖವನು ವಿಷಯಗತಿಗನುಗೊಳಿಸದಿರ್ದಡಾತ ನಿಜಜ್ಞಾನಿ.
ಈ ತ್ರಿವಿಧ ಜ್ಞಾನವನು ಮಹಾಜ್ಞಾನವೆರಸಿ ಮರೆದಾಚರಿಸುವ
ಪರಮಜ್ಞಾನಿಗಳ ಪಾದಕ್ಕೆ ನಮೋ ನಮೋ ಎಂಬೆ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೧೦೭೫ ||

೧೦೭೬

ಅಂತರಂಗದನುವ ಬಹಿರಂಗಕ್ಕೆ ಬೆರಸಿತಂದು
ಹಿಡಿ ಹಿಡಿದು ನಡೆವುದೊಂದು ಕಡುಜಾಣದಾಗು,
ಈ ಕುರುಹಿನೊಳು ನಿಂದು ಹೊರಗಣನೆರವಿಯ
ಗುದ್ವಾಟಕ್ಕೆ ಸೆರೆಸೂರೆಹೋಯಿತ್ತು ಒಳಗಣ ಒಡವೆ
ಊರು ಹಾಳಾದಲ್ಲಿ ಕ್ಷೇತ್ರದ ಸುಖವಾರಿಗೆ ?
ಗುರುನಿರಂಜನ ಚನ್ನಬಸವಲಿಂಗ ಒಳಹೊರಗೆ
ತನ್ನ ತಾ ನೋಡುತಾಡುತಿರ್ಪನು. || ೧೦೭೬ ||

೧೦೭೭

ಮಾರ್ಗದ ನೀರು ಮಾರುತಗೂಡಿ ಕಿಚ್ಚಿನ ಕಾಲುವೆಯಲ್ಲಿ
ಕಟ್ಟೊಡೆಯದಿರ್ದು
ನೆಟ್ಟನೆ ನಿಸ್ಸೀಮದ ಹೊಲಕ್ಕೆ ತಿರುಹಿ ಧರೆಯ ತಂಪು ಹರಿಯದಿರ್ದಡೆ
ಪರಿಪರಿಯ ಸಧರ್ಮಸಂಪತ್ತಿನೊಳಗಾಗಿ ನಿಂದುದು
ಗುರುನಿರಂಜನ ಚನ್ನಬಸವಲಿಂಗ ತಾನಾಗಿ. || ೧೦೭೭ ||

೧೦೭೮

ಕೋಣಹಣೆಪಟ್ಟ, ಚಿತ್ರವಕೊಯ್ದು, ವಿಚಿತ್ರದಂಗನೆಯ
ನಾಮ ರೂಪು ಕ್ರಿಯವ ತೊಳೆದು,

ಬಿಳಿಯಂಬರನುಡಿಸಿ, ತಾಯಿ ತಂದೆಯ ಮದುವೆಯ ಸಂಭ್ರಮದಲ್ಲಿ
ತಪ್ಪದೆ ನೆರೆದ ಪರವಶ ಶರಣ.
ಅಜ ವಿಷ್ಣು ರುದ್ರರ ಗಜಬಜೆಯನರಿಯದೆ ಸೆರೆವಿಡಿದಿರ್ದ ತನ್ನನುವಿಂಗೆ
ಗುರುನಿರಂಜನ ಚನ್ನಬಸವಲಿಂಗಕ್ಕೆ
ಹರಿಯದ ಭೋಗ ಹವಣವಾಯಿತ್ತು ಶರಣ ಮುಖದಿಂದೆ. || ೧೦೭೮ ||

೧೦೭೯

ಏಳು ಚಿಂತೆಯ ಹೊತ್ತು ಹಾಳೂರನಾಳುವ ಹಾವು
ಹಾವಾಡಿಗನ ಮಡದಿಯ ಮಾಳದ ಹಬ್ಬ ಕೆರೆಯೊಳಗೆ ತಲೆಕೆಳಗಾಗಿ
ಮುಳುಗಾಡುತಿಪ್ಪದು ಮೂರು ಲೋಕವೆಲ್ಲವು.
ಅದು ಕಾರಣ ತನ್ನಿಂದ ತನ್ನನರಿದ ಶರಣ
ಮುನ್ನವೆ ಮುಂಗೈಯಲ್ಲಿ ಸಂಗವಮಾಡಿ
ಕಳ್ಳರ ಕುಲಗೆಡಿಸಿ ಕೂಡಿ ಕೂಟಕ್ಕೆ ನೀಟವಾದಲ್ಲಿ ಸತ್ತು ಬದುಕಿ ನಿತ್ಯವಾದನು
ಗುರುನಿರಂಜನ ಚನ್ನಬಸವಲಿಂಗದಲ್ಲಿ. || ೧೦೭೯ ||

೧೦೮೦

ಚಂದ್ರಮೌಳಿಯೆನಿಸಿಕೊಂಡು
ಕಾಮನನುರುಹಿದನೆಂದರೆ ನಗೆ ಬಂದಿತ್ತೆನಗೆ.
ಮಾಯಾಕೋಲಾಹಲನೆನಿಸಿಕೊಂಡು
ಮುಡಿಯಲ್ಲಿ ಹೆಣ್ಣ ತಳೆದನೆಂದರೆ ನಗೆ ಬಂದಿತ್ತೆನಗೆ.
ನಿಃಕಲಗುರುನಿರಂಜನ ಚನ್ನಬಸವಲಿಂಗವೆನಿಸಿಕೊಂಡು
ಎನಗೆ ಪತಿಯಾಗಿ ಭೋಗಿಸುವುದ ಕಂಡು ನಗೆ ಬಂದಿತ್ತು ಎನ್ನೊಳಗೆ.
|| ೧೦೮೦ ||

೧೦೮೧

ನಿರಾಕಾರ ಲಿಂಗವೆನ್ನ ಸ್ಥೂಲತತ್ವದ ವ್ಯವಹಾರವನು
ಜಾಗ್ರಾವಸ್ಥೆಯಲ್ಲಿ ಕ್ರಿಯಾಗಮ್ಯನಾಗಿ
ಆನಂದಿಸುವಲ್ಲಿ ನಾನು ಸತಿಭಾವದಿಂದ ನಗುತಿರ್ದೆನು.
ನಿರಾಮಯ ಲಿಂಗವೆನ್ನ ಸೂಕ್ಷ್ಮತತ್ವದ ವ್ಯವಹಾರವನು
ಸ್ವಪ್ನಾವಸ್ಥೆಯಲ್ಲಿ ಜ್ಞಾನಗಮ್ಯನಾಗಿ ಪರಿಣಾಮಿಸುವಲ್ಲಿ
ನಾನು ಸತಿಭಾವದಿಂದೆ ನಗುತಿರ್ದೆನು.
ನಿರವಯ ಲಿಂಗವೆನ್ನ ಕಾರಣತತ್ವದ ವ್ಯವಹಾರವನು
ಸುಷುಪ್ತಾವಸ್ಥೆಯಲ್ಲಿ ಭಾವಗಮ್ಯನಾಗಿ ಆಸ್ವಾದಿಸುವಲ್ಲಿ

ನಾನು ಸತಿಭಾವದಿಂದೆ ನಗುತಿರ್ದೆನು.
ಗುರುನಿರಂಜನ ಚನ್ನಬಸವಲಿಂಗವೆಂಬ
ಷಟ್‌ಸ್ಥಲಸಂಭೋಗಿ ಸ್ವಯವಾದಲ್ಲಿ ನಗುತಿರ್ದೆನು. ॥ ೧೦೮೧ ॥

೧೦೮೨

ತಂಗಿಯ ಗಂಡನೆನ್ನನೆರೆದು ಪರಿಮಳವ ಪೂಸಿ ಪರಿಪರಿಯ
ರುಚಿಗಾಣಿಸಿದನು.
ಚಲುವಿಕೆಯ ತೋರಿ ತರ್ಕೈಸಿ ಮಾತನಾಡದೆ
ನಿನ್ನ ಗಂಡಂಗೆ ಶರಗ ಹಾಸುವಳೆಂದು
ಗುರುನಿರಂಜನ ಚನ್ನಬಸವಲಿಂಗವೆನ್ನೊಳಗಾದ ಕಾಣಮ್ಮ. ॥ ೧೦೮೨ ॥

೧೦೮೩

ಮಣ್ಣುಕೋಟೆಯೊಳಗೆ ಕಲ್ಲಮಂದಿರದಿ ಮೂರ್ತಿಯನಿರಿಸಿ ನಡೆವ
ಒದ್ದಹಿರಿಯರ ಸದ್ದು ಸಮಯದ ಸಾರಾಯಕ್ಕತೀತ
ಮತ್ತೆ ದ್ವಂದ್ವದನುಗುಣಾಗಮ್ಯ ಶಿವಾನುಭಾವಿ
ಸಾಕಾರ ಸಸುಮತ ನಿರಾಕಾರ ನಿಜಾನಂದ ಕಾರ್ಯಕಾರಣ ನಿರಂಜನನಿಧಿ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. ॥ ೧೦೮೩ ॥

೧೦೮೪

ಖರ್ಜುರ ಸಾರಾಯ ಕಾಯಶೂನ್ಯ, ನಾರಿವಾಳ ಸಾರಾಯ ಮನಶೂನ್ಯ,
ದ್ವಂದ್ವಮೂರ್ತಿಯನೊಂದು ಭಾವ ಸತಿಭಾವ ಸಾರಾಯ ಸತ್ಯಾಂಗ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. ॥ ೧೦೮೪ ॥

೧೦೮೫

ಅವರ್ಣಾತ್ಮಕರ ಭಾಷೆಗಳನರಿದು ಭಾವಿಸಬಾರದು ವರ್ಣಾತ್ಮಕರುಗಳಿಗೆ.
ವರ್ಣಾತ್ಮಕರುಗಳ ಭಾಷೆಗತಿಗಳನರಿದು ಭಾವಿಸಬಾರದು
ಅವರ್ಣಾತ್ಮಕರುಗಳಿಗೆ.
ಈ ತೆರನಪ್ಪ, ಲೌಕಿಕ ಪರಮಾರ್ಥವನು ಭಾವಿಸಿ ಮರೆದಿರ್ದ
ಮಹಾಮಹಿಮನೇ ಶರಣ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೧೦೮೫ ॥

೧೦೮೬

ತನ್ನಿಂದ ತಾನುದಿಸಿದ ಬಿಂದುವಿನಿಂದಾಗಿ ನಿಂದುದೊಂದು ಬಿಂದು.
ಬಿಂದು ಬೇರಾಗಿ ಬೆರಸಿಕೊಂಡಲ್ಲಿ ಬಿಂದು ಬಿಚ್ಚಿ

ಹಿಂದು ಮುಂದು ನಿಲಿಸಿದರೆ ಬಂಥ ಆಗ ಬಯಲಾಯಿತ್ತು.
ತಂದೆಯು ನೋಡಿ ಕಂದನ ಕೈವಿಡಿದಲ್ಲಿ
ಮುಂದುಗಂಡೆನು ಮೂದೇವರರಿಯದ ಬೇಹಾರವನು.
ಕೊಡಲಿಲ್ಲ ಕೊಳಲಿಲ್ಲದ ಸಡಗರ ಸ್ವಯವಾದಲ್ಲಿ ಸತಿಭಾವತಪ್ಪಿ
ಗುರುನಿರಂಜನ ಚನ್ನಬಸವಲಿಂಗಕಂಗವಾಗಿ. ॥ ೧೦೮೬ ॥

೧೦೮೭

ಕಾಡಡವಿಯ ಕಡೆಯನರಿಯದ ಹಾರುವನ
ತಲೆಯನುರುಹಿ ಬಲೆಯಬಂಧನವ ಕಡಿದು,
ಅಂದಿನತತ್ವವ ತಂದು ತಲೆಕಾಲವಿಡಿದು ತರ್ಕೈಸಲಾಗಿ
ತಲೆಯುರಿ ತಾಗಿ ಮುಸುಗಿತ್ತು ನೋಡಾ.
ತಲೆಕಾಲು ಕೈಯ ಸುಸುಳಿ ಕಡೆಗಾದುದರಿಯದೆ ಕಂಡ ಭಾವವರತು ನಿಂದುದು
ಗುರುನಿರಂಜನ ಚನ್ನಬಸವಲಿಂಗಕ್ಕಂಗವಾಗಿ. ॥ ೧೦೮೭ ॥

೧೦೮೮

ತನುಶೂನ್ಯನಾಗಿ ಆಚಾರಲಿಂಗ ಶೂನ್ಯ, ಮನಶೂನ್ಯನಾಗಿ ಗುರುಲಿಂಗ ಶೂನ್ಯ,
ಪ್ರಾಣಶೂನ್ಯನಾಗಿ ಶಿವಲಿಂಗ ಶೂನ್ಯ, ಭಾವಶೂನ್ಯನಾಗಿ ಜಂಗಮಲಿಂಗ ಶೂನ್ಯ,
ಜ್ಞಾನಶೂನ್ಯನಾಗಿ ಪ್ರಸಾದಲಿಂಗ ಶೂನ್ಯ, ಆತ್ಮಶೂನ್ಯನಾಗಿ ಮಹಾಲಿಂಗಶೂನ್ಯ.
ಸರ್ವಶೂನ್ಯನಾಗಿ ಸತಿಪತಿಭಾವದ ಸಲೀಲೆಗೊಮ್ಮೆ
ಸಾಕಾರ ಸಂಯೋಗಿ ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. ॥೧೦೮೮॥

೧೦೮೯

ಭಕ್ತಿಸ್ಥಲವುಳ್ಳಂಗೆ ತನುಮನಧನದಾಸೆ ಶತ್ರು ಕಾಣಾ.
ಮಹೇಶ್ವರಸ್ಥಲವುಳ್ಳವಂಗೆ ಪರಧನ ಪರಸತಿ
ಪರದೈವವೆಂಬಿವರ ಕಾಂಕ್ಷೆಯೇ ಶತ್ರು ಕಾಣಾ.
ಪ್ರಸಾದಿಸ್ಥಲವುಳ್ಳವಂಗೆ ಸದ್ವಿವೇಕ ಸಾವಧಾನದ ಮರವೆಯೇ ಶತ್ರು ಕಾಣಾ.
ಪ್ರಾಣಲಿಂಗಸ್ಥಲವುಳ್ಳವಂಗೆ ವಾಯ್ವೇಂದ್ರಿಯಪ್ರಕೃತಿಯೇ ಶತ್ರು ಕಾಣಾ.
ಶರಣಸ್ಥಲವುಳ್ಳವಂಗೆ ಸಕಲವು ಬಿಡುಗಡೆವಿರಹಿತವೆ ಶತ್ರು ಕಾಣಾ.
ಐಕ್ಯಸ್ಥಲವುಳ್ಳವಂಗೆ ಉಭಯದ ಕುರುಹೇ ಶತ್ರು ಕಾಣಾ.
ಇಂತು ಸ್ಥಲವರಿತು ನಿಂದ ಶರಣಂಗೆ ಸಕಲ ನಿಃಕಲಸನುಮತ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಕಾಣಾ. ॥ ೧೦೮೯ ॥

೧೦೯೦

ಕಂಡೆನೆಂಬುದು ಸಟೆ, ಕಾಣದಿರವು ದಿಟ.
ಕಾಣಬಲ್ಲವರು ಮುಂದೆ ಕಾಂಬುದೆ ಸತ್ಯ.
ಕಾಣಬಾರದವರು ಮುಂದೆ ಕಾಣದಿರುವುದೇ ಸತ್ಯ.
ಗುರುನಿರಂಜನ ಚನ್ನಬಸವಲಿಂಗದಲ್ಲಿ
ದ್ವೈತವೆನಲಿಲ್ಲ ಅದ್ವೈತ ಶರಣ. ॥ ೧೦೯೦ ॥

೧೦೯೧

ಅಂಗ ಮನ ಪ್ರಾಣ ಹುಸಿಯೆಂಬುದ ಕಂಡೆಯಲ್ಲ ಮೂಗಣ್ಣಿಂದೆ.
ಗುಣವರ್ಗ ಊರ್ಮಿ ಭೂತೇಂದ್ರಿಯ ಕರಣವಿಷಯಾದಿ
ಸಕಲನಿಃಕಲವೆಲ್ಲ ಹುಸಿಯೆಂಬುದ ಕಂಡೆಯಲ್ಲ ಮೂಗಣ್ಣಿಂದೆ.
ತನುತ್ರಯ ಮಲತ್ರಯ ಈಷಣತ್ರಯ ಜೀವತ್ರಯ ಅವಸ್ಥಾತ್ರಯವೆಂಬ
ಪಂಚಾದಶ ಮಾಯಾಪಟಲಾದಿ ತಾಮಸವೆಲ್ಲ ಹುಸಿಯೆಂಬುದ
ಕಂಡೆಯಲ್ಲ ಮೂಗಣ್ಣಿಂದೆ.
ಕಂಡೆ ಕಾಣೆ ಬೇಕು ಬೇಡ ನಾನು ನೀನೆಂಬ
ದ್ವಂದ್ವಕರ್ಮದ ಕತ್ತಲೆ ಹುಸಿಯೆಂಬುದ ಕಂಡೆಯಲ್ಲ ಮೂಗಣ್ಣಿಂದೆ.
ಇಂತಿವೆಲ್ಲ ಕಂಡ ಕಾಣಿಕೆ ನಿಶ್ಚಯವಾದಲ್ಲಿ
ನಿಜ ನಿರ್ವಾಣದ ನಿಲವು ನೀನೆಂಬೆ
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೧೦೯೧ ॥

೧೦೯೨

ಹುಸಿಗಲತ ಕ್ರಿಯೆಯು ಹಸಿಯ ಮಡಕೆಯೊಳುದಕವ ತುಂಬಿದಂತೆ.
ಹುಸಿಗಲತ ಜ್ಞಾನವು ಮಲಗಪ್ಪಡವ ತೊಳೆದು ಲೇಸನರಸುವಂತೆ.
ಹುಸಿಗಲತ ಸ್ನೇಹವು ಮುಳ್ಳನಟ್ಟು, ನೋವಿನಿಂದ ಗಿರಿಯನಡರುವಂತೆ.
ಹುಸಿಗಲತ ಗುರುನಿರಂಜನ ಚನ್ನಬಸವಲಿಂಗವೆನಗೊಶಗತವೆಂದರೆ
ಹಸಗೆಟ್ಟು ಹೆಣನ ಮೋಹಿಸುವ ರುಚಿಯಂತೆ ಸಂಬಂಧ. ॥ ೧೦೯೨ ॥

೧೦೯೩

ಹೆಜ್ಜೆದಪ್ಪಿ ನಡೆವಂಗೆ ಇಹಪರದ ಸುಖವಿಲ್ಲ,
ಮಾತುತಪ್ಪಿ ನುಡಿವಂಗೆ ಮುಂದೆ ನಿಲುವಿಲ್ಲ,
ತಾ ಕೆಟ್ಟು ತಾನಾದಲ್ಲಿ ಮತ್ತೆ
ಗುರುನಿರಂಜನ ಚನ್ನಬಸವಲಿಂಗವಿಲ್ಲದ ಶರಣನದ್ವೈತ. ॥ ೧೦೯೩ ॥

೧೯೪

ಅಂಗವಿಲ್ಲದ ಬಾಳಿಗೆ ಅಂಗವೆಂಬುದಿಲ್ಲ,
ಅಂಗವಿಲ್ಲದ ಬಾಳಿಗೆ ಲಿಂಗವೆಂಬುದಿಲ್ಲ,
ಸಂಗದ ಸುಖಮಯದ ಬಾಳಿಗೆ ತಾನಿಲ್ಲ ನೀನಿಲ್ಲ.
ತಾನುಯೆಂಬುದು ಆಶ್ಚರ್ಯದ ಗತಿ,
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣನಗತಿ. ॥ ೧೯೪ ॥

೧೯೫

ಹಿರಿದುಂಟೆಂಬ ನುಡಿ ಚೋದ್ಯವಪ್ಪುದು ಶರಣಂಗೆ.
ಅದೇನು ಕಾರಣವೆಂದೊಡೆ,
ತನ್ನಿಂದ ತೋರಿದ ಪೃಥ್ವಿ ಅಪ್ಪು ಅಗ್ನಿ ವಾಯು ಆಕಾಶ
ಆತ್ಮ ಸೂರ್ಯ ಚಂದ್ರ ತನ್ನಿಂದೆ ತೋರಿದ ಸಕಲಾರಂಭ.
ಇದು ಕಾರಣ, ತಾನೊಂದರಿಂದ ತೋರಿದವನಲ್ಲ.
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣ ಕಾರಣನಹುದು ಕಾರ್ಯನಲ್ಲ. ॥ ೧೯೫ ॥

೧೯೬

ಲೋಕಚೋದ್ಯ ಶರಣಂಗೆ
ಕುಂದಣ ತೆತ್ತಿಸಿದ ನವರತ್ನದ ಪದಕ ನೋಡಾ ಕೊರಳಲ್ಲಿ.
ಮೂವತ್ತಾರು ಬಣ್ಣದ ನವಿನತರದಂಬರವ ಪೊದ್ದಿರ್ದನು ನೋಡಾ.
ಕಲಿತ ನುಡಿ ಕಾಲೆರಡರಿಂದೆ ನೂರೊಂದು ಕುಲದ ಮನೆಗಳ ಪೊಕ್ಕು
ಹೆಣ್ಣುಗಂಡಿನಾಟದೊಳಗೆ ತೇಕಾಡುತಿರ್ದನು ನೋಡಾ.
ತಾಯಿಯ ತರ್ಕೈಸಿ ತಂದೆಯ ನೋಡಲು
ಗುರುನಿರಂಜನ ಚನ್ನಬಸವಲಿಂಗ ಬೇರಿಲ್ಲ. ॥ ೧೯೬ ॥

೧೯೭

ಸುಳ್ಳಿಗೆ ಸುಳ್ಳಾಗಿರ್ದನೊಬ್ಬ, ಬರಿಬಳ್ಳಿಗೆ ಬತ್ತಲಾಗಿರ್ದನೊಬ್ಬ,
ಗುರುನಿರಂಜನ ಚನ್ನಬಸವಲಿಂಗಕ್ಕೆ ಅಂಗವಾಗಿರ್ದನೊಬ್ಬ ಶರಣ. ॥ ೧೯೭ ॥

೧೯೮

ಲೋಕ ಲೌಕಿಕವಿಡಿದು ನಿಂದರೇನು ?
ಕತ್ತಲ ಬೆಳಗ ಕಾಣುವನಲ್ಲದೆ ಕತ್ತಲ ಬೆಳಗಲ್ಲ ನೋಡಾ.
ದೇವತೆಗಳ ಮೂವತ್ತುಮೂರು ಕೋಟಿಯ ಕಾಣುವನಲ್ಲದೆ
ದೇವತೆಗಳು ಮೂವತ್ತುಮೂರುಕೋಟಿಯಲ್ಲ ನೋಡಾ.

ರಾಕ್ಷಸರರುವತ್ತಾರು ಕೋಟಿಯ ಕಾಣುವನಲ್ಲದೆ
ರಾಕ್ಷಸರರುವತ್ತಾರು ಕೋಟಿಯಲ್ಲ ನೋಡಾ.
ಮುನಿಗಳ ಸಂದೋಹವ ಕಾಣುವನಲ್ಲದೆ, ಮುನಿಗಳ ಸಂದೋಹವಲ್ಲ ನೋಡಾ.
ಗುರುನಿರಂಜನ ಚನ್ನಬಸವಲಿಂಗವನು ತೋರದೆ ಕಾಂಬುವನಲ್ಲದೆ
ತೋರಿಕೊಂಬುವನಲ್ಲ ನೋಡಾ ಶರಣನು. ॥ ೧೯೮ ॥

೧೯೯

ಶಿವಯೋಗಿಯ ಯೋಗವನಾರು ಬಲ್ಲರು ಹೇಳಾ.
ಖೇಚರಿಯನರಿದು, ಷಣ್ಮುಖಿಯಲ್ಲಿ ಆಚರಿಸಿ, ಶಾಂಭವಿಯೊಳಿರ್ಪ
ನಿರ್ಮಲಾನಂದ ನಿಜವೀರಶೈವನನಾರು ಬಲ್ಲರು ಹೇಳಾ!
ಅಷ್ಟಾಂಗಯೋಗದಲ್ಲಿ ಶ್ರೇಷ್ಠಾಭಿಮಾನಿಗಳಾದ
ನಿಜನಿಷ್ಠೆಮಹಿಮನ ಘನವನಾರು ಬಲ್ಲರು ಹೇಳಾ!
ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣನ ಪರಿಯ ನೀವೇ ಬಲ್ಲಿರಿ. ॥ ೧೯೯ ॥

೧೧೦೦

ಅರಿಯದೆ ಆಗಿ ಬಂದವರೆನಲಾಗದು, ಆದವರಿಗೆ ಮನಬಾಧೆಯುಂಟೆ ?
ಅದೇಕೆಂದಡೆ, ಶರಣುಹಾಕಿ ಬಂದಲ್ಲಿ ನಿರ್ಮಳ ಮಾತನಾಡುವರು.
ಹಾಕದೆ ಬಂದು ಮಾತನಿಟ್ಟರೆ ಪೂರ್ವದ ಹಗೆಭಾವದುಲುವ ತೋರುವರು.
ಕೊಡಲಿಲ್ಲ ಕೊಳ್ಳಲಿಲ್ಲ ತುಡುಗುಣಿತನದ ಬಡಿವಾರವ ನೋಡಾ.
ಇಂತಲ್ಲ ಶರಣ, ಲೋಕರವಿಯಂತಿಪ್ಪ
ಗುರುನಿರಂಜನ ಚನ್ನಬಸವಲಿಂಗಾ ನೀ ಸನ್ನಿಹಿತ. ॥ ೧೧೦೦ ॥

೧೧೦೧

ನೋಡಿ ಬೇಡಿಕೊಂಡ ಶರಣ, ಬೇಡ ಮರೆದಿರುವುದೇ ಸಹಜ.
ತನ್ನ ತನ್ನ ಲೀಲೆಗೆ ಗುರುಲಿಂಗಜಂಗಮವನು ಬೇಡುವ.
ಪಾದೋದಕ ಪ್ರಸಾದವ ಅನ್ಯರ ಬೇಡಲಿಲ್ಲ.
ತನ್ನನಾರಾಗಲಿ ಬೇಡಲು ಇಲ್ಲೆನಲಿಲ್ಲ.
ಇದು ಶರಣಜಂಗಮದಿರವು, ಪರಶಿವನರಿವು, ನಿಜವಾದ ಕುರುಹು.
ಈ ಭೇದವನರಿಯದೆ ತನ್ನವಸರಕೆ ಅನ್ಯರ ಬೇಡಿಕೊಂಡು ನಡೆವರೆಲ್ಲ
ಗುರುಲಿಂಗಜಂಗಮ ದ್ರೋಹಿಗಳು.
ಇದು ಕಾರಣ, ಗುರುನಿರಂಜನ ಚನ್ನಬಸವಲಿಂಗಕ್ಕೆ
ದೂರವಾಗಿ ಹೋಗುವರು. ॥ ೧೧೦೧ ॥

೧೧೦೨

ವಾಚಕ ಮಾನಸ ಕಾಯಕಶುದ್ಧವಾದುದೇ ಜಂಗಮಸ್ಥಲವು.
ಕಾಯಕ್ಕುಪಚಾರ, ವಾಚಕ್ಕೆ ನವೀನಭಾವ,
ಮನಕ್ಕೆ ಸಂತೋಷವ ಕೊಡಬಲ್ಲರೆ ಭಕ್ತ.
ಈ ಉಭಯದಲೊದಗಿದ ಪಾದೋದಕ ಪ್ರಸಾದ
ಅದು ತಾನೆ ಗುರುನಿರಂಜನ ಚನ್ನಬಸವಲಿಂಗ ಬೇರಿಲ್ಲ. || ೧೧೦೨ ||

೧೧೦೩

ಕಬ್ಬುನವನರಸಿದರೆ ಪರುಷಭಾವ ತಪ್ಪಿತ್ತು.
ಕಾಷ್ಠವನರಸಿದರೆ ಅಗ್ನಿಭಾವ ತಪ್ಪಿತ್ತು.
ನರಜಿಹ್ವೆಯನರಸಿದರೆ ಶರ್ಕರಭಾವ ತಪ್ಪಿತ್ತು
ಇದು ಕಾರಣ ಇಹಪರವನರಸಿದರೆ ಶರಣಭಾವ ತಪ್ಪಿತ್ತು
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಾಗಿ. || ೧೧೦೩ ||

೧೧೦೪

ಒಡೆತನದ ಪೆರ್ಚುಗೆಯ ಕಾಣಿಸಿಕೊಂಬ ಬೆಡಗುವಿದೇನೋ!
ಉಸುರಿನ ಉಲುಹು ಕಂಚು ಚರ್ಮಾದಿ ಸಕಲ ಧನದೊಳು
ಮೆರೆಯಲ್ಯಾಕೊ ನಿಜದ ನಿಲುವಿಂಗೆ!
ಮಧು ಚೂತಫಳ ಶರ್ಕರ ತಮ್ಮ ಬೀರಲಿಲ್ಲ.
ಅರಿದಾಚರಿಸು ಕಡೆಯ ನೆರೆಯಲಾಪಡೆ ಕುರುಹನಿಕ್ಕದಿರು
ಗುರುನಿರಂಜನ ಚನ್ನಬಸವಲಿಂಗ ಲಾಂಛನಕ್ಕೆ. || ೧೧೦೪ ||

೧೧೦೫

ಮಾಟಕೂಟದ ಭಾವಶೂನ್ಯತ್ವವನರಿದ ಬಳಿಕ
ಮಾಡಲೆಡೆಗಾಣದಿರಬೇಕು, ಕೂಡಲರಿಯದಿರಬೇಕು.
ಫಲವೃಕ್ಷಾಳಿಯ ಗೆಲ್ಲ ಸೋಲಿನಂತೆ ಸರ್ವಕ್ಕು ನಿಃಕಲಭಾವ ನೆನಸಿರಬೇಕು.
ಕುರುಹರಿತ ನಿರುತ ನೀನೆಂಬೆ ಗುರುನಿರಂಜನ ಚನ್ನಬಸವಲಿಂಗಾ. || ೧೧೦೫ ||

೧೧೦೬

ಶೂನ್ಯದ ಕಳೆಬೆಳೆಯನರಿದು ನಿಶ್ಶೂನ್ಯದ ಕಳೆಬೆಳೆಯೊಳು ನಿಂದು,
ಕುರುಹಿಂಗೆ ಹಿಂದು ಮುಂದೆ ತೋರಲೆಡೆಯಿಲ್ಲ.
ಹಿಂದಣತ್ತ ಮುಂದಣತ್ತ
ಗುರುನಿರಂಜನ ಚನ್ನಬಸವಲಿಂಗದೊಡಲಿಂಗೆ. || ೧೧೦೬ ||

೧೧೦೭

ಬೆಂದವ ಬೇಯಿಸಬಂದವರ ನಿಂದವರ ನಿಲಿಸಬಂದವರ ಸತ್ತವರ ಕೊಂದು
ಕಂಗಳನೀರ ತಲೆಗೆ ಎರೆದವರ, ಕೈಯೊಳು ಕೈಭಾಷೆಯನಿತ್ತು
ಕಡೆಗಾಣಿಸಿಕೊಂಡವರ
ನಡೆಗತಿಯ ಮಂಡೆಯೊಳಿಟ್ಟು ಸಡಗರದ ಸುಖದ ಸೊನ್ನೆಯಲ್ಲಿ ಸಯವಾದ
ಗುರುನಿರಂಜನ ಚನ್ನಬಸವಲಿಂಗದಾದಿಯ ಪಡೆದವರ. ॥ ೧೧೦೭ ॥

೧೧೦೮

ಬಯಲಿಂದ ಬಂದ ತಳ್ಳಿಕಾರಂಗೆ
ಉಳ್ಳುದೆಲ್ಲವನಿತ್ತು ಒಳ್ಳಿಯವನಾಗಿ ಕಾಲವಿಡಿದು
ಕಾಳವೆಳಗಿಲ್ಲದ ಬಿಸಿಲು ಬೆಳದಿಂಗಳದಲ್ಲಿ ಸನ್ನಿಹಿತ ಬರುವವರಾರು ನೋಡಾ!
ಹೊರಗುಳ್ಳವರಿಗೆ ಹೊರಗಾದ ಒಳಗುಳ್ಳವರಿಗೊಳಗಾದ
ಅರಿದು ಬಸ್ನಿ ಗುರುನಿರಂಜನ ಚನ್ನಬಸವಲಿಂಗಕ್ಕೆ ರೂಪಿಲ್ಲದೆ. ॥ ೧೧೦೮ ॥

೧೧೦೯

ತಾಯಿ ಮಗಳ ಸಂಗವ ಮಾಡಿ ತಂದೆಗೆ ಹುಟ್ಟಿದ ಮಗನ ಕೈಯೊಳೆತ್ತಿ
ಊರಬಿಟ್ಟು ಕಡೆಗೆ ಬರುವಲ್ಲಿ, ಕಾಡಬಂದವರಾರು ಕೂಡಬಂದರು ನೋಡಾ.
ಕೆಡಿಸಬಂದವರಾರು ನುಡಿಸಬಂದರು ಕಾಣಾ.
ಸುಖಿಸಬಂದವರಾರು ಸುಳಿದುನಿಂದರು ಕೇಳಾ.
ಗೋಮಕ್ಕಳೆಲ್ಲರು ಗುಲಾಮರಾದಲ್ಲಿ ಗಸಣಿಯಡಗಿತ್ತು.
ಗುರುನಿರಂಜನ ಚನ್ನಬಸವಲಿಂಗಕ್ಕೆ ಶರಗ ಹಾಸಿದರೆ
ಮರಳಿ ಹೇಳದ ಸುಖವೆನಗೆ ಸ್ವಯವಾಯಿತ್ತು. ॥ ೧೧೦೯ ॥

೧೧೧೦

ತಲೆಯಿಲ್ಲದ ಮಲೆನಾಡ ಹೆಣ್ಣಿಂಗೆ ಮೊಲೆಯೇಳು ನೋಡಾ!
ಪಂಚವರ್ಣದ ಹಾಲ ತಲೆಗುತ್ತಿ ಕುಡಿದವರು
ವಿಧಿ ಮಾಧವ ವಿಷಧರಪದದೊಳಗಾದರು.
ಮತ್ತೆ ಮೊದಲರಿಯದವರ ಕಂಡು
ಚಪಲಗತಿ ಚೆಲುವ ಗುರುನಿರಂಜನ ಚನ್ನಬಸವಲಿಂಗದ ಬಲೆಯೊಳು ಬಿದ್ದು
ಕುಲಗೆಟ್ಟು ಕುರುಹಳಿದ ಸುಖವನೇನೆಂಬೆ ಹಿಂದಣ ಕೂಟವರಿಯರು. ॥ ೧೧೧೦ ॥

೧೧೧೧

ಘನಸಾರ ಹೇಮ ಮೌಕ್ತಿಕಕ್ಕೆ ಮೊದಲಿಲ್ಲದಂತೆ ತೋರಿದವಾತನೆಂಬೆ.
ಉದಕಪಂತಿರ್ಮ ವಹ್ನಿಯಂತಾದೊಡಾತನೆಂಬೆ.

ದಗ್ಧಪಟದ ನಿಲುವು ಸರ್ವಕ್ಕೂ ತೋರಿದಡಾತನೆಂಬೆ,
ಗುರುನಿರಂಜನ ಚನ್ನಬಸವಲಿಂಗಕ್ಕಂಗವೆಂಬ ಅನುಪಮಶರಣ. ॥ ೧೧೧೧ ॥

೧೧೧೨

ತಿಲ ಏರಂಡಿಲ ಬೀಜವು ಭೂ ಜಲ ಸಂಪರ್ಕದಿಂದೆ ಅಂಕುರಿಸಿ ಬೆಳೆದು
ಆಗಿನೊಳು ತೈಲ ಶೂನ್ಯತೋರಲು ಮುಂದೆ ತಪ್ಪದು.
ಈ ತೆರಸಿಪ್ಪನು ಅನಾದಿ ಶರಣ ಭಾವಜ್ಞರಿಗೆ
ಗುರುನಿರಂಜನ ಚನ್ನಬಸವಲಿಂಗ ತಾನೆಂಬ ತೋರಿಕೆ. ॥ ೧೧೧೨ ॥

೧೧೧೩

ತೋರಿಕೆಯ ಕೊಂಬನೆ ಸಾಧಕದಾಟದ ಸವಿರೂಪದಂತೆ.
ತೋರಿಕೆಯ ಕೊಂಬನು ಕಾಲಪುರುಷ ಬರುವಿಂಗೆ ಹಲಾಯುಧನ ಭಾವದಂತೆ.
ತೋರಿಕೆಯ ಕೊಳ್ಳಲರಿಯ ಇಹಪರವಿಡಿದು.
ತೋರಿಕೆಯ ಕೊಳ್ಳಬಲ್ಲ ಗುರುನಿರಂಜನ ಚನ್ನಬಸವಲಿಂಗವೆಂಬ. ॥ ೧೧೧೩ ॥

೧೧೧೪

ಸಕಲ ದ್ವಂದ್ವವಾಸನೆಗೆ ಮಾರುತನ ಬಲವೇ ತೋರಿಕೆಯಯ್ಯಾ.
ಮಾರುತ ಮಾರಾರಿಯಾದಲ್ಲಿ ತೋರಲಿಲ್ಲ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಶರಣಂಗೆ. ॥ ೧೧೧೪ ॥

೧೧೧೫

ದೇಶಿಕಶಿವಯೋಗಿ ಭುವನಾಕಾಶವಿಡಿದು
ದೇಶಾಂತರವ ಮಾಡುವ ಪರಿಯೆಂತೆಂದೊಡೆ:
ಕನ್ನಡದೇಶದಿಂದೆ ನೋಡಿ, ಮರಾಠ ಮಲಯ ದೇಶವ ಹಿಂದೆ ಬಿಟ್ಟು,
ಕೊಂಕಣದೇಶವಿಡಿದು
ಕಲ್ಯಾಣಪುರವರಾಧೀಶ್ವರ ಬಸವರಾಜೇಂದ್ರನ ಕಂಡು ಶರಣುಹೋಗಬೇಕೆಂದು
ಮಧ್ಯದೇಶದ ಧರ್ಮರಾಯನ ಕಂಡು ಮೂಕೋಟಿ ದ್ರವ್ಯವನಿತ್ತು ತೋರೆಂದಡೆ
ಮುಟ್ಟಿ, ಕರ್ನಾಟಕದೇಶದಿಂದೆ ತೋರಿದ ನೋಡಾ.
ಕಂಡ ಕಲ್ಯಾಣದೊಳೊಪ್ಪುವ ಬಸವಣ್ಣಂಗೆ
ಹೊರಗೊಳಗೊಳಗೆ ಕರಣತ್ರಯಗೂಡಿ ಚರಣಗಳ ಪಿಡಿದು ಸಕಲ ಜನರಿಗೆ
ಉತ್ತರದೇಶದ ಪರಿಯನರುಪಲು ಸುಖಮುಖಿಗಳಾದವರು.
ಅಲ್ಲಿಂದೆ ಮೂಡಣದೇಶವ ತಿರುಗಿ,
ಬಂಗಾಳದೇಶಕ್ಕೆ ದಕ್ಷಿಣವಾದ ಸಂಜುಂಡನ ಜಾತ್ರೆಯ ನೋಡಲು,

ಆ ಸಂಜುಂಡನ ಜಾತ್ರೆಯ ಮುನ್ನವೆ
ಕೂಡಲಸಂಗಮನಾಥನ ಜಾತ್ರೆಯಾಗಿ ಕಾಣುತಿರ್ದಿತ್ತು.
ಆ ಜಾತ್ರೆಯೊಳು ನಿಂದು ಪಾಂಡವದೇಶದ ಸುಖವನು ಕುಂತಣದೇಶದತ್ತ
ಆರು ಮಠವ ನಿರ್ಮಿಸಿದ ಆರು ದರ್ಶನ ಗತಿಮತಿಯನರಿದು
ಕುಂಭಕೋಣೆಯ ರಂಭೆಯ ಕೈವಿಡಿದು, ಪಶ್ಚಿಮದೇಶದಲ್ಲಿ ಪರಮಹರುಷವೆರೆದು
ಘನಗಂಭೀರ ಕಡಲೋಕುಳಿಯಾಡುತಿರ್ದು
ಗುರುನಿರಂಜನ ಚನ್ನಬಸವಲಿಂಗಸನ್ನಿಹಿತ
ಅನಂತ ದೇಶವ ಪಾವನಮಾಡಿ ಮೀರಿದ ದೇಶದತ್ತ ಸಾರಿದನು. ॥ ೧೧೧೫ ॥

೧೧೧೬

ದೇಶದೇಶವ ತಿರುಗುವರು ಧನಿಕರ ಧರ್ಮದಿಂದೆ.
ದೇಶವ ತಿರುಗುವರು ಒಡಲ ಪೋಷಿಸುವುದರಿಂದ.
ದೇಶವ ತಿರುಗುವರು ಮಲಮೂರರ ಆಸೆ, ವೇಶ್ಯೆಯ ಮಚ್ಚು ತಲೆಗೇರಿ,
ಗುರುಸೇವೆ ಮುಂದುಗೊಂಡು ದೇಶಾಂತರವ ಮಾಡಲಿಲ್ಲ.
ಲಿಂಗಪೂಜೆ ಮುಂದುಗೊಂಡು ದೇಶವ ತಿರುಗಲಿಲ್ಲ.
ಜಂಗಮದಾಸೋಹ ಮುಂದುಗೊಂಡು ದೇಶವ ತಿರುಗಲಿಲ್ಲ.
ಇಂತು ಅಪ್ರಯೋಜನ ಪ್ರಾಣಿಗಳ ಶಿವಯೋಗಿಗಳೆಂದು
ನಿರ್ಮಲ ಗಮನಸಮತಿಮಹಿಮರು ನುಡಿದುಕೊಳ್ಳಲಾಗದು
ಗುರುನಿರಂಜನ ಚನ್ನಬಸವಲಿಂಗಕ್ಕೆ ದೂರವಾದ ದುರ್ಜನರನು. ॥ ೧೧೧೬ ॥

೧೧೧೭

ರಾಜಯೋಗಿ ಶಿವಯೋಗಿಗಳೆಂದು ಹೆಸರಿಟ್ಟು, ನುಡಿವರು.
ಆ ಭಾವವನರಿಯದ ಉಪಭ್ರಾಂತರುಗಳ ಮಾತು ಸೊಗಸದಯ್ಯಾ.
ಪುಚ್ಚಗುಂಡಾಟದ ಬಾಲರಂತಿರಲಿ,
ಅನಬಹುದು ಸರ್ವಾಚಾರಸಂಪತ್ತಿನ ಲೋಲರಿಗೆ ರಾಜಯೋಗಿಗಳೆಂದು.
ಅನಬಹುದು ಪರಿಪೂರ್ಣಜ್ಞಾನಾನಂದ ಸುಖಮುಖಲೋಲರಿಗೆ
ಶಿವಯೋಗಿಗಳೆಂದು.
ಈ ದ್ವಂದ್ವೈಶ್ವರ್ಯ ಕಾಣಿಸಿಕೊಳ್ಳದೆ ಮುಂದೇನರಿಯದ
ಮಂದಮತಿಗಳ ಹಿಡಿದು ತಂದು
ಕರ್ಮಕಟ್ಟಳೆಯಿಂದೆ ಕೂಡಿಸಿಕೊಂಡು ತಮ್ಮ ಅಹಂಭಾವನಿಮಿತ್ಯಕ್ಕೆ
ಪರಮವಿರಾಗತಿಗಳೆಂದು ಹೇಳಿಸಿಕೊಂಬ ಕಣ್ಮಸಭಾವದ ಕಲ್ಮಷವ ನೋಡಾ.
ಹುಸಿಯಿಂದೆ ಹೊಡದಾಡಿ ಮಠ ಕ್ಷೇತ್ರವೆಂದು ಆಮಿಷ ಮೋಹದಲ್ಲಿ ಮುಳುಗಿ

ಪೂರ್ವಪಕ್ಷಾಳಿಯ ಸಂಸಾರದುರ್ನಡತೆಯೊಳ್ನಿಂದು ಮೆರೆವ
ಮಲತ್ರಯರತಿ ಮೆಚ್ಚಿರುವವರಿಗೆ ರಾಜಯೋಗಿಗಳೆನ್ನಬಹುದೆ ?
ಜಿಹ್ವೋಚ್ಛಿಷ್ಟ, ಪ್ರಾಣಿಗಳಿರಾ ! ಕ್ರುದ್ಧಮೃಗದಂತೆ ತಿರುತಿರುಗಿ ಬಳಲಿ
ಒಂದು ಸ್ಥಾನವಿಡಿದು ಪೂರ್ವದ ದುಸ್ಸಾರರತಿಯ ನೆನವಿನೊಳಿಟ್ಟು
ವೇಷಜಾಣಿಕೆಯನರಿದು ಕಂಡು ಕಂಡು ಸೋಗು ತಾಳುವ
ಕೀಳುಜಾತಿ ಕಿಲ್ಬಿಷಭರಿತರಿಗೆ ಶಿವಯೋಗಿಗಳೆನ್ನಬಹುದೆ ?
ತನು ಮನ ಭಾವೋಚ್ಛಿಷ್ಟ, ಪ್ರಾಣಿಗಳಿರಾ, ಇದು ಕಾರಣ,
ಆಟದವರು, ನೋಟದವರು, ಕೂಟದವರು ಕೂಡಿಯೈದುವರು ಸಂಘಾತವನು.
ಮತ್ತೆ ಗುರುನಿರಂಜನ ಚನ್ನಬಸವಲಿಂಗಸನ್ನಿಹಿತ ಶರಣರೆ
ರಾಜಯೋಗಿ ಶಿವಯೋಗಿಗಳಲ್ಲದೆ
ಮಿಕ್ಕ ಭವಭಾರಿಗಳ ತರಲಾಗದು ಘನದ ಮುಂದೆ. ॥ ೧೧೧೭ ॥

೧೧೧೮

ಒಡಲಿಚ್ಛೆಗೆ ಉಪಾಧಿವಿಡಿದು ಅನುಸರಣೆಯಿಂದೆ ಅಳಿಕಿ ನಡೆವುದು
ಮಾಯಾಮೋಹಿತರಿಗಲ್ಲದೆ ನಿಸ್ಸೀಮ ನಿರೂಪಾಧಿ ನಿಜಜಂಗಮಕ್ಕೆಲ್ಲಿಹದೊ ?
ತನುವಿನ ರತಿಯ ಮನದ ಮೋಹ ಪ್ರಾಣನ ಗತಿ ರಮ್ಯ ಗಂಜಳ
ಗಲಭೆಗಳಿಗಲ್ಲದೆ
ತನುಶಕ್ತಿ ಪ್ರಾಣಮುಕ್ತಿ ಮನಯುಕ್ತಿಯುತ ಮಹಿಮರಿಗೆಲ್ಲಿಹದೊ !
ಇಹಪರದಲ್ಲಿರ್ದು ಇಹಪರವರಿಯದ ಇಹಪರಗತಿಮತಿಯಿಂದೆ,
ನಿರ್ಗಮನವೇದಿ ನಿಶ್ಚಿಂತನಿವಾಸನಿಲುವೆ ಶರಣ ಕಾಣಾ
ಗುರುನಿರಂಜನ ಚನ್ನಬಸವಲಿಂಗ. ॥ ೧೧೧೮ ॥

೧೧೧೯

ತನಿರಸವ ತುಂಬಿರ್ದ ಫಳವು ತನ್ನ ಸಾರವನ್ನು ಸರಿಯಿಟ್ಟು ಹೇಳಿಕೊಳ್ಳದು.
ಶಿವಾನುಭಾವಭರಿತ ಸ್ವಯಾನಂದಸುಖಿ ಇದಿರಿಡಲರಿಯ ಕಾಣಿಸಿಕೊಳ್ಳಲರಿಯ.
ತನ್ನಲ್ಲಿ ತಾನು ತರಹರವಾದನಾಗಿ,
ಗುರುನಿರಂಜನ ಚನ್ನಬಸವಲಿಂಗವಿಡಿದು ಲಿಂಗವನರಿಯ. ॥ ೧೧೧೯ ॥

೧೧೨೦

ಲಿಂಗವನರಿದ ಶರಣಂಗೆ ತನುಕ್ರಿಯೆಯೆಂಬುದೇನು ನಿಲ್ಲದು.
ಮನಜ್ಞಾನಮಥನವರತು ಮಹವನೊಡವೆರೆದು,
ಮಹತ್ವ ಮಹತ್ವ ಸ್ವಯವಾದ ಮಹಾಂತ
ಗುರುನಿರಂಜನ ಚನ್ನಬಸವಲಿಂಗ ಮತ್ತಿಲ್ಲ ಸಮ್ಮುಖವಾಗಿ. ॥ ೧೧೨೦ ॥

೧೧೨೧

ವರ್ಷಾಕಾಲದಿ ಭೂಮಿ ಪೆದೆಗೊಂಡಲ್ಲಿ ಬಿತ್ತುವರು.
ಅಂಕುರಿಸಿ ಬಂದಲ್ಲಿ ಪರ್ಣವಾಗುವ ವಿಚಾರ ಮುಂದುಗೊಂಡಿಪ್ಪುದು.
ಪರ್ಣಗಂಡ ಮತ್ತೆ, ಹೊಡೆ ಕುಸುಮ ದೃಷ್ಟವಾಗಿಂಗೆ
ವಿಚಾರ ಮುಂದುಗೊಂಡಿಪ್ಪುದು, ಹೊಡೆಕುಸುಮಗಂಡ ಮತ್ತೆ
ಮೊದಲೆಂಬ ವಿಚಾರ ಮುಂದುಗೊಂಡಿಪ್ಪುದು.
ಮೊದಲಗಂಡ ಮತ್ತೆ ಏನುವನರಿಯದೆ ತಾನಾಗಿರ್ದ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮಂತೆ. ॥ ೧೧೨೧ ॥

೧೧೨೨

ಕಾಲಸುಖವನರಿಯದೆ ಪಂಚೇಂದ್ರಿಯಸುಖವನರಿಯದೆ
ಎಡಬಲವನರಿಯದೆ ಹಿಂದುಮುಂದುವನರಿಯದೆ
ಬಂದ ಬಟ್ಟೆಯ ಸಂದಸೌಖ್ಯ ಸ್ವಯವಾದ ಮತ್ತೆ,
ಸಗುಣ ನಿರ್ಗುಣ ಸೌರಭಕ್ಕೆ ಸಕಳನಾವರೇನು
ಗುರುನಿರಂಜನ ಚನ್ನಬಸವಲಿಂಗಸಮೇತ ನಿಃಕಳನಿರುಪಮ. ॥ ೧೧೨೨ ॥

೧೧೨೩

ನಿರುಪಮಲಿಂಗ ಸುಖಮುಖಭರಿತ ಶರಣನೊಂದು ವೇಳೆ,
ರೂಪವ ಹೊತ್ತರೆ ಜಡನಲ್ಲ, ನಿರೂಪವ ಹೊತ್ತರೆ ಅದ್ವೈತಿಯಲ್ಲ,
ಮತ್ತೆ ದ್ವಂದ್ವಾವಲಂಬ ನಿರಾವಲಂಬ
ಗುರುನಿರಂಜನ ಚನ್ನಬಸವಲಿಂಗಕ್ಕೆ ತಾನಿಲ್ಲವಾಗಿ. ॥ ೧೧೨೩ ॥

೧೧೨೪

ತಾನಿಲ್ಲದ ತವನಿಧಿಯ ತೆರನ ನೋಡಾ,
ನೀನೆನ್ನದ ನಿಲವು ಘನವನೊಳಕೊಂಡು
ತವನಿಧಿಯ ತಲೆಯಲಿಟ್ಟು, ಶಿವನೆಂಬ ಸುಳುಹಳಿದ ನಿಲುವೇ
ನಿತ್ಯತ್ವರೂಪವದು ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ॥ ೧೧೨೪ ॥

೧೧೨೫

ಹುಟ್ಟಿ ಬಂದು ಹುಟ್ಟಿದವಂಗೆ ಭಾವಿತತ್ರಯ,
ಸಾಕಾರಜನಿತಂಗೆ ಸರ್ವವು ಸಮ್ಮುಖ. ಸರ್ವವು ಸ್ನೇಹಸಮವಾದಲ್ಲಿ
ಉಭಯ ನಷ್ಟಮಳುಮೆ.
ಆ ಉಳುಮೆ ತಾನಾದಲ್ಲಿ
ಗುರುನಿರಂಜನ ಚನ್ನಬಸವಲಿಂಗವು ಬೇರಿಲ್ಲ. ॥ ೧೧೨೫ ॥

೧೧೨೬

ಲಿಂಗವೆಂಬ ಭಾವವಂಗದಲ್ಲರತು, ಅಂಗವೆಂಬ ಭಾವ ಲಿಂಗದಲ್ಲರತು,
ಲಿಂಗ ಅಂಗವೆಂಬ ಭಾವ ನಿಜದಲ್ಲರತು,
ನಿರ್ವಾಣಪದದಲ್ಲಿ ನಿವಾಸವಾದ ನಿರ್ಭೇದ್ಯಂಗೆ,
ನಡೆದುದೇ ಸತ್ಕ್ರಿಯೆ, ನುಡಿದುದೇ ಶಿವಾನುಭಾವ, ಹಿಡಿದುದೇ ಮಹಾಜ್ಞಾನ.
ಗುರುನಿರಂಜನ ಚನ್ನಬಸವಲಿಂಗಾ, ನಿಮ್ಮ ಶರಣ ಅಪೂರ್ವಚರಿತನು. ॥೧೧೨೬॥

೧೧೨೭

ಐದು ಬಣ್ಣದ ಪಕ್ಷಿ ಬಿಂದುವ ನುಂಗಿ ಬಿಂದುವಿನೊಳು ನಿಂದಿತ್ತು.
ನಾದವ ನುಂಗಿ ಸುನಾದಮಯವಾಗಿ ಕಳೆಯನಾವರಿಸಿ,
ಕಳೆ ಗುರುನಿರಂಜನ ಚನ್ನಬಸವಲಿಂಗವಾದ ಮತ್ತೆ,
ನಾದಬಿಂದುಕಳಾತೀತ ನಾಮ ನಿಂದಿತ್ತು ಶರಣಂಗೆ. ॥ ೧೧೨೭ ॥

೧೧೨೮

ಸುಡುಗಾಡ ನಡುವೆ ಕೆಂದಾವರೆಯ ಕಮಲ ನೋಡಾ.
ಆ ಕಮಲಕರ್ಣಿಕಕುಹರದಲ್ಲಿ ಹೊಗೆಯುಳಿದ ಬೆಂಕಿ ಭುಗಿಲೆಂದರಿಸಿತು ನೋಡಾ.
ಬೆಕ್ಕು ಬಂದು ಕಪ್ಪೆಯ ಹೊತ್ತು ವೈದಿಕನ ಚೀಲದಲಿರ್ದ ಪರಿಮಳದ ಗಂಟಹಿಡಿದು
ನೋಡಿ ಬಿಚ್ಚಿ ಸಚ್ಚಿನ್ನಾಟವ ಧರೆಯಾದಿ ಗಗನವ ಸೋಂಕಿಯಾಡುತ್ತಿರಲು
ನೂರೊಂದುಕುಲ ಹದಿನೆಂಟು ಜಾತಿಯೊಳಗೆ ನಿಂದು ಪುರುಷ ಪತ್ನಿಯ ನುಂಗಿ
ಗುರುನಿರಂಜನ ಚನ್ನಬಸವಲಿಂಗವು
ಕುಲ ಜಾತಿ ಸ್ಥಲದ ಗಲಭೆಯನರಿಯದಿರ್ದ ತಾನಾಗಿ ನೋಡಾ. ॥ ೧೧೨೮ ॥

೧೧೨೯

ಭೂಲೋಕದೊಳಗೆ ನಾಗಗನ್ನೆಯ ನಿದ್ರೆಯ ಕೆಡಿಸಿ
ಭಾವಿಸಿದರೆ ದೇವಲೋಕದ ಕನ್ಯೆಯಿವಳು ನೋಡಾ !
ತಾನೊಮ್ಮೆ ನೆಲ ನೀರು ಬೆಂಕಿ ಗಾಳಿಯ
ತನ್ನೊಳಗೆ ಹಿಡಿಯದೆ ಹಿಡಿದು ಬೇಟಕವಾಗಿ ನೋಡುತಿರಲು
ಕೂಟದ ಕುರುಹಳಿದ ಸುಖಿ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. ॥ ೧೧೨೯ ॥

೧೧೩೦

ಕಾಯದಲ್ಲಿ ಕಳೆಯನರಿಯದ ಕೋಣ,
ಪ್ರಾಣದಲ್ಲಿ ಗುಣವನರಿಯದ ಕತ್ತೆ, ಕರ್ಮಖಂಡಣೆಯ ಗೂಗಿ,

ಈ ಪ್ರಾಣಿಗಳ ಹೆಚ್ಚೆಯ ಹರಿದುರಿದು ಹರದನಾದನೊಬ್ಬ.
ಹರದನ ಕೈಯ ಮಾಣಿಕ ಮೂರುಭಾಗವಾಗಿ ಮುಸುಕಿದರೆ
ಹಬ್ಬದ ಸೊಬಗು ಹವಣವಾಗಿ ನಿಂದಿತ್ತು
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮಂತೆ. ॥ ೧೧೩೦ ॥

೧೧೩೧

ಸನ್ಯಾಸಿಯ ಹಾವುಗೆ ಉರಿವಲ್ಲಿ, ಸಾಲುಮನೆಯ ಜ್ಯೋತಿ ಬಂದಲ್ಲಿ,
ಸವತೆಯರಾಟಕ್ಕೆ ಬೇಟವಿಲ್ಲ.
ಕೋಟಿ ಕೋಟಿ ಕೋವಿದರೆಲ್ಲ ಹೇಳುವ ಕೇಳುವ ಸಾರಸಂದುವ ಮರೆದು
ಮೀರಿ ನಿಂದರು ಗುರುನಿರಂಜನ ಚನ್ನಬಸವಲಿಂಗವಾಗಿ ಶರಣಸಹಿತ. ॥೧೧೩೧॥

೧೧೩೨

ಅಯ್ಯಾ, ಸೊಸೆಯೆಂದರಿಯಬಾರದು, ಮಗಳೆಂದರಿಯಬಾರದು,
ಹಂಡೆತಿಯೆಂದರಿಯಬಾರದು, ತಾಯಿಯೆಂದರಿಯಬಾರದು ಇದೇನು ಹೇಳಾ ?
ಅಳಿಯನೆಂದರಿಯಬಾರದು, ಮಗನೆಂದರಿಯಬಾರದು,
ಮಾವನೆಂದರಿಯಬಾರದು, ತಂದೆಯೆಂದರಿಯಬಾರದು ಇದೇನು ಹೇಳಾ ?
ಹಾಳೂರ ಸುಟ್ಟು, ಬಾಳುವೆಯ ಮಾಡಿ ಕುಲಗೆಟ್ಟು, ಕೋಳುವೋದರು.
ಗುರುನಿರಂಜನ ಚನ್ನಬಸವಲಿಂಗಾ, ನಿಮ್ಮಂತೆ ನಿಮ್ಮಂಗದ ಮಹಿಮೆ. ॥೧೧೩೨॥

೧೧೩೩

ನಕಾರದೊಳಗೆ ಓಂಕಾರವ ಕಂಡೆ, ಮಕಾರದೊಳಗೆ ಓಂಕಾರವ ಕಂಡೆ,
ಶಿಕಾರದೊಳಗೆ ಓಂಕಾರವ ಕಂಡೆ, ವಕಾರದೊಳಗೆ ಓಂಕಾರವ ಕಂಡೆ,
ಯಕಾರದೊಳಗೆ ಓಂಕಾರವ ಕಂಡೆ.
ಓಂಕಾರದೊಳಗೆ ಪಂಚಾಕ್ಷರವ ಕಂಡು,
ನಮೋ ನಮೋ ಎನುತಿರ್ದೆ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮೊಳಗೆ ನೀವೆಯಾಗಿ. ॥ ೧೧೩೩ ॥

೧೧೩೪

ನಕಾರಪಂಚಾಕ್ಷರವ ನೋಡಲು
ಓಂಕಾರದೊಡಲೊಳಗಾಗಿ ಕಾಣಿಸಿಕೊಳ್ಳುತ್ತಿಹವು.
ಮಕಾರಪಂಚಾಕ್ಷರವ ನೋಡಲು
ಓಂಕಾರದೊಡಲೊಳಗಾಗಿ ಕಾಣಿಸಿಕೊಳ್ಳುತ್ತಿಹವು.
ಶಿಕಾರಪಂಚಾಕ್ಷರವ ನೋಡಲು

ಓಂಕಾರದೊಡಲೊಳಗಾಗಿ ಕಾಣಿಸಿಕೊಳ್ಳುತ್ತಿಹವು.
ವಕಾರಪಂಚಾಕ್ಷರವ ನೋಡಲು
ಓಂಕಾರದೊಡಲೊಳಗಾಗಿ ಕಾಣಿಸಿಕೊಳ್ಳುತ್ತಿಹವು.
ಯಕಾರಪಂಚಾಕ್ಷರವ ನೋಡಲು
ಓಂಕಾರದೊಡಲೊಳಗಾಗಿ ಕಾಣಿಸಿಕೊಳ್ಳುತ್ತಿಹವು.
ಇಂತು ಪಂಚಾಕ್ಷರದ ನೆಲೆಯ ಮೇಲೆ ಓಂಕಾರವ ನೋಡಲು
ಗುರುನಿರಂಜನ ಚನ್ನಬಸವಲಿಂಗಾ
ತಾನಾಗಿ ಕಾಣಿಸಿಕೊಳ್ಳುತಿರ್ದ ಶರಣನು. || ೧೧೩೪ ||

೧೧೩೫

ಲೋಕದೊಳಗಿನ ಲೌಕಿಕವ ಕಂಡು ನೋಡಿ
ನಿರಾಕಾರವನು ಸಾಕಾರದ ಕೈಯಿಂದ ಕೊಂಡು,
ಸಂಪದಲೋಲ ಸಗುಣ ನಿರ್ಗುಣಯಾತ್ರಿಯ ಘನವ ನೋಡಾ !
ಘನವ ಮನ ವೇದಿಸಿ ಗಂಭೀರವಗತನದಾಗುವಾಗಿ
ಆಗಿನ ಸೌಭಾಗ್ಯ ತಾನಾಗಿ ನಿಂದ
ಗುರುನಿರಂಜನ ಚನ್ನಬಸವಲಿಂಗವು ಶರಣ. || ೧೧೩೫ ||

೧೧೩೬

ಐವತ್ತಾರು ದೇಶದೊಳಗುಳ್ಳ ಸ್ಥಾವರಂಗಳ
ತನ್ನೊಳಗುಳ್ಳ ಭಕ್ತಿಯಲ್ಲರಿದರ್ಚಿಸಬಲ್ಲರೆ ಶರಣ.
ಆ ಶರಣ ಶಿವನಂತಿಪ್ಪ, ನೋಡಿರೆ.
ಕಾಲತ್ರಿಪುರವ ಸುಟ್ಟು ಬೂದಿಯನು ಸರ್ವಾಂಗದಲ್ಲಿ ಧರಿಸಿರ್ದ ನೋಡಿರೆ.
ಸರ್ಪಾಭರಣಭೂಷಿತನಾಗಿ ಚಂದ್ರನ ಮಸ್ತಕದಲ್ಲಿ ತಳೆದುಕೊಂಡಿರ್ದ ನೋಡಿರೆ.
ಬ್ರಹ್ಮಕಪಾಲ ಕೈಯಲ್ಲಿ ಪಿಡಿದು, ಮಾಯೆಯ ಗೆಲಿದ ನೋಡಿರೆ.
ನಾರಾಯಣನ ಕಣ್ಣ ಪಾದದಲ್ಲಿರಿಸಿ,
ಗಂಗೆ ಗೌರಿಯ ಸಂಪರ್ಕ ಒಳಹೊರಗೆ ಪರಿಪೂರ್ಣ ನೋಡಿರೆ,
ತನ್ನೊಲುಮೆಯ ಇರವೆಯಲ್ಲಿ ಕೈಲಾಸಮಧ್ಯಪೀಠ ಪ್ರಕಾಶದೊಳಗು ನೋಡಿರೆ
ಹುಟ್ಟಿ ಬೆಳೆದುದ ಸವರಿಬಿಟ್ಟು ಕಟ್ಟಾಳುಯೆನಿಸಿ ಕಾಣುವ
ಗುರುನಿರಂಜನ ಚನ್ನಬಸವಲಿಂಗದೊಳಗೆ. || ೧೧೩೬ ||

೧೧೩೭

ಬ್ರಹ್ಮನಂತೆ ವಿಷ್ಣುವಿನಂತೆ ರುದ್ರನಂತೆ ಇಂದ್ರ ಚಂದ್ರ ಸೂರ್ಯನಂತೆ
ಪಾವುಗೆಯ ಪಾದದಲ್ಲಿ ಧರಿಸಿ ಚರಿಸುತಿರ್ದ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣ. || ೧೧೩೭ ||

೧೧೩೮

ಲಿಂಗಮುದ್ರೆಯ ಕ್ಷೇತ್ರದೊಳಗೊಂದು ಬಾಳೆಯ ಬನವಿಪ್ಪುದು.
ಆ ಬನಕೊಂದು ಏಳು ಸೋಪಾನದ ಬಾವಿಯಿಪ್ಪುದು.
ಆ ಬಾವಿಯ ಉದಕವನು ಎತ್ತುವ ಮನುಜರಿಲ್ಲದೆ,
ಸತ್ವಕೈಯಿಂದೆತ್ತಿ ಸುತ್ತಲಿಕ್ಕೆ ಸೂಸದೆ ನಿವೇದಿಸಿಕೊಂಡರೆ
ನಿತ್ಯ ಫಲವು ಸವಿಚಿತ್ರವಾಗಿಪ್ಪುದು.
ಒಡೆಯ ಬಂಟರ ನಡೆಯಲ್ಲದೆ ನೋಡಿರೆ ಪರಿಣಾಮಪರವಲ್ಲ
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣಂಗೆ. ॥ ೧೧೩೮ ॥

೧೧೩೯

ಪತಿಯ ಮೋಹದ ಮತಿವಂತೆ ಬಾಲೆಯರು ನೀವು
ತಲೆಯಲ್ಲಿ ಕೊಡನೀರ ಹೊರಬೇಡಿ.
ಮುಂದೆ ಅಹಿತ ಕಾಣಿರೆ, ಕೊಡ ನೀರದೆಡೆಯಾಟದಲ್ಲಿ
ಕಾಲ ಸರ್ಪಳಿಗೆ ಕಡುನಾಚಿಕೆ, ಕೈಬಳೆ ಕಾಂತಿಯಡಗುವುದು.
ಕಟ್ಟಾಣಿಯೆಳೆಗಳೊಪ್ಪುಗೆಡುವುವು ಕಾಣಿರೆ, ಮೂಗುತಿ ತಾಳಿಗೆ ಮೋಸ ಕಾಣಿರೆ.
ಮತ್ತೆಂತೆಂದೊಡೆ, ಆ ಕೊಡನೊಡದು ನೀರ ಹೊರಿಸಿ ತಲೆಯಲ್ಲಿ ತಂದು
ಗುರುನಿರಂಜನ ಚನ್ನಬಸವಲಿಂಗಕ್ಕೆ ಅಭಿಷೇಕವದರೊಳು ಮಿಂದರೆ
ಸಕಲಾಭರಣ ಸ್ವಯವಾದವು ಮೂಗುತಿ ತಾಳಿಯೊಳು ನೋಡಿರೆ. ॥ ೧೧೩೯ ॥

**ಐಕ್ಯಸ್ಥಲದ ಉಳಿದ ವಚನಗಳು**

೧೧೪೦

ಭುವನ ಬ್ರಹ್ಮಾಂಡ ಸಚರಾಚರ ಸಗುಣ ನಿರ್ಗುಣ
ಸಕಲ ಸಂಪತ್ತೆಲ್ಲ ಜಲಪ್ರಳಯಗೊಂಡಿತ್ತು ನೋಡಾ.
ಆ ಜಲ ಪಾವಕಂಗಾಹುತಿಯಾಯಿತ್ತು.
ಆ ಪಾವಕನ ಪ್ರಭಾಮಂಡಲದಲ್ಲಿ ಪರಿಪೂರ್ಣತ್ವಾನಂದ ಪ್ರಕಾಶವೆರೆದು
ಆಯತ ಸ್ವಾಯತ ಸನ್ನಿಹಿತ ಸಮಾಧಾನವಾಗಿ
ನಿಂದ ನಿಲವರಿಯದೈಕ್ಯಪದ ನಿಜವಾಯಿತ್ತು
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣಂಗೆ. ॥ ೧೧೪೦ ॥

೧೧೪೧

ಪರುಷದ ಹೊರೆಯಲಿರ್ದ ಕಬ್ಬುನ
ನಾಮರೂಪು ನಷ್ಟವಾಗಿರ್ದಂತಾದುದು ನೋಡಾ ಎನ್ನ ಕಾಯವು.

ಕುಂಡಲಿಯನರಿದ ಕೀಟ ತನ್ನನರಿಯದಂತಾದುದು ನೋಡಾ ಎನ್ನ ಮನವು.
ಅನಲನಾವರಿಸಿದ ರಸವರತ ಪರ್ಣದ ಪರಿಯಂತಾದುದು ನೋಡಾ ಎನ್ನ ಭಾವವು.
ಇದು ಕಾರಣ ಹುಟ್ಟಿಹೊಂದದ ಘನಸಾರದಂತಿರ್ದ
ಉರಿಯೊಲ್ಲಭನ ನೆರೆದಂತಾದುದು ನೋಡಾ ಎನ್ನಾತ್ಮನು
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮೊಳಗೆ. ॥ ೧೧೪೧ ॥

೧೧೪೨

ಭೃಷ್ಟಬೀಜದಾಗು ನಷ್ಟವಾದಂತೆ ಇರ್ದಡೇನು ಹೋದಡೇನು
ಶಬ್ದಶೂನ್ಯ ಶರಣ ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ.
ನಾದಬಿಂದುಕಲಾ ನಿರಂಜನ ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣ. ॥ ೧೧೪೨ ॥

೧೧೪೩

ಇಂದ್ರಿಯಂಗಳುಂಟು ಭಾವನಾಸ್ತಿ.
ಕರಣಂಗಳುಂಟು ಮನನಾಸ್ತಿ.
ವಿಷಯಂಗಳುಂಟು ಪ್ರಾಣನಾಸ್ತಿ.
ಇದು ಕಾರಣ, ಗುರುನಿರಂಜನ ಚನ್ನಬಸವಲಿಂಗಾ
ನೀನುಂಟು ಶರಣನಾಸ್ತಿ. ॥ ೧೧೪೩ ॥

೧೧೪೪

ಕುಸುಮವ ವಾಸಿಸಿ ಕಂಡು ಕಾಣದಂತೆ,
ರುಚಿಯನರಿದು ಕಂಡು ಕಾಣದಂತೆ,
ರೂಪವನರಿದು ಕಂಡು ಕಾಣದಂತೆ,
ಸ್ಪರ್ಶವನರಿದು ಕಂಡು ಕಾಣದಂತೆ,
ಇದು ಕಾರಣ ಗುರುನಿರಂಜನ ಚನ್ನಬಸವಲಿಂಗಾ
ನಿಮ್ಮ ಶರಣ ನಿಮ್ಮನರಿದು ಕಂಡುಕಾಣದಂತೆ ನಿಮ್ಮೊಳಗೆ ನೋಡಾ. ॥೧೧೪೪॥

೧೧೪೫

ಮುತ್ತುಂಡ ಉದಕವ ತಂದು ಕಾಣಲುಂಟೆ ?
ಉರಿಯುಂಡ ಕರ್ಪುರವ ತಂದು ಕಾಣಲುಂಟೆ ?
ಗುರುನಿರಂಜನ ಚನ್ನಬಸವಲಿಂಗಾ
ನೀನುಂಡ ಶರಣನ ತಂದು ಕಾಣಲುಂಟೆ ಮೂರು ಲೋಕದೊಳಗೆ. ॥ ೧೧೪೫ ॥

೧೧೪೬

ಜಲಧಿಯೊಳಗೆ ಬಿದ್ದ ಜಲಗಲ್ಲ ತೆಗೆದು ಕಾಣಬಾರದು.
ಜ್ವಾಲಾದ್ರಿಗಿಟ್ಟ ಅರಗಿನಂಬ ತೆಗೆದು ಕಾಣಬಾರದು.
ಫಲವಾದಾಗ ಪರಾಗವ ತರಿಸಿ ಕಾಣಲುಬಾರದು.
ಗುರುನಿರಂಜನ ಚನ್ನಬಸವಲಿಂಗವೆರೆದ
ಶರಣನ ತಂದು ಕಾಣಲುಬಾರದು. ॥ ೧೧೪೬ ॥

೧೧೪೭

ಸರ್ಪದಷ್ಟ ಸರ್ವಾಂಗತಲೆಗೇರಿ ಲಯವನೈದುವಂತೆ,
ಸತ್ತ್ರಣವ ಸುಖಪ್ರಸನ್ನವೈದಿದ ಶರಣ ಜ್ಞಪ್ತಿಮಹವನೊಡಗೂಡಿ
ಮಹಾಗುರುನಿರಂಜನ ಚನ್ನಬಸವಲಿಂಗವಾದುದ-
ನೇನೆಂದುಪಮಿಸಬಹುದು ? ॥ ೧೧೪೭ ॥

೧೧೪೮

ನೀರಜಮೊಳಗೊಂದು ಮಾರ್ಜಾಲ ಹುಟ್ಟಿ
ಮೂರುಲೋಕವ ನುಂಗಿತ್ತು ನೋಡಾ.
ನುಂಗಿದ ಪ್ರಾಣಿಗಳ ಹಿಂಗಿಸಿ ನೋಡಿದರೆ ಸಂಗ್ರಹಕ್ಕೆ ಸಯವಾದವು.
ಸಂಗ್ರಹ ಸವೆದು ಶರಧಿಯಕೂಡಲು ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ
ನಿರಂಜನ ನಿಜೈಕ್ಯವದು ಕಾಣಾ ಗುರುನಿರಂಜನ ಚನ್ನಬಸವಲಿಂಗಾ. ॥ ೧೧೪೮॥

೧೧೪೯

ಕರ್ಕಸನ ಮಗಳು ಅರ್ಕಜನ ಮದುವೆಯ ಮಡದಿಯಾಗಿ
ತನ್ನ ಲಕ್ಷಕೋಟಿ ಮಕ್ಕಳ ಮುದ್ದಾಡಿಸುವಲ್ಲಿ
ನೋಡಬಂದವರ ಕೂಡಿ ಕ್ರೀಡಿಸುವಳು.
ಇದನರಿದ ಕುಲಗೇಡಿ ಭಂಗಹೀನ ಬಯಲ ಭ್ರಾಂತರು
ಕರ್ಕಸನ ಅರ್ಕನೊಡಲೊಳಗಿಕ್ಕಿ ಆಡುತಾಡುತ
ಅರತುನಿಂದರು ಗುರುನಿರಂಜನ ಚನ್ನಬಸವಲಿಂಗವಾಗಿ. ॥ ೧೧೪೯ ॥

೧೧೫೦

ಸತ್ತ ಹೆಣಗಳ ಬಾಯಲ್ಲಿ ಮಿಥ್ಯಗಳ್ಳರುಲುಹುವಿದೇನೊ !
ಉಲುಹಿಂಗೆ ಒಲಿದುಬಂದ ವಾಸನೆಯ ಬೆಳೆಯ ನೋಡಾ.
ಬೆಳೆಯ ಬುಡದಲ್ಲಿ ತಲೆಯೆದ್ದು ನೋಡಲು
ಹಲವುಪರಿ ಜನರು ಬೆದರಿ ಕಣ್ಣಬಿಟ್ಟು ನೋಡಿ

ತಲೆಯ ಹಿಡಿದು ನೆಲೆ ನೆಲೆಯ ದಾಂಟಿ ನಿಲುವೆಂದಲ್ಲಿ ಚಲುವಾಯಿತ್ತು
ಗುರುನಿರಂಜನ ಚನ್ನಬಸವಲಿಂಗಾ ನಿಮ್ಮ ಶರಣಂಗೆ. || ೧೧೫೦ ||

೧೧೫೧

ನೀರೊಳಗೆ ನೀರು ಹುಟ್ಟಿತೇನು ?
ಆರಾರ ಮೇಲಿಂದೆನ್ನರಸಿಕೊಂಡು ಬಂದಿತೇನು ?
ಆರನಾರಿಂಗೆ ತಂದಿತೇನು ? ಆರ ಸುಖವಾರಿಂಗೆ ತೋರಿಕೊಂಡಿತೇನು ?
ಆರ ಕೈಯಿಂದ ಮರೆಮರೆಯಾಗುತ ತೋರಿತ್ತದೇನು ?
ಗುರುನಿರಂಜನ ಚನ್ನಬಸವಲಿಂಗ ಮತ್ತೇನು ? || ೧೧೫೧ ||

೧೧೫೨

ಕ್ರಿಯಾನುಭಾವಿಗಳು ಮುಗ್ಧರಲ್ಲ, ಜ್ಞಾನಾನುಭಾವಿಗಳು ಮುಗ್ಧರಲ್ಲ,
ತತ್ವಾನುಭಾವಿಗಳು ಮುಗ್ಧರಲ್ಲ, ಶಿವಾನುಭಾವಿಗಳು ಮುಗ್ಧರಲ್ಲ,
ಪರಮಾನುಭಾವಿಗಳು ಮುಗ್ಧರಲ್ಲ, ಮಹಾನುಭಾವಿಗಳು ಮುಗ್ಧರಲ್ಲ,
ಮತ್ತಾರು ಮುಗ್ಧರೆಂದಡೆ ಮುಕ್ತಾಯಕ್ಕನಣ್ಣ ಆರೂಢನಜಗಣ್ಣ ಮುಗ್ಧ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೧೧೫೨ ||

೧೧೫೩

ಮುಗ್ಧನಾಗಿ ಮುಕ್ತಿಯ ಪಡೆಯಬೇಕೆಂದು ಸ್ಥೂಲತತ್ವದ
ಇಂದ್ರಿಯಂಗಳೆಲ್ಲ
ಸೂಕ್ಷ್ಮತತ್ವದ ಕರಣಂಗಳ ಕೈಯಲ್ಲಿ ವಿಷಯಂಗಳೆಂಬ ಕಾರಣತತ್ವದ
ಮೂಲದಲ್ಲಿ
ಭ್ರಾಂತಿ ಮಸ್ಸಾರದೊಳು ಮುಳುಗಿ ತೇಕಾಡುತ್ತಿಹ
ಸಕಲ ಗಂಜಳದ ಗುಂಜುವಾಗಿಹವು.
ಇಂತು ಭರಿತವಾದ ಸೋಂಗಿಗನು ಆಯಾಸಗೊಂಡು ಸುಮ್ಮನಿರ್ದಡೆ
ಮುಗ್ಧವಾದಾನೆಯೆ ? ಆಗನು.
ನಾಲಿಗೆ ಬಿದ್ದಂದು ಬಾಯಿಮುಗ್ಧ, ಕಂಗಳು ಹೋದಂದು ನೋಟಮುಗ್ಧ,
ಕರ್ಣದ್ವಾರ ಕಟ್ಟಿದಂದು ಕಿವಿಮುಗ್ಧ, ಕಾಲ ಕೂಡಿದಂದು ಸರ್ವಾಂಗಮುಗ್ಧ.
ಹೀಗಲ್ಲ ನಿಮ್ಮ ಶರಣ
ಗುರುನಿರಂಜನ ಚನ್ನಬಸವಲಿಂಗಾ,
ನಿಮ್ಮಲ್ಲಿ ಅಜಗಣ್ಣನೊಬ್ಬನೆ ಮುಗ್ಧನು. || ೧೧೫೩ ||

೧೧೫೪

ಅರ್ಥ ಪ್ರಾಣ ಅಭಿಮಾನ ನಾಸ್ತಿಯಾದಲ್ಲಿ
ಕಿಚ್ಚುಗೊಂಡು ಮುಗ್ಧರಾದರು ಅನಂತರು.
ಪರಧನ ಪರಸ್ತ್ರೀ ಪರಹಿಂಸೆಗೆಳಸಿ ಬಾಧೆಗೆ ಸಿಲ್ಕಿ ಮುಗ್ಧರಾದರಖಿಳರು.
ಅನಿಷ್ಟವೆರಸಿ ಅಧಿಕರೋಗವೆಡೆಗೊಂಡಲ್ಲಿ ಮುಗ್ಧರು.
ಆಯಾಯ ಕಾಲಕ್ಕೆ ಅಲ್ಲಲ್ಲಿಗೆ ಮುಗ್ಧರಲ್ಲದೆ ನಿತ್ಯಮುಗ್ಧರಲ್ಲ.
ಇದು ಕಾರಣ, ಲಿಂಗಶರಣನಿಂತಲ್ಲ.
ಕಾಯದಲ್ಲಿ ಮುಗ್ಧ, ಕರಣದಲ್ಲಿ ಮುಗ್ಧ,
ಪ್ರಾಣದಲ್ಲಿ ಮುಗ್ಧ, ಭಾವದಲ್ಲಿ ಮುಗ್ಧ,
ಗುರುನಿರಂಜನ ಚನ್ನಬಸವಲಿಂಗ ಸಮರಸವಾಗಿ. ॥ ೧೧೫೪ ॥

೧೧೫೫

ಲಿಂಗದಿಂದುದಯ ಸಮಗೆ, ಹೇಗಿರ್ದಡು ಲಿಂಗದಿಂದ ಬೆಳಿಗೆ ಎಂದು
ಹೆಡಕೆತ್ತಿ ಆಚರಿಸಲಾಗದು.
ಸತ್ತು ಹುಟ್ಟಿ ಬೆಳೆದು ಬೆಳೆಯೊಳು
ಸುಯಿಧಾನಿ ಸುಖಿಸರಿದು ಮರೆದು.
ಮಡಿಯಬಲ್ಲ ಮಹಿಮಂಗಲ್ಲದಿಲ್ಲವೈಕ್ಯಪದ
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೧೧೫೫ ॥

೧೧೫೬

ಆಯತವಾದಲ್ಲಿ ಅರಿಯಲುಂಟೆ ?
ಸ್ವಾಯತವಾದಲ್ಲಿ ಸಂಶಯವುಂಟೆ ?
ಸನ್ನಿಹಿತವಾದಲ್ಲಿ ನೆರೆಯಲುಂಟೆ ?
ಸತ್ತವರ ಹೆಸರಹೊತ್ತು ನಡೆದು ಹೋದರೆ
ಕತ್ತೆ ನಾಯಿಜನ್ಮ ಕಡೆಗಾಣಬಾರದು.
ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಕನು. ॥ ೧೧೫೬ ॥

೧೧೫೭

ಲಿಂಗವನರಿವನ್ನಕ್ಕರ ಅಂಗ ಮುಂದುಗೊಂಡಿಪ್ಪುದು.
ಜಂಗಮವನರಿವನ್ನಕ್ಕರ ಪ್ರಾಣ ಮುಂದುಗೊಂಡಿಪ್ಪುದು.
ಪ್ರಸಾದವನರಿವನ್ನಕ್ಕರ ಆತ್ಮ ಮುಂದುಗೊಂಡಿಪ್ಪುದು.
ಈ ತ್ರಿವಿಧವನೊಳಗಿಟ್ಟು ನೋಡಿದರೆ ಅಂಗ ಪ್ರಾಣಾತ್ಮಸಂಗ ಸಮರಸ
ಗುರುನಿರಂಜನ ಚನ್ನಬಸವಲಿಂಗದಲ್ಲಿ. ॥ ೧೧೫೭ ॥

೧೧೫೮

ಒಂಬತ್ತನೊಳಕೊಂಡು ಒಂದೇ ಪೂಜೆಯೆಂಬ ಹಾಗೆ
ನವನಾಳಸೂತ್ರವಪ್ಪ ಪಲವು ಪ್ರಕೃತಿಯನೊಳಕೊಂಡು
ತೋರುವ ಆತ್ಮವೊಂದೆ ಪೂಜೆಯಾಗಿಪ್ಪುದು.
ಆ ಒಂದೇ ಆತ್ಮನನರಿದು ಮರೆತಲ್ಲಿ
ಗುರುನಿರಂಜನ ಚನ್ನಬಸವಲಿಂಗವು ಶೂನ್ಯ. || ೧೧೫೮ ||

೧೧೫೯

ದಿವದೊಳಗೆ ದ್ಯುಮಣಿಯೊಪ್ಪಿ ತೋರುತ್ತಿಹುದು.
ರಜನಿಯೊಳಗೆ ತಾರಾಪತಿಯೊಪ್ಪಿ ತೋರುತ್ತಿಹುದು.
ಗಣತಿಂತಿಣಿಯೊಳಗೆ ಶಿವಾನುಭಾವವೊಪ್ಪಿ ತೋರುತ್ತಿಹುದು.
ಗುರುನಿರಂಜನ ಚನ್ನ ಬಸವಲಿಂಗದೊಳಗೆ
ಎನ್ನ ಮನವೊಪ್ಪಿ ತೋರುತ್ತಿಹುದು. || ೧೧೫೯ ||

೧೧೬೦

ಜಾಗ್ರಾವಲಂಬನವನು ಸ್ವಪ್ನ ತಾನೊಳಕೊಂಡು,
ಸ್ವಪ್ನಾವಲಂಬನವನು ಸುಷುಪ್ತಿ ತಾನೊಳಕೊಂಡು,
ತೂರ್ಯ ತೂರ್ಯಾತೀತ ಸಹಜಾನಂದಮಯವಾದಂತೆ,
ಆಚಾರಲಿಂಗಾವಲಂಬನವನು ಸುಜ್ಞಾನಲಿಂಗ ತಾನೊಳಕೊಂಡು,
ಸುಜ್ಞಾನಲಿಂಗಾವಲಂಬನವನು ಆತ್ಮಲಿಂಗವೊಳಗೊಂಡು
ಪರಿಪೂರ್ಣ ಪರಮಾನಂದ ಪರವಶದೊಳೋಲಾಡುತಿರ್ದನು
ಗುರುನಿರಂಜನ ಚನ್ನಬಸವಲಿಂಗದೊಳಗೆ. || ೧೧೬೦ ||

೧೧೬೧

ಮೂರುಲಕ್ಷದ ಮೇಲೆ ತೊಂಬತ್ತಾರುಸಾವಿರ ಶಿವತಿಂಥಿಣಿಯೆಲ್ಲ
ಶಿವಾನುಭಾವವ ಮಾಡುವನ್ನಕ್ಕರ,
ಕಲ್ಯಾಣದೊಳಗೆ ಕಾಣಬಾರದ ಕಾರ್ಯವ ಕಂಡು ಮಾಡಿದೆ,
ಕೇಳಬಾರದ ಮಾತುಮಥನಿಸಿದೆ, ನೋಡಬಾರದ ನೋಟದೊಳಗೆ
ನೋಡಿಯಾಡಿದೆ.
ಅನುಭಾವದಂಗವ ಮರೆದು ನಿಂದಲ್ಲಿ
ಗುರುನಿರಂಜನ ಚನ್ನಬಸವಲಿಂಗವೆಂಬ ನಾಮ ನಿರ್ನಾಮವಾಯಿತ್ತು. ||೧೧೬೧||

೧೧೬೨

ಹಾಳೂರೊಳಗೆ ಬಾಳುವೆಮಾಡುವಳೊಬ್ಬಳು ನಾರಿ.
ಮೊದಲ ಮಗನ ಕೈಗಳಲ್ಲಿ ಗಂಡನ ಕಣ್ಣು ನೋಡಾ.
ಆ ಕಣ್ಣ ಮೇಲೆ ಬಾಯಿತೆರೆದು ಮೂಗಿಲಿ ಕೊಂಬ
ಮುಸುಕಲಿಯೊಳಗಿರ್ದು ಕಣ್ಣನೆತ್ತಿ ಕಡೆಗಂಡು ಕರಗಿದೆಯೆಂಬ
ನಡುಮಾತಿನತ್ತತ್ತ ಗುರುನಿರಂಜನ ಚನ್ನಬಸವಲಿಂಗಾ. ॥ ೧೧೬೨ ॥

೧೧೬೩

ಮೊದಲಜನ್ಮದಲ್ಲಿ ಶಿವಾಂಶಿಕ ಬಂದನು.
ಎರಡನೆಯ ಜನ್ಮದಲ್ಲಿ ಜ್ಞಾನಕಲಾತ್ಮನಾಗಿ ಬಂದನು.
ಮೂರನೆಯ ಜನ್ಮದಲ್ಲಿ ಶಿಷ್ಯನಾಗಿ ಬಂದನು.
ನಾಲ್ಕನೆಯ ಜನ್ಮದಲ್ಲಿ ಲಿಂಗಭಕ್ತನಾಗಿ ಬಂದನು.
ಐದನೆಯ ಜನ್ಮದಲ್ಲಿ ನಿಷ್ಠಾಮಹೇಶ್ವರನಾಗಿ ಬಂದನು.
ಆರನೆಯ ಜನ್ಮದಲ್ಲಿ ನಿಜಪ್ರಸಾದಿಯಾಗಿ ಬಂದನು.
ಏಳನೆಯ ಜನ್ಮದಲ್ಲಿ ಪ್ರಾಣಲಿಂಗಿಯಾಗಿ ಬಂದನು.
ಎಂಟನೆಯ ಜನ್ಮದಲ್ಲಿ ಶರಣನಾಗಿ ಬಂದನು.
ಒಂಬತ್ತನೆಯ ಜನ್ಮದಲ್ಲಿ ಐಕ್ಯನಾಗಿ
ಗುರುನಿರಂಜನ ಚನ್ನಬಸವಲಿಂಗದಲ್ಲಿ
ನಿರಂತರ ಸುಖಪರಿಣಾಮಿಯಾಗಿ ನಿಂದನು. ॥ ೧೧೬೩ ॥

**ಗುರುಭಕ್ತಿಸಂಸಾರಿ**

೧೧೬೪

ಲಿಂಗವು ಜ್ಞಾನಸಂಸಾರಿ, ಜಂಗಮವು ವೈರಾಗ್ಯಸಂಸಾರಿ.
ಈ ಸಂಸಾರದ ಸಂದನುರುಹಿ ನಿಃಸಂಸಾರಿಯಾದ
ನಿರುಪಮಾನಂದೈಕ್ಯನ ಪದವ ತೋರಿಸಾ ನಿಮ್ಮ ಧರ್ಮ
ಗುರುನಿರಂಜನ ಚನ್ನಬಸವಲಿಂಗಾ. ॥ ೧೧೬೪ ॥

೧೧೬೫

ಭಕ್ತಿಯೆಂಬುದು ತನುಗತಿ, ಯುಕ್ತಿಯೆಂಬುದು ಮನಗತಿ,
ವಿರಕ್ತಿಯೆಂಬುದು ಭಾವಗತಿ - ಇವು ಒಂದೊಂದು ಲೀಲೆ.
ಈ ಲೀಲೆಯನರಿದಿರುವನ್ನಕ್ಕರ ಲೋಲಮುಖಿಮಯ ಮುಂದಿಪ್ಪುದು
ಇದು ಕಾರಣ ಈಸುವನೋಸರಿಸದೆ ನೀವಾಗಿರ್ದ ಭಾವ ಅದೇ ಸದ್ಭಾವ
ಗುರುನಿರಂಜನ ಚನ್ನಬಸವಲಿಂಗಾ. ॥ ೧೧೬೫ ॥

೧೧೬೬

ಸದ್ಭಾವಸಂಬಂಧವೆಂಬುದು ಸಾಮಾನ್ಯವೇ ಕೇಳಾ.
ಒಂದುಲಕ್ಷ ಶ್ರದ್ಧೆಯುತಭಕ್ತಿಯನೆಸಗಿದರಿಲ್ಲ,
ಒಂದುಲಕ್ಷ ನಿಷ್ಠಾಯುತಭಕ್ತಿಯನೆಸಗಿದರಿಲ್ಲ,
ಒಂದುಲಕ್ಷ ಸಾವಧಾನಯುತಭಕ್ತಿಯನೆಸಗಿದರಿಲ್ಲ.
ಒಂದುಲಕ್ಷ ಅನುಭಾವಯುತಭಕ್ತಿಯನೆಸಗಿದರಿಲ್ಲ.
ಒಂದುಲಕ್ಷ ಆನಂದಯುತಭಕ್ತಿಯನೆಸಗಿದರಿಲ್ಲ.
ಒಂದುಲಕ್ಷ ಸಮರಸಯುಕ್ತಭಕ್ತಿಯನೆಸಗಿದರಿಲ್ಲ.
ಗುರುನಿರಂಜನ ಚನ್ನಬಸವಲಿಂಗವಾದ ನಿಜಭಾವ. ॥ ೧೧೬೬ ॥

೧೧೬೭

ಕಾಯವನಿತ್ತು ಅರಿದೆನೆಂಬುದು ಕಳವಳಿಕೆ.
ಮನವನಿತ್ತು ಅರಿದೆನೆಂಬುದು ಅರೆಮರುಳು.
ಪ್ರಾಣವನಿತ್ತು ಅರಿದೆನೆಂಬುದು ಭ್ರಾಂತು.
ಸ್ವಯವನಿತ್ತು ಪರವನರಿದೆನೆಂಬುದು ಬಲುಹುಸಿ.
ಮತ್ತೆಂತೆಂದರೆ, ಅರಿವನರಿದು ನೆರೆಯಬೇಕೆಂಬುದನರಿದು ಮರೆದ
ಮಹಾಂತ ನಿಲುವೇ ನಿಜಗುರುನಿರಂಜನ ಚನ್ನಬಸವಲಿಂಗ ತಾನಾದ.॥ ೧೧೬೭॥

೧೧೬೮

ಕಂಡೆನೆಂಬುವರು ಕಾಣಿಕೆಯೊಳಗಿಪ್ಪರು.
ಕೊಟ್ಟುಕೊಂಡೆನೆಂಬುವರು ವ್ಯವಹಾರದೊಳಗಿಪ್ಪರು.
ತಾನಾಗಿ ಮರೆದೆನೆಂಬುವರು ಭಿನ್ನಕಲಂಕಿಗಳು.
ಇವರ ಗತಿಮತಿಯಂತಿರಲಿ ನಮ್ಮ ಗುರುನಿರಂಜನ ಚನ್ನಬಸವಲಿಂಗ
ತಾನಾಗಿ ಮರೆದಿರವು ಅಪೂರ್ವ. ॥ ೧೧೬೮ ॥

೧೧೬೯

ವಾಯುಭೂತ ಕರಣೇಂದ್ರಿಯವಿಷಯವೆಂಬ
ಪಂಚಪಂಚತತ್ವ ಪದಾರ್ಥಗಳೆಂಬುದೊಂದು ಭಾವ.
ತಾನೆಂಬುದೊಂದು ಭಾವ, ಇದಿರೆಂಬುದೊಂದು ಭಾವ,
ಕೊಡಬೇಕೆಂಬುದೊಂದು ಭಾವ, ಕೊಳ್ಳಬೇಕೆಂಬುದೊಂದು ಭಾವ.
ಈ ಭಾವಂಗಳೈದರ ತೋರಿಕೆಯನರಿದು ಮರೆದಲ್ಲಿ
ಮಹಾಮಹಿಮ ಗುರುನಿರಂಜನ ಚನ್ನಬಸವಲಿಂಗ ತಾನಾದ ಶರಣ. ॥ ೧೧೬೯ ॥

೧೧೭೦

ಕುರುಹಿಲ್ಲದ ತೆರಹಿಲ್ಲದ ಮರಹಿಲ್ಲದ ಮರಹಿನಿಂದೊಪ್ಪುವ ನಿಲುವಿಂಗೆ
ಈ ತೆರನಾಗಿ ಹೆಸರನರುಹಿಸಿ ಕಾಣಿಸಿಕೊಂಬ ಸಮಸ್ತುಗಳೆಲ್ಲ
ಅನ್ಯೋನ್ಯವಾಗಿಪ್ಪವಲ್ಲದೆ ತಾವುಪೊಂದಾಗಿ ತೋರಿಕೆ ಕಾಣಿಸದು ನೋಡಾ.
ಅದೇನು ಕಾರಣವೆಂದರೆ, ತಾನು ತನ್ನ ವಿನೋದಕ್ಕೆ
ಶರಣಲಿಂಗಪದಾರ್ಥವೆಂದು ತೋರಿದ ತೋರಿಕೆಯಲ್ಲದೆ ಮತ್ತೇನು ಇಲ್ಲ
ಕಾಣಾ.
ಬಳಿಕ ಗುರುನಿರಂಜನ ಚನ್ನಬಸವಲಿಂಗ ತಾನೇ ಕಾಣಾ. || ೧೧೭೦ ||

೧೧೭೧

ಮನವರಿಯದ ಬುದ್ಧೇಂದ್ರಿಯ ವಿಷಯಪಂಚಕವಿಲ್ಲ.
ಮನವರಿಯದ ಕರ್ಮೇಂದ್ರಿಯ ವಿಷಯಪಂಚಕವಿಲ್ಲ.
ಮನವರಿಯದ ಮತ್ತೇನನುವಿಲ್ಲ.
ಇದು ಕಾರಣ ಮನೋಮೂರ್ತಿ ಮಹಾಲಿಂಗ ತಾನೆಂದರಿದ ಮಹಿಮಂಗೆ
ಮತ್ತೆ ಅರಿವೆಂದರೇನು ಅರ್ಪಿತವೆಂದರೇನು ಅನರ್ಪಿತವೆಂದರೇನು ?
ಸಂಶಯಕೆ ಸಂಬಂಧ ಕಾಣಾ ಇದು
ಗುರುನಿರಂಜನ ಚನ್ನಬಸವಲಿಂಗಾ. || ೧೧೭೧ ||

೧೧೭೨

ತತ್ವತ್ರಯಂಗಳು ನಿತ್ಯತ್ವವನೈದಿ ಮಹವೆಂದು ಮರೆದ ನಿಲುವಿಂಗೆ
ರೂಪನರ್ಪಿಸಲಿಲ್ಲವೆಂಬುದು ಕೊರತೆ, ರೂಪಿಲ್ಲದ ರೂಪು ತಾನಾಗಿಪ್ಪನು.
ರುಚಿಯನರ್ಪಿಸಲಿಲ್ಲವೆಂಬುದು ಕೊರತೆ, ರುಚಿಯಿಲ್ಲದರುಚಿಯು ತಾನಾಗಿಪ್ಪನು.
ತೃಪ್ತಿಯನರ್ಪಿಸಲಿಲ್ಲವೆಂಬುದು ಕೊರತೆ, ತೃಪ್ತಿಯಿಲ್ಲದ ತೃಪ್ತಿ ತಾನಾಗಿಪ್ಪನು.
ಇದು ಕಾರಣ ಸಾಧಕದ ಭೇದಕದ ನುಡಿ ನುಡಿದಲ್ಲಿಯೇ ಸೃಷ್ಟಿನಷ್ಟ.
ಆ ಭಾವವನರಿಯದ ಸದ್ಭಾವ ರೂಪು ತಾನೆ
ಗುರುನಿರಂಜನ ಚನ್ನಬಸವಲಿಂಗಾ. || ೧೧೭೨ ||

೧೧೭೩

ಸ್ಥೂಲಾಂಗವೆಂಬ ಷಡ್ವಿಧೇಂದ್ರಿಯಂಗಳಲ್ಲಿ
ಷಡ್ವಿಧಲಿಂಗವಾಗಿರ್ದ ಇಷ್ಟಲಿಂಗಾಯತನಾಗಿ.
ಸೂಕ್ಷ್ಮಾಂಗವೆಂಬ ಷಟ್ಕರಣಂಗಳಲ್ಲಿ
ಷಡ್ವಿಧಲಿಂಗವಾಗಿರ್ದ ಪ್ರಾಣಲಿಂಗಸ್ವಾಯತನಾಗಿ.

ಕಾರಣಾಂಗವೆಂಬ ಷಡ್ವಿಧವಿಷಯಂಗಳಲ್ಲಿ
ಷಡ್ವಿಧಲಿಂಗವಾಗಿರ್ದ ಭಾವಲಿಂಗಸನ್ನಿಹಿತನಾಗಿ.
ಈ ತ್ರಿವಿಧಲಿಂಗವೊಂದಾಗಿರ್ದ ಮಹಾಘನಾನಂದ ಪ್ರಭಾನಿತ್ಯ ಶರಣನು,
ತಾನೆ ನಡೆದುದೆಲ್ಲ ಸತ್ಕ್ರಿಯೆ, ಹಿಡಿದುದೆಲ್ಲ ಸದ್ವ್ರತ,
ನುಡಿದುದೆಲ್ಲ ಪರಮಾನುಭಾವ,
ನೆನೆವುದೆಲ್ಲ ಶಿವಮಂತ್ರ, ಧ್ಯಾನಿಸುವುದೆಲ್ಲ ಸ್ವಯಮಾನಂದ ಸುಖವು,
ನೋಡಿ, ಪರಿಣಾಮಿಸುವುದೆಲ್ಲ ನಿಜಲೀಲೆ ಮತ್ತೇನುಯಿಲ್ಲದ
ಎತ್ತೆತ್ತರುವಿನತ್ತತ್ತ,
ಗುರುನಿರಂಜನ ಚನ್ನಬಸವಲಿಂಗ ತಾನೇ ಪರಿಪೂರ್ಣ. || ೧೧೭೩ ||

೧೧೭೪

ಪರಿಪೂರ್ಣಭಾವಿ ಶರಣ ತಾನೊಂದು ವೇಳೆ
ಬರಿಯಕಾಲಲ್ಲಿ ನಡೆವನೇ, ಬರಿಯ ಕೈಯಲ್ಲಿ ಹಿಡಿವನೇ,
ಬರಿಯ ಮುಖದಲ್ಲಿ ನುಡಿವನೇ, ಬರಿಯ ಕಣ್ಣಿನಿಂದ ನೋಡುವನೇ,
ಬರಿಯ ಹೃದಯದಲ್ಲಿ ಸುಖಿಸುವನೇ.
ಆ ಭಾವದೊಳಗೆ ಈ ಭಾವ ಸದ್ಭಾವವದು ತಾನೆ
ಗುರುನಿರಂಜನ ಚನ್ನಬಸವಲಿಂಗಾ. || ೧೧೭೪ ||

೧೧೭೫

ಯೋನಿಯಲ್ಲಿ ಜನಿಸಿದ ಭಾವ ಸಂಸಾರದಲ್ಲಿ ತೊಳಲುವುದೇ ಸಾಕ್ಷಿ.
ಸಂಸಾರದಲ್ಲಿ ತೊಳಲುವ ಭಾವ ಮುಂದೆ
ಮರಣಬಾಧೆಯಲ್ಲಿ ಮುಳುಗುವುದೇ ಸಾಕ್ಷಿ.
ಅದಲ್ಲದೆ ಗುರುವಿನಲ್ಲಿ ಜನಿಸಿದ ಭಾವ ಸರ್ವಾಚಾರ ಸಂಪತ್ತಿನೊಳಗೆ
ಭೋಗೋಪಭೋಗಿಯಾಗಿಹುದೇ ಸಾಕ್ಷಿ.
ಸರ್ವಾಚಾರಸಂಪತ್ತಿನೊಳಗೆ ಭೋಗೋಪಭೋಗಿಯಾಗಿರ್ದ ಭಾವ
ಮಹಾಲಿಂಗೈಕ್ಯಪದಲೋಲವಾದುದೇ ಸಾಕ್ಷಿ.
ಇದು ಕಾರಣ ಆ ಭಾವಕ್ಕೆ ಸಂದುಸಂಶಯದ ಗೊಂದಣವುಂಟಲ್ಲದೆ
ಈ ಭಾವಕ್ಕೆ ಸಂದುಸಂಶಯದ ಗೊಂದಣವುಂಟೆ ?
ಇದೇ ಗುರುನಿರಂಜನ ಚನ್ನಬಸವಲಿಂಗ ತಾನಾದ ಶರಣಸದ್ಭಾವ. || ೧೧೭೫ ||

೧೧೭೬

ಶರಣ ತಾ ತನ್ನ ವಿನೋದಕ್ಕೆ ಕುರುಹಿಟ್ಟು ರಚಿಸಿದಲ್ಲಿ
ಆ ಶರಣನ ಇಚ್ಛಾಮಾತ್ರದಲ್ಲಿ ತನುಮನಪ್ರಾಣಭಾವ

ಜ್ಞಾನಾತ್ಮಂಗಳಿರುತ್ತಿಹವು.
ಅದು ಕಾರಣ ಗುರುಜಾತ ಶರಣರೆಂದು ಲಾಂಛನಧಾರಿಯಾದ ಮೇಲೆ
ಮತ್ತೆ ನಮಗೆ ತನುಭಾವವೆನಲು ಅಂತೆಯಾಗಿಪ್ಪುದು
ಮನಭಾವವೆನಲು ಅಂತೆಯಾಗಿಪ್ಪುದು
ಪ್ರಾಣನ ಪ್ರಕೃತಿಯೆನ್ನಲು ಅಂತೆಯಾಗಿಪ್ಪುದು.
ತಾನಿಟ್ಟ ಪಿಶಾಚಿ ತನ್ನನಾವರಿಸಿ ನುಂಗುವಂತೆ,
ಭಾವದೊಳಗಾಗಿ ಭವದೊಳಗಾದರು.
ಅಂತಲ್ಲ, ಶರಣನು, ಭಾವಾತೀತ; ಗುರುನಿರಂಜನ ಚನ್ನಬಸವಲಿಂಗದೊಳಗೆ
ಸದ್ಭಾವೈಕ್ಯ ಸದಾನಂದ. || ೧೧೭೬ ||

೧೧೭೭

ಗುರುಕರಜಾತನಾದ ಸಗುಣಾನಂದ ಸಂಪನ್ನನು
ಬಿಡಬೇಕು ಕಾಣಾ ತನುತ್ರಯದಾಸೆಯನು, ಭಕ್ತಿಕ್ರಿಯಾ ವಿಶ್ವಾಸವನು.
ಶಿವಲಿಂಗನಿಷ್ಠೆ ನಿರ್ಗುಣಾನಂದೈಶ್ವರ್ಯವುಳ್ಳಾತನು
ಬಿಡಬೇಕು ಕಾಣಾ ಮಲತ್ರಯದಾಸೆಯನು, ಲಿಂಗಸುಖರತಿ ಮೋಹವನು.
ಜಂಗಮದಾಸೋಹಸುಖಮಯನು ಬಿಡಬೇಕು ಕಾಣಾ
ಜೀವನತ್ರಯದಾಸೆಯನು, ತ್ರಿವಿಧ ಪ್ರಸಾದಸಾರವನು.
ಇದು ಕಾರಣ ಗುರುನಿರಂಜನ ಚನ್ನಬಸವಲಿಂಗ ಸಾಕ್ಷಿಯಲ್ಲಿ
ಇವು ತಪ್ಪಿದರೆ ಮುಂದೆ ನರಕ ತಪ್ಪದು ಕಾಣಾ. || ೧೧೭೭ ||

೧೧೭೮

ಇಹದ ಪ್ರಸಾದಭೋಗ, ಪರದ ನಿಜಮೋಕ್ಷ,
ಮಧ್ಯಸುಖಮಯವೆಂಬ - ಈ ತ್ರಿವಿಧ ಚರಿತೆಯೊಳಗೆ
ಬೇಡ ಬೇಡ ಭಕ್ತಭವಿಯ ಶಿವಾನುಭಾವ.
ಬರಿಯ ಗೋಷ್ಠಿಯ ಬಯಲುರತಿಯ ಸಂಸಾರ ಸುಖವ
ಸದ್ಭಕ್ತಿ ತನುದಂಡನೆ ಗುರುನಿರಂಜನ ಚನ್ನಬಸವಲಿಂಗ
ಸನ್ನಿಹಿತ ಹುಚ್ಚು ಮರುಳು. || ೧೧೭೮ ||

೧೧೭೯

ನೆಲದಮೇಲೆ ನಡೆವರು, ನೀರ ಮೇಲೆ ನಡೆವರು,
ಗಗನದ ಮೇಲೆ ನಡೆವರು, ಗಾಳಿಯ ಮೇಲೆ ನಡೆವರು,
ಪಾವಕನ ಮೇಲೆ ನಡೆವರು ಇವರೆಲ್ಲ ಆತ್ಮವಿದ್ಯೆ ಸಾಧಕರು.
ಇವರ ವಿದ್ಯಕ್ಕೆ ಸಮ್ಮುಖಿ ಗುರುನಿರಂಜನ ಚನ್ನಬಸವಲಿಂಗದ

ನಿಲುವು ತಾನಾದ ಕುರುಹು
ಪಂಚಗಮನ ನಿಷ್ಪತ್ತಿ ನಿರುಪಮಾನಂದ ನಿತ್ಯ ಕಾಣಾ. ॥ ೧೧೭೯ ॥

೧೧೮೦

ಸಮ್ಮುಖ ಸಾಕಾರ ಹುಸಿಯೆಂಬುದ ತನುವಿಡಿದು ಕಂಡು,
ತನು ಹುಸಿಯೆಂಬುದ ಮನದಲ್ಲಿ ಕಂಡು,
ಮನ ಹುಸಿಯೆಂಬುದ ವಿವೇಕವಿಡಿದುಕಂಡು,
ವಿವೇಕದ ಮುಂದೆ ಅವಿವೇಕವೆಂಬುದ ಆತ್ಮಜ್ಞಾನದಿಂದ ಕಂಡು,
ಆತ್ಮ ಪರಮಾತ್ಮವೆಂಬ ಉಭಯ ಭಾವ ಭ್ರಾಂತಿಯೆಂದು ಕಂಡು,
ಕಂಡಮಂಡಲ ಕಾರಣಮೂರ್ತಿ ತಾನೆಂದು ಮರೆದಿರುವ ಮಹಾಂತ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. ॥ ೧೧೮೦ ॥

೧೧೮೧

ಕುರುಹಿಲ್ಲದೆ ಸಿರಿಸಂಪದ ಸಿಕ್ಕದೆಂದು ಕುರುಹನೊಡ್ಡಿದನೊಬ್ಬ ಜಾಣ.
ಆ ಕುರುಹಿನ ಕೂಟದಿಂದೆ, ಕರಿದು ಬಿಳಿದೆಂಬ ಕರ್ಮಹಾಸಿಕೆಯಾಗಿ,
ಭಕ್ತಭೋಗ ನಿದ್ರೆಯಾದಿ ಸಾಕಾರ ನಿರಾಕಾರಸಂಭ್ರಮ ಸಂದಣಿಸಿತ್ತು.
ಇದನರಿದು ನೋಡುವ ಕಣ್ಣಿನವರ ಕಾಣುತ್ತ ಕಣ್ಣಿಲ್ಲದವರ ಕೈಯ ಪಿಡಿದು,
ಕಾಣ ಕಾಣಬಾರದ ಕಂಡು, ಕಂಡು ಕಾಮಿತಸುಖಿಯಾಗಿ
ನಿಃಕಾಮಿ ಗುರುನಿರಂಜನ ಚನ್ನಬಸವಲಿಂಗ ತಾನೆ
ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯ ಪ್ರಾಣಚೈತನ್ಯ. ॥ ೧೧೮೧ ॥

### ಲಿಂಗಾಂಗಲೀಲಾ ಷಟ್‌ಸ್ಥಲದ ವಚನಗಳು

೧೧೮೨

ಮಹಾಬಯಲು ನಿರ್ವಯಲು ನಿರವಯ ನಿರಂಜನ
ನಿಃಶೂನ್ಯ ನಿಃಕಲ ಪರಶಿವಲಿಂಗವು
ಆ ನೆನಹು ನಿರ್ಧರಿಸಿ ಚಿತ್ತೆನಿಸಿತ್ತು.
ಆ ಚಿತ್ತಿನಿಂದೆ ಚಿನ್ನಾದ ಚಿದ್ಬಿಂದು ಚಿತ್ಕಳೆಯುದಯವಾಗಿ,
ಆ ಮೂಲ ಚಿತ್ತುಗೂಡಿ, ಗಟ್ಟಿಗೊಂಡು
ಗೋಲಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.
ಆ ಮಹಾ ಚಿದ್ಘನಲಿಂಗಕ್ಕೆ ಆ ಚಿತ್ತೆ ಅಂಗವಾಗಿ ಶಕ್ತಿಯೆನಿಸಿತ್ತು ನೋಡಾ.
ಆ ಶಿವಶಕ್ತಿಗಳಿಂದೆ ಸಕಲಸಂಭ್ರಮವಾಯಿತ್ತು.
ಆ ಸಕಲಸಂಭ್ರಮೈಶ್ವರ್ಯದೊಳಗೆ
ಆ ಶಿವನ ಅನಂತ ಸಹಸ್ರ ಸಹಸ್ರಾಂಶದೊಳಗೊಂದಂಶ ಬೇರ್ಪಡಿಸಿ

ಚಿದಾತ್ಮನಾಗಿ ಕಾಯಾಶ್ರಯಗೊಂಡು ನಿರ್ಮಿಸಿದಲ್ಲಿ,
ಆ ಕಾಯಸಂಗ ಸಕಲನಿಃಕಲತತ್ವಾನ್ವಿತದಿಂದೆ
ತನ್ನಾದಿಯ ಮರೆದು ಪರಾದಿ ಸ್ವಯವಾಗಿ,
ಪಂಚಕೃತ್ಯಪರಿಯುತದಿಂದಿರ್ದ ಆತ್ಮನ ತೇರ್ಕಡೆಯಾಂತರವರಿದ
ಶಿವ ತಾನೆ ಸುಜ್ಞಾನಗುರುವಾಗಿ ಅಂತರಂಗದಲ್ಲಿ ಬೆಳಗಲು,
ಆ ಬೆಳಗಿನಿಂದೆ ಆತ್ಮನು ತನ್ನಾದಿ ಮಧ್ಯಾವಸಾನವನರಿದು,
ಮಿಥ್ಯ ಮಾಯಾಸಂಸಾರಸಂಬಂಧವನಳಿಸಿ ತನ್ನ ಕಾಂಬಾವಸ್ಥೆಯ
ಮುಂದೆ ಆ ಜ್ಞಾನಗುರುವೇ ಕ್ರಿಯಾಘನಗುರುವಾಗಿ ತೋರಲು
ಅಜ್ಞಾನಕಲಾತ್ಮನು ಗುರೋಪಾಸ್ತೆಯ ಮಾಡುವ ನಿಲವರಿದು
ಗುರುಕಾರುಣ್ಯದಿಂದಿಷ್ಟವನನುಗ್ರಹಿಸಿಕೊಡಲು ಆ ಲಿಂಗವಿಡಿದು ಧಾರಣವಾಗಿ,
ಚಿದ್ಭಸಿತ ರುದ್ರಾಕ್ಷಿಯ ಧರಿಸಿ, ಪರಮಪಂಚಾಕ್ಷರ ಪ್ರಾಣವಾಗಿ,
ಆ ಗುರುಲಿಂಗಕ್ಕೆ ಭಕ್ತಾಂಗನೆಯಾಗಿ ತ್ರಿವಿಧಾಚಾರವನರಿದು,
ಷಟ್‌ಸ್ಥಲದಲ್ಲಿ ನಿಂದು ಚಿದಂಗ ಚಿಲ್ಲಿಂಗಭಾವದವಿರಳ ವಿನೋದಕ್ಕೆ
ಭಾವತ್ರಿಸ್ಥಲವನುಂಟುಮಾಡಿಕೊಂಡಾಚರಿಸುತಿರ್ದ ತಾನೆ
ನಮ್ಮ ಗುರುನಿರಂಜನ ಚನ್ನಬಸವಲಿಂಗವು. ॥ ೧೧೮೨ ॥

**ಆಚಾರಾಂಗಸ್ಥಲದ ವಚನಗಳು**

ಸೂತ್ರ : ಇಂತು ತನ್ನ ಲೀಲಾವಿನೋದಕ್ಕೆ ಬಂದ ಲಿಂಗವು ತನ್ನ ಚಿದಂಗಭಕ್ತನ ಆಚಾರ ಮುಖದಲ್ಲಿ ವಿನೋದಿಸಿದ ಕಾರಣ ಆಚಾರಸ್ಥಲವೆಂದು ಹೇಳಲಾಯಿತ್ತು.

೧೧೮೩

ನಾದಬಿಂದುಕಲಾತೀತವಾದ ಅವಿರಳ ಪ್ರಕಾಶಲಿಂಗವ
ರೂಪನರಿದು ಅರ್ಚಿಸಬಾರದು ನೋಡಾ.
ಆದಿಮಧ್ಯಾಂತಶೂನ್ಯ ಲಿಂಗವ ಸಾಧಿಸಿ ತಂದು ಪೂಜಿಸಬಾರದು ನೋಡಾ.
ಶೂನ್ಯ ನಿಃಶೂನ್ಯ ಗತಿಶೂನ್ಯಲಿಂಗವ
ಮತಿನಾಮವಿಟ್ಟು ಅರಿದರ್ಚಿಸಬಾರದು ನೋಡಾ.
ಇಲ್ಲ ಇಲ್ಲದ ಲಿಂಗವನಲ್ಲಲ್ಲಿಗೆ ತಂದು
ಮೆಲ್ಲಮೆಲ್ಲನೆ ಪೂಜಿಸುವರಂಗದಲ್ಲಿ ಬೆಳಗುವ ಪರಿಯು ನೋಡಾ.
ಸದಾಚಾರ ಸುಖಪ್ರಿಯ ಸುಲಲಿತ ನೋಡಾ
ನಮ್ಮ ಸದ್ಗುರು ಚನ್ನವೃಷಭೇಂದ್ರಲಿಂಗವು. ॥ ೧೧೮೩ ॥

೧೧೮೪

ಬಹಿರಂಗದಲ್ಲಿ ದುರಾಚಾರ ಅಂತರಂಗದಲ್ಲಿ ದುಃಸಂಕಲ್ಪ
ಉಭಯಗೂಡಿದ ವರ್ತಕದಲ್ಲಿ

ಷಡ್ಗುಣ ಸಾರಸಂಬಂಧ ದುರ್ಭಾವತ್ರಯಗೂಡಿ ಜೀವಿಸುವ ಪ್ರಾಣಿಯು
ಕಂಡಾಡುವ ಕಟ್ಟಳೆಯ ಸೋಗುಹೊತ್ತು ನಡೆದರೇನು, ಅದನು ನುಡಿದರೇನು?
ಆ ನಡೆನುಡಿಯ ವಾಸನೆಯನರಿಯದಿರ್ಪ ಸದ್ಭಕ್ತಿಚರಿತೆಯ ಸುಖದೊಳಗೆ
ಸದ್ಗುರು ಚನ್ನವೃಷಭೇಂದ್ರಲಿಂಗವು. ॥ ೧೧೮೪ ॥

೧೧೮೫

ಪಂಚೇಂದ್ರಿಯ ಕರ್ಮವಳಿಯದೆ,
ಕಾಯಕ ಗುಣನಾಲ್ಕರಲ್ಲಿ ಕಟ್ಟುಗೊಂಡು,
ವಾಚಕದ ಗುಣಯುತನಾಗಿ, ಮಾನಸದ ಗುಣನಾಲ್ಕರ ಬದ್ಧವೆರೆದ
ಅಶುದ್ಧನೊಂದಾಚಾರವ ಹೊತ್ತು ನಟಿಸಿದರೇನು,
ಅವನಿಗವ ತೋರಿ ನಟಿಸುತ್ತಿರ್ದನನುದಿನ ಭಕ್ತಸಂಗ ಸುಲಲಿತ ಸುಖದೊಳು
ನಮ್ಮ ಚನ್ನ ಶುದ್ಧಸಿದ್ಧಪ್ರಸಿದ್ಧ ಪ್ರದಾಯಕಲಿಂಗವು. ॥ ೧೧೮೫ ॥

೧೧೮೬

ಪಂಚಭೌತಿಕ ಧರ್ಮ ಅಂತರವೇದಿಯಾಗಿ
ಅನೃತ ಅಸ್ಥಿರವಾಕ್ಯ ಪಂಕ್ತಿಭೇದ ವಂಚನೆ
ಉದಾಸೀನ ನಿರ್ದಯವೆಂಬಾರು ಅಂತರಂಗದ ಭವಿ,
ಬಹಿರಂಗದ ವೇದಿಯಾಗಿ ಮದಮುಖದಿಂದೆ ವರ್ತಿಸುವ ನರನು
ವೇಷಲಾಂಛನ ಹೊತ್ತು ನಡೆವಲ್ಲಿ ಪರಮಾಚಾರಪ್ರಿಯ
ಚನ್ನಬಸವಲಿಂಗವಲ್ಲದಿರ್ದನು ಸದಮಲಲಿಂಗದಲ್ಲಿ. ॥ ೧೧೮೬ ॥

೧೧೮೭

ಪಾವಕವು ಅಪ್ಪುವಿನ ಸಂಗದಲ್ಲಿ ಜ್ಯೋತಿಯನರಿಯಲಿಲ್ಲ.
ಜ್ಞಾನಾಜ್ಞಾನಸಂಪರ್ಕದಲ್ಲಿ ನಿಜಜ್ಞಾನದ ನಿಲವನರಿಯಲಿಲ್ಲ.
ಭಕ್ತಿಭವಿಸಂಯೋಗದಲ್ಲಿ ಸದಾಚಾರಸೌಖ್ಯವನರಿಯಲಿಲ್ಲ.
ಇದು ಕಾರಣ ಭಕ್ತಕಾಯದಲ್ಲಿ ಮನ ಪ್ರಾಣ ಭಾವ ಜಡವಿರಹಿತನಾದನಲ್ಲದೆ,
ಗುರುನಿರಂಜನ ಚನ್ನಬಸವಲಿಂಗಾಚಾರವನರಿವ ಪರಿಯೆಂತು ಹೇಳಾ! ॥೧೧೮೭॥

೧೧೮೮

ಆಚಾರವನರಿಯದ ನಡೆ ದುರ್ನಡೆ.
ಆಚಾರವನರಿಯದ ನೋಟ ಭವದಕೂಟ.
ಆಚಾರವನರಿಯದ ಅಂಗ ವಿಚಾರಭಂಗ.
ಆಚಾರವನರಿಯದ ಅನುಭಾವ ಅಪ್ರಮಾಣ ದುರ್ಭಾವ.

ಇದು ಕಾರಣ ಗಣಕೂಟಕೆ ಆಚಾರವೇಬೇಕು ಕಾಣಾ
ಚನ್ನ ಕಾಯಮನಭಾವಪ್ರಿಯ ಮಹಾಲಿಂಗದಲ್ಲಿ. ॥ ೧೧೮೮ ॥

೧೧೮೯

ಸಿದ್ಧಾಂತಗಮನದಲ್ಲಿ ಶುದ್ಧಮುಖನಾಗಬೇಕು,
ವೇದಾಂತಗಮನದಲ್ಲಿ ಸಿದ್ಧಮುಖನಾಗಬೇಕು,
ಯೋಗಮಾರ್ಗದಲ್ಲಿ ಪ್ರಸಿದ್ಧಮುಖನಾಗಬೇಕು.
ಈ ತ್ರಿವಿಧಮುಖವೊಂದಾಗಿ ಬಪ್ಪುದೇ ಆಚಾರ.
ಈ ಆಚಾರಂಗವೇ ಶಿವನ ಆಲಯ.
ಇದು ಸತ್ಯ ನಿತ್ಯ ಕ್ರಿಯಾಜ್ಞಾನಭಾವಮೋಹಿ ನಿಜಲಿಂಗವಲ್ಲಿ. ॥ ೧೧೮೯ ॥

೧೧೯೦

ಗುರುಸೋಂಕು ಸಂಭಾಷಣೆ ಸ್ವರೂಪವಧರಿಸಿದ ಮಹಾತ್ಮನೇ
ಆದಿ ಕರ್ತುವೆಂಬೆ, ಅನಾದಿ ಕರ್ತುವೆಂಬೆ, ಮೂಲದೊಡೆಯನೆಂಬೆ.
ಚನ್ನ ಭಕ್ತಿ ಜ್ಞಾನ ವೈರಾಗ್ಯಮೂರ್ತಿಲಿಂಗವೆಂಬೆ. ॥ ೧೧೯೦ ॥

೧೧೯೧

ಆಚಾರಲಿಂಗಕ್ಕೆ ಅಂಗವಾದ ಅನುಪಮ ಶರಣನ ಕಂಡರೆ
ಪೂರ್ಣೇಂದುವಿಂಗಿದಿರಗಡಲದಂತಾಯಿತ್ತೆನ್ನ ತನು;
ರವಿಬರವಿಂಗರಳಿದ ಪದುಮದಂತಾಯಿತ್ತೆನ್ನ ಹೃದಯ;
ಮೇಘದರ್ಶನಸುಖದ ಸಿಖಿಯಂತಾಯಿತ್ತೆನ್ನ ಗಮನಗತಿ;
ಚಂಪಕದರಳಿಂಗೆರಗಿದ ಭ್ರಮರದಂತಾಯಿತ್ತೆನ್ನಭಾವ;
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ. ॥ ೧೧೯೧ ॥

೧೧೯೨

ಆಚಾರವೇ ಗುರುವಾಗಿ, ಆಚಾರವೇ ಶಿಷ್ಯನಾಗಿ,
ಆಚಾರವೇ ಲಿಂಗವಾಗಿ, ಆಚಾರವೇ ಭಕ್ತನಾಗಿ,
ಆಚಾರವೇ ಸಂಪತ್ತುವಾಗಿ, ಆಚಾರವೇ ಗಮನಾಗಮನವಾಗಿ,
ಗುರುನಿರಂಜನ ಚನ್ನಬಸವಲಿಂಗದೊಳಗೆ
ಸದಾಚಾರಸದ್ಭಕ್ತಂಗೆ ನಮೋ ನಮೋ ಎನುತಿರ್ದೆನು. ॥ ೧೧೯೨ ॥

## ಗೌರವಾಂಗಸ್ಥಲದ ವಚನಗಳು

ಸೂತ್ರ : ಇಂತು ಭಕ್ತನಾಚಾರಾಂಗದಲ್ಲಿ ಅನಿಮಿಷಸುಖಪಡೆದ ಲಿಂಗವು ಗಂಭೀರ ಮುಖಲೋಲನಾಗಿ ವರ್ತಿಸಿದಲ್ಲಿ ಗೌರವಾಂಗಸ್ಥಲವೆಂದು ಹೇಳಲಾಯಿತ್ತು.

೧೧೯೩

ಗುರುಮುಟ್ಟಿ ಗುರುವಾಗಿ ನಡೆವ ಅಪ್ರತಿಮ ಭಕ್ತನ
ಅನುಸಂಧಾನದ ಬೆಳಗನೇನೆಂದುಪಮಿಸಬಹುದಯ್ಯಾ!
ಗತಿಮತಿಯೋಗದ ರಂಜನೆಯ ವಾಸನೆಗೆ ನಿಲುಕದಿರ್ದ
ನಿರಾಗಮದ ನಿಯತ ಗಂಪನೇನೆಂದರಿಯಬಹುದು!
ನೆನಹ ನಿಜದಲ್ಲಿಟ್ಟು, ಮನವ ಘನದಲ್ಲಿಟ್ಟು, ಘನವ ಕರದಲ್ಲಿಟ್ಟು,
ವಿನಯ ಚರದಲ್ಲಿಟ್ಟು, ಮಾಡುವ ಮಾಟತ್ರಯದೊಳಗೆ ನೀಟವಾಗಿರ್ದ
ನಿರಂತರ ಗುರುನಿರಂಜನ ಚನ್ನಬಸವಲಿಂಗವು. ॥ ೧೧೯೩ ॥

೧೧೯೪

ಕಾಯ ಖಂಡಿಸದೆ ಮನ ಹರಿಯದೆ ಪ್ರಾಣ ತೊರೆಯದೆ
ಭಾವ ಬಿಚ್ಚದೆ ಬರಿದೆ ಹೆಚ್ಚಿ ಬಂಧನಕ್ಕೊಳಗಾದವರಲ್ಲ !
ಈ ಭಾವವೇನು ಅಷ್ಟತನು ಮದಭಾವವೊ ?
ಅಷ್ಟಕುಲಾದಿ ಮದಭಾವವೊ! ಅಷ್ಟ ಸಂಸ್ಥಿತಾದಿ ಮದಭಾವವೊ ?
ಚೌರಾಸಿ ಲಕ್ಷ ಯೋನಿಯಲ್ಲಿ ತಿರುಗುವ ಸಾಮರ್ಥ್ಯಭಾವವೊ ? ಹೇಳಾ !
ಧರ್ಮಕರ್ತುವಿನ ಭಾವರಸವಿನೋದಮಯನೆಂದು ಬಂದ ಬಳಿಕ
ಅತಿಶಯದ ಸತಿಪತಿರತಿಭಾವದಂತಿರಬೇಕಲ್ಲದೆ
ಸುರೆಭಾಂಡದ ಸಿರಿಯಂತೆ ಕಾಣಿಸಿಕೊಂಡರೇನು ?
ಪರಿಕಿಸಿದರೆ ದುರ್ಗಂಜಳ, ಸೋಂಕದಿಪ್ಪರು ಹಿರಿಯರು.
ಪರಿಕಿಸಿದರೆ ಇಂಥ ಅಂಗಹೀನ ಭವಿಗಳ ಸಂಗವನೊಲ್ಲದಿರ್ದನು
ಗೌರವಾಂಗದ ಘನಚರಿತೆಯೊಳಗೊಲಿದು
ಚನ್ನ ತನುಮನಭಾವ ಪ್ರಸನ್ನಲಿಂಗವು. ॥ ೧೧೯೪ ॥

೧೧೯೫

ಹಿರಿಯತನಕ್ಕೆ ಹೆಚ್ಚಿ, ಹೆಸರ ಹೊತ್ತು ನಡೆಗೆಟ್ಟು,
ಕಡೆಗೆ ಬೇಡಿಕೊಂಡು ತಿರುಗುವ ಹಡಿಕೆ ಮುಖಮುಯನ,
ನಿರತಿಶಯ ಬೆಡಗಿನ ಬೇಹಾರಿಗಳೊಪ್ಪುವರೆ ?
ಬೂದಿಯ ಹೇರ ಸೀರಲದ್ದಿ ನಾ ಹೊತ್ತುಕೊಳ್ಳೆಯೆಂದರೆ
ಕ್ರಿಯದ ಕರ್ಮದಲ್ಲಿ ಕಾಣರೆ ?

ಆ ಹುಸಿಹುಂಡನ ಸೋಂಕನೊಲ್ಲದಿರ್ದ ನಿಜವಿರತಿಭಕ್ತಿಯಮುಖದಲ್ಲಿ
ನಮ್ಮ ಚೆಲುವಂಗ ಪ್ರಾಣಾತ್ಮಪ್ರಿಯ ಸಿದ್ಧಲಿಂಗನು. ॥ ೧೧೯೫ ॥

೧೧೯೬

ಶುದ್ಧ ಸಿದ್ಧಾಯ ನಿರ್ಮಲವೆಂಬ ಅಂಗತ್ರಯದಲ್ಲಿ
ಸದ್ಗತಿ ಸತ್ಕ್ರಿಯೆ ಸದ್ಧರ್ಮವೆಂಬ ಪೀಠತ್ರಯದ ಮೇಲೆ
ವಿಚಾರಗುರು ವಿನಯಗುರು ಕೃಪಾಗುರುವೆಂಬ ಗುರುತ್ರಯವ ಧರಿಸಿ
ಘನಭಕ್ತಿಯ ಕುರುಹಬಲ್ಲರೆ ಆತ ಸತ್ಯಭಕ್ತನೆಂಬೆ.
ಸುಬುದ್ಧಿ ನಿಃಕಾಮ ಅನುಕೂಲೆಯೆಂಬ ಮನತ್ರಯದ
ವಿಶೇಷಗತಿ ಸುಜ್ಞಾನ ವಿಮಲಜ್ಞಾನವೆಂಬ ಪೀಠತ್ರಯದಮೇಲೆ
ಸಗುಣಲಿಂಗ ನಿರ್ಗುಣಲಿಂಗ ನಿರ್ಭೇದ ಲಿಂಗವೆಂಬ ಲಿಂಗತ್ರಯವ ಧರಿಸಿ,
ಚಿನ್ಮಯಭಕ್ತಿಯ ಕುರುಹ ಬಲ್ಲರೆ ಆತ ನಿತ್ಯಭಕ್ತನೆಂಬೆ.
ಸಂವಿತ್‌ಕಳಾ ಸಂಧಾನಕಳಾ ಸಮರಸಕಳಾಯೆಂಬ ಭಾವತ್ರಯದಲ್ಲಿ,
ಮತಿಗಮನ, ರತಿಗಮನ, ಮಹಾರತಿಗಮನವೆಂಬ ಭಾವತ್ರಯದ
ಸತ್ಪ್ರೇಮ ಸುಖಮಯ ಆನಂದವೆಂಬ ಪೀಠತ್ರಯದ ಮೇಲೆ
ಜ್ಞಾನಜಂಗಮ, ಮಹಾಜ್ಞಾನಜಂಗಮ,
ಪರಮಜ್ಞಾನಜಂಗಮವೆಂಬ ಜಂಗಮತ್ರಯವ ಧರಿಸಿ,
ಪರಿಪೂರ್ಣಭಕ್ತಿಯ ಕುರುಹ ಬಲ್ಲರೆ ಆತ ನಿಜಭಕ್ತನೆಂಬೆ.
ಈ ಭೇದವನರಿಯದೆ ಬರಿಯ ಕಾಯ ಮನ ಭಾವದಲ್ಲಿ ಹುಸಿನೆರವಿಯ ತುಂಬಿ
ಹುಸಿಯ ಡಂಭಿನ ಭಕ್ತಿಯ ಕಿಸುಕುಳತ್ವಕ್ಕೆ ಬಿಸಿಯನಿಟ್ಟು,
ತಪ್ಪಿಸಿ ತೋರುತಿರ್ದನು
ಗಂಭೀರ ಭಕ್ತಿಯ ನೆರೆದು ಚೆಲುವಂಗ ಪ್ರಾಣಾತ್ಮಪ್ರಿಯ ಸಿದ್ಧಲಿಂಗನು.
॥ ೧೧೯೬ ॥

೧೧೯೭

ತನುಶುದ್ಧಿಯನರಿಯದೆ ಜೀವಭಾವಿಯಾಗಿ ಕೆಟ್ಟನು ವೇದಾಂತಿ.
ಪ್ರಾಣಶುದ್ಧಿಯನರಿಯದೆ ಭಿನ್ನಭಾವಿಯಾಗಿ ಕೆಟ್ಟನು ಸಿದ್ಧಾಂತಿ.
ಆತ್ಮಶುದ್ಧಿಯನರಿಯದೆ ಹುಸಿಕಲಾಭಾವಿಯಾಗಿ ಕೆಟ್ಟನು ಭಿನ್ನಯೋಗಿ.
ಈ ವಿಚಾರವಂತಿರಲಿ, ತ್ರಿವಿಧ ಶುದ್ಧಿಯನರಿದು,
ತ್ರಿವಿಧ ಭಕ್ತಿಪ್ರಭೆಯೊಳು ನಿಂದು,
ತ್ರಿವಿಧಲಿಂಗಕೃಪಾಂಬುವಿನಭಿಷೇಕಪರಿಣಾಮಿಯಾಗಿ ವರ್ತಿಸುವುದೇ
ಘನಗಂಭೀರ ವರ್ತನವಹುದೆಂಬೆ; ಆ ವರ್ತನದೊಳಗೆ
ಕರ್ತು ಚನ್ನವೃಷಭೇಂದ್ರಲಿಂಗವು ಸುಖಮುಖಿಯಾಗಿಪ್ಪನು ಕಾಣಾ. ॥ ೧೧೯೭ ॥

೧೧೯೮

ಹೇಮವೊರಡಿಯ ಮೇಲೆಯಿರ್ದು ನಡೆಸುವನು ಗಂಭೀರನಲ್ಲ,
ಬೆಳ್ಳಿಬೆಟ್ಟವನೇರಿ ನಡೆಸುವನು ಗಂಭೀರನಲ್ಲ,
ಕಾಡಿಗೆಯ ಗಿರಿಯಹತ್ತಿ ನಡೆಸಿದರೆ ಗಂಭೀರನಲ್ಲ.
ಮತ್ತೆಂತೆಂದೊಡೆ: ಆ ಗುಡ್ಡತ್ರಯವನುರುಹಿ
ದೊಡ್ಡಭಾವವಳಿದಲ್ಲದೆ ಭಕ್ತನಾಗಬಾರದು.
ಭಕ್ತನಾದ ಬಳಿಕ ಭಾವವೆಲ್ಲಿಹದೊ
ನಿಜಭಕ್ತಿಜ್ಞಾನವೈರಾಗ್ಯಮೋಹಿ ಘನಲಿಂಗವಲ್ಲದೆ. || ೧೧೯೮ ||

೧೧೯೯

ಭಕ್ತಿ ಜ್ಞಾನ ವೈರಾಗ್ಯವುಳ್ಳಾತನೆ ಗಂಭೀರ,
ಭಕ್ತಿ ಜ್ಞಾನ ವೈರಾಗ್ಯವಿಲ್ಲದೆ ಅಂಗಮೂರರ ಸಂಗಸೌಖ್ಯವನರಿಯಬಾರದು.
ಅದೆಂತೆಂದೊಡೆ: ಅಡಿಯಿಟ್ಟು ಬಂದ ಗುರುಲಿಂಗಜಂಗಮಕ್ಕೆ
ಸ್ಥೂಲತನುತ್ರಯವ ಸೂರೆಮಾಡಿದ ಬರವನರಿದು
ಸಮುಖರತಿ ಸಂಧಾನಸುಖವನರಿಯಬಲ್ಲರೆ ಭಕ್ತಿಗಂಭೀರನಹುದೆಂಬೆ.
ಸೂಕ್ಷ್ಮತನುವ ಸುಜ್ಞಾನದೊಳಿಟ್ಟು ಸುಯಿಧಾನವೆರೆದು
ಅವರಂತಸ್ಥಕ್ಕೊತ್ತೆಗೈದು ಒಲುಮೆಯ ಬರವನರಿದು
ಘನರತಿಸಂಬಂಧಸುಖವನರಿಯಬಲ್ಲರೆ ಜ್ಞಾನಗಂಭೀರನೆಂಬೆ.
ಕಾರಣತನುವನು ನಿಃಸಂಕಲ್ಪ ನಿರ್ವಂಚನೆ ನಿರ್ಭೇದವೆಂಬ ಸತ್ಯಜ್ಞಾನದಲ್ಲಿರಿಸಿ
ಮಿಥ್ಯಮಮಕಾರವ ಭೇದಿಸಿ ಸದ್ಭಾವಗೂಡಿ
ಅವರ ಮಹಾನುಭಾವಕ್ಕೊತ್ತೆಗೈದು ಹರುಷರಸಬರವನರಿದು
ನಿರ್ಭಾವರಸವೆತ್ತಿ ನಿರ್ವಾಣಸುಖಸಮರಸವ ಬಲ್ಲರೆ
ಆತ ವೈರಾಗ್ಯ ಗಂಭೀರನೆಂಬೆ.
ಈ ಸೌಭಾಗ್ಯತ್ರಯವನುಳ್ಳಾತನೆ ಚೆಲುವಂಗ ಪ್ರಾಣಾತ್ಮಪ್ರಿಯ
ಸಿದ್ಧಲಿಂಗ ತಾನೆ ಬೇರಿಲ್ಲ. || ೧೧೯೯ ||

೧೨೦೦

ದಿವಾಕರನ ದಿನಕರ್ಮದೊಳಗೆ ನಿಮಿಷಾರ್ಧ ಲಘುಜಡತ್ವವಿಲ್ಲದೆ
ಕಾರ್ಯನಾಗಿ ಕಾರಣಾನುಕೂಲಿಯಾದಂತೆ,
ನಿಶಾಕರನು ಮಾಸದ್ವಂದ್ವಕರ್ಮಾದಿ ರಾಹುಬಾಧೆಯೊಳು ಲಘುಜಡತ್ವವಿಲ್ಲದೆ
ಕಾರ್ಯನಾಗಿ ಕಾರಣಾನುಕೂಲಿಯಾದಂತೆ,
ಅಂತರ್ಜ್ಞಾನ ಬಾಹ್ಯ ಶಾಂತಾನ್ವಿತ ಶರಣನು

ತನ್ನ ನಿತ್ಯ ಜ್ಞಾನ ಕ್ರಿಯಾವರ್ತನದೊಳಗೆ
ಗುರುಲಿಂಗಜಂಗಮ ಭಕ್ತಿ ವಿಭವ ವಿನಯವೆಂಬ ವಿಮಲತ್ವವನು
ಜರೆಮರಣಾದಿ ದ್ವಂದ್ವಕರ್ಮ ಮಾಯಾ ಶಂಕಾ ವಿಷಮಬಾಧೆಯನೊಗೆದು
ಲಘುಜಡತ್ವವಿಲ್ಲದೆ ಕಾರ್ಯನಾಗಿ ಕಾರಣಾನುಕೂಲಿಯಾಗಿ ಮೆರೆವ
ಮಹಿಮಾತಿಶಯವನುಳ್ಳ ಭಕ್ತನೆ ಸಾಕ್ಷಾತನೆಂಬೆ.
ಚೆಲುವಾತ್ಮಾಂಗ ಪ್ರಾಣಾತ್ಮಪ್ರಿಯ ಸಿದ್ಧಲಿಂಗನಲ್ಲದೆ ಬೇರಿಲ್ಲ ಕಾಣಾ.
|| ೧೨೦೦ ||

೧೨೦೧

ಹೊರಗೊಳಗೆ ನಾನು ನೀನಾದ ಬಳಿಕ ಪೃಥ್ವಿಯಲ್ಲಿ ಭಾವಶುದ್ಧವಾಯಿತ್ತು,
ಅಪ್ಪುವಿನಲ್ಲಿ ಮನಶುದ್ಧವಾಯಿತ್ತು, ಅಗ್ನಿಯಲ್ಲಿ ಚಿತ್ತಶುದ್ಧವಾಯಿತ್ತು,
ವಾಯುವಿನಲ್ಲಿ ಪ್ರಾಣಶುದ್ಧವಾಯಿತ್ತು, ಆಕಾಶದಲ್ಲಿ ಜ್ಞಾನಶುದ್ಧವಾಯಿತ್ತು,
ಆತ್ಮನಲ್ಲಿ ಅರಿವು ಶುದ್ಧವಾಯಿತ್ತು.
ಇದು ಕಾರಣ
ಶುದ್ಧಸಿದ್ಧಪ್ರಸಿದ್ಧ ಪ್ರಭುವಿನಲ್ಲಿ ಭಕ್ತಿ ಶುದ್ಧವಾಯಿತ್ತು. || ೧೨೦೧ ||

೧೨೦೨

ಆಕಾಶತತ್ವದಿಂದುದುರಿ ಬಂದ ಬೀಜವು
ಧರೆಯುದಕ ಸಂಗದಲ್ಲಿ ಅಡಗಿರ್ದಡೇನು
ಅಂಕುರಿಸಿ ಆಕಾಶಕ್ಕೆ ತಲೆಯದೋರುವುದಲ್ಲದೆ,
ಭುವನದತ್ತ ತಲೆಯಿಡದು ನೋಡಾ.
ಘನಗಂಭೀರ ಶರಣನು ತಾನೊಂದು ಕಾರ್ಯಕ್ಕೆ ಹೇಗೆ ಹಿಡಿದು ಮುಸುಕಿರ್ದಡೇನು,
ಕ್ರಿಯಾಭೋಗಿತ್ತ ಜ್ಞಾನಭೋಗತ್ತ ನಡುವೆ ಪರಿಪೂರ್ಣ ಭಕ್ತಿನಿರಂತರ.
ಇದು ಗೌರವಾಂಗದತಿಶಯದ ನಿಲವು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ. || ೧೨೦೨ ||

**ಶಿವಾಂಗಸ್ಥಲದ ವಚನಗಳು**

ಸೂತ್ರ : ಇಂತು ಗೌರವಾಂಗದತಿಶಯದೊಳಾನಂದವಟ್ಟ ಲಿಂಗವು ಮುಂದೆ ಶಿವಾಂಗದನುವಿಶೇಷಕ್ಕೆ ಒಲಿದಿರ್ದು ವಿನೋದಿಸಿಕೊಂಡಲ್ಲಿ ಶಿವಾಂಗಸ್ಥಲವೆಂದು ಹೇಳಲಾಯಿತ್ತು.

೧೨೦೩

ಶಿವಸಂಗ ಶರಣನೆಂದು ಅರಿದು ಬಂದ ನಿಜನು ಮರವೆಯನರಿಯದೆ
ಬರಿಯ ಹಿರಿಯ ಹೆಮ್ಮೆಯನುತ್ತರಿಸುತ್ತ ಕಂಡಲ್ಲಿ ಸಾವಧಾನಸಂಬಂಧವಾಗಿ

ಸಮುಖ ವಿನೋದಪರಿಣಾಮದೋರುತ್ತ ಪರಿಪೂರ್ಣಪದದೊಳೊಪ್ಪುತಿರ್ದನು
ಶುದ್ಧಸಿದ್ಧಪ್ರಸಿದ್ಧ ಪ್ರಭುಲಿಂಗ ಭಕ್ತನು. ॥ ೧೨೦೩ ॥

೧೨೦೪

ಅರ್ಪಿತತ್ರಯದನುವರಿಯದಂಗ ಕಡೆಗಾಣದ ಭಂಗ.
ಮುಂದೆ ಕಾಂಬುವುದು ಬಹುತೆರದಂಗ ನೋಡಾ.
ಈ ಸೋಂಕಾಂಕನ ಮಾಟ ಸುಲಲಿತ ಕಾರ್ಯಕ್ಕೆ ಸಲ್ಲದು.
ಮಾಯಾನುಕೂಲಿ ಪ್ರೇಮಭಾವಕ್ಕೆ ಬಾಧೆಯನುಳಿದು ಬೋಧಾಂಗವಿಲ್ಲ.
ಆ ಅಂಗವನೊಲ್ಲದಿರ್ದನು ಚಿದಂಗಸುಖಿಮುಖಿಯಾಗಿ
ನಮ್ಮ ಶುದ್ಧಸಿದ್ಧಪ್ರಸಿದ್ಧಪ್ರಭುಲಿಂಗವು. ॥ ೧೨೦೪ ॥

೧೨೦೫

ಶುದ್ಧನಪ್ಪನಯ್ಯಾ ಜಾಗ್ರಸ್ವಪ್ನ ಸುಷುಪ್ತಿಯಲ್ಲಿ
ಪರಸ್ತ್ರೀ ಅನ್ಯದೈವಭಕ್ತಿಯ ಬಯಸದವ.
ಸಿದ್ಧನಪ್ಪನಯ್ಯಾ ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ
ಅನ್ಯಧನಕಾಂಕ್ಷೆ ಅವ್ಯಕ್ತಚಿಂತೆಯ ಮಾಡದವ.
ಪ್ರಸಿದ್ಧನಪ್ಪನಯ್ಯಾ ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಷಡುವರ್ಗ ಭಾವವಿಲ್ಲದವ.
ಅಶುದ್ಧನಪ್ಪನಯ್ಯಾ ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ
ನಿಜೋಪಾಧಿಯ ಭಕ್ತಿಯುಳ್ಳಡೆ.
ಅಸಿದ್ಧನಪ್ಪನಯ್ಯಾ ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಸುಪ್ರಸನ್ನಭಕ್ತಿಯುಳ್ಳಡೆ.
ಅಪ್ರಸಿದ್ಧನಪ್ಪನಯ್ಯಾ ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಸಮಯಭಕ್ತಿಯುಳ್ಳಡೆ.
ಇದು ಕಾರಣ, ಅಲ್ಲಿಯೇ ಇರಲೊಲ್ಲದಿರ್ದನು ಇಲ್ಲಿಯೆ ಚಲುವಂಗ
ಪ್ರಾಣಾತ್ಮಪ್ರಿಯ ಸಿದ್ಧಲಿಂಗ ನೋಡಾ ಅರಿವರು. ॥ ೧೨೦೫ ॥

೧೨೦೬

ಅತ್ತಲರಿವರು ಸುತ್ತ ಮೋಹಿಗಳು ;
ಅತ್ತಲನುಪಮದನುವನವರರಿವರೆ ?
ಇತ್ತಲರಿವರು ವಿಷಮವಿರಹಿತ ವಿಮಲಾಂಗ ಸಂಗಸುಖಿಗಳ ;
ಇತ್ತಲನುಭೇದ ವಿಸರ್ಜನವನಿವರರಿವರೆ ?
ಇದು ಕಾರಣ, ಅತ್ತಿಲ್ಲದಿರ್ದನಿತ್ತಲನುದಿನ ಚಲುವಾಂಗ
ಪ್ರಾಣಾತ್ಮಪ್ರಿಯ ಸಿದ್ಧಲಿಂಗ ನೋಡಾ ಅರಿವರು ಭಾವಿಸಿ. ॥ ೧೨೦೬ ॥

೧೨೦೭

ಚಿದ್ಬಿಂದುಮುಖದಿಂದ ಭಾವಿಸಿ ಮಾಡುವುದು,
ಚಿನ್ನಾದ ಮುಖದಿಂದ ಭಾವಿಸಿ ನೋಡುವುದು,
ಚಿತ್ಕಲಾಮುಖದಿಂದ ಭಾವಿಸಿ ಕೂಡುವುದು,
ಚೆಲುವಾಂಗ ಪ್ರಾಣಾತ್ಮಪ್ರಿಯ ಸಿದ್ಧಲಿಂಗವನು
ಅರಿವರಿತರಸುವಣ್ಣಗಳು ಸುಯಿಧಾನಭಕ್ತಿ ಸುಲಭರಿದು. ॥ ೧೨೦೭ ॥

೧೨೦೮

ಮಿಥ್ಯಭಾವವನು ತತ್ತರಿದಂದು, ಕಲ್ಪಕಳೆಯನಳಿದುಳಿದಂದು,
ಸತ್ತವರೆದ್ದು ಬಂದಂದು, ಸಂಬಂಧಸುಖಸಮ್ಮುಖದ ಸಂಗದ ಸವಿಯ ನೋಡಾ.
ಧರೆ ಗಗನದ ಮಧ್ಯ ಜಗಜಗಿಸುತಿರ್ದ
ಷಡುದರ್ಶನ ಮೂಲಮುಖಸುಯಿಧಾನವಿಡಿದು,
ಚೆಲುವಾಂಗ ಪ್ರಾಣಾತ್ಮಪ್ರಿಯ ಸಿದ್ಧಲಿಂಗಾ. ॥ ೧೨೦೮ ॥

೧೨೦೯

ಪೃಥ್ವಿಯನರಿಯಲುಬಾರದು ನಕಾರ,
ಅಪ್ಪುವನರಿಯಲುಬಾರದು ಮಕಾರ,
ಅಗ್ನಿಯನರಿಯಲುಬಾರದು ಶಿಕಾರ,
ವಾತವನರಿಯಲುಬಾರದು ವಕಾರ,
ಅಂಬರವನರಿಯಲುಬಾರದು ಯಕಾರ,
ಭಾವವನರಿಯಲುಬಾರದು ಓಂಕಾರ.
ಇದು ಕಾರಣ ಷಡ್ಬ್ರಹ್ಮರೂಪ ಚನ್ನಬಸವಲಿಂಗ
ಅರಿದು ಅರಿಯದಿರಲುಬೇಕು ಭಕ್ತ. ॥ ೧೨೦೯ ॥

೧೨೧೦

ಕರ್ಮೇಂದ್ರಿಯ ಪಂಚಕಂಗಳಳಿದುಳಿದುದೇ ಸತ್ತು.
ವಿಷಯಪಂಚಕಂಗಳಳಿದುಳಿದುದೇ ಚಿತ್ತು.
ಧರ್ಮೇಂದ್ರಿಯ ಪಂಚಕಂಗಳಳಿದುಳಿದುದೇ ಆನಂದ.
ವಾಯುಪಂಚಕಂಗಳಳಿದುಳಿದುದೇ ನಿತ್ಯ.
ಕರಣಪಂಚಕಂಗಳಳಿದುಳಿದುದೇ ಪರಿಪೂರ್ಣ.
ಇದು ಕಾರಣ ಈ ಪಂಚವಿಂಶತಿತತ್ವಂಗಳಳಿದುಳಿದಂಗವು ತಾನೇ ಅದು ಶಿವಾಂಗ
ಚನ್ನ ಶುದ್ಧಸಿದ್ಧಪ್ರಸಿದ್ಧ ಪ್ರಭುವಿನಂಗ ಕಾಣಾ. ॥ ೧೨೧೦ ॥

೧೨೧೧

ರಜೋಗುಣದಷ್ಟವಿಧವಂಗವಳಿದುಳಿದುದೇ ಶಿವಾಂಗ.
ಸತ್ವಗುಣದ ದಶವಿಧವಂಗವಳಿದುಳಿದುದೇ ಶಿವಾಂಗ.
ತಮೋಗುಣದಷ್ಟವಿಧವಂಗವಳಿದುಳಿದುದೇ ಶಿವಾಂಗ.
ಮತ್ತೆ ಬಹಿರಂಗದ ಅಷ್ಟಮದವಳಿದುಳಿದುದೇ ತ್ಯಾಗಾಂಗ.
ಅಂತರಂಗದಷ್ಟಮದವಳಿದುಳಿದುದೇ ಭೋಗಾಂಗ.
ಆತ್ಮನಷ್ಟಮದವಳಿದುಳಿದುದೇ ಯೋಗಾಂಗ.
ಇದು ಕಾರಣ ಈ ಅಂಗಸಂಗಸನ್ನಿಹಿತ
ಚನ್ನ ಶುದ್ಧಸಿದ್ಧಪ್ರಸಿದ್ಧ ಪ್ರಭುಲಿಂಗವು. || ೧೨೧೧ ||

೧೨೧೨

ಮೂಲ ಜ್ಞಾನೋದಯವಾದುದೊಂದು.
ಆ ಸಂಬಂಧವನಳಿದುಳಿದುದೊಂದು.
ಗುರುಕಾರುಣ್ಯವಾಗಿ ಬಂದುದೊಂದು.
ಭಕ್ತನಾಗಿ ಬಹುವಿಧದಲ್ಲಿ ಆಚರಿಸಿ
ಅವಿರಳಸುಖ ಪ್ರಸನ್ನತ್ವವನು ಪಡೆದುದೊಂದು.
ಈ ಚತುರ್ವಿಧನಂಗಸಂಗಸಂಪನ್ನ
ನಮ್ಮ ಗುರುನಿರಂಜನ ಚನ್ನಬಸವಲಿಂಗವು. || ೧೨೧೨ ||

೧೨೧೩

ಪುರುಷನ ಸೋಂಕದೆ ಸಂಗಸಂಯೋಗಸುಖವನರಿದ
ಸತಿಯಳ ಕಂಡವರುಂಟೆ ಮಂಡಲದೊಳಗೆ?
ಲಿಂಗವನರಿಯದೆ ಚರಗುರುಭಕ್ತಿಯ ಸಾರಾಯಸುಖ ಬೆಳಗಬಲ್ಲೆನೆಂದು
ಅಲ್ಲಿಯೇ ಸಂದಿ ಹೋಗುವ ಬಂಧನಬದ್ಧ ಮೂಢ ಪ್ರಾಣಿಯ ಉರದೊಳು
ಒಲ್ಲದಿರ್ದನು ಚೆಲುವಾಂಗ ಪ್ರಾಣಾತ್ಮಪ್ರಿಯ ಸಿದ್ಧಲಿಂಗನು
ಸನುಮತರ ಸಂಗಸಮತೆಯೊಳಗೆ. || ೧೨೧೩ ||

೧೨೧೪

ಸದ್ವಾಸನ ಧರ್ಮಚರಿತೆಯ ವರ್ಮವನುಳಿದು
ದುಷ್ಕರ್ಮಬಾಧೆಯ ಉರಿಯೊಳು ತೊಳಲುವ ಭಾವ
ಭಕ್ತಿತ್ರಯದ ಯುಕ್ತಿಯನರಿವುದು ಚೋದ್ಯ ಕಾಣಾ.
ಹಿಡಿದ ಕುರುಹು ಹೊತ್ತ ಹೊರೆ ನಡೆವ ಬಟ್ಟೆ ಮಿಥ್ಯ ಮಾಯಾ ಬದ್ಧ ನೋಡಾ.

ಇಂತಿರ್ದ ಅರುಹಿಗೆ ಕುರುಹುಗಾಣಿಸದಿರ್ದನು
ನಮ್ಮ ಚೆಲುವಾಂಗ ಪ್ರಾಣಾತ್ಮಪ್ರಿಯ ಸಿದ್ಧಲಿಂಗ
ಶರಣ ಭಕ್ತಸಂಗದಲ್ಲಿ. ॥ ೧೨೧೪ ॥

೧೨೧೫

ಮಲತ್ರಯದ ಮೋಹವನು ಹರಿವುದು,
ತನುತ್ರಯದ ಮದವ ತೊರೆವುದು,
ಈಷಣತ್ರಯದ ಪ್ರೇಮವ ಜರಿವುದು,
ಜೀವನತ್ರಯದ ಜಡತ್ವ ಕಳೆವುದು,
ಅವಸ್ಥಾತ್ರಯದನುವ ಮರೆವುದು ಭವಭಾರಿಗಳಿಗೆ ಸಾಮಾನ್ಯವೆ
ಚನ್ನ ಗುರುಲಿಂಗಜಂಗಮಪ್ರಭುವೆ ನಿಮ್ಮ ಸದ್ಭಕ್ತರಿಗಲ್ಲದೆ ? ॥ ೧೨೧೫ ॥

೧೨೧೬

ಹಲವು ಬಗೆಯಲ್ಲಿ ಹರಿದಾಡಿಸುವ ಆಶೆಯ ಜರಿದು
ಮರೆವ ಸದ್ಭಾವ ಸತ್ತುಹುಟ್ಟುವ ಕಸಮನುಜರಿಗುಂಟೆ?
ಚೆಲುವಾಂಗ ಪ್ರಾಣಾತ್ಮಪ್ರಿಯ ಸಿದ್ಧಲಿಂಗಾ
ನಿಮ್ಮನುಭಾವಭರಿತಂಗಲ್ಲದೆ. ॥ ೧೨೧೬ ॥

೧೨೧೭

ಸತ್ಕ್ರಿಯಾ ಸಮ್ಯಕ್‍ಜ್ಞಾನ ಪಥವರಿದ ಭಕ್ತನ ಕುರುಹೆಂತೆನ್ನಲು,
ಮಾಡಿ ಬೇಡುವನಲ್ಲ, ನೀಡಿ ನಿಂತವನಲ್ಲ, ಕಾಣಿಸಿಕೊಂಬುವನಲ್ಲ,
ಡಂಭಕ ವ್ಯಸನಿಯಲ್ಲ, ವಂಚನೆಯ ಸಂಚವನರಿಯದು
ಸರ್ವಾಂಗಸತ್ಯ ನೋಡಾ.
ಕೊಟ್ಟು ಕೊಟ್ಟು ಕೊಡುವ ಭಾವವಲ್ಲದೆ
ಉಳಿದ ಭಾವವ ಮರೆದಿರ್ದ ನೋಡಾ.
ಚಲುವಾಂಗ ಪ್ರಾಣಾತ್ಮಪ್ರಿಯ ಸಿದ್ಧಲಿಂಗ
ನಿಮ್ಮ ಶರಣನ ನಿಲವು ನೋಡಾ. ॥ ೧೨೧೭ ॥

೧೨೧೮

ಗುರುಲಿಂಗಜಂಗಮಕ್ಕೆ ಕೊಡುವುದನೇ ಬಲ್ಲನಲ್ಲದೆ
ಬೇಡುವುದನರಿಯ ನೋಡಾ.
ಅದೆಂತೆಂದೊಡೆ, ಪಂಚರಸಂಗಳ ರುಚಿಸೌಖ್ಯವ ಕೊಟ್ಟು
ಪರಿಣಾಮವ ತೋರಬಲ್ಲನಲ್ಲದೆ
ತಾನು ಒಂದರಲ್ಲಿಯೂ ಬೇಡಲರಿಯನು.

ಅದು ಕಾರಣ, ಚನ್ನಗುರುಲಿಂಗಜಂಗಮಪ್ರಭುವೆ
ನಿಮ್ಮ ಶರಣ ದೊರೆಗಳಿಗೆ ಕೊಡಬಲ್ಲನಾಗಿ
ನರರುಗಳ ಬೇಡಲರಿಯ ಕಾಣಾ. || ೧೨೧೮ ||

**ಭಕ್ತನ ಚರಾಂಗಸ್ಥಲದ ವಚನಗಳು**

ಸೂತ್ರ : ಇಂತು ಸದ್ಭಕ್ತನ ಶಿವಾಂಗದಲ್ಲಿ ಸುಖಪಡೆದ ಶಿವಲಿಂಗವು ಮುಂದೆ ಚರಾಂಗ ಸಂಗಸೌಖ್ಯಕ್ಕೆ ಮುಂದುವರಿದಾಚರಿಸಿದಲ್ಲಿ ಚರಾಂಗಸ್ಥಲವೆಂದು ಹೇಳಲಾಯಿತ್ತು.

೧೨೧೯

ಜ್ಞಾನಿಗುರುವರನ ಕರಕಂಜೋದಯ ಶರಣ
ತನ್ನ ಕರಕಂಜದೊಳಿಪ್ಪಗುರುವರನರಿದು,
ಸುಜ್ಞಾನಪ್ರಭೆಯೊಳಗೆ ಸುಳಿದಾಡುವ ಪರಿಯ ನೋಡಾ.
ಪೃಥ್ವಿಯಂಗವ ಧರಿಸಿ ಪಂಚಾಚಾರವಿಡಿದು
ಸಂಚರಿಸುವ ಭಕ್ತನ ಸವಿಯ ನೋಡಾ.
ಅಪ್ಪುವಿನಂಗವ ಧರಿಸಿ ನಿಷ್ಪತ್ತಿ ನಿಜವಿಡಿದು
ನಿರ್ಮಲ ಗಮನದೊಳೊಪ್ಪುವ ನಿಲುವಿನ ನಿಃಕಳಂಕವ ನೋಡಾ.
ತೇಜಾಂಗವ ಧರಿಸಿ ಮಾಜದರುವಿಡಿದು
ಸೋಜಿಗಸುಖವಿತ್ತು ಕೊಂಬ ಸಾವಧಾನಿಯ ಸಮ್ಮಿಶ್ರವ ನೋಡಾ.
ಅನಿಲಂಗವ ಧರಿಸಿ ಯಜನದನುವರಿವಿಡಿದು ಭಜನೆ ಭಾವವನಳಿದು
ಮೂಜಗವರಿದು ಬೆಳಗುವ ಕಳೆವರನ ನೋಡಾ.
ಅಂಬರಂಗವ ಧರಿಸಿ ಪರನಾದ ಪ್ರಭೆವಿಡಿದು
ಚಿದ್ವೈತ ಗಮನಾದ್ವೈತ ಸುಖಸಂಬಂಧದ ಸುಳುಹ ನೋಡಾ.
ಆತ್ಮಾಂಗವ ಧರಿಸಿ ಅನನ್ಯಕಳೆವಿಡಿದು ಸಮರಸದೊಳಿಪ್ಪ
ಸದ್ಭಕ್ತನ ಚರಾಂಗದಲ್ಲಿ ಬೆಳಗುವ
ಚನ್ನಬಸವಲಿಂಗದ ನಿಲುವ ನೋಡಾ. || ೧೨೧೯ ||

೧೨೨೦

ಧರೆಯನು ಧೂಳದಲ್ಲಿ ಬೆಳಗಿ, ನೀರನು ಜಲದಲ್ಲಿ ತೊಳೆದು,
ಕಿಚ್ಚನು ಕೆಂಡದಲ್ಲಿ ಸುಟ್ಟು, ಗಾಳಿಯನು ವಾತದಲ್ಲಿ ತಿರುಪಿ,
ಆಕಾಶವನು ಬಯಲಲ್ಲಿ ಬಗೆದು,
ತನ್ನನು ತನ್ನಲ್ಲಿ ನೋಡಿ ಮಾಡಿ ಪೂಜಿಸಿ ಸುಖಿಸಲರಿಯದೆ

ಪಂಚ ಪಂಚವರ್ತನಾಭಾವದ ಕಳೆಯಲ್ಲಿ ಬೆಳೆದು ತೋರಿ ಮಾಡಿ,
ಮಾಟಕೂಟದ ಕೋಟಲೆಯೊಳಗೆ ಭಂಗಿತರಾದರು.
ಅದು ಕಾರಣ ಚನ್ನ ಬಿಂದು ನಾದ ಕಳೆ ಪ್ರಸನ್ನಮೂರ್ತಿ ಲಿಂಗವು
ಅಲ್ಲಿಯೇ ಹಿಂಗಿರ್ದನು ನಿರ್ಮಲಪ್ಪದ್ವಳಗಿನಲ್ಲಿ. ॥ ೧೨೨೦ ॥

೧೨೨೧

ಸತ್ಯಬೆಳಗ ಹೊತ್ತು ಸಮಯಸಂಪನ್ನತೆಯೊಳಗೆ ನಡೆವ
ಸಧರ್ಮಿಗಳ ಕಂಡು,
ಗಮನಾಗಮನವೆಂದು ನಡೆವಲ್ಲಿ ಬೆಳಗುಗತ್ತಲೆಯಪ್ಪಿ ಸುಳುಹು ಸೂಕ್ಷ್ಮಗೆಟ್ಟು,
ಕಳೆ ಕಸವಗೂಡಿ ಕಷ್ಟಕಲ್ಪನೆಯೊಳಗೆ ಕಡೆಗಾಣದಾದರು.
ಮತ್ತೆ ಅಪರಂಗಚರಿತೆಯನರಿಯದಿರ್ದನು
ಚನ್ನ ಬಿಂದು ನಾದ ಕಳೆ ಪ್ರಸನ್ನಮೂರ್ತಿ ಲಿಂಗವು ನಿಜಮಾರ್ಗ
ನಿಜಮಾರ್ಗ ನಿಲುವಿನೊಳಗೆ. ॥ ೧೨೨೧ ॥

೧೨೨೨

ಸುಜ್ಞಾನೋದಯವಾದ ಬಳಿಕ ಸರ್ವಸಂಗಪರಿತ್ಯಾಗವ ಮಾಡಿ
ನಿರ್ಮಲಾತ್ಮಕನಾಗಿ ಗುರೂಪಾಸ್ತೆಯ ಮಾಡಿ
ನಿಜಲಿಂಗವ ಬೇಡಿಕೊಂಡುದೊಂದು,
ಆ ಲಿಂಗಸನ್ನಿಹಿತ ಮಹಾಜ್ಞಾನಜಂಗಮದಲ್ಲಿ
ಪರಮಪ್ರಸಾದವ ಬೇಡಿಕೊಂಡುದೊಂದು.
ಈ ಉಭಯದ ಮೇಲೆ ಮತ್ತೆಲ್ಲಿಯು ಬೇಡಲರಿಯದೆ ಕೂಡಿ ಹೋದ
ಗುರುನಿರಂಜನ ಚನ್ನಬಸವಲಿಂಗ ನಿಮ್ಮೊಳಗೆ ಶರಣ. ॥ ೧೨೨೨ ॥

ಶೇಷಾಂಗಸ್ಥಲದ ವಚನಗಳು

ಸೂತ್ರ : ಇಂತು ಭಕ್ತನ ಚರಾಂಗಸ್ಥಲದಲ್ಲಿ ವಿನೋದಮಯನಾದ ಲಿಂಗವು ಆ ಭಕ್ತನ ಪ್ರಸಾದಲಿಂಗಸ್ಥಲದಲ್ಲಿ ಪರಿಪೂರ್ಣತ್ವನಾಗಿ ವರ್ತಿಸಿದ ಕಾರಣ ಮುಂದೆ ಶೇಷಾಂಗಸ್ಥಲವೆಂದು ಹೇಳಲಾಯಿತ್ತು.

೧೨೨೩

ಜನನ ಸ್ಥಿತಿ ಮರಣವಿರಹಿತನಾಗಿರ್ದುದೇ ಪ್ರಸಾದಕಾಯವಯ್ಯಾ.
ಅದೆಂತೆಂದೊಡೆ, ಜನನಭಾವವಳಿದು
ಪುನರ್ಜನನಭಾವ ನಿಂದುದೇ ಶುದ್ಧಶೇಷಾಂಗವು.
ಮಾಯಾಸಂಸಾರ ಸ್ಥಿತಿಭಾವವಳಿದು

ಲಿಂಗಭೋಗೋಪಭೋಗಿಯಾಗಿಹುದೇ ಸಿದ್ಧಶೇಷಾಂಗವು.
ಮಾಯಾಸಂಸಾರ ಸ್ಥಿತಿಭಾವವಳಿದು
ಲಿಂಗಭೋಗೋಪಭೋಗಿಯಾಗಿಹುದೇ ಸಿದ್ಧಶೇಷಾಂಗವು.
ಕಾಲ ಮರಣ ಭಾವವಳಿದು
ಮನ ನಿರಂಜನ ಮಹಾಜ್ಞಾನೈಕ್ಯವಾದುದೇ ಪ್ರಸಿದ್ಧಶೇಷಾಂಗವು.
ಈ ತ್ರಿವಿಧಾಂಗ ಸಂಗಸದ್ಭಕ್ತಿಪ್ರಿಯ ಪಂಚಾಕ್ಷರಮೂರ್ತಿಲಿಂಗವು. ॥ ೧೨೨೩ ॥

೧೨೨೪

ಇಂದ್ರಿಯಂಗಳ ಗಮನಗೆಡವೆ ಕರಣಂಗಳ ಸೂತಕ ಕಡೆಗಾಗದೆ
ಆತ್ಮನ ಕುರುಹು ಅಡಗದೆ ಬರಿದೆ ಭ್ರಮೆಗೊಂಡು ಹಿರಿಯತನವ ಹೊತ್ತರಲ್ಲ !
ಮತ್ತೆ ಪೂರ್ವ ವೊತ್ತವ ಬರಿವಿದ್ಯೆ ಬಂಧನಕ್ಕೆರಗಿ ಸಂದಿನ ಕಿಚ್ಚಿನಲ್ಲಿ ಬೆಂದರಲ್ಲ !
ಬಂದುದನರಿಯದೆ ಹಿಂದಿನ ಸರಮಾಲೆಯ ಸಂಕೋಲೆಯೊಳಗಾಗಿ
ಭೋಗವನರಿವರು ಕಾಣಾ ಪಂಚಾಕ್ಷರಮೂರ್ತಿಲಿಂಗವೆ. ॥ ೧೨೨೪ ॥

೧೨೨೫

ಕಷ್ಟಕಡೆಗಾಣದ ಬಿಂದು, ಅದನಾವರಿಸಿದ ನಾದ
ದ್ವಂದ್ವದ ಮೇಲಣ ಸೂತ್ರಕಳೆ
ಈ ಕುರುಹವರಿತಲ್ಲದೆ ಕುರುಹಿಡಿದು ಬಂದೆವೆಂದರೆ
ಕಾಣಿಸವಲ್ಲೋ ಶುದ್ಧ, ತಿಳಿಯದಲ್ಲೋ ಸಿದ್ಧ, ಹೊಳೆಯದಲ್ಲೋ ಪ್ರಸಿದ್ಧ.
ಅದು ಕಾರಣ ಪಂಚಾಕ್ಷರಮೂರ್ತಿಲಿಂಗವ-
ವರಂಗವನೊಲ್ಲದಿರ್ದನು ಶೇಷಾಂಗದಲ್ಲಿ. ॥ ೧೨೨೫ ॥

೧೨೨೬

ಸತಿಭಾವದಿಂದ ಭಕ್ತಿಯ ಮಾಡುವೆನೆಂದು ಬರೆಬರೆವಲ್ಲಿ
ಹಿತ ತಪ್ಪಿ ಹೋಯಿತ್ತು ನೋಡಾ.
ವ್ರತಗೆಟ್ಟು ನಿಂದ ನಿಲವು ಮರವೆಯ ಮನೆಯೊಳಗೆ
ಪರಿಪರಿ ಭೋಗ್ಯ ಭುಕ್ತತ್ವವನೈದಿ,
ತಾನಾರೆಂಬುವದನರಿಯದೆ ಸಮ್ಮುಖಸ್ನೇಹ ಮರೆದು
ತಾಯಿ ತಂದೆಯ ಸುಖದೊಳಗಾಗದೆ
ಮಾಯಾನಿಲವ ಧರಿಸಿದ ಮರುಳ ಕಂಡು ಮರೆದಿರ್ದನು
ನಮ್ಮ ಶಾಂತ ಐಮಾರ್ಗಸಂಜ್ಞೆದೇವನು. ॥ ೧೨೨೬ ॥

೧೨೨೭

ಹಿಡಿದು ಬಂದು ಹೊಡದಾಡಿ ಹೊಲಬುದಪ್ಪಿ
ಮಡಿದು ಹೋಗುವ ಮರುಳು ಭೂತಗಳು
ಮನೆ ಗ್ರಾಮ ದೇಶಂಗಳೆಲ್ಲ ತುಂಬಿ ಸೂಸುತಲಿಪ್ಪುದು.
ನಾನಿವರ ಸೆರೆಹೊರೆಗಂಜಿ ಅರಸಿ ಕಂಡು
ಮೊರೆಹೊಕ್ಕು ಬದುಕಿದೆ ಶಾಂತ ಐವರ್ಣಸಂಜ್ಞೆದೇವನ. ॥ ೧೨೨೭ ॥

೧೨೨೮

ಕಂಡು ತಪ್ಪಿಸಿಕೊಂಡು ನಡೆವ ಗಮನಾಗಮನಂಗಳಂಗ,
ಕಂಡು ತಪ್ಪಿಸಿಕೊಂಡು ನೋಡುವ ನೋಟವಂಗ,
ಕಂಡು ತಪ್ಪಿಸಿಕೊಂಡು ಮಾಡುವ ಮಾಟವಂಗ,
ಕಂಡು ತಪ್ಪಸಿಕೊಂಡು ಉಂಬುವ ಊಟವಂಗ,
ಮತ್ತೆ ನಿರಂಜನ ಸತ್ಯಸಾವಧಾನವಂಗ
ಸತ್ತು ಚಿತ್ತು ಆನಂದ ನಿತ್ಯಪರಿಪೂರ್ಣ ಲಿಂಗದಲ್ಲಿ ಶೇಷಾಂಗವದೆ. ॥ ೧೨೨೮ ॥

೧೨೨೯

ಅರ್ಪಿತ ದಪ್ಪಗೊಂಡು ಅವಿರಳವಾಗಿರ್ದಿತ್ತು ಬಹಿರಂಗ,
ಬಹಿರಂಗ ಬಳಕೆಯೊಳಗಾಗಿ ನಿರಾಳವಾಯಿತ್ತು ಅಂತರಂಗ,
ಈ ಉಭಯದಪ್ಪ ತಲೆಗೊಂಡು ನಿರಂಜನವಾಯಿತ್ತು ಚೈತನ್ಯ.
ಈ ತ್ರಿವಿಧವ ಭಾವಿಸಿ ನಿಂದಲ್ಲಿ ಪ್ರಸಾದಂಗ ಪರಿಪೂರ್ಣ ತಾನೆ
ಚೆಲುವ ಶುದ್ಧ ಸಿದ್ಧ ಪ್ರಸಿದ್ಧ ಪ್ರಭುಲಿಂಗವು. ॥ ೧೨೨೯ ॥

೧೨೩೦

ಹಿಂಗಾಲನರಿದು ಹಿಂಗಾಲ ತರಲಿಲ್ಲ ನೋಡಾ.
ಮುಂಗಾಲನರಿದು ಮುಂಗಾಲ ತರಲಿಲ್ಲ ಮತ್ತೆ
ಆ ಕಾಲನರಿದು ಆ ಕಾಲದಲ್ಲಿ ಬಾಳಲಿಲ್ಲದ ಶರಣ ನೋಡಾ.
ಪಂಚಾಕ್ಷರಮೂರ್ತಿ ಲಿಂಗದಂಗ ನಿರುತವಿದೆ ಕಾಣಾ. ॥ ೧೨೩೦ ॥

೧೨೩೧

ಇಂದ್ರಿಯವಿಷಯಂಗಳನರಿಯದ ತತ್ವ ಇಷ್ಟಲಿಂಗದ ನೆಲೆವನೆ.
ಇಂದ್ರಿಯವಿಷಯಂಗಳನರಿಯದ ತತ್ವ ಪ್ರಾಣಲಿಂಗದ ನೆಲೆವನೆ.
ಇಂದ್ರಿಯವಿಷಯಂಗಳನರಿಯದ ತತ್ವ ಭಾವಲಿಂಗದ ನೆಲೆವನೆ.
ಮತ್ತೆ ಇಂದ್ರಿಯವಿಷಯಂಗಳನರಿಯದ ತತ್ವ
ಪಂಚಾಕ್ಷರಮೂರ್ತಿಲಿಂಗವ ಹಿಂಗದಂಗವದೆ ನಿರುತ ಕಾಣಾ. ॥ ೧೨೩೧ ॥

೧೨೩೨

ಅಚ್ಚುಗವಿಲ್ಲದ ಅಚ್ಚುಗವಿದೇನಯ್ಯಾ ?
ಕಣ್ಣ ಮುಂದೆ ಮೆಚ್ಚುವಿಲ್ಲದ ಮೆಚ್ಚು ಇದೇನಯ್ಯಾ ಹುಚ್ಚುಗೊಂಡಿತ್ತು !
ನಾನೆಂಬುದು ನಷ್ಟವಾಗಿ ನೀನೆಂಬುದು ನಿಂದುರಿದು,
ಬೆಳಗಹೊದ್ದು ಬೆಳಗನುಂಡು ಬೆಂಬಳಿಯ ಸುಖವ ಮುಂಬಳಿಯೊಳಿಟ್ಟು
ಮುಂಬರಿವ ನಮ್ಮ ಚೆಲುವಾಂಗ ಪ್ರಾಣಾತ್ಮಪ್ರಿಯ ಸಿದ್ಧಲಿಂಗ. || ೧೨೩೨ ||

**ಮಹದಂಗಸ್ಥಲದ ವಚನಗಳು**

ಸೂತ್ರ : ಇಂತು ಪ್ರಸಾದಾಂಗಸ್ಥಲದಲ್ಲಿ ಆಚರಿಸಿದ ಲಿಂಗವು ಮತ್ತೆ ತನ್ನ ವಿನೋದ ಕಾರಣ ಆ ಭಕ್ತನ ಮಹದಂಗದಲ್ಲಿ ಮಮತೆಯುತದಿಂದೆ ಲೀಲೆಮುಖವಿತ್ತ ಕಾರಣ ಮುಂದೆ ಮಹದಂಗಸ್ಥಲವೆಂದು ಹೇಳಲಾಯಿತ್ತು.

೧೨೩೩

ಅಯ್ಯಾ, ಭಕ್ತಲಿಂಗಸಮರಸಾಂಗವೆಂತಿರ್ಪುದು ನೋಡಾ !
ಜಲ-ಜಲಗಲ್ಲಿನ ಕೂಟದಂತೆ, ಮುತ್ತುಂಡ ನೀರಿನಂತೆ,
ಜ್ಯೋತಿಯೊಳರತ ತೈಲದಂತೆ ಇರ್ದುದು ಮಹದಂಗದ ನಿಲವು,
ನಿಶ್ಚಯವದು ಕಾಣಾ
ಮಹಾಘನ ಚನ್ನವೃಷಭೇಂದ್ರಲಿಂಗ. || ೧೨೩೩ ||

೧೨೩೪

ಮಾಡುವುದು ಭಕ್ತಿಯ ತನುವಂಚನೆಯೊಳದಗಿ,
ನೀಡುವುದು ಮನದ ಸಂಶಯದೊಳ್ಳಿಂದು,
ಕೂಡುವುದು ಲಿಂಗದ ಕಾಯವಂತನಾಗಿ,
ಇದು ಭಾರ ಭಾರ ಬಲುಭಾರ ಕಂಡುಂಡು ಕಾಂಬುವರು ಭವಲತೆಯ ಬುಡವ
ಚನ್ನವೃಷಭೇಂದ್ರಲಿಂಗವನರಿಯದೆ. || ೧೨೩೪ ||

೧೨೩೫

ಅರಿದು ಬಂದು ಒಂದೇ ವೇಳೆ ಮರೆದು ಹೆಚ್ಚಿಯನೆಣಿಸುವ ಭಂಗವ ನೋಡಾ.
ಘ್ರಾಣ ಜಿಹ್ವೆ ನೇತ್ರ ತ್ವಕ್ಕು ಶ್ರೋತ್ರ ಹೃದಯ
ಸಿಸಿಹಾಲು ಅನಿಲವನೊಲ್ಲದಿರ್ದನು ನಮ್ಮ ಐವರ್ಣಸಂಜ್ಞೆದೇವ. || ೧೨೩೫ ||

೧೨೩೬

ಸದಾತ್ಮರುಗಳಲ್ಲಿ ಅಯ್ಯಾ, ಬಂದವರುಂಟು
ಸಂದವರುಂಟು ಯೋನಿಸಂಸಾರ ಮರಣದಲ್ಲಿ.

ನಾ ಕಾಣೆನಯ್ಯಾ ಬಂದವರ, ನಾ ನೋಡೆನಯ್ಯಾ ಬಂದವರ,
ನಾನರಿಯೆನಯ್ಯಾ ಬಂದವರ ನಿಮಗಾಗಿ
ಚನ್ನ ತ್ರಿವರ್ಣಲಿಂಗವೆ ನಿಮ್ಮ ಹಿಡಿದವರನಲ್ಲದೆ. ॥ ೧೨೩೬ ॥

೧೨೩೭

ಅಯ್ಯಾ, ಆದ್ಯರು ವೇದ್ಯರು ಸಾಧ್ಯರೆಂಬ ಸದಮಲಾತ್ಮರುಗಳಗಲ್ಲದೆ
ಸಂಗಸಂಯೋಗ ಸಮರಸಸಂಪದವು ಸಾಮಾನ್ಯವೇ ಹೇಳಾ ?
ಹಂಗಿನೊಳಗಾಗಿ ಭಂಗದೊಳಗಿರ್ದು ಭವವಿರಹಿತನೊಳು ಸಂತೃಪ್ತರೆಂಬ
ಬೆಂಗರ್ವಿಗಳ ಕಂಡು ಪೆರ್ಬುಲೆಯೊಳಿಕ್ಕಿ ನಗುತಿರ್ದ
ನಮ್ಮ ಚನ್ನತ್ರಿವರ್ಣಲಿಂಗವು ನಿರ್ಮಲಾಂತರ್ಮುಖಿಗಳೊಡವೆರೆದು. ॥ ೧೨೩೭ ॥

೧೨೩೮

ಭಂಗಭರಿತರ ಮಾತನೇನೆಂಬೆ ನೋಡಾ.
ಭವಸಂಪ್ರೀತರ ಮಾತನೇನೆಂಬೆ ನೋಡಾ.
ಯೋನಿಸೂತಕರ ಮಾತನೇನೆಂಬೆ ನೋಡಾ.
ಪ್ರಮಥರ ನಡೆನುಡಿಯೈಕ್ಯ ಪ್ರಮಥರಿಗೆ ಸರಿ
ನಮಗಾಗಬಲ್ಲುದೇ ಹೇಳಾ ಎಂಬುವರು.
ತನುವೊಂದು ಜ್ಞಾನವೊಂದು ವೈರಾಗ್ಯವೊಂದು ಭಕ್ತಿಯೊಂದು
ಕಾರುಣ್ಯವೊಂದು ಆಚಾರವೊಂದು ಅನುಭಾವವೊಂದು ಸಮರಸವೊಂದು
ಮತ್ತೆ ಇನ್ನೊಂದು ಬೇರುಂಟೆ ಶಿವಾಂಶಿಕರಿಗೆ ಹೇಳಾ ?
ಇಂತಾ ಜಡಮೂಢಪ್ರಾಣಿಗಳ ಮಾತಿಂಗೆ ಮಾತ ನೀಡಲಾಗದು ಕಾಣಾ
ಪರಿಣಾಮ ಭರಿತಾಂಗರು ನಿಜಾಂತಃಪ್ರಿಯ ಚನ್ನಬಸವಲಿಂಗಾ. ॥ ೧೨೩೮ ॥

೧೨೩೯

ಬಹಿರಂಗವನಿಟ್ಟು ಮಾಡುವರು, ಅಂತರಂಗವನಿಟ್ಟು ನೋಡುವರು.
ಈ ಉಭಯವನರಿಯದೆ ಕೂಡುವುದು ಇದು ಅಮಳತೇಜಾಂಗದ ನಿಲವು.
ಅಪ್ರತಿಮ ಮಹಿಮ ಶಾಂತ ಚನ್ನವೃಷಭೇಂದ್ರಲಿಂಗದಲ್ಲಿ. ॥ ೧೨೩೯ ॥

೧೨೪೦

ಪರುಷ-ಕಬ್ಬಿಣ ಸಂಗದಂತಿರ್ಪುದೊಂದಂಗ.
ಭ್ರಮರ-ಕಾಷ್ಠಕ ಸಂಬಂಧದಂತಿರ್ಪುದೊಂದಂಗ.
ಉರಿ-ಕರ್ಪುರ ಯೋಗದಂತಿರ್ಪುದೊಂದಂಗ.
ಈ ಬಗೆಯೊಳಿರ್ದು ಇಂತು ಮಾಡಿದ ಮಾಟ ಮಾಡಿತೋರುವುದು
ಮಹದಂಗನಮ ಸತ್ಯ ಶಾಂತ ವೃಷಭೇಂದ್ರಲಿಂಗದಲ್ಲಿ. ॥ ೧೨೪೦ ॥

೧೨೪೧

ಸತ್ತು ಹುಟ್ಟಿ ತ್ರಿವಿಧವನರಿದು, ಸತ್ತು ಹುಟ್ಟಿ ತ್ರಿವಿಧವನರಿದು,
ಸತ್ತು ಸತ್ತು ಹುಟ್ಟಿ ಹುಟ್ಟಿ ಸಾವ ಪರಿಯ ಬಲ್ಲರದು ಮಹದಂಗವೆಂಬೆ,
ಮಹಾದಾನಿ ಚನ್ನವೃಷಭೇಂದ್ರಲಿಂಗದಲ್ಲಿ. ॥ ೧೨೪೧ ॥

೧೨೪೨

ಗಂಧವನಡಗಿಸಿಕೊಂಡ ಘ್ರಾಣದಂತಾಯಿತ್ತೆನ್ನ ಭಕ್ತಿ.
ರಸವನಡಗಿಸಿಕೊಂಡ ನಾಲಗೆಯಂತಾಯಿತ್ತೆನ್ನ ಭಕ್ತಿ.
ರೂಪವನಡಗಿಸಿಕೊಂಡ ನೇತ್ರದಂತಾಯಿತ್ತೆನ್ನ ಭಕ್ತಿ.
ಸ್ಪರ್ಶನವನಡಗಿಸಿಕೊಂಡ ತ್ವಕ್ಕಿನಂತಾಯಿತ್ತೆನ್ನ ಭಕ್ತಿ.
ಶಬ್ದವನಡಗಿಸಿಕೊಂಡ ಕರ್ಣದಂತಾಯಿತ್ತೆನ್ನ ಭಕ್ತಿ. ಮತ್ತೆಲ್ಲವನಡಗಿಸಿಕೊಂಡ
ಚನ್ನವೃಷಭೇಂದ್ರಲಿಂಗವು ಭಕ್ತಿಭಾವವೆಲ್ಲವು ತಾನಾಯಿತ್ತು. ॥ ೧೨೪೨ ॥

■■

## ನಿರಾಲಂಬಪ್ರಭುದೇವರ ಶಿವಭಕ್ತಿ ಪಂಚಾಂಗದ ವಚನ

೧೨೪೩

ಶ್ರೀಮತ್ಸಜ್ಜನ ಶುದ್ಧಶಿವಾಚಾರರಾಗಿ
ಅಷ್ಟಾವರಣವೆ ಅಂಗವಾಗಿ, ಪಂಚಾಚಾರವೆ ಪ್ರಾಣವಾಗಿ,
ಬಸವೇಶ್ವರದೇವರ ಸಾಂಪ್ರದಾಯಕರೆಂದು
ನುಡಿದು ನಡೆದರೆ ಭಕ್ತರೆಂಬೆ, ಪುರಾತನರೆಂಬೆ.
ಅಂತಪ್ಪ ಭಕ್ತಂಗೆ ಈ ಮೂಜಗವೆಲ್ಲ ಸರಿಯಲ್ಲವೆಂಬೆ.
ಆ ಭಕ್ತಂಗೆ ಶಿವನ ಗದ್ದುಗೆಯೆ ಕೈಲಾಸವಾಗಿಪ್ಪುದು ನೋಡಾ.
ಈ ಶಿವಾಚಾರದ ಪಥವನರಿಯದೆ
ಇರುಳು ಹಗಲು ಅನಂತ ಸೂತಕಪಾತಕಂಗಳೊಳಗೆ
ಮುಳುಗಾಡಿ ಮತಿಗೆಟ್ಟು ಪಂಚಾಂಗವ ಬೊಗಳುವ
ಭ್ರಷ್ಟ ಮಾದಿಗರ ಮಾತು ಅಂತಿರಲಿ.
ಪಂಚಾಂಗ ಕೇಳಿದ ದಕ್ಷಬ್ರಹ್ಮನ ತಲೆಯೇಕೆ ಹೋಯಿತು ?
ಪಂಚಾಂಗ ಕೇಳಿದ ಪಂಚಪಾಂಡವರು ದೇಶಭ್ರಷ್ಟರಾದರೇಕೆ ?
ಪಂಚಾಂಗ ಕೇಳಿದ ಶ್ರೀರಾಮನ ಹೆಂಡತಿ ರಾವಣಗೆ ಸೆರೆಯಾದಳೇಕೆ ?
ಪಂಚಾಂಗ ಕೇಳಿದ ಇಂದ್ರನ ಶರೀರವೆಲ್ಲ
ಯೋನಿಮಂಡಲವೇಕಾಯಿತು ?

ಪಂಚಾಂಗ ಕೇಳಿದ ದ್ವಾರಾವತಿ ಪಟ್ಟಣದ
ನಾರಾಯಣನ ಹೆಂಡಿರು ಹೊಲೆಮಾದಿಗರನ್ನು ಕೂಡಿದರೇಕೆ ?
ಪಂಚಾಂಗ ಕೇಳಿದ ಸರಸ್ವತಿಯ ಮೂಗು ಹೋಯಿತೇಕೆ ?
ಪಂಚಾಂಗ ಕೇಳಿದ ಕಾಮ ಸುಟ್ಟು ಭಸ್ಮವಾದನೇಕೆ ?
ಪಂಚಾಂಗ ಕೇಳಿದ ಬ್ರಹ್ಮ ವಿಷ್ಣು ಇಂದ್ರ ಮೊದಲಾದ
ಮೂವತ್ತುಮೂರುಕೋಟಿ ದೇವರ್ಕಳು
ತಾರಕಾಸುರನಿಂದ ಬಾಧೆಯಾಗಿ ಕಂಗೆಟ್ಟು
ಶಿವನ ಮೊರೆಯ ಹೊಕ್ಕರೇಕೆ ?
ಕುರುಡ ಕುಂಟ ಹಲ್ಲುಮುರುಕ ಗುರುತಲ್ಪಕನ
ಬಲವ ಕೇಳಲಾಗದು.
ಶುಭದಿನ ಶುಭಲಗ್ನ ಶುಭವೇಳೆ ಶುಭಮುಹೂರ್ತ
ವ್ಯತಿಪಾತ ದಗ್ಧವಾರವೆಂದು ಸಂಕಲ್ಪಿಸಿ
ಬೊಗಳುವರ ಮಾತ ಕೇಳಲಾಗದು.
ಗುರುವಿನಾಜ್ಞೆಯ ಮೀರಿ, ಸತ್ತರೆ ಹೊಲೆ, ಹಡೆದರೆ ಹೊಲೆ,
ಮುಟ್ಟಾದರೆ ಹೊಲೆ ಎಂದು ಸಂಕಲ್ಪಿಸಿಕೊಂಬುವಿರಿ.
ನಿಮ್ಮ ಮನೆ ಹೊಲೆಯಾದರೆ
ನಿಮ್ಮ ಗುರುಕೊಟ್ಟ ಲಿಂಗವೇನಾಯಿತು ?
ವಿಭೂತಿ ಏನಾಯಿತು ? ರುದ್ರಾಕ್ಷಿ ಏನಾಯಿತು ?
ಮಂತ್ರವೇನಾಯಿತು ? ಪಾದೋದಕ ಪ್ರಸಾದವೇನಾಯಿತು ?
ನಿಮ್ಮ ಶಿವಾಚಾರವೇನಾಯಿತು ?
ನೀವೇನಾದಿರಿ ಹೇಳಿರಣ್ಣಾ ? ಅರಿಯದಿದ್ದರೆ ಕೇಳಿರಣ್ಣಾ.
ನಿಮ್ಮ ಲಿಂಗ ಪೀತಲಿಂಗ; ನೀವು ಭೂತಪ್ರಾಣಿಗಳು.
ನಿಮ್ಮ ಮನೆಯೊಳಗಾದ ಪದಾರ್ಥವೆಲ್ಲ ಹೆಂಡಕಂಡ
ಅಶುದ್ಧ ಕಿಲ್ಬಿಷವೆನಿಸಿತ್ತು.
ಇದ ಕಂಡು ನಾಚದೆ, ಮತ್ತೆ ಮತ್ತೆ ಶುಭಲಗ್ನವ ಕೇಳಿ,
ಮದುವೆಯಾದ ಅನಂತ ಜನರ ಹೆಂಡಿರು
ಮುಂಡೆಯರಾಗಿ ಹೋದ ದೃಷ್ಟವ ಕಂಡು
ಪಂಚಾಂಗವ ಕೇಳಿದವರಿಗೆ ನಾಯಿ ಮಲವ
ಹಂದಿ ಕಿತ್ತುಕೊಂಡು ತಿಂದಂತಾಯಿತ್ತು ಕಾಣಾ
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ. ॥ ೧ ॥

೧೨೪೪

ಪಂಚಾಂಗ ಪಂಚಾಂಗವೆಂದು ಕಳವಳಗೊಂಡು
ಜೋಯಿಸನ ಕರೆಯಿಸಿ,
ಕೈಮುಗಿದು ಕಾಣಿಕೆಯನಿಕ್ಕಿ ಎಲೆ ಅಡಿಕೆಯಂ ಕೊಟ್ಟು,
ಜೋಯಿಸನ ವಾಕ್ಯವು ಸಕಲ ಕಾರ್ಯಕ್ಕೆ ಸಿದ್ಧಿಯೆಂದು,
ಅವನ ಬಾಯ ತೊಂಬುಲವ ತಿಂಬ ಹಂದಿಗಳಿರಾ
ಎತ್ತ ಬಲ್ಲಿರಯ್ಯಾ ಶಿವಾಚಾರದ ಪದ್ಧತಿಯನು ?
ಪಂಚಾಂಗವೆಂಬ ಶಬ್ದಕ್ಕೆ ಅರ್ಥವ ಹೇಳಲರಿಯದೆ
ಜೋಯಿಸರು ಕೆಟ್ಟರು ;
ಕೇಳಲರಿಯದೆ ಅನಂತ ಹಿರಿಯರು ನರಕಕ್ಕೆ ಇಳಿದರು.
ಪಂಚಾಂಗವೆಂದರೆ ಹೇಳಿಹೆ ಕೇಳಿರಣ್ಣಾ.
ಪಂಚ ಅಂದರೆ ಐದು : ಅಂಗವೆಂದರೆ ದೇಹ.
ಪೃಥ್ವಿ ಅಪ್ಪು ತೇಜ ವಾಯು ಆಕಾಶ-
ಈ ಐದು ಕೂಡಿ ದೇಹವಾಯಿತ್ತು.
ಆ ದೇಹದೊಳಗೆ ಕಾಮ ಕ್ರೋಧ ಲೋಭ
ಮೋಹ ಮದ ಮತ್ಸರದಟ್ಟು ಮುರಿಯುವುದೇ ಪಂಚಾಂಗ.
ಸತ್ವ ರಜ ತಮವೆಂಬ ಅಹಂಕಾರವ ತುಳಿವುದೆ ಪಂಚಾಂಗ.
ಆಣವಮಲ ಮಾಯಾಮಲ ಕಾರ್ಮಿಕಮಲವ
ಮುಟ್ಟದಿರುವುದೇ ಪಂಚಾಂಗ.
ತನ್ನ ಸತಿಯ ಸಂಗವಲ್ಲದೆ
ಪರಸತಿಯರ ಮುಟ್ಟದಿರುವುದೇ ಪಂಚಾಂಗ.
ತನ್ನ ಇಷ್ಟಲಿಂಗವಲ್ಲದೆ ಭೂಮಿಯ ಮೇಲೆ ಇಟ್ಟು
ಪೂಜೆಯ ಮಾಡುವ ದೇವರಿಗೆ ಕೈಮುಗಿಯದಿರುವುದೆ ಪಂಚಾಂಗ.
ಜಾತಿಸೂತಕ ಜನನಸೂತಕ ಉಚ್ಛಿಷ್ಟಸೂತಕ
ಮೃತ್ಯುಸೂತಕ ರಜಸ್ಸೂತಕ - ಈ ಪಂಚಸೂತಕವ
ಶರಣರು ಕಳೆವರಾಗಿ, ನಮ್ಮ ಶಿವಭಕ್ತರಿಗೆ ಸಲ್ಲದೆಂಬುದೆ ಪಂಚಾಂಗ.
ಸೂತಕ ನಾಸ್ತಿಯಾದುದೆ ಪಂಚಾಂಗ.
ಗುರು ಲಿಂಗ ಜಂಗಮ ಪಾದೋದಕ ಪ್ರಸಾದವೆ ಪಂಚಾಂಗ.
ಲಿಂಗಾಚಾರ ಸರ್ವಾಚಾರ ಭೃತ್ಯಾಚಾರ
ಶಿವಾಚಾರ ಗಣಾಚಾರವೆ ಪಂಚಾಂಗ.
ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ,

ಗಣಪ್ರಸಾದ, ಮಹಾಪ್ರಸಾದವ ಕೊಂಬುವುದೆ ಪಂಚಾಂಗ.
ಇಂತೀ ಪಂಚಾಂಗದ ನಿಲವನರಿಯದೆ
ಪಂಚಸೂತಕದೊಳಗೆ ಹೊಡೆದಾಡುವ ಪಂಚಮಹಾಪಾತಕರ
ಎನಗೊಮ್ಮೆ ತೋರದಿರಯ್ಯ
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ. ॥ ೨ ॥

೧೨೪೫

ಪಂಚಾಂಗವೆಂಬ ಶಬ್ದಕ್ಕೆ ಅರ್ಥ :
ಪಂಚವೆಂದರೆ ಐದು ; ಅಂಗವೆಂದರೆ ದೇಹ.
ಈ ಉಭಯ ಕೂಡಿದರೆ ದೇಹವಾಯಿತ್ತು.
ಈ ದೇಹವೆ ಪಂಚಾಂಗವೆನಿಸಿತ್ತು.
ಅದು ಹೇಗೆಂದಡೆ :
ನಕಾರ ಮಕಾರ ಶಿಕಾರ ವಕಾರ ಯಕಾರದ
ನಿಕ್ಷೇಪವನರಿವುದೇ ಪಂಚಾಂಗ.
ಕ್ರಿಯಾ ಜ್ಞಾನ ಇಚ್ಛಾ ಆದಿ ಪರಾ ಚಿಚ್ಛಕ್ತಿಯ
ಎಚ್ಚರನರಿವುದೆ ಪಂಚಾಂಗ.
ಇಚ್ಛೆಯೊಳಗಿರುವುದೆ ಪಂಚಾಂಗವಯ್ಯ.
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ. ॥ ೩ ॥

೧೨೪೬

ಪಂಚಾಂಗದ ಭೂತವಳಿದು
ಪಂಚಭೂತಗಳ ನಿವೃತ್ತಿಯಮಾಡಬಲ್ಲರೆ ಪಂಚಾಂಗ.
ಸುಚಿತ್ತ ಸುಬುದ್ಧಿ ನಿರಹಂಕಾರ ಸುಮನ ಸುಜ್ಞಾನ
ಸದ್ಭಾವ ದುರ್ಭಾವ ನಿರಾಳಹಸ್ತವನರಿವುದೆ ಪಂಚಾಂಗ.
ಆಚಾರ ಗುರು, ಶಿವ ಜಂಗಮ, ಪ್ರಸಾದ ಮಹಾಲಿಂಗದ
ನೆಲೆವನೆಯ ನೆಲೆಗೊಂಬುದೆ ಪಂಚಾಂಗ.
ಪಂಚಾಂಗದ ವಿವರವ ಗುರುಮುಖದಲ್ಲಿ ತಿಳಿವುದೆ ಪಂಚಾಂಗ.
ಪಂಚಪ್ರಸಾದವ ಸೇವಿಸಿ ಅಡಗಲರಿಯದೆ
ವಿರಂಚಿ ಸೃಷ್ಟಿಯೊಳಗಾಗಿ ಚೌರಾಸಿ ಲಕ್ಷ ಜೀವದಲ್ಲಿ
ಹುಟ್ಟಿ ಸತ್ತು ಹೋಗುವ ವ್ಯರ್ಥರಿಗೆ
ಇನ್ನೆತ್ತಣ ಪಂಚಾಂಗವಯ್ಯ
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ. ॥ ೪ ॥

೧೨೪೭

ಸದಾಚಾರ ಗಣಾಚಾರ ಲಿಂಗಾಚಾರ ಭೃತ್ಯಾಚಾರ
ಶಿವಾಚಾರದೊಳಗಿರಬಲ್ಲರೆ ಪಂಚಾಂಗ.
ಗುರು ಲಿಂಗ ಜಂಗಮ ಪಾದೋದಕ ಪ್ರಸಾದ
ವಿಭೂತಿ ರುದ್ರಾಕ್ಷಿ ಶಿವಮಂತ್ರವೆಂಬ
ಅಷ್ಟಾವರಣವೆ ಅಂಗವೆಂದು ನಂಬುವುದೇ ಪಂಚಾಂಗ.
ಸ್ಥೂಲ ಸೂಕ್ಷ್ಮ ಕಾರಣವೆಂಬ ಮೂರಂಗದಲ್ಲಿ
ಇಷ್ಟ ಪ್ರಾಣ ಭಾವವು ಸಂಬಂಧವಾದುದೆ ಪಂಚಾಂಗ.
ಅಂಗದ ಮೇಲೆ ಶಿವಲಿಂಗವಿಲ್ಲದ ವಿಪ್ರ ಶೂದ್ರ ಜಾತಿಯಲ್ಲಿ
ಸ್ನೇಹ ಸಮರಸ ವಿಶ್ವಾಸ ಸಂಭಾಷಣೆ
ಬಿಡುಗಡೆಯಾದುದೆ ಪಂಚಾಂಗ.
ಈ ಪಂಚಾಂಗದಲ್ಲಿ ಇರಲೊಲ್ಲದೆ
ಪೆಟ್ಟಿದ ಮೇಲೆ ಪಕ್ಷಿ ಕೆಡಿಸಿ ಜಾರಬಿಟ್ಟಂತೆ,
ಮಣ್ಣ ಮಟ್ಟಿ ನೀರಲ್ಲಿ ಕಲೆಸಿ, ಅದ ಭೂಜ ಘಣೆಗೆ ಜಾರಬಿಟ್ಟು,
ದ್ವಾದಶಪ್ರಮಾಣದ ಪಂಚಾಂಗ ಕೈಯಲ್ಲಿ ಹಿಡಿದು
ಸರ್ವಶುಭಮುಹೂರ್ತ ಹೇಳುವನ ಬಾಯ ತೊಂಬುಲವ ತಿಂಬ
ಹಂದಿಗಳೆತ್ತ ಬಲ್ಲರಯ್ಯ ಶಿವಪಥದ ಪಂಚಾಂಗವ
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ ? ॥ ೫ ॥

೧೨೪೮

ಶ್ರೀಗುರುಸ್ವಾಮಿ ಕರುಣಿಸಿ ಕೊಟ್ಟ
ಇಷ್ಟಲಿಂಗಪ್ರಸಾದವ ಚೆಲ್ಲದಿರುವುದೆ ಪಂಚಾಂಗ.
ತನ್ನ ಲಿಂಗವಲ್ಲದೆ ಭೂದೇವರ ಅಲ್ಲಗಳೆವುದೆ ಪಂಚಾಂಗ.
ಎಲ್ಲ ಕಾಲ ವೇಳೆಯಲ್ಲಿ ನಿಲ್ಲದೆ ನೆನೆವುದೆ
ಶುಭದಿನ ಶುಭಲಗ್ನ ಶುಭಮುಹೂರ್ತ
ಗುರುಬಲ ಚಂದ್ರಬಲ ಸೂರ್ಯಬಲವೆನಿಸುವುದಯ್ಯ
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ. ॥ ೬ ॥

೧೨೪೯

ಪಂಚಾಕ್ಷರದೊಳಗೆ ಪಂಚಾಂಗವಡಗಿತ್ತಾಗಿ,
ಪಂಚಾಕ್ಷರವ ತಿಳಿದೆನಾಗಿ
ಎನಗೆ ಪಂಚಾಂಗ ನಾಸ್ತಿಯಾಯಿತ್ತು ಕಾಣಾ
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ. ॥ ೭ ॥

೧೨೫೦

ಶ್ರೀಗುರುಪ್ರಸನ್ನ ಪಂಚಾಕ್ಷರಿಯ ನಾಮವ ನೆನೆದು
ಪಂಚಭೂತದ ಕಾಯವನಳಿದು,
ಪಂಚಭೂತದಲ್ಲಿ ಪಂಚಾಕ್ಷರಿಯ ತುಂಬಿ,
ಆ ಪಂಚಾಕ್ಷರಿಯ ಬೆಸನವ ನೆಲೆಗೊಂಬುವುದೆ ಪಂಚಾಂಗ.
ಪಂಚಾಂಗದಲ್ಲಿ ಸಂಚರಿಸುವ ಪಂಚಸೆಯ ಇಂದ್ರಿಯವ
ಲಿಂಗದ ಸಂಚಿನಲ್ಲಿ ಇರಿಸುವುದೆ ಪಂಚಾಂಗ.
ಇಂತೀ ಭೇದವ ಭೇದಿಸಿ ತಿಳಿಯಲರಿಯದೆ
ಅನಂತ ಹಿರಿಯರು ಕೆಟ್ಟರು ನೋಡಾ
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ. ॥ ೮ ॥

೧೨೫೧

ಶ್ರೀಗುರುಸ್ವಾಮಿ ಕರುಣಿಸಿ ಕೊಟ್ಟ ಇಷ್ಟಲಿಂಗವ
ಕರ ಮನ ಭಾವದೊಳಗಿಟ್ಟು ಪೂಜೆಮಾಡಲರಿಯದೆ
ಭ್ರಷ್ಟ ವಿಪ್ರನ ಮಾತು ಕೇಳಿ ನಷ್ಟಕ್ಕೊಳಗಾಗುವ,
ಕಂಚು ತಾಮ್ರ ಮೊದಲಾದ ಅನಂತದೇವರ ಭಜನೆಯ ಮಾಡುವ
ಮಡ್ಡ ಜಡಮಾದಿಗರ ಎನಗೊಮ್ಮೆ ತೋರದಿರಯ್ಯ
ನಿಸ್ಸಿಂಗ ನಿರಾಳ ನಿಜಲಿಂಗಪ್ರಭುವೆ. ॥ ೯ ॥

೧೨೫೨

ಸಜ್ಜನ ಶುದ್ಧ ಶಿವಾಚಾರದಲ್ಲಿ ಆಚರಿಸುವುದೆ ಪಂಚಾಂಗ.
ಅಂಗದಾಸೆ ಹಿಂದುಮಾಡಿ, ಲಿಂಗನೆನಹು ಮುಂದುಗೊಂಡು,
ಸಕಲ ಪದಾರ್ಥವ ಇಷ್ಟಲಿಂಗಕ್ಕೆ ಕೊಟ್ಟು
ಆ ಲಿಂಗಪ್ರಸಾದಶೇಷವ ಸಾವಧಾನದಿಂದ
ಸರ್ವಾಂಗದಲ್ಲಿ ಸಂಬಂಧಿಸುವುದೆ ಪಂಚಾಂಗ.
ಇದನರಿಯದೆ ತನ್ನ ಲಿಂಗಪ್ರಸಾದವ ಬಿಟ್ಟು,
ಭೂಪ್ರತಿಷ್ಠೆಗುಳ್ಳ ಭವಿಶೈವದ ಪ್ರಸಾದವ
ವಿಪ್ರರ ಕೈಯಲ್ಲಿ ಇಸಗೊಂಡವರಿಗೆ
ಪುಳುಗೊಂಡದೊಳಗೆ ಮುಳುಗಿಸಿ ಬಿಡುವನು ನೋಡಾ
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ. ॥ ೧೦ ॥

೧೨೫೩

ಲಿಂಗವೆ ಹಸಾದ ಶುಚಿಯೆಂದ ಬಳಿಕ
ಸೂತಕ ಪಾತಕ ಸಂಕಲ್ಪಿಸಿಕೊಂಡು ಹೊಲೆಮನೆಯೆನ್ನಿರಿ.
ಆ ಹೊಲೆಯರ ಮನೆಯಲ್ಲಿ ಸತ್ತ ದನದ ಮಾಂಸ
ಕಂಡ ಹೆಂಡವಲ್ಲದೆ ಅಲ್ಲೇನು ಪ್ರಯೋಜನವಿಲ್ಲ.
ನೀನು ಅವನ ಮನೆಯ ಪೆಸರ್ಗೊಂಬೆ,
ನೀನೇನು ಹೊಲೆಯನೆ ?
ನೀನು ಹೊಲೆಯನಾದರೆ ನಿನ್ನ ಮನೆಯೊಳಗಿರುವ
ಗುರು ಲಿಂಗ ಜಂಗಮ ಪಾದೋದಕ ಪ್ರಸಾದ
ವಿಭೂತಿ ರುದ್ರಾಕ್ಷಿ ಶಿವಮಂತ್ರ ಹೊಲೆ.
ಮಾನವನೆ ಕೇಳು, ಉಪ್ಪುಗೂಡಿ ಒಂಬತ್ತು ಪದಾರ್ಥವ
ಗಡಗಿ ಗುಡಾಣಗಳ ಮನೆಯೊಳಗಿಟ್ಟುಕೊಂಡು,
ನವೀನ ವನದ ಹೊದರ ಪೆಟ್ಟಿಗೆಯೊಳಗಿಟ್ಟು,
ಸೀರಿ ಕೌದಿ ತೊಳೆದುಹಾಕಿ, ಗೋಡೆ ತೊಳೆದು,
ಹೊಲೆ ಹೋಯಿತೆಂದು ಮನೆಯಲ್ಲಿ ಇದ್ದ
ಮುನ್ನಿನ ಗಡಿಗೆಯಲ್ಲಿ ಅಡಿಗೆಯ ಮಾಡಿ,
ಗುರುಲಿಂಗಜಂಗಮಕ್ಕೆ ಭಕ್ತಜನಂಗಳಿಗೆ
ಸಲಿಸ ನೀಡಿದೆನೆಂಬ ಶುನಕಮಾನವ ಕೇಳು.
ಅದೆಂತೆಂದಡೆ : ಶ್ಲೋಕ–
"ತದ್ದಿನಂ ದಿನದೋಷೇಣ ಶ್ರೋಣಿತಂ ಸುರಮಾಂಸಯೇ ।
ಸಂಕಲ್ಪ ವಿಕಲ್ಪನಾ ನರಕೇ ಕಾಲಮಕ್ಷಯಂ ॥"
ಎಂದುದಾಗಿ, ಇಂತಪ್ಪ ಸೂತಕ ಪಾತಕದಲ್ಲಿ
ಹೊರಳಾಡುವ ಪಾತಕದ ವಿಪ್ರರ ಮಾತುಕೇಳಿ ಮಾಡುವ
ಶಿವಭಕ್ತರಿಗೆ ಅಘೋರನರಕ ತಪ್ಪದು ಕಾಣಾ
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ. ॥ ೧೧ ॥

೧೨೫೪

ಮಗನ ಮದುವೆಯ ತೊಡಗಿದಾಗ
ಎಡಬಲದ ಗುರುಹಿರಿಯರನು ಉದಾಸೀನವ ಮಾಡಿ,
ಪೊಡವಿಗೆ ಕಿರಿದಾಗಿ ಇರುವ ಎಡಗ ವಿಪ್ರನ
ಜೋಯಿಸನ ಕರೆಸಿ ಕರವಂ ಮುಗಿದು,
ಎಲೆ ಅಡಿಕೆ ಕಾಂಚಾಣವ ಕೊಟ್ಟು,
ಎಡರು ಬಾರದ ಕಂಟಕವ ಕಳದು

ಕಡಗರ ಸಾಮ್ರಾಜ್ಯ ಉಚ್ಚಹ ಮದುವೆ
ಮಾಂಗಲ್ಯದ ಶುಭಮುಹೂರ್ತ
ಶುಭದಿನ, ಶುಭತಾರೆ, ಶುಭಲಗ್ನ, ಶುಭವೇಳೆ ಬೆಸಗೊಂಡು
ಮದುವೆಯ ಮಾಡುವ ಶಿವಭಕ್ತರಿಗೆ
ಭವಭವಾಂತರದಲ್ಲಿ ಮೀನ ಮೊಸಳಿ ಏಡಿ ಕಪಿಯ
ಬಸುರಲ್ಲಿ ಹುಟ್ಟಿ ಸತ್ತು ಕಣ್ಣು ಕಾಣದೆ
ಕತ್ತಿ ಸೂಕರ ಶ್ವಾನನ ಜನ್ಮವೆ ಪ್ರಾಪ್ತಿ
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ. ॥ ೧೨ ॥

೧೨೫೫

ಮಗನ ಮದುವೆಯ ತೊಡಗಿದಾಗ
ಬಡಬಡನೆ ಹೋಗಿ ಹಾರುವನ ಕರೆವಿರಿ.
ಅವನೇನು ನಿಮ್ಮ ಗುರುವೆ ? ನಿಮ್ಮ ಮನೆದೇವರೆ ?
ನಿಮ್ಮ ಅಣ್ಣ ತಮ್ಮನೆ ? ನಿಮ್ಮ ಕುಲಬಾಂಧವನೆ ?
ನಿಮ್ಮ ಹೊಂದಿ ಹೊರದವನೆ ? ಶಿವ ಸಹೋದರನೆ ? ನಿಮ್ಮ ಅಜ್ಜ ಮುತ್ತನೆ?
ಛೀ ಛೀ ಎಲೊ ಶಿವದ್ರೋಹಿ ಕೇಳೊ.
ಬಣ್ಣಗಾರ ಬಾಯಿಬಡಕ ಭ್ರಷ್ಟಮಾದಿಗ ವಿಪ್ರಜೋಯಿಸನ ಮಾತ ಕೇಳಿ
ಮದುವೆಯಾದ ಪಂಚಪಾಂಡವರು ಕೆಟ್ಟರು.
ಹರಿವಿರಂಚಿ ಹರಿಶ್ಚಂದ್ರ ದೇವೇಂದ್ರ ನಾಗಾರ್ಜುನ
ಕಂಸರಾಜ ನಳಚಕ್ರವರ್ತಿ ಚಂದ್ರ ಸೂರ್ಯ ಮಂಗಳ ಬುಧ
ಶುಕ್ರ ಸುರಸ್ತೋಮ ಮುನಿಸ್ತೋಮ ಕೆಟ್ಟಿತು.
ಪಂಚಾಂಗ ಕೇಳಿದ ದಕ್ಷನ ಪಡೆಯೆಲ್ಲ ಕೆಟ್ಟು
ನಷ್ಟವಾಗಿಹೋದ ದೃಷ್ಟವ ಕಂಡು ಕೇಳಿ,
ಶಿವನ ಹಳಿವ ಹೊಲೆಮನದ ವಿಪ್ರಜೋಯಿಸನ ಕರೆಸಿ,
ಕೈಮುಗಿದು ಕಾಣಿಕೆಯ ಕೊಟ್ಟು ಪಂಚಾಂಗವ ಕೇಳಿದ
ಶಿವಭಕ್ತರಿಗೆ ತಾ ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹವು ಒದಗಿ,
ತಾವು ಹಿಂದೆ ಮಾಡಿದ ದಾನಧರ್ಮ ಪರೋಪಕಾರವು ಕೆಟ್ಟು
ನರಕಸಮುದ್ರದೊಳಗೆ ಮುಳುಗಾಡುತ್ತೇಳುತ್ತ
ತಾವೇ ಸೇರಲರಿಯದೆ ಕೆಟ್ಟರು ನೋಡಾ ಹಲಕೆಲಬರು
ನಿಸ್ಸಂಗ ನಿರಾಳ ನಿಜಲಿಂಗಪ್ರಭುವೆ. ॥ ೧೩ ॥

ಪರಿಶಿಷ್ಟ

೧೨೫೬

ಶಿವನು ಜಗದ್ಭರಿತನೆಂದೆಂಬರ ಬಾಯಲ್ಲಿ
ಇಕ್ಕಿರೊ ಹನ್ನೆರಡು ವರ್ಷದ ಹಳೆಯ ಪಾದರಕ್ಷೆಯನು.
ಅದೇನು ಕಾರಣವೆಂದಡೆ : ಶಿವನು ಜಗದ್ಭರಿತನೆ ? ಅಲ್ಲ.
ಶಿವನು ಜಗದ್ಭರಿತನಾದೊಡೆ ಜೀವಕ್ಕೆ ಜೀವ ಭಕ್ಷಿಸಲೇತಕೊ ?
ಶಿವನು ಜಗದ್ಭರಿತನಾದೊಡೆ
ಪ್ರಾಣಕ್ಕೆ ಪ್ರಾಣ ವಿರೋಧಿಸಲೇತಕೊ ?
ಶಿವನು ಜಗದ್ಭರಿತನೆಂದರಿಯದೊಡೆ
ತಾನೆ ಗುರು ತಾನೆ ಲಿಂಗ ತಾನೆ ಜಂಗಮ ತಾನೆ ಪಾದೋದಕ
ತಾನೆ ಪ್ರಸಾದ ಕಾಣಾ ನಿಸ್ಸಂಗ ನಿರಾಳಪ್ರಭುವೆ. ॥ ೧೪ ॥

■■

## ಪರಂಜ್ಯೋತಿಯರ ವಚನ

೧೨೫೭

ತನ್ನ ತಾನರಿಯದೆ ತಾನಾರೆಂದು ತಿಳಿಯದೆ
ಉಪಾಧಿ ಬೋಧಕ್ಕೆ ಸಿಲ್ಕಿ
ಶ್ವಾನ ಮಾಂಸ ಕಚ್ಚಿಕೊಂಡ ಪರಿಯಲ್ಲಿರಲು,
ಆ ಸಮಯದಲ್ಲಿ ಇತ್ತರವಾಗಿರ್ದ ಮನುಜ ಬರಲು
ಕಂಡು ಅಂಜಿ ಭೀತಿಸಿ,
ನನ್ನ ಕಲ್ಪನೆ ಅರಿಯಿತೆಂದು ಆಹಾರಮಂ ತೆಗೆದನೆಂದು
ಗುರುಗುಟ್ಟುವ ಶ್ವಾನನ ಮರ್ಯಾದೆಯಲ್ಲಿ
ಕಲ್ಪಿತಾಹಾರಮಂ ಕಂಡು ನಚ್ಚಿ ಮಚ್ಚಿ
ಅಜ್ಞಾನದೊಳು ಬಿದ್ದು ಸಾವ ಭ್ರಾಂತಮೂಳರಿಗೆ
ದೊರಕುವುದೆ ಸ್ವಯಂಭು ?
ಇತರವನಳಿದಂಗಲ್ಲದೆ ನರರಿಗುಂಟೆ ಹೇಳಾ ?
ಘನ ಮಹತೋತ್ತಮನಾದ
ಪರನಾಗನ ಗುರುವೀರನೆ ಪರಂಜ್ಯೋತಿ ಮಹಾವಿರಕ್ತಿ. ॥ ೧ ॥

೧೨೫೮

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ
ವಿಶುದ್ಧಿ ಆಜ್ಞಾ ಎಂಬ ಷಡಾಧಾರಚಕ್ರಂಗಳ ಭೇದಿಸಿಕೊಂಡು,

ಬ್ರಹ್ಮ ವಿಷ್ಣು ರುದ್ರ ಈಶ್ವರ ಮಹೇಶ್ವರ ಸದಾಶಿವನ ಧ್ಯಾನಿಸಿ ಕಂಡಡೆ,
ಮಹಿಮಾದಿಗಳಳಿವವೆಂದು ನುಡಿವರು.
ಮುಟ್ಟಿ ಮುಟ್ಟಿ ನೋಡುವುದು ಮಾಯೆ,
ಕರುಣದಿಂದ ಕಂಡುದು ಮಾಯೆ,
ಮನದಿಚ್ಛೆ ಅರಿವುದು ಮಾಯೆಯಲ್ಲವೆ ?
ತನುಮನ ಹಿಡಿದು ನೋಡಿದುದೆಲ್ಲ ಮಾಯೆಯಲ್ಲವೆ ?
ದೇಹವಿಡಿದು ವಿದೇಹಿಯಾದ ಮಹಾತ್ಮಂಗೆ
ದೇಹವಿಲ್ಲ ಮಾಯೆಯಿಲ್ಲ ಕರುಣವಿಲ್ಲ
ಮರಣವಿಲ್ಲ ಜನನವಿಲ್ಲ.
ಪ್ರತಿಯಿಲ್ಲದ ಘನಮಹತೋತ್ತಮನಾದ
ಪರನಾಗನ ಗುರುವೀರನೆ ಪರಂಜ್ಯೋತಿ ಮಹಾವಿರಕ್ತ. ॥ ೨ ॥

೧೨೫೯

ಇಂದ್ರಿಯ ಆಲಿಯಲ್ಲಿ ನೋಡಿ ಕಂಡು
ನಿಜವಾದ ನಿರಾಲಯಂಬದ ಗೋಲದ
ಶೂನ್ಯ ನಿಃಶೂನ್ಯ ಶೂನ್ಯದ ಮೇಲೆ
ಸಹಜಮಣಿ ಸ್ವಯಂಭುಜ್ಯೋತಿಯಂ ಕಂಡು,
ಅದರೊಳಗೆ ವಟಮೂಲದ ಬೀಜಮಂ ಕಂಡು,
ಆ ಬೀಜಾಕಾರ ಗರ್ಭದೊಳಗೆ ಆ ಮರದ ಬುಡದಲ್ಲಿ
ನವರತ್ನದ ಪ್ರಕಾಶದ ಕೆರೆಯಂ ಕಂಡು,
ಮೇಲೆ ಕೈಲಾಸಗೋಪುರಮಂ ಕಂಡು,
ಅಲ್ಲಿರುವ ಸಮಸ್ತವ ಕಂಡೆನೆಂದು ನುಡಿವ
ಭ್ರಾಂತಯೋಗಿಗೆ ಸ್ವಯಂಭು ಸಲ್ಲದು ಕಾಣಾ.
ಮಾಯದಿಂದರಿವುದಲ್ಲ, ಕಾಯದಿಂದರಿವುದಲ್ಲ.
ಚಿತ್ತ ಉತ್ಪತ್ಯ ಮಾಡಿದ ಸ್ಥಿತಿ ಗತಿ ಲಯ ಉಂಟಾದವೆಲ್ಲ
ಕಂಡಾಗಲೆ ಕಂಡೆನು.
ಜಾಗ್ರ ಮೀರಿ ಸ್ವಪ್ನದಲ್ಲಿ ಎಷ್ಟು ಕಂಡ ?
ಸುಷುಪ್ತಿಗತವಾದ ಮೇಲೆ ಕಾಣುವುದು ಇನ್ನೇನು ಹೇಳಾ ?
ಬರೆಯುದ ಪುರುಷಂಗೆ ಮರವಿಲ್ಲ ಅರುವಿಲ್ಲ,
ಗುರಿಯಳಿದು ನಿಂದಾನು.
ಪರನಾಗನ ಗುರುವೀರನೆ ಪರಂಜ್ಯೋತಿ [ಮಹಾ]ವಿರಕ್ತ. ॥ ೩ ॥

೧೨೬೦

ಬಹಳ ಬಹಳ ಕಂಡೆನೆಂದು ನುಡಿಪ,
ಬಿಸಿಲು ಮಧ್ಯಾಹ್ನದಲ್ಲಿ ಚಂದ್ರಬಿಂಬ ಉದಯವಾದ
ಪ್ರತ್ಯಕ್ಷವಾಯಿತ್ತೆಂದು ಹೊರಗೆ ಕಂಡು
ಒಳಗೆ ಕಂಡನಲ್ಲದೆ ಏನು ಅಪ್ಪುದು ಕಾಣಾ.
ಎರಡೂ ಒಂದೇ.
ಮುಂದೆ ಮೀರಿ ಮನಸಮಾಧಿ ಮಾಡಿದಡೆ
ಮುಕ್ತಿಯೆಂದು ಹೇಳುವರು.
ಮನ ಮುಳುಗಿದುದೆ ಲಿಂಗವೆಂದೆಂಬರು.
ಆ ಲಿಂಗ ಮುಳುಗುವುದು ಸಮಾಧಿ ಕಾಣಾ,
ತಾನಳಿದ ಮೇಲೆ ಮುಕ್ತಿ ಯಾರಿಗೆ ಹೇಳಾ ?
ಲಿಂಗಕ್ಕೆ ಅಳಿವು ಬೆಳವುಂಟೆ ಕಾಣಾ ?
ಚಿಂತಿಸಿ ಮುಳುಗಿದವರೆಲ್ಲ
ಕಡೆಯಿಲ್ಲ ಮೊದಲಿಲ್ಲ ನೋಡಾ.
ಇನ್ನು ಉಳಿದದ್ದು ಘನವು.
ಉಳಿಯೆ ಹೇಳಾ ನಿಜಕೆಲ್ಲ.
ಲಯವಿಲ್ಲ ಭಯವಿಲ್ಲದಾಡಿದ ವಿದೇಹ ತಾನಾದ
ಪರನಾಗನ ಗುರುವೀರನೆ ಪರಂಜ್ಯೋತಿ ಮಹಾವಿರಕ್ತಿ. ॥ ೪ ॥

೧೨೬೧

ಇಡಾದಲ್ಲಿ ಸುಳಿವ ಚಂದ್ರನು ದೇವರೆಂದು ನುಡಿವರು.
ಪಿಂಗಳದಲ್ಲಿ ಸುಳಿವ ಸೂರ್ಯನು ದೇವರೆಂದು ನುಡಿವರು.
ಸುಷುಮ್ನನಾಳದ ತುದಿಯನಡರಿ ಬ್ರಹ್ಮರಂಧ್ರದ
ಸಹಸ್ರದಳಪದ್ಮದಲ್ಲಿ ನೋಡಿ,
ದೇವರ ಕಂಡೆನೆಂದು ನುಡಿವರು ನೋಡಾ.
ಇಂಥ ಭ್ರಾಂತುಭ್ರಮೆಗಳಿಗೆ ಕೆಟ್ಟು ಕೇಡಿಂಗೆ
ಕಡೆಯಿಲ್ಲ ಮೊದಲಿಲ್ಲ ನೋಡಾ.
ಮುಂದೆ ಸ್ವಾನುಭವ ಸ್ವಯಂಭು ತಾನಾದ ಮಹಾತ್ಮಂಗೆ
ಇತರವಾದ ಮಾಯಾರೂಪಿನ ಭ್ರಾಂತುಂಟೆ ಹೇಳಾ ?
ಅಚ್ಚಳಿದ ಬ್ರಹ್ಮ ಮುಟ್ಟಲು
ಬ್ರಹ್ಮವಪ್ಪುದಲ್ಲದೆ ಮಾಯೆ ಉಂಟೆ ಹೇಳಾ ?

ಸೀಮೆಯ ಬಿಟ್ಟು, ನಿಸ್ಸೀಮನಾದ ದೈವಕ್ಕೆ
ಸರಿಯಿಲ್ಲ ಮಿಗಿಲಿಲ್ಲ ಮರವಿಲ್ಲ.
ಪರಿಪೂರ್ಣ ತಾನಾದ
ವರನಾಗನ ಗುರುವೀರೇಶ ಪರಂಜ್ಯೋತಿ ಮಹಾವಿರಕ್ತ. ॥ ೫ ॥

೧೨೬೨

ಕರ್ಮಕಾಂಡಿ[ಗಳಿ]ಗೆ ಕತ್ತಲೆಕರ್ಮಿಗಳೆಂದು ನುಡಿವರು ನೋಡಾ.
ಅವರು ಮಾಯಾಮೋಹಕ್ಕೆ ಸಿಲ್ಕಿ
ಕೆಟ್ಟರು ಕಾಣಾ ಎಂದು ನುಡಿವರು ಕೇಳಾ.
ಸಗುಣಸ್ಥಲದ ಮನೋಜ್ಞಾನಿಗಳವರು ಕೆಟ್ಟಂತೆ ನಾವು ಕೆಡಬಾರದು.
ತಮ್ಮ ಮನಕ್ಕೆ ಬುದ್ಧಿಯಂ ಕೊಟ್ಟು
ಆಸೆಯಂ ಬಿಟ್ಟು ತನುವೆಂಬ ಬಿಲ್ಲಿಗೆ
ಮನವೆಂಬ [ಹೆದೆ]ಯನೇರಿಸಿ,
ಉರಿನರಿಯಂಬ ಅಳವಡಿಸಿ
ವಾರಿ ಮೋರೆಯನೆ ತಿದ್ದಿಕೊಂಡು
ಗುರುಕೊಟ್ಟ ಬಿಲ್ಲ ದೃಢವಾಗಿ ಹಿಡಿದು
ಶ್ರೀಗಿರಿಯೆಂಬ ಗುರಿಯ ನೋಡಿ ಎಸೆವಾಗ,
ಭವ ಹರಿಯಿತ್ತು, ಕಾಲಕರ್ಮವೆಂಬ ಶಿರ ಹರಿಯಿತ್ತು.
ಅರಸು ಪ್ರಧಾನಿ ಪ್ರಜೆ ಪರಿವಾರ ಓಡಿ ಹೋಯಿತ್ತು.
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಅಂದೇ ಬೆಳಗಾಯಿತ್ತು.
ಇಂತಪ್ಪ ಪ್ರಸಾದ ಆ ಗುರು ಲಿಂಗ ಜಂಗಮ ತಮ್ಮೊಳಗಾಯಿತ್ತು.
ಇಂತಪ್ಪ ಪ್ರಸಾದವು ಯಾರಿಗೂ ಅಳವಡದು.
ಪ್ರಭುವಿನೊಳ್ ಐಕ್ಯವಾದ ಬಸವಸಂಪತ್ತಿಗಲ್ಲದೆ
ಮಿಕ್ಕ ಪ್ರಪಂಚಿಗಳಿಗೆ ಅಳವಡದೆಂದು ಹೇಳುವ
ಸಗುಣದ ಭ್ರಮಿತರು ಅವರು
ಕೆಟ್ಟ ಕೇಡಿಂಗೆ ಕಡೆಯಿಲ್ಲ ಮೊದಲಿಲ್ಲ ನೋಡಾ.
ಮುಂದೆ ಇಷ್ಟವ ಕಂಡು ಮುಳುಗಿದವರಿಗೆ
ಮುಕ್ತಿ ಎಂದೆಂದಿಗೂ ಇಲ್ಲ ಕಾಣಾ.
ಇನ್ನು ಕೈವಲ್ಯಾನ್ವಯ ಪ್ರವರ್ತಕ
ನಿಸ್ಸೀಮಾಂಬುಧಿ ನಿರ್ಲೇಪ ತಾನಾದಂಥ ದೇವ
ವರನಾಗನ ಗುರುವೀರನೆ ಪರಂಜ್ಯೋತಿ ಮಹಾವಿರಕ್ತ. ॥ ೬ ॥

೧೨೬೩

ಕಾಯವಿಡಿದು ಮಾಯೆ ಬಿಡಬೇಕೆಂಬ ಹೆಡ್ಡರಿಗೆ
ಮಾಯೆ ಬಿಡುವುದು ಹೇಂಗಯ್ಯ ?
ದೇಹವಿಡಿದು ನೋಡಿ ಕಂಡು ಆ ಅಮೃತ ಉಂಡೆನೆಂದು ನುಡಿವರು.
ಆ ಅಮೃತ ಉಂಡ ಬಳಿಕ ಹಸಿವುಂಟೆ ಹೇಳಾ.
ಪ್ರಳಯವಿದ್ಯೆ ವಾತ ಪಿತ್ಥ ಶ್ಲೇಷ್ಮಂಗಳ ಕುಡಿದು
ಆ ಅಮೃತವ ಉಂಡೆನೆಂದು ನುಡಿವವರಿಗೆ
ಎಂದೆಂದಿಗೂ ದೊರಕದು ಕಾಣಾ.
ಇಂಥ ಭ್ರಾಂತಭ್ರಮಿತರು ಕೆಟ್ಟ ಕೇಡಿಂಗೆ ಕಡೆಯಿಲ್ಲ ಮೊದಲಿಲ್ಲ.
ಚಿತ್ತೇ ತಾನಾದ ಮಹಾತ್ಮಂಗೆ ಲಯವಿಲ್ಲ ಭಯವಿಲ್ಲ ಅನುವಿಲ್ಲ.
ದೇಹದಿ ನೋಡುವ ಕಪಿಚೇಷ್ಟೆಗಳಿಗೆ ಎಂದೆಂದಿಗೂ ಇಲ್ಲ.
ಮಹತೋತ್ತಮನಾದ ವರನಾಗನ
ಗುರುವೀರನೆ ಪರಂಜ್ಯೋತಿ ಮಹಾವಿರಕ್ತಿ. || ೭ ||

೧೨೬೪

ಅಜ್ಞಾನದಿಂದ ಮೋಕ್ಷಕರ್ತೃ ಇಲ್ಲವೆಂದು
ಸುಜ್ಞಾನಕ್ಕೆ ಗುರುವಿನ ದಯವಾಗಿ,
ಸಕೀಲವರಿಯಲಾಗಿ ಒಂಬತ್ತು ಬಾಗಿಲ ಮುಚ್ಚಿ
ಒಳಯಕ್ಕೆ ಒಬ್ಬರನೂ ಬಿಡಬೇಡೆಂದು
ಒಮ್ಮನ ಮಾಡು, ಸುಮ್ಮನೆ ನೀಡು, ಗಮ್ಮನೆ ಕಳುಹು ಎಂದರು.
ಮುಂದೆ ನಮ್ಮ ದೇವನ ಬಳಿಯಲ್ಲಿ
ಸಂಭ್ರಮದ ಪೂಜೆಯಾಗಿಟ್ಟ, ಎಡಬಲನ ಮುರಿದು
ಬೀಗದ ಕೈಕೊಂಡು ಕುಂಭಿನಿ ಬಾಗಿಲ ಕದವ ತೆಗೆದು,
ಒಳಪೊಕ್ಕು ಒಂದಾನೊಂದು ಕಟ್ಟಳೆಯ ಮಾಡಿ
ಪರತತ್ವದಲ್ಲಿ ಬೆರಸಿದ ನಿಷ್ಕಕ್ಕೆ ದೇವನೆಂದು
ನಮೋ ನಮೋ ಎಂದು ನಂಬುವರು ಕಾಣಾ
ಎಂದು ನುಡಿವ ಮದೃಷ್ಟವುಳ್ಳವರು
ದೃಷ್ಟಿಯಲಿ ನೋಡಿದುದೆಲ್ಲ ಲಯದಲ್ಲಿ ಅಡಗಿತು ಕಾಣಾ.
ಲಯವಾದವರಿಗೆ ಇನ್ನೆಲ್ಲಿ ಮುಕ್ತಿಯೋ ?
ಲಯಭಯಕ್ಕೆ ವಿರಹಿತನಾಗಿ
ವೇದಾಂತ ಮಹಾನುಭಾವದಿಂದ ತಿಳಿದು

ತನ್ನ ತಾನರಿದು ತಾನಾರೆಂದು ತಿಳಿದು ತಮ್ಮುವಳಿದು ತಾನಾದ
ವರನಾಗನ ಗುರುವೀರನೆ ಪರಂಜ್ಯೋತಿ ಮಹಾವಿರಕ್ತಿ. ॥ ೮ ॥

೧೨೬೫

ಪೃಥ್ವಿಯಿಂದ ಭಕ್ತನಾದೆ, ಅಪ್ಪುವಿನಿಂದ ಮಾಹೇಶ್ವರನಾದೆ,
ತೇಜದಿಂದ ಪ್ರಸಾದಿಯಾದೆ, ವಾಯುವಿನಿಂದ ಪ್ರಾಣಲಿಂಗಿಯಾದೆ,
ಆಕಾಶದಿಂದ ಶರಣನಾದೆ, ಝೇಂಕಾರದಿಂದ ಸರ್ವಾಂಗ ವೇಧಿಸಿ
ಪಂಚಮುಖವುಳ್ಳ ಪರಮೇಶ್ವರನನರಿತು
ಪಾವನನಾದ ಮೇಲೆ ಘನವೆಂದು ಕೆಟ್ಟರು ಕೋಟ್ಯಾನುಕೋಟಿ.
ಇನ್ನು ಕಬ್ಬಿಣಕೆ ಪರುಷ ಸೋಂಕಲು ಕನಕವಾಯಿತೆಂದರು.
ಮುಂದೆ ಕಬ್ಬಿಣಕೆ ಬಾಧೆ ತಪ್ಪದು, ಕನಕಕ್ಕೆ ಬಾಧೆ ತಪ್ಪದು.
ಇನ್ನು ಇಂಥ ಚಿನ್ನಭಿನ್ನವೇ ಪರುಷವೆಂದೆನ್ನುವರು.
ಪರುಷ ಮುಟ್ಟಲು ಪರುಷವಾದುದೇ ತನ್ನ ಘನವು.
ಪರುಷ ಮುಟ್ಟಿ ಚಿನ್ನವಾದುದೆ ಸಿದ್ಧಾಂತ ಕಾಣಾ.
ಮುಂದೆ ಪರುಷಮುಟ್ಟಲು ಪರುಷಕಟ್ಟಳೆ
ಮುಂದೆ ವೇದಾಂತ ಗುರುಮುಟ್ಟಿ ಗುರುವಾದ
ನಿಷ್ಕಳಂಕ ನಿರಾಭಾರಿ ನಿರ್ಗುಣನಾದ
ಮಹಾತ್ಮಂಗೆ ನೋಟವಿಲ್ಲ ಕೂಟವಿಲ್ಲ
ಆಟವಿಲ್ಲ ಪಾಠವಿಲ್ಲ ಆರೋಗಣೆಯಿಲ್ಲ.
ವರನಾಗನ ಗುರುವೀರನೆ ಪರಂಜ್ಯೋತಿ ಮಹಾವಿರಕ್ತಿ. ॥ ೯ ॥

೧೨೬೬

ಸಕಾರ ಮಕಾರ ಶಿಕಾರ ವಕಾರ ಯಕಾರ
ಈ ಪಂಚಾಕ್ಷರಿ ಪ್ರಣಮವನರಿದು,
ಅಂಗದ ಮೇಲೆ ಶಿವಲಿಂಗ ಧಾರಣವಾಗಿ,
ಸದ್ಯೋಜಾತಮುಖದ ಆಚಾರಲಿಂಗದೇವರು
ವಾಮದೇವಮುಖದ ಗುರುಲಿಂಗದೇವರು
ಅಘೋರಮುಖದ ಶಿವಲಿಂಗದೇವರು
ತತ್ಪುರುಷಮುಖದ ಚರಲಿಂಗದೇವರು
ಈಶಾನಮುಖದ ಪ್ರಸಾದಲಿಂಗದೇವರು
ಗಂಭೀರಮುಖದ ಘನಲಿಂಗದೇವರುಗಳಿಂದ
ಕರ್ಮವಳಿದು ದೃಢವಾಗಿ ಮುಕ್ತರಾದೆವೆಂದು
ಹೆಸರಿಟ್ಟುಕೊಂಡು ಪಂಚಾಕ್ಷರಿ ಪಂಚಬ್ರಹ್ಮವನರಿದು

ಓಂಕಾರ ಸಾಕ್ಷಾತ್ ಶಿವಬ್ರಹ್ಮವನರಿಯಲ್ಕೆ
ಭವವಳಿದು ಬಯಲಾದೆವು ಎಂಬರು.
ಮುಂದೆ ಭವವುಳ್ಳ ದೇಹ ಭವವಳಿವುದು ಹೇಂಗಯ್ಯಾ ?
ಭವವಿಲ್ಲದಾತನು ಮುಟ್ಟಲು ಭವವುಳ್ಳ ದೇಹವಳಿದು
ಭ್ರಮೆಯ ಮೀರಿ ಅಚ್ಚಳಿದು ನಿಂದ ನಿಜಕ್ಕೆ
ಮೆಚ್ಚುವುದು ಇನ್ನೊಂದುಂಟೆ ಹೇಳಾ ?
ಮನವೆ ಮುಖ್ಯವ ಮಾಡುವ ಭ್ರಮಿತರಿಗೆ
ಮನ ಮುಳುಗಿದಂತೆ ಮುಳುಗುವರು ಕಾಣಾ.
ಮುಳುಗಿದವರು ಮುಳುಗಿಸುವರ ಎಬ್ಬಿಸುವರ
ಏನು ಬಲ್ಲರು ಹೇಳಾ ? ಮುಕ್ತನೆ ತಾನಾದ
ಪರನಾಗನ ಗುರುವೀರನೆ ಪರಂಜ್ಯೋತಿ ಮಹಾ[illegible]. ॥ ೧೦ ॥

೧೨೭೭

ಸಹಜವುಳ್ಳ ಭಕ್ತರಿಗೆ ಕಾಮುಕರಾಗಿ
ಕೆಡಬೇಡೆಂದು ಅಜ್ಞಾನಕ್ಕೆ ಗುರಿಯಾದಿರಿ.
ಮುಂದೆ ಜ್ಞಾನನೊಬುದೆಲ್ಲವಾಗಿ ಗುರುಪಾದವ ಹಿಡಿದು
ಜ್ಞಾನಮುಕ್ತನಾಗಿ ಮೋಕ್ಷಾರ್ಥವ ಹಾರೈಸಿಕೊಂಡು
ತನುವ ಗುರುವಿಗೆ ಅರ್ಪಿಸಬೇಕು,
ಮನವ ಲಿಂಗಕ್ಕೆ ಅರ್ಪಿಸಬೇಕು,
ಧನವ ಜಂಗಮಕ್ಕೆ ಅರ್ಪಿಸಬೇಕು.
ತಮ್ಮ ಭಾವದಿಂದ ಬೋಧಿಸಿ ನುಡಿಯಲ್ಕೆ
ಶಿಷ್ಯ ಸುಬುದ್ಧಿಯಿಂದ 'ಗುರುವೇ ನೀನು ಅಧಿಕಾರನು
ನಿನ್ನ ಪಾದ ಸೋಂಕಿತೆಂದು' ನುಡಿಯಲಾಗಿ,
ಆ ಶಿಷ್ಯಂಗೆ ಮನಮುಟ್ಟುವಾದ ಬೋಧೆಯ ಬೋಧಿಸಿ
ಆತಂಗೆ ಕಟ್ಟಳೆಯ ಮಾಡಿ
ಹೆಣ್ಣು ಹೊನ್ನು ಮಣ್ಣು ಮೂರು
ಗುರುವಿಗೆ ಅರ್ಪಿತ ಮಾಡಬೇಕೆಂದು ನುಡಿಯಲಾಗಿ,
ಅವನು ವಿಕಾರಿಯಾಗಿ
'ಸ್ವಾಮಿ, ಹೆಣ್ಣು ಹೊನ್ನು ಮಣ್ಣು ಸರ್ವವೂ ನಿಮಗೆ
ಸಮರ್ಪಣೆಯೆಂದು' ನುಡಿಯಲಾಗಿ,
ಬೋಧಿಸುವ ಆ ಗುರುವಿಂಗೆ
ಒಂದು ವಿಕಾರ ಹೋಗಿ ಐದು ವಿಕಾರಗಳಾಗಿ

ಪಂಚಭೂತ ಮದಂಗಳೇರಿ ತನುವಿಕಾರಿಯಾಗಿ
ಮನವಿಕಾರಿಯಾಗಿ ಆಚಾರ ವಿಚಾರ ಬಿಟ್ಟು
ಅನಾಚಾರಿಯಾಗಿ ಕಚ್ಚಡಕನಾಗಿ
ಕೊಳ್ಳದ ಆಹಾರಂಗಳ ಕೊಂಡು ಕೆಟ್ಟ
ವೇಷಡಂಭಕರ ತೋರದಿರಯ್ಯಾ.
ಇಂಥ ತೊಟ್ಟೆ ಕುಡಿಯುವ ಮೆಚ್ಚು ಮಾರಿಗೆ
ಎತ್ತಣ ಸ್ವಯಂಭು ಎತ್ತಣ ನಿಜವು.
ತೊತ್ತು ದೊರೆಯಾಗುವುದೇನಯ್ಯಾ ?
ನಿತ್ಯವನರಿಯದ ಮೃತ್ಯುಮಾರಿಗಳಿಗೆ ಎತ್ತಣ ಬ್ರಹ್ಮವು ?
ಬ್ರಹ್ಮವೆತ್ತ, ತಾನೆತ್ತ, ಹೋಗತ್ತ.
ಇಂಥ ಭ್ರಾಂತುಯೋಗಿಗಳು ಕೆಟ್ಟ, ಕೇಡಿಂಗೆ ಕಡೆಯಿಲ್ಲ.
ವಿದೇಹಿ ತಾನಾದ
ವರನಾಗನ ಗುರುವೀರನೆ ಪರಂಜ್ಯೋತಿ ಮಹಾವಿರಕ್ತ. || ೧೧ ||

೧೨೬೮

ಅಂಗದೊಳಗಿದ್ದ ಲಿಂಗವ ಕಾಣದೆ ಆಡುವ ಮಾನವನೆ
ನನ್ನ ತತ್ಸಂಗಲೀಯವಾಗಿರೆ ನಾನಾ ಲಕ್ಷಗಳಿಂದ
ನೀನು ಸುಖಿಸುವ ಸಕೀಲವರಿವನಲ್ಲಾ.
ನಮ್ಮ ಗುರುವೆ ಅರುವೆಂಬ ಮರ್ಯಾದೆ
ಆದಿಯಲ್ಲಿ ನಡೆದು ನಂಬಿದಕ್ಕೆ ಮುಂದೆ ನಾನು
ಬೇಡಿದ ಪದಾರ್ಥಂಗಳ ಕೊಟ್ಟರೆ
ನಿನ್ನಲ್ಲಿ ಇದ್ದುದ್ದನ್ನೆಲ್ಲಾ ತೋರಿಕೊಡುವೆನೆಂದು ನುಡಿಯಲಾಗಿ,
ಶಿಷ್ಯ ನಂಬುಗೆಯಿಂದ ನಿನ್ನ ಆಜ್ಞೆಗೆ ನಿಲ್ಲುವೆನೆಂದು
ವಂದನೆಯ ಮಾಡಿ ವಂದಿಸಲು
ಮನನಿರೂಪದಿಂದ ಅಂತರಂಗದೊಳಗಿದ್ದ
ಮನಪ್ರಕಾಶವನು ತೋರಿ,
ಥಳಥಳ ಮಾಯಾರೂಪಗಳನು ತೋರಿ
ನಿಜವೆಂದು ಭಾವಿಸಿ ನಿರ್ಣಯಿಸಿಕೊಳ್ಳೆಂದು
ಶಿಷ್ಯನ ಸತಿಯಂ ಕಂಡು ಕಾಮುಕನಾಗಿ
ಗುರುಸೇವೆಯ ಮಾಡಿದರೆ ಮುಕ್ತರಾದೆವೆಂದು ನುಡಿದು
ಮೆಚ್ಚಿಸಿಕೊಂಡು ಉಚ್ಚನರಕದೊಳು
ಮುಳುಗುವ ಹುಚ್ಚರಿಗೆ ಬೆಚ್ಚುವುದೆ ಮಹಾನುಭಾವ ?

ಅನ್ಯಭಾವದಿ ಬಳಸುವ ಅನಾಚಾರಿಗೆ
ತನ್ನ ಭಾವ ದೊರಕುವುದೆ ? ದೊರಕದಯ್ಯಾ.
ಚಿತ್ತೇ ತಾನಾದ
ವರನಾಗನ ಗುರುವೀರನೆ ಪರಂಜ್ಯೋತಿ ಮಹಾವಿರಕ್ತ. ॥ ೧೨ ॥

೧೨೬೯

ತಾನು ಈಶನೆಂಬುದನು ತಾನರಿದು,
ಮಾನೀಶನೆಂಬುದನು ತಾನರಿದು.
ತಾನೆ ತಾನಾಗುವ ಸಕೀಲವನರಿಯದೆ
ಧ್ಯಾನಧಾರಣಸಮಾಧಿ ಯೋಗಾಂಗವೆಂಬ
ಯೋಗಧ್ಯಾನದಿಂದ ಅರಿಯ[ಬ]ಹುದೆ ಸ್ವಯಂಭು[ವ] ?
ಯೋಗಿ ದೇಹರಹಿತ, ಈ ದೇಹವಿಡದೇ
ವಿದೇಹಿಯಾಗುವ ಸಕೀಲಸಂಜ್ಞೆಯ ಅರಿಯಬಲ್ಲಂಥ
ಗುರುವಿನ ಕೃಪೆ ದೊರಕೊಳ್ಳುವತನಕ ಮನದಿಂದಲರಿಯಲುಂಟೆ ?
ಗುರುವಿನ ಕೃಪೆ ದೊರಕೊಳ್ಳುವತನಕ ಮನದಿಂದಲರಿಯಲುಂಟೆ ?
ತನ್ನ ಘನವು ಆ ಮನವು
ಮಹಾವಸ್ಥೆಯಲ್ಲಿ ಮಗ್ನವಹುದಲ್ಲದೆ ಮಾಣದು ನೋಡಾ.
ಅದು ಮೂರುಗುಣ, ಅದು ತ್ರಿಪುಟಿ ಮಾಯಾ.
ಜಾಗ್ರತದಲ್ಲಿದ್ದ ವರ್ತನೆ ಸ್ವಪ್ನದಲ್ಲಿಲ್ಲ.
ಸ್ವಪ್ನದಲ್ಲಿದ್ದ ವರ್ತನೆ ಸುಷುಪ್ತಿಯಲ್ಲಿಲ್ಲ.
ಈ ಮನ ತಾನು ಹುಟ್ಟುಗುರುಡು
ಮೊದಲಿಂಗೆ ಹುಸಿ ವಿಲಕ್ಷಣಾದಿ
ಶಿವನೆತ್ತ, ಲಕ್ಷದಿಂದ ಅರಿಯಬೇಕೆಂಬ ಮನವೆತ್ತ, ಹೋಗುತ್ತ, ನೀನತ್ತ.
ಈ ಮನಸು ತಾನು ಮೊದಲಿಂಗಲ್ಲದೆ
ಹುಸಿಯೆಂದರಿಯದೆ ನದಿಯ ಸುಳಿಯಲ್ಲಿ ಬಿದ್ದ ಹುಳದಂತೆ
ಮುಳುಗುತ್ತ ಏಳುತ್ತ ತಿರುಗುವವರಿಗೆಲ್ಲ
ತನ್ನ ನಿಜವು ತನ್ನವೆಂದರ್ಥವಾಗುವುದೆ ? ಅದು ತಮ್ಮ ಇಚ್ಛೆ.
ಇದನರಿಯದೆ ಮನ ಸಮಾಧಿಯ ಮಾಡಬೇಕೆಂಬ ಮಹಾಗಣಂಗಳು
ಇಂತಿವರಲ್ಲ.
ಮಹಾಗಣಂಗಳು ಮಹಾಜ್ಞಾನಿಗಳು ಇಂತಿವರಲ್ಲ.
ಮರ್ತ್ಯದಲ್ಲಿ ಎನ್ನದೊಂದು ವಂಶವೆಂದಾತ
ನಮ್ಮ ವೀರ ಸದ್ಗುರು ಪರಂಜ್ಯೋತಿ ಮಹಾವಿರಕ್ತ. ॥ ೧೩ ॥

## ಬಸವಲಿಂಗದೇವರ ವಚನ

೧೨೬೦

ಶ್ರೀಗುರುಲಿಂಗಜಂಗಮವೆ. ಶ್ರೀಗುರು ಲಿಂಗಜಂಗಮವೆ.
ಶ್ರೀಗುರು ಲಿಂಗಜಂಗಮವೆ.
ಕಾಯಯ್ಯ ಕಾಯಯ್ಯ ಕರುಣಾ|ಣುವೆ|.
ಎನ್ನ ಅಜ್ಞಾನಮಾಯಾಪಾಶವ ಪರಿಹರಿಸಿ ರಕ್ಷಿಸಯ್ಯ
ಭವರೋಗ ವೈದ್ಯನೆ. ನಿಮ್ಮ ಧರ್ಮ ನಿಮ್ಮ ಧರ್ಮ.
ನಿಮ್ಮ ಚರಣಕಮಲವ ಮರೆಹೊಕ್ಕೆನಯ್ಯ.
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. ॥ ೧ ॥

೧೨೬೧

ಅಯ್ಯಾ, ಆಸೆಯ ಪಾಶದಿಂದ ತೊಳಲಿತಯ್ಯ ಎನ್ನ ಕಾಯವು.
ಆಸೆ-ಆಮಿಷದಿಂದ ಮಿಡುಕಿಗೊಂಡಿತಯ್ಯ ಎನ್ನ ಮನ
ಆಸೆಯೆಂಬ ಸುರೆಯಿಂದ ಮರೆವಾಯಿತಯ್ಯ ಎನ್ನ ಪ್ರಾಣವು.
ಆಸೆಯೆಂಬ ಮಹದ್ಗಿಚ್ಚಿನಲ್ಲಿ ಮಿಡುಕಾಡುತಲಿತ್ತಯ್ಯ ಎನ್ನ ಭಾವವು.
ಇನ್ನೆನಗೆ ಗತಿಯ ಪಥವ ತೋರಿ, ರಕ್ಷಿಸಾ
ಭವಪಾಶರಹಿತ ಸದ್ಗುರು ಮೂರ್ತಿ ಶ್ರೀಗುರು ಲಿಂಗಜಂಗಮವೆ

ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. ॥ ೨ ॥

೧೨೭೨

ಅಯ್ಯಾ, ಮಣ್ಣೆಂಬ ಆಸೆಯಲ್ಲಿ ಮೋಹಿಸಿತಯ್ಯ ಎನ್ನ ಜೀವಾತ್ಮನು.
ಹೆಣ್ಣೆಂಬ ಆಸೆಯಲ್ಲಿ ಕರಗಿ ಕೊರಗಿತಯ್ಯ ಎನ್ನ ಅಂತರಾತ್ಮನು.
ಹೊನ್ನೆಂಬ ಆಸೆಯ ಪಾಶಮಲದಲ್ಲಿ ಕಂದಿ ಕುಂದಿತಯ್ಯ ಎನ್ನ ಪರಮಾತ್ಮನು.
ಧನಧಾನ್ಯವೆಂಬ ಆಸೆಯಿಂದ ಪುಡಿಪುಡಿಯಾಯಿತಯ್ಯ ಎನ್ನ ನಿರ್ಮಲಾತ್ಮನು.
ತಂದೆ ತಾಯಿ ಬಂಧು ಬಳಗವೆಂಬ
ಆಸೆಯ ಕೊಳದಲ್ಲಿ ಹೊಡದಾಡಿ ಸತ್ತಿತಯ್ಯ ಎನ್ನ ಜ್ಞಾನಾತ್ಮನು.
ಅಣ್ಣ-ತಮ್ಮ ಅಕ್ಕ-ತಂಗಿ ಅತ್ತೆ-ಅತ್ತಿಗೆ-ನಾದಿನಿಯೆಂಬ
ಆಸೆಯ ಸಂಕೋಲೆಯಲ್ಲಿ ಸಿಲ್ಕಿತಯ್ಯ ಎನ್ನ ಭೂತಾತ್ಮನು.
ಇಂತೀ ಷಡಾತ್ಮರ ಸಂಗದಿಂದ ನಿಜಗೆಟ್ಟೆನಯ್ಯ !
ಗುರುವೆ, ಇನ್ನೆನಗೆ ಗತಿಯಾವುದೊ ? ಶ್ರೀಗುರುಲಿಂಗಜಂಗಮವೆ
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. ॥ ೩ ॥

೧೨೭೩

ಅಯ್ಯಾ, ತರ್ಕ ವ್ಯಾಕರಣಾಗಮ ಶಾಸ್ತ್ರ ಪುರಾಣ
ಛಂದಸ್ಸು ನಿಘಂಟು ಜ್ಯೋತಿಷ್ಯ ಮೊದಲಾದ
ಶಾಸ್ತ್ರದ ಆಸೆಯ ಭ್ರಮೆಯಲ್ಲಿ ಹೊಡದಾಡಿ ಸತ್ತಿತಯ್ಯ ಎನ್ನ ರುದ್ರಾತ್ಮನು.
ಕತ್ತಿಸಾಧಕ ಕಠಾರಿಸಾಧಕ ಪಟಾಕಿನ ಸಾಧಕ ಮೊದಲಾದ
ಬತ್ತೀಸ ಸಾಧಕದಲ್ಲಿ ಆಸೆ ಮಾಡಿತಯ್ಯ ಎನ್ನ ಮಹದಾತ್ಮನು.
ಅಣಿಮಾ ಮಹಿಮಾ ಗರಿಮಾ ಲಘಿಮಾ
ಪ್ರಾಪ್ತಿ ಪ್ರಾಕಾಮ್ಯ ಈಶಿತ್ವ ವಶಿತ್ವವೆಂಬ
ಅಷ್ಟೈಶ್ವರ್ಯದಲ್ಲಿ ಆಸೆ ಮಾಡಿತಯ್ಯ ಎನ್ನ ಚಿದಾತ್ಮನು.
ಹೀಂಗೆ ಅಜ್ಞಾನವೆಂಬ ಭವಪಾಶದಿಂದ ಹೊಡದಾಡಿ ಸತ್ತು,
ಸತ್ತು-ಹುಟ್ಟಿ, ಭವಕ್ಕೆ ಬಸವಾಗಿ ಕೆಟ್ಟೆನಯ್ಯ.
ಭವರೋಗವೈದ್ಯನೆ, ಸಲಹಾ, ಶ್ರೀಗುರುಲಿಂಗಜಂಗಮವೆ.
ಹರಹರ ಶಿವಶಿವ ಜಯಜಯ ಕರುಣಾಕರ,
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. ॥ ೪ ॥

೧೨೭೪

ಅಯ್ಯಾ, ಇಂತೀ ಆಸೆಯೆಂಬ ಮಾಯಾಪಾಶದಲ್ಲಿ
ಜಡತ್ವದಿಂದ ಕಂಗೆಟ್ಟು, ಕಂದಿ ಕುಂದಿ, ನಿಜವ ಮರದು
ನಿಮ್ಮ ಸದ್ಭಕ್ತಿ-ಸದಾಚಾರ-ಸತ್ಕ್ರೀಯ ಸಮ್ಯಜ್ಞಾನದ ಹೊಲಬನರಿಯದೆ
ಅಜ್ಞಾನವೆಂಬ ಆಸೆಯ ಪಾಶದಲ್ಲಿ ಜನ್ಮ ಜರೆ ಮರಣದಿಂದ
ಇರುವೆ ಮೊದಲಾನೆ ಕಡೆಯಾದ ಎಂಬತ್ನಾಲ್ಕು ಜೀವಜಂತುವಿನಲ್ಲಿ
ತಿನ್ನಬಾರದ ಆಹಾರಂಗಳ ತಿಂದು, ಮಾಡಬಾರದಪರಾಧ ಕೃತ್ಯವ ಮಾಡಿ
ಪರಮಪಾತಕತನದಿಂದ ಬಾಳಿ ಬದುಕಿ ಜೀವಿಸಿದ
ಅಜ್ಞಾನ ಜಡತ್ವವ ನೋಡದೆ ನಿಮ್ಮ ದಯಾಂಬುಧಿಯಲ್ಲಿರಿಸಿ ರಕ್ಷಿಸಯ್ಯ.
ಪರಮಪಾವನಮೂರ್ತಿ ಶ್ರೀಗುರುಜಂಗಮವೆ,
ಹರಹರ ಶಿವಶಿವ ಜಯಜಯ ಕರುಣಾಕರ,
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. ॥ ೫ ॥

೧೨೭೫

ಅಯ್ಯಾ, ಎನ್ನೊಳಗೆ ನೀವು ಹುಡುಕಿದಡೆ ಎಳ್ಳಿನಿತು ಸುಗುಣವಿಲ್ಲವಯ್ಯ.
ಎನ್ನೊಳಗೆ ನೀವು ವಿಚಾರಿಸಿದಡೆ
ಸಪ್ತಸಮುದ್ರ ಸಪ್ತದ್ವೀಪದಷ್ಟು ಅಪರಾಧವುಂಟಯ್ಯ.
ತಂದೆ, ಎನ್ನ ಅಪರಾಧವ ನೋಡದೆ ನಿಮ್ಮ ಕರುಣದೃಕ್ಕಿನಿಂದ ಸಲಹಯ್ಯ.
ಪರಮಾರಾಧ್ಯ ಪರಾತ್ಪರಮೂರ್ತಿ ಶ್ರೀ ಗುರುಲಿಂಗಜಂಗಮವೆ,
ನೀವು ಈರೇಳುಲೋಕಕ್ಕೆ ಅಪರಾಧಕ್ಷಮಿತರೆಂಬ ಬಿರುದುಂಟು ನೋಡಾ.
ಹರಹರ ಶಿವಶಿವ ಜಯಜಯ ಕರುಣಾಕರ,
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ ! ॥ ೬ ॥

೧೨೭೬

ಅಯ್ಯಾ, ಕಾಶಿ, ರಾಮೇಶ್ವರ, ಕೇದಾರ, ಗೋಕರ್ಣ,
ಶ್ರೀಶೈಲಪರ್ವತ, ಹಂಪೆ, ಅಮರಗುಂಡ, ಕಲ್ಯಾಣ,
ಸೊನ್ನಲಾಪುರ, ಗಯ, ಪ್ರಯಾಗ, ಕೊಲ್ಲಿಪಾಕ,
ಗಂಗಾಕ್ಷೇತ್ರ, ಶಿವಗಂಗೆ, ನಂಜನಗೂಡು,
ಉಳುವೆ, ಶಂಭುಲಿಂಗನ ಬೆಟ್ಟ, ಕುಂಭಕೋಣೆ, ಕಂಚಿ,
ಕಾಳಹಸ್ತಿ, ನವನಂದಿಮಂಡಲ, ಕುಮಾರಪರ್ವತ ಮೊದಲಾದ ಕ್ಷೇತ್ರಂಗಳಲ್ಲಿ,
ಕುಂತಣದೇಶ ಮೊದಲಾದ ಐವತ್ತಾರು ದೇಶಂಗಳಲ್ಲಿ
ನಿಮ್ಮ ಚರಣಕಮಲವ ಕಂಡು ಸದ್ಭಕ್ತಿಯ ಮಾಡದೆ,

ವೃಥಾ ಭ್ರಾಂತಿನಿಂದ ಕಲ್ಲು ಮುಳ್ಳು ಮಣ್ಣಿನಲ್ಲಿ
ತಿರಿಗಿ ತಿರಿಗಿ ಕೆಟ್ಟಿತಯ್ಯ ಎನ್ನ ಪಾದೇಂದ್ರಿಯವು.
ಇಂತು ಕೆಡಗುಡದೆ ನಿಮ್ಮ ಸದ್ಭಕ್ತ ಹರಳಯ್ಯಗಳ
ಮನೆಯ ಬಾಗಿಲ ಕಾಯ್ವಂತೆ ಮಾಡಯ್ಯ.
ಶ್ರೀಗುರುಲಿಂಗಜಂಗಮವೆ, ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. || ೭ ||

೧೨೭೭

ಅಯ್ಯಾ, ಚಂದಚಂದವುಳ್ಳ ವೃಷಭ,
ಚಂದಚಂದವುಳ್ಳ ವಾಜಿ, ಚಂದಚಂದವುಳ್ಳ ಆನೆ,
ಚಂದಚಂದವುಳ್ಳ ಅಂದಳ, ಚಂದಚಂದವುಳ್ಳ ಪರಿಯಂಕ,
ಚಂದಚಂದವುಳ್ಳ ಮೇಲುಪ್ಪರಿಗೆ. ಚಂದಚಂದವುಳ್ಳ
ಜಾಡಿ-ಜಮಕಾನ-ಚಿತ್ರಾಸನ, ಚಂದಚಂದವುಳ್ಳ ಮಣಿಪೀಠ,
ಚಂದಚಂದವುಳ್ಳ ಲೇಪು ಸುಪ್ಪತ್ತಿಗೆ,
ಚಂದಚಂದವುಳ್ಳ ಪಟ್ಟುಪಟ್ಟಾವಳಿ ಹಾಸಿಗೆಯ ಮೇಲೆ
ನಿಮ್ಮ ಶರಣಗಣಂಗಳ ಸಮೂಹವ ಮೂರ್ತವ ಮಾಡಿಸಿ,
ಭೃತ್ಯಭಕ್ತಿಯ ಮಾಡದೆ ಮೂಲಹಂಕಾರದಿಂದ
ತಾನೆ ಕುಂತು ನಿಂತು ಮಲಗಿ ನಿಜಗೆಟ್ಟಿತಯ್ಯ ಎನ್ನ ಪಾಯ್ವೇಂದ್ರಿಯವು.
ಇಂಥ ಅಜ್ಞಾನದಿಂದ ಕೆಡಗುಡದೆ
ನಿಮ್ಮ ಸದ್ಭಕ್ತ ಸದಾಚಾರಿ ಶಿವಶರಣ ಮೇದಾರಕೇತಯ್ಯಗಳ
ಮನೆಯ ತೊತ್ತಿನ ರಕ್ಷೆಯ ಕಾಯ್ವಂತೆ ಮಾಡಯ್ಯ
ಶ್ರೀಗುರುಲಿಂಗಜಂಗಮವೆ !
ಹರಹರ ಶಿವಶಿವ ಜಯಜಯ ಕರುಣಾಕರ,
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. || ೮ ||

೧೨೭೮

ಅಯ್ಯಾ, ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ
ಕಶ್ಯಪ ಭಾರದ್ವಾಜ ಮೊದಲಾದ ನೂರೊಂದು ಕುಲ,
ಹದಿನೆಂಟು ಜಾತಿಯವರೊಳಗಾಗಿ ಯೌವನದ ಸ್ತ್ರೀಯರ ಕಂಡು,
ಸಂಪಿಗೆ ಪುಷ್ಪಕ್ಕೆ ಭ್ರಮರನಿಚ್ಛೈಸುವಂತೆ ಕಾಮವಿಕಾರದಿಂದ,
ಮೊಲಕ್ಕೆ ನಾಯಿ ಹಂಬಲಿಸಿದಂತೆ, ಮಾಂಸಕ್ಕೆ ಹದ್ದು ಎರಗಿದಂತೆ,
ಸತ್ತ ದನವ ನರಿ ಕಾಯ್ದುಕೊಂಡಂತೆ,

ಹೆಣ್ಣು ನಾಯಿ ಗಂಡು ನಾಯಿ ಕೂಡುವ ಕೂಡಿ ಬಿಟ್ಟುಸಿಕ್ಕಿ ಬರಲುವಂತೆ,
ಮನ್ಮಥರತಿಸಂಗದಿಂದ, ಜನನದ ತಾಯಿಯೆನ್ನದೆ,
ಅತ್ತಿಗೆ ನಾದಿನಿಯೆನ್ನದೆ, ಅಕ್ಕತಂಗಿಯೆನ್ನದೆ,
ನಷತೆಯ ಒಡಹುಟ್ಟಿದವರೆನ್ನದೆ, ಅತ್ತೆ ಸೊಸೆಯೆನ್ನದೆ,
ಮಗಳು ಮೊಮ್ಮಗಳೆನ್ನದೆ, ಅಜ್ಜಿ ಆಯಿಯೆನ್ನದೆ ವಿರಾಚರೂಪತಾಳಿ
ಉಚ್ಚೆಯ ಬಚ್ಚಲಿಗೆ ಹೊಡದಾಡಿ ಸತ್ತಿತಯ್ಯ ಎನ್ನ ಗುಹ್ಯೇಂದ್ರಿಯವು.
ಇಂತೀ ಗುಹ್ಯ ಲಂಪಟಕ್ಕೆ ದೂರವಾದ ಮಹಾಘನ ಸದ್ಭಕ್ತ
ಶಿವಶರಣ ರಂಕರವಾಸಿಮಯ್ಯನ ದಾಸಿಯ ದಾಸನ ಮಾಡಿ ಸಲಹಯ್ಯ.
ಕಾರುಣ್ಯಸಾಗರ, ಪರಮಾನಂದಮೂರ್ತಿ, ಶ್ರೀಗುರುಲಿಂಗಜಂಗಮವೆ
ಹರಹರ ಶಿವಶಿವ ಜಯಜಯ ಕರುಣಾಕರ,
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. ॥ ೯ ॥

೧೨೬೯

ಅಯ್ಯಾ, ಗುರುದ್ರವ್ಯ, ಗಣದ್ರವ್ಯ, ಭಕ್ತದ್ರವ್ಯ,
ಚರದ್ರವ್ಯ, ಪರದ್ರವ್ಯ, ರಾಜದ್ರವ್ಯ,
ತಂದೆ-ತಾಯಿ ಬಂಧು-ಬಳಗ ಭಾವ-ಮೈದುನ ನಂಟುತನದ ದ್ರವ್ಯ,
ಕುಂತ ನಿಂತ ಸಹಾಸದ್ರವ್ಯ, ನೋಡಕೊಟ್ಟದ್ರವ್ಯ,
ನೂರೊಂದುಕುಲ ಹದಿನೆಂಟು ಜಾತಿಯ ದ್ರವ್ಯ,
ಬೀದಿ ಬಾಜಾರದಲ್ಲಿ ಬಿದ್ದ ದ್ರವ್ಯ, ಹಾದಿಪಥದಲ್ಲಿ ಬಿದ್ದ ದ್ರವ್ಯ,
ಹಕ್ಕಿಪಕ್ಕಿ ತಂದಿಟ್ಟ ದ್ರವ್ಯ,
ಮದುವೆ ಶುಭಶೋಭನದಾಸೋಹದ ದ್ರವ್ಯ ಮೊದಲಾಗಿ
ಕಳ್ಳಕಾಕರ ಸಂಗದಿಂದ ಚೋರತನದಿಂದಪಹರಿಸಿ,
ಜನ್ಮ ಜನ್ಮಾಂತರದಲ್ಲಿ ಭವಪಾತಕಕ್ಕೆ ಗುರಿಯಾಯಿತಯ್ಯ
ಎನ್ನ ಪಾಣೇಂದ್ರಿಯವು.
ಇಂಥ ಅಜ್ಞಾನದಿಂದ ತೊಳಲುವ ಜನ್ಮ ಜಡತ್ವವನಳಿದುಳಿದು
ನಿಮ್ಮ ಸದ್ಭಕ್ತ ನಿಜಶರಣ ದೇವರದಾಸಿಮಯ್ಯನ ದಾಸಿಯ
ಪಾದವನೆ ಅರಸಿ ಬಾಳುವಂತೆ ಮಾಡಯ್ಯ ಕರುಣಾಳಿ
ವಿಶ್ವಾಧಾರಮೂರ್ತಿ ಶ್ರೀಗುರುಲಿಂಗಜಂಗಮವೆ
ಹರಹರ ಶಿವಶಿವ ಜಯಜಯ ಕರುಣಾಕರ,
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. ॥ ೧೦ ॥

೧೨೮೦

ಅಯ್ಯಾ, ಗುರು ಚರ ಪರಭಕ್ತಗಣಂಗಳನುಣ್ಣಿಸಿ ಬಣ್ಣಿಸಿ,
ಆಣೆ ಪ್ರಮಾಣಂಗಳ ಮಾಡಿ,
ನಿಮ್ಮ ಪದಾರ್ಥವ ನಿಮಗೆ ವಂಚನೆಯಿಲ್ಲದೆ ತಂದೊಪ್ಪಿಸುವೆನೆಂದು
ಮೃದುತರನುಡಿಯಿಂದ ಧನಧಾನ್ಯದ್ರವ್ಯವ ತಂದು,
ಗುಹ್ಯಲಂಪಟ ಮೊದಲಾಗಿ ಸಮಸ್ತಲಂಪಟಕ್ಕೆ
ಉದರಪೋಷಣವ ಹೊರದು,
ಆ ಗುರುಚರ ಪರಭಕ್ತಗಣಂಗಳು ಬಂದು,
'ನಮ್ಮ ಪದಾರ್ಥವ ಕೊಡು' ಎಂದು ಬೇಡಿದಲ್ಲಿ
ಕಡುದ್ರೇಕದಿಂದ ಮರಳಿ 'ನಿಮ್ಮ ಪದಾರ್ಥವನಾರು ಬಲ್ಲರು ?'
ನೀವೆ ನನಗೆ ಕೊಡಬೇಕಲ್ಲದೆ ನಾ ನಿಮಗೆಲ್ಲಿಯದ ಕೊಡಬೇಕೆಂದು
ಸಮಸ್ತ ಜನ್ಮಾಂತರದಲ್ಲಿ ಹುಸಿಯನೆ ನುಡಿದು, ಹುಸಿಯನೆ ಮನೆಗಟ್ಟಿ,
ಅವರಿಗೆ ಇಲ್ಲದಪವಾದವ ಕಲ್ಪಿಸಿ, ಕುಂದು ನಿಂದ್ಯವ ನುಡಿದು,
ಗುರುಚರ ಪರಭಕ್ತಗಣ ದ್ರೋಹಿಯಾಗಿ
ಯಮನಿಗೀಡಾಯಿತ್ತಯ್ಯ ಎನ್ನ ವಾಗೇಂದ್ರಿಯವು.
ಇಂತು ದುರ್ಜನಸಂಗದಿಂದ ನಿಮ್ಮ ಚರಣದ ನಿಜನೈಷ್ಠೆಯನರಿಯದೆ
ಭವಬಂಧನಕ್ಕೊಳಗಾದ ಅಂಧಕಂಗೆ, ಸತ್ಪಥವ ತೋರಿ ದಯವಿಟ್ಟು,
ನಿಮ್ಮ ಸದ್ಭಕ್ತ ಶಿವಶರಣ ಮಾರಯ್ಯಗಳ ಮನೆಯ ರಜಂಗಳ ಹೊಡವ
ತೊತ್ತಿನ ತೊತ್ತಿನ ಒಕ್ಕು ಮಿಕ್ಕುದ ಕೊಡಿಸಿ ಸಲಹಯ್ಯ.
ಶ್ರೀಗುರುಲಿಂಗಜಂಗಮವೆ, ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. ॥ ೧೧ ॥

೧೨೮೧

ಅಯ್ಯಾ, ಗುರುಚರಪರಭಕ್ತಗಣ ಸಮಸ್ತ ಜಾತಿ ಮೊದಲಾದವರ
ತೋಟ ಹೊಲ ಗದ್ದೆ ಕಾಸಾರ ಮೊದಲಾದ
ಜಾಜಿ ಮಲ್ಲಿಗೆ ಸೂಜಿಮಲ್ಲಿಗೆ ದುಂಡುಮಲ್ಲಿಗೆ ಸಂಪಿಗೆ ಪಚ್ಚೆ ದವನ
ಅವರ ಮನೆಮಠಗಳಿಗೆ ಮೊದಲಾಗಿ
ಶ್ರೀಗಂಧ ಚಂದನ ಅಗರು ಲಾಮಂಚ ಕಸ್ತೂರಿ ಪುಣುಗು
ಶ್ರೀಗಂಧತೈಲ ಸಂಪಿಗೆತೈಲ ಮೊದಲಾದವಕಿಚ್ಛೈಸಿ
ಅವರ ಬಂಧಿಸಿ ಕೆಲವ ತಂದು, ಅಪಹರಿಸಿ ಕೆಲವ ತಂದು,
ಗುಹ್ಯಲಂಪಟ ಮೋಹಿಯಾಗಿ ಆ ಪದಾರ್ಥವ

ಜಾರಸ್ತ್ರೀ ಸೂಳೆ ಶ್ವಪಚಗಿತ್ತಿ ಮುಂತಾದವರ ಮುಡಿಗಳಿಗೆ ಕಟ್ಟಿ,
ತಾನು ವಾಸಿಸಿ ಸುಖಿಸಿ ಕಾಲ ಕಾಮರಿಗೊಳಗಾಯಿತಯ್ಯ ಎನ್ನ
ಘ್ರಾಣೇಂದ್ರಿಯವು.
ಇಂತಾ ಭವಪಾಶಪ್ರಾಣಿಗಳ ಸಂಗದಿಂದ ನಿಮ್ಮ ಮರೆದೆನಯ್ಯ.
ಇನ್ನೆನಗೆ ನಿಮ್ಮೊಲುಮೆಯಿಂದ ನೋಡಿ, ಭವಸಾಗರವ ದಾಂಟಿಸಯ್ಯ.
ಜಗದಾರಾಧ್ಯ ಪರಮಾನಂದಮೂರ್ತಿ, ಎನ್ನಪರಾಧವ ನೋಡದೆ,
ನಿಮ್ಮ ಸದ್ಭಕ್ತ ಶಿವಶರಣ ಮೋಳಿಗಯ್ಯಗಳ ಲೆಂಕನ ಚರಣಧೂಳವ
ವಾಸಿಸುವಂತೆ ಮಾಡಯ್ಯ ಅಪರಾಧಕ್ಷಮಿತ ಶ್ರೀಗುರುಲಿಂಗಜಂಗಮವೆ.
ಹರಹರ ಶಿವಶಿವ ಜಯಜಯ ಕರುಣಾಕರ,
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. || ೧೨ ||

೧೨೮೨

ಅಯ್ಯಾ, ಗುರುಚರಪರಭಕ್ತಗಣ ಷಣ್ಮತ ಮೊದಲಾದ
ನೂರೊಂದು ಕುಲ ಹದಿನೆಂಟು ಜಾತಿಯವರೊಳಗಾಗಿ
ಸಮಸ್ತರ ಹೊಲ ಮಾಳ ಗದ್ದೆ ಮನೆ ಮಠ ಮಳಿಗೆ ಮೊದಲಾಗಿ
ತೆಂಗು ಬಾಳೆ ಬದನೆ ಅಂಜುರ ದ್ರಾಕ್ಷಿ ಚೂತಫಲ
ನೇರಿಲಹಣ್ಣು ಹಲಸು ದಾಳಿಂಬ ರಾಯಿಬಿಕ್ಕೆ ಕಿತ್ತಳೆ ಕಿರಿನೆಲ್ಲಿ
ಬೆಳವಲಹಣ್ಣು ಕಬ್ಬು ಕಡಲೆ ಸೌತೆ ಕಲ್ಲಂಗಡಿ ಕರುಬುಜ
ಸೀತಿನಿ ಮೊದಲಾದ ಸಮಸ್ತ ರಸದ್ರವ್ಯವ ನೀತಿಯಿಂದ ಕೆಲವ ತಂದು,
ಅನೀತಿಯಿಂದ ಕೆಲವ ತಂದು, ಚೋರತನದಿಂದ ಕೆಲವ ತಂದು,
ರಂಡೆ ಮುಂಡೆ ಜಾರೆ ವೇಶಿ ಸೂಳೆ ಮೊದಲಾದವರಿಗೆ ಕೆಲವ ಕೊಟ್ಟು,
ತಾನು ಕೆಲವ ಭುಂಜಿಸಿ, ಹಲ್ಲುಮುರಿದು ಸೊಟಿ ಹರಿದು,
ಭವಕ್ಕೀಡಾಯಿತಯ್ಯ ಎನ್ನ ಜಿಹ್ವೇಂದ್ರಿಯವು.
ಇಂತೀ ಕರ್ಮಪ್ರಾಣಿಗಳ ಸಂಗದಿಂದ ಮತಿಗೆಟ್ಟೆನಯ್ಯ.
ಇನ್ನೆನಗೆ ಗತಿಯ ಪಥವ ತೋರಿ
ನಿಮ್ಮ ಸದ್ಭಕ್ತ ಶಿವಶರಣ ನುಲಿಯ ಚಂದಯ್ಯಗಳ ತೊತ್ತಿನ
ಉಗುಳ ತಾಂಬೂಲವ ಕೊಡಿಸಿ ಸಲಹಯ್ಯ
ಸರ್ವಾಂತರ್ಯಾಮಿ ಶ್ರೀಗುರುಲಿಂಗಜಂಗಮವೆ,
ಹರಹರ ಶಿವಶಿವ ಜಯಜಯ ಕರುಣಾಕರ,
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. || ೧೩ ||

೧೨೮೩

ಅಯ್ಯಾ, ಹಲವು ದೇಶಕೋಶಗಳು, ಹಲವು ತೀರ್ಥಕ್ಷೇತ್ರಂಗಳು,
ಹಲವು ಸ್ತ್ರೀಯರ ಅಂದಚಂದಗಳು, ಹಲವು ತೇರು ಜಾತ್ರೆಗಳು,
ಹಲವು ಆಟಪಾಟಗಳು, ಹಲವು ಅರಿವೆ ಆಭರಣಗಳು,
ಹಲವು ಆನೆ ಕುದುರೆ ಅಂದಳಗಳು, ಹಲವು ಚಿತ್ರವಿಚಿತ್ರ ಛತ್ರ ಚಾಮರಗಳು,
ಹಲವು ಹಣ್ಣು ಫಲಾದಿಗಳು, ಹಲವು ಪತ್ರೆ ಪುಷ್ಪಂಗಳು,
ಹಲವು ಮೆಟ್ಟುವ ಚರವಾಹನ ಮೊದಲಾಗಿ
ನೋಡಿದಾಕ್ಷಣವೇ ದೀಪಕ್ಕೆ ಪತಂಗ ಎರಗುವಂತೆ,
ಹಲವು ಪ್ರಾಣಿಗಳಿಗೆ ತಿಗಳ ಎರಗುವಂತೆ,
ಮೀನಿಗೆ ಗುಂಡುಮುಳುಗನಪಕ್ಷಿ ಎರಗುವಂತೆ,
ಹಲವ ಹಂಬಲಿಸಿ, ಕಂಡುದ ಬಿಡದ ಮುಂಡೆ ಪಿಶಾಚಿಯಂತೆ,
ಜನ್ಮಾಂತರವೆತ್ತಿ ತೊಳಲಿತಯ್ಯ ಎನ್ನ ನೇತ್ರೇಂದ್ರಿಯವು.
ಇಂಥ ಕರ್ಮಜಡ ಜೀವರ ಸಂಗದಿಂದ ಕೆಟ್ಟೆ ಕೆಟ್ಟೆ.
ಶಿವಧೊ ಶಿವಧೊ ಎಂದು ಮೊರೆಯಿಟ್ಟೆನಯ್ಯ.
ದೇವ ನಿಮ್ಮ ಕೃಪಾದೃಷ್ಟಿಯಿಂದ ನೋಡಿ
ನಿಮ್ಮ ಸದ್ಭಕ್ತೆ ಶಿವಶರಣೆ ಅಕ್ಕನೀಲಾಂಬಿಕೆ ತಾಯಿಗಳ ತೊತ್ತಿನ
ತೊತ್ತು ಸೇವೆಯ ಮಾಡುವ ಗೌಡಿಯ ಚರಣವ
ಏಕಚಿತ್ತದಿಂದ ನೋಡಿ ಸುಖಿಸುವಂತೆ ಮಾಡಯ್ಯ.
ಎನ್ನಾಳ್ದ ಶ್ರೀಗುರುಲಿಂಗಜಂಗಮವೆ.
ಹರಹರ ಶಿವಶಿವ ಜಯಜಯ ಕರುಣಾಕರ,
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. ॥ ೧೪ ॥

೧೨೮೪

ಅಯ್ಯಾ, ಅನಂತ ನೂತನ ಗಣಂಗಳು-ಪೂರ್ವ ಪುರಾತನರು-
ನೂರೊಂದು ವಿರಕ್ತರು-ಪ್ರಮಥಗಣಾಧೀಶ್ವರರ ಮಂದಿರಗಳಲ್ಲಿರುವಂತಹ
ಪರಿಯಂಕ, ಹಾಸಿಕೆ, ಶಾಲು, ಸಕಲಾತಿ, ಹೂವಿನ ಹಚ್ಚಡ,
ಶ್ವೇತಜರತಾರದ ಶಲ್ಯ, ಪಟ್ಟು ಪಟ್ಟೇದ ಧೋತ್ರ, ಸಣ್ಣಂಗಿ,
ಬುಟ್ಟೇವ ದಗಲೆ, ನಗದೀ ವಸ್ತ್ರ, ಬೆಳ್ಳಿಯಾಭರಣ, ಚಿನ್ನದಾಭರಣ,
ನವರತ್ನದಾಭರಣ, ಹವಳಮೌಕ್ತಿಕ ಮೊದಲಾದಾಭರಣಂಗಳ
ಅವರ ಮನ ನೋಯುವಂತೆ ಅಪಹರತ್ವದಿಂದ ಚೋರರ ಕೂಡಿ
ತೆಗೆದುಕೊಂಡು ಬಂದು, ಅನಂತ ಸ್ತ್ರೀಯರೊಡಗೂಡಿ ಹೊದ್ದು, ಹಾಸಿ,

ಇಟ್ಟು, ತೊಟ್ಟು, ಭೋಗಿಸಿ, ಗಣದ್ರೋಹಕ್ಕೊಳಗಾಗಿ
ಭವಪಾಶಕ್ಕೊಳಗಾಯಿತಯ್ಯ ಎನ್ನ ತ್ವಗೇದ್ರಿಯವು.
ಇಂಥ ಪರಮದ್ರೋಹಿಯ ಸಂಗದಿಂದ ಕೆಟ್ಟೆನುಳುಹಿಕೊಳ್ಳಯ್ಯ.
ಹೇ ಶಾಂಭವಮೂರ್ತಿಯೆ ! ನಿಮ್ಮಂತಃಕರಣದಿಂದ ಅಭಯಹಸ್ತವಿತ್ತು
ಪಾವನವ ಮಾಡಿ, ನಿಮ್ಮ ಸದ್ಭಕ್ತೆ ಶಿವಶರಣೆ ನಿರ್ವಾಣಪದನಾಯಕೆ
ಅಕ್ಕಮಹಾದೇವಿಯರ ತೊತ್ತಿನ ತೊತ್ತು ಭೃತ್ಯಳು ಉಟ್ಟು ಬಿಟ್ಟ
ನಿರ್ಮಾಲ್ಯದಿಂದ ಎನ್ನ ಪಾವನವ ಮಾಡಯ್ಯ ಶ್ರೀಗುರುಲಿಂಗಜಂಗಮವೆ.
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. ॥ ೧೫ ॥

೧೨೮೫

ಅಯ್ಯಾ, ಕುಶಬ್ದ, ಹಿಂಸೆಶಬ್ದ, ಹೊಲೆಶಬ್ದ,
ಭಾಂಡಿಕಾಶಬ್ದ, ವಾಕರಿಕೆ ಶಬ್ದ, ಗುರುಚರಪರಭಕ್ತಗಣನಿಂದ್ಯದ ನುಡಿ,
ಕುಟಿಲ ಕುಹಕ ಶಬ್ದ, ಭಂಡ ಅಪಭ್ರಷ್ಟರ ನುಡಿ, ಸೂಳೆ ದಾಸ ಷಂಡರ ನುಡಿ,
ಹೊನ್ನು-ಹೆಣ್ಣು-ಮಣ್ಣು-ಐಶ್ವರ್ಯಕ್ಕೆ
ಹೊಡದಾಡಿ ಸತ್ತವರ ಕಥೆ ಪ್ರಸಂಗದ ಶಬ್ದ,
ವೇಶ್ಯಾಂಗನೆಯರ ರಾಗ ಮೊದಲಾಗಿ ಭವದ ಕುಶಬ್ದಕ್ಕೆ
ಎಳೆ ಮೃಗದೋಪಾದಿಯಲ್ಲಿ ಮೋಹಿಸಿ, ಭ್ರಷ್ಟತನದಿಂದ
ತೊಳಲಿತಯ್ಯ ಎನ್ನ ಶ್ರೋತ್ರೇಂದ್ರಿಯವು.
ಇಂಥ ಕುಶಬ್ದರ ಸಂಗದಿಂದ ನಿಮ್ಮ ಶರಣರ ಮಹತ್ವದ
ಮಹಾಘನ ಶಬ್ದವ ಮರದೆನಯ್ಯ.
ಮಂತ್ರಮೂರ್ತಿ ಸರ್ವ ಸೂತ್ರಾಧಾರ ಪರಬ್ರಹ್ಮವೆ ಎನ್ನಪರಾಧವ ನೋಡದೆ,
ನಿಮ್ಮ ಸದ್ಭಕ್ತ ಶರಣಗಣಂಗಳ ವಚನಾಮೃತವ ಕೇಳಿ
ಬೆರಗು ನಿಬ್ಬೆರಗಾಗುವಂತೆ ಮಾಡಯ್ಯ
ಕರುಣಾಂಬುಧಿ ಶ್ರೀಗುರುಲಿಂಗಜಂಗಮವೆ.
ಹರಹರ ಶಿವಶಿವ ಜಯಜಯ ಕರುಣಾಕರ,
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. ॥ ೧೬ ॥

೧೨೮೬

ಅಯ್ಯಾ, ಇಂತು ಪಾದೇಂದ್ರಿಯ, ಪಾಯ್ವಿಂದ್ರಿಯ.
ಗುಹ್ಯೇಂದ್ರಿಯ, ಪಾಣೇಂದ್ರಿಯ, ವಾಗೇಂದ್ರಿಯ, ಘ್ರಾಣೇಂದ್ರಿಯ.
ಜಿಹ್ವೇಂದ್ರಿಯ, ನೇತ್ರೇಂದ್ರಿಯ, ತ್ವಗೇಂದ್ರಿಯ. ಶ್ರೋತ್ರೇಂದ್ರಿಯ

ಮೊದಲಾದ ಸಮಸ್ತ ಇಂದ್ರಿಯ ವಿಷಯ ವ್ಯಾಪಾರದಿಂದ
ಹುಸಿ, ಕಳವು, ಪರದಾರ, ಪರನಿಂದ್ಯ, ಪರಹಿಂಸೆ, ಪರದೈವ,
ಪರಕಾಂಕ್ಷೆ, ಅನೃತ, ಅಪಶಬ್ದ ಮೊದಲಾಗಿ
ಪರಮಪಾತಕತನದಿಂದ ಹೊಡದಾಡಿ,
ಅರ್ಥಪ್ರಾಣಾಭಿಮಾನವ ಕಳಕೊಂಡು
ಭವಭಾರಿಯಾಗಿ ನಷ್ಟವಾಯಿತಯ್ಯ ಎನ್ನ ಹೃದಯೇಂದ್ರಿಯವು.
ಇಂತಾ ಇಂದ್ರಿಯಂಗಳ ದುಸ್ಸಂಗದಿಂದ ಜಡಶರೀರಿಯಾಗಿ,
ನಿಮ್ಮ ನಿಜಭಕ್ತಿಯ ಮರದೆನಯ್ಯ ಪರಮಾರಾಧ್ಯದಿರವೆ.
ಇನ್ನೆನಗೆ ಗತಿಯ ಪಥವ ತೋರಿಸಯ್ಯ
ಮಹಾಪ್ರಭುವೆ ಶ್ರೀಗುರುಲಿಂಗಜಂಗಮವೆ,
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರ. ॥ ೧೭ ॥

೧೨೮೭

ಅಯ್ಯಾ, ಎನ್ನ ಹೊರಗೆ ನೋಡಿದಡೆ ಇಂತಾಯಿತಯ್ಯ.
ಎನ್ನ ಒಳಗೆ ನೋಡಿದಡೆ ಎಳ್ಳನಿತು ಹುರುಳಿಲ್ಲವಯ್ಯ ದೇವ.
ಹೊನ್ನು ನನ್ನದು, ಹೆಣ್ಣು ನನ್ನದು, ಮಣ್ಣು ನನ್ನದು,
ಪುತ್ರಮಿತ್ರಕಳತ್ರಯಾದಿಗಳು ನನ್ನದು, ಧನಧಾನ್ಯ ನನ್ನದು,
ಆನೆ ಕುದುರೆ ಎತ್ತು ತೊತ್ತು ಮಂದಿ ಮಕ್ಕಳು
ಅಷ್ಟೈಶ್ವರ್ಯದಲ್ಲಿ ನಾ ಬಲ್ಲಿದನೆಂದು
ಬಹುಹಮ್ಮಿನಿಂದ ಗುರುಹಿರಿಯರ ಕಂಡಡೆ ತಲೆವಾಗದಯ್ಯ ಎನ್ನ ಚಿತ್ತವು.
ಇಂತಾ ಚಿತ್ತದಿಂದ ನುಗ್ಗುನುರಿಯಾದೆನಯ್ಯ
ನಿಃಕಳಂಕಮೂರ್ತಿ ಸಚ್ಚಿದಾನಂದ ಎನ್ನ ಅಪರಾಧವ ನೋಡದೆ ಕಾಯಯ್ಯ.
ಕರುಣಾಂಬುದಿ ಅನಾದಿ ಶ್ರೀಗುರುಲಿಂಗಜಂಗಮವೆ
ಹರಹರ ಶಿವಶಿವ ಜಯಜಯ ಕರುಣಾಕರ !
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. ॥ ೧೮ ॥

೧೨೮೮

ಅಯ್ಯಾ, ನಾನು ಬಹು ಸುಂದರನು, ನಾನು ಬಹು ಪರಾಕ್ರಮಿಯು,
ನಾನು ಬಹು ಭೋಗಿಯು, ನಾನು ಬಹು ಸುಖಿಯು,
ನಾನು ತರ್ಕ ವ್ಯಾಕರಣ ಅಮರ ಆಗಮ ಶಾಸ್ತ್ರ ಪುರಾಣದಲ್ಲಿ ಪ್ರೌಢನು.
ನನ್ನ ಸೋಲಿಸುವರಾರು?

ನಾನು ವೈದ್ಯಶಾಸ್ತ್ರದಲ್ಲಿ ಬಲ್ಲಿದನು, ನನಗೊಂದು ವ್ಯಾಧಿಯು ಮುಟ್ಟದು.
ನಾನು ರಣಾಗ್ರದಲ್ಲಿ ಬಲವಂತನು, ನನ್ನ ಮೇಲೆ ಬೀಳುವರಾರು ?
ನಾನು ಎಂದೆಂದಿಗೂ ಪುಣ್ಯವಂತನು, ನನಗೆ ದರಿದ್ರ ಬಂದು ಸೋಂಕದು
ನಾನು ಎಂದೆಂದಿಗೂ ಕ್ಷೀರಾಹಾರಿಯು, ಎನ್ನ ಭೋಗವ ತೊಲಗಿಸುವರಾರು ?
ನಾನು ಯಂತ್ರ ತಂತ್ರದಲ್ಲಿ ಬಲ್ಲಿದನು, ನನಗೆ ಒಂದು ಗ್ರಹ ಬಂದು ಸೋಂಕದು
ಎಂದು ಹಮ್ಮಿನಿಂದ ಭ್ರಮೆಗೊಂಡಿತಯ್ಯ ಎನ್ನ ಬುದ್ಧಿಯೆಂಬ ಕರಣವು.
ಇಂತಾ ದುಃಕರಣದ ಸಂಗದಿಂದ ಕಂದಿ ಕುಂದಿ ಕಂಗೆಟ್ಟೆನಯ್ಯ.
ಶ್ರೀಗುರುಲಿಂಗಜಂಗಮವೆ.
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. ॥ ೧೯ ॥

೧೨೪೯

ಅಯ್ಯಾ, ತನ್ನ ಅಜ್ಞಾನ ಮೂಲಹಂಕಾರದಿಂದ
ಗುರುಚರಪರಭಕ್ತಗಣಂಗಳ ಕಂಡಡೆ ತಲೆವಾಗದಯ್ಯ ಎನ್ನ ಮನವು.
ತನ್ನ ಬೈರೂಪದ ಬಿಂಕದಿಂದ
ಗುರುಹಿರಿಯರು ಮಾತನಾಡಿದಡೆ
ಭೃತ್ಯಭಾವದಿಂದ ಮಾತನಾಡದಯ್ಯ ಎನ್ನ ಮನವು.
ಹಾ! ಹಾ! ಯತಿಗಳು ದಾರಿಯಲ್ಲಿ ಬಂದಡೆ
ತನ್ನ ಗರುವಿನಿಂದ ಅವರಿಗೆ ಹಾದಿಯ ಬಿಡದಯ್ಯ ಎನ್ನ ಮನವು.
ಹರಗುರುವಾಕ್ಯವಿಡಿದು ಆಚರಿಸುವ
ನಿಜನಿಷ್ಠ ಶೀಲವ್ರತಿಗಳ ಕಂಡಡೆ ತನ್ನ ಗರುವಿನಿಂದ
ಉರಿಮಾರಿಯಂತೆ, ಕೋಣ ಮಲತು ಗರುವಿನಿಂದ ತಿರುಗುವಂತೆ,
ಅವರ ಮೇಲೆ ಮಚ್ಚರಿಸಿತಯ್ಯ ಎನ್ನ ಮನವು.
ಇಂತಾ ಪರಮಪಾತಕ ಮನದ ಸಂಗದಿಂದ
ನೊಂದು ಬೆಂದು ಕಂಗೆಟ್ಟು ಕಂದಿ ಕುಂದಿ ತೊಳಲಿ ಬಳಲಿದೆನಯ್ಯ.
ಇಂತಹ ಕುಮನಸಂಗವ ಪರಿಹರಿಸಿ ಸಲಹಯ್ಯ.
ಶ್ರೀಗುರುಲಿಂಗಜಂಗಮವೆ.
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. ॥ ೨೦ ॥

೧೨೯೦

ಅಯ್ಯಾ, ಎನ್ನ ಜೀವ ಮನದ ಸಂಗದಿಂದ
ಬಹುಬಂಧನಕ್ಕೊಳಗಾಗುವುದಯ್ಯ.
ಒಂದು ಕ್ಷಣಕ್ಕೆ ಜ್ಞಾನಿಯಾಗುವುದಯ್ಯ.
ಮತ್ತೊಂದು ಕ್ಷಣಕ್ಕೆ ಅಜ್ಞಾನಿಯಾಗುವುದಯ್ಯ.
ಒಂದು ವೇಳೆ ಮಹಾಪಾಪಿಯಾಗುವುದಯ್ಯ.
ಮತ್ತೊಂದು ವೇಳೆ ಮಹಾಪುಣ್ಯ ಶರೀರಿಯಾಗುವುದಯ್ಯ.
ತನ್ನೊಳಗಣ ಗುಪ್ತಪಾತಕದ ಬುದ್ಧಿಯ ಬಿಡದಯ್ಯ.
ಮತ್ತಾರನಾದಡು ಜರದು ಗ್ರಂಥಾರ್ಥವ ತಂದು ಬುದ್ಧಿಯ ಹೇಳುವುದಯ್ಯ.
ತಾನವಗುಣಿಯಾಗಿ ಚರಿಸುವುದಯ್ಯ.
ಇಂಥ ಜೀವನ ಸಂಗವ ಪರಿಹರಿಸಿ ರಕ್ಷಿಸಯ್ಯ
ಪರಮಾನಂದಮೂರ್ತಿ ಶ್ರೀಗುರುಲಿಂಗಜಂಗಮವೆ.
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾ ಶ್ರೀ ಗುರುಸಿದ್ಧಲಿಂಗೇಶ್ವರ. ॥ ೨೧ ॥

೧೨೯೧

ಅಯ್ಯಾ, ತನ್ನ ಜನ್ಮಾಂತರದ ಮಹಾದುಃಖವ ನೆನಸಿಕ್ಕೊಂಡು
ಒಂದು ವೇಳೆ ಮಹಾತತ್ವಜ್ಞಾನಾನಂದದ ನಿಜಜ್ಞಾನಿಯಾಗುವುದಯ್ಯ.
ಮತ್ತೊಂದು ವೇಳೆ ಮಲತ್ರಯಪಾಶಬದ್ಧನಾಗಿ
ಮಹಾಭ್ರಷ್ಟತನದಿಂದ ಚರಿಸುವುದಯ್ಯ.
ಒಂದು ವೇಳೆ ಪರಮ ವಿರಕ್ತಿಯ ಹೇಳುವುದಯ್ಯ.
ಒಂದು ವೇಳೆ ಕಚ್ಚಿಹರುಕಬುದ್ಧಿಯನೊಡಗೂಡಿ
ಅಪ್ಪಭ್ರಷ್ಟತನದಿಂದ ಚರಿಸುವುದಯ್ಯ.
ಒಂದು ವೇಳೆ ಪುರಾಣವೈರಾಗ್ಯದಿಂದೆ ಮಹಾತ್ಯಾಗಿಯಾಗುವುದಯ್ಯ.
ಮತ್ತೊಂದು ವೇಳೆ ಮಹಾಲೋಭಿತನದಿಂದ
ಭವಪಾಶದಲ್ಲಿ ಬಿದ್ದು ತೊಳಲುವುದಯ್ಯ.
ಇಂಥ ಕರ್ಮಜಡ ಕುಚ್ಛ ಜೀವಮನದಸಂಗವ ತೊಲಗಿಸಿ ರಕ್ಷಿಸಯ್ಯ.
ಎನ ಸೂತ್ರಾಧಾರ ಸಚ್ಚಿದಾನಂದ ಸಕಲಾಗಮಂಗಳಮೂರ್ತಿ
ಮೋಕ್ಷಪ್ರದಾಯಕ ಶ್ರೀಗುರುಲಿಂಗಜಂಗಮವೆ
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. ॥ ೨೨ ॥

೧೨೯೨

ಅಯ್ಯಾ, ಒಂದು ಕ್ಷಣಕ್ಕೆ ಪ್ರಸೂತಿ ವೈರಾಗ್ಯ ತಲೆದೋರಿದಲ್ಲಿ
ಸಕಲ ಪದಾರ್ಥವ ಸೂರೆಮಾಡುವುದಯ್ಯ.
ಒಂದು ಕ್ಷಣಕ್ಕೆ ಅಸ್ಥಿರ ಕಾಂಕ್ಷೆಯಿಂದ
ಹಳೆಯ ರಗಟೆಗೆ ಹೊಡದಾಡಿ ಸಾವುದಯ್ಯ.
ಒಂದು ವೇಳೆ ಶ್ಮಶಾನವೈರಾಗ್ಯ ತಲೆದೋರಿದಲ್ಲಿ
ತನ್ನ ಮನೆ ಮಕ್ಕಳು ಸಂಸಾರ ಧನಧಾನ್ಯವ ತ್ಯಜಿಸಿ
ಅರಣ್ಯವಶವಾಗುವುದಯ್ಯ.
ಅಲ್ಲಿ ಹೋಗಿ ಗುಡ್ಡ ಗಹ್ವರದೊಳಗಿರುವ ಪಶುಪಕ್ಷಿಗಳೆಬ್ಬಟ್ಟಿ
ಜಡಸಂಸಾರದಿಂದ ಹಾದಿಮಾರ್ಗದವರ ಬಳಲಿಸಿ,
ಬೇಡಿದಲ್ಲಿ ಕೊಟ್ಟಡೆ ಸ್ತುತಿಸಿ,
ಕೊಡದಿರ್ದಡೆ ಮಹಾದುಃಖದಿಂದ ನಿಂದ್ಯವ ಮಾಡಿ
ಪರಮಪಾತಕತನದಿಂದ ಚರಿಸುವುದಯ್ಯ.
ಇಂಥ ದುರ್ಜೀವಿಮನದ ಸಂಗವ ಪರಿಹರಿಸಯ್ಯ ಪ್ರಮಥಗಣನಾಯಕ.
ಭಕ್ತವತ್ಸಲ ಭವರೋಗವೈದ್ಯ ಜಗದಾಧಾರಮೂರ್ತಿ ಸರ್ವಾಂತರ್ಯಾಮಿ
ಶ್ರೀಗುರುಲಿಂಗಜಂಗಮವೆ.
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. ॥ ೨೩ ॥

೧೨೯೩

ಅಯ್ಯಾ, ಮತ್ತೊಂದು ವೇಳೆ ಕರ್ಣ ಮಾಡಿದ ಧರ್ಮವ ಕೇಳಿ
ಸಮಸ್ತ ಗುರುಹಿರಿಯರು, ಸಮಸ್ತ ಋಷಿಗಳು,
ಅನಂತ ಮುನಿಗಳು, ಅನಂತ ಪಂಡಿತರು, ಅನಂತ ಬ್ರಾಹ್ಮಣರು,
ಅನಂತ ದಾರಿದ್ರ ಸಮೂಹವ ಕೂಡಿಕೊಂಡು,
ಅರಣ್ಯದಲ್ಲಿ ಪರ್ಣಶಾಲೆ ಪತ್ರ ಶಾಲೆಗಳ ಮಾಡಿ
ದಾಸೋಹದಿಂದ ತೃಪ್ತಿಬಡಿಸುವುದಯ್ಯ.
ಮತ್ತೊಂದು ವೇಳೆ ಪರಮವಿರಕ್ತ ಮನೆಗೆ ಬಂದು ಭಿಕ್ಷಾ ಎಂದಡೆ
ಕಡುದ್ರೇಕದಿಂದ ಭಿಕ್ಷವ ನೀಡದೆ ಹಳಿದು
ದೂಷಣೆಸಿ ದುರ್ವಾಕ್ಯವ ನುಡಿವುದಯ್ಯ.
ಇಂಥ ಕುಲಗೇಡಿ ಚಾಂಡಾಲ ಹೊಲೆ ಮಾದಿಗ ಜೀವನ ಸಂಗವ ಹೆರೆಹಿಂಗಿಸಯ್ಯ.
ಮೋಕ್ಷಪ್ರದಾಯಕ ಪೂರ್ವಾಚಾರ್ಯಮೂರ್ತಿ ಶ್ರೀಗುರುಲಿಂಗಜಂಗಮವೆ.

ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. ॥ ೨೪ ॥

೧೨೯೪

ಅಯ್ಯಾ, ಮತ್ತೊಂದು ವೇಳೆ ಧರ್ಮರಾಜನ ವಾರ್ತೆಯ ಕೇಳಿ
ನಾನು ಅವನಂತೆ ಮಹಾದಾನವ ಮಾಡಬೇಕೆಂದು
ಅನ್ನದಾನ-ವಸ್ತ್ರದಾನ-ಕನ್ಯಾದಾನ-ಧನಧಾನ್ಯ ಕಾಂಚನ ಮೊದಲಾಗಿ
ಷೋಡಶಮಹಾದಾನವ ಮಾಡುವುದಯ್ಯ.
ಎಂದಿಗೋ ಯಾವ ಕಾಲಕ್ಕೋ ತನ್ನ ಪವಿತ್ರದ ಸದ್ಗುರುವು
ಧರ್ಮದ ವಾರ್ತೆಯ ಕೇಳಿ, ಮನೆಗೆ ಬಂದು ಭಿಕ್ಷವ ಬೇಡಲು,
ನನ್ನ ಪುಣ್ಯಕ್ಕೆ ಕೊಟ್ಟಷ್ಟು ಒಯ್ವರೆ ಒಯ್ಯಿರಿ
ಒಯ್ಯದಿದ್ದಡೆ ರಾಜಾರ್ಥಕ್ಕೆ ಹೇಳಿ ಹೊರಯಿಕ್ಕೆ ಹಾಕುವೆನೆಂದು
ಮೂಳನಾಯಿ ಬಗುಳಿದಂತೆ ನುಡಿವುದಯ್ಯ.
ಇಂಥ ಗುರುದ್ರೋಹಿ ನೀಚಜೀವನ ಸಂಗವ ತೊಲಗಿಸಿ
ನಿಮ್ಮ ಕೃಪೆಯಿಂದ ರಕ್ಷಿಸಯ್ಯ.
ನಿಷ್ಕಳಂಕ ನಿಷ್ಪ್ರಪಂಚ ನಿಷ್ಕಾಮಮೂರ್ತಿ ಶ್ರೀಗುರುಲಿಂಗಜಂಗಮವೆ.
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. ॥ ೨೫ ॥

೧೨೯೫

ಅಯ್ಯಾ, ಮತ್ತೊಂದು ವೇಳೆ
ಸತ್ಯೇಂದ್ರಚೋಳನ ವಾರ್ತೆಯ ಕೇಳಿ
ಅನ್ನಕ್ಷೇತ್ರ ಅರವಟ್ಟಿಗೆಗಳು ಕೆರೆಬಾವಿಕಾಲುವೆಗಳು
ದಾನ ಧರ್ಮ ಪರೋಪಕಾರಗಳು ಮುಂತಾಗಿ ಮಾಡುವುದಯ್ಯ.
ತಾನು ಬಾಲನಾಗಿದ್ದಲ್ಲಿ ಒಬ್ಬ ವಿದ್ಯಬುದ್ಧಿ ಹೇಳಿದ ಗುರುವು
ಸತ್ಯದ ವಾರ್ತೆಯ ಕೇಳಿ ಮನೆಗೆ ಬಂದು ನಿಂತು ಮಾತನಾಡಿದಡೆ
ನೀನ್ಯಾರೊ ? ಎಂದು,
ಅರ್ಥೇಷಣ, ಪುತ್ರೇಷಣ, ದಾರೇಷಣದ ಮದಗಳು ತಲೆಗೇರಿ
ಅಹಂಕಾರದಿಂದ ಮನುಷ್ಯರ ಹಚ್ಚಿ
ಮನೆಯಿಂದ ಹೊರಡಿಸಿ ನೂಕಿಸುವುದಯ್ಯ.
ಮತ್ತಾರಾದಡು ಗುರುಹಿರಿಯರು ಕಂಡು
ಎಲೆ ಜೀವನೆ ನಿನ್ನ ಬಾಲತ್ವದ ವಿದ್ಯಬುದ್ಧಿ ಗುರುವೆಂದು ಹೇಳಿದಡೆ,

'ಅವನೇನು ಪುಗಸಾಟೆ ಹೇಳಿದನೆ?
ನನ್ನ ರೊಕ್ಕವ ತಿಂದು ಹೇಳಿದ, ನೀನೊಬ್ಬ ನನಗೆ ಬುದ್ಧಿ ಹೇಳೋಕೆ'
ಎಂದು ದುರ್ವಾಕ್ಯವ ನುಡಿವುದಯ್ಯ.
ಇಂಥ ಭವದ ಹಂದಿ ಜಡಜೀವನ ಸಂಗವ ಪರಿಹರಿಸಿ ರಕ್ಷಿಸಯ್ಯ.
ಶ್ರೀಗುರುಲಿಂಗಜಂಗಮವೆ, ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. || ೨೬ ||

೧೨೯೬

ಅಯ್ಯಾ, ಇಂಥ ಮೂಳ ಹೊಲೆ ಜೀವನ ಸಂಗದಿಂದ
ಎನ್ನ ಉನ್ಮನವು ಅದರಂತೆ ಕೂಡಿ,
ದುಶ್ಚರಿತ್ರದಿಂದ ಕುಲಗೇಡಿ ಬುದ್ಧಿಯ ಕಲಿತು
ನನ್ನನು ಹರಿ ಸುರ ಬ್ರಹ್ಮಾದಿಗಳು ಬಿದ್ದ ಭವದ ಕುಳಿಯಲ್ಲಿ ಕೆಡವಿತಯ್ಯ.
ಆ ಬಿದ್ದ ದುಃಖವ ಎಷ್ಟೆಂದು ಹೇಳಲಯ್ಯ, ದೇವ.
ಪ್ರಥಮದಲ್ಲಿ ಒಬ್ಬ ಜೀವನ ತಂದೆ-ತಾಯಿಯೆಂದು ಮಾಡಿಕೊಂಡು
ಅವರ ಮಲಮೂತ್ರದ ದ್ವಾರದ ಸಂದಿನಲ್ಲಿ ಕೆಡವಿತ್ತಯ್ಯ.
ಅಲ್ಲಿ ನೋಡಿದಡೆ ಎಳ್ಳಿನಿತು ಹುರುಳಿಲ್ಲ,
ಮಹಾ ದುಃಖವೊ ಗುರುವೆ !
ಇಂಥ ಮಹಾದುಃಖ ಜೀವನ ಸಂಗವ ಪರಿಹರಿಸಿ,
ನಿಮ್ಮ ಕೃಪಾದೃಷ್ಟಿಯಿಂದ ನೋಡಿ
ಭವಪಾಶದಿಂದ ಕಡೆಗೆ ದಾಂಟಿಸಯ್ಯ.
ಶ್ರೀಗುರುಲಿಂಗಜಂಗಮವೆ, ಹರಹರ ಶಿವಶಿವ ಜಯಜಯ ಕರುಣಾಕರ,
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. || ೨೭ ||

೧೨೯೭

ಅಯ್ಯಾ, ಮತ್ತೊಂದು ವೇಳೆ
ಸಪ್ತಧಾತು ಸಪ್ತವ್ಯಸನವಕೂಡಿ ವರ್ತಿಸಿತಯ್ಯ.
ಅದೆಂತೆಂದಡೆ, ರಸ ರುಧಿರ ಮಾಂಸ ಮೇದಸ್ಸು
ಅಸ್ಥಿ ಮಜ್ಜೆ ಶುಕ್ಲವೆಂಬ ಧಾತುಗಳ
ಅನ್ನ ನೀರಿನಿಂದ ಪೋಷಿಸಿಕೊಂಡು,
ತನುವ್ಯಸನ, ಮನವ್ಯಸನ, ಧನವ್ಯಸನ,
ರಾಜವ್ಯಸನ, ಉತ್ಸಾಹವ್ಯಸನ, ವಿಶ್ವವ್ಯಸನ, ಸೇವಕವ್ಯಸನವೆಂಬ
ಸಪ್ತವ್ಯಸನಿಯಾಗಿ ಷಡೂರ್ಮೆ-ಷಡ್ಭಾವವಿಕಾರದಿಂದ

ಎನ್ನ ತೊಳಲಿಬಳಲಿಸಿ ಅಳಲಿಸಿತಯ್ಯ ಕುಲಗೇಡಿ ಜೀವಮನವು.
ಈ ಜೀವಮನದ ಸಂಗವ ತೊಲಗಿಸಿ ರಕ್ಷಿಸಯ್ಯ.
ದುರಿತಹರ ಪಾಪಹರ ಶ್ರೀಗುರುಲಿಂಗಜಂಗಮವೆ
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ ! ॥ ೨೮ ॥

೧೨೯೮

ಅಯ್ಯಾ, ಮತ್ತೊಂದು ವೇಳೆ
ಅಷ್ಟತನುವಿನ ಮೂಲಹಂಕಾರವನೆತ್ತಿ ಚರಿಸಿತಯ್ಯ.
ಅದೆಂತೆಂದಡೆ : ಆ ಮೂಲಹಂಕಾರವೆ ಷೋಡಶಮದವಾಗಿ
ಬ್ರಹ್ಮನ ಶಿರವ ಕಳೆಯಿತಯ್ಯ,
ವಿಷ್ಣುವನು ಹಂದಿಯಾಗಿ ಹುಟ್ಟಿಸಿತಯ್ಯ.
ಇಂದ್ರನ ಶರೀರವ ಭವದ ಬೀಡು ಯೋನಿದ್ವಾರವ ಮಾಡಿತಯ್ಯ.
ಸೂರ್ಯ ಚಂದ್ರರ ಭವರಾಟಾಳದಲ್ಲಿ ತಿರಿಗಿಸಿತಯ್ಯ.
ಆ ಮದಂಗಳಾವುವೆಂದಡೆ :
ಕುಲಮದ, ಛಲಮದ, ಧನಮದ, ಯೌವನಮದ,
ರೂಪುಮದ, ವಿದ್ಯಾಮದ, ರಾಜ್ಯಮದ, ತಪಮದ,
ಸಂಸ್ಥಿತ, ತೃಣೀಕೃತ, ವರ್ತಿನಿ, ಕ್ರೋಧಿನಿ, ಮೋಹಿನಿ,
ಅತಿಚಾರಿಣಿ, ಗಂಧಚಾರಿಣಿ, ವಾಸಿನಿ ಎಂಬ
ಷೋಡಶಮದವ ಸಂದಿನಲ್ಲಿ ಎನ್ನ ಕೆಡಹಿ,
ಬಹುದುಃಖದಲ್ಲಿ ಅಳಲಿಸಿತಯ್ಯ.
ಗುರುವೆ, ಇಂಥ ದುರ್ಜೀವ ಮನದ ಸಂಗವ ತೊಲಗಿಸಿ ಕಾಯಯ್ಯ
ಕರುಣಾಳುವೆ, ಸಚ್ಚಿದಾನಂದಮೂರ್ತಿ ಭವರೋಗವೈದ್ಯನೆ
ಶ್ರೀಗುರುಲಿಂಗಜಂಗಮವೆ, ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. ॥ ೨೯ ॥

೧೨೯೯

ಅಯ್ಯಾ, ಮತ್ತೊಂದು ವೇಳೆ ಕಾಮವಿಕಾರದಿಂದ ತೊಳಲಿಸಿತಯ್ಯ,
ಕ್ರೋಧದ ಸಂದಿನಲ್ಲಿ ಕೆಡಹಿತಯ್ಯ.
ಲೋಭದ ಪಾಶದಲ್ಲಿ ನೂಂಕಿತಯ್ಯ.
ಮೋಹಮದಮತ್ಸರದ ಬಲೆಯಲ್ಲಿ ಸಿಲ್ಕಿಸಿತಯ್ಯ.
ಸತ್ವರಜತಮವೆಂಬ ತ್ರಿಗುಣಂಗಳಲ್ಲಿ ನುಗ್ಗುನುರಿ ಮಾಡಿತಯ್ಯ.

ಗಂಧ ರಸ ರೂಪು ಸ್ಪರ್ಶನ ಶಬ್ದ ಮೊದಲಾದ
ಸಮಸ್ತ ವಿಷಯದಲ್ಲಿ ಕಂದಿಕುಂದಿಸಿತಯ್ಯ.
ಇಂಥ ದುರಾಚಾರಿ ದುರ್ಜೀವ ಮನವ ಎಂದಿಗೆ ಪರಿಹರಿಸಿಯೊ ?
ಶ್ರೀಗುರುಲಿಂಗಜಂಗಮವೆ,
ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. ॥ ೩೦ ॥

೧೩೦೦

ಅಯ್ಯಾ, ಮತ್ತೊಂದುವೇಳೆ
ಅಡವಿ ಅರಣ್ಯದಲ್ಲಿ ಮಹಾತಪವ ಮಾಡಿ
ಅಜ್ಞಾನದಿ ಬ್ರಹ್ಮಪದ ವಿಷ್ಣುಪದ ರುದ್ರಪದ ಇಂದ್ರಪದ ಪಡೆವೆನೆಂದು,
ಜ್ಞಾತೃ-ಜ್ಞಾನ-ಜ್ಞೇಯವೆಂಬ ಅಜ್ಞಾನತ್ರಯಂಗಳಿಂದ
ಯಮ ನಿಯಮ ಆಸನ ಪ್ರಾಣಾಯಾಮ
ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿಯೆಂಬ
ಅಷ್ಟಾಂಗಯೋಗಾಭ್ಯಾಸದ ಸಂಕೋಲೆಯಲ್ಲಿ ಕೆಡಹಿ
ಕಣ್ಣೀರು-ಶ್ಲೇಷ್ಮವ ಕುಡಿಸಿತಯ್ಯ.
ಇಂಥ ಭವಭಾರಿ ಜಡಜೀವಮನದ ಪರಿಹರದ ಸುಖವೆಂದಿಗೆ ದೊರೆವುದೊ ?
ಶ್ರೀಗುರುಲಿಂಗಜಂಗಮವೆ
ಹರಹರ, ಶಿವಶಿವ, ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. ॥ ೩೧ ॥

೧೩೦೧

ಅಯ್ಯಾ, ಎನ್ನ ಜೀವ ಮನ ಪ್ರಾಣಂಗಳಿಂದ,
ಸಮಸ್ತ ಯುಗಾಂತರದಲ್ಲಿ ಬರಬಾರದ ಯೋನಿಯಲ್ಲಿ ಬಂದೆನಯ್ಯ,
ಉಣ್ಣಬಾರದ ಆಹಾರಂಗಳನುಂಡೆನಯ್ಯ,
ಮಾಡಬಾರದ ವ್ಯವಹಾರಂಗಳ ಮಾಡಿದೆನಯ್ಯ.
ನೂರೊಂದುಕುಲ ಮೊದಲಾದ ಸಮಸ್ತಜಾತಿಯ ಸ್ತ್ರೀಯರ ಭೋಗಿಸಿದೆನಯ್ಯ.
ನುಡಿಯಬಾರದಪವಾದವ ನುಡಿದೆನಯ್ಯ,
ನಡೆಯಬಾರದನಾಚಾರದಲ್ಲಿ ನಡೆದೆನಯ್ಯ,
ತಿರುಗಬಾರದ ದೇಶವ ತಿರುಗಿದೆನಯ್ಯ.
ಹುಸಿಯನೆ ಮನೆಗಟ್ಟಿದೆನಯ್ಯ : ಹುಸಿಯನೆ ಹಾಸಿ ಹೊದ್ದೆನಯ್ಯ.
ಹುಸಿಯನೆ ಆಭರಣವ ಮಾಡಿ ಸರ್ವಾಂಗಕ್ಕೆ ಆಚ್ಛಾದಿಸಿಕೊಂಡೆನಯ್ಯ.

ಇನ್ನೆನಗೆ ಗತಿಮೋಕ್ಷವುಂಟೆ ?
ಎಲೆದೇವ, ನಿನ್ನೊಲುಮೆಯಿಂದ ಏನಾದಡಾಗಲಿ.
ಎನ್ನಲ್ಲಿ ನೋಡಿದಡೆ ಅಣುಮಾತ್ರ ಸುಗುಣವಿಲ್ಲವಯ್ಯ.
ನಿಷ್ಪ್ರಪಂಚ ನಿರಾತಂಕಮೂರ್ತಿ ಶ್ರೀಗುರುಲಿಂಗಜಂಗಮವೆ
ಹರಹರ, ಶಿವಶಿವ, ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. ॥ ೩೨ ॥

೧೩೦೨

ಅಯ್ಯಾ, ಈ ದುರಾಚಾರ ದುರ್ಜೀವ ಮನಪ್ರಾಣಂಗಳಿಂದ
ಗುಹ್ಯಲಂಪಟ.-ಜಿಹ್ವಾಲಂಪಟಕ್ಕೊಳಗಾಗಿ,
ಹೊಟ್ಟೆಬೇನೆ, ತಲೆಬೇನೆ, ಕಣ್ಣುಬೇನೆ, ಮೈಶೂಲೆ
ಹುಣ್ಣು, ಉಷ್ಣ, ಮೂಲವ್ಯಾಧಿ, ಗಿಣ್ಣುರೋಗ, ಉರಿ, ಚಳಿ ಮೊದಲಾಗಿ
ಮೂನ್ನೂರರವತ್ತು ವ್ಯಾಧಿಯ ಹುಳುಗೊಂಡದಲ್ಲಿ ಬಿದ್ದು ತೊಳಲಿದೆನಯ್ಯ.
ಎನ್ನ ತಾಯಿ-ತಂದೆ ಬಂಧು-ಬಳಗ ಒಡಹುಟ್ಟಿದವರು
ಪುತ್ರ ಪುತ್ರಿ ಪೌತ್ರ ಮೊದಲಾಗಿ
ಸಂಸಾರವೆಂಬ ಭವಬಂಧನಬಾಧೆ ಲಂಪಟದಿಂದ
ತೊಳಲಿದೆನಯ್ಯ ಗುರುವೆ.
ಇಂಥ ಅನಾಚಾರದಲ್ಲಿ ವರ್ತಿಸಿ, ಮತ್ತೊಬ್ಬರಿಗೆ ಸದಾಚಾರವ ಹೇಳಿ,
ನಿಂದ್ಯ-ವಂದನೆಯಿಂದ ಸಮಸ್ತಯೋನಿ ಭವರಾಟಾಳದಲ್ಲಿ ತಿರುಗಿದೆನಯ್ಯ !
ಶ್ರೀಗುರುಲಿಂಗಜಂಗಮವೆ, ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. ॥ ೩೩ ॥

೧೩೦೩

ಅಯ್ಯಾ, ಎನ್ನ ಓದಿನ ಓದೆಲ್ಲ ಗಿಳಿ ಓದಯ್ಯ.
ಎನ್ನ ನಡೆನುಡಿಯೆಲ್ಲ ಶುನಿ ಸೂಕರ ಕುಕ್ಕುಟ ಗಾರ್ದಭನಂತಯ್ಯ.
ಎನ್ನ ತಪವೆಲ್ಲ ಹರಿಯಜಸುರರಂತಯ್ಯ.
ಎನ್ನ ಶೀಲವ್ರತಂಗಳೆಲ್ಲ ಮತ್ಸ್ಯಮಂಡೂಕನಂತಯ್ಯ.
ಎನ್ನ ಆಚಾರವಿಚಾರವೆಲ್ಲ ಶ್ವೇತ ಮಾತಂಗನಂತಯ್ಯ.
ಎನ್ನ ದಾನ ಧರ್ಮ ಪರೋಪಕಾರವೆಲ್ಲ
ಕೊಡದ ಮಾರಿ ಕೊಡದ ಮಾರನಂತಯ್ಯ.
ಎನ್ನ ಕಾಯವೆಲ್ಲ ಕಿರಾತನಂತಯ್ಯ, ಎನ್ನ ರೂಪೆಲ್ಲ ಪಿಶಾಚರೂಪಯ್ಯ.
ಇನ್ನೆನಗೆ ನಿಮ್ಮ ಸದ್ಭಕ್ತಿಯ ಸಂಪತ್ತು ಎಂತುಟೊ ? ದೇವ.
ನಿಮ್ಮ ಶರಣರ ಒಲುಮೆಯಿಂದೇನಾವಡಾಗಲಯ್ಯ.

ಶ್ರೀಗುರುಲಿಂಗಜಂಗಮವೆ, ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. || ೩೪ ||

೧೩೦೪

ಅಯ್ಯಾ, ನೀವೇ ಸರ್ವಲೋಕ ಸೃಷ್ಟಿಕರ್ತರೆಂದು ಹೇಳಿತ್ತಯ್ಯ
ವೇದಶಾಸ್ತ್ರಾಗಮ ಸ್ಮೃತಿಗಳು.
ನೀವೇ ಸರ್ವ ಚೈತನ್ಯವೆಂದು ಹೇಳಿದವಯ್ಯ
ತರ್ಕ ವ್ಯಾಕರಣ ಮಾಘ ರಘುವಂಶ ಸರ್ವಜ್ಞನೀತಿ ಮೊದಲಾಗಿ.
ನೀವೇ ನಿಜಮೋಕ್ಷಮಂದಿರವೆಂದು ಹೇಳಿದವಯ್ಯ
ಪ್ರಮಥಗಣಂಗಳ ಎರಡೆಂಬತ್ತೆಂಟುಕೋಟಿ ವಚನಂಗಳು.
ನೀವೇ ಚಿದೈಶ್ವರ್ಯ ಚಿದಾಭರಣ ಚಿದ್ಬ್ರಹ್ಮವೆಂದು ಸೂಚಿಸಿದವಯ್ಯ
ಪರಮಬೋಧಾಮೃತಂಗಳು.
ದೇವಾ, ಎನ್ನಪರಾಧವೆಂಬ ಅಜ್ಞಾನಕ್ಕೆ ನೀವೆ ಜ್ಞಾನಚಕ್ಷುವಯ್ಯ.
ಶ್ರೀಗುರುಲಿಂಗಜಂಗಮವೆ, ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ ! || ೩೫ ||

೧೩೦೫

ನಿಮ್ಮ ಶರಣಗಣಂಗಳ ತೊತ್ತಿನ ತೊತ್ತ ಮಾಡಿಸಯ್ಯ
ಎನ್ನ ಪರಮಾರಾಧ್ಯ.
ನಿಮ್ಮ ಶರಣಗಣಂಗಳ ಭೃತ್ಯಭೃತ್ಯನ ಮಾಡಿರಯ್ಯ
ಎನ್ನ ಸಚ್ಚಿದಾನಂದಮೂರ್ತಿ.
ನಿಮ್ಮ ಶರಣಗಣಂಗಳ ಬಾಗಿಲಕಾಯ್ವ ದ್ವಾರವಾಟಕನ
ಸೇವಕನ ಮಾಡಿರಯ್ಯ ಎನ್ನ ನಿಷ್ಕಳಂಕಮೂರ್ತಿ.
ನಿಮ್ಮ ಶರಣಗಣಂಗಳ ಪಾದರಕ್ಷೆಯಕಾಯ್ವನ
ಭೃತ್ಯನೆಂದೆನಿಸಿರಯ್ಯ ಎನ್ನ ನಿಶ್ಶೂನ್ಯಮೂರ್ತಿ.
ನಿಮ್ಮ ಶರಣಗಣಂಗಳ ಮನೆಯ ಬೀಸುವಕಲ್ಲು ಅರೆವಕಲ್ಲು
ಬಚ್ಚಲಕಲ್ಲು ಮೆಟ್ಟುಗಲ್ಲಮಾಡಿರಯ್ಯ ಎನ್ನ ನಿರಂಜನಮೂರ್ತಿಯೆ.
ಎನ್ನ ಜನ್ಮಾಂತರದ ಭವದುಃಖದ ಉದರಾಗ್ನಿ ಮದಾಗ್ನಿ
ವಡಬಾಗ್ನಿ ಕಾಮಾಗ್ನಿ ಕಾಲಾಗ್ನಿ ಶೋಕಾಗ್ನಿ ಅವಿದ್ಯಾಮಾಯಾಗ್ನಿ
ಮೊದಲಾಗಿ ನೀವಿಕ್ಕಿದ ಕಿಚ್ಚ ನೊಂದಿಸಿರಯ್ಯ, ನಿಮ್ಮ ಧರ್ಮ ನಿಮ್ಮ ಧರ್ಮ
ಶ್ರೀಗುರುಲಿಂಗಜಂಗಮವೆ, ಹರಹರ ಶಿವಶಿವ ಜಯಜಯ ಕರುಣಾಕರ
ಮತ್ಪ್ರಾಣನಾಥ ಮಹಾಶ್ರೀಗುರುಸಿದ್ಧಲಿಂಗೇಶ್ವರ. || ೩೬ ||

■■

# ಅನುಬಂಧ

# ವಚನಗಳ ಅಕಾರಾದಿ

## ದೇಶಿಕೇಂದ್ರ ಸಂಗನಬಸವಯ್ಯನ ಷಟ್‌ಸ್ಥಲ ವಚನಗಳು


ಅ

ಅಂಕೋಲೆಯ ಬಿತ್ತು ೯೩೬
ಅಂಗ ಆಚಾರಂಗ ೨೭೭
ಅಂಗಕ್ಕೆ ಅಷ್ಟಾವರಣ ೧೯೦
ಅಂಗಕ್ಕೆ ಲಿಂಗವ ೪೯೪
ಅಂಗದಲ್ಲಿ ಆಚಾರ ೬೧೩
ಅಂಗದಲ್ಲಿ ಆಚಾರಲಿಂಗ ೭೩೭
ಅಂಗದಲ್ಲಿ ಲಿಂಗ ೬೧೨
ಅಂಗದಿಚ್ಛೆಗೆ ಅನುಸರಣೆ ೩೨೧
ಅಂಗನೆಯ ಸಂಗ ೧೦೧೬
ಅಂಗ ಭವಿಯೊಡನೆ ೩೧೪
ಅಂಗ ಮನ ಪ್ರಾಣ ೭೨೧
ಅಂಗ ಮನ ಪ್ರಾಣ ಹುಸಿ ೧೦೯೧
ಅಂಗಯ್ಯ ಲಿಂಗದ ೨೨೩
ಅಂಗ ಲಿಂಗ ಪದಾರ್ಥ ೪೫೪
ಅಂಗ ಲಿಂಗವ ೯೫೦
ಅಂಗವನರ್ಪಿಸಿದ ೩೯೨
ಅಂಗವನರಿಯದೆ ೨೦೮
ಅಂಗವಲ್ಲದ ಅಂಗ ೧೦೭೦
ಅಂಗವಲ್ಲದ ನಿಲವಿಂಗೆ ೮೨೪
ಅಂಗವಾರರಲಿ ಬೆಳಗ ೫೦೮
ಅಂಗವಿಲ್ಲದ ಬಾಳಿಗೆ ೧೦೯೪
ಅಂಗವಿಲ್ಲದ ಭಕ್ತನ ೨೦೦
ಅಂಗವಿಲ್ಲದೆ ಸಂಗ ೧೭೮
ಅಂಗವೆಂಬುವುದಿಲ್ಲ ೮೯೩
ಅಂತರಂಗದಲ್ಲಿ ಅರಿಯ ೪೬೪
ಅಂತರಂಗದಲ್ಲಿ ಪರಿಪೂರ್ಣ ೬೪೨
ಅಂತರಂಗದವಿರಳ ೬೪
ಅಂತರಂಗವನರಿಯದ ೧೦೨೧
ಅಂತರದನುವ ೧೦೭೬
ಅಂತಾಲಯದೊಳೊಂದಿ ೧೯
ಅಂದುಬಂದ ಮುಸುಕು ೪೫೫
ಅಕಳಂಕ ಮಹಿಮಾ ೭೪
ಅಕ್ಕತಂಗಿಯರ ೭೪೦
ಅಖಂಡಜ್ಞಾನ ೮೪೪
ಅಖಂಡ ಪ್ರಕಾಶ ೩೩೦
ಅಖಂಡ ಬೆಳಗಿನೊಳಗಿರ್ದ ೫೭೧
ಅಖಂಡಲಿಂಗವೆನ್ನ ೪೨೭
ಅಖಂಡಶಿವ ೭೨
ಅಗಮ್ಯ ಅವಿರಳ ೪೨೬
ಅಗಮ್ಯ ಗತಿ ೧೦೫೩
ಅಚ್ಚಗುರುಲಿಂಗ ೧೩೮
ಅಚ್ಚಭಕ್ತನ ೧೧೮
ಅಚ್ಚಮಹೇಶ್ವರನ ೨೪೧
ಅಚ್ಚಮುತ್ತೈದೆ ೬೫೬
ಅಚ್ಚಮುತ್ತೈದೆ ಮೆಚ್ಚಿದ ೨೪೬
ಅಚ್ಚಮುತ್ತೈದೆರೈವರೆನ್ನಿಚ್ಛೆ ೧೫೦
ಅಚ್ಚುಗವಿಲ್ಲದ ೧೨೩೨
ಅಚ್ಯೋತ್ತಿರ್ದ ೩೨೯
ಅಚ್ಯೋತ್ತಿರ್ದ ಅವಿರಳ ೬೯೩
ಅಚ್ಯೋತ್ತಿರ್ದಲಿಂಗ ೬೬೩
ಅಜ್ಞಾನ ಸುಜ್ಞಾನ ೫೮೦
ಅತ್ತತ್ತಲಾದ ೪೩೨
ಅತ್ತಲರಿಯದೆ ೬೧೩
ಲತ್ತಲರಿವರು ೧೨೦೬
ಅತ್ತಲಿತ್ತಲು ೭೧೫

ಅತ್ತಿತ್ತರಿಯದ ೧೮೭
ಅತ್ತಿತ್ತರಿಯದ ನಿತ್ಯಾನಂದ ೪೧೬
ಅತ್ತಿತ್ತಲುಕದೆ ೪೬೧
ಅತ್ತಿತ್ತಲುಗದೆ ೫೪೫
ಅತ್ತಿತ್ತಲುಗದೆ ತನು ೨೬೦
ಅತ್ತಿಯಹಣ್ಣು ೫೮೮
ಅತ್ತೆ ಅಳಿಯನ ೪೮೦
ಅತ್ತೆ ಅಳಿಯನ ಹಡೆದು ೬೩೬
ಅತ್ಯತಿಷ್ಪರ್ದಶಾಂಗುಲ ೬೦೭
ಅರ್ಥ ಪ್ರಾಣ ೧೧೫೪
ಅರ್ಥ ಪ್ರಾಣ ಅಭಿಮಾನ ೨೧೫
ಅದ್ವೈತನಾಗಿ ಜೀವ ೮೭೭
ಅದ್ವೈತವನಳಿದುಳಿದ ೯೩೪
ಅನಂತಕೋಟಿ ೪೮೬
ಅನಂತಜನ್ಮ ತಿರುಗಿ ೮೪೮
ಅನಂತ ಬ್ರಹ್ಮಾಂಡ ೫೯೨
ಅನಾದಿ ಅಸಮಾಕ್ಷ ೮೦
ಅನಾದಿ ನಿರವನು ೬೨
ಅನಾದಿ ಪರಶಿವನ ೧೮೮
ಅನಾದಿ ಪರಶಿವ ೬೪೩
ಅನಾದಿ ಭಕ್ತನು ೧೧೫
ಅನಾದಿ ಮಹಾ ೪೨೨
ಅನಾದಿಯ ಬೆಳಗು ೫೬೬
ಅನಾದಿವಿಡಿದು ಬಂದ ೪೦೭
ಅನಾದಿ ಸಂಸಿದ್ಧ ೫೩೮
ಅನಾದಿ ಸಂಸಿದ್ಧ ನಿರಂಜನ ೨೧೭
ಅನಾದಿ ಸಂಸಿದ್ಧ ನಿರಂಜನಗುರು ೨೭೫
ಅನಾದಿ ಸಂಸಿದ್ಧ ನಿರಂಜನಲಿಂಗ ೪೩
ಅನಾಮಯ ಜಂಗಮ ೧೨೧
ಅನಿತ್ಯ ವನಿತಾದಿ ೬೬೧
ಅನುಪಮಲಿಂಗ ೪೧೭
ಅನುಪಮಲಿಂಗದಲ್ಲಿ ೨೨೮
ಅನುಭಾವ ಮಾಡಬಲ್ಲ ೫೩೧
ಅನುಭಾವವನಾವರಿಸಿ ೯೦೧
ಅನುಭಾವವಿಲ್ಲದ ೪೫೭
ಅನುಭಾವಿ ಅನುಭಾವಿ ೪೫೯
ಅನುಭಾವಿಯ ಭಕ್ತಿ ೫೧೬
ಅನುಭಾವಿಯಾದ ೫೧೭
ಅನುವನರಿಯದ ೪೦೧
ಅನೃತ ಅಸ್ಥಿರ ೧೦೧೭
ಅಪ್ರತಿಮ ಅಖಂಡ ೨೦೬
ಅಪ್ರತಿಮ ಭಸಿತ ೭೧
ಅಪ್ರತಿಮ ಶಿವಯೋಗಿ ೬೦೧
ಅಪ್ರತಿಮ ಸುಖಮಯ ೫೬೦
ಅರ್ಪಿತತ್ರಯದ ೧೨೦೪
ಅರ್ಪಿತ ದಷ್ಟಗೊಂಡು ೧೨೨೯
ಅರ್ಪಿತಾಂಗದ ೩೭೬
ಅರ್ಪಿಸಿಕೊಂಡಿಹೆನೆಂದು ೩೭೩
ಅಭ್ರ ಜಂಜಡವ ೧೦೪೧
ಅಭೇದನಖಂಡ ೧೬೦
ಅಯ್ಯನರಾಣಿಯೆಂಬುದು ೧೮೨
ಅಯ್ಯಾ ಅನಾದಿ ೫೧
ಅಯ್ಯಾ ಅನಾದಿ ಪರಶಿವ ೬೧೧
ಅಯ್ಯಾ ಅಭ್ಯಾಸಕಾಯ ೨೯೫
ಅಯ್ಯಾ ಆದ್ಯರು ೧೨೩೭
ಅಯ್ಯಾ ಆನು ನಿನಗೆಂದು ೪೩೧
ಅಯ್ಯಾ ಈ ಜಾಗ್ರಾವಸ್ಥೆ ೯೪೭
ಅಯ್ಯಾ ಎನಗೆ ಬರುವ ೩೯೬
ಅಯ್ಯಾ ಎನ್ನ ಇಂದ್ರಿಯ ೭೧೧
ಅಯ್ಯಾ ಎನ್ನ ಕರಸ್ಥಲ ೯೭
ಅಯ್ಯಾ ಎನ್ನ ಕಾಯದ ೭೨೯
ಅಯ್ಯಾ ಎನ್ನ ಕಾಯದ ಗತಿಯಿಂದೆ ೭೪೭

ಅಯ್ಯಾ ಎನ್ನ ಕಾಲ ೬೦
ಅಯ್ಯಾ ಎನ್ನ ಕುಲವ ೧೯೬
ಅಯ್ಯಾ ಎನ್ನ ಕೈ ೭೬೩
ಅಯ್ಯಾ ಎನ್ನ ಗುರುವಿನಲ್ಲಿ ೨೯೪
ಅಯ್ಯಾ ಎನ್ನ ಚೌಪೀಠ ೭೫೭
ಅಯ್ಯಾ ಎನ್ನ ತನು ೧೭೦
ಅಯ್ಯಾ ಎನ್ನ ನಡೆ ೬೬೬
ಅಯ್ಯಾ ಎನ್ನ ನಡೆಯಲ್ಲಿ ೬೮೪
ಅಯ್ಯಾ ಎನ್ನ ಪರಮ ೯೮
ಅಯ್ಯಾ ಎನ್ನ ಬೆನ್ನಿಂದೆ ೩೧೯
ಅಯ್ಯಾ ಎನ್ನ ಭಕ್ತಿ ೯೦೫
ಅಯ್ಯಾ ಎನ್ನ ಭಕ್ತಿಯ ೧೫೪
ಅಯ್ಯಾ ಎನ್ನ ಮಂದಿರ ೭೩೨
ಅಯ್ಯಾ ಎನ್ನಲ್ಲಿ ೨೯೭
ಅಯ್ಯಾ ಎನ್ನಲ್ಲಿ ವಂಚನೆ ೬೭೬
ಅಯ್ಯಾ ಎನ್ನ ಸಂಚಿತ ೮೯
ಅಯ್ಯಾ ಎನ್ನ ಸ್ಥಲ ೭೬೮
ಅಯ್ಯಾ ಎನ್ನ ಸ್ಥೂಲ ೫೨೨
ಅಯ್ಯಾ ಎನ್ನಾಧಾರ ೨೯೮
ಅಯ್ಯಾ ಕಾಲತೊಳೆದು ೨೫೯
ಅಯ್ಯಾ ಕೈಯೊಡ್ಡಿ ೭೨೮
ಅಯ್ಯಾ ಗುರುಪ್ರಸಾದ ೭೨೬
ಅಯ್ಯಾ ಗುರುಲಿಂಗ ೨೦೭
ಅಯ್ಯಾ ತನುವಿತ್ತು ೨೭೦
ಅಯ್ಯಾ ತಮ್ಮಲ್ಲರಿಯದೆ ೬೬೭
ಅಯ್ಯಾ ತಾನೇ ತನ್ನ ೭೯೯
ಅಯ್ಯಾ ನಾನು ಆಚಾರ ೮೬೧
ಅಯ್ಯಾ ನಾನು ಗುರು ೭೨೨
ಅಯ್ಯಾ ನಿನ್ನ ೧೦೧
ಅಯ್ಯಾ ನಿನ್ನನು ೭೦೩
ಅಯ್ಯಾ ನಿನ್ನನ್ನೊಂದು ೬೮೮
ಅಯ್ಯಾ ನಿನ್ನ ಬೆಳಗು ೧೧
ಅಯ್ಯಾ ನಿನ್ನ ಬೆಳಗು ಎದ್ದು ೧೦
ಅಯ್ಯಾ ನಿಮಗೆ ೮೬೫
ಅಯ್ಯಾ ನಿಮ್ಮ ೪೧೯
ಅಯ್ಯಾ ನಿಮ್ಮ ಬಸವಣ್ಣ ೭೬೧
ಅಯ್ಯಾ ನಿಮ್ಮ ಬಿಂದುವಿನ ೧೪೯
ಅಯ್ಯಾ ನಿಮ್ಮ ಭೃತ್ಯ ೧೫೭
ಅಯ್ಯಾ ನಿಮ್ಮ ಶರಣಂಗೆ ೧೦೬೨
ಅಯ್ಯಾ ನಿಮ್ಮ ಶರಣ ೭೨೪
ಅಯ್ಯಾ ನಿಮ್ಮ ಶರಣ ನಡೆದಲ್ಲಿ ೬೩೭
ಅಯ್ಯಾ ನಿಮ್ಮ ಶರಣರನುಭಾವ ೭೬೦
ಅಯ್ಯಾ ನಿಮ್ಮ ಶರಣರ ವೇಷವ ೮೬೭
ಅಯ್ಯಾ ನಿಮ್ಮ ಶರಣರೆನಗೆ ೧೩೦
ಅಯ್ಯಾ ನಿಮ್ಮ ಶ್ರೀಪಾದಕ್ಕೆ ೨೭೯
ಅಯ್ಯಾ ನಿಮ್ಮ ಸಮರಸ ೯೦೬
ಅಯ್ಯಾ ನಿಮ್ಮಂಗ ೮೮೨
ಅಯ್ಯಾ ನಿಮ್ಮೊಳಗಿರ್ದ ೮೮೩
ಅಯ್ಯಾ ನೀ ಮಾಡಲಾಯಿತ್ತು ೯೩೮
ಅಯ್ಯಾ ನೆಲಜಲಾಗ್ನಿ ೫೨೩
ಅಯ್ಯಾ ಭಕ್ತಲಿಂಗ ೧೨೩೩
ಅಯ್ಯಾ ಭಕ್ತಿ ವಿರಹಿತ ೧೬೮
ಅಯ್ಯಾ ಮಹದಾನಂದ ೭೮
ಅಯ್ಯಾ ಶರಣನೆಂದಡೆ ೭೮೦
ಅಯ್ಯಾ ಶರಣಸ್ಥಲವ ೬೫೯
ಅಯ್ಯಾ ಶ್ರದ್ಧಾಭಕ್ತಿ ೧೫೬
ಅಯ್ಯಾ ಶ್ರೀ ಗುರುವಿನ ೪೯
ಅಯ್ಯಾ ಶ್ರೀ ಮಹಾ ೬೬
ಅಯ್ಯಾ ಸತ್ಪ್ರಕಾಶ ೬೩
ಅಯ್ಯಾ ಸದ್ರೂಪವಾದ ೬೧
ಅಯ್ಯಾ ಸೂರ್ಯನು ೯೩೭
ಅಯ್ಯಾ ಸೊಸೆಯೆಂದರಿಯ ೧೧೩೨

| | |
|---|---|
| ಅಯ್ಯಾ ಹಾದಿಯ | ೭೧೨ |
| ಅರಣ್ಯದೊಳಗಾದ | ೧೦೦೦ |
| ಅರಸಿಕೊಂಡಾಗಿ ಬಂದಲ್ಲಿ | ೯೭೦ |
| ಅರಸಿಕೊಂಡು ಬಂದ | ೮೩೫ |
| ಅರಿದ ಶರಣ | ೩೦೬ |
| ಅರಿದು ಅರಿದವನಲ್ಲ | ೧೫೨ |
| ಅರಿದು ಒಂದಾದ | ೯೮೦ |
| ಅರಿದು ಬಂದು | ೧೨೩೫ |
| ಅರಿದು ಮರೆದವ | ೬೧೭ |
| ಅರಿದೆನೆಂಬ ಅರಿವಿಗೆ | ೬೪೭ |
| ಅರಿಯದೆ ಆಗಿ | ೧೧೦೦ |
| ಅರಿಯಬಲ್ಲ ಹಿರಿಯ | ೩೬೨ |
| ಅರಿಯಬಾರದ ಅರಿವು | ೮೨೨ |
| ಅರಿಯಬಾರದ ಘನವ | ೯೦೭ |
| ಅರಿಯಬಾರದ ನೋಡಬಾರದ | ೫೬೧ |
| ಅರಿಯಬಾರದ ಸ್ನೇಹವ | ೯೨೦ |
| ಅರಿಯಲಿಲ್ಲದ ಅರಿವಿಂಗೆ | ೨೯೩ |
| ಅರಿಯಲಿಲ್ಲದ ಅರಿವು | ೫೯ |
| ಅರಿಯಲಿಲ್ಲದ ಬೆಳಗು | ೪೯೮ |
| ಅರಿಯಲಿಲ್ಲದ ಮರೆಯ | ೬೪೧ |
| ಅರ್ಪಿತವನರಿಯದ | ೩೫೫ |
| ಅರುವ ಮರೆದು | ೫೭೬ |
| ಅರುವಿನ ಮಂದಿರ | ೧೯೪ |
| ಅರೆಮರುಳಿನಿಂದಾದ | ೧೦೪೨ |
| ಅಲಕ್ಷ ಅನಾಮಯ | ೩೨೦ |
| ಅಲ್ಲಿಯೇ ಹುಟ್ಟಿ | ೭೮೪ |
| ಅಲುಪ್ತ ಶಕ್ತಿ | ೯೦೪ |
| ಅವರ್ಣದಾಗಿಂಗೆ | ೧೦೨೭ |
| ಅವರ್ಣಾತ್ಮಕರ | ೧೦೮೫ |
| ಅವನಿ ಮಡದಿ | ೧೦೩೭ |
| ಅವ್ವಾ ಬಸ್ಸಿರೆ | ೭೩೮ |
| ಅವಿರಳ ಪರಬ್ರಹ್ಮ | ೮೩೭ |
| ಅವಿರಳ ಪರಶಿವ | ೫೮ |
| ಅವಿರಳ ಜ್ಞಾನ ಕ್ರಿಯೆ | ೧೯೧ |
| ಅವಿರಳಾನಂದ ಮುಖ | ೪೫೩ |
| ಅಷ್ಟತನುವಿನ | ೫೯೯ |
| ಅಷ್ಟಮದ ಸೂತಕ | ೨೩೩ |
| ಅಷ್ಟವಿಧಾರ್ಚನೆ | ೬೬೯ |
| ಅಷ್ಟಾಂಗವಾದ ಮಹೇಶ್ವರ | ೩೨೬ |
| ಅಸಮ್ಯಗಂಭೀರ | ೪೨೮ |
| ಅಳಿದೊಡೆಯರು | ೨೬೧ |
| ಅಳಿಯಸಂತೆ ಬಂದಪ್ಪನ | ೮೩೪ |


## ಆ


| | |
|---|---|
| ಆಕಾರ ನಿರಾಕಾರವಾಗಿ | ೧೦೭ |
| ಆಕಾರದನುವಿಡಿದು | ೨೦೯ |
| ಆಕಾಶತತ್ವದಿಂ | ೧೨೦೨ |
| ಆಕಾಶದ ಬಣ್ಣವ | ೯೯೮ |
| ಆಕಾಶದ ಬೆಳಗು | ೧೬೨ |
| ಆಕಾಶದಲ್ಲಿರ್ದ | ೫೫೮ |
| ಆಗಬಾರದಾಗಿಂಗೆ | ೧೪ |
| ಆಚಾರಂಗವಾಗಿ | ೬೮೭ |
| ಆಚಾರಂಗವಾಗಿ | ೮೫೧ |
| ಆಚಾರ ಗುರುಶಿವ | ೪೨೯ |
| ಆಚಾರ ನಿಷ್ಠೆಯೆ | ೨೯೯ |
| ಆಚಾರಲಿಂಗಕ್ಕೆ | ೧೧೯೧ |
| ಆಚಾರಲಿಂಗದೊಳ | ೮೪೭ |
| ಆಚಾರಲಿಂಗದೊಳಗಿಪ್ಪೆವೆಂಬರು | ೭೬೯ |
| ಆಚಾರಲಿಂಗಾನುಭಾವವಲ್ಲಿ | ೮೯೯ |
| ಆಚಾರವನರಿಯದ | ೧೧೮೮ |
| ಆಚಾರವನಾಚಾರ | ೪೨೧ |
| ಆಚಾರವಿಲ್ಲದಂಗ | ೬೨೧ |

ಆಚಾರವೇ ಗುರುವಾಗಿ ೧೧೯೨
ಆಚಾರವೇ ಗುರು ೯೭೭
ಆಚಾರವೇ ಪ್ರಾಣವಾದ ೧೦೨೦
ಆಚಾರಶೂನ್ಯ ಅಂಗ ೨೫೩
ಆಚೆಯಲ್ಲಿ ಸ್ಥಾವರ ೯೯೫
ಆಟವಳಿದು ಆರೂಢ ೯೩೧
ಆಡಬಂದ ಮೂರ್ತಿಗೆ ೨೮೨
ಆಡಬಂದವಳು ಅಲ್ಲಿಂದ ೬೮೨
ಆಡಬಲ್ಲವನಾಡಿದರೆ ೪೧೧
ಆಡಬಹುದು ಅನಂತ ೨೮೩
ಆಡಾಡಿ ಉಂಡು ೧೪೫
ಆಡಿ ದಣಿವರಿಯವಯ್ಯ ೨೮೦
ಆಡು ಕುರಿಯ ಸುಂಗಿ ೮೯೬
ಆಡುವರಯ್ಯಾ ಅಂಗವ ೩೬೦
ಆಡುವರಯ್ಯಾ ಆಚಾರ ೫೭೭
ಆಡುವೆನಯ್ಯಾ ಎನ್ನೊಡೆಯ ೧೪೦
ಆಣವಮಲವ ಕರುಣ ೩೦೦
ಆತ್ಮನು ಪರಮಾತ್ಮ ೪೭೦
ಆತ್ಮನೇ ಲಿಂಗವೆಂದು ೪೦೮
ಆದಾದಿಷ್ಟಮುಖದಿಂ ೩೩೩
ಆದಿ ಅನಾದಿಯಿಂದ ೪೫
ಆದಿ ಅನಾದಿಯಿಂದ ೫೩೭
ಆದಿ ಅನಾದಿಯಿಲ್ಲ ೨
ಆದಿ ಅನಾದಿವಿಡಿದು ೭೭
ಆದಿ ಗುರುವನಪ್ಪಿ ೧೦೯
ಆದಿ ಗುರುವಿನ ಕೈಯಿಂದೆ ೬೦೦
ಆದಿ ಭಕ್ತಿವಿಡಿದು ೨೦೨
ಆದಿ ಮಧ್ಯ ಅವಸಾನ ೭೨೫
ಆದಿ ಮುಖದಿಂದೆ ೪೨೪
ಆದಿಯ ಆಧಾರ ೭೯೦
ಆದಿಯ ಕುಳವನು ೧೦೬೭
ಆದಿಯ ಸಲ್ಲಸು ೧೮೦
ಆದಿಯ ಪ್ರಸಾದ ೩೪೧
ಆದಿಯ ಲಿಂಗವ ೨೨೭
ಆದಿಯಿಂದ ಹುಟ್ಟಿ ೯೬೭
ಆದ್ಯರನುಭಾವ ೨೯೨
ಆದ್ಯರನುಭಾವವನರಿದು ೨೯೧
ಆದ್ಯರ ವಚನ ೧೦೦೭
ಆದ್ಯರೊಚನ ೫೩೦
ಆಧಾರ ಚಕ್ರದಲ್ಲಿ ೪೮೩
ಆನೆಯ ವೇಷವ ೯೫೩
ಆಯತವಾದಲ್ಲಿ ೧೧೫೬
ಆರಾರುಂಗದ ಸಂಗಕ್ಕೆ ೬೬೫
ಆರಾರರಿಂದೆ ಮೀರಿದ ೪೭೪
ಆರಾರ ಮೇಲಿಂದ ೯೮೯
ಆರಾರು ಸಕಲ ೬೨೭
ಆರು ಕಮಲದ ೪೭೧
ಆರು ಬಣ್ಣದ ೧೯೫
ಆರೆತ್ತಿನ ಹರದಂಗೆ ೪೮೧
ಆರೈಕ್ಯವನರಿದು ೮೦೭
ಆಸೆಯುಳ್ಳರೆ ಭಕ್ತ ೬೫೮
ಆಸೆಗೆ ವೇಷವ ೯೫೨
ಆಸೆಗೆ ಹುಟ್ಟಿದ ೨೨೦
ಆಹಾ ಎನ್ನ ಪುಣ್ಯ ೪೨

### ಇ, ಈ

ಇಂದ್ರಿಯಂಗಳ ೧೨೨೪
ಇಂದ್ರಿಯಂಗಳಲ್ಲಿ ೬೩೪
ಇಂದ್ರಿಯಂಗಳುಂಟು ೧೧೪೩
ಇಂದ್ರಿಯವನರಿಯದೆ ೬೫೧
ಇಂದ್ರಿಯ ವಿಷಯಂಗಳ ೧೨೩೧
ಇಂದ್ರಿಯಾನಂದ ೬೨೩
ಇಕ್ಷುವಿನ ಭಾವ ೮೯೫

ಇಕ್ಷುವಿನೊಳಗೆ ೧೦೬೮
ಇಡಹೇಳಿದೊಡವೆಯ ೯೬೫
ಇತರನರಿಯದ ೨೦೧
ಇರ್ದ ಸಂಸಾರವ ೯೮೭
ಇಪ್ಪತ್ತೈದು ಬಿಳಿಯ ೨೪೨
ಇರುಳಿನಿಂದೆದ್ದು ೫೦
ಇಲಿ ಬೆಕ್ಕ ನುಂಗಿ ೭೮೬
ಇಷ್ಟಲಿಂಗವನರಿಯದೆ ೩೦೪
ಇಷ್ಟಲಿಂಗವ ೨೫೨
ಇಷ್ಟಲಿಂಗವನು ೨೨೪
ಇಹದ ಪ್ರಸಾದ ೧೧೭೮
ಇಹಪರದ ೮೧೪
ಇಳೆಯ ಮೇಲೆ ೨೪೩
ಈ ತನುವುಳ್ಳ ೧೦೧೮
ಈ ಪೃಥ್ವಿಯಲ್ಲಿ ೬೬೮
ಈ ಸಂಸಾರ ಸುಖವ ೧೫

ಉ, ಊ

ಉಚ್ಛಿಷ್ಟವ ಕಳೆದು ೮೯೨
ಉಚ್ಛಿಷ್ಟವ ಕಳೆದುಳಿದು ೭೨೨
ಉದಕದಲ್ಲುದಯಿಸಿದ ೫೭೯
ಉಪಾಧಿವಿಡಿದು ೩೬೪
ಉರಿಕರ್ಪುರಸಂಗ ೬೩೮
ಉರಿಯ ಸೀರೆಯ ೫೦೫
ಉರಿಯೊಳು ಮುಳುಗಿದ ೫೩೨
ಉಲುಹನಡಗಿಸಿ ೫೫೫
ಊರನೆಲ್ಲ ಸುಟ್ಟು ೯೭೫
ಊರ ಸುಟ್ಟು ೪೦೪
ಊರು ಕೆಟ್ಟು ಹೋಗಿ ೮೫೫
ಊರೆಂಬುದರಿಯ ೬೬೨
ಊರೊಳಗಿನ ಬೆಂಕಿ ೧೦೩೮

ಎ, ಏ, ಐ

ಎಂಟರೊಳಗೆ ಬಂದ ೯೯೨
ಎಚ್ಚರವಿರಲೆಂದು ೩೯೩
ಎಚ್ಚರಿಸಿಕೊಟ್ಟ ೩೮೯
ಎನ್ನ ಕಾಲು ನಡೆ ೧೧೧
ಎನ್ನ ಕಾಯದ ಕಳೆ ೭೮೯
ಎನ್ನ ಕಾಯದಲ್ಲಿ ೪೮೪
ಎನ್ನ ತನುವಿನಲ್ಲಿ ೧೬೧
ಎನ್ನ ಪೃಥ್ವಿ ಸಂಬಂಧ ೪೬
ಎನ್ನ ಮನೆಯ ೬೭೮
ಎನ್ನರುಹಿನಲ್ಲಿ ೪೮
ಎನ್ನ ಸುಚಿತ್ತದ ೭೬೪
ಎನ್ನ ಅಂಗ ಮನ ೧೨೪
ಎನ್ನಾಧಾರಚಕ್ರ ೮೭
ಎರಡು ಕಾಲಿನಿಂದೆ ೯೬೩
ಎಲೆ ಅಯ್ಯಾ ೨೭೮
ಎಲೆ ಶಿವನೆ ೩೦
ಎಲೆ ಸಂಸಾರಿ ೧೨೨
ಏನೂ ಇಲ್ಲದ ೮೨೫
ಏನೆಂಬೆನೆಂತೆಬೆನೆನ್ನ ೨೪
ಏಳು ಚಿಂತೆಯ ೧೦೭೯
ಏಳು ಸುತ್ತಿನ ಐದು ೪೮೭
ಐದಂಗದಂಗನೆಯಾನು ೧೭೫
ಐದು ಬಣ್ಣದ ಪಕ್ಷಿ ೧೧೨೭
ಐವತ್ತಾರು ದೇಶ ೧೧೩೬

ಒ

ಒಂದನಾಡ ಹೋಗಿ ೬೪೯
ಒಂದು ವಿಷಯಕೆ ೯೮೮
ಒಂದು ಹಿಡಿತೆಗೆ ೩೯
ಒಂದೆರಡು ಬಾಗಿಲ ೫೬೨
ಒಂಬತ್ತನೊಳಕೊಂಡು ೧೧೫೮

ಒಡದು ಮೂಡಿ ನಿಗುರಿ ೨೩೯
ಒಡಲಿಚ್ಛೆಗೆ ಉಪಾಧಿ ೧೧೧೮
ಒಡೆತನದ ಪೆರ್ಚುಗೆ ೧೧೦೪
ಒತ್ತೆಯ ಕಾರ್ಯಕಾಗಿ ೫೬೮
ಒಪ್ಪಿ ಮಾಡಿದ ೯೮೯
ಒಲಿದರೆಂಬ ಹರಿ ವಿಧಿ ೭೦೨
ಒಳಗಣ ಗಂಟಬಿಚ್ಚಿ ೧೦೫೮
ಒಳಗಿನ ಮಾಟ ೯೬೮
ಒಳಗಿಲ್ಲದ ಹೊರಗಿಲ್ಲದ ೮೬೪
ಒಳಹೊರಗೆ ತಂದು ೬೯೪
ಒಳ್ಳೆಯತನಕ್ಕೆ ೩೮೭

**ಕ, ಖ**

ಕಂಗಳ ಕರುಳನರಿಯದೆ ೬೯೭
ಕಂಗಳ ಕಾಂತಿಯ ೩೬೧
ಕಂಗಳಲ್ಲಿ ಹೆಜ್ಜೆ ೬೦೪
ಕಂಗಳು ಬದುಕುತಲಿ ೧೧೨
ಕಂಡ ಕುರುಹು ೧೦೫೫
ಕಂಡ ಮಂಡಲದಲ್ಲಿ ೫೫೧
ಕಂಡರೆ ಮನೋಹರ ೬೪೫
ಕಂಡು ತಪ್ಪಿಸಿಕೊಂಡು ೧೨೨೮
ಕಂಡೆನೆಂಬುದು ಸಟೆ ೧೦೯೦
ಕಂಡೆನೆಂಬುವರು ೧೧೬೮
ಕರ್ಕಸನ ಮಗಳು ೧೧೪೯
ಕಚ ನವೀನ ಕುಚ ೨೫೧
ಕಚ್ಚಕಳೆದಕ್ಕಿಯ ೧೦೦೧
ಕಟ್ಟಕಡೆಯಲಿಂದ ೬
ಕಡಗೊಂಡ ಧನ ೨೬೨
ಕಣ್ಣಿನಿಂದ ಕಾಲಕಳೆದ ೭೮೭
ಕಣ್ಣಿಲ್ಲದ ಗುರುವಿನ ೪೦೯
ಕಣ್ಣು ನಾಸ್ತಿಯಾದಲ್ಲಿ ೯೨೧
ಕತ್ತಲ ಸುತ್ತಿನಲ್ಲಿ ೧೪೪
ಕತ್ತಲಾಗಿ ಹೋಯಿತ್ತು ೯
ಕತ್ತಲೆ ಬೆಳಗಿನೊಳಿಪ್ಪ ೪೫೧
ಕತ್ತಲೆಯ ಕಳೆದು ೯೦
ಕತ್ತಲೆಯ ಕಾಳ ೫
ಕತ್ತಲೆಯ ಕೈಮರೆ ೩೬೯
ಕರ್ತು ಗುರುಮೂರ್ತಿ ೫೬
ಕತ್ತೆಯ ತಾಯಿ ೭೫೧
ಕದಳಿಯ ಫಲದಂತೆ ೧೦೪೫
ಕನಕ ಮನೆಯೊಳಗೆ ೨೨೨
ಕರ್ಪುರದ ಸುಖವನು ೯೪೩
ಕಬ್ಬುನವನರಸಿದರೆ ೧೧೦೩
ಕಮಲದ ಬಂಡುಂಬ ೫೯೪
ಕರ್ಮವ ಜರಿದು ೬೦೮
ಕರ್ಮೇಂದ್ರಿಯಂಗಳೈದರ ೬೯೫
ಕರ್ಮೇಂದ್ರಿಯ ಪಂಚ ೧೨೧೦
ಕರ ಮನ ಭಾವದ ೭೭೧
ಕರಸ್ಥಲದಲಿಂಗ ೭೭೦
ಕರಸ್ಥಲಲಿಂಗ ಮನ ೩೩೧
ಕರಿಕಾಳಿ ಕಂಠದಲಿ ೧೮
ಕರಿಯ ಕಾಳಿನೊಳಗೆ ೧೬೫
ಕರಣತ್ರಯದ ೪೧೫
ಕರುಣೋದಕವ ೯೨೩
ಕಲ್ಯಾಣದೊಳಗುಳ್ಳ ೮೬೦
ಕಲ್ಯಾಣವೆಂಬ ಪಟ್ಟಣ ೭೩೦
ಕಲ್ಲೊಳಗಣ ಬೆಂಕಿ ೧೦೪೮
ಕಷ್ಟ ಕಡೆಗಾಣದ ೧೨೨೫
ಕಷ್ಟಬಟ್ಟು ಕಾಣಲರಿಯದೆ ೭೬೬
ಕಷ್ಟಯೋಗಿಗಳ ೪೬೨
ಕಸಗೂಡಿದ ಭೂಮಿ ೩೪೬
ಕಸವಿಲ್ಲದ ಭೂಮಿ ೯೩೨
ಕಾಡಡವಿಯ ಕಡೆಯ ೧೦೮೭

ಕಾಡಡವಿಯೊಳೋರ್ವ ೪೧
ಕಾಣಬಾರದ ಕಳೆ ೫೯೬
ಕಾಣಬಾರದ ಲಿಂಗ ೧೦೫
ಕಾಣಬಾರದ ಲಿಂಗ ೧೫೯
ಕಾಣಿಸಿಕೊಳ್ಳದ ೧೦೬೦
ಕಾಣಿಸುವ ಕಮಲ ೫೪೪
ಕಾಮ ಉಲಿವುದು ೧೨೮
ಕಾಮದಲ್ಲಿ ಮುಳುಗಿ ೮೪೫
ಕಾಮನಾಸ್ತಿಯಾದಲ್ಲಿ ೯೧೯
ಕಾಮವ ತೊರೆದಾತ ೬೫೭
ಕಾಮವನುರುಹಿ ೮೭೪
ಕಾಮವಿಲ್ಲದ ಸುಖಿ ೬೧೯
ಕಾಮವಿಲ್ಲದ ಭಕ್ತಂಗೆ ೧೨೭
ಕಾಯಕರ್ಮಕೂಟಿಗಳಿಗೆ ೮೬೮
ಕಾಯ ಖಂಡಿಸದೆ ೧೧೯೪
ಕಾಯದ ಕತ್ತಲೆ ೬೩೨
ಕಾಯದ ಕರ್ಮವ ೩೪೮
ಕಾಯದ ಕರಸ್ಥಲ ೬೬೪
ಕಾಯದ ಕರಸ್ಥಲದಲ್ಲಿ ೭೦೯
ಕಾಯದ ಕೈಗಳ ೩೯೭
ಕಾಯ ದಣಿವರಿಯದು ೧೧೭
ಕಾಯದ ಬಣ್ಣವ ೨೪೪
ಕಾಯದಲ್ಲಿ ಕರುಣ ೬೧೦
ಕಾಯದಲ್ಲಿ ಕಳೆಯ ೧೧೩೦
ಕಾಯದಲ್ಲೊಬ್ಬನ ಮೆಚ್ಚಿ ೬೭೭
ಕಾಯದ ಸುಖವ ೮೮೧
ಕಾಯದೊಳಗೆ ಲಕ್ಷ ೫೦೭
ಕಾಯ ಭಾವ ಕಾಯ ೮೦೧
ಕಾಯ ಮನ ಪ್ರಾಣ ೯೩೯
ಕಾಯ ಮನ ಭಾವ ೩೮೦
ಕಾಯವ ಕರ್ಮದಲ್ಲಿ ೭೯೨
ಕಾಯವನರ್ಪಿಸಲರಿಯ ೩೭೪
ಕಾಯವನರ್ಪಿಸಿ ೨೮೬
ಕಾಯವನರಿಯದೆ ೬೪೬
ಕಾಯವನಿತ್ತು ೧೧೬೭
ಕಾಯವನು ದುರಾಚಾರ ೬೫೦
ಕಾಯವಳಿದು ಲಿಂಗ ೩೨೭
ಕಾಯವುಳ್ಳನ್ನಕ್ಕರ ೭೪೬
ಕಾಯವುಳ್ಳನ್ನಕ್ಕರ ಲಿಂಗ ೭೩೫
ಕಾಯಲಿಂಗವಮಾಡಿ ೭೯೩
ಕಾಯವ ಕರ್ಮದಲ್ಲಿ ೭೯೨
ಕಾಯವನೊಳಗಿಟ್ಟು ೭೮೫
ಕಾಯವಿಲ್ಲದ ಶರಣ ೭೭೭
ಕಾಯಶುದ್ಧಲಿಂಗಾನುಭಾವಿ ೪೫೬
ಕಾರಣಮಾತನ ೬೦೯
ಕಾಲಕಾಲಕ್ಕೆ ೭೫
ಕಾಲತ್ರಯದ ೧೦೭೩
ಕಾಲತ್ರಯವಿರಹಿತ ೪೯೧
ಕಾಲವನರ್ಪಿಸಿ ೩೯೧
ಕಾಲಲ್ಲಿ ಕಣ್ಣನಿಟ್ಟು ೫೨೫
ಕಾಲಲ್ಲಿ ತಲೆಯ ೪೩೯
ಕಾಲಸುಖವನರಿಯ ೧೧೨೨
ಕಾಲಿಲ್ಲದ ಕಾಲಲ್ಲಿ ೭೪೮
ಕಾಲಿಲ್ಲದ ಗಮನ ೯೦೮
ಕಾಲಿಲ್ಲದ ಗುರು ೩೮೧
ಕಾಲಿಲ್ಲದ ನಡೆ ೬೪೦
ಕಾಲಿಲ್ಲದ ನಡೆ, ಕೈಯಿಲ್ಲದ ೮೧೩
ಕಾಲಿಲ್ಲದವೆಂಬುದು ೭೫೫
ಕಾಲು ಕಾಣಿಸಿಕೊಳ್ಳದೆ ೮೭೮
ಕಾಲುತೊಳೆದು ಬಾಯಿ ೧೭೧
ಕಾಲೊಳಗಿನ ಮುಳ್ಳು ೫೬೯
ಕಾಷ್ಠದಿಂದುದಿಸಿದ ೧೦೬೯

ಕಾಳುದೈವಕ್ಕೆ ೩೧೦
ಕಿಚ್ಚಸುಟ್ಟು ೫೦೬
ಕುಲಮದ ಶೂನ್ಯ ೭೨೩
ಕುಲಮದವಲ್ಲಿ ೧೦೧೯
ಕುರುಹಿಲ್ಲದ ತೆರಹಿಲ್ಲದ ೧೧೭೦
ಕುರುಹಿಲ್ಲದ ಸಿರಿ ೧೧೮೧
ಕುಸುಮವ ವಾಸಿಸಿ ೧೧೪೪
ಕೂಳವನರಿಯದೆ ೮೭೧
ಕೂಸುಳ್ಳ ವೇಶ್ಯೆ ೯೫೬
ಕೆಂಡದ ಹೆಡಿಗೆಯ ೧೬೩
ಕೆಸರೊಳಗೆ ನಿಂದು ೨೮೮
ಕೇಳಿಕೊಂಡು ಸಗುಣ ೧೩೪
ಕೈಯಲ್ಲಿ ಕುರುಹು ೧೦೫೭
ಕೊಂಡು ಕೊಟ್ಟವ ೮೮೪
ಕೊಟ್ಟು ಕೊಂಡೆನೆಂಬುದೊಂದು ೩೯೦
ಕೊಟ್ಟು ಕೊಂಬುವರು ೪೫೦
ಕೊಳ್ಳುವಲ್ಲಿ ಒಂದು ೧೦೩೩
ಕೋಣನ ತಾಯ ೫೪೩
ಕೋಣನ ನೆರಳ ೭೪೩
ಕೋಣನ ಹತ್ತಿ ೨೪೭
ಕೋಣ ಹಣೆಪಟ್ಟಿ ೧೦೭೮
ಕೋಪ ಮರವೆ ೯೭೮
ಕೋಳಿಯ ಕೂಗಿನಲ್ಲಿ ೭೩೯
ಕ್ರಿಯಾಗಮ್ಯಲಿಂಗವ ೨೪೯
ಕ್ರಿಯಾಗುರುವಿನಿಂದೊದಗಿ ೮೪೧
ಕ್ರಿಯಾಘನಗುರು ೩೩೮
ಕ್ರಿಯಾಘನಗುರುವಿರ್ದಂತೆ ೯೭೪
ಕ್ರಿಯಾನುಭಾವಿ ೧೧೫೨
ಕ್ರಿಯಾಶಕ್ತಿಸಮೇತ ೫೭೩
ಕ್ಷುತ್ತುವರತಲ್ಲಿ ೯೧೮
ಖರ್ಜೂರ ಸಾರಾಯ ೧೦೮೪

ಗ, ಘ

ಗಂಡಗಿಕ್ಕದೆ ಮಾಡಿ ೨೬೩
ಗಂಡನ ಚಿತ್ತವ ೫೪೯
ಗಂಡನ ತಾಳಿಯ ೧೭೪
ಗಂಡನ ಸುಖದುಃಖ ೮೮೬
ಗಂಡನ ಸುಖಬಲ್ಲ ೯೧೭
ಗಂಡನಿಂದ ಗಳಿಸಿ ೩೧೧
ಗಂಡನಿಂದೆ ಹುಟ್ಟಿದ ೨೩೬
ಗಂಡಸು ಹೆಂಗಸು ೨೩೫
ಗಂಡು ಹೆಣ್ಣಲ್ಲದಾರು ೪೨೦
ಗಂಧವನಡಗಿಸಿ ೧೨೪೨
ಗಂಭೀರ ಗುರುವೆನ್ನ ೬೫
ಗಂಭೀರ ಗುಹೆ ೭೦೧
ಗಗನದಾವರೆ ೩೦೩
ಗಜಬಜೆಯ ನೀಗಿ ೫೩೫
ಗತಿಮತಿಯೊಳೊಡವೆರೆವ ೮೨೭
ಗಾರುಡಿಗನ ಸಂಗವ ೯೦೨
ಗಿಳಿಯ ಗರ್ಭ ೭೫೨
ಗುಂಜರಂಜಿನಮೋಹ ೨೮೪
ಗುಣಯುಕ್ತನಾಗಿ ೮೭೩
ಗುರುಕರಜಾತ ೨೧೨
ಗುರುಕರಜಾತನಾದ ೧೧೭೭
ಗುರುಕರಜಾತರಾಗಿ ೩೪೪
ಗುರುಕರಜಾತರೆಂದು ೫೨೯
ಗುರು ನಿರಂಜನ ೮೨
ಗುರುಪಾದೋದಕ ೮೪೦
ಗುರುಪ್ರಸಾದ ೭೩೩
ಗುರುಪ್ರಸಾದಿ ೩೭೯
ಗುರುಭಕ್ತನಾದ ೧೨೬
ಗುರುಭಕ್ತಿಯ ೧೯೩
ಗುರುಮುಖದಿಂದುದಯ ೮೮

ಗುರುಮುಖದಿಂದೊಗೆದ ೩೭೧
ಗುರುಮುಟ್ಟಿ ಗುರು ೧೧೯೩
ಗುರುವ ಕಂಡಾತ ೮೩೦
ಗುರುವ ಕಂಡು ೩೨೮
ಗುರುವ ಕಂಡು ಶರಣೆಂದವರು ೮೦೮
ಗುರುವನರಿದು ೬೭೧
ಗುರುವರನಿಂದುದಿಸಿ ೫೪೭
ಗುರುವಿನಲ್ಲಿ ಗುಣ ೪೪೬
ಗುರುವಿನಿಂದುದಯವಾಗಿ ೯೧
ಗುರುವಿನಿಂದುದಯ ೬೪೮
ಗುರುವಿನಿಂದುದಯವಾಗಿ ೯೬೯
ಗುರುವಿನ ಪ್ರಸಾದ ೧೪೧
ಗುರುವಿಲ್ಲದ ಶಿಷ್ಯ ೮೩೬
ಗುರುವೆ ಶರಣು ೪೦
ಗುರುವು ಲಿಂಗವ ೯೭೬
ಗುರುವುಳ್ಳನ್ನಕ್ಕರ ೮೨೯
ಗುರುಲಿಂಗ-ಚರಶೇಷ ೪೬೦
ಗುರುಲಿಂಗಜಂಗಮ ೧೨೧೮
ಗುರುಲಿಂಗಜಂಗಮದ ೨೬೬
ಗುರುಲಿಂಗಜಂಗಮದ ಭಕ್ತಿಯ ೬೭೦
ಗುರುಲಿಂಗಜಂಗಮವನು ೧೬೭
ಗುರುಲಿಂಗವ ೩೧೩
ಗುರು ಲಿಂಗವು ೨೦೪
ಗುರುಶಿಷ್ಯ ಲಿಂಗ ೧೧೦
ಗುರುಶಿಷ್ಯರಿಲ್ಲ ೩
ಗುರುಸೋಂಕು ೧೧೯೦
ಗುರುಸ್ಥಲವುಳ್ಳನ್ನಕ್ಕರ ೮೦೩
ಗೆಲ್ಲಸೋಲೆಂಬ ಕಲಿಧರ್ಮ ೧೦೦೪
ಘಟಿತನನೆಯನಂತರ ೧೦೨
ಘನಗಂಭೀರಲಿಂಗ ೬೭೯
ಘನಮನವನೊಳಕೊಂಡು ೯೪೨
ಘನಮಹಾಪ್ರಕಾಶ ೫೭
ಘನಮಹಿಮ ೧೨೦
ಘನಮಹಿಮರನು ೭೬೨
ಘನಸಾರಹೇಮ ೧೧೧೧
ಘ್ರಾಣದೊಳಗೆ ಗಂಧ ೮೧೯

ಚ

ಚಂಗಳೆಯಮ್ಮನ ೮೯೮
ಚಂದ್ರಮೂಡಿದನಂತೆ ೩೬
ಚಂದ್ರಮೌಳಿಯೆನಿಸಿ ೧೦೮೦
ಚಂದ್ರಸೂರ್ಯರ ೩೦೯
ಚರಣಗತಿ ಸದ್ಗಮನ ೭೧೦
ಚರಲಿಂಗಗುರು ೪೪೫
ಚಲುವಲಿಂಗಯ್ಯ ೫೭೪
ಚಿತ್ತವನಡಗಿಸಿ ೮೦೬
ಚಿತ್ಕಲೆ ನೀಲಮ್ಮ ೯೨೫
ಚಿತ್ಕಾಯದ ತಿರುಳ ೯೧೨
ಚಿದಾತ್ಮನೇ ಅಂಗ ೮೭೯
ಚಿದ್ಘನ ಪ್ರಸಾದ ೭೨೦
ಚಿದ್ಬಿಂದುಮುಖ ೧೨೦೭

ಜ

ಜಂಗಮವಿರಹಿತ ೩೬೭
ಜಡಶೀಲಗಳ ಹೊತ್ತು ೨೩೪
ಜನನ ಸ್ಥಿತಿ ಮರಣ ೧೨೨೩
ಜಲಧಿಯೊಳಗೆ ಬಿದ್ದ ೧೧೪೬
ಜಾಗ್ರದಲ್ಲಿ ಉದರಾವಸರ ೩೧
ಜಾಗ್ರಪತಿಯ ವ್ಯವಹಾರ ೪೯೭
ಜಾಗ್ರ ಸ್ವಪ್ನ ಸುಷುಪ್ತಿ ೩೪೩
ಜಾಗ್ರವಲಂಬನವನು ೧೧೬೦
ಜಾತಿ ಗೋತ್ರ ಕುಲ ೭೦೫
ಜೀವ ಪರಮ ೯೦೩

ಜೀವ ಪರಮರನೊಂದು ೫೧೦
ಜ್ಞಾನವಂತರಂಗಕಿತ್ತು ೯೭೨
ಜ್ಞಾನವಿಕೃತಭಾವ ೧೦೩೧
ಜ್ಞಾನಿ ಗುರುವರನ ೧೨೧೯

ಡ

ಡಂಭಕರೊಂದುಲಿಂಗ ೨೮೫

ತ

ತಂಗಿಯಾ ಗಂಡನೆನ್ನ ೧೦೮೨
ತಂದೆತಾಯಿಗಳಿಂದುದಯ ೪೬೮
ತಂದೆ ತಾಯಿ ಬಂಧು ೪೪೪
ತಂದೆ ತಾಯಿಯು ೮೩೮
ತಂದೆಯ ಮಗನ ೬೫೪
ತಂದೆಯ ಹೆಸರ ೨೩೮
ತತ್ವತ್ರಯಂಗಳು ೧೧೭೨
ತಥ್ಯ ತಾನೆಂಬ ೬೨೨
ತಥ್ಯ ಮಿಥ್ಯ ನಿರಂಜನ ೯೪೪
ತನ್ನ ಕಾರ್ಯಕ್ಕಾಸ್ಪದ ೫೦೦
ತನ್ನ ಕಾಲು ಹೇಸಿಕೆ ೧೦೧೨
ತನ್ನ ತಂದುಕೊಟ್ಟ ೫೨
ತನ್ನ ತಾನರಿದು ೬೨೪
ತನ್ನನರಿದು ಹಿಡಿದು ೧೦೪೪
ತನ್ನನರಿಯದೆ ೬೫೨
ತನ್ನ ನೆವದಿಂದೆ ೯೩೩
ತನ್ನ ಸೇವಿಸಿ ೩೫೨
ತನ್ನಿಂದ ತಾನುದಿಸಿದ ೧೦೮೬
ತನಿರಸವ ತುಂಬಿರ್ದ ೧೧೧೯
ತನ್ನಿಂದ ತಾನೆ ೭
ತನ್ನಿಂದಾದ ಚನ್ನ ೭೯
ತನು ಇಂಪುಗೊಂಡು ೧೦೬
ತನುಕ್ರಿಯೆಯಲ್ಲಿ ೮೫೦
ತನುಮನಭಾವ ೬೯೦
ತನುರಹಿತವಾಗಿ ೭೦೮
ತನುರುಚಿಯ ಮನ ೯೮೧
ತನುಲೋಭಿಯ ೩೬೬
ತನುವ ದಂಡಿಸಿ ೨೧೦
ತನುವಿಡಿದು ಮಾಡಿದ ೩೫೮
ತನುವಿನಂತೆ ತನು ೧೦೨೩
ತನುವಿನಮೋಹ ೫೭೫
ತನುವಿಲ್ಲದ ಘನ ೮೧೨
ತನುವು ಸವೆಯದು ೬೭೫
ತನುಶುದ್ಧಿಯ ೧೧೯೭
ತನುಶೂನ್ಯವಾಗಿ ೧೦೮೮
ತನುಶೂನ್ಯಶರಣ ೭೭೯
ತನುಸೂತ್ರ ಚೈತನ್ಯ ೧೧೪
ತಪ್ಪಿಸಿ ಒಪ್ಪಿಸಿ ೫೪೫
ತಮ್ಮನ ಮದುವೆ ೧೨೫
ತಲೆಯಿಲ್ಲದ ೧೧೧೦
ತಾ ದೇವರೆನಿಸಿ ೨೨೬
ತಾನಿಲ್ಲದ ತಪನಿಧಿ ೧೧೨೪
ತಾನು ತನ್ನ ವಿನೋದ ೪೧೩
ತಾನು ತಾನಾಗಿ ತನ್ನ ೭೯೪
ತಾನು ಪ್ರಸಾದಿ ೩೭೮
ತಾನೆಂದರಿದ ಶರಣಂಗೆ ೬೩೦
ತಾನೆಂಬುದ ತೋರಲಿಲ್ಲ ೧೦೭೧
ತಾನೇ ತನ್ನ ೯೩೫
ತಾನೇ ಶಿವನೆಂದು ೭೧೯
ತಾ ಭಕ್ತನಾಗಿ ಭವಿಯ ೨೬೮
ತಾವು ಸಗುಣದಲ್ಲಿ ೭೯೭
ತಾಮಸಗೊಂಡು ೧೦೨೪
ತಾಮಸವ ತರಿದು ೫೧೧
ತಾಮಸವಿಲ್ಲದ ೯೯೦

ತಾಯಿ ಮಗಳ ಸಂಗವ ೧೧೦೯
ತಾಯಿಯ ತಸ್ನೆದೆಯಲ್ಲಿ ೮೨೧
ತಾಯಿಯಲ್ಲಿ ಬಯಸಿ ೪೪೦
ತಾಯಿಯೆಂದರಿಯ ೧೦೧೩
ತಿಲ ಎರಂಡಿಲ ೧೧೧೨
ತ್ರಿಪುರವ ಸುಟ್ಟ ೬೭
ತ್ರಿವಿಧಾನುಗ್ರಹ ೩೮೪
ತುಂಬಿದಪುರ ೨೧
ತೂರ್ಯಾನಂದಮಯ ೬೯೧
ತೆರಹಿಲ್ಲದ ಕುರು ೨೩೧
ತೋರಿಕೆಯ ಕೊಂಬನೆ ೧೧೧೩
ತ್ರೈಮಲದಾಸೆಯ ೧೦೧೧

## ದ, ಧ

ದಂಡೆ ತೊಂಡಲವ ೧೦೪೩
ದಶಪಂಚಮಾಯಾ ೨೦೫
ದಶವಾಯುಗಳ ೪೨೫
ದಾರಿ ಮೂರರ ೬೮೬
ದಾಸೋಹಿ ದಾಸೋಹಿ ೩೬೫
ದಿನವ ಬಲ್ಲವರು ೯೯೩
ದಿವದಿವಸಾನು ೧೭೬
ದಿವದೊಳಗೆ ದ್ಯುಮಣಿ ೧೧೫೯
ದಿವಾಕರನ ದಿನಕರ್ಮ ೧೨೦೦
ದುರ್ಜನ ರಾಜ ೧೦೩೦
ದೇಶದೇಶವ ೧೧೧೬
ದೇಶಿಕ ಶಿವಯೋಗಿ ೧೧೧೫
ದೇಹಭಾವ ಶೂನ್ಯ ೮೩೩
ದ್ವಾದಶೇಂದ್ರಿಯಂಗಳು ೩೦೮
ಧನಗಂಡನ ೧೦೭೪
ಧನದಲ್ಲಿ ಮಕಾರ ೬೭೪
ಧನರತಿಯುಳ್ಳ ೫೫೭
ಧರೆ ಗಗನದಲ್ಲಿರ್ದು ೨೬೪
ಧರೆಯನು ಧೂಳದಲ್ಲಿ ೧೨೨೦

## ನ

ನಕಾರಪಂಚಾಕ್ಷರವ ೧೧೩೪
ನಕಾರದೊಳಗೆ ೧೧೩೩
ನಕಾರ ಮಕಾರ ೯೪೫
ನ ಗುರೋರಧಿಕಂ ೪೭
ನ ಗುರೋರಧಿಕಂ ೯೭೧
ನಚ್ಚುಮಚ್ಚಿನ ೪೮೫
ನಡುಗಡಲಲ್ಲಿರ್ಪ ೫೮೧
ನಡುಮನೆ ಕಂಬ ೪೮೨
ನಡೆಗತೀತವಾದ ೯೪೧
ನಡೆದವರ ನುಡಿಯ ೧೦೧೪
ನಡೆದು ಕಂಡವರೆಂದು ೧೪೩
ನಡೆನಡೆದು ನಡೆಗಳು ೭೯೮
ನಡೆನಡೆದು ನಡೆಗಳು ೯೨೮
ನಡೆನಡೆದು ನಡಗರ ೩೪೭
ನಡೆನುಡಿಯಿಲ್ಲದ ೨೫೬
ನಡೆನೋಟ ಚೈತನ್ಯ ೧೯೨
ನಡೆಯನಿತ್ತು ನಡೆ ೫೩೬
ನಡೆಯಲರಿಯದ ೫೯೫
ನಡೆಯಲರಿಯದೆ ೫೮೨
ನಡೆಯಲಾರದವರು ೮೦೦
ನಡೆಯಿಲ್ಲದ ನಡೆ ೯೪೦
ನಡೆಯೆನಗೆ ಬಾರದ ೮೬೩
ನಡೆವ ದಾರಿಯಲ್ಲೆನ್ನ ೧೩೭
ನನ್ನ ನಾನರಿಯದ ೮೩೯
ನರಮುನಿಗಳರಿಯರು ೨೫೭
ನವಖಂಡಮಂಡಲ ೫೪೨
ನವಭಕ್ತಿರಸವ ೯೮೬

| | |
|---|---|
| ನವರತ್ನಕ್ಕೆ ಬಂಗಾರ | ೧೦೬೬ |
| ನಾಗರಪಂಚಮಿ ನಾರಿ | ೭೫೩ |
| ನಾಚಿಕೆಯಿಲ್ಲದ ಹೆಂಡತಿ | ೧೭೨ |
| ನಾದ ಬಿಂದು ಕಲಾ | ೫೩ |
| ನಾದ ಬಿಂದು ಕಲಾತೀತ | ೮೬೯ |
| ನಾದ ಬಿಂದು ಕಲಾತೀತವಾದ | ೧೧೮೩ |
| ನಾದ ಬಿಂದು ಕಲಾಸಂಚ | ೨೪೮ |
| ನಾದ ಬಿಂದು ಕಳೆ | ೫೭೨ |
| ನಾದ ಬಿಂದು ಕಳೆಯ | ೧೦೩ |
| ನಾದ ಸುಖವಿಡಿದು | ೪೪೧ |
| ನಾಲ್ಕು ಇಪ್ಪತ್ತುನಾಲ್ಕು | ೫೧೮ |
| ನಾಲ್ಕು ಬಿಟ್ಟು ನೋಡುವದು | ೪೦೫ |
| ನಾಲ್ಕು ಯುಗದ | ೯೯೬ |
| ನಾವು ಗುರುಲಿಂಗ | ೩೪೦ |
| ನಾಸಿಕದಲ್ಲಿ ಆಚಾರ | ೪೩೪ |
| ನಿಚ್ಚ ನಿರ್ಮಲ | ೩೫೭ |
| ನಿಜಕ್ರಿಯಾಸುಜ್ಞಾನ | ೬೧೮ |
| ನಿಜಲಿಂಗಮುಖ | ೫೪ |
| ನಿಜಲಿಂಗೈಕ್ಯ | ೯೦೦ |
| ನಿಜಲಿಂಗೈಕ್ಯ ನಿಜ | ೭೯೧ |
| ನಿಜವಕೊಟ್ಟು | ೯೮೨ |
| ನಿತ್ಯಪದದಲ್ಲಿ | ೩೪೯ |
| ನಿತ್ಯಾನಂದ ನಿಜ | ೫೫ |
| ನಿತ್ಯಾನಂದ ನಿರ್ಮಲ | ೬೦೩ |
| ನಿತ್ಯಾನಂದ ಶರಣ | ೬೩೧ |
| ನಿತ್ಯಾನಂದ ಸಂಪಿತ್ಸ್ವಭಾ | ೩೪೨ |
| ನಿತ್ಯಾನಂದ ಸುಖ | ೧೨೯ |
| ನಿನ್ನಾಣತೆಗೆ ಇಂಬು | ೩೨ |
| ನಿಮಗಂದಾದ ಕಾಯದ | ೮೮೦ |
| ನಿಮ್ಮರ್ಪಿತದನುಪಿಂಗಲ್ಲದೆ | ೩೯೮ |
| ನಿಮಿಷವಳಿದು | ೮೪೩ |
| ನಿಮ್ಮಿಂದೆ ನೀವಿಟ್ಟು | ೨೯ |
| ನಿರ್ಮಲಜಾಗ್ರದ | ೯೧೧ |
| ನಿರ್ಮಲನಿಜಾಂತ | ೬೮ |
| ನಿರ್ಮಲವಾದ ಕುಸುಮ | ೫೩೩ |
| ನಿರ್ಮಲವೆಂಬ | ೫೬೩ |
| ನಿರಂಜನ ನಿತ್ಯಾನಂದ | ೧೦೫೨ |
| ನಿರಾಕಾರಲಿಂಗ | ೧೦೮೧ |
| ನಿರಂಜನಲಿಂಗ | ೮೦೨ |
| ನಿರುಪಮಲಿಂಗ | ೧೧೨೩ |
| ನಿಷ್ಠೆಯಿಲ್ಲದ ಪೃಥ್ವಿ | ೩೨೫ |
| ನೀತಿಯನರಿಯದ | ೨೭೪ |
| ನೀರಗೋಳಿಯ | ೮೮೫ |
| ನೀರಜದೊಳಗೊಂದು | ೧೧೪೮ |
| ನೀರು ಕಲೆತ | ೮೨೬ |
| ನೀರೊಳಗಿನ ಕಿಚ್ಚೆದ್ದು | ೯೦೯ |
| ನೀರೊಳಗೆ ನೀರು | ೧೧೫೧ |
| ನೀರೊಳು ಬಿದ್ದು | ೪೫೨ |
| ನೀಲಲೋಚನೆಯಮ್ಮ | ೫೨೦ |
| ನೀಲಲೋಚನೆಯಮ್ಮನವರು | ೭೩೧ |
| ನುಡಿಯಲಮ್ಮೆನಯ್ಯಾ | ೧೦೫೦ |
| ನುಡಿವನಯ್ಯಾ | ೧೦೪೯ |
| ನೆಲ ಗಗನಕ್ಕೆ | ೩೧೨ |
| ನೆನವು ನಿರಂತರ | ೩೧೭ |
| ನೆಲದ ಮೇಲೆ | ೧೧೭೯ |
| ನೆಲದ ಮೇಲೆ ಲಿಂಗ | ೫೧೪ |
| ನೇಮಿಸಿದ ನಿಲುವಿಂಗೆ | ೩೨೪ |
| ನೋಟಕ್ಕೆ ನಿಲುಕದ | ೧೦೨೬ |
| ನೋಟಲಂಪಟರಿಗೆ | ೫೮೩ |
| ನೋಡ ಬಂದ ನಲ್ಲಂಗೆ | ೪೧೪ |
| ನೋಡಬಾರದ ಬೆಳಗು | ೧೨ |
| ನೋಡಲಿಲ್ಲದ ನುಡಿ | ೬೮೫ |

ನೋಡಿ ಬೇಡಿಕೊಂಡ ೧೧೦೧
ನೋಡಿರೆ ನೋಡಿರೆ ೩೫

ಪ

ಪಂಕ ಶಿಲೆ ಸ್ಫಟಿಕ ೬೨೬
ಪಂಚಭೌತಿಕ ೧೧೮೬
ಪಂಚಾಕ್ಷರಿಯ ೧೦೦
ಪಂಚಾಕ್ಷರವೇ ೯೫
ಪಂಚಾಕ್ಷರವೇ ಪ್ರಾಣ ೯೬
ಪಂಚಾಕ್ಷರ ಸಂಬಂಧ ೯೨
ಪಂಚಗೋಮಯವ ೬೯
ಪಂಚಮೂರ್ತ್ತಿಯ ೭೫೦
ಪಂಚವಕ್ತ್ರದ ೪೭೭
ಪಂಚವರ್ಣ್ಣಗೆ ೪೩೫
ಪಂಚಸ್ಥಾನದ ಕಳೆಯ ೪೯೯
ಪಂಚೇಂದ್ರಿಯ ೧೧೮೫
ಪತಿಯ ಮೋಹದ ೧೧೩೯
ಪತಿಮೋಹಪೂರ್ಣೆ ೧೮೪
ಪಡೆದುಂಬ ಕಾಲಕ್ಕೆ ೪೧೦
ಪರಧನ ಪರಸ್ತ್ರೀ ೨೭೬
ಪರಧನಕ್ಕೆ ಇಚ್ಛೈಸುವ ೧೦೧೦
ಪರಧನಕ್ಕೆ ಹರಿವ ೮೭೦
ಪರಮಗುರು ೭೩
ಪರಮಗುರುವಿನಿಂದ ೨೫೦
ಪರಮ ಚೈತನ್ಯ ೨೯೦
ಪರಮ ಶಾಂತ ೫೪೧
ಪರಶಿವತತ್ವಾನುಭಾವಿ ೭೧೮
ಪರಶಿವನಾಮ ೯೯
ಪರಿಪೂರ್ಣ ಪ್ರಕಾಶ ೭೫೪
ಪರಿಪೂರ್ಣಭಾವಿ ೧೧೭೪
ಪರಿಪೂರ್ಣಮಯ ೯೨೬
ಪರುಷದ ಹೊರೆಯ ೧೧೪೧
ಪರುಷ ಕಬ್ಬಿಣ ೧೨೪೦
ಪಾರಮಾರ್ಥ ಜಂಗಮ ೪೩೬
ಪಾವಕವು ಅಪ್ಪು ೧೧೮೭
ಪುರುಷನ ಪುಣ್ಯ ೫೫೦
ಪುರುಷನ ಸೋಂಕದೆ ೧೨೧೩
ಪೂರ್ವದಂದುಗ ೨೧೪
ಪೂರ್ವದಂದುಗವನಳಿದು ೯೬೦
ಪೂರ್ವದೈವರ ೨೪೫
ಪೈರವಿಲ್ಲದ ೧೦೩೫
ಪ್ರಕಾಶ ಪ್ರವರ್ತದ ೭೭೪
ಪ್ರಣತಿಯೊಳು ೩೨೩
ಪ್ರಸಾದಮುಖ ೨೮೧
ಪ್ರಸಾದವ ಪಡೆದ ೩೩೭
ಪ್ರಸಾದವ ಪಡೆದವರೆಂದು ೪೦೨
ಪ್ರಸಾದವ ಬಲ್ಲವ ೭೩೪
ಪ್ರಸಾದಿ ಪ್ರಸಾದಿ ೩೫೯
ಪ್ರಸಾದಿಯಂಗದಲ್ಲಿ ೪೦೩
ಪ್ರಸಾದಿಯ ಕಾಯ ೩೯೯
ಪ್ರಾಣಲಿಂಗತ್ವ ೪೨೩
ಪ್ರಾಣಲಿಂಗತ್ವ ೫೬೫
ಪ್ರಾಣಲಿಂಗದ ಬೆಳಗ ೪೬೯
ಪ್ರಾಣಲಿಂಗದಲ್ಲರತು ೯೧೫
ಪ್ರಾಣಲಿಂಗವ ಕಂಡ ೪೭೩
ಪ್ರಾಣಲಿಂಗವನು ೫೧೫
ಪ್ರಾಣಲಿಂಗವಾದ ೪೬೬
ಪ್ರಾಣಲಿಂಗವಾದ ಬಳಿಕ ೫೪೮
ಪ್ರಾಣಲಿಂಗಸಂಬಂಧಿ ೫೧೩
ಪ್ರಾಣವ ಪಿಂಗಿ ೨೭೧
ಪ್ರಾಣವೇ ಜಂಗಮ ೨೧೧
ಪ್ರಾಣವೇ ಲಿಂಗವಾದ ೫೮೪

ಪೃಥ್ವಿ ಅಂಶವ ೨೫೫
ಪೃಥ್ವಿಯಂಗದಲ್ಲಿ ೬೨೨
ಪೃಥ್ವಿಯಂಗವಾದ ೯೫೧
ಪೃಥ್ವಿಯಂಶವನಳಿದು ೩೭೫
ಪೃಥ್ವಿಯ ಗುಣ ೬೯೬
ಪೃಥ್ವಿಯನರಿಯಲು ೧೨೦೯
ಪೃಥ್ವಿಯ ಹಿಡಿದು ೪೦೬
ಪೃಥ್ವಿಯಲ್ಲಿ ತಲೆಯ ೩೮೩
ಪೃಥ್ವಿಯಲ್ಲಿ ಮಾಯೆ ೩೪
ಪೃಥ್ವಿಯೇ ಅಂಗವಾದ ೧೦೮
ಫಲವೃಕ್ಷತರು ೭೧೪

## ಬ, ಭ

ಬಂಗಾರವನೊಲ್ಲೆ ೧೭೯
ಬಂದುದ ಹಿಂದಕ್ಕೆಂದು ೧೦೭೨
ಬಂದುದು ನಿಂದುದು ೯೪೯
ಬಂದು ನಿಂದಲ್ಲಿ ೮
ಬಚ್ಚಲದ ತಂಪಿನಲ್ಲಿ ೧೦೨೯
ಬಡಿದೆಬ್ಬಿಸಿ ಹಾಲನೆರೆದರೆ ೧೩೬
ಬಯಲ ಪುರುಷನ ೫೮೯
ಬಯಲ ಭೂಮಿಯ ೯೧೩
ಬಯಲಬೀಜ ೮೧೮
ಬಯಲ ರಥ ೯೯೭
ಬಯಲಿಂದ ಬಂದ ೧೧೦೮
ಬಯಲು ನಲುಗಿ ೯೩೦
ಬರಬಾರದ ಬರವು ೬೧೫
ಬರಿ ಕೋಟಲೆ ೧೦೩೨
ಬಸವಣ್ಣ ಎನ್ನ ೮೫೭
ಬಸವಣ್ಣನ ಕರುಣ ೯೨೪
ಬಸವಣ್ಣನ ಕೃಪೆ ೮೯೭
ಬಸವಣ್ಣನ ಪಾದವ ೫೧೯
ಬಸವಣ್ಣನ ಮಗನ ೮೫೯
ಬಸವಣ್ಣನ ಮುಖ ೮೫೮
ಬಸವಣ್ಣನ ರೂಪವ ೮೫೬
ಬಸವ ಶಗಣೆ ೭೦
ಬಹಿರ್ಮುಖಸುಖ ೩೬೩
ಬಹಿರಂಗದ ಬಳಕೆ ೧೦೭೫
ಬಹಿರಂಗವನಿಟ್ಟು ೧೨೩೯
ಬಹಿರಂಗದಲ್ಲಿ ೧೧೮೪
ಬಹುಜನ್ಮಭಾರಿ ೨೨೧
ಬಾಗಿ ಬಳುಕಿ ೧೩೩
ಬಾರಯ್ಯ ಬಾರಯ್ಯ ೧೮೬
ಬಾಲ ಯವ್ವನ ವೃದ್ಧ ೧೦೬೧
ಬಾಹಿರ ಬಾಳುವೆ ೧೫೩
ಬಿಂದುಪ್ರಕಾಶ ೨೯೬
ಬಿಟ್ಟಾಡುವ ಮಡದಿ ೨೮೯
ಬಿಳಿಯ ಶೃಂಗಾರ ೧೭೩
ಬೆಂದವ ಬೇಯಿಸ ಬಂದ ೧೧೦೭
ಬೆಂದು ಹೋಯಿತ್ತೆ ೩೮
ಬೆಡಗಿನ ಕೀಲವಿಡಿದು ೧೪೨
ಬೆಳಗಿನ ಬೆಳಗಿನ ೩೦೫
ಬೆಳಗಿಲ್ಲದ ಬೆಳಗಿನ ೭೬೫
ಬೇಕೆನ್ನದ ಬೇಡೆನ್ನದ ೬೫೩
ಬೇಡಲಿಲ್ಲದ ಭಕ್ತ ೧೧೬
ಬೇರಿಲ್ಲದ ಗಂಡಂಗೆ ೬೮೩
ಬೇರಿಲ್ಲದ ಲಿಂಗವ ೮೫೩
ಬೇರಿಲ್ಲದ ಲಿಂಗ ೬೨೯
ಬೇರಿಲ್ಲದ ವೃಕ್ಷಕ್ಕೆ ೩೯೫
ಬೊಮ್ಮ ತಿಮ್ಮ ೪೬೩
ಬ್ರಹ್ಮನಂತೆ ವಿಷ್ಣು ೧೧೩೭
ಬ್ರಹ್ಮನಂಶವ ಸವರಿ ೪೮೮
ಬ್ರಹ್ಮಮಂಡಲವ ೪೯೬
ಭಂಗಭರಿತರ ೧೨೩೮

ಭಕ್ತನ ಶ್ರದ್ಧೆ ೧೬೬
ಭಕ್ತನ ಸಮರಸ ೮೪೬
ಭಕ್ತನಾಚಾರ ೧೦೦೯
ಭಕ್ತನೆಂದು ಯುಕ್ತ ೧೦೦೬
ಭಕ್ತಭವಿಯಾಗಲರಿಯ ೧೯೮
ಭಕ್ತಿ ಜ್ಞಾನ ವೈರಾಗ್ಯ ೯೮೫
ಭಕ್ತಿ ಜ್ಞಾನ ವೈರಾಗ್ಯ ೧೧೯೯
ಭಕ್ತಿತ್ರಯದಲ್ಲಿ ೧೯೭
ಭಕ್ತಿಯ ಮಾಡುವವರ ೯೬೨
ಭಕ್ತಿಯಲ್ಲಿ ಬಂದು ೮೧೫
ಭಕ್ತಿಯೆಂಬುದು ೧೧೬೫
ಭಕ್ತಿಯೇ ವಿಗ್ರಹ ೯೯೯
ಭಕ್ತಿವಿಹೀನ ೩೮೮
ಭಕ್ತಿಸ್ಥಲವುಳ್ಳ ೧೦೮೯
ಭವಿಯ ಕಳೆದು ೨೬೯
ಭವಿಯ ಸಂಪರ್ಕ ೯೯೧
ಭಾವಮರೆದು ೪೦೦
ಭಾವವುಳ್ಳರೆ ೯೯೪
ಭಿಕ್ಷಕ್ಕೆ ಬಂದಾ ಚರಮೂರ್ತಿ ೩೮೬
ಭಿನ್ನ ಯೋಗಮಾರ್ಗಿ ೧೫೫
ಭಿನ್ನವಳಿದು ತನ್ನ ೬೯೮
ಭಿನ್ನವಿಲ್ಲದೆ ಶರಣೆಂಬೀ ೧೩೨
ಭುವನದ್ವಯ ತತ್ವದ್ವಯ ೭೦೬
ಭುವನ ಬ್ರಹ್ಮಾಂಡ ೧೧೪೦
ಭುವನ ಸಾರಾಯ ೮೧೦
ಭುವನಾದಿ ಜನಿತ ೪೪೮
ಭುವನಾದಿ ಜನಿತವ ೩೫೦
ಭವನಾಪಸಂಪರ್ಕ ೩೨೨
ಭೂತ ಚಿದ್ಭೂತವಾಗಿ ೯೪೬
ಭೂತ ಪಂಚಕದ ೭೩೬
ಭೂಪಾಲನ ಹೆಂಡತಿ ೫೦೪
ಭೂ ಪೃಥ್ವಿಯ ೨೦೩
ಭೂಮಿಯ ಕುಟ್ಟಿ ೪೮೯
ಭೂಮಿಯನುರುಹಿ ೫೨೧
ಭೂಮಿಯ ನೆಳಲಲ್ಲಿ ೫೩೯
ಭೂಮಿಯ ಮೇಲೆ ೪೯೫
ಭೂಮಿಯ ಹಿಡಿದು ೬೩೩
ಭೂಮಿಯೊಳಗಿಂದ ೪
ಭೂಲೋಕದೊಳಗೆ ೧೧೨೯
ಭ್ರಷ್ಟಬೀಜದಾಗು ೧೧೪೨

ಮ

ಮಂಗಳದೆಸೆವಿಡಿದು ೭೮೨
ಮಠಮಾನ್ಯ ೨೨೫
ಮಡಿಕೆ ಮಣ್ಣಾಗಲರಿಯದು ೯೩
ಮಡುವಿನೊಳು ೧೬೪
ಮಣ್ಣ ಹಿಡಿದು ೮೧೬
ಮಣ್ಣಿನೊಳುನಿಂದು ೧೧೯
ಮಣ್ಣುಕೋಟೆ ೧೦೮೩
ಮದಮಲದ ಸೋಂಕ ೩೫೬
ಮದಮೋಹ ೮೭೫
ಮದವಳಿದು ೧೯೯
ಮದುವೆಯ ಗಂಡ ೯೧೬
ಮದುವೆಯ ಪತ್ನಿ ೭೪೫
ಮನದಲ್ಲಿ ಉಕಾರ ೬೭೩
ಮನದಾಸೆಯೆಂಬ ೨೬
ಮನಮಾಯಾ ೫೭೦
ಮನವಳಿಮುಳಿದ ೫೨೮
ಮನವ ನಿಲ್ಲಿಸಿ ೨೩
ಮನವ ಮುಳುಗಿಸಿ ೮೪೨
ಮನವರಿಯದ ೧೧೭೧
ಮನವೆಂಬ ಮಾಯೆ ೨೫
ಮನೆಪುರುಷ ೬೮೦

| | | | |
|---|---|---|---|
| ಮರೆದು ಕೊಟ್ಟು | ೩೫೩ | ಮಿಥ್ಯಭಾವವನು | ೧೨೦೮ |
| ಮರೆದು ಮಾಡಿ | ೩೧೮ | ಮಿಥ್ಯವಿಲ್ಲದ ಭಕ್ತ | ೩೮೨ |
| ಮಲತ್ರಯದ | ೧೨೧೫ | ಮುಗ್ಧನಾಗಿ ಮುಕ್ತಿಯ | ೧೧೫೩ |
| ಮಹದಲ್ಲಿ ಮನ | ೮೧೧ | ಮುಟ್ಟಬಾರದ ತಲೆ | ೨೩೭ |
| ಮಹದಾನಂದ ಸದ್ಗುರು | ೭೬ | ಮುಟ್ಟು ತಟ್ಟು | ೭೭೫ |
| ಮಹಾಘನ ಗಂಭೀರ | ೧೧೩ | ಮುತ್ತ ತೆತ್ತಿಸಿದ | ೫೬೭ |
| ಮಹಾಘನ ಪರಮ | ೮೬೬ | ಮುತ್ತಿಸೈದೊಂದೆಳೆಯ | ೧೮೧ |
| ಮಹಾಜ್ಞಾನಗುರು | ೮೪೯ | ಮುತ್ತುಂಡ ಉದಕವ | ೧೧೪೫ |
| ಮಹಾಜ್ಞಾನಿ ಜಂಗಮ | ೭೮೩ | ಮುತ್ತೈದೆ ಸತ್ಯಕ್ಕ | ೧೭೭ |
| ಮಹಾಬಯಲುಡ | ೧೧೮೨ | ಮುನ್ನೂರು ಮೂನ್ನೂರು | ೧೦೩೪ |
| ಮಹೇಶ್ವರತತ್ವ | ೯೧೪ | ಮುನ್ನೊಂದು ಲಿಂಗ | ೬೩೯ |
| ಮಾರ್ಗಕ್ರೀಗಳ | ೮೧೭ | ಮೂವರು ಮುಟ್ಟದ | ೨೧೩ |
| ಮ್ಹಾರ್ಗಕ್ರಿಯೆಗಳ | ೭೦೪ | ಮೂರ್ತಿಬ್ರಹ್ಮ ಪಿಂಡ | ೮೬ |
| ಮಾರ್ಗದ ನೀರು | ೧೦೭೭ | ಮೂರು ಕಾಲ ಮಣಿಯ | ೭೪೪ |
| ಮಾಟಕೂಟದ ಭಾವ | ೧೧೦೫ | ಮೂರು ತಾವಿನ ಬೆಂಕಿ | ೨೦ |
| ಮಾಟವನರಿಯೆ | ೯೨೭ | ಮೂರು ತನುವಿನ | ೫೪೦ |
| ಮಾಟದೊಳು ಮರೆದ | ೮೪ | ಮೂರು ತನುವಿನ ಮೇಲೆ | ೮೯೦ |
| ಮಾಡದಿರು ಅನಿತ್ಯಕ್ಕೆ | ೯೬೧ | ಮೂರು ಬಾವಿಯ | ೯೫೯ |
| ಮಾಡಲರಿಯೆನಯ್ಯಾ | ೮೬೨ | ಮೂರು ಮಂಡಲದಲ್ಲಿ | ೫೫೯ |
| ಮಾಡಲರಿಯೆ ಮನ | ೮೫೨ | ಮೂರು ಮನೆಯೊಳು | ೬೩೫ |
| ಮಾಡಲಿಲ್ಲದ ತನು | ೭೯೬ | ಮೂರು ಮುಖದಗ್ನಿಯ | ೩೩೪ |
| ಮಾಡಿ ಕಾಣುವದು | ೩೬೮ | ಮೂರು ಲಕ್ಷದ ಮೇಲೆ | ೧೧೬೧ |
| ಮಾಡಿ ದಣಿಯದೆ | ೨೩೦ | ಮೂರು ಸುತ್ತಿನ | ೧೦೪೭ |
| ಮಾಡಿ ಮಾಡಿ ಬೇಡ | ೩೨೪ | ಮೂರು ಹೊಳಲ | ೭೧೬ |
| ಮಾಡುವ ಕೈ ಉಚ್ಚಿಷ್ಟ | ೯೫೪ | ಮೂರೊಲಿಯ ಬೆಂಕಿ | ೧೬೯ |
| ಮಾಡುವುದು ಭಕ್ತಿಯ | ೧೨೩೪ | ಮೂಲಜ್ಞಾನದಿಂದುದಯ | ೭೮೧ |
| ಮಾಡೇನೆಂಬುವರೆ | ೮೯೪ | ಮೂಲ ಜ್ಞಾನೋದಯ | ೧೨೧೨ |
| ಮಾತುಮಾತಿನ | ೬೦೫ | ಮೂಲಾನಕ್ಷತ್ರದಲ್ಲಿ | ೧೦೦೫ |
| ಮಾತೆ ಪಿತರು | ೨೬೫ | ಮೂವರರಿಯದ | ೫೦೯ |
| ಮಾನಸ ವಾಚಕ | ೭೦೦ | ಮೇರುವ ಮಣಿ | ೮೧ |
| ಮಾಯಾಕಳೆಯೊಳಿರ್ದು | ೫೫೩ | ಮೊದಲ ಜನ್ಮದಲ್ಲಿ | ೧೧೬೩ |

ಮೊದಲಿಂದತ್ತಲ ೩೩೫
ಮೊದಲೆನ್ನ ಕೈವಶ ೬೮೧

**ಯ, ರ**

ಯೋನಿಯಲ್ಲಿ ಜನಿಸಿದ ೧೧೭೫
ರಜೋಗುಣದಷ್ಟ ೧೨೧೧
ರಾಜನ ಭೂಮಿಯಲ್ಲಿ ೧೮೩
ರಾಜಯೋಗಿ ಶಿವ ೧೧೧೭
ರಾಜ್ಯವಿರಹಿತ ೧೦೦೩
ರೇಚಕಪೂರಕ ೪೭೨
ಲಕ್ಷಮೂರರಿಂದೆ ೩೦೨
ಲಕ್ಷವಂದನು ಲಕ್ಷಿಸಿ ೪೬೫
ಲಕ್ಷಾನುಲಕ್ಷರು ೨೮೭
ಲಿಂಗಜಂಗಮಸಂಗ ೩೧೫
ಲಿಂಗದ ನಿಜವ ೮೫೪
ಲಿಂಗದಲ್ಲಿ ಅಂಗವು ೮೦೫
ಲಿಂಗದಲ್ಲಿ ನಿಷ್ಠೆ ೮೭೨
ಲಿಂಗದಲ್ಲಿ ಬೆರಸಲನುಗೈದ ೮೭೬
ಲಿಂಗದಲ್ಲೈಕ್ಯವ ೮೦೪
ಲಿಂಗದಿಂದುದಯ ೧೧೫೫
ಲಿಂಗದೊಳಗಾರಿಂದ್ರಿಯ ೭೭೨
ಲಿಂಗನಿಷ್ಪತ್ತಿಗಳಾಚರಣೆ ೭೧೭
ಲಿಂಗಬೆಳಗಿನೊಳು ೪೩೦
ಲಿಂಗಮುದ್ರೆಯ ೧೧೩೮
ಲಿಂಗವನರಿದ ೫೦೧
ಲಿಂಗವನರಿದ ಶರಣಂಗೆ ೧೧೨೦
ಲಿಂಗವನ್ನರಿವನ್ನಕ್ಕರ ೧೧೫೭
ಲಿಂಗವನರಿವ ಸಂಗ ೪೫೮
ಲಿಂಗವಾದ ಶರಣ ೭೯೫
ಲಿಂಗವು ಜ್ಞಾನ ೧೧೬೪
ಲಿಂಗವೆಂಬ ಭಾವ ೧೧೨೬
ಲಿಂಗವೇ ತಾನಾದ ೬೨೫
ಲಿಂಗಸಂಬಂಧಿ ೩೩೬
ಲಿಂಗಸಂಬಂಧಿಗಳೆಂಬ ೪೭೫
ಲಿಂಗಸಾಕ್ಷಿ ಅಂಗ ೧೦೨೨
ಲಿಂಗಾಂಗಸಮರಸ ೫೨೭
ಲಿಂಗಾಚಾರ ಭೃತ್ಯಾಚಾರ ೬೨೮
ಲೀಲೆಯ ನೇಮ ೧೦೫೧
ಲೋಕಚೋದ್ಯ ೧೦೯೬
ಲೋಕದೊಳಗಿನ ೧೧೩೫
ಲೋಕಮಚ್ಚು ನಡೆ ೫೮೭
ಲೋಕ ಲೌಕಿಕ ೧೦೯೮
ಲೋಕಸಾಕ್ಷಿಯಾಗಿ ೧೦೫೯
ಲೋಹದ ಕುಲವ ೯೮೪

**ವ**

ವಂಚನೆವಿರಹಿತ ೧೮೫
ವಡಬಾಗ್ನಿಯೆದ್ದು ೪೭೯
ವರುಷದಬ್ಬರ ೫೭೮
ವಲ್ಲಭನ ಒಲುಮೆ ೫೫೬
ವರ್ಷಕಾಲದಿ ೧೧೨೧
ವಾಯುಭೂತಕರುಣೆ ೧೧೬೯
ವಾಚಕ ಮಾನಸ ೧೧೦೨
ವಿಶ್ವನ ಕಾರ್ಯವ ೧೦೪೦
ವೀರಮಹೇಶ್ವರ ೨೧೮
ವೇದಾಗಮಸಾಕ್ಷಿ ೭೫೯
ವೇಷಕ್ಕೆ ತಕ್ಕ ೨೪೦

**ಶ, ಷ**

ಶರಣ ತನ್ನ ೧೦೪೬
ಶರಣ ತನ್ನ ಪ್ರಾಣಲಿಂಗ ೫೨೪
ಶರಣ ತಾ ತನ್ನ ೧೧೭೬
ಶರಣನ ಕಾಯ ೭೬೭
ಶರಣನ ನಡೆ ೫೮೬

ಶರಣನ ಬರವ ೮೩೨
ಶರಣಸತಿ ಲಿಂಗಪತಿ ೪೩೩
ಶರಣು ಶರಣೆಂಬೆ ೨೫೮
ಶರಧಿಯ ಜಲವು ೮೨೮
ಶಿವಸಂಗ ಶರಣ ೧೨೦೩
ಶಿವಯೋಗಿಯ ಯೋಗ ೧೦೯೯
ಶಿವಶಕ್ತಿಯರೊಂದಾಗಿ ೫೧೨
ಶುದ್ಧನಿರ್ಮಾಯ ೧೧೯೬
ಶುದ್ಧಸಪ್ಪಸಯ್ಯಾ ೧೨೦೫
ಶುದ್ಧಪ್ರಸಾದಿ ೩೩೯
ಶೂನ್ಯದ ಕಳೆ ೧೧೦೬
ಶ್ರದ್ಧೆ ತೋರಿದಲ್ಲಿ ೭೮೮
ಶ್ರದ್ಧೆಯಲ್ಲಿ ಮುಳುಗಿ ೪೬೭
ಶ್ರದ್ಧೆ ಸಾವಧಾನ ೩೧೬
ಶ್ರೀ ಮಹಾಕಲ್ಯಾಣ ೭೫೬
ಶ್ರುತಿಯ ನೋಡುವ ೭೫೮
ಶ್ವಾನ ಬೊಗಳುವುದೇ ೧೦೨೮
ಶ್ವಾನ ಮುಟ್ಟಿದ ೯೪
ಶ್ರೇಷ್ಠ ಶಿವಭಕ್ತ ೨೬೭
ಷಡುದರ್ಶನ ೫೨೬

ಸ

ಸಂಕಲ್ಪದಿಂದಾದ ೧೩
ಸಂಗವನರಿದು ೨೩೨
ಸಂತೆಯ ಬೆವಹಾರಿ ೨೭೨
ಸಂದುಸಂಪದವ ೧೩೫
ಸಂದ ಸಂಸಾರ ೯೮೩
ಸಂವಿತ್‌ಪ್ರಭಾನಂದ ೧೩೯
ಸಂಸಾರವನೊಪ್ಪಿಸಿದ ೧೦೬೪
ಸಂಸಾರವ ಹೊರಗಿಟ್ಟು ೭೭೬
ಸಂಸಾರಸಂಬಂಧಿ ೧೦೧೫
ಸಂಸಾರಿಯ ಮುಂದಣ ೧೦೬೩
ಸಂಸಾರಿಯ ಸಂಗ ೫೯೧
ಸಕಲದ್ವಂದ್ವ ೧೧೧೪
ಸಕಲನಿಃಕಲ ೫೯೩
ಸಕಲ ಭವಿಯ ೯೫೭
ಸಕಲವಸಳಿದು ೩೩೨
ಸಕಲ ಸನ್ನಿಹಿತವಾಗಿ ೪೯೨
ಸಕಲ ಸಂಬಂಧಿಯಾಗಿ ೫೯೦
ಸಕಲಾನಂದ ಪರಬ್ರಹ್ಮವೆ ೧೨೩
ಸಗುಣ ನಿರ್ಗುಣ ೨೨೯
ಸಗುಣಾನಂದ ಸನ್ನಿಹಿತ ೬೯೨
ಸತಿಪತಿಗಳ ಮತಿಯಿಂದೆ ೬೫೫
ಸತಿಭಾವದಿಂದ ಭಕ್ತಿಯ ೧೨೨೬
ಸತ್ತಹೆಣಗಳ ಬಾಯಲ್ಲಿ ೧೧೫೦
ಸತ್ತ ಹೆಣನೆದ್ದು ೭೪೧
ಸತ್ತು ಚಿತ್ತಾನಂದ ೫೦೨
ಸತ್ತು ಚಿತ್ತಾನಂದ ನಿತ್ಯ ೫೯೭
ಸತ್ತು ಚಿತ್ತಾನಂದ ನಿತ್ಯ ೮೫
ಸತ್ತು ಚಿತ್ತಾನಂದ ನಿತ್ಯ ೫೮೫
ಸತ್ತು ಬದುಕಿ ೬೨೦
ಸತ್ತುವೆರೆದ ಸುಖ ೯೪೮
ಸತ್ತುವೇ ಲಿಂಗ ೫೯೮
ಸತ್ತು ಹುಟ್ಟಿ ತ್ರಿವಿಧ ೧೨೪೧
ಸತ್ಯಕಾಯಕದಿಂದುಲಿದು ೧೩೧
ಸತ್ಯಬೆಳಗ ಹೊತ್ತು ೧೨೨೧
ಸತ್ಯವನರಿಯದೆ ೩೭೦
ಸತ್ಯಶರಣರ ಗೊತ್ತು ೬೦೬
ಸತ್ಕ್ರಿಯಾ ಸಮ್ಯಕ್‌ಜ್ಞಾನ ೧೨೧೭
ಸದಾತ್ಮರುಗಳಲ್ಲಿ ೧೨೩೬
ಸದ್ಭಾವಸಂಬಂಧ ೧೧೬೬
ಸದ್ಭಾಸನಧರ್ಮ ೧೨೧೪
ಸದ್ಗುರುವಿನ ಕರಕಮಲ ೮೮೭

ಸನ್ಯಾಸಿಯ ಹಾವುಗೆ ೧೧೩೧
ಸರ್ಪನಗಮನ ೯೬೬
ಸರ್ಪದಷ್ಟಸರ್ವಾಂಗ ೧೧೪೭
ಸಮರಸ ಪಾದೋದಕ ೯೨೨
ಸಮ್ಮುಖಸಾಕಾರ ೧೧೮೦
ಸವತಿಮತ್ಸರ ೧೦೩೬
ಸರ್ವಜ್ಞಾನತ್ವಾನುಭಾವ ೭೪೯
ಸಹಜಭಕ್ತರಿಂದೆ ೨೫೪
ಸಾಕಾರವಾಗಿ ಬಂದ ೩೭೨
ಸಾಗರದೊಳಗೊಂದು ೧೦೦೨
ಸಾಧಕಯೋಗದಿಂದ ೩೦೧
ಸಾವಧಾನ ಸನ್ನಿಹಿತ ೧೫೧
ಸಿಂಹದ ಹಾಲು ೫೩೪
ಸಿಂಹನ ಹಾಲು ೧೪೬
ಸಿದ್ಧಾಂತಗಮನದಲ್ಲಿ ೧೧೮೯
ಸುಖದುಃಖ ಪುಣ್ಯ ೫೪೬
ಸುಖದುಃಖವನರಿದು ೮೮೯
ಸುಖದುಃಖವನುಂಡು ೪೪೯
ಸುಖಮುಖಸನ್ನಿಹಿತ ೪೪೭
ಸುಖಮುಖಸನ್ನಿಹಿತ ಶರಣಂಗೆ ೮೮೮
ಸುಖವೆಂದಲ್ಲಿ ದುಃಖ ೧೦೩೯
ಸುಚಿತ್ತವನೊಳಕೊಂಡ ೮೩೧
ಸುಚಿತ್ತ ಸುಬುದ್ಧಿಯೆಂಬ ೭೦೭
ಸುಜ್ಞಾನ ಕ್ರಿಯಾಘನ ೧೫೮
ಸುಜ್ಞಾನದಲ್ಲಿ ಮುಳುಗಿ ೨೨೩
ಸುಜ್ಞಾನ ಸತ್ಕ್ರಿಯಾನುಭಾವ ೩೯೪
ಸುಜ್ಞಾನ ಸ್ವರೂಪ ೮೩
ಸುಜ್ಞಾನೋದಯವಾದ ೧೨೨೨
ಸುಡುಗಾಡ ನಡುವೆ ೧೧೨೮
ಸುಳ್ಳಿಗೆ ಸುಳ್ಳಾಗಿರ್ದ ೧೦೯೭
ಸುಳುಹಿಲ್ಲದ ಕೇರಿ ೯೨೯
ಸೂರ್ಯ ಚಂದ್ರ ಅಗ್ನಿ ೪೭೮
ಸ್ಫಟಿಕದ ಘಟದೊಳಗಿರ್ದ ೧೦೬೫
ಸೃಷ್ಟಿ ಸ್ಥಿತಿ ಸಂಸಾರ ೭೭೮
ಸ್ವಪ್ನದ ಸುಖ ೪೭೬
ಸ್ವಯಾನಂದ ಪರ ೧೦೪
ಸ್ವಾಂತಪರಿಪೂರ್ಣ ೬೧೪
ಸ್ವಾತಂತ್ರ್ಯಾನುಭಾವವೆ ೨೧೯
ಸ್ಥೂಲತನುವಿನಲ್ಲಿ ೬೭೨
ಸ್ಥೂಲತನುವಿನ ೮೨೩
ಸ್ಥೂಲಸೂಕ್ಷ್ಮದಲ್ಲಿ ೯೫೮
ಸ್ಥೂಲಾಂಗವೆಂಬ ೧೧೭೩

ಹ

ಹಂಗಿಲ್ಲದ ಉದ್ಯೋಗ ೫೬೪
ಹಂಸಪಕ್ಷಿಯ ೫೦೩
ಹಡೆದ ಮಕ್ಕಳಕೂಡಿ ೩೩
ಹಡೆದ ಮಗ ೮೨೦
ಹಡೆದವರಿಂದೆ ೩೫೧
ಹಮ್ಮಿಲ್ಲದೆ ಬಿಮ್ಮಿಲ್ಲದೆ ೬೬೦
ಹರಗುರು ವಾಕ್ಯ ೩೮೫
ಹರನೆಂಟಂಗಡ ೨೨
ಹರಮುನಿದರೆ ಗುರು ೯೭೩
ಹಲವು ಕಾಷ್ಠವ ೧೮೯
ಹಲವು ಬಗೆಯಲ್ಲಿ ೧೨೧೬
ಹಲಾಯುಧನು ೩೭೭
ಹಸಿಯಜವ್ವನೆಯರ ೨೮
ಹಾರುವನ ಕೈಯಿಂದ ೧೦೦೮
ಹಾರುವನ ಕೊಂದು ೮೦೯
ಹಾರುವ ಹಾರುವ ೪೪೩
ಹಾಲಿನೊಳಗಿರ್ದ ೧
ಹಾಳೂರೊಳಗೆ ೧೧೬೨
ಹಾಳೂರೊಳಗೊಂದು ೯೧೦

ಹಿಂಗಾಲನರಿದು ೧೨೩೦
ಹಿಂದನರಿಯದೆ ೪೧೨
ಹಿಂದುಮುಂದಿನ ೪೪೨
ಹಿಂದುರಾಯನ ದಂಡು ೩೭
ಹಿಂದೆಮುಂದೆ ೧೪೮
ಹಿಂದೇಸರಿಯದೆ ೫೫೨
ಹಿಡಿದು ನಡೆಯುತ ೯೬೪
ಹಿಡಿದು ಬಂದು ೧೨೨೭
ಹಿಡಿದು ಬಳಸುವವನಲ್ಲ ೧೦೫೬
ಹಿರಿದುಂಟೆಂಬ ನುಡಿ ೧೦೯೫
ಹಿರಿಮುಲಿಂಗವ ೩೦೭
ಹಿರಿಯತನಕ್ಕೆ ೧೧೯೫
ಹುಟ್ಟಿದ ಮನೆಯ ೧೦೫೪
ಹುಟ್ಟಿದ ಮನೆಯ ಸುಟ್ಟು ೨೭೩
ಹುಟ್ಟಿಬಂದ ಮನೆಯ ೬೧೬
ಹುಟ್ಟಿಬಂದುದರಿಯದೆ ೬೪೪
ಹುಟ್ಟಿಬಂದು ೧೧೨೫
ಹುಟ್ಟು ಹೊಂದುಗಳರಿಯದೆ ೧೪೭
ಹುಸಿ ಕಳವು ೪೪
ಹುಸಿಗಲಿತ ಕ್ರಿಯೆಯು ೧೦೯೨
ಹುಸಿಯ ಆಸೆಯ ೨೭
ಹೆಂಡರ ಮಕ್ಕಳ ೪೩೮
ಹೆಜ್ಜೆದಪ್ಪಿ ನಡೆವಂತೆ ೧೦೯೩
ಹೆರೆಹಿಂಗದಾಚಾರ ೪೧೮
ಹೆಳವರೈವರ ೭೪೨
ಹೇಮಮೊರಡಿಯ ೧೧೯೮
ಹೇಮಾದ್ರಿಯ ನಡುವೆ ೪೯೦
ಹೊಟ್ಟೆಯ ಹೊರೆಯಲಾರದೆ ೪೩೭
ಹೊಡೆಗೆಡೆದಘೋಗತಿ ೧೦೨೫
ಹೊನ್ನ ನೋಡಿ ಹೊನ್ನ ೨೧೬
ಹೊನ್ನಿರ್ದು ಪರಧನ ೧೭
ಹೊನ್ನು ಸಂಸಾರವಲ್ಲ ೧೬
ಹೊರಗಿಲ್ಲದ ಒಳಗಿಲ್ಲದ ೪೯೩
ಹೊರಗೆ ಪ್ರಸಾದಿಗಳು ೩೪೫
ಹೊರಗೆ ಮೆಚ್ಚದ ಭಕ್ತಿ ೯೫೫
ಹೊರಗೊಳಗೆಂಬ ೬೯೯
ಹೊರಗೊಳಗೆ ನೀನು ೧೨೦೧
ಹೊರಗೊಳಗೆ ಹಿತವೆನಿಸುವ ೯೭೯


## ನಿರಾಲಂಬ ಪ್ರಭುದೇವರ ಶಿವಭಕ್ತಿ ಪಂಚಾಂಗದ ವಚನ


ಪಂಚಾಕ್ಷರದೊಳಗೆ ೧೨೪೯
ಪಂಚಾಂಗದ ಭೂತ ೧೨೪೬
ಪಂಚಾಂಗ ಪಂಚಾಂಗ ೧೨೪೪
ಪಂಚಾಂಗವೆಂಬ ೧೨೪೫
ಮಗನ ಮದುವೆಯ ೧೨೫೪
ಮಗನ ಮದುವೆಯ ೧೨೫೫
ಲಿಂಗವೆ ಹಸಾದ ೧೨೫೩
ಶಿವನು ಜಗದ್ಭರಿತ ೧೨೫೬
ಶ್ರೀಗುರು ಪ್ರಸನ್ನ ೧೨೫೦
ಶ್ರೀಗುರುಸ್ವಾಮಿ ೧೨೪೮
ಶ್ರೀಗುರುಸ್ವಾಮಿ ಕರುಣಿಸಿ ೧೨೫೧
ಶ್ರೀಮತ್ಸಜ್ಜನ ಶುದ್ಧ ೧೨೪೩
ಸಜ್ಜನಶುದ್ಧ ಶಿವಾಚಾರ ೧೨೫೨
ಸದಾಚಾರ ಗಣಾಚಾರ ೧೨೪೭

## ಪರಂಜ್ಯೋತಿಯರ ವಚನ


ಅಂಗದೊಳಗಿದ್ದ ಲಿಂಗವ ೧೨೬೮
ಅಜ್ಞಾನದಿಂದ ೧೨೬೪
ಆಧಾರ ಸ್ವಾಧಿಷ್ಠಾನ ೧೨೫೮
ಇಂದ್ರಿಯ ಆಲಿಯಲ್ಲಿ ೧೨೫೯
ಇಡಾದಲ್ಲಿ ಸುಳಿವ ೧೨೬೧
ಕರ್ಮಕಾಂಡಿಗಳಿಗೆ ೧೨೬೨
ಕಾಯವಿಡಿದು ಮಾಯೆ ೧೨೬೩
ತನ್ನ ತಾನರಿಯದೆ ೧೨೫೭
ತಾನು ಈಶನೆಂಬುದನು ೧೨೬೯
ನಕಾರ ಮಕಾರ ಶಿಕಾರ ೧೨೬೬
ಪೃಥ್ವಿಯಿಂದ ಭಕ್ತನಾದೆ ೧೨೬೫
ಬಹಳ ಬಹಳ ಕಂಡೆನೆಂದು ೧೨೬೦
ಸಹಜವುಳ್ಳ ಭಕ್ತರಿಗೆ ೧೨೬೭


## ಬಸವಲಿಂಗದೇವರ ವಚನ


ಅಯ್ಯಾ ಅನಂತ ೧೨೮೪
ಅಯ್ಯಾ ಆಸೆಯಪಾಶ ೧೨೭೧
ಅಯ್ಯಾ ಇಂತೀ ಆಸೆ ೧೨೭೪
ಅಯ್ಯಾ ಇಂತು ಪಾದೇಂದ್ರಿಯ ೧೨೮೬
ಅಯ್ಯಾ ಇಂಥ ಮೂಳ ೧೨೯೬
ಅಯ್ಯಾ ಈ ದುರಾಚಾರ ೧೩೦೨
ಅಯ್ಯಾ ಎನ್ನ ಓದಿನ ೧೩೦೩
ಅಯ್ಯಾ ಎನ್ನ ಜೀವ ೧೨೯೦
ಅಯ್ಯಾ ಎನ್ನ ಜೀವಮನ ೧೩೦೧
ಅಯ್ಯಾ ಎನ್ನ ಹೊರಗೆ ೧೨೮೨
ಅಯ್ಯಾ ಎನ್ನೊಳಗೆ ನೀವು ೧೨೭೫
ಅಯ್ಯಾ ಒಂದು ಕ್ಷಣಕ್ಕೆ ೧೨೯೨
ಅಯ್ಯಾ ಕಾಶಿ ರಾಮೇಶ್ವರ ೧೨೭೬
ಅಯ್ಯಾ ಕುಶಬ್ದ ೧೨೮೫
ಅಯ್ಯಾ ಗುರು ಚರ ೧೨೮೦
ಅಯ್ಯಾ ಗುರು ಚರಪರ ೧೨೮೧
ಅಯ್ಯಾ ಗುರು ಚರಪರಭಕ್ತ ೧೨೮೨
ಅಯ್ಯಾ ಗುರುದ್ರವ್ಯ ೧೨೭೯
ಅಯ್ಯಾ ಚಂದಚಂದವುಳ್ಳ ೧೨೭೭
ಅಯ್ಯಾ ತರ್ಕ ೧೨೭೩
ಅಯ್ಯಾ ತನ್ನ ೧೨೮೯
ಅಯ್ಯಾ ತನ್ನ ಜನ್ಮಾಂತರ ೧೨೯೧
ಅಯ್ಯಾ ನಾನು ಬಹು ೧೨೮೮
ಅಯ್ಯಾ ನೀವೇ ೧೩೦೪
ಅಯ್ಯಾ ಬ್ರಹ್ಮ ೧೨೭೮
ಅಯ್ಯಾ ಮಣ್ಣೆಂಬ ೧೨೭೨
ಅಯ್ಯಾ ಮತ್ತೊಂದು ೧೨೯೩
ಅಯ್ಯಾ ಮತ್ತೊಂದು ೧೨೯೪
ಅಯ್ಯಾ ಮತ್ತೊಂದು ೧೨೯೫
ಅಯ್ಯಾ ಮತ್ತೊಂದು ವೇಳೆ ೧೨೯೭
ಅಯ್ಯಾ ಮತ್ತೊಂದು ವೇಳೆ ೧೨೯೮
ಅಯ್ಯಾ ಮತ್ತೊಂದು ವೇಳೆ ೧೨೯೯
ಅಯ್ಯಾ ಮತ್ತೊಂದು ವೇಳೆ ೧೩೦೦
ಅಯ್ಯಾ ಹಲವು ೧೨೮೩
ನಿಮ್ಮ ಶರಣಗಣಂಗಳ ೧೩೦೫
ಶ್ರೀಗುರುಲಿಂಗಜಂಗಮವೆ ೧೨೭೦


■■

# ಕಠಿಣ ಪದಕೋಶ

ಅ

ಅಂಕೋಲೆ-ಒಂದು ಜಾತಿಯ ಮರ

ಅಂಗವಿಸು-ಕೂಡು, ಬೆರೆ, ಸಂಧಿಸು

ಅಂಘ್ರಿ-ಪಾದ

ಅಂದಳ-ಪಲ್ಲಕ್ಕಿ

ಅಂತಕ-ಯಮ

ಅಂತರ್ಬಾಹ್ಯ-ಒಳ ಹೊರಗೆ

ಅಂಬರ-ಆಕಾಶ, ಬಟ್ಟೆ

ಅಂಬುಧಿ-ಸಮುದ್ರ

ಅಕಲ್ಪಿತ-ಅಕಸ್ಮಾತ್ತಾದ, ಸಹಜವಾದ, ಕಲ್ಪಿತವಲ್ಲದ

ಅಕಳಂಕ-ದೋಷರಹಿತ, ಶುಭ್ರ, ಶಿವ

ಅರ್ಕ-ಸೂರ್ಯ

ಅರ್ಕೇಂದು-ಸೂರ್ಯ, ಚಂದ್ರ

ಅರ್ಕಜ-ಸೂರ್ಯನಿಂದ ಹುಟ್ಟಿದವ

ಅಗಣಿತ-ಎಣಿಕೆಗೆಬಾರದ, ಅಸಂಖ್ಯ

ಅಗಮ್ಯ-ಅರಿತಕ್ಕೆಬಾರದ, ಶಿವ

ಅಗಿನ-ಅಗ್ನಿ, ಬೆಂಕಿ

ಅಘಬಂಧ-ಪಾಪದಿಂದ ಕಟ್ಟಲ್ಪಟ್ಟ

ಅಘಭರಿತ-ಪಾಪದಿಂದ ತುಂಬಿದ

ಅಚ್ಯುತ -ವಿಷ್ಣು

ಅಜಡ-ಆಲಸ್ಯವಿಲ್ಲದ

ಅನಲ-ಬೆಂಕಿ

ಅನಾಮಯ-ಶುದ್ಧ, ಶಿವ

ಅನಿಲ-ಗಾಳಿ

ಅನುಗೆಡು-ಕ್ರಮತಪ್ಪು, ಅಳತೆದಪ್ಪು

ಅನುನಯ-ನಮ್ರ

ಅನುಷ್ಠಾನ-ಆಚರಣೆ

ಅನುಸರಣೆ-ಅನುಸರಿಸಿ ನಡೆಯುವುದು

ಅನೃತ-ಸುಳ್ಳು

ಅಬದ್ಧ-ಹೊಂದಿಕೆಯಿಲ್ಲದ, ತಪ್ಪು, ಸುಳ್ಳು

ಅಭ್ರ-ಮೋಡ, ಆಕಾಶ

ಅಮರಿಸು-ಹೊಂದಿಸು, ಸೇರಿಸು

ಅಮಲ-ಶುದ್ಧ, ನಿರ್ಮಲ

ಅಮಳೋಕ್ಯ- ಬಾಯಿ, ಲಿಂಗಧಾರಣದ ಒಂದು ಭಾಗ

ಅಲಸು-ಆಯಾಸಗೊಳ್ಳು, ತಡಮಾಡು

ಅಲುಪ್ತ-ಕೊರತೆಯಿಲ್ಲದ, ಪರಿಪೂರ್ಣ

ಅವಧಾನ-ಎಚ್ಚರಿಕೆ, ಗಮನಿಸುವಿಕೆ

ಅವಧಾನಿಸು-ಎಚ್ಚರಿಸು

ಅವಧರಿಸು-ಕೇಳು

ಅವಿರಳ-ದಟ್ಟವಾದ, ಅಪೂರ್ವವಲ್ಲದ, ಬಿಟ್ಟೂಬಿಡದ

ಅಶನ-ಅನ್ನ

ಅಷ್ಟದಳ-ಎಂಟುದಳ

ಅಸಮ-ಸಮನಲ್ಲದ

ಅಸುವಳಿ-ಸಾಯು, ಜೀವಬಿಡು

ಆ

ಆಚ್ಛಾದಿಸು-ಆವರಿಸು, ಮುಚ್ಚು

ಆಣತಿ-ಆಜ್ಞೆ, ಅಪ್ಪಣೆ

ಆಪ್ಯಾಯನ-ಸಂತೋಷ, ಸುಖ, ತೃಪ್ತಿ

ಆಯತ-ಸಿದ್ಧಿ, ಸಮಗ್ರತೆ

ಆರೂಢ- ಏರಿದ, ಜ್ಞಾನದ ಮೇಲ್ಮಟ್ಟ ತಲುಪಿದ

ಆಲಯ-ಮನೆ

ಆಲಿ-ರೆಪ್ಪೆ

ಆಳ್ದ-ಒಡೆಯ, ಗಂಡ

ಇ

ಇಂಬು-ಅವಕಾಶ, ಸ್ಥಳ
ಇಕ್ಷು-ಕಬ್ಬು

ಉ, ಊ

ಉಚ್ಚಹ-ಉತ್ಸಾಹ
ಉಚ್ಚಿಷ್ಟ-ಶೇಷ, ಉಂಡು ಉಳಿದುದು
ಉಡುಗು-ಕಡಿಮೆಯಾಗು, ಸಂಕುಚಿತಗೊಳ್ಳು
ಉತ್ತಮಾಂಗ-ತಲೆ
ಉದರ-ಹೊಟ್ಟೆ
ಉನ್ಮನಿ- ಸಹಸ್ರಾರ ಮತ್ತು ಭ್ರೂಮಧ್ಯದ ನಡುವಣ ಭಾಗ
ಉಪಮಿಸು-ಹೋಲಿಸು, ವರ್ಣಿಸು
ಉಪಾಧಿ-ಮೋಸ, ಠಕ್ಕು, ವಂಚನೆ, ಅಡ್ಡಿ
ಉರ-ಎದೆ, ವಕ್ಷಸ್ಥಳ
ಉರವಣೆ-ಆತುರ, ಸಂಭ್ರಮ
ಉರಸಜ್ಜೆ-ಎದೆಯ ಮೇಲೆ ಧರಿಸುವ ಲಿಂಗದ ಕರಡಿಗೆ
ಉರುಹಿ-ಸುಟ್ಟು
ಉಲಿ-ಹೇಳು, ಒದರು
ಉಲುಹು-ಶಬ್ದ, ಧ್ವನಿ
ಉಳುಮೆ-ಶೇಷ, ಉಳಿದುದು
ಊರ್ಮಿ-ಹಸಿವು, ಬಾಯಾರಿಕೆ ಮೊದಲಾದ ಪ್ರಾಪಂಚಿಕ ತಾಪ

ಎ, ಏ

ಎಡ್ಡೆಡ್ಡು-ಅಸ್ತವ್ಯಸ್ತ, ಅಡ್ಡಾದಿಡ್ಡಿ
ಎಣೆ-ಸಮಾನ, ಸರಿಸಾಟಿ
ಎರೆಯ-ಒಡೆಯ, ಇನಿಯ
ಏರಂಡಿಲ-ಔಡಲ, ಹರಳುಗಿಡ

ಒ, ಓ, ಔ

ಒತ್ತೆ-ವೇಶ್ಯೆಗೆ ಕೊಡುವ ಹಣ
ಒಬ್ಬುಳಿ-ಗುಂಪು, ಒಂದುಸೇರಿದ
ಓಕರಿಸು-ಮೀರು
ಔದುಂಬಫಳ-ಅತ್ತಿಯಹಣ್ಣು

ಕ

ಕಂಗುರುಡ-ಕಣ್ಣಿದ್ದೂ ಕುರುಡ, ಅಜ್ಞಾನಿ
ಕರ್ಕಶ-ಅಹಿತವಾದ
ಕಕ್ಕುಲಾತಿ-ಪ್ರೀತಿ
ಕಕ್ಷ-ಕಂಕುಳ
ಕಚ-ತಲೆಗೂದಲು
ಕಚ್ಚುಕಳೆದಕ್ಕಿ-ತೊಳೆದ ಅಕ್ಕಿ
ಕಚ್ಚಡಕ-ಅನಾಚಾರಿ
ಕಚ್ಚುಟ-ಲಂಗೋಟಿ
ಕಟಾಕ್ಷ-ಕೃಪಾದೃಷ್ಟಿ
ಕರ್ಣ-ಕಿವಿ
ಕಣ್ದೆರೆಪಮಾಡಿ-ಕಾಯುವದನ್ನು ನಿಲ್ಲಿಸಿ
ಕರ್ತು-ಒಡೆಯ
ಕಪ್ಪ-ಕಾಣಿಕೆ
ಕಪ್ಪಡ-ಬಟ್ಟೆ
ಕರಕಂಜ-ಕೈಕಮಲ
ಕರಡವಿ-ಕರಡಿಗೆ, ಲಿಂಗವಿಡುವ ಭರಣಿ
ಕರಣಪತಿ-ಇಂದ್ರಿಯದ ಒಡೆಯ, ಮನಸ್ಸು
ಕರದ್ವಂದ್ವ-ಜೋಡುಕೈ
ಕರಸಂಜಾತ-ಶಿಷ್ಯ
ಕರಿಕಾಳಿ-ಶಕ್ತಿದೇವತೆ
ಕರಿಗಮನೆ-ಗಜಗಮನೆ, ಮಂದನಡಿಗೆ ಉಳ್ಳವಳು
ಕಲ್ಲುಹೋರು-ಕಲ್ಲಿನ ತೂತು, ಕಲ್ಲಪಡಕು
ಕವಳಿಸಿ-ಮೂರ್ಛೆಹೋಗಿ

ಕಾಂತಾರ-ಅಡವಿ
ಕಾಂಬ-ಕಾಣುವ
ಕಾಕ-ಕಾಗೆ
ಕಾತು-ಚಿಗಿತು, ಫಲಭರಿತವಾಗಿ
ಕಾರ್ಪಣ್ಯ-ಕಷ್ಟ, ತೊಂದರೆ, ಬಡತನ
ಕಾರ್ಬೊನ್ನು-ಕಬ್ಬಿಣ
ಕಾಮ್ಯ-ಇಷ್ಟವಾದ, ಬಯಸಿದ
ಕಾಯ-ದೇಹ
ಕಾರಿರುಳು-ದಟ್ಟವಾದ ಕತ್ತಲು, ಕಗ್ಗತ್ತಲು
ಕಾಲ-ಯಮ
ಕಾವಳ-ಕತ್ತಲೆ, ಮಂಜು
ಕಾಷ್ಠ-ಕಟ್ಟಿಗೆ
ಕಾಸಾರ-ಸರೋವರ
ಕಾಸು-ಹಣ
ಕಾಳ-ಕತ್ತಲೆ, ರಾತ್ರಿ
ಕಾಳಕೂಳರು-ದುಷ್ಟರು, ನಿಶಾಚರರು
ಕಾಳುಕುಳ-ತೊಂದರೆ
ಕಿಲ್ಬಿಷ-ಪಾಪ, ಕಲ್ಮಷ, ಕೊಳೆ
ಕಿಸುಕುಳ-ಹೇಯವಾದ, ಕ್ಷುದ್ರ
ಕೀನಾಶ-ಯಮ
ಕುಂಭಿನಿ-ಭೂಮಿ
ಕುಕ್ಕುಟ-ಕೋಳಿ
ಕುಚಿತ್ತ-ದುಷ್ಟಬುದ್ಧಿ,
ಕುಜ-ಮರ
ಕುಟಿಲ-ಮೋಸ
ಕುನ್ನಿ- ಮರಿ, ಸಣ್ಣಮನಸ್ಸಿನವರು, ಒಂದು ಬೈಗುಳ
ಕುಯುಕ್ತವಾಕ್ಕು-ಕುಟಿಲ ಮಾತು
ಕುರುಹು-ಚಿಹ್ನ, ಗುರುತು
ಕುಲಾಲ-ಕುಂಬಾರ
ಕುಸುಮ-ಹೂವು
ಕುಸುಮ ಸುಪ್ಪತ್ತಿಗೆ-ಹೂವಿನ ಹಾಸಿಗೆ
ಕುಳ-ರೀತಿ, ವಿಷಯ, ಮೂಲ
ಕುಳಿ-ತಗ್ಗು
ಕೂಕಕುಟಿಲ-ಕುಹಕ ಕುಟಿಲ
ಕೂಟ-ಸೇರಿಕೆ, ರಾಶಿ
ಕೂಟಕರು-ದುಷ್ಟರು
ಕೂರ್ತು-ಪ್ರೀತಿಸಿ
ಕೂರ್ಮ-ಆಮೆ
ಕೂರ್ಮೆ-ಪ್ರೀತಿ
ಕೆಡಬಡೆ-ಬಗ್ಗುಬಡೆ, ಹತ್ತಿಕ್ಕು
ಕೇಣ-ಮತ್ಸರ
ಕೊತ್ತಲ-ಬುರುಜು
ಕೊನರು-ಚಿಗಿ, ಮೊಳಕೆ
ಕೊಸೆ-ಚಾಚು
ಕೋಟಲೆ-ತೊಂದರೆ, ಹಿಂಸೆ
ಕೌಲು-ಒಪ್ಪಿಗೆ,

### ಕ್ಷ

ಕ್ಷಯ-ನಾಶ
ಕ್ಷಾರ-ಉಪ್ಪು
ಕ್ಷುತ್ತು-ಹಸಿವು

### ಖ

ಖಟ್ವಾಂಗ-ಶಿವನು ಹಿಡಿದಿರುವ ಎಲುವಿನ ಆಯುಧ
ಖತಿ-ಕೋಪ
ಖಾರಿಕ-ಉತ್ತತ್ತಿ,
ಖುಲ್ಲ-ಕ್ಷುದ್ರ, ಅಲ್ಪ
ಖೇಚರ-ಗಂಧರ್ವ, ಪಕ್ಷಿ

### ಗ, ಘ

ಗಂಜಲ-ಗಂಜಳ, ದನಕರುಗಳ ಮೂತ್ರ, ಮೊಲಿಸು

ಗಂಪ-ಕಂಪು, ವಾಸನೆ
ಗಂಪರ-ಗವಿ
ಗಜಬಜೆ-ಗದ್ದಲ, ಅಸ್ತವ್ಯಸ್ತತೆ
ಗಜಾಳಿ-ಆನೆಯ ಗುಂಪು
ಗಬ್ಬು-ಕೆಟ್ಟವಾಸನೆ
ಗಮನಾಗಮನ-ಹೋಗುವುದು, ಬರುವುದು
ಗಮ್ಯ-ಗುರಿ, ಸೇರತಕ್ಕ ಸ್ಥಾನ
ಗರಳ-ನಂಜು, ವಿಷ
ಗರಳಘಾತ-ವಿಷದಿಂದಾದ ತೊಂದರೆ
ಗ್ರಾಸ-ಹುಲ್ಲು, ಆಹಾರ
ಗಾರ್ದಭ-ಕತ್ತೆ
ಗಾರುಡಿಗ-ಯಕ್ಷಣಿಗಾರ, ಹಾವಾಡಿಗ
ಗಾಲುಮೇಲು-ತಲೆಕೆಳಗಾಗು, ಸತ್ತು ಬದುಕು
ಗಾವುದ-ನಾಲ್ಕು ಹರದಾರಿ
ಗುಂಜು-ತೊಂದರೆ, ತೊಡಕು, ದಾರದ ಗುಂಜು
ಗುಂಡಮುಳುಗನಪಕ್ಷಿ-ಮೀನು ಹಿಡಿಯುವ ಪಕ್ಷಿ
ಗುಂಭಭ್ರಾಂತ-ತಲೆಯಲ್ಲಿ ಒಂದೇ ವಿಚಾರ ತುಂಬಿಕೊಂಡವನು
ಗುಣಾಳಿ-ಗುಣಸಮೂಹ
ಗುರುತಲ್ಪಕ-ಗುರುಪತ್ನಿ ಗಮನಮಾಡುವವ
ಗೊಂದಣ-ಗೊಂದಲ
ಗೌಡಿ-ತೊತ್ತು, ದಾಸಿ
ಘನಸಾರ-ಕರ್ಪುರ
ಘ್ರಾಣ-ಮೂಗು

**ಚ, ಜ**

ಚಂದವಳಿ-ರೂಪುಗೆಡು, ವಿಕಾರವಾಗು
ಚಂದ್ರಮೌಳಿ- ಶಿವ, ಚಂದ್ರನನ್ನು ತಲೆಯಲ್ಲಿ ಧರಿಸಿದವ
ಚರಣಜಲಶೇಷ-ಪಾದೋದಕ
ಚರಣಾಯುಧ-ಕೋಳಿ
ಚರ್ಮಗೇಡಿ-ನಾಚಿಕೆಗೇಡಿ, ಲಜ್ಜೆಯಿಲ್ಲದವ
ಚರಿಸು-ತಿರುಗಾಡು, ಅಡ್ಡಾಡು
ಚಾಂಗು-ಉತ್ಸಾಹ ಹುಟ್ಟಿಸುವ ಮಾತು
ಚಿಂತಾಕರ-ಆಲೋಚಿಸತಕ್ಕ, ಕಳವಳದ
ಚಿದ್ರಮಣ-ಮನೋನಾಥ, ಶಿವ
ಚುನ್ನಾಟ-ನಿಂದೆ, ಬೈಯ್ಯಾಟ
ಚೂತಫಳ-ಮಾವಿನ ಹಣ್ಣು
ಚೋದ್ಯ-ಆಶ್ಚರ್ಯ
ಚೌರಾಶಿ-ಎಂಬತ್ತುನಾಲ್ಕು
ಜಕ್ಕಣಿ-ಯಕ್ಷಣಿ, ಒಂದು ದೇವತೆ
ಜಲಶೇಷ-ಪಾದೋದಕ, ಉಳಿದ ನೀರು
ಜವ್ವನ-ಯೌವ್ವನ, ಹರೆಯ
ಜಿಹ್ವೆ-ನಾಲಿಗೆ
ಜ್ಞಪ್ತಿ-ತಿಳಿಯುವಿಕೆ
ಜ್ವಾಲಾದ್ರಿ-ಬೆಂಕಿಪರ್ವತ
ಜ್ಞೇಯ-ತಿಳಿಯಲಾಗುವ, ಇಂದ್ರಿಯ ಗೋಚರ

**ಟ, ಡ, ಢ**

ಟೊಪ್ಪರ-ಟೊಪ್ಪಿಗೆ, ಕುಲಾವಿ
ಡಂಭಕ-ಮೋಸಗಾರ, ಆಡಂಬರದವ್ಯಕ್ತಿ
ಢೂಕ-ಹೂಂಕರಿಸು, ಹುರಿಕೆಹಾಕು

**ತ**

ತಥ್ಯ-ಸತ್ಯ, ನಿಜ, ಯಥಾರ್ಥ
ತದ್ದಿನ-ಆ ದಿನ
ತರಹರ-ತಾಳ್ಮೆ, ಸಹನೆ ತಡೆಯುವಿಕೆ
ತರುಳನುಡಿ-ಬಾಲಭಾಷೆ
ತಲ್ಲೀಯ-ಮಗ್ನವಾದ, ಮುಳುಗಿದ
ತಳವೆಳಗಾಗು-ತಳಮಳಪಡು
ತಳಿಗೆ-ಹರಿವಾಣ, ತಾಟು, ತಟ್ಟೆ

ತಳ್ಳಿಕಾರ-ತಂಟೆಗಾರ, ಜಗಳಗಂಟ
ತಾಮಸ-ಕತ್ತಲೆ, ಅಜ್ಞಾನ
ತಿಂಥಿಣಿ-ಸಮೂಹ, ಗುಂಪು
ತಿಗಳ-ರಕ್ತಹೀರುವ ಒಂದು ಕೀಟ
ತಿರೋದಾನ-ಹಮ್ಮು
ತಿಲ-ಎಳ್ಳು
ತುಡುಕು-ಹಿಡಿ, ಆತುರದಿಂದ ಹಿಡಿ, ಕಚ್ಚು
ತುಡುಗುಣಿ-ಕಳವಿನಿಂದ ಬದುಕುವ ಪ್ರಾಣಿ
ತೂರ್ಯ-ಆರೂಢಸ್ಥಿತಿ
ತೆತ್ತಿಸು-ಹೆಣೆ, ಸುತ್ತು
ತೆತ್ತೀಸು-ಮೂವತ್ತಾರು
ತೈಜಸ-ಗುಣತ್ರಯದಲ್ಲಿ ಒಂದು
ತೆರಹಿಲ್ಲದ-ಅವಕಾಶವಿಲ್ಲದ, ಸ್ಥಳವಿಲ್ಲದ
ತೊಂಡಲ-ಗೊಂಚಲ, ಹೂವಿನ ಗೊಂಚಲ
ತೊಂಬುಲ-ತಾಂಬೂಲ, ಎಂಜಲು
ತ್ವಕ್ಕು-ಚರ್ಮ
ತೃಣಾಗ್ನಿ-ಹುಲ್ಲು ಕಡ್ಡಿಯ ಬೆಂಕಿ
ತ್ರಿದಳ-ಮೂರುದಳ
ತ್ರಿಪುಂಡ್ರ-ಮೂರುಬೆರಳು

## ದ

ದಂಡಧರ-ಯಮ
ದಂದುಗ-ಕಷ್ಟ
ದಗ್ಧ-ಸುಟ್ಟ
ದಷ್ಟ-ಕಚ್ಚಿದ, ಹಿಡಿದ
ದಿಂಡಿ(ದಿಂಡೆ) -ದುಷ್ಟೆ
ದೂಟಿಸು-ತುಂಬಿಕೊಂಡಿರು
ದೃಕ್-ದೃಷ್ಟಿ
ದ್ವಾರವಾಟಕ-ಬಾಗಿಲು, ಪ್ರವೇಶದ್ವಾರ
ದ್ಯುಮಣಿ-ಸೂರ್ಯ
ಧನಂಜ-ಅಗ್ನಿ
ಧರೆ-ಭೂಮಿ, ಪೃಥ್ವಿ
ಧವಲ-ಬಿಳಿಯ, ಶುಭ್ರ
ಧಾತುಗೆಡಿಸು-ಶಕ್ತಿಗುಂದಿಸು
ಧೂಳಿತ-ಹಚ್ಚಿದ, ಲೇಪಿಸಿದ
ಧ್ಯಾಸ-ನೆನಪು, ಧ್ಯಾನ

## ನ

ನಭ-ಆಕಾಶ
ನವನೀತ-ಬೆಣ್ಣೆ
ನಾರಂಜಿ-ಕಿತ್ತಳೆ, ಒಂದು ವಿಧವಾದ ಮುತ್ತು
ನಿಕ್ಷೇಪ-ಹುಗಿದಿಟ್ಟ
ನಿರ್ಗಮನಿ-ನಡೆಯಿಲ್ಲದ
ನಿಗುರಿ-ನೆಟ್ಟಗಾಗಿ
ನಿಜಜ್ಞಪ್ತಿ-ನಿಜಜ್ಞಾನ, ನಿಜವಾದ ತಿಳುವಳಿಕೆ
ನಿರಯಪತಿ-ನರಕದ ಒಡೆಯ, ಯಮ
ನಿರಿಯಾಮಾರ್ಗ-ಮೋಕ್ಷಮಾರ್ಗ
ನಿರುತ-ಯಾವಾಗಲೂ
ನಿವಾತ-ಗಾಳಿಯಿಲ್ಲದ
ನಿರ್ವಾಚಕ-ಮಾತನಾಡದ,ಮಾತಿಗೆ ನಿಲುಕದ
ನಿರ್ವಿಷಯ-ವಿಷಯ ರಹಿತ, ಕಾಮವಿಲ್ಲದ
ನಿಶಾಕರ-ಚಂದ್ರ
ನೆಗಹಿ-ಎತ್ತಿ
ನೆರವಿ-ಕೂಟ, ಗುಂಪು
ನೆರೆದುಂಬ-ಕೂಡಿ ಉಣ್ಣುವ
ನೇತ್ರ-ಕಣ್ಣು
ನೇವರಿಸು-ಕೈಯಿಂದ ಸವರು, ಪ್ರೀತಿಸು
ನೊಸಲು-ಹಣೆ
ನೋತ-ವ್ರತ ಮಾಡಿದ

## ಪ

ಪಂಚವಣ್ಣಿಗೆ-ಐದು ಬಣ್ಣದ ವಸ್ತ್ರ
ಪಟ್ಟಾವಳಿ-ಬಟ್ಟೆ
ಪರ್ಣ-ಎಲೆ

ಪರಿಕಿಸಿ-ಪರೀಕ್ಷಿಸಿ, ವಿಚಾರಿಸಿ
ಪರಿಭವ-ಸೋಲು, ಅಪಮಾನ
ಪರಿಭ್ರಾಂತ-ಭ್ರಮೆ ಆವರಿಸಿದ
ಪರಿಯಂಕ-ಪಲ್ಲಂಗ
ಪಲ್ಲೈಸು-ಚಿಗುರು, ಹಬ್ಬು
ಪಸುರುಂಬರ-ಒಂದು ವಿಧವಾದ ಮುತ್ತು
ಪಾಣಿತಾಣ-ಅಂಗೈ
ಪಾವಕ-ಬೆಂಕಿ
ಪಾಶಬದ್ಧ-ಬಂಧಿಸಲ್ಪಟ್ಟ, ಹಗ್ಗದಿಂದ ಕಟ್ಟಿದ
ಪಿಕ-ಕೋಗಿಲೆ
ಪಿಪಾಸು-ಬಾಯಾರಿದವ
ಪಿಸುಣಿ-ಸುಳ್ಳಾಡುವವ, ಚಾಡಿಗಾರ
ಪುಣುಗು-ಕಸ್ತೂರಿ, ಸುಗಂಧದ್ರವ್ಯ
ಪೆರ್ಚುಗೆ-ಹೆಚ್ಚಳ, ವೃದ್ಧಿ
ಪೆಸರ್ಗೊಂದಂಬೆ-ಹೆಸರೆತ್ತಿ ಹೇಳುವೆ
ಪೊದ್ದು-ಹೊಂದು, ಸೇರು
ಪೊಳಲು-ನಗರ, ಊರು
ಪೋರಜಂಗುಳಿ-ಹುಡುಗರ ಗುಂಪು
ಪ್ರಕಾಮ್ಯ-ಹೆಚ್ಚು ಬಯಸಿದ, ಇಚ್ಛೆ
ಪ್ರಜ್ವಲಿಸು-ಹೊಳೆ
ಪ್ರಣತಿ-ಹಣತೆ
ಪ್ರಣವ-ಮಂತ್ರ, ಓಂಕಾರ ಮಂತ್ರ
ಪ್ರದಾಯಕ-ಕೊಡುವ
ಪ್ರಬಲಿಸು-ಹೆಚ್ಚಾಗು
ಪ್ರಭಾಮಯ-ಪ್ರಕಾಶಮಾನ
ಪ್ರಭೆ-ಬೆಳಕು, ಪ್ರಕಾಶ, ಕಾಂತಿ
ಪ್ರಮೋದ-ಸಂತೋಷ, ಸುಖ
ಪ್ರವರ್ತಿಸು-ತೊಡಗು, ಆರಂಭಿಸು
ಪ್ರಾಜ್ಞ-ತಿಳಿದವನು, ಜ್ಞಾನಿ
ಪ್ರಾಪ್ತಿ-ಹೊಂದುವಿಕೆ, ಆದಾಯ
ಪ್ರಾರಬ್ಧ-ಕರ್ಮ, ವಿಧಿ, ದೈವ
ಫಣಿ-ಸರ್ಪ, ಹಾವು

ಬ

ಬಂಡು-ಮಕರಂದ
ಬಟ್ಟೆ-ದಾರಿ
ಬಟ್ಟೆಗೆಟ್ಟು-ದಾರಿತಪ್ಪಿ
ಬಟ್ಟೆಹರಕರು-ಹಾದಿಹೋಕರು, ಹಾದಿಗಳ್ಳರು
ಬಡಿವಾರ-ಒಣಹೆಮ್ಮೆ, ಅಟ್ಟಹಾಸ
ಬಣತೆ-ಮಾತುಕತೆ, ನುಡಿ, ಮಾತು
ಬಣ್ಣಿತೆ-ಬಣ್ಣದ ಮಾತು, ವೇಷ
ಬದ್ಧ-ಕಟ್ಟಿದ, ಬಂಧಿಸಲ್ಪಟ್ಟ
ಬತ್ತೀಸ-ಮೂವತ್ತೆರಡು
ಬಯಲಭ್ರಾಂತಿ-ವ್ಯರ್ಥ ಬಯಕೆ, ಭ್ರಮೆ
ಬರುಕಾಯ-ವ್ಯರ್ಥವಾದ ದೇಹ, ಕೆಡುವ ಒಡಲು
ಬಹಿರ್ಗತಿ-ಪ್ರತ್ಯಕ್ಷ, ಸಾಕಾರ
ಬಾತೆ-ಪ್ರಯೋಜನ
ಬಾಹಿರ-ಹೊರಗಾದ
ಬಿಡಿತೆ-ಬಿಡುಗಡೆ
ಬಿನುಗು-ನೀಚ, ಹೀನ, ಕ್ಷುದ್ರ
ಬಿಳಿಯಂಬರ-ಬಿಳಿಯಮುಗಿಲು
ಬುಡ-ಮೂಲ, ಬೊಡ್ಡೆ
ಬೆಂಗಡಿಗ-ಬೆನ್ನ ಹಿಂದೆ ಬರುವವ
ಬೆಂಗರ್ವಿ-ಅಹಂಕಾರಿ
ಬೆಂಬಳಿವಿಡಿದು-ಹಿಂದುಗೊಂಡು, ಅನುಸರಿಸಿ,
ಬೆಸನ-ಆಜ್ಞೆ
ಬೇಟ-ಅನುರಾಗ, ಪ್ರೇಮ
ಬೇಹಾರ-ವ್ಯವಹಾರ, ವ್ಯಾಪಾರ
ಬೊಂಪಾಸ-ಕೆಸರು

ಭಗಜನಿತ-ಯೋನಿಯಲ್ಲಿ ಹುಟ್ಟಿರುವ
ಭವರಾಟಣ-ಹುಟ್ಟು ಸಾವಿನ ಚಕ್ರ
ಭವಾರಣ್ಯ-ಸಂಸಾರವೆಂಬ ಅರಣ್ಯ
ಭವಿ-ಇಷ್ಟಲಿಂಗವಿಲ್ಲದವ
ಭಾಂಡ-ಪಾತ್ರೆ
ಭಾವಗಡಕ-ಭಾವನೆಯಿಲ್ಲದವ
ಭಾವ್ಯ-ಭಾವಿಸಿದ
ಭುಂಜಕ-ಉಣ್ಣುವವ
ಭುಂಜಿಸು-ಉಣ್ಣು
ಭುಕ್ತತ್ವ-ಉಣ್ಣುವುದು
ಭುಜಂಗ-ಸರ್ಪ, ಕಾಳಸರ್ಪ
ಭೂಜ-ಗಿಡ, ಮರ
ಭೂಬಂಡು-ಭೂಮಿಯ ದ್ರವ
ಭೋಜ್ಯಗಟ್ಟು-ಸಂಗ್ರಹಿಸು, ಸವಿಯೂಟ ಮಾಡು
ಭೋರನೆ-ಒಮ್ಮೆಲೆ, ರಭಸದಿಂದ
ಭ್ರುಕುಟಿ-ಹುಬ್ಬು
ಭೃತ್ಯ-ಸೇವಕ
ಭೃತ್ಯತ್ವ-ಸೇವಾಭಾವ
ಭ್ರಮಣ-ಸುತ್ತುವುದು
ಭ್ರಾಂತ-ಭ್ರಮೆಗೊಂಡ, ಗಾಬರಿಗೊಂಡ
ಭ್ರಾಮಕ-ಭ್ರಮೆಹುಟ್ಟಿಸುವ

## ಮ

ಮಂಡೂಕ-ಕಪ್ಪೆ
ಮುಂಡೂಕಾಳಿ-ಕಪ್ಪೆಗಳ ಸಮೂಹ
ಮಂಡೆಹೀನ-ತಲೆಯಿಲ್ಲದವ, ಅಜ್ಞಾನಿ
ಮಂದರಾದ್ರಿ-ಮಂದರಪರ್ವತ
ಮರ್ಕಟ-ಮಂಗ, ಕಪಿ
ಮಕ್ಷಿಕ-ನೊಣ
ಮಚ್ಚು-ಮೆಚ್ಚು, ಪ್ರೀತಿಸು
ಮಜ್ಜನ-ಸ್ನಾನ, ಜಳಕ
ಮಜ್ಜೆ-ಎಲುಬಿನೊಳಗಣ ಸತ್ವ
ಮಡಗಿ-ಇಟ್ಟು
ಮತ್ಸ್ಯ-ಮೀನ
ಮಥನಿಸಿ-ಕಡೆದು
ಮದಪು-ಆಲಸ್ಯ, ಸೋಮಾರಿತನ
ಮನನೀಯ-ಮನದಟ್ಟಾಗುವುದು
ಮರುಜೇವಣಿ-ಸಂಜೀವಿನಿ ಕಡ್ಡಿ
ಮರುತ-ಗಾಳಿ
ಮರಹಿಲ್ಲದ-ಮರವು ಇಲ್ಲದ
ಮಲಬದ್ಧ-ಪಾಪದಲ್ಲಿ ಸಿಲುಕಿದ
ಮಲಭುಂಜಕರು-ಅಶುದ್ಧ ಪದಾರ್ಥ ತಿನ್ನುವವರು, ಹೊಲಸು ತಿನ್ನುವವರು
ಮಸ್ತಕ-ಹಣೆ
ಮಾಜು-ಇಲ್ಲವಾಗು, ಸವೆ
ಮಾಟ-ಕ್ರಿಯೆ
ಮಾಧವ-ವಿಷ್ಣು
ಮಾನಸ-ಮನಸ್ಸು
ಮಾಯೋಚ್ಛಿಷ್ಟ-ಮಾಯೆತಿಂದು ಉಗುಳಿದ್ದು
ಮಾರುತ-ಗಾಳಿ
ಮಾಳ-ಪಿತೃಪಕ್ಷ
ಮಿಟ್ಟೆ-ಏರಿ, ಗುಡ್ಡೆ
ಮಿಥ್ಯ-ಸುಳ್ಳು
ಮಿಥ್ಯದೃಷ್ಟ-ಸುಳ್ಳುಪ್ರಮಾಣ
ಮುಂಬಳಿ-ಮುಂದೆ, ಮುಂಭಾಗ
ಮುಕರಿ-ಮೂಗಿಲ್ಲದವ
ಮುತ್ತೈಯರು-ಮುದುಕೆಯರು
ಮುಮುಕ್ಷು-ಮುಕ್ತಿಯೋಗ್ಯ
ಮುಂಬರಿವ-ಮುಂದೆ ಹೋಗುವ
ಮುಳಿಸು-ಸಿಟ್ಟು

ಮೂಕೊರೆಯ-ಮೂಗುಹರುಕ
ಮೇದಸ್ಸು-ಕೊಬ್ಬು, ಮೆದುಳು
ಮೇದಿನಿ-ಭೂಮಿ
ಮೊರಡಿ-ಕಲ್ಲುದಿಬ್ಬ
ಮೋಟ-ಗಿಡ್ಡ, ಕೈಯಿಲ್ಲದವ
ಮೌಕ್ತಿಕ-ಮುತ್ತು
ಮೃತ್ತಿಕೆ-ಮಣ್ಣು

ಯ

ಯಜನ-ಯಜ್ಞಮಾಡುವುದು
ಯವನಾವಿ-ಗೋದಿ ಮೊದಲಾದ
ಯಾಚಕತನ- ಬೇಡುವುದು, ಭಿಕ್ಷೆ ಬೇಡುವುದು
ಯುಕ್ತ-ಯೋಗ್ಯ, ಉಚಿತ
ಯುಗಜುಗ-ಜೋಡಿ, ಜೊತೆ ಜೊತೆ

ರ

ರಚ್ಚು-ಕೆಸರು, ಹೊಲಸು, ವ್ಯರ್ಥಾಲಾಪ
ರಜತಾದ್ರಿ-ಬೆಳ್ಳಿಯ ಬೆಟ್ಟ, ಕೈಲಾಸ
ರಜನಿ-ಕತ್ತಲೆ, ಕೆಟ್ಟ
ರಸನೆ-ನಾಲಗೆ
ರಾಟಣ-ಚಕ್ರ, ರಾಟಾಳ
ರಾಯಿಬಿಕ್ಕೆ-ಒಂದು ವಿಧದ ಹಣ್ಣು
ರಾವಳ-ಕತ್ತಲೆ
ರುಧಿರ-ರಕ್ತ
ರೂಹು-ರೂಪು
ರೇಚಕ-ಪ್ರಾಣಾಯಾಮದಲ್ಲಿ ಒಂದು ಭೇದ

ಲ

ಲಘಿಮಾ-ಎಂಟು ಬಗೆಯ ಸಿದ್ಧಿಗಳಲ್ಲಿ ಒಂದು
ಲಂಘಿಸು-ಹಾರು, ಜಿಗಿ
ಲಾಮಂಚ-ಸುವಾಸನೆಯುಳ್ಳ, ಒಂದು ಬಗೆಯ ಬೇರು
ಲೋಚು-ತಲೆಗೂದಲನ್ನು ಕೀಳುವುದು
ಲೋಲುಪ್ತ-ಅತ್ಯಾಸಕ್ತಿ ಹೊಂದಿದ

ವ

ವನ-ನೀರು
ವತ್ಸರ-ವರ್ಷ
ವರ್ಮ-ಗುಟ್ಟು, ಮರ್ಮ
ವರ್ಮಗೇಡಿ-ಬುದ್ಧಿಗೇಡಿ
ವಗತನ-ಒಗೆತನ, ಬಾಳುವೆ
ವಯ್ಯಾಳಿ-ಒಯ್ಯಾಳಿ, ವಿಹಾರ
ವಶಗತ-ವಶವಾದ, ಸಿಕ್ಕಿದ
ವಹ್ನಿ-ಬೆಂಕಿ
ವಾಕ್ಪಟು-ಮಾತಿನಲ್ಲಿ ಚಾತುರ್ಯ ಉಳ್ಳವ
ವಾಗದ್ವೈತಿ-ಮಾತಿನಲ್ಲಿ ಎರಡಿಲ್ಲದವ
ವಾಗ್ಬ್ರಹ್ಮ-ಮಾತಿನಲ್ಲಿ ಬ್ರಹ್ಮವ ನುಡಿವ
ವಾಗ್ಜಾಲ-ಮಾತಿನ ಬಲೆ
ವಾಜಿ-ಕುದುರೆ
ವಾತ-ವಾಯು
ವಿಕಸನ-ಅರಳುವಿಕೆ
ವಿಕೃತಿಭಾವ-ವಿಕಾರಭಾವ
ವಿಧಿ-ಬ್ರಹ್ಮ
ವಿಷಧರ-ಶಿವ
ವಿಭವ-ವೈಭವ, ಸೊಗಸು
ವಿಮಲ-ಶುಭ್ರ, ಮಲರಹಿತ
ವಿಹಂಗಗತಿ-ಪಕ್ಷಿಯ ನಡೆ
ವೇದಿಸು-ತಿಳಿಸು
ವೇಧಿಸು-ಉಂಟಾಗು, ತೋರು, ಕೂಡು
ವೈತರಣಿ-ನರಕದ ಹತ್ತಿರವಿದೆಯೆಂದು ನಂಬಿದ ಒಂದುನದಿ
ವ್ಯಾಘ್ರ-ಹುಲಿ

## ಶ

ಶರ್ಕರ-ಸಕ್ಕರೆ
ಶಿಖೆ-ತಲೆ, ಜಡೆ
ಶಿರ-ತಲೆ
ಶುಕ್ತಿ-ಕಪ್ಪೆಚಿಪ್ಪು
ಶುನಿ-ನಾಯಿ
ಶುಷ್ಕ-ರಸಹೀನ, ಒಣಗಿದ
ಶೂಕರ-ಸೂಕರ, ಹಂದಿ
ಶೇಷ-ಉಳಿದದ್ದು
ಶೋಭನ-ಮಂಗಳಕರ
ಶ್ವಪಚ-ಹೊಲೆಯ
ಶ್ವಾನ-ನಾಯಿ
ಶ್ರೋಣಿತ-ರಕ್ತ
ಶ್ರೋತ್ರ-ಕಿವಿ

## ಸ

ಸಂಕೋಚಿಸು-ಕುಗ್ಗು, ಮುಚ್ಚಿಕೊ
ಸಂಘಾತ-ಹೊಡೆತ
ಸಂಚಲ-ಚಲಿಸುವುದು
ಸಂಚಿತ-ಗಳಿಸಿದ
ಸಂದೋಹ-ಗುಂಪು
ಸಂಜನಿತ-ಹುಟ್ಟಿದ
ಸಂದಳಿಸಿ-ಕೂಡಿ, ಒಂದಾಗಿ
ಸಂಬೇಟ-ಕೂಟ, ಬೆರಕೆ
ಸಂಭವಿತ-ಆಗಬಹುದಾದ
ಸಂವಿತ್ಪ್ರಭಾ-ಸೂರ್ಯಪ್ರಕಾಶ
ಸಂಸಿದ್ಧ-ಪ್ರಸಿದ್ಧ, ಪರಿಪೂರ್ಣ
ಸಂಸ್ಥಿತ-ಸ್ಥಾಪಿತ
ಸಕಳ-ಸಕಲ, ಎಲ್ಲ
ಸಖತನ-ಸ್ನೇಹ, ಸಖ್ಯಭಾವ
ಸಜ್ಜೆ-ಹಾಸಿಗೆ, ಲಿಂಗದ ಕರಡಿಗೆ
ಸಟ್ಟಸರಿರಾತ್ರಿ-ಮಧ್ಯರಾತ್ರಿ, ನಡುರಾತ್ರಿ
ಸತ್ಪಥ-ಒಳ್ಳೆಯ ಮಾರ್ಗ
ಸತ್ಕ್ರಿಯೆ-ಒಳ್ಳೆಯ ಕಾರ್ಯ
ಸದ್ರೂಪ-ನಿಜರೂಪ, ಸತ್ಯರೂಪ
ಸದಮಲ-ಪವಿತ್ರ
ಸದೋದಿತ-ಹುಟ್ಟಿದ ತಕ್ಷಣ
ಸದ್ಯೋನ್ಮುಕ್ತ-ಮುಕ್ತಿ ಹೊಂದುವ
ಸನ್ನಿಹಿತ-ಹತ್ತಿರದಲ್ಲಿರುವ
ಸಮಗಂಡ-ಸಮನಾಗಿ ಕಂಡ
ಸಮನಿಸು-ಉಂಟಾಗು, ದೊರಕು
ಸಮವೇದಿಸು-ಚೆನ್ನಾಗಿ ತಿಳಿ
ಸಯವಾಗು-ತುಂಬು
ಸಸಿನ-ನೇರ, ಯೋಗ್ಯ
ಸಹಾಯಿ-ನೆರವಾಗುವವ
ಸಾರಾಯ-ಸಾರಾಂಶ, ಕೂಡಿದ
ಸಾರು-ಹತ್ತಿರಬರು
ಸುಂದಗವಿ-ಮಂಕಾಗು
ಸುಜನ-ಒಳ್ಳೆಯಜನ, ಸಜ್ಜನರು
ಸುಯ್ಗರೆ-ನಿಟ್ಟುಸಿರುಬಿಡು
ಸುಯಿದಾನ-ಎಚ್ಚರಿತ, ರಕ್ಷಣೆ
ಸುರಪ-ಇಂದ್ರ
ಸುರೇಂದ್ರ-ದೇವೇಂದ್ರ
ಸೂತಕಿ-ದೋಷಿ, ಮೈಲಿಗೆಯಾದವ
ಸೈತಾನ-ಪಿಶಾಚಿ
ಸೈದಾನ-ಅನ್ನ, ಪ್ರಸಾದ
ಸೊಟ್ಟನಡೆ-ಕೊಂಕುನಡೆ, ಅಡ್ಡನಡೆ
ಸೊಣಗ-ನಾಯಿ
ಸೊಮ್ಮು-ಸ್ವತ್ತು
ಸೊಲ್ಲು-ನುಡಿ, ಮಾತು
ಸೋಗು-ವೇಷ, ಪಾತ್ರ
ಸೋಹಂ-ತಾನೇ ಪರಮಾತ್ಮ ಎಂಬ ಭಾವನೆ

ಸ್ವಯ-ತನ್ನ
ಸ್ವಾಯತ-ತನ್ನ ಆಧೀನದಲ್ಲಿರುವ
ಸ್ತೌತ್ರ-ಸ್ತುತಿಸಲ್ಪಟ್ಟ

## ಹ

ಹಡಕು-ಹೊಲಸು, ಹೇಸಿಕೆ
ಹಡಿಕೆ-ಹೇಸಿಕೆ
ಹಣ್ಣಿ-ಹತ್ತಿಕೊಂಡು, ಏರಿಕೊಂಡು
ಹತ್ತಿಕೆಯ ನುಡಿ-ಹಾರಿಕೆಯ ಮಾತು, ಗಾಳಿಸುದ್ದಿ
ಹಮುರಚೆಮುರ-ಜಾಣ್ಮೆ
ಹಮುಳಿಗರು-ಸುಖಿಗಳು
ಹಪ್ತಿ-ಅವಧಿ, ವಾರ
ಹರದ-ವ್ಯಾಪಾರಿ
ಹರಿವಿರಂಚಿ-ವಿಷ್ಣು ಬ್ರಹ್ಮ
ಹರಿಹರಿದು ನೆರೆದು-ಹೋಗಿ ಹೋಗಿ ಕೂಡಿ
ಹಲಾಯುಧ-ಒಕ್ಕಲಿಗ
ಹವಣ-ಅಳತೆ, ಮಿತಿ
ಹಸಗೆಡು-ರೂಪುಗೆಡು
ಹಸಾದ-ಆಗಲಿ
ಹಸಿವರತು-ಹಸಿವು ಹಿಂಗಿ
ಹಾವುಗೆ-ಪಾದರಕ್ಷೆ
ಹುಡಿ-ಧೂಳ, ಕಣ
ಹುಲ್ಲೆ-ಜಿಂಕೆ
ಹುಸಿಹುಂಡ-ಸುಳ್ಳುಗಾರ
ಹೂಣಿರ್ದ-ಹುಗಿದಿದ್ದ
ಹೂಸರೊಳ್ಳೆ-ಬಣ್ಣಬದಲಿಸುವ ಪ್ರಾಣಿ
ಹೂಸಿಕೊಳ್ಳು-ಹಚ್ಚಿಕೊಳ್ಳು, ಲೇಪಿಸಿಕೊಳ್ಳು
ಹೆಂದ-ಚಂಚಲವಾದ
ಹೆರಜು-ಕೆತ್ತು
ಹೆರೆಹಿಂಗು-ಹಿಂದೆಸರಿ
ಹೇಯ-ತಿರಸ್ಕಾರ
ಹೇರು-ಗಂಟು, ಭಾರ
ಹೊದಕುಳಿ-ಬೇಗುದಿ
ಹೊರಬಳಿಕೆ-ಮೈಲಿಗೆ
ಹೊಲಬು-ಹಾದಿ, ದಾರಿ
ಹೊಯ್ಯು-ಹೊಡೆ
ಹೊಳಲಕುಳ-ಊರಕೆರೆ
ಹೋತ್ರ-ಹೋಮ, ಹವಿಸ್ಸು

■■

# ಆಕರ ಗ್ರಂಥಗಳು


**ಚಿದ್ಘನೇಶ್ವರ ಚಿದಾಭರಣ**

–ಗುರುಸಿದ್ಧದೇವರು

ಸಂ : ಪಿ. ಎಂ. ಗಿರಿರಾಜು

ಪ್ರ : ಶರಣಸಂತಾನ ಪ್ರಕಾಶನ ಮೈಸೂರು.

೧೯೮೫ (ಪ್ರ. ಆ.)

**ದೇಶಿಕೇಂದ್ರ ಸಂಗನಬಸವಯ್ಯಗಳ ಷಟ್‌ಸ್ಥಲ ವಚನಗಳು**

–ದೇಶಿಕೇಂದ್ರಸಂಗನಬಸವಯ್ಯ

(ಶ್ರೀ ಚೆನ್ನವೀರ ಗಂಗಡೆ, ಕರಜಗಿ ಅವರ ಹಸ್ತಪ್ರತಿ)

**ನಿರಾಲಂಬ ಪ್ರಭುದೇವರ ವಚನಗಳು**

–ನಿರಾಲಂಬ ಪ್ರಭುದೇವ ಸಂ. ಡಾ. ವೀರಣ್ಣ ರಾಜೂರ

ಬಸವಪಥ ೪–೧೨, ಮಾರ್ಚ್ ೧೯೮೩

ಪ್ರ : ಬಸವ ಸಮಿತಿ, ಬೆಂಗಳೂರು

**ಪರಂಜ್ಯೋತಿಯರ ವಚನಗಳು**

–ಪರಂಜ್ಯೋತಿಯರು

(ಇದು ವಚನಸಂಪುಟ–೧ ಈ ಕೃತಿಯ ಒಂದು ಭಾಗ)

ಸಂ : ಡಾ. ಬಿ.ಆರ್. ಹಿರೇಮಠ

ಪ್ರ : ವೀರಶೈವ ಅಧ್ಯಯನ ಸಂಸ್ಥೆ,

ಶ್ರೀ ತೋಂಟದಾರ್ಯಮಠ, ಗದಗ.

೧೯೯೦ (ಪ್ರ. ಆ.)

**ವಚನಶಾಸ್ತ್ರಸಾರ (ಸಂಪುಟ–೧)**

–ಡಾ. ಫ. ಗು. ಹಳಕಟ್ಟಿ

ಪ್ರ: ವೀರಶೈವ ಅಧ್ಯಯನ ಸಂಸ್ಥೆ,

ಶ್ರೀ ತೋಂಟದಾರ್ಯಮಠ, ಗದಗ.

೧೯೮೭ (ಪ್ರ. ಆ.)

## ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ

'ಸಮಗ್ರ ವಚನಸಾಹಿತ್ಯದ ಪ್ರಕಟನ ಯೋಜನೆ' ಕರ್ನಾಟಕ ಸರ್ಕಾರದ ಈವರೆಗಿನ ಸಾಹಿತ್ಯಕ ಸಾಧನೆಗಳಲ್ಲಿ ಒಂದು ಮಹತ್ವದ ದಾಖಲೆಯಾಗಿದೆ. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ ಒಂದು ಸಾಹಿತ್ಯ ಪ್ರಕಾರದ ಪ್ರಕಟನೆ.

ತತ್ವಕ್ಕೆ ತತ್ವ, ಸಾಹಿತ್ಯಕ್ಕೆ ಸಾಹಿತ್ಯವಾಗಿರುವ 'ವಚನ ವಾಙ್ಮಯ' ಏಕಕಾಲಕ್ಕೆ ಆತ್ಮಕಲ್ಯಾಣವನ್ನೂ ಸಮಾಜ ಕಲ್ಯಾಣವನ್ನೂ ಪ್ರತಿಪಾದಿಸುವ ಮೂಲಕ ಜಾಗತಿಕ ಮಹತ್ವ ಗಳಿಸಿದೆ. ಈ ಮೌಲಿಕ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಇವತ್ತಿನ ಮಿತಿಗೆ ಸಿಗುವ ಬಸವಯುಗ ಮತ್ತು ಬಸವೋತ್ತರ ಯುಗಗಳ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಪ್ರಕಟಿಸಿದ ಪ್ರಯತ್ನವಿದು. ಈ ಮೂಲಕ ಬಸವಯುಗದ ಹಲವು ಹೊಸ ವಚನಗಳು ಬೆಳಕಿಗೆ ಬರುವುದರೊಂದಿಗೆ, ಬಸವೋತ್ತರ ಯುಗದ ಸಮಗ್ರ ವಚನ ಸಂಪತ್ತು ಪ್ರಥಮಸಲ ಹೊರ ಬರುತ್ತಿರುವುದು ಈ ಯೋಜನೆಯ ವಿಶೇಷ ಸಾಧನೆಯಾಗಿದೆ.

೮೦೦ ವರ್ಷಗಳುದ್ದಕ್ಕೂ ಬೆಳೆದುಬಂದ ಈ ಸಾಹಿತ್ಯದ ವ್ಯಾಪ್ತಿಯನ್ನು ಪ್ರಥಮಬಾರಿ ಗುರುತಿಸಿಕೊಡುತ್ತಿರುವ ಈ ಸಾಹಸದ ಫಲವಾಗಿ, ೨೦ಸಾವಿರ ವಚನಗಳು ಸುಮಾರು ೧೦ಸಾವಿರ ಪುಟ ವ್ಯಾಪ್ತಿಯ ೧೫ ಸಂಪುಟಗಳಲ್ಲಿ (ವಚನ ಪರಿಭಾಷಾಕೋಶ ಸೇರಿ) ಬೆಳಕು ಕಾಣುತ್ತಿವೆ.

ISBN : 81-7713-098-6